

ಕೆ.ವಿ. ಶ್ರೀನಿವಾಸ್ ರಾವ್

'ಸತ್ಯ ಜ್ಯೋತಿ'

44
/159

# ಶ್ರೀ ಉತ್ತನೂರಿನ
# ಋಷಿ ಕುಲೋತ್ತಮ

ಕೆ. ವಿ. ಶ್ರೀನಿವಾಸರಾವ್
'ಸತ್ಯಜ್ಯೋತಿ'

ಪ್ರಕಾಶಕರು:
ಕೆ. ವಿ. ಶ್ರೀ ನಿವಾಸರಾವ್
'ಸತ್ಯ ಜ್ಯೋತಿ' ಪ್ರಕಟಣ ಮಂದಿರ
ಶ್ರೀ ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಚಿಕ್ಕಪೇಟೆ,
ಚಿತ್ರದುರ್ಗ-577 501

SRI UTTANOORINA RUSHI KULOTTAMA : A Novel written by Sri. K. V. Srinivasa Rao, Published by Sathyajyothi Prakatana Mandira, Near Sri Raghavendra Swamy Mutt, Chikkapete, Chitradurga - 577 501

I Edition : 1996

Pages : XXIV+340

© : Author

ಬೆಲೆ : ಸಾಮಾನ್ಯ ಪ್ರತಿ ರೂ. 80-00
ಉತ್ತಮ ಪ್ರತಿ ರೂ. 90-00

This Book is Published under the financial assistance of Tirumala Tirupathi Devastanam under the scheme Aid to Publish Religious Books.

ಮುದ್ರಣ :
ಲಕ್ಷ್ಮಿ ಮುದ್ರಣಾಲಯ
ಐದನೆ ಮುಖ್ಯ ರಸ್ತೆ, ಚಾಮರಾಜಪೇಟೆ
ಬೆಂಗಳೂರು-18.
ದೂರವಾಣಿ : 6613123, 6618752

SRI VENKATESWARA
CENTRAL LIBRARY &
RESEARCH CENTRE
Acc. No. 54695
Date..........
TIRUPATI



ಮಂತ್ರಾಲಯ
ಶ್ರೀ ರಾಘವೇಂದ್ರಸ್ವಾಮಿ ಮಠದ
ಜಗದ್ಗುರು ಶ್ರೀಮನ್ಮಧ್ವಾಚಾರ್ಯ
ಮಹಾ ಸಂಸ್ಥಾನಾಧೀಶ್ವರರಾದ
ಶ್ರೀ ಮತ್ಸುಶಮೀಂದ್ರ
ತೀರ್ಥ ಶ್ರೀಪಾದಂಗಳವರ

## ಆಶೀರ್ವಾದ ಪತ್ರ

ನಮ್ಮ ಪ್ರಿಯ ಶಿಷ್ಯರಾದ ಶ್ರೀನಿವಾಸ ರಾಯರೇ,

ನೀವು ಕಳಿಸಿಕೊಟ್ಟ 'ಶ್ರೀ ಉತ್ತನೂರಿನ ಋಷಿ ಕುಲೋತ್ತಮ' ಪುಸ್ತಕದ ಕೆಲವು ಭಾಗಗಳನ್ನು ನಾವು ಓದಿಸಿ ಕೇಳಿದೆವು. ಶ್ರೀ ಶ್ರೀ ರಾಘವೇಂದ್ರ ಗುರು ಸಾರ್ವಭೌಮರ ವಿಶೇಷ ಅನುಗ್ರಹಕ್ಕೆ ಪಾತ್ರರಾದ ಶ್ರೀ ಗೋಪಾಲದಾಸರ ದಿವ್ಯ ವ್ಯಕ್ತಿತ್ವವನ್ನು ಕೃತಿಯಲ್ಲಿ ಬಿಂಬಿಸಿರುವುದನ್ನು ಕೇಳಿ ನಮಗೆ ತುಂಬಾ ಆನಂದವಾಗಿದೆ.

ಚಿತ್ರದುರ್ಗ ಶ್ರೀ ರಾಘವೇಂದ್ರ ಸ್ವಾಮಿಗಳವರ ಬೃಂದಾವನ ಸನ್ನಿಧಾನದ ವಿಚಾರಣಾ ಕರ್ತರಾಗಿ ದಕ್ಷರೀತಿಯಲ್ಲಿ ಸೇವೆ ಸಲ್ಲಿಸುತ್ತಿದ್ದೀರಿ. ನಾನಾ ರೀತಿಯ ಧಾರ್ಮಿಕ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಿರ್ವಹಿಸುತ್ತಿದ್ದೀರಿ. ಹೀಗೆಯೇ ಶ್ರೀಹರಿ ಗುರುಗಳ ಕೈಂಕರ್ಯ, ಶ್ರೀ ಹರಿದಾಸರ ಸೇವೆ ನಿರ್ವಹಿಸುತ್ತಾ ಉತ್ತರೋತ್ತರ ಶ್ರೇಯೋವಂತರಾಗಿರಿ ಎಂದು ಶ್ರೀ ರಾಘವೇಂದ್ರ ಸ್ವಾಮಿಗಳ ಅಂತರ್ಯಾಮಿ ಶ್ರೀ ಭಾರತೀ ರಮಣ ಮುಖ್ಯಪ್ರಾಣಾಂತರ್ಗತರಾದ ನಮ್ಮ ಆರಾಧ್ಯ ಮೂರುತಿ ಶ್ರೀ ಶ್ರೀ ಮೂಲ ರಘುಪತಿ ವೇದವ್ಯಾಸ ದೇವರಲ್ಲಿ ನಾವು ಪ್ರಾರ್ಥಿಸುತ್ತೇವೆ. ಹೀಗೆಂದು ಮಂತ್ರಾಲಯ ಮುಕ್ಕಾಂನಿಂದ ಬರೆಸಿದ ರಾಯಸ.

ಇತಿ ನಾರಾಯಣ ಸ್ಮರಣೆಗಳು.

– ಸಹಿ –



ಜಗದ್ಗುರು ಶ್ರೀಮನ್ಮಧ್ವಾಚಾರ್ಯ
ಮಹಾಸಂಸ್ಥಾನ
ಶ್ರೀ ಶ್ರೀ ವಿಶ್ವೇಶ ತೀರ್ಥ ಶ್ರೀಪಾದಂಗಳು
ಶ್ರೀ ಪೇಜಾವರ ಅಧೋಕ್ಷಜ
ಮಠ -ಉಡುಪಿ

## ಆಶೀರ್ವಾದ

ನಮ್ಮ ನಾಡಿನ ಮೇಲೆ ನಡೆದ ವಿದೇಶೀಯ ಆಕ್ರಮಣದ ಸಂದಿಗ್ಧ ಸನ್ನಿವೇಶದಲ್ಲಿ ಕನ್ನಡ ನಾಡಿನಲ್ಲಿ ಹರಿದಾಸ ಸಾಹಿತ್ಯವು ನಡೆಸಿದ ಸಾಮಾಜಿಕ ಆಂದೋಲನವು ನಮ್ಮ ಸಂಸ್ಕೃತಿ, ಪರಂಪರೆಗಳು ಇಂದಿಗೂ ಜೀವಂತವಾಗಿ ಉಳಿಯಲು ಅದ್ವಿತೀಯ ಪಾತ್ರವನ್ನು ನಿರ್ವಹಿಸಿದೆ. ಈ ಭವ್ಯ ಪರಂಪರೆಯ ಉಜ್ವಲ ತಾರೆಯೆನಿಸಿದ ಗೋಪಾಲದಾಸರು ಭಕ್ತಿ, ವೈರಾಗ್ಯಗಳ ಸಾಕಾರ ಮೂರ್ತಿಯೆನಿಸಿದ್ದಾರೆ. ಅವರ ಸಾಹಿತ್ಯದ ಅಮೃತ ರಸಧಾರೆಯು ನಮ್ಮ ಸಮಾಜದಲ್ಲಿ ಚೈತನ್ಯವನ್ನು ತುಂಬಿದೆ. ನಮ್ಮ ಅತ್ಯಂತ ಪ್ರೀತಿಪಾತ್ರರೂ ಚಿತ್ರದುರ್ಗದ ಪ್ರಮುಖ ಸಾಮಾಜಿಕ, ಧಾರ್ಮಿಕ ಕಾರ್ಯಕರ್ತರೂ ಆದ ಸತ್ಯಜ್ಯೋತಿ ಶ್ರೀನಿವಾಸ ರಾಯರು ಕಾದಂಬರಿ ಶೈಲಿಯಲ್ಲಿ ರಸವತ್ತಾಗಿ ಶ್ರೀ ಗೋಪಾಲದಾಸರ ಚರಿತ್ರೆಯನ್ನು ಕೃತಿರೂಪದಲ್ಲಿ ಇಳಿಸಿದ್ದಾರೆ. ಶ್ರೀ ಗೋಪಾಲದಾಸರ ಧೀಮಂತ, ಸತ್ವಪೂರ್ಣ ಜೀವನವನ್ನು ವಿಶಿಷ್ಟರೀತಿಯಿಂದ ನಿರೂಪಿಸುವ ಈ ಕೃತಿಯನ್ನು ನಾವು ಸಂತೋಷದಿಂದ ಸ್ವಾಗತಿಸುತ್ತೇವೆ. ಇಂದಿನ ಬದಲಾದ ಸಾಹಿತ್ಯಯುಗದಲ್ಲಿ ಈ ಕೃತಿಯು ಜನತೆಯಲ್ಲಿ ಆಧ್ಯಾತ್ಮಿಕ ಜಾಗೃತಿಯನ್ನು ನಿರ್ಮಿಸಲು ಸಹಾಯಕವಾಗುವುದು ಎಂದು ಆಶಿಸುತ್ತೇವೆ. ಶ್ರೀನಿವಾಸರಾಯರಿಂದ ಇಂತಹ ಅನೇಕ ಕೃತಿಗಳು ನಿರ್ಮಾಣವಾಗಲಿ ಎಂದು ಅಪೇಕ್ಷಿಸುತ್ತೇವೆ.

ಇತಿ ಸಪ್ರೇಮ ನಾರಾಯಣ ಸ್ಮರಣೆಗಳು.

– ಸಹಿ –



**ಶ್ರೀ ಶ್ರೀ ವಿಜ್ಞಾನ ನಿಧಿ ತೀರ್ಥ**
**ಶ್ರೀಪಾದಂಗಳು**
**ಶ್ರೀ ಶ್ರೀಪಾದರಾಜಮಠ ಮಹಾಸಂಸ್ಥಾನ**
**ಮುಳಬಾಗಿಲು**

## ಅಭಿವೃದ್ಧಿ ರಸ್ತು

ನಮ್ಮ ಸಂಸ್ಥಾನದ ಬಗ್ಗೆ ವಿಶೇಷ ಗೌರವ ಅಭಿಮಾ[illegible] ಚಿತ್ರದುರ್ಗದ ಸತ್ಯಜ್ಯೋತಿ ಶ್ರೀನಿವಾಸರಾಯರು ರಚಿಸಿರು[illegible] ಶ್ರೀ [illegible]ತ್ತನೂರಿನ ಋಷಿಕುಲೋತ್ತಮ ಎನ್ನುವ ಈ ಕೃತಿ, ಗೋಪಾಲದಾಸರ ಬಗ್ಗೆ [illegible] ಕನ್ನಡದ ಕೃತಿಗಳಲ್ಲಿ ಅಪೂರ್ವವೆನಿಸುವ ರೀತಿಯಲ್ಲಿದೆ. ಕಾದಂಬರಿಯ [illegible] ಸಾರ್ವತ್ರಿಕ ಸ್ವೀಕೃತಿಯ ಸಾಧ್ಯತೆಯಿರುವ ಈ ಕೃತಿ ದಾಸಸಾಹಿತ್ಯದ ಮಹತ್ವ[illegible] ಅದರಲ್ಲೂ ವಿಶೇಷವಾಗಿ ಗೋಪಾಲದಾಸರ ಸಿದ್ಧಿಸಾಧನೆಗಳನ್ನು ಉತ್ತಮ ರೀತಿಯಿಂದ ಪ್ರತಿಪಾದಿಸಿದ್ದು ಇದೊಂದು ಜನಪ್ರಿಯ ಕೃತಿಯಾಗಲಿದೆ.

ಗುರುಗಳಿಗೆ ಪಾದಪೂಜೆ ಭಿಕ್ಷ ಮಾಡಿಸುವ ಶಿಷ್ಯರಿದ್ದಾರೆ. ತಮ್ಮ ಸಂಪತ್ತನ್ನೆಲ್ಲಾ ಕೊಟ್ಟವರಿದ್ದಾರೆ. ಜೀವನದ ಬಹುಭಾಗವನ್ನು ಗುರುಗಳ ಜೊತೆ ಕಳೆದವರಿದ್ದಾರೆ. ಆದರೆ ಗುರುಗಳ ಆಣತಿಯಂತೆ ಆಯುಷ್ಯದ ಬಹುಭಾಗವನ್ನೇ ದಾನ ಮಾಡಿದವರು ಇತಿಹಾಸದಲ್ಲೇ ಅಪರೂಪ. ಗುರುಭಕ್ತಿ ಎನ್ನುವುದಕ್ಕೆ ಪರ್ಯಾಯವೇ ಗೋಪಾಲದಾಸರು. ಜಗನ್ನಾಥದಾಸರಿಗೆ ವಿಜಯದಾಸರ ಆಜ್ಞೆಯೆನ್ನುವ ಒಂದೇ ಕಾರಣಕ್ಕೆ ನಲವತ್ತು ವರ್ಷ ಆಯಸ್ಸು ಧಾರೆಯೆರೆದು ಭಕ್ತಿಯಲಿ ಭಾಗಣ್ಣ ಎಂದೇ ಅವರು ಪ್ರಸಿದ್ಧರಾದರು.

ಈಗಾಗಲೇ ಚಿಪ್ಪಗಿರಿಯ ತಪೋಮೂರ್ತಿ ಕೃತಿಯ ಮೂಲಕ ವಿಜಯದಾಸರನ್ನು ಕನ್ನಡ ಜನತೆಗೆ ಪರಿಚಯಿಸಿಕೊಟ್ಟಿರುವ ಸತ್ಯಜ್ಯೋತಿ ಶ್ರೀನಿವಾಸರಾಯರು ಈ ಕೃತಿಯ ಮೂಲಕ ದಾಸಸಾಹಿತ್ಯ ಕ್ಷೇತ್ರದ ದಿಗಂತಗಳನ್ನು ಮತ್ತಷ್ಟು ವಿಸ್ತಾರಮಾಡಿದ್ದಾರೆ. ಚಿತ್ರದುರ್ಗ, ದಾವಣಗೆರೆ, ಬಳ್ಳಾರಿ ಈ ಭಾಗಗಳಲ್ಲಿ ದಾಸಸಾಹಿತ್ಯದ ಬಗ್ಗೆ ಜನತೆಯಲ್ಲಿ

ಅಪಾರವಾದ ಆಸಕ್ತಿ, ಅಭಿಮಾನಗಳನ್ನು ಬೆಳೆಸಿರುವ ಶ್ರೀನಿವಾಸರಾಯರು ತಿರುಮಲೆ ತಿರುಪತಿ ದೇವಸ್ಥಾನಗಳ ದಾಸಸಾಹಿತ್ಯ ಪ್ರಾಜೆಕ್ಟಿನ ಸದಸ್ಯರಾಗಿಯೂ ಸೇವೆಸಲ್ಲಿಸಿದ್ದಾರೆ. ಈ ಪುಸ್ತಕ ಶ್ರೀನಿವಾಸರಾಯರ ಭಾಷೆಯ ಬನಿ, ಕಸುವು ಹಾಗೂ ವೈವಿಧ್ಯಗಳನ್ನು ಯಶಸ್ವಿಯಾಗಿ ಬಿಂಬಿಸಿದೆ. ದಾಸಸಾಹಿತ್ಯದ ಹಿರಿಮೆ, ವಿಜಯದಾಸರ ವ್ಯಕ್ತಿತ್ವದ ಘನತೆ, ಆ ಕಾಲದ ಸಮಾಜದ ತತ್ವನಿರೂಪಣೆ, ಗೋಪಾಲದಾಸರ ಪಾತ್ರದಲ್ಲಿ ಪರಿಪೂರ್ಣತೆಯ ಶಿಖರ ಇವುಗಳಿಂದಾಗಿ ಈ ಪುಸ್ತಕವು ಕನ್ನಡ ಕಾದಂಬರಿ ಸಾಹಿತ್ಯ ಪ್ರಕಾರದಲ್ಲಿ ತನ್ನದೇ ಆದ ವಿಶಿಷ್ಟ ಸ್ಥಾನವನ್ನು ಪಡೆದುಕೊಳ್ಳುವುದರಲ್ಲಿ ಯಾವ ಸಂಶಯವೂ ಇಲ್ಲ. ಪ್ರಾಯೋಗಿಕ, ಸಾಹಿತ್ಯಿಕ, ತಾತ್ವಿಕ ಈ ಮೂರು ನಿಟ್ಟುಗಳಿಂದಲೂ ಉತ್ತನೂರಿನ ತಪಸ್ವಿಗಳಾದ ಗೋಪಾಲದಾಸರನ್ನು ಕುರಿತು ಶ್ರೀನಿವಾಸರಾಯರು ರಚಿಸಿರುವ ಈ ಕೃತಿ ಅನನ್ಯವಾಗಿದೆ.

ಶ್ರೀನಿವಾಸರಾಯರು ಕಥೆ ಕಾದಂಬರಿಗಳ ರಚನೆಯಷ್ಟೇ ಅಲ್ಲದೆ ಸುಪ್ರಸಿದ್ಧ ಪತ್ರಿಕೋದ್ಯಮಿಯೂ ಆಗಿದ್ದಾರೆ. ಆದರೆ ತಮ್ಮ ಕಥೆ ಕಾದಂಬರಿಗಳನ್ನು ಲೌಕಿಕದ ಕುಬ್ಜಸಂಗತಿಗಳಿಗೆ ಮಾತ್ರ ಮೀಸಲಿಡದೆ, ಭಗವತ್ಕಥಾಪ್ರಸಾರಕ್ಕಾಗಿ, ಭಗವಂತನ ಆಪ್ತಭಕ್ತರ, ಹರಿಯದಾಸರ ಬದುಕಿನ ಎತ್ತರ ಬಿತ್ತರಗಳನ್ನು ಬಿಂಬಿಸುವ ಧ್ವನಿಯಾಗಿ ಮಾಡಿ ಸಾಹಿತ್ಯ ಸಾರ್ಥಕತೆಯನ್ನು ಸಾಧಿಸಿದ್ದಾರೆ. ಸತ್ಯಜ್ಯೋತಿ ಶ್ರೀನಿವಾಸರಾಯರ ಪ್ರತಿಭೆ ಮುಮ್ಮುಖವಾದದ್ದು. ಸಾಹಿತ್ಯ, ಪತ್ರಿಕೋದ್ಯಮ ಇವೆರಡೇ ಅಲ್ಲದೆ ನಾಟಕಕಲೆಯಲ್ಲಿಯೂ ಅವರು ಪ್ರಶಸ್ತಿ ಪರಿಣತರೆನಿಸಿದ್ದಾರೆ. ನಟರಾಗಿ ಮಿಂಚಿದ್ದಾರೆ. ರಂಗವೇದಿಕೆಯಲ್ಲಿ ಅವರು ಈಗಾಗಲೇ ಅನೇಕ ಪ್ರದರ್ಶನಗಳನ್ನು ನೀಡಿರುವ 'ವಾದಿರಾಜ ವಿಜಯ' ವಿಜಯಕವಚ, ಮುಂತಾದ ನಾಟಕಗಳು ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಜನರನ್ನು ಆಕರ್ಷಿಸುವಲ್ಲಿ ಸಫಲವಾಗಿವೆ. ಪ್ರಾಯಶಃ ಹರಿದಾಸರ, ವಾದಿರಾಜರಂಥ ಅಪರೋಕ್ಷ ಜ್ಞಾನಿ ಮಹಾಮಹಿಮರ ಮಹಿಮಾದರ್ಶವನ್ನು ರಂಗಭೂಮಿಯಲ್ಲಿ ಪ್ರಚುರಪಡಿಸಿ ಇಡೀ ಮಾಧ್ವ ಪರಂಪರೆಯಲ್ಲಿಯೇ ಒಂದು ಇತಿಹಾಸ ನಿರ್ಮಿಸಿದವರಲ್ಲಿ ಮೊದಲಿಗರಾಗಿದ್ದಾರೆ ಸತ್ಯಜ್ಯೋತಿ ಶ್ರೀನಿವಾಸರಾಯರು.

ಶ್ರೀನಿವಾಸರಾಯರಿಂದ ಶ್ರೀಪಾದರಾಜರೇ ಮುಂತಾದ ಅನೇಕ ಹರಿದಾಸರ ಹಾಗೂ ಭಗವಂತನ ಕಥಾಸ್ವಾರಸ್ಯದ ಅನೇಕ ಪ್ರಸಂಗಗಳು ನಾಟಕದ ರೂಪ ಪಡೆದು ಲಕ್ಷಾಂತರ ಪ್ರೇಕ್ಷಕರ ಮನಸೆಳೆಯುವಂತಾಗಲಿ ಎಂದೂ, ಗೋಪಾಲ ದಾಸರನ್ನು ಕುರಿತ ಈ ಕಾದಂಬರಿ ಜನರನ್ನು ಭಕ್ತಿ ಮಾರ್ಗದಲ್ಲಿ ಪ್ರೇರಿಸಿ ಸಾತ್ವಿಕ ಸಮಾಜದ ನಿರ್ಮಾಣದಲ್ಲಿ ಒಂದು ಮಹತ್ವದ ಶಕ್ತಿಯಾಗಲೆಂದೂ ಹಾರೈಸುತ್ತಾ ನಾವು ನಾರಾಯಣ ಸ್ಮರಣೆ ಮಾಡುತ್ತೇವೆ.

-ಸಹಿ-



ಎಚ್.ಹನುಮಂತಪ್ಪ
ಪಾರ್ಲಿಮೆಂಟ್ ಸದಸ್ಯರು
ಅಧ್ಯಕ್ಷರು
ರಾಷ್ಟ್ರೀಯ-ಹರಿಜನ
ಗಿರಿಜನ ಆಯೋಗ
ಭಾರತ ಸರ್ಕಾರ
ಲೋಕ ನಾಯಕ ಭವನ
ನವ ದೆಹಲಿ - 110 003

## ನಲ್ನುಡಿ

ಕನ್ನಡ ಸಾಹಿತ್ಯ ಹಾಗೂ ಸಂಗೀತ ಕ್ಷೇತ್ರಕ್ಕೆ ಹರಿದಾಸರುಗಳ ಕೊಡುಗೆ ಅಪಾರ. ದೈನಂದಿನ ಬದುಕಿಗೆ ಹತ್ತಿರವಾದ ಸರಳ ಉದಾಹರಣೆಗಳ ಮೂಲಕ ಸುಲಲಿತವಾದ ಕನ್ನಡದಲ್ಲಿ-ಸಕಲ ಚರಾಚರಗಳಲ್ಲಿ ಅಡಕವಾಗಿ ವಿಶ್ವದ ಆಗುಹೋಗುಗಳಿಗೆ ಕಾರಣಕರ್ತ ಪರಮಾತ್ಮನೊಬ್ಬನೆ ಎಂಬುದನ್ನು ಮನದಟ್ಟು ಮಾಡಿಸಿದ ಕೀರ್ತಿ ಹರಿದಾಸರುಗಳದು.

ಪುರಂದರ-ಕನಕ ದಾಸರಾಗಳು ಸಮಾಜದ ಅತ್ಯಂತ ಕೆಳಸ್ತರದವರ ಅಭಿವೃದ್ಧಿಗಾಗಿ ಅವರದೇ ಆದ ಮಾಧ್ಯಮದ ಮೂಲಕ ಶ್ರಮಿಸಿದವರು. ಹಣವನ್ನು ತೃಣವಾಗಿ ಕಂಡವರು. ತಮ್ಮ ಸಂಪತ್ತನ್ನು ಸಮಾಜದ ಶ್ರೇಯಕ್ಕೆ ವಿನಿಮಯಿಸಿದವರು.

ಜನಮನದಲ್ಲಿ ಅವರು ಬೆಳಗಿಸಿದ ಭಕ್ತಿಯ ದೀವಿಗೆ ಕಾಲಾನಂತರದಲ್ಲಿ ಕ್ಷೀಣಿಸತೊಡಗಿದಾಗ ಅದು ನಂದದಂತೆ ಕಾಪಾಡಲು ಶ್ರಿ ವಿಜಯದಾಸರ ನೇತೃತ್ವದಲ್ಲಿ ಎರಡನೇ ಹಂತದ ಹರಿದಾಸ ಪೀಳಿಗೆ ಕಾರ್ಯತತ್ಪರವಾಯಿತು. ಕ್ಷೀಣವಾಗಿ ಪ್ರಕಾಶಿಸುತ್ತಿದ್ದ ಭಕ್ತಿ ದೀವಿಗೆಗೆ ತಮ್ಮ ಪದಪದ್ಯಸುಳಾದಿಗಳ

ತೈಲವನ್ನೆರೆದು ಅದು ಜಾಜ್ವಲ್ಯವಾಗಿ ಬೆಳಗುವಂತೆ ಮಾಡಿ ತನ್ಮೂಲಕ ಹರಿದಾಸ ಸಾಹಿತ್ಯವನ್ನು ಪುನರುಜ್ಜೀವನಗೊಳಿಸಿದ ಎರಡನೇ ಹಂತದ ಹರಿದಾಸ ಪೀಳಿಗೆಯಲ್ಲಿ ಪ್ರಮುಖರಾದವರು ಶ್ರೀ ಗೋಪಾಲದಾಸರು.

ಹರಿದಾಸ ಸಾಹಿತ್ಯದ ಪರಿಮಳ ದೂರದೂರದವರೆಗೆ ಹರಡುವಂತೆ ಮಾಡಿದ ಶ್ರೀ ಗೋಪಾಲದಾಸರ ಜೀವನ -ಸಾಧನೆ- ಸಫಲತೆಗಳ ಸಂಗಮ ಈ ಪುಸ್ತಕ.

ಬಡತನದ ಬೇಗೆಯಲ್ಲಿ ಬಸವಳಿದರೂ ಭಕ್ತಿ ಶ್ರದ್ಧೆಗಳಿಂದ ದೂರವಾಗಲಿಲ್ಲ ಭಾಗಣ್ಣ. ಹೇರಳವಾಗಿ ಹಣ ಸಂಗ್ರಹವಾದಾಗಲೂ ಅದರ ಪ್ರಲೋಭಕ್ಕೆ ಒಳಗಾಗಲಿಲ್ಲ. ತಮ್ಮ ಪಥದಿಂದ ವಿಚಲಿತರಾಗಲಿಲ್ಲ. ಶ್ರೀ ಗೋಪಾಲದಾಸರ ಜೀವನರೀತಿ ಸಾಮಾನ್ಯ ಜನರ ಅರಿವಿಗೆ ನಿಲಕದ್ದು. ಕಣಿ ಹೇಳುವ ವೃತ್ತಿಯನ್ನು ಅವರು ಕೈಗೊಂಡರು. ಲೌಕಿಕ ಸುಖಗಳನ್ನು ಅವರು ತ್ಯಜಿಸಲಿಲ್ಲ. ಹೀಗಿದ್ದರೂ ಭಕ್ತಿ ವೈರಾಗ್ಯಗಳ ಮೇರುವಿನಂತೆ ರಾರಾಜಿಸಿದ ಶ್ರೀ ಗೋಪಾಲದಾಸರ ಬದುಕು ಸಂಕೀರ್ಣವಾದ ಕಗ್ಗಂಟಿನಂತೆ. ಅದನ್ನು ಪದರು ಪದರುಗಳಾಗಿ ಬಿಡಿಸಿ ಓದುಗರ ಕಣ್ಣಮುಂದೆ ಇರಿಸಿದ ಗೆಳೆಯ ಶ್ರೀ ಕೆ. ವಿ. ಶ್ರೀನಿವಾಸರಾಯರ ಜಾಣ್ಮೆ-ಸಾಧನೆ ನಿಜಕ್ಕೂ ಶ್ಲಾಘನೀಯ. ಮೂಢನಂಬಿಕೆಗಳನ್ನು ಪ್ರೋತ್ಸಾಹಿಸದ-ಮೂಢನಂಬಿಕೆಗಳೆಂದು ಜನರ ತಾತ್ಸಾರಕ್ಕೊಳಗಾಗಿದ್ದ ಸದಾಚಾರಗಳನ್ನು ಒರೆಹಚ್ಚಿ- ಸತ್ಯವೆನಿಸಿದರೆ ಮಾತ್ರ ಸ್ವೀಕರಿಸಿದ ಶ್ರೀ ಗೋಪಾಲದಾಸರ ವಿಚಕ್ಷಣತೆಯನ್ನು ವಿವರಿಸುವಾಗ ಲೇಖಕರು ತೋರಿರುವ ವಿಶ್ಲೇಷಣಾತ್ಮಕ ಮನೋಭಾವ ಗಮನಾರ್ಹವಾಗಿದೆ.

ಕೆ.ವಿ. ಶ್ರೀನಿವಾಸರಾಯರು ನಾಸ್ತಿಕ ರೀತಿಯಲ್ಲಿ ಜೀವಿಸಿದ್ದುದನ್ನು ನಾನು ನೋಡಿದ್ದೇನೆ. ಶರಣ ಸಾಹಿತ್ಯದ ಬಗ್ಗೆ ಮಾತನಾಡಿದ್ದನ್ನು ಕೇಳಿದ್ದೇನೆ. ನಾಟಕ, ಸಾಹಿತ್ಯ, ಸಿನಿಮಾ, ರಾಜಕೀಯ ಇವುಗಳ ಬಗ್ಗೆ ನಿರರ್ಗಳವಾಗಿ ಮಾತನಾಡಬಲ್ಲರು ಎಂಬುದು ನನಗೆ ಗೊತ್ತಿದೆ. ನೂರಾರು ಸಭೆ ಸಮಾರಂಭಗಳಲ್ಲಿ ನಾವಿಬ್ಬರೂ ಭಾಗವಹಿಸಿದ್ದೇವೆ. ಇಂಥವರು ಕನ್ನಡ ಹರಿದಾಸ ಸಾಹಿತ್ಯದ ಬಗ್ಗೆ ಆಸಕ್ತಿ ಅರಳಿಸಿಕೊಂಡಿದ್ದು ಆಶ್ಚರ್ಯವಲ್ಲವಾದರೂ ಅದಕ್ಕಾಗಿ ತಮ್ಮನ್ನು ಸಮರ್ಪಿಸಿಕೊಳ್ಳುತ್ತಿರುವುದನ್ನು ನೋಡಿ ನಿಜಕ್ಕೂ ಆನಂದವೆನಿಸುತ್ತಿದೆ.

ಅನೇಕ ಸಾಹಿತ್ಯಗೋಷ್ಠಿಗಳನ್ನು ನಿರ್ವಹಿಸಿದ ಕೀರ್ತಿ ಅವರಿಗಿದೆ. ಲಕ್ಷಾಂತರ ಜನರನ್ನು ಒಗ್ಗೂಡಿಸಬಲ್ಲ ಸಂಘಟನಾ ಚಾತುರ್ಯ ಅವರದು. ಅಂಥ ಒಂದೆರಡು ಸಂಘಟನೆಗಳಲ್ಲಿ ನಾನೂ ಭಾಗವಹಿಸಿ ಆಶ್ಚರ್ಯಗೊಂಡಿದ್ದೇನೆ.

ಶ್ರೀ ವಿಜಯದಾಸರ ಬಗ್ಗೆ ಅವರು ಪ್ರಕಟಿಸಿದ ಶ್ರೀ ಚಿಪ್ಪಗಿರಿಯ ತಪೋಮೂರ್ತಿ ಕಾದಂಬರಿಯನ್ನು ಕರ್ನಾಟಕದ ಕಣ್ಮಣಿ ಮಾಜಿ ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ನಾನೇ ಬಿಡುಗಡೆ ಮಾಡಿದೆ. ಅನಂತರ ನಾಡಿನಾದ್ಯಂತ ಆ ಪುಸ್ತಕದ ಬಗ್ಗೆ ಆಸಕ್ತರು ಅಭಿಮಾನ ವ್ಯಕ್ತಪಡಿಸಿದನ್ನು ಕಂಡು ಆನಂದವೂ ಆಗಿದೆ. ನನ್ನ ಅನೇಕ ಸ್ನೇಹಿತರು-ಸಂ.ಸ.ದರು ನನ್ನಿಂದ ವಿಳಾಸಪಡೆದು ಪುಸ್ತಕ ತರಿಸಿಕೊಂಡದ್ದನ್ನು ನೋಡಿದರೆ ಅದರ ಜನಪ್ರಿಯತೆಯ ಬಗ್ಗೆ ತುಂಬಾ ಹೆಮ್ಮೆಎನಿಸುತ್ತಿದೆ.

ಭಾಷಣ, ಲೇಖನ, ನಾಟಕ ಹಲವೊಮ್ಮೆ ಏಕಪಾತ್ರಾಭಿನಯ ಯಾವ ಮಾಧ್ಯಮವಾದರೂ ಸರಿ; ತಮಗೆ ಸರಿಯೆನಿಸಿದ್ದನ್ನು ಜನರಿಗೆ ಹೇಳುವುದರಲ್ಲಿ ಅವರ ಉತ್ಸಾಹ ಅದಮ್ಯ.

ಶ್ರೀ ಗೋಪಾಲದಾಸರ ಬಗ್ಗೆ ಅವರು ರಚಿಸಿ ಪ್ರಕಟಿಸಿರುವ ಈ ಕೃತಿ ಅವರ ಇತರ ಕೃತಿಗಳಷ್ಟೇ ಯಶಸ್ಸುಗಳಿಸಲಿ. ಶ್ರೀ ಗೋಪಾಲದಾಸರ ಕೃಪಾಕಟಾಕ್ಷ ಅವರಿಗಾಗಲಿ. ಕಾಲನ ಪ್ರಭಾವದಿಂದ ಜನರ ಮನ ಮಂದಿರದಿಂದ ಕಣ್ ಮರೆಯಾಗುತ್ತಿರುವ ಅನೇಕ ಹರಿದಾಸರ ಜೀವನ ಚರಿತ್ರೆಗಳು ಶ್ರೀ ಶ್ರೀನಿವಾಸ ರಾಯರ ಲೇಖನಿಯಿಂದ ಮತ್ತೊಮ್ಮೆ ಪುನರುತ್ಥಾನವಾಗಲಿ ಎಂದು ಲೋಕಗುರು ಶ್ರೀ ಹನುಮಂತನಲ್ಲಿ ಪ್ರಾರ್ಥಿಸುತ್ತೇನೆ.

ಸಮಸ್ತ ಸನ್ಮಂಗಳಾನಿ ಭವಂತು.

**ಹೆಚ್. ಹನುಮಂತಪ್ಪ**

ಅಧ್ಯಕ್ಷರು

ಹರಿಜನ ಗಿರಿಜನ ಆಯೋಗ, ಭಾರತ ಸರ್ಕಾರ

ನವದೆಹಲಿ



ಜಸ್ಟಿಸ್ ಎಸ್. ವೈ. ಹನುಮಂತಪ್ಪ
ನ್ಯಾಯಮೂರ್ತಿಗಳು
ಆಂಧ್ರ ಹೈಕೋರ್ಟ್
ಹೈದರಾಬಾದ್

## ಹೊನ್ನುಡಿ

ಶ್ರೀ ಉತ್ತನೂರಿನ ಋಷಿ ಕುಲೋತ್ತಮರು ಮತ್ತು ಶ್ರೀ ಮೋಹನದಾಸರು ಇಬ್ಬರೂ ಶ್ರೀ ವಿಜಯದಾಸರ ಶಿಷ್ಯರೆ. ಒಬ್ಬರು ಶ್ರೀವಿಜಯದಾಸರ ''ಮುಖ್ಯ ಪ್ರತಿಮ'' ಎನಿಸಿದರೆ ಮತ್ತೊಬ್ಬರು ಸಾಕ್ಷಾತ್ ಸಾಕು ಮಕ್ಕಳು.

ಶ್ರೀ ಮೋಹನದಾಸರಿಗೆ ನನ್ನ ಮಾತೃಪ್ರದೇಶವಾದ ಮೊಳಕಾಲ್ಮೂರು ತಾಲ್ಲೂಕಿನ ಮೇಲೆ ಬಹಳ ಅಕ್ಕರೆಯಿರಬೇಕು. ನನ್ನ ಜನ್ಮಭೂಮಿಯಾದ ರಾಂಪುರದಿಂದ ಕೆಲವೇ ಕಿಲೋಮೀಟರ್ ದೂರದಲ್ಲಿರುವ ಚಿಕ್ಕೇರಹಳ್ಳಿಯಲ್ಲಿ ಶ್ರೀ ರಾಮದೇವರ ವಿಗ್ರಹವನ್ನು ಪ್ರತಿಷ್ಠಾಪಿಸಿ ಭಕ್ತರ ಸಾಧನೆಗೆ ಅನುವು ಮಾಡಿಕೊಟ್ಟಿದ್ದಾರೆ. ಪ್ರತಿ ವರ್ಷ ಶ್ರೀರಾಮ ನವಮಿಯಂದು ಅಲ್ಲಿ ಜಾತ್ರೆಯಾಗುತ್ತಿದೆ. ಆಗಾಗ ಈ ಜಾತ್ರೆಯಲ್ಲಿ ನನ್ನ ಹಿರಿಯರೊಂದಿಗೆ ಭಾಗವಹಿಸಿದ್ದೇನೆ. ಹೀಗಾಗಿ ಶ್ರೀ ಮೋಹನದಾಸರು ಮತ್ತು ಅವರ ಸಮಕಾಲೀನರ ಹರಿದಾಸ ಸಾಹಿತ್ಯದ ಬಗ್ಗೆ ಎಳೆಯತನದಲ್ಲಿಯೇ ನನ್ನ ಒಲುವು ಸಹಜವಾಗಿ ಹರಿದಿರಬೇಕು.

ಶ್ರೀ ಗೋಪಾಲದಾಸರ ಸಾಹಿತ್ಯದಲ್ಲಿ ಭಕ್ತಿಯ ಮಹಾಪೂರವೇ ಹರಿಯುತ್ತಿದೆ. ''ನಿನ್ನಲ್ಲಿ ಭಕುತಿಯ ಇನ್ನೀಯದಲೇನೇ ಅನಂತ ಭಾಗ್ಯವನಿತ್ತರೂ

ನಾನೊಲ್ಲೆನೋ ದೇವಾ'' ಎಂದು ಪರಮಾತ್ಮನಲ್ಲಿ ಕೇಳಿಕೊಳ್ಳುತ್ತಾರೆ. ಭಕ್ತಿ ಸ್ಥಿರವಾಗಿ ನಿಲ್ಲಬೇಕಾದರೆ ಜ್ಞಾನ ಅವಶ್ಯಕ. ಅದು ಸಿಕ್ಕಬೇಕಾದರೆ ಜ್ಞಾನಿಗಳ ಮೊರೆ ಹೋಗಬೇಕು 'ಪುಣ್ಯವಂತರ ಮನೆಯ ಕುನ್ನಿ ಎಂದೆನಿಸೆನ್ನ ಎಂದು ದೇವರಲ್ಲಿ ಪ್ರಾರ್ಥಿಸಿದ್ದಾರೆ.

ಜ್ಞಾನ ಭಕ್ತಿ ವೈರಾಗ್ಯಗಳ ಅವಶ್ಯಕತೆಗಳನ್ನು ಅವರು ಮನದುಂಬುವಂತೆ ವಿವರಿಸುತ್ತಾರೆ. ತಾವು ನಂಬಿದ ಸಿದ್ಧಾಂತದ ಮಾರ್ಗದಲ್ಲಿ ನಡೆದರೆ ಅದು ಸಿಗುತ್ತದೆ ಎಂಬ ಭರವಸೆ ನೀಡುತ್ತಾರೆ.

ಶ್ರೀ ಹನುಮಂತ ಅವರ ಆರಾಧ್ಯಗುರು. ಹನುಮನೊಡೆಯ ಸರ್ವೋತ್ತಮ. ಶ್ರೀಹನುಮಂತನೇ ಅವತಾರವೆತ್ತಿ ಬೋಧಿಸಿದ ದ್ವೈತ ಸಿದ್ಧಾಂತದಲ್ಲಿ ಅವರಿಗೆ ಅಚಲವಾದ ನಂಬಿಕೆ.

ಶ್ರೀ ಗೋಪಾಲದಾಸರ ಸಾಹಿತ್ಯದಲ್ಲಿ ಮನವನ್ನು ಸೂರೆಹೊಡೆಯುವ ಸೌಂದರ್ಯವಿದೆ. ಬುದ್ಧಿಯನ್ನು ಅರಳಿಸುವ ಜ್ಞಾನವಿದೆ. ಮನವನ್ನು ಪ್ರಫುಲ್ಲಗೊಳಿಸುವ ಹಾಸ್ಯವೂ ಹಲವೊಮ್ಮೆ ಬುಗ್ಗೆ ಬುಗ್ಗೆಯಾಗಿ ಹೊಮ್ಮುತ್ತದೆ. ಔಚಿತ್ಯಪೂರ್ಣ ಉಪಮೆಗಳು, ಭಾವ ಮಾಧುರ್ಯ, ನಿರರ್ಗಳ ಭಾಷೆ, ಅಲ್ಲಲ್ಲಿ ಇಣುಕುವ ವ್ಯಂಗ್ಯದ ತಿಳಿಹಾಸ್ಯ, ಪ್ರಾಸಬದ್ಧವಾಗಿ ಸಾಗುವ ಸರಳ ಶೈಲಿ- ಎಂಥವರನ್ನೂ ಹಿಡಿದಿಡುವ ಗಟ್ಟಿಬಂಧ ಅವರ ಸಾಹಿತ್ಯ.

ಸಾಹಿತಿಯ ಬಗ್ಗೆ ತಿಳಿದರೆ ಅವರ ಸಾಹಿತ್ಯ ಅಧ್ಯಯನ ಮಾಡಲು ಆಸಕ್ತಿ ಹುಟ್ಟೀತು. ಅವರ ಸಾಧನೆಯ ಮಹತ್ವವನ್ನು ವಿವರಿಸಿದಾಗ ಅವರು ನಂಬಿ ನಡೆದ ಸಿದ್ಧಾಂತದ ಬಗ್ಗೆ ಆಸಕ್ತಿ ಅರಳೀತು. ಆ ದೃಷ್ಟಿಯಿಂದ ನೋಡಿದಾಗ ಇಂಥ ಕೃತಿಗಳು ಎಷ್ಟು ಅವಶ್ಯಕ ಎಂದು ಹೆಚ್ಚು ವಿವರಿಸಬೇಕಾಗಿಲ್ಲ.

ಗೋಪಾಲದಾಸರ ಬಗ್ಗೆ ನಮಗೆ ಸಿಕ್ಕುವ ಮಾಹಿತಿಗಳು ಬಹಳ ಸ್ವಲ್ಪ. ಅವರ ಸಮಕಾಲೀನರ ಹಾಗೂ ಶಿಷ್ಯಪ್ರಶಿಷ್ಯರ ಸಾಹಿತ್ಯವನ್ನು ಮೊರೆ ಹೊಕ್ಕಾಗ ಕೆಲವು ಸಂಗತಿಗಳು ತಿಳಿಯುತ್ತವೆ. ಅವುಗಳನ್ನೆಲ್ಲಾ ಶೋಧಿಸಿ, ಜನಜನಿತವಾಗಿರುವ ಸಂಗತಿಗಳನ್ನೂ ಸಂಗ್ರಹಿಸಿ, ಅವುಗಳನ್ನೆಲ್ಲಾ ಹದನಾಗಿ ಬೆರೆಸಿ ಬರೆಯುವುದು ಎಷ್ಟು ಕಷ್ಟವೆಂದು ನಾನು ಊಹಿಸಬಲ್ಲೆ. ಪವಾಡ ಸದೃಶ

ಘಟನೆಗಳು ಜನಮನದಲ್ಲಿ ಅಳಿಯದೆ ಉಳಿದಿರುತ್ತವೆ. ಅವುಗಳನ್ನು ವರ್ಜಿಸಿದರೆ ಭಕ್ತರ ಮನಸ್ಸಿಗೆ ನೋವುಂಟಾಗುತ್ತದೆ. ಇದರಿಂದಾಗಿ ಕೃತಿರಚನೆಯ ಮೂಲ ಉದ್ದೇಶವೇ ವಂಚಿತವಾಗುತ್ತದೆ.

ನನ್ನ ಆತ್ಮೀಯರಾದ ಹಿರಿಯ ಪತ್ರಿಕೋದ್ಯಮಿ ಶ್ರೀ ಕೆ.ವಿ. ಶ್ರೀನಿವಾಸ ರಾಯರು ಇದರಲ್ಲಿ ಸಾಕಷ್ಟು ಯಶಸ್ವಿಯಾಗಿದ್ದಾರೆಂದು ನನಗನ್ನಿಸುತ್ತಿದೆ. ವಸ್ತುನಿಷ್ಠ ವರದಿಗಾರರಾದ ಅವರು ಕಾದಂಬರಿ ಮಾಧ್ಯಮಕ್ಕೆ ಬೇಕಾಗುವ ಭಾವ ಸಂಪತ್ತನ್ನೂ ಉಳಿಸಿಕೊಂಡಿದ್ದಾರೆ.

ಸುಮಾರು ಮೂರುವರೆ ದಶಕಗಳಿಂದ ಅವರು ನಡೆಸಿಕೊಂಡು ಬಂದ 'ಸತ್ಯಜ್ಯೋತಿ' ಪತ್ರಿಕೆ ನಮ್ಮ ಪ್ರದೇಶದಲ್ಲಿ ಅತಿ ಹೆಚ್ಚು ಪ್ರಭಾವ ಹೊಂದಿದೆ. ನಿರ್ಭೀತಿ, ನಿರ್ಭಿಡೆ ಬರಹಗಳಿಗೆ ಒಗ್ಗಿ ಹೋಗಿದ್ದ ಅವರ ಲೇಖನಿಯಲ್ಲಿ ತತ್ವಸಿದ್ಧಾಂತ ವಿವರಣೆ ಬರುವ ಭಕ್ತಿ ಪ್ರಧಾನವಾದ ಇಂಥ ಕಾದಂಬರಿ ರಚನೆಯಾಗಿ ರುವುದನ್ನು ನೋಡಿದರೆ ನಿಜಕ್ಕೂ ಇದೊಂದು ಶ್ರೀ ಗೋಪಾಲದಾಸರ ಅನುಗ್ರಹವೆಂದೇ ಹೇಳಬೇಕಾಗುತ್ತದೆ. ಸತ್ಯ ಜ್ಯೋತಿ ಶ್ರೀನಿವಾಸ ರಾಯರಿಂದ ಇಂತಹ ಅನೇಕ ಕೃತಿಗಳು ಹೊರಬರಲಿ. ಸಾಹಿತ್ಯ ಹಾಗೂ ನಾಟಕ ಮಾಧ್ಯಮಗಳ ಮೂಲಕ ಹರಿದಾಸರುಗಳನ್ನು ನವ ಪೀಳಿಗೆಗೆ ಪರಿಚಯಿ ಸಬೇಕೆಂಬ ಅವರ ಧ್ಯೇಯ ಸಾಧನೆಯಾಗಲಿ

ಶ್ರೀ ಶ್ರೀನಿವಾಸರಾಯರ ಸತ್ಯಜ್ಯೋತಿ ಪತ್ರಿಕೆ ಪುನಃ ಪ್ರಜ್ವಲಿಸಿ ನಮ್ಮ ಜಿಲ್ಲೆಯ ಜನರನ್ನು ಎಲ್ಲಾ ರೀತಿಯಿಂದ ಜಾಗೃತಗೊಳಿಸಿ ಸಮಾನತೆ ಮತ್ತು ಸಾಮಾಜಿಕ ಕ್ರಾಂತಿಯ ಕಹಳೆಯಾಗಿ ಮೊಳಗಲಿ. ಜಗದಾದಿಗುರು ಶ್ರೀ ಹನುಮಂತನ ಅಂತರ್ಯಾಮಿ ನನ್ನ ಮನೆ ದೇವರಾದ ಶ್ರೀ ಪೆನ್ನ ಅಹೋಬಲ ಲಕ್ಷ್ಮಿನರಸಿಂಹಸ್ವಾಮಿ ಅವರನ್ನು ಎಲ್ಲಾ ರೀತಿಯಿಂದ ಅನುಗ್ರಹಿಸಲಿ ಎಂದು ಪ್ರಾರ್ಥಿಸುತ್ತೇನೆ.

ಎನ್. ವೈ. ಹನುಮಂತಪ್ಪ<br>ಹೈದರಾಬಾದ್




ಡಿ. ಮಂಜುನಾಥ್

ಉನ್ನತ ಶಿಕ್ಷಣ ಸಚಿವರು

ಕರ್ನಾಟಕ ರಾಜ್ಯ ಸರ್ಕಾರ

ವಿಧಾನ ಸೌಧ

ಬೆಂಗಳೂರು


ಕನ್ನಡಕ್ಕೆ ಕೀರ್ತಿ ತಂದ ಹರಿದಾಸರುಗಳನ್ನು ನವ ಪೀಳಿಗೆಗೆ ಪರಿಚಯಿಸಬೇಕೆಂಬ ಹಿರಿಯ ಉದ್ದೇಶದಿಂದ ಸ್ಥಾಪನೆಗೊಂಡ ಚಿತ್ರದುರ್ಗದ ಸತ್ಯಜ್ಯೋತಿ ಪ್ರಕಟಣ ಮಂದಿರದ ಪುಸ್ತಕ ವಿಭಾಗದ ದ್ವಿತೀಯ ಕೃತಿ ಶ್ರೀ ಉತ್ತನೂರಿನ ಋಷಿಕುಲೋತ್ತಮ. ಕ್ರಿ. ಶ. 1722 ರಲ್ಲಿ ಜನಿಸಿ ನಲವತ್ತು ವರ್ಷ ಸಶರೀರರಾಗಿದ್ದು ಕನ್ನಡ ಸಾಹಿತ್ಯ, ದಕ್ಷಿಣಾದಿ ಸಂಗೀತ, ದ್ವೈತ ಸಿದ್ಧಾಂತ ಸಾಮ್ರಾಜ್ಯಕ್ಕೆ ಅವರು ನೀಡಿದ ಕೊಡುಗೆ ನಿತ್ಯ ಸ್ಮರಣೀಯ, ಮಹಾಮಹಿಮರಾದ ಶ್ರೀ ಗೋಪಾಲ ದಾಸರ ಚರಿತ್ರೆಯನ್ನು ಈ ಕೃತಿಯಲ್ಲಿ ಚೊಕ್ಕವಾಗಿ ನಿರೂಪಿಸಿರುವ ಶ್ರೀ ಕೆ. ವಿ. ಶ್ರೀ ನಿವಾಸರಾಯರು ಚಿತ್ರದುರ್ಗ ಜಿಲ್ಲೆಯ ಹಿರಿಯ ಪತ್ರಿಕೋದ್ಯಮಿ. ಅವರ ನಿರ್ವಹಣೆಯ 'ಸತ್ಯಜ್ಯೋತಿ' ಪತ್ರಿಕೆ ಜಿಲ್ಲೆಯ ಜನಮನದ ಮೊಗ ಶೋಷಿತ ವರ್ಗದ ಮುಖವಾಣಿ.

ಜಿಲ್ಲಾ ಪತ್ರಿಕೋದ್ಯೋಗಿಗಳ ಸಂಘ, ಕರ್ನಾಟಕ ಸಂಘ, ಸತ್ಯಜ್ಯೋತಿ ಬಳಗ ಮೊದಲಾದ ಸಂಘಗಳ ಅಧ್ಯಕ್ಷರಾಗಿ, ಜಿಲ್ಲಾ ಸಂಗೀತ ನಾಟಕ ಅಕಾಡೆಮಿ, ಶ್ರಿ ತಿರುಮಲ ತಿರುಪತಿ ದೇವಸ್ಥಾನಗಳ ದಾಸಸಾಹಿತ್ಯ ಪ್ರಾಜೆಕ್ಟ್ ಮೊದಲಾದ ನಾನಾ ಸಂಸ್ಥೆಗಳ ನಿರ್ದೇಶಕರಾಗಿ ದಕ್ಷ ಸೇವೆ ಸಲ್ಲಿಸಿದ ಖ್ಯಾತಿ ಇವರದು.

ನಟರಾಗಿ, ನಾಟಕಕಾರರಾಗಿ ಕಾಲಕ್ಕೆ ತಕ್ಕಂತೆ ಸ್ಪಂದಿಸಿದವರು. ಜನ ಜಾಗೃತಿಗೆ ಶ್ರಮಿಸಿದವರು. 'ಕರ್ನಾಟಕದಲ್ಲಿ ಓಟಗಾದೀತು ಜೋಕೆ', 'ದುರಂತ ಹಿಮಾಲಯ' ಮೊದಲಾದ ನಾಟಕಗಳನ್ನು ರಚಿಸಿ ನಾಡಿನ ನಾನಾ ಕಡೆ ಪ್ರದರ್ಶಿಸಿ ಬಂದವರು. ಷೇಕ್ಸ್‌ಪಿಯರ್ ನಾಟಕಗಳಾದ ಒಥೆಲ್ಲೊ, ಹ್ಯಾಮ್ಲೆಟ್. ಮರ್‌ಚೆಂಟ್ ಆಫ್ ವೆನಿಸಿನ ಷೈಲಾಕ್ ಮೊದಲಾದ ಪಾತ್ರಗಳನ್ನು ಅದ್ಭುತವಾಗಿ ಅಭಿನಯಿಸಿ ಜನ ಮೆಚ್ಚುಗೆ ಗಳಿಸಿದವರು

ಶ್ರೀಯುತ ಕೆ. ವಿ. ಶ್ರೀನಿವಾಸರಾಯರನ್ನು ಮೂರೂವರೆ ದಶಕಗಳಿಂದ ಬಲ್ಲೆ. ಇತ್ತೀಚಿಗೆ ಅವರು ಹರಿದಾಸ ಸಾಹಿತ್ಯ ಪ್ರಚಾರ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಿರುವುದನ್ನು ಕೇಳಿದ್ದೇನೆ.

ಅವರಿಂದ ಪ್ರಕಟಗೊಳ್ಳುತ್ತಿರುವ ಈ ಕೃತಿಗೆ ಸೂಕ್ತನೆರವು ಕೊಟ್ಟರೆ ಇಂಥ ಹಲವಾರು ಕೃತಿಗಳನ್ನು ಹೊರತರಬಲ್ಲ ಸಮರ್ಥರಿವರು ಎಂದು ನಾನು ಧೈರ್ಯವಾಗಿ ಹೇಳಬಲ್ಲೆ.

ಇಂಥ ಅನೇಕ ಕೃತಿಗಳು ಅವರಿಂದ ಹೊರಬರಲಿ.

–ಡಿ. ಮಂಜುನಾಥ್

# ಪ್ರಕಟಣೆಗೆ ಸಹಾಯ ಮಾಡಿದವರು



ಶ್ರೀ ಎಸ್. ಆರ್. ನಾರಾಯಣ ರಾಯರು



ಶ್ರೀ ಹೆಚ್. ಪಿ. ನಾಗರಾಜ ರಾವ್ ಮತ್ತು ಶ್ರೀಮತಿ ರಮಾದೇವಿ

# ನನ್ನುಡಿ

ಕನ್ನಡ ಹರಿದಾಸ ಸಾಹಿತ್ಯದಲ್ಲಿ ದ್ವಿತೀಯ ಘಟ್ಟದ ಶ್ರೇಷ್ಠ ಹರಿದಾಸರುಗಳ ಸಾಹಿತ್ಯ ನಾಡಿನಾದ್ಯಂತ ಪ್ರತಿಧ್ವನಿಸುತ್ತಿದೆ. ಹಾಗಿದ್ದರೂ ಆ ಹರಿದಾಸರುಗಳ ಚರಿತ್ರೆ ಬಲ್ಲವರು ಬಹಳ ಕಡಿಮೆ ಜನ. ಸಾಹಿತ್ಯ ವಿಭಾಗದ ಈ ಕೊರತೆಯನ್ನು ಸಾಧ್ಯವಾದಷ್ಟು ನೀಗಿಸುವ ಉದ್ದೇಶದಿಂದ ಒಬ್ಬೊಬ್ಬ ಹರಿದಾಸರನ್ನೆ ಪ್ರತ್ಯೇಕ ವಾಗಿ ಪರಿಚಯಿಸುವ ಗುರಿಯಿಟ್ಟುಕೊಂಡು 'ಶ್ರೀ ಚಿಪ್ಪಗಿರಿಯ ತಪೋಮೂರ್ತಿ' ಕಾದಂಬರಿ ಪ್ರಕಟಿಸಿದೆ. ಆ ಕೃತಿ ನನ್ನ ನಿರೀಕ್ಷೆಗೆ ಮೀರಿ ಜನಮೆಚ್ಚುಗೆ ಗಳಿಸಿತು. ಪ್ರಕಟವಾದ ಎರಡು ತಿಂಗಳಲ್ಲಿಯೇ ನಾನು ವೆಚ್ಚಿಸಿದ ಹಣ ಕೈ ಸೇರಿಬಿಟ್ಟಿತು. ಕನ್ನಡ ಪುಸ್ತಕ ಪ್ರಕಟಣಾ ಪರಿಸ್ಥಿತಿ ಗೊತ್ತಿರುವವರಿಗೆ ಇದೆಂಥ ಆಶ್ಚರ್ಯ ಸಂಗತಿಯೆಂದು ಬೇರೆ ವಿವರಿಸಬೇಕಾಗಿಲ್ಲ.

ಹಾಗಿದ್ದರೂ ಶ್ರೀ ಉತ್ತನೂರಿನ ಋಷಿ ಕುಲೋತ್ತಮ ಪ್ರಕಟವಾಗಲು ಹತ್ತು ವರ್ಷಗಳಷ್ಟು ದೀರ್ಘಕಾಲವೇ ಹಿಡಿದಿದೆ. ಮೊದಲ ಕೃತಿ ಜಯಭೇರಿಯ ಸ್ಫೂರ್ತಿಯಲ್ಲಿ ಈ ಕೃತಿ ಕೆಲವೇ ತಿಂಗಳಲ್ಲಿ ಸಿದ್ಧವಾದರೂ ಪ್ರಕಟಣೆಗೆ ಕೊಡಲು ಆಗಲೇ ಇಲ್ಲ. ಬರೆದಿಟ್ಟ ಪುಸ್ತಕ ಮನೆಯಲ್ಲಿಯೇ ಧೂಳು ಅಡರಿಸಿಕೊಂಡು ನನ್ನನ್ನು ಅಣಕಿಸುತ್ತಿರುವಂತೆ ಕಾಣುತಿತ್ತು.

ಇದಕ್ಕೆ ಕಾರಣಗಳು ಹಲವಾರು. ನನ್ನ ಅಭಿರುಚಿಯಲ್ಲಾದ ಮಾರ್ಪಾಡುಗಳೂ ಇದಕ್ಕೆ ಸ್ವಲ್ಪ ಪ್ರೇರಣೆ ನೀಡಿದವು. ನಮ್ಮ ಹರಿದಾಸರುಗಳನ್ನು ಕಾದಂಬರಿ ಮಾಧ್ಯಮದ ಮೂಲಕ ಪರಿಚಯಿಸುವುದಕ್ಕಿಂತ ಹೆಚ್ಚು ವ್ಯಾಪ್ತಿಯ ನಾಟಕ ಮಾಧ್ಯಮದ ಮೂಲಕ ಏಕೆ ಪ್ರಯತ್ನಿಸಬಾರದು ಎಂಬ ಹೊಸ ಯೋಚನೆ ಹುಟ್ಟಿಕೊಂಡಿತು. ಆಗಲೇ 'ಶ್ರೀ ವಿಜಯ ಕವಚ', 'ಶ್ರೀ ವಾದಿರಾಜ ವಿಜಯ' ನಾಟಕಗಳು ನಿರ್ಮಾಣವಾದವು. ಉಡುಪಿ, ಮುಳಬಾಗಿಲು ಸೋದೆ, ಮಂತ್ರಾಲಯ ಕೋಟೇಶ್ವರ ಕಡೂರು ಹುಬ್ಬಳ್ಳಿ ಮೊದಲಾದ ಕೇಂದ್ರಗಳಲ್ಲಿ ಹೋಗಿ ಪ್ರದರ್ಶಿಸಿ ಬಂದೆವು.

ಶ್ರೀ ಸೋದೆ, ಪೇಜಾವರ, ಕೃಷ್ಣಾಪುರ, ಮುಳಬಾಗಿಲು ಹಾಗೂ ಮಂತ್ರಾಲಯ ಪೀಠಾಧೀಶ್ವರರು ನಮ್ಮ ತಂಡ ನಾಟಕ ಪ್ರದರ್ಶಿಸಲು ಅನುವುಮಾಡಿಕೊಟ್ಟರು. ನನ್ನ ಧ್ಯೇಯ ಧೋರಣೆಗಳನ್ನು ಮೆಚ್ಚಿ ತುಂಬು ಮನದಿಂದ ಆಶೀರ್ವದಿಸಿದರು.

ನಾಟಕ ನೋಡಿದ ಪ್ರೇಕ್ಷಕರಿಗೆ ಪ್ರಭಾವ ಎಷ್ಟೇ ಆಳವಾದದ್ದಾಗಿರಲಿ ಅದು ದೀರ್ಘಕಾಲ ಉಳಿದಿರುವುದಿಲ್ಲ. ಆದ್ದರಿಂದ ಪುಸ್ತಕ ಪ್ರಕಟಣೆಯನ್ನು ನಿಲ್ಲಿಸಬಾರದೆಂದು ಆತ್ಮೀಯರು ಕೊಟ್ಟ ಸಲಹೆಯ ಅನುಷ್ಠಾನವೇ ಈ ಪುಸ್ತಕ ಪ್ರಕಟಣೆ.

ಶ್ರೀ ಉತ್ತನೂರಿನ ಋಷಿ ಕುಲೋತ್ತಮರ ಜೀವನ ಸಂಗತಿಗಳು ಸಿಕ್ಕುವುದು ಬಹಳ ಸ್ವಲ್ಪ ಭಾಗ. ಶ್ರೀ ವಿಜಯದಾಸರಂಥ ಖ್ಯಾತ ಗುರುಗಳ ಶಿಷ್ಯರಾದ ಅವರು ಶ್ರೀ ಜಗನ್ನಾಥ ದಾಸರಂಥ ಮಹಾಮುನಿಗಳ ಗುರುಗಳಾಗಿದ್ದವರು. ಈ ಇಬ್ಬರ ಭವ್ಯ ವ್ಯಕ್ತಿತ್ವದ ಮಧ್ಯೆ ಕೇವಲ ನಲವತ್ತು ವರ್ಷ ಮಾತ್ರ ಸಶರೀರರಾಗಿದ್ದ ಅವರ ಬಗ್ಗೆ ತಿಳಿಯ ಹೊರಟಾಗ ತಿಳಿಯದಿರುವ ಭಾಗವೇ ಹೆಚ್ಚು ಉಳಿಯುತ್ತವೆ. ತಿಳಿದಿದ್ದಷ್ಟನ್ನೇ ಹೇಳುವಾಗಲೂ ನಮ್ಮ ಶಕ್ತಿಯ ಪರಿಮಿತತ್ವ ಅರಿವಾಗುತ್ತದೆ. ಭಾವುಕರು ಮಿಕ್ಕದ್ದನ್ನು ಅವರವರ ಯೋಗ್ಯತೆಗೆ ತಕ್ಕಷ್ಟು ಗ್ರಹಿಸುವುದಕ್ಕೆ ಪ್ರೇರಣೆಯಾದರೂ ಆಗಲಿ ಎಂಬ ಸ್ಫೂರ್ತಿಯಿಂದ ಪುಸ್ತಕ ಪ್ರಕಟಿಸಲು ನಿಶ್ಚಯಿಸಿದೆ.

ಚಿಕ್ಕವರಿದ್ದಾಗಲೇ ಭಾಗಣ್ಣನ ಬಾಯಿಯಿಂದ ಹೊರಟ ನುಡಿಗಳು ಎಷ್ಟು ಸತ್ಯವಾದವುಗಳು! ಸಂಕಾಪುರದ ಕೆರೆಯಲ್ಲಿ ಈಗಲೂ ನೀರು ನಿಲ್ಲುವುದಿಲ್ಲ. ಶ್ಯಾನಭೋಗ ವೆಂಕಣ್ಣನವರ ವಂಶ ಏಳು ತಲೆಮಾರುಗಳ ವರೆಗೆ ದೌಹಿತ್ರ ಸಂತತಿಯೆ ಮುಂದುವರೆದುಕೊಂಡು ಬಂದಿದೆ. ಎಂಟನೇ ತಲೆಮಾರಿನವರಾದ ಶ್ರೀ ವೆಂಕೋಬರಾಯರು ಈಗ ಉತ್ತನೂರಿನಲ್ಲಿ ಸಾಧನೆ ಮಾಡಿಕೊಂಡು ಇದ್ದಾರೆ. ಅವರಿಗೀಗ ಗಂಡು ಮಕ್ಕಳಾಗಿವೆ. ಭಾಗಣ್ಣನ ವಂಶದವರು ಎಂಥ ಸ್ಥಿತಿಯಲ್ಲಿದ್ದಾರೆಂದು ತಿಳಿಯುವುದಕ್ಕೆ ಮೊಸರುಕಲ್ಲು ಮತ್ತು ಗದ್ವಾಲಕ್ಕೆ ಹೋಗಿ ನೋಡಬೇಕು. ಉತ್ತನೂರು ಶ್ರೀ ವೆಂಕಟೇಶನ ಗುಡಿಯಲ್ಲಿ ಅತಿ ಹೆಚ್ಚು

ಸನ್ನಿಧಾನವಿದ್ದು ಎರಡು ನೂರು ವರ್ಷಗಳ ನಂತರ ಆ ವೈಭವ ಉಳಿಯುವುದಿಲ್ಲ ಎಂದು ಭಾಗಣ್ಣ ಹೇಳಿದ್ದಾಗಿ ಅವರ ತಮ್ಮ ರಂಗಪ್ಪ ದಾಸರು ಉಲ್ಲೇಖಿಸಿದ್ದಾರೆ. ಅದರ ಸತ್ಯತೆಯನ್ನು ಯಾರೂ ಕಾಣಬಹುದಾಗಿದೆ. ಸಂಕಾಪುರದಲ್ಲಿರುವ ಶ್ರೀ ಪ್ರಾಣದೇವರ ಗುಡಿಗೆ ಶ್ಯಾನಭೋಗ ಗುಂಡಪ್ಪನವರ ವಂಶಸ್ಥರಾದ ಶ್ರೀ ರಾಘವೇಂದ್ರರಾಯರು ಸೂಕ್ತ ವ್ಯವಸ್ಥೆ ಮಾಡುತ್ತಿದ್ದಾರೆ. ಹೀಗಿದ್ದರೂ ವೈಭವ ಪ್ರಿಯನಾದ ಶ್ರೀ ವಿನಾಯಕನಿಗೆ ತನ್ನ ಅವತಾರ ಕಾಲದ ಕರ್ಮ ಭೂಮಿಯಾದ ಈ ಕ್ಷೇತ್ರಗಳ ಅಭಿವೃದ್ಧಿಯ ಬಗ್ಗೆ ಇಚ್ಛೆಯಿಲ್ಲವೇನೊ? ಶ್ರೀ ಗೋಪಾಲದಾಸರು ಅಂಕಿತ ಪಡೆದ ಆದವಾನಿಯ ಶ್ರೀ ಮಂಗರಾಯನ ಗುಡಿ ಅಭಿವೃದ್ಧಿಯ ಬಗ್ಗೆ ಸ್ಥಳೀಯ ಖ್ಯಾತವಂಶಜರಾದ 'ನಕಾತೆ' ಕುಟುಂಬದವರೇನೋ ಈಗೀಗ ಹೆಚ್ಚು ಶ್ರಮಿಸುತ್ತಿದ್ದಾರೆ.

ಗೋಪಾಲದಾಸರ ಚರಿತ್ರೆ ಲಿಖಿಸಲು ಹೊರಟಾಗ ವೈಯಕ್ತಿಕವಾಗಿ ನನಗಾದ ತೊಂದರೆಗಳೂ ಬಹಳ. ಒಮ್ಮೆ ಬರೆದಿದ್ದನ್ನು ಇನ್ನೊಮ್ಮೆ ಓದಿಕೊಳ್ಳಲು ಮನಸ್ಸು ಬೇಗ ಬರಲಿಲ್ಲ. (ಈ ಪುಸ್ತಕವನ್ನು ಓದುವಾಗ ನಿಮಗೆ ಅಡ್ಡಿಗಳುಂಟಾದರೆ ಆದಕ್ಕೆ ನಾನಂತೂ ಕಾರಣನಲ್ಲ).

ಶ್ರೀ ವಿನಾಯಕನನ್ನು ಶ್ರೀಮನ್ ಮಧ್ವಾಚಾರ್ಯರು ಶೀಘ್ರ ಫಲದಾಯಕ ಎಂದೇನೋ ಕೊಂಡಾಡಿದ್ದಾರೆ. ಆದರೆ ಆತನ ಅವತಾರವಾದ ಶ್ರೀ ಗೋಪಾಲದಾಸರು ಆದೇಕೆ ಬೇಗ ಅನುಗ್ರಹಿಸುವುದಿಲ್ಲ?

ಆದೇ ಯೋಚನೆಯಲ್ಲಿ ನಾನಿದ್ದಾಗ ಶ್ರೀ ಸೋದೆ ವಿಶ್ವೋತ್ತಮ ತೀರ್ಥ ಶ್ರೀ ಪಾದಂಗಳವರು ನನ್ನೊಂದಿಗೆ ಮಾತನಾಡುತ್ತಾ ಒಂದು ವಿಷಯ ತಿಳಿಸಿದರು.

"ಎಲ್ಲಿಯೋ ಒಂದು ಭಾವಿ. ಮತ್ತೆಲ್ಲಿಯೋ ಒಂದು ಮನೆ. ಅಲ್ಲಿಂದ ಒಂದು ಧ್ವನಿ ಹೊರಬರುತ್ತಿದೆ. ನಮಗೆ ಶ್ರೀ ಭೂವರಾಹ ಸ್ವಾಮಿ ದರ್ಶನ ಮಾಡಿಸುವುದಿಲ್ಲವೆ? ರಾಜರ ಕೃಪೆ ನಮಗೆ ದೊರಕಿಸುವುದಿಲ್ಲವೆ ?

ಎಂದು ಸ್ವಪ್ನದಲ್ಲಿ ಕೇಳಿದಂತಾಗುತ್ತಿತ್ತು. ಒಬ್ಬ ಹರಿದಾಸರ ಅಸ್ಪಷ್ಟ

ರೂಪ ಆಗಾಗ ಕಾಣುತ್ತಿತ್ತು. ಅದೆಲ್ಲಿಯ ಭಾವಿ? ಯಾವ ಊರಿನಲ್ಲಿ ಆ ಮನೆ? ಅನೇಕ ದಿವಸಗಳ ಕಾಲ ವಿವರಗಳು ತಿಳಿಯಲೇ ಇಲ್ಲ.

ಯಾವ ಯಾವ ಕಾರಣಗಳಿಂದಲೋ ನಾವು ಶ್ರೀ ಉತ್ತನೂರಿಗೆ ಹೋದೆವು. ಆಗ ನಾವು ನೋಡಿದ್ದು ನಮಗೆ ಸ್ವಪ್ನದಲ್ಲಿ ಕಾಣುತ್ತಿದ್ದ ಭಾವಿಯೆ! ಅದೇ ಪರಿಸರ, ಹತ್ತಿರದಲ್ಲಿ ಅದೇ ಮನೆ! ಅಲ್ಲಿಂದ ಬಂದ ಮೇಲೆ ನಮಗೆ ತೃಪ್ತಿ ದೊರಕಿದೆ.

ಶ್ರೀ ಸರ್ವಜ್ಞ ಕರಾರ್ಚಿತ ಮೂಲ ಮೂರ್ತಿಗಳನ್ನು ನಿತ್ಯವೂ ಪೂಜಿಸುವ ಮಹಾಮಹಿಮರೇ ಹೀಗೆ ಹೇಳಿದ ಮೇಲೆ ಪ್ರಸ್ತುತ ಪ್ರಕಟಣೆಯ ಆಲಸ್ಯದ ಕಾರಣ ಹೊಳೆದು ಹೋಯಿತು.

ಶ್ರೀ ಗೋಪಾಲದಾಸರನ್ನು ಆರಾಧಿಸುವವರಿಗೆ ಕೆಲವು ಕಾಲ ವಿಘ್ನ ಗಳುಂಟಾದರೂ ಅವೆಲ್ಲಾ ತಾತ್ಕಾಲಿಕ. ಘೋರವಾದ ಪ್ರಾರಬ್ಧ ಕರ್ಮಗಳಿಂದ ಬಳಲುತ್ತಿರುವವರಿಗೆ ಅದನ್ನು ಕಿಂಚಿತ್ತಿನಲ್ಲಿ ಮುಗಿಸಿ ಅನುಗ್ರಹದ ಅಮೃತವರ್ಷ ಸುರಿಸುವ ಕೃಪಾಳುಗಳು ಶ್ರೀ ಗೋಪಾಲದಾಸರು ಎಂದು ಆಮೇಲಿನ ಅನು ಭವದಿಂದ ಕಂಡು ಕೊಂಡೆ.

ಪುಸ್ತಕವನ್ನು ಪ್ರಕಟಿಸಲೇಬೇಕೆಂದು ನಿಶ್ಚಯಿಸಿದ ಮೇಲೆ ಶ್ರೀ ತಿರುಮಲ ತಿರುಪತಿ ದೇವಸ್ಥಾನದ ಅಧ್ಯಕ್ಷರಾಗಿದ್ದ ಶ್ರೀ ಚೆಂಗಲರೆಡ್ಡಿಯವರೊಂದಿಗೆ ವಿಶ್ವಾಸ ಅದು ಹೇಗೋ ಬೆಳೆದು ಬಂದಿತು. ಆರ್ಥಿಕವಾಗಿ, ಸಾಮಾಜಿಕವಾಗಿ ನಮ್ಮಿಬ್ಬರ ಮಧ್ಯೆ ಇರುವ ಅಂತರದ ಅಗಾಧತೆ ನಮ್ಮ ಬಾಂಧವ್ಯಕ್ಕೆ ಅಡ್ಡಿಬರಲಿಲ್ಲ. ತಿರುಪತಿಗೆ ನಾನು ಹೋದಾಗಲೆಲ್ಲಾ ತಮ್ಮೊಂದಿಗೆ ನನ್ನನ್ನು ಕರೆದೊಯ್ದು ಸರ್ವೋತ್ತಮ ಶ್ರೀ ಶ್ರೀನಿವಾಸನ ದರ್ಶನ ಮಾಡಿಸುತ್ತಿದ್ದರು. ದೇವಸ್ಥಾನದ ಪರವಾಗಿ ನನ್ನನ್ನು ಗೌರವಿಸುತ್ತಿದ್ದರು. ಕಡೆಗೆ ನನ್ನೊಂದಿಗೆ ಶ್ರೀ ಶ್ರೀ ವಾದಿರಾಜ ಗುರು ಸಾರ್ವಭೌಮರ ಆರಾಧನೆಗೆ ಸೋದೆಗೂ ಆಗಮಿಸಿದ್ದರು. ಋಷಿಮಾನ್ಯರಾದ ಅವರು ತೋರುತ್ತಿದ್ದ ವಿಶ್ವಾಸ ಜೀವನದಲ್ಲಿ ಮರೆಯಲು ಸಾಧ್ಯವೆ?

ಇದೆಲ್ಲಾ ಶ್ರೀ ಗೋಪಾಲದಾಸರ ಕರುಣೆಯ ಫಲ ಎಂಬ ನಿರ್ಧಾರಕ್ಕೆ ಬಂದೆ. ಇದನ್ನು ಅತಿ ಭಾವುಕತೆ, ಮೂಢತೆ ಎಂದು ಯಾರು ಏನು ಬೇಕಾದರೂ ಹೆಸರಿಸಲಿ; ಶ್ರೀ ಗೋಪಾಲದಾಸರ ಅನುಗ್ರಹವಾಗುವುದಾದರೆ ಸರ್ವೋತ್ತಮ ಶ್ರಿ ಶ್ರೀನಿವಾಸನವರೆಗೆ ಸರ್ವರ ಅನುಗ್ರಹವಾಗುತ್ತದೆ ಎಂಬ ನಿರ್ಧಾರಕ್ಕೆ ಬಂದೆ.

ಕೃತಿ ರಚಿಸುವಾಗ ಬಳ್ಳಾರಿಯ ವಿದ್ವಾನ್ ಮಾನಕರಿ ಶ್ರೀನಿವಾಸಾಚಾರ್ಯ, ಹರಿದಾಸ ಸಾಹಿತ್ಯ ಶಿರೋಮಣಿ ಶ್ರೀ ಅರಳುಮಲ್ಲಿಗೆ ಪಾರ್ಥಸಾರಥಿ, ಟಿ.ಟಿ.ಡಿ ದಾಸಸಾಹಿತ್ಯ ಪ್ರಾಜೆಕ್ಟಿನ ಶ್ರೀ ಕೆ. ಅಪ್ಪಣ್ಣಾಚಾರ್ಯ ಟಿ.ಟಿ.ಡಿ. ಪ್ರಕಟಿಸುತ್ತಿರುವ 'ಸಪ್ತಗಿರಿ' ಮಾಸಿಕ ಕನ್ನಡ ವಿಭಾಗದ ಶ್ರೀ ಶ್ರೀನಿವಾಸ್ ವಿದ್ವನ್‌ಮಣಿ ಮಂತ್ರಾಲಯದ ರಾಜಾ ಎಸ್. ಪವಮಾನಾಚಾರ್ಯ ಮೊದಲಾದವರು ತುಂಬಾ ಸಹಕಾರ ನೀಡಿದ್ದಾರೆ.

ತಿ.ತಿ.ದೇ. ಅವರು ಪುಸ್ತಕ ಪ್ರಕಟಣೆಗೆ ಆರ್ಥಿಕ ನೆರವು ನೀಡಿದ್ದಾರೆ. ಕರ್ನಾಟಕ ಪ್ರದೇಶ ಹೋಟೆಲ್ ಮತ್ತು ರೆಸ್ಟೋರೆಂಟ್ಸ್ ಅಸೋಷಿಯೇಷನ್ ಅಧ್ಯಕ್ಷರಾದ ಶ್ರೀ ಎನ್.ಆರ್. ನಾರಾಯಣ ರಾವ್, ಕಡೂರು ಶ್ರೀ ರಾಘವೇಂದ್ರ ಸ್ವಾಮಿ ಮಠದ ಮೇಲ್ವಿಚಾರಕರಾದ ಶ್ರೀ ಹೆಚ್.ಪಿ. ನಾಗರಾಜರಾಯರು ಮತ್ತು ಖ್ಯಾತ ಹೋಟೆಲ್ ಉದ್ಯಮಿ ದಿವಂಗತ ಟಿ. ಎನ್. ಸುಂದರರಾಯರ ಅನುಜ ಶ್ರೀ ಟೆಕ್ಕಟೆ ರಾಘವೇಂದ್ರರಾಯರು ಸುಮ್ಮನೆ ಸೂಚಿಸಿದ ಮಾತ್ರಕ್ಕೇ ಧನ ಸಹಾಯ ಮಾಡಿದ್ದಾರೆ.

ಹುಚ್ಚು ಹುಚ್ಚಾಗಿ ಹರಿಯುತ್ತಿದ್ದ ನನ್ನ ಸ್ಫೂರ್ತಿಯ ಸೆಲೆಗೆ ಭಕ್ತಿಪಥದ ದಾರಿ ಹಾಕಿಕೊಟ್ಟವರು ಚಿತ್ರದುರ್ಗದ ಶ್ರೀ ಕೆ. ರಾಮಚಂದ್ರರಾಯರು. ಅವರು ಮಹಾನ್ ಸಾಧಕರು. ನನ್ನನ್ನು ತಮ್ಮ ಮಾರ್ಗದಲ್ಲಿ ನಡೆಯಲು ಆಶೀರ್ವದಿಸಿದವರು. ಅವರು ಬಹಳ ಬಹಳ ಮುಂದೆ ಇದ್ದರೂ ನನ್ನನ್ನು ಬಿಡದೆ ನಡೆಸಿಕೊಂಡು ಹೋಗಲು ಪ್ರಯತ್ನಿಸುತ್ತಿರುವವರು.

ತಾವು ಆಗಾಗ ಕೈಗೊಳ್ಳುತ್ತಿರುವ ಹರಿದಾಸ ಸಾಹಿತ್ಯ ಜೈತ್ರ ಯಾತ್ರೆಯಲ್ಲಿ ಕೆಲವು ಊರುಗಳಿಗೆ ನನ್ನನ್ನೂ ಕರೆಸಿಕೊಂಡು ಭಕ್ತರ ಸನ್ನಿಧಿಯಲ್ಲಿ ಮಾತನಾಡುವ ಭಾಗ್ಯ ಕೊಡುತ್ತಾ ನನ್ನ ಚಿಂತನೆಗೆ ತಮ್ಮ ಆಶೀರ್ವಾದದ ಶ್ರೀರಕ್ಷೆ ನೀಡುತ್ತಿರುವ ಮುಳಬಾಗಿಲಿನ ಶ್ರೀ ಶ್ರೀಪಾದರಾಜ ಮಠಾಧೀಶರಾದ ಶ್ರೀ ಶ್ರೀ ವಿಜ್ಞಾನನಿಧಿ ತೀರ್ಥ ಶ್ರೀಪಾದಂಗಳವರಿಗೆ ನನ್ನ ಅನಂತ ನಮನಗಳು.

ಚಿತ್ರದುರ್ಗ ಶ್ರೀ ರಾಯರ ಮಠದ ವಿಚಾರಣಾ ಕರ್ತ ಹಾಗೂ ಶ್ರೀ ಗುರು ಸಾರ್ವಭೌಮ ಸಂಸ್ಕೃತ ವಿದ್ಯಾಪೀಠದ ಚಿತ್ರದುರ್ಗ ಶಾಖೆಯ 'ಮೇಲ್ವಿಚಾರಕ' ನನ್ನಾಗಿ ನೇಮಿಸುವುದರ ಮೂಲಕ ಸಾಧನೆಗೆ ಅನುವು ಮಾಡಿಕೊಟ್ಟಿರುವ ಮಂತ್ರಾಲಯದ ಶ್ರೀ ಶ್ರೀ ಸುಶಮೀಂದ್ರತೀರ್ಥ ಶ್ರೀಪಾದಂಗಳವರಿಗೆ, ಶ್ರೀ ಮಠದ ಸರ್ವಾಧಿಕಾರಿ ಶ್ರೀ ರಾಜಾ ಎಸ್. ಕೃಷ್ಣಾಚಾರ್ಯ ಹಾಗೂ ಅವರ ಅನುಜರಾದ ವಿದ್ವಾನ್ ರಾಜಾ ಎಸ್. ಗಿರಿಯಾಚಾರ್ಯ ಅವರಿಗೆ ಅನಂತ ಪ್ರಣಾಮಗಳು.

ಇಷ್ಟೆಲ್ಲಾ ಈ ಪುಸ್ತಕದಲ್ಲಿ ಏಕೆ ಹೇಳಬೇಕಾಯಿತು? ಅವರೆಲ್ಲರ ಆಶೀರ್ವಾದವಿದ್ದುದರಿಂದಲೇ ಪತ್ರಿಕೋದ್ಯಮದ ರಾಜಕೀಯ ಹಾಗೂ ವ್ಯವಹಾರಿಕ ಬಿಸಿಯಲ್ಲಿ ದಾಸಸಾಹಿತ್ಯ ಅಧ್ಯಯನದ ತಂಪು ಸಿಕ್ಕಿದೆ. ಅಂಥ ತಣಿವಿನ ವಾತಾವರಣದಲ್ಲಿ ರೂಪಗೊಂಡುದುದೇ ಹರಿದಾಸರನ್ನು ಪರಿಚಯಿಸ ಬೇಕೆಂಬ ಸತ್‌ಸಂಕಲ್ಪ. ಈ ಪುಸ್ತಕ ಪ್ರಕಟಿಸುವ ಆಪೇಕ್ಷೆ ವ್ಯಕ್ತಪಡಿಸಿದಾಗ ತಮ್ಮ ಆಶೀರ್ವಾದವನ್ನು ಕಳಿಸಿ ಶಕ್ತಿ ತುಂಬಿದವರು ಉಡುಪಿ ಶ್ರೀ ಪೇಜಾವರ ಮಠ ಶ್ರೀ ಶ್ರೀ ವಿಶ್ವೇಶ ತೀರ್ಥ ಶ್ರೀಪಾದಂಗಳು ಹಾಗೂ ಶ್ರೀಮಂತ್ರಾಲಯದ ಶ್ರೀ ಶ್ರೀ ಸುಶಮೀಂದ್ರ ತೀರ್ಥ ಶ್ರೀಪಾದಂಗಳವರು ಮತ್ತು ಮುಳಬಾಗಿಲಿನ ಶ್ರೀ ಶ್ರೀಪಾದರಾಜ ಮಠಾಧೀಶರಾದ ಶ್ರೀ ಶ್ರೀ ವಿಜ್ಞಾನ ನಿಧಿತೀರ್ಥ ಶ್ರೀಪಾಂದಗಳವರ ಆಶೀರ್ವಾದ ಸತತವಾಗಿ ನನ್ನನ್ನು ರಕ್ಷಿಸುತ್ತಿರಲಿ.

ಇವರೆಲ್ಲಾ ಒಂದುವರ್ಗ. ಹರಿದಾಸ ಸಾಹಿತ್ಯವನ್ನು ನನಗಿಂತ ಹೆಚ್ಚು ತಿಳಿದವರು. ತಾರತಮ್ಯದಲ್ಲಿ ಬಹಳ ಮೇಲೆ ಇರುವವರು.

ನನ್ನ ಸಂಕಲ್ಪ ಶುದ್ಧತೆಯನ್ನು ಕಂಡು ಆನಂದಿಸಿದವರು ಆಂಧ್ರ ಹೈಕೋರ್ಟಿನ ನ್ಯಾಯಾಧಿಪತಿಗಳಾದ ಶ್ರೀ ಎನ್.ವೈ.ಹನುಮಂತಪ್ಪ ಹಾಗೂ ರಾಷ್ಟ್ರೀಯ ಹರಿಜನ ಗಿರಿಜನ ಆಯೋಗದ ಅಧ್ಯಕ್ಷರು, ಪಾರ್ಲಿಮೆಂಟ್ ಸದಸ್ಯರೂ ಆದ ಶ್ರೀ ಹೆಚ್. ಹಮಮಂತಪ್ಪ ಮತ್ತು ಕರ್ನಾಟಕ ರಾಜ್ಯದ ಉನ್ನತ ಶಿಕ್ಷಣ ಸಚಿವ ಶ್ರೀ ಡಿ. ಮಂಜುನಾಥ್-ಈ ಮೂವರು ನನ್ನ ವೈಯಕ್ತಿಕ ಜೀವನದ ನಾನಾ ಮಜಲುಗಳನ್ನು ನೋಡಿದವರು. ನಾನು ಕೈಗೊಳ್ಳುವ ಸತ್ಕಾರ್ಯಗಳಲ್ಲೆಲ್ಲಾ ತನುಮನ ಧನಗಳಿಂದ ಸಹಕರಿಸುತ್ತಿರುವವರು. ಈ ಕೃತಿಯ ಬಗ್ಗೆ ತಮ್ಮ ನಲ್ನುಡಿ ಹೊನ್ನುಡಿ ಚೆನ್ನುಡಿಗಳನ್ನು ಕೊಟ್ಟು ಬೆನ್ನು ತಟ್ಟಿದ್ದಾರೆ.

ಸುಂದರವಾದ ಮುಖಚಿತ್ರ ಬರೆದು ಕೊಟ್ಟ ಹೈದರಾಬಾದಿನ ಶ್ರೀ ಶ್ಯಾಂಜಿ ವಿಜಯ ರಾವ್ ಹಾಗೂ ಖ್ಯಾತ ಕಲಾವಿದ ಶ್ರೀ ಸುಧಾಕರ ದರ್ಭೆ ಇವರುಗಳು ಪುಸ್ತಕಕ್ಕೆ ಹೆಚ್ಚಿನ ಶೋಭೆಯನ್ನು ನೀಡಿದ್ದಾರೆ.

ಕೃತಿ ರಚನೆಯ ಕಾಲದಲ್ಲಿ ನಾನಾ ರೀತಿಯ ಸಹಕಾರ ನೀಡಿದ ಸರ್ವಶ್ರೀ ಕೆ. ನಾಗರಾಜನ್, ಗೋಪಿನಾಥವೈದೆ, ಬೀಜಾಡಿ ಚಂದ್ರಶೇಖರ್ ಹೆಬ್ಬಾರ್ ಕೆ.ಆರ್. ರಾಘವೇಂದ್ರರಾವ್ ಕೆ. ಶ್ರೀನಿವಾಸ ಗುರಿಕಾರ, ಗೋಪಾಡಿ ಅಚ್ಯುತರಾವ್, ಪ್ರತಿಯನ್ನು ಅಚ್ಚು ಕಾಪಿಗೆ ಸಿದ್ಧಮಾಡಿಕೊಟ್ಟ ನನ್ನ ಸೋದರ ಮಾವನ ಮಕ್ಕಳಾದ ಚಿ॥ ಮನೋರಮಾ ವಿ . ಮೂರ್ತಿ ಹಾಗೂ ಚಿ॥ ಕು॥ ಸುಂದರ, ಎಂ. ಸುಧೀಂದ್ರ ಇವರುಗಳಿಗೆ ನನ್ನ ವಂದನೆಗಳು.

ಇಂಥ ಆಸಕ್ತಿ ನನ್ನಲ್ಲಿ ಹುಟ್ಟಿರುವುದನ್ನು ಕಂಡು ಅತಿ ಹೆಚ್ಚು ಸಂತೋಷಿಸುತ್ತಿರುವವರು ನನ್ನ ತಾಯಿ ಶ್ರೀಮತಿ ವಿ. ಇಂದಿರಾ ಬಾಯಿ. ಪತ್ರಿಕೋದ್ಯಮಿಯೆಂದು ನನ್ನನ್ನು ಹಲವಾರು ಸಂಘ ಸಂಸ್ಥೆಗಳು ಸನ್ಮಾನಿಸಿದಾಗ ಅವರಿಗೆ ಅಷ್ಟಕ್ಕಷ್ಟೇ ಆನಂದ . ಇದರಿಂದೇನೋ ಲೌಕಿಕ ವಿಜಯವಷ್ಟೆ. ನಿನ್ನ ವಂಶದ ಹಿರಿಯರು ಹರ್ಷಿಸುವಂಥ ಕೆಲಸಮಾಡು ಎಂದು ಅವರು ಹೇಳುತ್ತಿರುತ್ತಾರೆ. ಎಂಟು ದಶಕಗಳನ್ನು ಈಗಾಗಲೇ ಹಿಂದೆ ಹಾಕಿರುವ ಅವರು ಈಗಲೂ ಭಜನೆ ಮಾಡುತ್ತಾ ಕುಣಿಯುತ್ತಾರೆ. ಪುಸ್ತಕ ಬರೆದು ಅವರಿಗೆ ತೋರಿಸಿದಾಗ ಅವರಿಗಾದ

ತೃಪ್ತಿ ಬಣ್ಣಿಸಲು ಅಸದಳ. ಹಸ್ತಪ್ರತಿಯ ಮೇಲೆ ಶ್ರೀ ಗೋಪಾಲ ದಾಸರ ಚಿತ್ರವನ್ನು ಇಟ್ಟು ಭಜನೆ ಮಾಡಿ ಕುಣಿದದ್ದೇ ಕುಣಿದದ್ದು. ಆನಂದಮಯ ಗೋಪಾಲ ವಿಠಲ ಎಂಬ ಅಂಕಿತ ಹೊಂದಿದ್ದಾರೆ. ಹರಿ ಗುರುಗಳು ಆಕೆಯ ಸೇವೆಗೆ ಅನುಗ್ರಹಿಸಿ ನನ್ನಿಂದ ಈ ಕೆಲಸ ಮಾಡಿಸುತ್ತಿದ್ದಾರೆ ಎಂಬ ವಿಷಯ ನನಗೆ ತಿಳಿಯದೆ ಇಲ್ಲ.

ಇದನ್ನು ಕೇವಲ ಪುಸ್ತಕವೊಂದರ ಪ್ರಕಟಣೆಯೆಂದು ನಾನು ಭಾವಿಸುತ್ತಿಲ್ಲ. ಶ್ರೀ ಗೋಪಾಲದಾಸರ ಮೂಲಕ ಶ್ರೀ ಗೋಪಾಲ ವಿಠಲನ ಅನುಗ್ರಹಕ್ಕಾಗಿ ಮಾಡುತ್ತಿರುವ ಒಂದು ಯಜ್ಞಕಾರ್ಯ ಎಂಬ ಅನುಸಂಧಾನ ನನ್ನದು. ಆದ್ದರಿಂದಲೇ ಈ ನನ್ನುಡಿ ದೀರ್ಘವಾಯಿತು. ನನ್ನ ಆಧ್ಯಾತ್ಮ ಮಾರ್ಗಕ್ರಮಣದಲ್ಲಿ ಪಥದರ್ಶಕರನ್ನು ಸ್ಮರಿಸದೆ ಮುಂದೆ ಸಾಗಲು ಮನಸಾಗಲಿಲ್ಲ.

ಪುಸ್ತಕವನ್ನು ಸುಂದರವಾಗಿ ಮುದ್ರಿಸಿದ ಬೆಂಗಳೂರು ಚಾಮರಾಜಪೇಟೆಯ ಲಕ್ಷ್ಮಿ ಮುದ್ರಣಾಲಯದ ಶ್ರಿ ಅಶೋಕ್ ಕುಮಾರ್ ಅವರಿಗೆ ಹಾಗೂ ಅವರ ಸಿಬ್ಬಂದಿ ಶ್ರೀ ಹೊರಾ ಸತ್ಯನಾರಾಯಣ ರಾವ್, ಶ್ರೀ ಟಿ.ಎಲ್. ವೆಂಕಟೇಶ ಮೊದಲಾದವರಿಗೆ ನನ್ನ ವಂದನೆಗಳು.

ಓದಿದ ಮೇಲೆ ನಿಮ್ಮ ಅನಿಸಿಕೆಯನ್ನು ಒಂದು ಕಾರ್ಡಿನಲ್ಲಿ ತಿಳಿಸಿದರೂ ಅದನ್ನು ಹರಿದಾಸರ ವಾಣಿಯೆಂದು ಪವಿತ್ರತೆಯಿಂದ ಪರಿಗ್ರಹಿಸುತ್ತೇನೆ.

ಈ ಪುಸ್ತಕವನ್ನು ಕೊಂಡು ಓದುತ್ತಿರುವ ನಿಮಗೆ ಶ್ರೀ ಗೋಪಾಲದಾಸರ ಅನುಗ್ರಹವಾಗಲಿ ಎಂಬ ಪಾರ್ಥನೆಯೊಂದಿಗೆ

-ಕೆ. ವಿ. ಶ್ರೀನಿವಾಸ ರಾಯ

**ಪ್ರಕಟಿತ ಕೃತಿಗಳು:**

ಚಿಪ್ಪಗಿರಿಯ ತಪೋಮೂರ್ತಿ ರೂ. 50-00

(ಶ್ರೀ ವಿಜಯದಾಸರ ಜೀವನ ಕುರಿತ ಕಾದಂಬರಿ ರೂಪ)

ಶ್ರೀ ಉತ್ತನೂರಿನ ಋಷಿ ಕುಲೋತ್ತಮ ರೂ. 80-00

(ಶ್ರೀ ಗೋಪಾಲದಾಸರ ಜೀವನ ಕುರಿತ ಕಾದಂಬರಿ ರೂಪ)

**ಬರಲಿರುವ ಕೃತಿಗಳು :**

ಶ್ರೀ ಮಾನ್ವಿಯ ಮುನಿಪುಂಗವ

ಮುಂದಿನ ಮಧ್ವಾಚಾರ್ಯರು

ವಿಜಯಕವಚ (ನಾಟಕ)

"ಆಶ್ಚರ್ಯ"

"ಇದು ಸಾಧ್ಯವೆ?"

ಎಲ್ಲೆಲ್ಲಿಯೂ ಇದೇ ಮಾತು. ಬೀದಿ ಬೀದಿಗಳಲ್ಲೆಲ್ಲಾ ಗುಂಪು ಗುಂಪು ಜನ. ಯಾವ ಗುಂಪಿನಲ್ಲಿ ಹೋಗಿ ಕೇಳಿದರೂ ಅದೇ ಸಂಗತಿಯೇ, ಯಾರೊಬ್ಬರ ಬಾಯಿಯಲ್ಲಿಯೂ ಅದೇ ಮಾತು.

"ಚೋಟುದ್ದದ ಹುಡುಗ, ತಪಸ್ಸು ಮಾಡುತ್ತಿದ್ದನಂತೆ."

"ತಪಸ್ಸು ಏನು ಬಂತ್ರೀ, ಹುಡುಗ ಜಿಂಕೆ ಚರ್ಮದ ಮೇಲೆ ಕೂತಿದ್ದನಂತೆ. ಹಾಗೆ ಕುಳಿತಿರುವಾಗ ಸ್ವಲ್ಪ ತೂಕಡಿಕೆ ಬಂದಿರಬೇಕು. ಸುಮ್ಮನೆ ಕಣ್ಣು ಮುಚ್ಚಿದ್ದನಂತೆ. ದೊಡ್ಡ ಹಾವೊಂದು ಬಂದು ಅವನ ಹೊಟ್ಟೆಯನ್ನು ಸುತ್ತು ಹಾಕಿಕೊಂಡು ಬಿಟ್ಟಿತಂತೆ."

"ಪಾಪ; ಹುಡುಗ ಹೆದರಿಬಿಟ್ಟಿರಬೇಕು. ಅಕಸ್ಮಾತ್ ಅವನು ಕೂಗಿ ಬಿಟ್ಟಿದ್ದರೆ ಹಾವು ಹೆದರಿ ಅವನನ್ನು ಕಚ್ಚಿ ಬಿಡುತ್ತಿತ್ತೇನೋ! ಪುಣ್ಯಕ್ಕೆ ಹುಡುಗ ಧೈರ್ಯವಾಗಿ ಕುಳಿತಿದ್ದನಂತೆ. ಅವನ ಧೈರ್ಯಕ್ಕೆ ಮೆಚ್ಚಿ, ಹಾವು ಅವನ ತಲೆಯ ಮೇಲೆ ಹೆಡೆ ಎತ್ತಿ ಆಡಿತಂತೆ."

"ತಲೆಯ ಮೇಲೆ ಆಡಿದ್ದು ನೋಡಿಲ್ಲವಂತ್ರೀ, ಆದರೆ. ಹೊಟ್ಟೆಯ ಸುತ್ತ ತಾನೇ ಸುತ್ತು ಹಾಕಿಕೊಂಡ ಹಾವು ಗಂಟು ಹಾಕಿದಂತೆ ಕಾಣುತ್ತಿತಂತ್ರೀ, ಅಷ್ಟಾದರೂ ಹುಡುಗ ಕಣ್ಣು ತೆಗೆಯಲಿಲ್ಲವಂತೆ."

"ಕಣ್ಣು ಏನು ತೆಗೆಯುತಾನ್ರೀ, ಹುಡುಗ ಹೌಹಾರಿ ಕುಳಿತು ಬಿಟ್ಟಿರಬೇಕು!"

"ಇಲ್ಲಿಲ್ಲ ; ಹುಡುಗ ಹೌಹಾರಿದ್ದರೆ ಸ್ವಲ್ಪವಾದರೂ ಅಲ್ಲಾಡುತ್ತಿದ್ದ. ಧೈರ್ಯವಾಗಿ ಕದಲದೆ ಕುಳಿತಿದ್ದರಿಂದ ಹಾವು ಹೊಟ್ಟೆಯ ಮೇಲೆ ಬಹಳ ಹೊತ್ತು ಆಡಿ ಕಡೆಗೆ ತಾನೇ ಸರಿದು ಹೋಯಿತಂತೆ."

"ಹುಡುಗನ ಹೊಟ್ಟೆಯ ಸುತ್ತ ಹಾವು ಗಂಟು ಹಾಕಿದಂತೆ ಇರಲಿಕ್ಕೆ ಅವನೇನು ಗಣಪತಿ ಏನ್ರೀ? ಏನು ; ಮಹಾ ವಿಘ್ನೇಶ್ವರ! ಅವನ ಸೇವೆಗೆ ಹಾವು ಬಂದಿರುತ್ತೆ! ನೀವಂತೂ, ಒಂದು ನೋಡಿದರೆ ಹತ್ತು ಹೇಳುವ ಈ ಜನಗಳ ಮಾತು ಕಟ್ಟಿಕೊಂಡು ಏನೇನೆಲ್ಲಾ ಮಾತನಾಡಬೇಡ್ರೀ."

ಒಂದು ಗುಂಪಿನಲ್ಲಿಯ ಮಾತು ಹೀಗೆ ಸಾಗುತ್ತಲೇ ಇತ್ತು. ಆ ಗುಂಪಿನಲ್ಲಿ ಮತ್ತೊಬ್ಬ ಬಂದು ಸೇರಿಕೊಂಡು, "ನಾನೇ ನೋಡಿದೀನ್ರೀ, ನಾನಷ್ಟೇ ಏಕೆ; ಎದುರು ಮನೆ ಕುಪ್ಪೇರಾಯರೂ ನೋಡಿದ್ದಾರೆ. ಅವರ ಹೆಂಡತಿ ರಿಂದಮ್ಮ ಬಂದು ಈ ಸಂಗತಿ ಹೇಳಿದಾಗ ಕುಪ್ಪೇರಾಯರು ಓಡೋಡಿ ಬಂದು ನನಗೆ ಈ ಸಂಗತಿ ತಿಳಿಸಿದರು. ನಾವಿಬ್ಬರೂ ಕೂಡಲೇ ಅರಳೀಕಟ್ಟೆಯತ್ತ ಧಾವಿಸಿದೆವು".

"ಹೌದೇ! ನೀವು ಕೂಡಲೇ ಅಲ್ಲಿಗೆ ಹೋದಿರಾ?" ಗುಂಪಿನಲ್ಲಿಯ ಒಬ್ಬ ಆಶ್ಚರ್ಯದಿಂದ ಕೇಳಿದ. ಉಳಿದವರು ಉತ್ತರವನ್ನು ಕುತೂಹಲದಿಂದ ಆಲಿಸುತ್ತಿದ್ದರು.

"ನಾವಿಬ್ಬರೇ ಏಕೆ? ಗೌಡರ ಶರಣಬಸಪ್ಪ, ಅವನ ಹೆಂಡತಿ ಗಂಗಮ್ಮ, ತಳವಾರ ರಾಮ ಎಲ್ಲರೂ ಕೂಡಲೇ ಅಲ್ಲಿಗೆ ಧಾವಿಸಿ ಹೋದೆವು."

"ನೀವು ಹೋದಾಗ ಹಾವು ಹಾಗೆಯೇ ಇತ್ತೆ ಹುಡುಗ ಸುಮ್ಮನೆ ಕುಳಿತಿದ್ದನೇ?" ಗುಂಪಿನಲ್ಲಿದ್ದವನೊಬ್ಬ ಪ್ರಶ್ನಿಸಿದ.

"ನಿಮ್ಮೆಲ್ಲರನ್ನೂ ನೋಡಿ ಹಾವು ಹೆದರಿ ಹೋಗಿ ಬಿಟ್ಟಿರಬೇಕು" ಇನ್ನೊಬ್ಬ ತನ್ನ ಅಭಿಪ್ರಾಯ ಸೇರಿಸುತ್ತಾ ಪ್ರಶ್ನಾರ್ಥಕವಾಗಿ ನೋಡಿದ.

"ನಾವಷ್ಟೇ ಏಕೆ? ನಾವು ಹೋಗುವುದರಲ್ಲಿ ಅಲ್ಲಿ ನೂರಾರು ಜನ ಸೇರಿಬಿಟ್ಟಿದ್ದರು. ಎಷ್ಟು ಜನ ಸೇರಿದರೂ ಹಾವು ಹೊಟ್ಟೆ ಬಿಡಲಿಲ್ಲ. ಹುಡುಗ ಕಣ್ಣು ತೆಗೆಯಲಿಲ್ಲ" ಆತ ಉತ್ತರಿಸಿದ.

ಗುಂಪಿಗೆಲ್ಲಾ ಆಶ್ಚರ್ಯ. ಜೊತೆಗೆ ತಾವು ಈ ಅಪೂರ್ವ ದೃಶ್ಯವನ್ನು ನೋಡಲಿಲ್ಲವಲ್ಲಾ ಎಂಬ ಕಸಿವಿಸಿ.

ಗುಂಪಿನಲ್ಲಿಯೇ ಒಬ್ಬ, ಅವನೂ ಆಗತಾನೇ ಬಂದು ಗುಂಪು ಸೇರಿದ್ದ. ನೋಡಿದವರು ಹೆಮ್ಮೆಯಿಂದ ಹೇಳುತ್ತಿದ್ದರೆ ತಾನು ಕಂಡಿರದ ದೃಶ್ಯ ಅವರು ನೋಡಿದ್ದರಿಂದ ಒಂದು ರೀತಿಯ ಮಾತ್ಸರ್ಯ.

ಅವರು ನೋಡಿದ್ದು ಹಾಗಿರಲಾರದು ಎಂದು ವಾದಿಸುವುದರಲ್ಲಿಯೇ ಏನೋ ಒಂದು ರಾಕ್ಷಸ ಸಮಾಧಾನ; ದೈತ್ಯ ತೃಪ್ತಿ ಅವನಿಗೆ.

"ಸಾಧ್ಯವಿಲ್ಲ. ಇವೆಲ್ಲಾ ಕಟ್ಟುಕತೆ. ನೋಡಿದ್ದ ಒಂದನ್ನು ಹತ್ತಾಗಿ ಬಣ್ಣಿಸಿ ಹೇಳುವ ನಾಲಿಗೆ ಚಪಲ. ತಿಳಿದ ಒಂದು ಸಂಗತಿಗೆ ಹತ್ತು ಗರಿ ಹಚ್ಚಿ ಹಾರಿ

ಬಿಡುವ ಕಲ್ಪನಾ ಚಾತುರ್ಯ. ಪ್ರಕಟನಾಕಾಂಕ್ಷೆ." ಅವನು ತನ್ನ ಅಭಿಪ್ರಾಯವನ್ನು ಸ್ಪಷ್ಟವಾಗಿ ಸಾರಿಬಿಟ್ಟ. ಹಾಗೆ ಹೇಳಿದ್ದರಿಂದ ಏನೋ ಒಂದು ರೀತಿಯ ಸಮಾಧಾನ ಅವನಿಗೆ. ತನಗಿಲ್ಲದ ಭಾಗ್ಯ ಇನ್ನೊಬ್ಬರಿಗೆ ಇರಬಾರದೆಂಬ ಮಾತ್ಸರ್ಯಗ್ರಸ್ತ ಮನಸ್ಸು. ಅವನ ಮನಸ್ಸಿನ ಈ ಮಾತುಗಳು ಹೊಮ್ಮುವಾಗ ಶಬ್ದ ಶಬ್ದಗಳಿಗೂ ವಿಷ ಲೇಪಿಸಿ ಬಿಟ್ಟ ಬಾಣದ ಪ್ರಖರತೆ. ತಾನು ಎಸೆದ ಬಾಣದ ಪ್ರಭಾವ ಏನಾಗಿದೆ ಎಂದು ತಿಳಿಯುವ ಗುರಿಕಾರನ ಚಪಲ. ಸುತ್ತ ಜನಗಳನ್ನು ಅವನು ನೋಡಿದ.

ಜನ ಅವನ ಮಾತುಗಳನ್ನು ಅಷ್ಟಾಗಿ ಸ್ವಾಗತಿಸಲಿಲ್ಲ. ನಡೆದ ಒಂದು ಸಂಗತಿಯನ್ನು ಕಣ್ಣಾರೆ ನೋಡಿದವರೊಬ್ಬರು ವಿವರಿಸುತ್ತಿರುವಾಗ ಅದನ್ನು ನೋಡಿಲ್ಲದವನೊಬ್ಬ ಇಲ್ಲವೆಂದು ವಾದಿಸುವ ಪರಿ ಜನಗಳಿಗೆ ಹೇಗೆ ಹಿಡಿಸೀತು?

ವಾದ ಮಾಡಿದ ಅವನು ಕೂಡಲೇ ಹೇಳಿಬಿಟ್ಟ. "ಜನರು ಮೂಢರು, ಮೂಢ ನಂಬಿಕೆಗಳಿಗೆ ಒಳಗಾಗುತ್ತಿದ್ದಾರೆ."

ಆ ಗುಂಪಿನಲ್ಲಿಯೇ ಕೆಲವರಿಗೆ ಈ ವಾದ ಸ್ವಲ್ಪ ಹಿಡಿಸಿರಬೇಕು. ಎಲ್ಲರೂ ಹೌದೆಂದು ಹೇಳುವ ಒಂದು ಸಂಗತಿಯನ್ನು 'ಇಲ್ಲ' ಎಂದು ತಿರುಚಿ ಹೇಳುವ ಬುದ್ಧಿ ಕುಶಲತೆಯ ಬಗ್ಗೆ ಆಸಕ್ತಿ ಅಂಥವರಿಗೆ

ಅಂಥವರೇ ಸ್ಫೂರ್ತಿ ಈ ವಾದಮಲ್ಲನಿಗೆ. ಮುಂದುವರೆದು ಆತ ಹೇಳಿದ.

ಕೇವಲ ಹನ್ನೆರಡು ವರ್ಷದ ಪೋರ, ಊರ ಹೊರಗಿನ ಕೆರೆಯಂಗಳಕ್ಕೆ ಬೆಳಗಿನ ಜಾವ ನಾಲ್ಕು ಘಂಟೆಗೆ ಹೋಗಿ ತಣ್ಣೀರು ಸ್ನಾನ ಮಾಡಿ, ಬಯಲಿನಲ್ಲಿ ಕುಳಿತುಕೊಳ್ಳುವುದು ಸಾಧ್ಯವೇ? ಅದೇನೋ ಮತದ ಒತ್ತಾಯ, ಪುಣ್ಯ ಬರುತ್ತದೆ ಎಂಬ ಭ್ರಾಮಕ ಆಶ್ವಾಸನೆಗೆ ಒಳಗಾಗಿ ಹುಡುಗ ಹೋದರೂ ಹೋಗುತ್ತಾನೆಂದೇ ಇಟ್ಟುಕೊಳ್ಳೋಣ. ಅವನ ಮೇಲೆ ಹಾವೇಕೆ ಬರುತ್ತದೆ? ಒಂದು ವೇಳೆ ಹಾವು ಬಂದರೂ ಹೊಟ್ಟೆಯ ಸುತ್ತ ಏಕೆ ತಳಕು ಹಾಕಿಕೊಳ್ಳುತ್ತದೆ? ಹಾಗೆ ಹಾವು ಹೊಟ್ಟೆಯನ್ನು ಸುತ್ತುವರೆಯುತ್ತಿದ್ದಾಗ ಆ ಹುಡುಗನೇನು ಬಾಳೆಹಣ್ಣು ತಿನ್ನುತ್ತಿದ್ದನೆ? ಅವನಿಗೇನು ಹೆದರಿಕೆಯಾಗುವುದಿಲ್ಲವೇ?"

"ಏನೋ, ಹುಡುಗನಿಗೆ ಆ ಸಂಗತಿ ಗೊತ್ತಿಲ್ಲದೆ ಇರಬಹುದು. ಆತ ತಪಸ್ಸು ಮಾಡುತ್ತಿದ್ದಾಗ ಆ ಘಟನೆ ನಡೆದಿರಬಹುದು." ಗುಂಪಿನಲ್ಲಿ ಒಬ್ಬ ವ್ಯಾಖ್ಯಾನಿಸಿದ. ಏನೋ ಮಾತನಾಡುವುದೇ ಕೆಲವರಿಗೆ ಚಟ. ಅಭಿಪ್ರಾಯ ವ್ಯಕ್ತಪಡಿಸುವುದರಲ್ಲಿ ತೃಪ್ತಿ.

"ತ - ಪ - ಸ್ಸು, ತ-ಪ-ಸ್ಸು-"

ಗಟ್ಟಿಯಾಗಿ ನಕ್ಕು ಬಿಟ್ಟ ಆ ವಾದಮಲ್ಲ. "ಗಡ್ಡ ಮೀಸೆ ಬಿಟ್ಟ ದೊಡ್ಡ ಋಷಿ ಆ ಹುಡುಗ. ಅವನು ತಪಸ್ಸು ಮಾಡುತ್ತಾನಂತೆ! ಮಹಾರುದ್ರ ಅವನಿಗೆ ಒಲಿದು ಬಿಡುತ್ತಾನೆ! ಕೇಳ್ರಪ್ಪೊ ಈತನ ಮಾತನ್ನು" ಲೇವಡಿ ಬೆರೆತ ವ್ಯಂಗ್ಯ ಧ್ವನಿ ಅಟ್ಟಹಾಸದಿಂದ ಹೊರಹೊಮ್ಮಿತು.

ಏನೋ ತನ್ನ ಃ ಭಿಪ್ರಾಯ ವ್ಯಕ್ತ ಪಡಿಸಿದ್ದಕ್ಕೆ ಇಷ್ಟೊಂದು ಲೇವಡಿ ಮಾಡುವುದೇ? ಅವ ಗೂ ಸಿಟ್ಟು ಬಂದಿತು. "ಮಹಾರುದ್ರನ ಕೃಪೆಗಾಗಿ ಆ ಹುಡುಗ ತಪಸ್ಸು ಮಾ ತುತ್ತಿದ್ದನೋ ಇಲ್ಲವೋ, ಆದರೆ ಆ ರುದ್ರ ದೇವನ ಕೃಪೆ ಇಲ್ಲದಲೆ ಹುಡುಗನಿಗೆ ತಪಸ್ಸು ಮಾಡುವ ಬುದ್ಧಿಯೇ ಬರುತ್ತಿರಲಿಲ್ಲ." ನಿರ್ಧಾರದ ಧ್ವನಿಯಲ್ಲಿ ಉತ್ತರಿಸಿದ.

ವಾದಮಲ್ಲನಿಗೆ ಆವೇಶ ಉಕ್ಕಿ ಬಿಟ್ಟಿತು. ತನ್ನ ಮಾತನ್ನು ಅಲ್ಲವೆಂದು ಅಪ್ರತ್ಯಕ್ಷವಾಗಿ ಹೇಳುವ ಇನ್ನೊಬ್ಬನ ಬಗ್ಗೆ ಆಕ್ರೋಶ ಉಕ್ಕಿ ಹೊರ ಚೆಲ್ಲಿತು.

"ಪಾರ್ವತಿ ವಲ್ಲಭನ ಬಗ್ಗೆ ತಪಸ್ಸು ಮಾಡದಿದ್ದರೂ ಆತನೇ ಕರುಣಿಸಿ ಈ ಹುಡುಗ ತಪಸ್ಸು ಮಾಡುವುದಕ್ಕೆ ದೃಢ ಮನ, ಏಕಚಿತ್ತ ನೀಡುತ್ತಿದ್ದಾನಂತೆ! ಶಿವನ ಸ್ವಂತ ಮಗ! ಆದ್ದರಿಂದ ಕೇಳದಲೆ ಈ ಹುಡುಗನಿಗೆ ಶಂಭು ತಪಸ್ಸಿಗೆ ಇಂಬು ಕೊಟ್ಟಿದ್ದಾನೆ" ಅಬ್ಬರಿಸಿ ನಕ್ಕು ಬಿಟ್ಟ ವಾದಮಲ್ಲ.

"ಶಿವನ ಸ್ವಂತ ಮಗನೇ ಇರಬಹುದು. ಆದ್ದರಿಂದ ಚಿಕ್ಕ ವಯಸ್ಸಿನಲ್ಲಿಯೇ ಏಕ ಚಿಂತನೆಯ ಹಂತ ಅಳವಟ್ಟಿರಬಹುದು. ಯಾರಿಗೆ ಗೊತ್ತು? ಈ ಕಲಿಕಾಲದಲ್ಲಿ ದೇವತೆಗಳು ಯಾವ ಯಾವ ರೂಪದಿಂದ ಅವತರಿಸುತ್ತಾರೆಂದು! ಯಾವ ಅವತಾರಪುರುಷರೂ ತಾವು ಮಾನವಾತೀತರೆಂದು ಎಲ್ಲಿಯೂ ಹೇಳಿಕೊಂಡಿಲ್ಲ. ಆದರೆ ಅವರ ಜೀವನದಲ್ಲಿ ನಡೆದ ಕೆಲವು ಘಟನೆಗಳ ಆಧಾರದ ಮೇಲೆ ಕೆಲವರು ಊಹಿಸುತ್ತಾರೆ. ಆದರೆ ಅವರ ನಿಧನಾನಂತರ ಅವತಾರ ಪುರುಷರೆಂದು ಜಗತ್ತಿಗೆ ಗೊತ್ತಾಗುತ್ತದೆ. ಆಗ ಪೂಜಿಸುತ್ತಾರೆ. ಇದ್ದಾಗ ಲೇವಡಿ ಮಾಡಿ ಆಮೇಲೆ ಪೂಜಿಸುವುದು ನಮ್ಮ ವೈಶಿಷ್ಟ್ಯವೇ ಆಗಿದೆ. ಆದರೆ ಅವತಾರ ಪುರುಷರಾರೂ ಇಂಥ ಗೇಲಿಗಾಗಲೀ, ಜನರ ಚಾಳಿಗಾಗಲೀ ತಲೆ ಕೆಡಿಸಿಕೊಳ್ಳುವುದಿಲ್ಲ. ಯಾವುದೋ ಒಂದು ಕಾರಣಕ್ಕಾಗಿ ಅವತರಿಸುತ್ತಾರೆ. ಜನರನ್ನು ಮೇಲೆತ್ತಲು ಅವರ ಪ್ರಯತ್ನ ನಡೆಯುತ್ತದೆ. ಅದು ಕೆಲವು ಕಾಲ ಸಫಲವಾಗುವುದಿಲ್ಲ. ಅಂಥ ವಿಫಲತೆಗಳೇ

ಅವರಿಗೆ ಶಕ್ತಿಯಾಗಿ ಕೂಡುತ್ತದೆ. ಹತ್ತು ವಿಘಟಿತಗಳ ಎಲೆಯ ಮಧ್ಯ, ಒಂದು ಸಫಲತೆಯ ಪುಷ್ಪ ಬಿಡುತ್ತದೆ. ಆ ಪುಷ್ಪದ ಮಕರಂದ ಲೋಕಕ್ಕೆ ಚೈತನ್ಯ ನೀಡುತ್ತದೆ" ದೊಡ್ಡ ವೇದಾಂತಿಯಂತೆ ಅವನು ಹೇಳತೊಡಗಿದ

ಜನರು ಅವನ ಮಾತನ್ನು ಆಸಕ್ತಿಯಿಂದ ಆಲಿಸತೊಡಗಿದರು.

ವಾದಮಲ್ಲನ ಸಹನೆಯ ಕಟ್ಟೆ ಒಡೆಯಿತು. ವಿವೇಚನೆಯ ಕಡಿವಾಣ ಕಡಿದು ಹೋಗಿತ್ತು. ಕೂಗಿ ಬಿಟ್ಟ.

"ಕೇಳ್ರಪ್ಪೊ ಇವನ ಮಾತನ್ನು, ವೆಂಕಮ್ಮನ ಮಗ, ಆ ಹುಡುಗ ಅವತಾರ ಪುರುಷನಂತೆ. ಆದ್ದರಿಂದ ಹಾವು ಹೊಟ್ಟೆಗೆ ಸುತ್ತಿಕೊಂಡಿತಂತೆ! ಈಗಲೇ ಹೋಗಿ ಆ ಹುಡುಗನ ತಲೆ ಒಡೆಯುತ್ತೇನೆ, ಅದ್ಯಾವ ಶಿವ ಅವನನ್ನು ರಕ್ಷಿಸುತ್ತಾನೋ ನಾನು ನೋಡುತ್ತೇನೆ" ಪಕ್ಕದ ಕಲ್ಲನ್ನು ತೆಗೆದುಕೊಂಡು ಹೊರಡಲು ಅನುವಾದ.

ಯಾರದೋ ಸಂಗತಿ, ಯಾವುದೋ ಒಂದು ಘಟನೆ, ಮಾತನಾಡಿಕೊಳ್ಳುತ್ತಿದ್ದಾರೆ. ನಂಬುವವರು ನಂಬಲಿ, ನಂಬದಿದ್ದವರು ಬಿಡಲಿ, ಅವರವರ ನಂಬಿಕೆಯಂತೆ ಅವರವರು ನಡೆದುಕೊಳ್ಳಲಿ. ಬೇರೆಯವರಿಗೇಕೆ ಆಕ್ರೋಶ? ಒಬ್ಬರ ನಂಬಿಕೆಯ ಬಗ್ಗೆ ಮತ್ತೊಬ್ಬರಿಗೇಕೆ ಅವಹೇಳನ? "ಯಾರದೋ ಸಂಗತಿಯ ಬಗ್ಗೆ ನೀವೇಕೆ ಜಗಳವಾಡುತ್ತೀರಿ ? ನಿಮ್ಮಿಬ್ಬರ ಜಗಳದಿಂದ ಪಾಪ, ಆ ಹುಡುಗನ ತಲೆಗೇಕೆ ಕಲ್ಲು ಬೀಳಬೇಕು ?" ಜನರಲ್ಲಿದ್ದ ಒಬ್ಬ ಇಬ್ಬರನ್ನೂ ಸಮಾಧಾನಪಡಿಸಿದ.

"ವಿಶ್ವಾಮಿತ್ರ ವಶಿಷ್ಠರ ಜಗಳದಿಂದ ಹರಿಶ್ಚಂದ್ರ ದುಃಖಕ್ಕೆ ಒಳಗಾದಂತೆ ನಿಮ್ಮಿಬ್ಬರ ಜಗಳದಿಂದ ಪಾಪ ಆ ಬಡಪಾಯಿ ಹುಡುಗನ ಮೇಲೇಕೆ ಪರೀಕ್ಷೆಯ ಸವಾಲು?" ಅವನೇನು ನಿಮ್ಮ ತಂಟೆಗೆ ಬಂದಿಲ್ಲ. ಯಾರಲ್ಲಿಯೂ ಅವನು ತನ್ನ ತಪಸ್ಸಿನ ಬಗ್ಗೆ ಹೇಳಿಕೊಂಡಿಲ್ಲ. ಅವನೇನೋ ತನ್ನ ಸಾಧನೆ ತಾನು ಮುಂದುವರಿಸಿದ್ದಾನೆ ಪಾಪ ಅವನ ಗೊಡವೆ ಇವರಿಗೇಕೆ?" ಎಂದು ಹೇಳುತ್ತಾ ಒಂದು ಗುಂಪು ಚದುರಿತು.

ವಾದಮಲ್ಲನಿಗೆ ಸಮಾಧಾನವಾಗಲಿಲ್ಲ. ತನ್ನ ತರ್ಕಬದ್ಧವಾದ ವಾದಕ್ಕೆ ಜನರು ತಲೆದೂಗದೆ 'ಹೋಗಲಿ ಬಿಡಿ' ಎಂಬ ತಟಸ್ಥ ಧೋರಣೆ ತಾಳುವುದೆ? ತಾನು ಹೇಳಿದ್ದರಲ್ಲಿ ತಪ್ಪಾದರೂ ಏನಿದೆ? ಯಾವುದೋ ಕೆಲಸಗೇಡಿ ಹುಡುಗ, ಮನೆಯಲ್ಲಿ ತಾಯಿಗೆ ಸಹಾಯವಾಗುವುದನ್ನು ಬಿಟ್ಟು ಊರ ಹೊರಗೆ ಹೋಗಿ ಸೋಮಾರಿಯಾಗಿ ಕುಳಿತುಕೊಳ್ಳುವ ಸಂಗತಿಗೆ ತಪಸ್ಸು ಎಂಬ ದೊಡ್ಡ ಹೆಸರಿನಿಂದ

ಕರೆಯುವುದೇ? ಅದನ್ನು ಅಲ್ಲವೆಂದು ಹೇಳಿದಾಗ ಜನ ನನ್ನನ್ನು ಬೆಂಬಲಿಸದೆ ಅವತಾರ ಪುರುಷ ಎಂದು ಬಯಸುವ ಅವಿವೇಕಿಯೊಬ್ಬನ ಮಾತಿಗೂ ಅಷ್ಟೇ ಬೆಲೆ ಕೊಟ್ಟು ಕೇಳುವುದೇ? ಇಬ್ಬರ ಮಾತನ್ನು ಒರೆಹಚ್ಚಿ ನೋಡದೆ 'ಹೋಗಲಿ ಬಿಡಿ' ಎಂದು ನನಗೇ ಸಮಾಧಾನ ಮಾಡುವುದೇ?

ಯೋಚಿಸಿದಂತೆಲ್ಲಾ ವಾದಮಲ್ಲನ ಆವೇಶ ಉಕ್ಕುತ್ತಿತ್ತು.

ಗುಂಪೇನೋ ಚದುರಿತು. ಆದರೆ ವಾದಮಲ್ಲನ ಶಾಂತಿಯೂ ಅಷ್ಟೇ ಚದುರಿ ಹೋಗಿತ್ತು. ಕದಡಿ ಹೋಗಿತ್ತು.

ಹಲ್ಲು ಹಲ್ಲು ಕಡಿಯುತ್ತಾ ಮುಂದೆ ಸಾಗಿದಾಗ ಮತ್ತೊಂದು ಬೀದಿಯಲ್ಲಿ ಇನ್ನೊಂದು ಗುಂಪು ಅದೇ ವಿಷಯ ಮಾತನಾಡುತ್ತಿತ್ತು. ಅದೇ ಹಾವು, ಅದೇ ಹುಡುಗನ ಸಂಗತಿ!

ತಲೆಕೆಟ್ಟು ಹೋಯಿತು ಆತನಿಗೆ. ಈ ಜನಗಳೆಲ್ಲಾ ನಂಬಿ ಹುಚ್ಚುಹುಚ್ಚಾಗಿ ಮಾತನಾಡಿಕೊಳ್ಳುತ್ತಿರುವ ಸಂಗತಿಯ ನಿಜ ರಹಸ್ಯವನ್ನು ಬಯಲಿಗೆ ತಂದು ಜನರಿಗೆ ಸಾರಿ ಸಾರಿ ಹೇಳಬೇಕು. ಜನರಿಗಿಂತಲೂ ಈ ದಿನ ನನ್ನ ವಿರುದ್ಧ ವಾದಿಸಿದ ಆ ಮಂಗ ಮನುಷ್ಯನಿಗೆ ಇದೇ ಜನಗಳ ಮುಂದೆ ನಿಲ್ಲಿಸಿ ಲೇವಡಿ ಮಾಡಬೇಕು. ನಾಳೆ ಇದೇ ಜನಗಳು ನನ್ನ ಸತ್ಯಶೋಧನೆಯನ್ನು ಕಂಡು ಜೈ ಜೈ ಎನ್ನಬೇಕು- ಯೋಚಿಸುತ್ತಲೇ ಮನೆಗೆ ಸಾಗಿದ ವಾದಮಲ್ಲ.

ಆತನಿಗೆ ಕೂಡಲೇ ಒಂದು ಸಮಾಧಾನದ ಸಂಗತಿ ಹೊಳೆಯಿತು.

ಹುಡುಗನಿಗೆ ಹಾವು ಸುತ್ತಿಕೊಂಡ ಸಂಗತಿಯೇನೋ ಈ ದಿನದ ಘಟನೆ ಯಾಗಿರಬಹುದು. ಆದರೆ ಹುಡುಗ ಪ್ರತಿನಿತ್ಯ ಊರ ಹೊರಗಿನ ಭಾವಿಕಟ್ಟೆಗೆ ಹೋಗಿ ಏಕಾಗ್ರತೆಯಿಂದ ಕೂಡುತ್ತಾನೆ ಎನ್ನುವುದನ್ನಂತೂ ಎಲ್ಲರೂ ಮಾತನಾಡುತ್ತಿದ್ದಾರೆ. ನಾಳೆ ಹೋಗಿ ಆ ಹುಡುಗನ ಏಕಾಗ್ರತೆಯ ಪರಿಯನ್ನು ಜನರಿಗೆ ತೋರಿಸಬೇಕು. ಅವನ ಸೋಗಲಾಡಿತನ ಬಯಲಿಗೆಳೆದು ತನ್ನ ವಿರುದ್ಧ ವಾದಿಸಿದವನ ಮುಖದಲ್ಲಿ ನೀರಿಳಿಸಬೇಕು, ಎಂದು ಸಮಾಧಾನ ಮಾಡಿಕೊಂಡು ಮನೆಗೆ ಸೇರಿದ ವಾದಮಲ್ಲ.

ವಾದಮಲ್ಲನ ಹೆಸರು ಮಲ್ಲಣ್ಣ ಎಂದು ಇಡೀ ಸಂಕಾಪುರ ಗ್ರಾಮದ ಜನರಿಗೆಲ್ಲಾ ಇದು ಗೊತ್ತಿದ್ದರೂ ಮರೆಯಲ್ಲಿ ಆತನನ್ನು ಕರೆಯುತ್ತಿದ್ದುದು ವಾದಮಲ್ಲನೆಂದೆ. ಪ್ರತಿ ವಿಷಯದಲ್ಲಿಯೂ ತರ್ಕಕ್ಕೆ ಇಳಿಯುತ್ತಿದ್ದ. ಆತನ ಸ್ವಭಾವವೇ ಆತನಿಗೆ ಆ ಹೆಸರು ತಂದಿರಬೇಕು.

ಮಲ್ಲಣ್ಣ ಮನೆಗೆ ಬಂದಾಗ ತುಂಬಾ ಆವೇಶದಿಂದ ಇದ್ದ. ಮುಖದಲ್ಲಿ ಮೂಡಿದ್ದ ಉದ್ವಿಗ್ನತೆಯನ್ನು ಕಂಡು ಆತನ ಹೆಂಡತಿಗೆ ಏನೋ ಒಂದು ರೀತಿಯ ಭಯ. ತಮ್ಮ ಯಜಮಾನರೇಕೆ ಈ ದಿನ ಇಷ್ಟೊಂದು ಆವೇಶಗೊಂಡಿದ್ದಾರೆ, ಆಕೆಗೆ ಯೋಚನೆ.

ಮನೆಗೆ ಬಂದ ಮಲ್ಲಣ್ಣ ಮೆಟ್ಟನ್ನು ಮನೆಯ ಹೊರಗಡೆ ಬಿಡುತ್ತಿದ್ದಂತೆಯೇ ನಿತ್ಯ ಪದ್ಧತಿಯಂತೆ ಆತನ ಹೆಂಡತಿ ಕಾಲು ತೊಳೆಯಲು ನೀರು ತಂದುಕೊಟ್ಟಳು. ಎತ್ತಲೋ ನೋಡುತ್ತಿದ್ದ ಮಲ್ಲಣ್ಣ ಆ ತಂಬಿಗೆ ನೀರನ್ನು ಸುಮ್ಮನೆ ಕಾಲಿನ ಮುಂಭಾಗದಲ್ಲಿಯೇ ಸುರಿದುಕೊಂಡು ಪುನಃ ಎತ್ತಲೋ ನೋಡುತ್ತಲೇ ನಿಂತ. ಹೆಂಡತಿ ಮತ್ತೊಂದು ತಂಬಿಗೆ ನೀರು ತಂದುಕೊಟ್ಟಳು. ಆ ನೀರನ್ನು ಈ ಸಲ ಕಾಲು ತೊಳೆಯಲು ಅವನು ಉಪಯೋಗಿಸಲಿಲ್ಲ. ಸಿಟ್ಟಿನ ಭರದಲ್ಲಿ ಎದುರುಗೋಡೆಗೆ ಬೀಸಿ ಚೆಲ್ಲಿದ. ಆ ನೀರು ಎದುರಿನ ಕಲ್ಲುಗೋಡೆಗೆ ಬಿದ್ದು ಬೀಸಿದ ರಭಸಕ್ಕೆ ತಿರುಗಿ ಪುಟಿದು ಅವನ ಮುಖಕ್ಕೇ ರಾಚಿತು.

ಮುಖಕ್ಕೆ ಬಿದ್ದ ನೀರನ್ನು ಒರೆಸಿಕೊಳ್ಳುತ್ತಲೇ ಒಳಗೆ ಬಂದ ಮಲ್ಲಣ್ಣ. ಅವನ ವಿಚಿತ್ರ ವರ್ತನೆ ಹೆಂಡತಿಗೆ ಆಶ್ಚರ್ಯವಾದರೂ ಅದೇಕೆಂದು ಕೇಳುವ ಧೈರ್ಯ ತೋರಲಿಲ್ಲ.

ಹೆಂಡತಿ ಸುಮ್ಮನಿದ್ದ ಮಾತ್ರಕ್ಕೆ ಮಲ್ಲಣ್ಣನ ಒಳಗಿದ್ದ ಕ್ರೋಧ ಅವನನ್ನು ಸುಮ್ಮನೆ ಕೂಡಲು ಬಿಡುತ್ತದೆಯೇ? 'ಸಿಗಿದು ಬಿಡುತ್ತಿದ್ದೆ! ಏನು ಮಾಡಲಿ? ಜನರು ಅವನ ಮಾತನ್ನೇ ಹೆಚ್ಚು ನಂಬುತ್ತಿದ್ದಾರೆ. ನಾನು ಹೇಳುವುದೇ ಅವರಿಗೆ ತಿಳಿಯುತ್ತಿಲ್ಲ. ಈ ಜನಗಳಿಗೆ ಮೊದಲು ಬುದ್ಧಿ ಬರುವಂತೆ ಮಾಡಿ ಆಮೇಲೆ ಅವನ ಮುಖದ ಮೇಲೆ ಉಗಿಯುತ್ತೇನೆ.'

ಹೆಂಡತಿ ಊಹಿಸಿದಳು, ಈ ದಿನ ಯಾವುದೋ ವಿಷಯದ ಬಗ್ಗೆ ಚರ್ಚೆ ಆಗಿ ಮುಖ ಭಂಗಗೊಂಡು ಬಂದಿದ್ದಾರೆಂದು. ಆದರೆ ಆಕೆ ಈ ಬಗ್ಗೆ ನೇರವಾಗಿ ಕೇಳಲು ಧೈರ್ಯ ಮಾಡಲಿಲ್ಲ. ಅವನೇ ಮಾತು ಮುಂದುವರಿಸಿದ.

'ಈ ಜನಗಳೆಲ್ಲಾ ಅಜ್ಞಾನಿಗಳು. ಏನು ಹೇಳಿದರೂ ಬಾಯಿ ಬಿಟ್ಟು ಕೇಳುತ್ತಾರೆ. ದೇವಿ ಇವರ ತಲೆಯಲ್ಲಿ ಕೆಸರು ತುಂಬಿ ಹುಟ್ಟಿಸಿದ್ದಾಳೆ. ಇಂಥ ಜನಗಳ ಮೂಢತೆಯೇ ಅಂಥ ಜನಗಳಿಗೆ ಆಹಾರ. ಇಂಥವರ ಮೂಢತನವನ್ನು ಹೆಚ್ಚಿಸುವುದೇ ಅಂಥವರ ಕಸಬು. ಅದಕ್ಕಾಗಿ ಅಲ್ಲಿ ಬೊಲ್ಲಿ ಕತೆಗಳು. ಅಂತೆಕಂತೆ ಸಂಗತಿಗಳು!

ಕಡ್ಡಿಯೊಂದಕ್ಕೆ ಗುಡ್ಡದ ಆಕಾರ ಕೊಟ್ಟು ಬಣ್ಣನೆ. 'ಇಲಿ ಹೋಗಿದ್ದರೆ ಹುಲಿ ಹೋಯಿತು ಎಂಬ ಪ್ರಚಾರ' ಹಲ್ಲು ಹಲ್ಲು ಕಡಿದ ಮಲ್ಲಣ್ಣ.

ನಡೆದ ವಿಷಯ ಹೊರಬರಲಿಲ್ಲ. ತಿಳಿಯಬೇಕೆಂಬ ಹೆಂಡತಿಯ ಕುತೂಹಲ ತಣಿಯಲಿಲ್ಲ. ಆದರೆ ನೇರವಾಗಿ ಕೇಳುವ ಧೈರ್ಯವೂ ಆಕೆಗೆ ಬರಲಿಲ್ಲ.

ಅವರೇ ಸಮಾಧಾನಗೊಂಡು ಹೇಳಲಿ ಎಂದು ಹೆಂಡತಿ ಕಾದು ನೋಡಿದಳು. ಮಲ್ಲಣ್ಣ ವಿಷಯ ಬಿಡಿಸಿ ಹೇಳಲಿಲ್ಲ.

ಮೆಲ್ಲಗೆ ಒಳಗೆ ಹೋಗಿ ಸಜ್ಜೆರೊಟ್ಟಿಗೆ ಬಿಸಿ ಬಿಸಿ ಗಟ್ಟಿ ಉದಕವನ್ನು ಕೂಡಿಸಿ ತಂದುಕೊಟ್ಟಳು ಹೆಂಡತಿ.

ಆಕೆ ತಂದುಕೊಟ್ಟಿದ್ದನ್ನು ಆವೇಶದಲ್ಲಿಯೇ ಇದ್ದ ಮಲ್ಲಣ್ಣ ಅರಿವು ಇಲ್ಲದೆ ಬಾಯಿಗಿಟ್ಟ. ರೊಟ್ಟಿಯ ಮೇಲ್ಭಾಗದಿಂದ ಮಡಿಸಿದ್ದ ಒಳಭಾಗದಲ್ಲಿಯ ಉದುಕ ಬಾಯಿಗೆ ತಗುಲಿದೊಡನೆ ಚುರುಕ್ ಎಂದಿತು. ತಕ್ಷಣ ಅವನಿಗೆ ಏನೋ ಹೊಳೆದಂತಾಗಿ ತಟಕ್ಕನೆ ಎದ್ದ.

ಆ ನನ್ಮಗನ ನಾಲಿಗೆಗೆ ಚುರುಕು ತಟ್ಟಬೇಕಾದರೆ ಅವನ ಮೈಗೆ ಚುರುಕು ತಟ್ಟಬೇಕು. ವಿಷಯ ಬಯಲಿಗೆ ಬಂದಾಗ ಜನರು ತಾವಾಗಿಯೇ ಚುರುಕು ಗೊಳ್ಳುತ್ತಾರೆ! ಹೇಳುತ್ತಾ ಕೈ ತೊಳೆದ ಮಲ್ಲಣ್ಣ ಎದ್ದು ಹೋಗಿ ಹಾಸಿಗೆಯ ಮೇಲೆ ಹೊರಳಿದ.

ಹೆಂಡತಿ ಮನೆಗೆಲಸವನ್ನೆಲ್ಲಾ ಮುಗಿಸಿಕೊಂಡು ಬಂದಾಗಲೂ ಮಲ್ಲಣ್ಣ ಮೇಲ್ಛಾವಣಿ ನೋಡುತ್ತಾ ಹಲ್ಲು ಹಲ್ಲು ಕಡಿಯುತ್ತಿದ್ದ.

ಮನಸ್ಸನ್ನು ಬೇರೆಡೆಗೆ ತಿರುಗಿಸಲು ಯೋಚಿಸಿದ ಆತನ ಹೆಂಡತಿ ಆ ದಿನ ಊರಲ್ಲೆಲ್ಲಾ ಮಾತನಾಡಿಕೊಳ್ಳುತ್ತಿರುವ, ಸರ್ವಜನರ ಕುತೂಹಲ ಸಂಗತಿಯ ವಿಷಯವನ್ನೇ ಎತ್ತಿದಳು.

"ಕೇಳಿದ್ಯಾ ಈ ಸಂಗತಿಯನ್ನು" ನವಿರಾಗಿ ಮಾತಿಗೆ ಶುರು ಮಾಡಿದಳು ಆಕೆ.

ಗಂಡನ ಹೆಸರು ಹೇಳುವುದಷ್ಟೇ ನಿಷಿದ್ಧ ಆಕೆಗೆ. ಆದರೆ ಗಂಡನನ್ನು ಎದುರಿಗೆ ಬಹುವಚನದಲ್ಲಿ ಕರೆಯುವ ಅಭ್ಯಾಸವಿಲ್ಲ. ಏಕವಚನ, ಬಹುವಚನಗಳು ಓದು ಬಲ್ಲವರ ವ್ಯಾಕರಣ ವಿವರಣೆಯಾಗಿರಬಹುದು. ಆದರೆ ಹೃದಯ ಶ್ರೀಮಂತಿಕೆಗೆ, ಗಂಡನ ಮೇಲಿದ್ದ ಅಪಾರ ಪ್ರೇಮಕ್ಕೆ ಈ ಏಕವಚನ ಪ್ರಯೋಗ ಮಾಪಕ ವಾಗಲಾರದಷ್ಟೆ?

"ಯಾವ ಸಂಗತಿಯನ್ನು?" ಗಂಡ ಗಪ್ಪಸಾಗಿ ಕೇಳಿದ. "ನಮ್ಮ ವೆಂಕಮ್ಮನ ಮಗ ಭಾಗಣ್ಣಾ. ಅದೇ ಆ ಪುಟ್ಟ ಹುಡುಗ. ಭಾವಿಕಟ್ಟೆ ಬಳಿ ಇರುವ ಅರಳಿ ಮರದ ಕೆಳಗೆ.........

"ಬಾಯಿ ಮುಚ್ಚು" ಹೆಂಡತಿ ಹೇಳುತ್ತಿರುವಾಗಲೇ ಮನೆ ಛಾವಣಿ ಹಾರಿ ಹೋಗುವಂತೆ ಅಬ್ಬರಿಸಿದ ಮಲ್ಲಣ್ಣ. "ನಿಂಗೂ ಆ ರೋಗ ಬಡಿಯಿತೆ? ಹಾವು ಬಂದು ಹೊಟ್ಟೆಗೆ ಸುತ್ತಿಕೊಂಡರೂ ತಿಳಿಯದಂಥ ತಪಸ್ಸು ಆ ಹುಡುಗ ಮಾಡುತ್ತಾನೆಂದು ನೀನೂ ನಂಬುತ್ತೀಯಾ?"

ಹೆದರಿದಳು ಹೆಂಡತಿ. ಗಂಡನನ್ನು ಸಮಾಧಾನಪಡಿಸಲು ತನಗೆ ಗೊತ್ತಿರುವ ಬೇರೊಂದು ಸಂಗತಿಯನ್ನು ವಿವರಿಸ ಹೊರಟ ಆಕೆಗೆ ಅದೇ ವಿಷಯವೇ ಗಂಡನ ಆವೇಶಕ್ಕೆ ಕಾರಣ ಎಂದು ತಿಳಿದಾಗ ಆಶ್ಚರ್ಯವೂ ಆಯಿತು.

ತನ್ನ ಗಂಡನ ಸಿಟ್ಟಿಗೂ ಪಾಪ ವೆಂಕಮ್ಮನ ಮಗ ಪುಟ್ಟ ಕಂದ ಭಾಗಣ್ಣನಿಗೂ ಏನು ಸಂಬಂಧ?

ಭಾಗಣ್ಣನಿನ್ನೂ ಸುಮಾರು ಹನ್ನೆರಡು ವರ್ಷದ ಪುಟ್ಟ ಕಂದ. ಜೊತೆಗೆ ಅವನು ಹೆಚ್ಚು ಮಾತನ್ನೂ ಆಡುವವನಲ್ಲ, 'ಮೌನವ್ರತ' ಮಾಡುತ್ತಿದ್ದಾನೆಂದು ಜನರು ಹೇಳುತ್ತಿದ್ದಾರೆ. ಅವನು ಇತ್ತೀಚೆಗೆ ಮಾತನಾಡಿದ್ದನ್ನಂತೂ ಹೆಚ್ಚು ಜನರು ಕೇಳಿಯೇ ಇಲ್ಲ. ತಾಯಿ ವೆಂಕಮ್ಮ ಹೊರಗೆ ಭಿಕ್ಷಕ್ಕೆ ಹೋಗುತ್ತಾಳೆ. ಅವರಿವರು ಹೇಳಿದ ಸಣ್ಣಪುಟ್ಟ ಕೆಲಸಗಳನ್ನು ಮಾಡಿಕೊಡುತ್ತಾಳೆ. ನೀಡಿದ್ದನ್ನೇ ತನ್ನ ನಾಲ್ಕು ಮಕ್ಕಳಿಗೂ ರೊಟ್ಟಿಯೋ ಗಂಜಿಯೋ ಮಾಡಿ ನೀಡುತ್ತಾಳೆ. ಬೇರೊಂದು ಉಸಾಬರಿಯಿಲ್ಲ. ನೀಡದವರ ಬಗ್ಗೆ ಬೇಸರವಿಲ್ಲ. ಊರ ಹೊರಗಿನ ಹನುಮಪ್ಪನ ಗುಡಿಯಲ್ಲಿ ಆಕೆಯ ವಾಸ. ದೊಡ್ಡ ಮಗನೇ ಹನ್ನೆರಡು ವರ್ಷದ ಭಾಗಣ್ಣ. ಇನ್ನುಳಿದವು ಪುಟ್ಟ ಪುಟ್ಟ ಮಕ್ಕಳು. ದೊಡ್ಡ ಮಗ 'ಪೆದ್ದ' ಎಂದೂ ಬಹು ಜನರು ಭಾವಿಸುತ್ತಿದ್ದಾರೆ. ಹೊಲಗಳಿಗೆ ಕಣ ಭಿಕ್ಷಕ್ಕೆಂದು ತಾಯಿ ವೆಂಕಮ್ಮ ಹೋದಾಗ ಜೊತೆಗೆ ಭಾಗಣ್ಣ ಹೋದರೂ ಅವನಿಗೆ ಯಾರು ನೀಡಿದರು ಏನು ನೀಡಿದರು ಎಂಬ ಪರಿವೆಯೇ ಇರುವುದಿಲ್ಲ. ಆಕಾಶದೆಡೆಗೆ ನೋಟ ಅವನದು. ಒಬ್ಬನೇ ಇದ್ದರಂತೂ ಅವನ ದೃಷ್ಟಿಯೆಲ್ಲಾ ಆಕಾಶದೆಡೆಗೆ! ಆಕಾಶ ಅವನ ಸ್ವಂತ ಆಸ್ತಿಯೇನೊ ಅದನ್ನು ಕಾಯುತ್ತಿದ್ದಾನೆಯೋ ಎನ್ನುವ ರೀತಿ ಅವನ ದೃಷ್ಟಿ. ಪ್ರಪಂಚದ ಪರಿವೆ ಬಹಳ ಕಡಿಮೆ ಅವನಿಗೆ. ಅಂಥವನು ತನ್ನ ಯಜಮಾನರ ವಿರುದ್ಧ ಮಾತನಾಡಲಾರ. ಅವನ ವಿರುದ್ಧ ತನ್ನ ಯಜಮಾನರು ಕೋಪಗೊಳ್ಳುವುದೂ ಸಾಧ್ಯವಿಲ್ಲ. ಇನ್ನು ಪಾಪ,

ಭಿಕ್ಷೆಯ ಕಾಳಿನ ಮೇಲೆ ಜೀವನ ನಿರ್ವಹಿಸುವ ವೆಂಕಮ್ಮ ತನ್ನ ಯಜಮಾನರನ್ನು ರೇಗಿಸಲು ಸಾಧ್ಯವಿಲ್ಲ. ದೈನ್ಯಾತಿದೈನ್ಯ ಜೀವನ ಆಕೆಯದು. ಮಹಾ ಮಾತು ಗಾರರೂ ತಕ್ಕಷ್ಟು ಶ್ರಿಮಂತರೂ ಆದ ತನ್ನ ಯಾಜಮಾನರೊಂದಿಗೆ ಆಕೆ ಚರ್ಚೆಗೆ ಇಳಿಯುವುದು ಸಾಧ್ಯವಿಲ್ಲ..... ಹಾಗಾದರೆ ತನ್ನ ಗಂಡನಿಗೇಕೆ ಆ ಹುಡುಗನ ಮೇಲೆ ಆಕ್ರೋಶ? ಎಲ್ಲರೂ ಕೂತೂಹಲದಿಂದ ಕೇಳುವ, ಊರಲ್ಲೆಲ್ಲಾ ಆಶ್ಚರ್ಯದಿಂದ ಮಾತನಾಡಿಕೊಳ್ಳುತ್ತಿರುವ ಆ ಹುಡುಗನ ತಪಸ್ಸಿಗೂ ತನ್ನ ಗಂಡನ ಕೋಪಕ್ಕೂ ಎಲ್ಲಿಯ ನಂಟು? ಯೋಚಿಸಿದಳು ಆ ಗೃಹಿಣಿ. ತಳ ಬುಡ ತಿಳಿಯಲಿಲ್ಲ ಆಕೆಗೆ.

ಇತ್ತ ಗಂಡನೂ ಬಿಡಿಸಿ ಹೇಳಲಿಲ್ಲ. ಸಿಟ್ಟಿನಿಂದ ಆಗೊಮ್ಮೆ ಈಗೊಮ್ಮೆ ಹೊರಹೊಮ್ಮುವ ಶಬ್ದಗಳ ಮೇಲೆಯೇ ಆಕೆ ಸಂಗತಿ ಗ್ರಹಿಸಬೇಕಾಗಿತ್ತು.

"ಸರಿಯಾಗಿ ಮಾತನಾಡಲು ಬಾರದ ಹುಡುಗ ತಪಸ್ಸು ಮಾಡುತ್ತಾನಂತೆ. ನೋಡುತ್ತೇನೆ ನೋಡುತ್ತೇನೆ ಇವನ ತಪಸ್ಸನ್ನು. ಇವನ ಠಕ್ಕುತನ ಬಯಲಿಗೆಳೆದು ಜನರ ಮಂಕುತನ ಬಿಡಿಸದಿದ್ದರೆ ನಾನು ನಮ್ಮಪ್ಪನ ಮಗನೇ ಅಲ್ಲ," ಮೆಲ್ಲಗೆ ಗೊಣಗಿದ ಮಲ್ಲಣ್ಣ. ಸಿಟ್ಟು ಕಡಿಮೆ ಆದಂತಿತ್ತು.

ಇದೇ ಸರಿಯಾದ ಸಮಯ ಎಂದು ಭಾವಿಸಿದ ಅವನ ಹೆಂಡತಿ ಒಳಗೆ ಹೋಗಿ ಗಂಡನಿಗೆ ಕುಡಿಯಲಿಕ್ಕೆಂದು ಬಿಸಿ ಹಾಲು ತಂದುಕೊಟ್ಟಳು.

'ಥೂ, ತನ್ನ ಭಯಕ್ಕೋ, ಗಂಡನ ಆವೇಶಕ್ಕೊ ಹಾಲಿನ ಲೋಟ ಕೆಳಕ್ಕೆ ಬೀಳಬೇಕೆ? ಬಿಸಿ ಹಾಲು ಗಂಡನ ಕಾಲು ಮೇಲೆ ಬಿದ್ದು ಅಲ್ಲಿ ಬೊಬ್ಬೆ ಏಳುವಷ್ಟು ಪ್ರಖರವಾಗಬೇಕೆ?'

ಗಂಡ 'ಹಾ' ಎಂದು ಉದ್ಗರಿಸಿದನೇ ಆಗಲೀ ಹೆಂಡತಿಯ ಮೇಲೆ ರೇಗಲಿಲ್ಲ.

ಅವನಿಗೆ ಏನೋ ಒಂದು ಯೋಚನೆ ಸ್ಫುರಿಸಿದಂತಾಯಿತು.

"ಬಿಸಿ - ಬಿಸಿ" ಇದೇ ಸರಿ. ನಾಳೆ ಅವನಿಗೆ ಮಾಡುತ್ತೇನೆ ಈ ರೀತಿ ಹಾಲಲ್ಲ. ಬಿಸಿ ನೀರು ಚೆಲ್ಲಿದರೆ ಅವನ ತಪಸ್ಸು ಏನೆಂದು ಜಗತ್ತಿಗೆ ತಿಳಿಯುತ್ತದೆ." ತನ್ನ ದೀರ್ಘ ಯೋಚನೆಗೆ ಪರಿಹಾರ ಸಿಕ್ಕಂತೆ ಮಲ್ಲಣ್ಣ ಉದ್ಗರಿಸಿದ.

'ಏನು ? ಏನೇನೋ ಮಾತನಾಡುತ್ತಿ. ಬಿಸಿ ನೀರು ಹುಡುಗನಿಗೇಕೆ ಚೆಲ್ಲುತ್ತಿ" ಹೆಂಡತಿ ಕೇಳಿದಳು. "ಬಾಯಿ ಮುಚ್ಚು ಇಲ್ಲದ ಉಸಾಬರಿ ನಿನಗೇಕೆ" ಗದರಿದ ಗಂಡ.

ಆಕೆಗೆ ಯೋಚನೆ ಇಟ್ಟುಕೊಂಡಿತು. ತನ್ನ ಗಂಡ ಯಾವುದೋ ಕೆಟ್ಟ ನಿರ್ಣಯ ಮಾಡಿದ್ದಾನೆಂದು ಆಕೆಗೆ ತಿಳಿದುಹೋಯಿತು.

ಆದರೆ ಅದನ್ನು ತಡೆಗಟ್ಟುವ ಧೈರ್ಯ ಆಕೆಗಿಲ್ಲ. ಪಾಪ ಹುಡಗನಿಗೆ ತನ್ನ ಗಂಡನಿಂದ ಏನೋ ಆಪತ್ತು ಬರಲಿದೆ ಎಂದೇನೋ ಗ್ರಹಿಸಿದಳು.

ಹುಡುಗನ ಮುಗ್ಧರೂಪ ಆಕೆಯ ಕಣ್ಣ ಮುಂದೆ ಸುಳಿಯಿತು.

ಸ್ವಲ್ಪ ಕುಳ್ಳು ಹುಡುಗ, ಉದ್ದವಾದ ಮೂಗು, ವಯಸ್ಸಿಗೆ ಮೀರಿದ ಹೊಟ್ಟೆ. ಅಗಲವಾದ ಕಿವಿ, ಮಿರಿ ಮಿರಿ ಮಿಂಚುತ್ತಾ ವಿಲಕ್ಷಣ ತೇಜಸ್ಸನ್ನು ಹೊಮ್ಮಿಸುವ ಪುಟ್ಟ ಪುಟ್ಟ ಕಣ್ಣುಗಳು. ಅವನು ಮಾತನಾಡುವುದು ಬಹಳ ಕಡಿಮೆ. ಯಾರಾದರೂ ಮಾತನಾಡಿಸಿದರೆ ನಕ್ಕು ಮುಂದೆ ಸಾಗುವುದೂ ಉಂಟು.

ನಕ್ಕರೆ ಅರಳುತ್ತಿರುವ ಗುಲಾಬಿಯಂತೆ, ಹಲ್ಲುಗಳ ಸಾಲು ಬಲು ಮೋಹಕ. ಆದರೆ ಮೇಲ್ಭಾಗದ ಒಂದು ಹಲ್ಲು ಏಕೋ ಮುಕ್ಕಾಗಿದೆ. ಬೆಳದದ್ದೇ ಅಷ್ಟು ಎಂದು ಅವನ ತಾಯಿ ಹೇಳಿದರೆ ಇಲ್ಲ ಮುರಿದುಕೊಂಡಿರಬೇಕು ಎಂದು ಜನರು ತರ್ಕಿಸುತ್ತಾರೆ.

ಹುಡುಗನ ವರ್ತನೆ ಅತಿ ವಿಚಿತ್ರ. ಯಾರೊಂದಿಗೂ ಮಾತನಾಡುವುದಿಲ್ಲ. ತಾಯಿಯೊಂದಿಗೆ ಹೊಲಗಳಿಗೆ ಭಿಕ್ಷಕ್ಕೆ ಹೊರಟರೂ ಅವನು ಯಾರನ್ನೂ ಕೇಳುವುದಿಲ್ಲ. ಯಾವುದರ ತಂಟೆಯಿಲ್ಲ. ಬೇರೆ ಹುಡುಗರೊಂದಿಗೆ ಗಲಾಟೆಯಿಲ್ಲ.

ಅವನ ತಮ್ಮಂದಿರು ಅಂಗಳದ ಮುಂದೆ ಚಲಾಕಿತನದಿಂದ ಆಡುತ್ತಿದ್ದರೆ ಅವನು ಪೆದ್ದನಂತೆ ಸುಮ್ಮನೆ ಕುಳಿತಿರುತ್ತಾನೆ. ಆದರೆ ಬಾಯಿ ತೆಗೆದು ಮಾತ ನಾಡಿದರೆ ಅಕ್ಷರಗಳು ಸುಸ್ಪಷ್ಟ. ದೊಡ್ಡವರು ಹೇಳಲು ತಡಬಡಾಯಿಸುವ ಶಬ್ದಗಳನ್ನು ಅವನು ಸಲೀಸಾಗಿ ಹೇಳುತ್ತಾನೆ.

ಮಲ್ಲಣ್ಣನ ಹೆಂಡತಿಗೆ ಅವನ ತಾಯಿ ಸ್ಮೃತಿಗೆ ಬಂದಳು.

ಪಾಪದ ಹೆಣ್ಣು. ತೀವ್ರ ಬಡತನ ಆಕೆಯನ್ನು ನಿಸ್ತೇಜಳನ್ನಾಗಿ ಮಾಡಿದೆ. ಸೊಣಕಲಾಗಿರುವ ಕೈ ಕಾಲುಗಳು, ಸರಿಯಾದ ಆಹಾರವಿಲ್ಲದೆ ಒಣಗಿದ ಮುಖ. ಮಕ್ಕಳನ್ನು ಸಾಕುವುದರಲ್ಲಿಯೇ ಆಕೆ ಹಣ್ಣು ಹಣ್ಣು ಆಗಿರಬೇಕು. ಸಣ್ಣ ವಯಸ್ಸಿ ನಲ್ಲಿಯೇ ನಾಲ್ಕು ಮಕ್ಕಳು ಸಾಲಾಗಿ ಹುಟ್ಟಿದುವಂತೆ. ಗಂಡ ಚಿಕ್ಕ ವಯಸ್ಸಿನಲ್ಲಿಯೇ ತೀರಿಕೊಂಡರಂತೆ ದೇವದುರ್ಗದ ಬಳಿ ಇರುವ 'ಮೊಸರು ಕಲ್ಲು' ಗ್ರಾಮ ಇವರ

ಸ್ವಂತ ಊರಾದರೂ ಗಂಡ ತೀರಿಕೊಂಡ ಮೇಲೆ ಆ ಗ್ರಾಮದಲ್ಲಿ ಬಾಳುವುದು ಬಹಳ ಕಷ್ಟವಾಯಿತಂತೆ.

ಮಲ್ಲಣ್ಣನ ಹೆಂಡತಿಗೆ ಹುಡುಗನ ತಾಯಿ ವೆಂಕಮ್ಮನೇ ಹೇಳಿದ ಮಾತುಗಳು. ಆಕೆಯ ಕತೆ ನೆನಪಿಗೆ ಬಂದಿತು.

ವೆಂಕಮ್ಮನ ಗಂಡ ಮುರಾರಿರಾಯ ಬಹು ಆತ್ಮಾಭಿಮಾನದ ಗಂಡಸಂತೆ. ಮನೆಯಲ್ಲಿ ಉಣ್ಣಲು ಅನ್ನವಿಲ್ಲದಿದ್ದರೂ ಭಾರಿ ಊಟ ಮಾಡಿದ ರೀತಿ ಬಡಾಯಿ ಪ್ರದರ್ಶಿಸುತ್ತಿದ್ದನಂತೆ. ಹುಡುಗರು ಹಸಿವೆಯಿಂದ ಅಳಬಾರದು. ಹಾಗೇನಾದರೂ ಅತ್ತರೆ ಸಿಡಿಸಿಡಿಯಾಗುತ್ತಿದ್ದನಂತೆ. ಒಮ್ಮೆ ಎರಡು ದಿನಗಳಿಂದ ಮಕ್ಕಳಿಗೆ ಊಟ ಇರಲಿಲ್ಲ. ಎರಡನೇ ಮಗ ದಾಸಪ್ಪ, ಹಸಿವೆ ತಡೆಯಲಾರದೆ ಪಕ್ಕದ ಮನೆಗೆಹೋಗಿ ಒಂದು ರೊಟ್ಟಿ ಹೇಗೋ ಪಡೆದು ಬಂದಿದ್ದ. ಮುರಾರಿರಾಯನ ಕಣ್ಣಿಗೆ ಬಿದ್ದುಬಿಟ್ಟಿತು. ಕಿಡಿಕಿಡಿಯಾದ ಆತ "ಮುದಗಲ್‌ರಾಯ" ಎಂದರೆ ಈ ಸೀಮೆಗೆಲ್ಲಾ ಹೆಸರು ಪಡೆದವನೊ ನಿಮ್ಮ ತಾತ. ಆತ ಬದುಕಿರುವವರೆಗೂ ಕೊಡುವ ಕೈ ಮೇಲಿರುತ್ತಿತ್ತಾಗಲೀ, ಕೇಳುವ ಕೈಯಾಗಿ ಅದು ಎಂದೂ ಕೆಳಗಿಳಿಯಲಿಲ್ಲ. ಅವನ ಮೊಮ್ಮಗನಾಗಿ ನೀನು ಅಜ್ಜನ ಹೆಸರನ್ನು ಕೆಡಿಸಲು ಹುಟ್ಟಿದೆಯಾ" ಎಂದು ಸಣ್ಣ ಹುಡುಗನಿಗೆ ಚೆನ್ನಾಗಿ ಬಾರಿಸಿ ಕೈಯಲ್ಲಿದ್ದ ರೊಟ್ಟಿಯನ್ನು ಜಾಡಿಸಿ ಬೀಸಿದನಂತೆ.

ಮನೆಯಲ್ಲಿ ಬಡತನ. ಆದರೆ ಆತ್ಮಾಭಿಮಾನ ಅವನನ್ನು ಬೇರೆಡೆ ಕೇಳಿಸಲಿಲ್ಲ. ಸಣ್ಣ ಹುಡುಗ ದಾಸಪ್ಪ ಅಳುತ್ತಾ ಹೇಳಿದ.

"ಇಲ್ಲಪ್ಪಾ, ತಮ್ಮ ಹುಡುಗರಿಗೆ ನೀಡುವಾಗ ಜೊತೆಯಲ್ಲಿ ನಾನು ಇದ್ದುದರಿಂದ ನನಗೂ ಕೊಟ್ಟು ತಿನ್ನು ಎಂದು ಬಲಾತ್ಕರಿಸಿದರು. ದೊಡ್ಡವರು ಹೇಳಿದಾಗ ಅವರ ಮಾತನ್ನು ಕೇಳಬೇಕೆಂದು ನೀವು ಹೇಳಿರಲಿಲ್ಲವೇ ? ಅವರು ಕೊಟ್ಟದ್ದು ತಿನ್ನಬೇಕೆಂದು ಯೋಚಿಸುವಷ್ಟರಲ್ಲಿ ಸೀನ, ರಂಗರ ನೆನಪಾಯಿತು. ಅವರೊಂದಿಗೆ ತಿನ್ನಬೇಕೆಂದು ಓಡೋಡಿ ಬಂದೆ" ಹುಡುಗ ಅಳುತ್ತಾ ಹೇಳಿದ್ದ.

ಮುರಾರಿರಾಯನಿಗೆ ಅವೆಲ್ಲಾ ಕೇಳುವ ತಾಳ್ಮೆಯಿಲ್ಲ. ತಮ್ಮ ತಂದೆ ಮುದ್ಗಲ್‌ರಾಯನ ಘನತೆಯನ್ನು ಉಳಿಸಿಕೊಳ್ಳುವುದೊಂದೇ ಅವರಿಗೆ ಬೇಕು. ಚೆನ್ನಾಗಿ ಬಾಳಿ ಬದುಕಿದ ತಮ್ಮ ವಂಶದ ಬಗ್ಗೆ ಅತಿಯಾದ ಹೆಮ್ಮೆ ಅವರಿಗೆ. "ಹರಿತಸಗೋತ್ರದ ಹೆಮ್ಮೆಯ ವಂಶವೋ ನಮ್ಮದು..... ಮುದ್ಗಲ್‌ರಾಯನ

ಮೊಮ್ಮಕ್ಕಳೆಂದರೆ ಕೊಟ್ಟು ಗೊತ್ತೇ ಆಗಲಿ ಕೇಳಿ ಅರಿಯದ ದೊಡ್ಡವರು ಎಂಬ ಹೆಸರು ಪಡೆಯಬೇಕು. ಅಂಥ ದೊಡ್ಡ ವಂಶದಲ್ಲಿ ಹುಟ್ಟಿದ ನೀನು ಮನೆ ಮನೆಗೆ ಹೋಗಿ ಭಿಕ್ಷೆ ಬೇಡುತ್ತೀಯಾ" ಎಂದು ಅಬ್ಬರಿಸಿದ್ದರಂತೆ.

ವೆಂಕಮ್ಮ ತನ್ನ ಗಂಡನ ಸಿಟ್ಟು, ವಂಶದ ಬಗ್ಗೆ ಇದ್ದ ಹೆಮ್ಮೆ, ಬಡತನವಿದ್ದರೂ ಯಾರೊಬ್ಬರಿಗೂ ತೋರದ ಆತ್ಮಾಭಿಮಾನವನ್ನು ವಿವರಿಸುತ್ತಿದ್ದಾಗ ಕಣ್ಣಲ್ಲಿ ವಿಲಕ್ಷಣ ಕಾಂತಿ ಹೊಮ್ಮುತ್ತಿದ್ದುದು ಮಲ್ಲಣ್ಣನ ಹೆಂಡತಿಗೆ ನೆನಪಾಯಿತು.

ಎಂಥ ಹೆಮ್ಮೆ ಆ ಬಡ ಹೆಣ್ಣು ಮಗಳಿಗೆ, ತನ್ನ ಗಂಡನ ವಂಶದ ಬಗ್ಗೆ ಹೇಳುವಾಗ ಅವಳು ತೋರುತ್ತಿದ್ದ ಹೆಮ್ಮೆ ನೆನಪಾಗಿ ಮಲ್ಲಣ್ಣನ ಹೆಂಡತಿಯ ಮುಖದಲ್ಲಿ ಸ್ವಲ್ಪ ನಗೆ ಅರಳಿತು.

ಮೆಲ್ಲಗೆ ಪಕ್ಕಕ್ಕೆ ನೋಡಿದಳು. ಗಂಡ ನಿದ್ದೆ ಹೋಗಿದ್ದ. ಮತ್ತೆ ಆಕೆ ವೆಂಕಮ್ಮನ ಬಗ್ಗೆ ಯೋಚಿಸತೊಡಗಿದಳು.

ವೆಂಕಮ್ಮ ಹೇಳಿದ ಆಕೆಯ ಗಂಡನ ಸಂಗತಿಗಳು ನೆನಪಾದುವು. ರೊಟ್ಟಿ ಕತೆಯನ್ನು ಹೇಳಿದಾಗ ಆಕೆಯೊಂದಿಗೆ ಮಲ್ಲಣ್ಣನ ಹೆಂಡತಿಯೂ ಅತ್ತಿದ್ದಳು. ಹುಡುಗ ಬೇರೆಯವರಲ್ಲಿ ರೊಟ್ಟಿ ಪಡೆದು ಬಂದದ್ದಕ್ಕಲ್ಲ. ಅದನ್ನು ನೋಡಿ ಆಕೆಯ ಗಂಡ ಕೂಗಾಡಿದ್ದಕ್ಕೂ ಅಲ್ಲ; ಮಗುವಿನ ಕೈಯಲ್ಲಿದ್ದ ತುಂಡು ರೊಟ್ಟಿಯನ್ನು ಗಂಡ ಜಾಡಿಸಿ ಬಿಸಾಡಿದ ಮೇಲೆ ಆತ ಹೋಗಿಬಿಟ್ಟಿದ್ದ. ಅದೇ ತುಂಡು ರೊಟ್ಟಿಯನ್ನು ಆಮೇಲೆ ಹುಡುಕಿ ನೀರಿನಲ್ಲಿ ಅದನ್ನು ಚೆನ್ನಾಗಿ ಕದಡಿ ಉಪ್ಪುಹಾಕಿ ಎಲ್ಲಾ ಮಕ್ಕಳಿಗೂ ಗಂಜಿ ಎಂದು ವೆಂಕಮ್ಮ ನೀಡಿದ್ದಳಂತೆ. ಹತ್ತು ಭಾಗ ನೀರು ಒಂದು ಭಾಗ ಹಿಟ್ಟು ಜೊತೆಗೆ ಸ್ವಲ್ಪ ಹೆಚ್ಚಾಗಿ ಬಿದ್ದಿದ್ದ ಉಪ್ಪಿನ ಬಿಳಿ ನೀರನ್ನೇ ಮಕ್ಕಳು ಕುಡಿದು ಸಂತೋಷವಾಗಿ ಮಲಗಿದ್ದವಂತೆ. ಈ ಘಟನೆಯನ್ನು ವೆಂಕಮ್ಮ ಹೇಳಿದಾಗ ತಾನು ಕೇಳಿ ಅತ್ತಿದ್ದು ನೆನಪಾಯಿತು. ಆಕೆಗೆ ಅದೇ ವೆಂಕಮ್ಮ ಹೇಳಿದಳು.

ಯಾವ ವಂಶದ ಗೌರವ ರಕ್ಷಣೆಗಾಗಿ ಅವರು ಅಷ್ಟೊಂದು ಕಷ್ಟಪಟ್ಟರೋ ಅಂಥ ಗೌರವವನ್ನು ಅವರು ತೀರಿದ ಮೇಲೆ ನಾನು ಹೇಗೆ ಕಳೆಯಲಿ?

ಮಕ್ಕಳನ್ನು ಸಾಕುವುದಕ್ಕೆ ಭಿಕ್ಷೆಯ ಹೊರತು ಬೇರೆ ಮಾರ್ಗವೇ ಇರಲಿಲ್ಲ. ಭಿಕ್ಷೆಯನ್ನು ಆ ಗ್ರಾಮದಲ್ಲಿ ಬೇಡಿದರೆ ಅವರ ಆತ್ಮ ಪರಿತಪಿಸೀತು ಎಂಬ ಬೆದರಿಕೆ. ಆ ಕಾರಣಕ್ಕಾಗಿ ಮೊಸರುಕಲ್ಲು ಗ್ರಾಮವನ್ನು ಬಿಟ್ಟು ದೂರದ ಸಂಕಾಪುರಕ್ಕೆ ವಲಸೆ ಬಂದಳಂತೆ.

ಇಂಥ ವೆಂಕಮ್ಮನ ಮಗನ ಮೇಲೆ ತನ್ನ ಯಜಮಾನರು ಏಕೆ ಕೋಪ ಗೊಂಡಿದ್ದಾರೆ? ಹೊಳೆಯಲಿಲ್ಲ ಆಕೆಗೆ.

ಪಾಪ, ಆ ಹುಡುಗ ಬಡತನದ ಕಹಿ ಅನುಭವ ಸಣ್ಣ ವಯಸ್ಸಿನಲ್ಲಿಯೇ ಕಂಡ. ಅದಕ್ಕೇ ಮಂಕಾಗಿಬಿಟ್ಟಿರಬೇಕು. ಇತ್ತೀಚೆಗೆ ಶಾನುಭೋಗ ಗುಂಡಪ್ಪನವರು ಬ್ರಾಹ್ಮಣರು ಬಾಲ್ಯದಲ್ಲಿ ಮಾಡಿಸುವ ಉಪನಯನ ಮಾಡಿದರು. ಆ ದಿನ ತಾನೂ ಜನಿವಾರ ಹಾಕುವ ಆ ಸಮಾರಂಭಕ್ಕೆ ಹೋಗಿದ್ದು ನೆನಪಾಯಿತು.

ಬ್ರಾಹ್ಮಣ ಪುರೋಹಿತರು ಏನೋ ಮಂತ್ರ ಹೇಳುತ್ತಿದ್ದರು. ಆ ಹುಡುಗ ಪುಟ್ಟವನಾದರೂ ಸ್ಪಷ್ಟವಾಗಿ ಉಚ್ಚರಿಸುತ್ತಿದ್ದ. ಪುರೋಹಿತರು ಹುಡುಗನಿಗೆ ಏನೋ ಮಂತ್ರವನ್ನು ಕಿವಿಯಲ್ಲಿ ಹೇಳುವಂತೆ ಗುಂಡಪ್ಪನವರಿಗೆ ಹೇಳಿದ್ದರು. ಪುರೋಹಿತರ ಸೂಚನೆಯಂತೆ ಹುಡುಗನನ್ನು ತೊಡೆಯ ಮೇಲೆ ಕೂಡಿಸಿಕೊಂಡು ಕಿವಿಯಲ್ಲಿ ಏನೋ ಮಂತ್ರ ಹೇಳಿಕೊಟ್ಟರು. ಆ ಮೇಲೆ ಆ ಹುಡುಗನ ಮುಖದಲ್ಲಿ ವಿಲಕ್ಷಣ ಕಾಂತಿ ಹೊಮ್ಮಿತ್ತು. ನೂರಾರು ವರ್ಷಗಳಿಂದ ಅಥವಾ ತಲೆತಲಾಂತರಗಳ ಕಾಲ ಹುಡುಕುತ್ತಿದ್ದ ವಸ್ತುವೊಂದು ಒಬ್ಬ ಮನುಷ್ಯನಿಗೆ ಸಿಕ್ಕರೆ ಎಷ್ಟು ಆನಂದವಾಗಬಹುದೋ ಅಂಥ ಒಂದು ವಿಚಿತ್ರ ತೃಪ್ತಿ ಆ ಹುಡುಗನ ಮುಖದಲ್ಲಿ ಚಿಮ್ಮಿತ್ತು.

ಮಲ್ಲಣ್ಣನ ಹೆಂಡತಿ ಜ್ಞಾಪಿಸಿಕೊಳ್ಳುತ್ತಿದ್ದಳು.

ಅದೇನು ಮಂತ್ರವೋ, ಆ ದಿನದಿಂದ ಹುಡುಗ ಭಾಗಣ್ಣನ ದಿನಚರಿಯೇ ಬದಲಾಗಿ ಹೋಗಿತ್ತು. ಹೆಚ್ಚಾಗಿ ತಾಯಿಯ ಜೊತೆ ಭಿಕ್ಷೆಗೆ ಬರುತ್ತಿರಲಿಲ್ಲ. ಬೆಳಗಿನ ಜಾವ ನಾಲ್ಕು ಘಂಟೆಗೇ ಎದ್ದು ಊರಹೊರಗಿನ ಭಾವಿಯ ಬಳಿ ಸ್ನಾನಮಾಡಿ, ಯಾವುದೋ ಮೂರು ನಾಲ್ಕು ಸಣ್ಣ ಸಣ್ಣ ಪಾತ್ರೆಗಳು, ಜೊತೆಗೆ ಒಂದೆರಡು ಸಣ್ಣ ಸೌಟುಗಳು ಅವುಗಳಲ್ಲಿ ನೀರು ತುಂಬಿಕೊಂಡು ಅವನು ಕೂತು ಬಿಡುತ್ತಿದ್ದನು. ಮೊದಮೊದಲು ಸಣ್ಣ ಸೌಟನಿಂದ ನೀರನ್ನು ಕೈಯಲ್ಲಿ ಹಾಕಿಕೊಂಡು ಕುಡಿಯುತ್ತಿದ್ದ. ಆನಂತರ ಸ್ವಲ್ಪ ಹೊತ್ತು ನಿಂತು ಮೂಗನ್ನು ಬಿಗಿ ಹಿಡಿಯುತ್ತಿದ್ದ. ಸೂರ್ಯದರ್ಶನವಾದೊಡನೆ ಕುಳಿತು ಬಿಡುತ್ತಿದ್ದ. ಹಾಗೆ ಕುಳಿತವನು ಬಹಳ ಹೊತ್ತಾದರೂ ಏಳುತ್ತಿರಲಿಲ್ಲ. ತಾನೇ ಒಯ್ದಿದ್ದ ಸಣ್ಣ ಚಾಪೆ, ಚಿಗುರೆಯ ಚರ್ಮ ಮೇಲೆ ತುಂಬಾ ಬಟ್ಟೆ ಹಾಕಿ ಕುಳಿತು, ಕಣ್ಣು ಮುಚ್ಚಿ ಸೊಂಟ ಬಗ್ಗಿಸದೆ ನೀಟಾಗಿ ಕೂಡುತ್ತಿದ್ದ. ಹುಡುಗನ ಭಂಗಿಯೇ ಮುದ್ದಾಗಿ ಕಾಣುತ್ತಿತ್ತು. ಆ ಭಾವಿಯ ನೀರನ್ನು ಊರಿನ ಜನರು ಹೆಚ್ಚಾಗಿ ಬಳಸುತ್ತಿರಲಿಲ್ಲ. ಅಕಸ್ಮಾತ್ ಅಲ್ಲಿಗೆ

ಬಂದವರು ಅವನನ್ನು ನೋಡುತ್ತಾ ಹೋಗುತ್ತಿದ್ದರಾಗಲೀ ಮಾತನಾಡಿಸಿ ಅಡ್ಡಿ ಪಡಿಸುತ್ತಿರಲಿಲ್ಲ.

ತಾನೂ ಭಾವಿಯ ಬಳಿ ಇರುವ ಅರಳೀ ಮರದ ಬಳಿ ಭಾಗಣ್ಣನು ಕುಳಿತಿದ್ದನ್ನು ಹಲವಾರು ಸಲ ನೋಡಿದ್ದೂ ಉಂಟು.

ತಾನೇ ಈ ಬಗ್ಗೆ ಗಂಡನ ಮುಂದೆ ಹೇಳಿದ್ದಳು. "ನೋಡು; ಆ ಹುಡುಗನ ಏಕ ಮನಸ್ಸು. ಅದೆಷ್ಟು ಬಿಮ್ಮನೆ ಕುಳಿತುಕೊಳ್ಳುತ್ತಾನೆ. ಹಾಗೆ ಕೈ ಕಾಲು ಆಡಿಸದೆ ಕುಳಿತುಕೊಳ್ಳುವುದಕ್ಕೆ ಎಂಥ ಗಟ್ಟಿ ಮನಸ್ಸು ಬೇಕು."

ಈ ಮಾತು ಕೇಳಿ ಮಲ್ಲಣ್ಣ ಗಟ್ಟಿಯಾಗಿ ನಕ್ಕು "ಸುಮ್ಮನೆ ಕುಳಿತುಕೊಳ್ಳುವುದಕ್ಕೇಕೆ ಬೇಕು ಗಟ್ಟಿ ಮನಸ್ಸು? ಕೆಲಸ ಮಾಡುವುದಕ್ಕೆ ಬೇಕು ದೃಢ ಮನಸ್ಸು. ಶಾಲೆ ತಪ್ಪಿಸಿಕೊಳ್ಳುವುದಕ್ಕೆ ಹುಡುಗರು ಏನೇನೋ ಆಟವಾಡುತ್ತಾರೆ. ತಂದೆ ತಾಯಿಯರನ್ನು ಮೋಸಗೊಳಿಸುವ ಹುಡುಗತನದ ಚಪಲ ಅದು. ಆ ತಾಯಿ ವೆಂಕಮ್ಮ ಬೆಪ್ಪು ಮುಂಡೆ. ಮಗನ ಈ ಠಕ್ಕುತನ ಅರಿಯದೆ ಸುಮ್ಮನಿರುತ್ತಾಳೆ. ಬಿಟ್ಟಿಯಾಗಿ ಭಿಕ್ಷೆಯ ಕಾಳು ಸಿಕ್ಕುತ್ತದೆ. ಗಟ್ಟಿಯಾಗಿ ದಂಡಿಸಿ ಹೇಳದ ಶಾಲಾ ಅಯ್ಯಪ್ಪ ಇದ್ದಾನೆ. ಆದ್ದರಿಂದ ಹುಡುಗ ಬೇಕಾ ಬಿಟ್ಟಿಯಾಗಿ ಬೆಳೆಯುತ್ತಿದ್ದಾನೆ. ಇಂಥ ದಂಡ ಕೂಳು ತಿನ್ನುವ ತಾಯಿ ಮಕ್ಕಳ ವ್ಯವಹಾರಕ್ಕೆ ಎಂಥಾ ಮೆಚ್ಚುಗೆಯ ಮಾತು ನಿನ್ನದು" ಎಂದು ಮಲ್ಲಣ್ಣ ಮುನಿಸಿನಿಂದ ಹೇಳಿದ್ದ. ಆಗೇನೋ ಗಂಡ ಹೇಳಿದ ಮಾತು ಅಷ್ಟಾಗಿ ತಲೆಗೆ ಹಚ್ಚಿಕೊಳ್ಳಲಿಲ್ಲ.

ಆದರೆ ಈ ದಿನ ಊರಲ್ಲೆಲ್ಲಾ ಭಾಗಣ್ಣನ ತಪಸ್ಸಿನ ಶಕ್ತಿ, ಹೊಟ್ಟೆಯ ಸುತ್ತ ಹಾವು ಸುತ್ತಿಕೊಂಡರೂ ಎಚ್ಚರಗೊಳ್ಳದ ಅವನ ದೃಢ ಮನದ ಬಗ್ಗೆ ಗಂಡ ಸಂತೋಷಿಸಬಹುದು, ಹೊರಗೆಲ್ಲೋ ಜಗಳವಾಡಿ ಮನಸು ಕೆಡಿಸಿಕೊಂಡು ಬಂದ ಗಂಡನಿಗೆ ಇಂಥ ಸರ್ವರೂ ಸಂತೋಷಿಸುತ್ತಿರುವ ವಿಷಯ ಹೇಳಿ ಉಲ್ಲಾಸ ಮೂಡಿಸಲು ಪ್ರಯತ್ನಿಸಿದ ಆಕೆಗೆ, ತನ್ನ ಗಂಡನಿಗೆ ಅದೇ ವಿಷಯದ ಬಗ್ಗೆ ಆವೇಶ ಬಂದಿದೆ ಎಂದು ತಿಳಿದಾಗ ಆಶ್ಚರ್ಯಗೊಂಡಳು.

ಗಂಡ ಹಲ್ಲು ಹಲ್ಲು ಕಡಿಯುತ್ತಿದ್ದ ರೀತಿ, ರೊಟ್ಟಿಯ ಜೊತೆಗೆ ಬಿಸಿ ಉದಕವನ್ನು ಬಾಯಿಗೆ ಹಾಕಿಕೊಂಡಾಗ ಅವನು ಹೇಳಿದ ಮಾತು, ಕಾಲಿನ ಮೇಲೆ ಬಿಸಿ ಹಾಲು ಬಿದ್ದಾಗ 'ಬಿಸಿ ನೀರು ಚಲ್ಲಬೇಕು' ಎಂದು ಹೊಮ್ಮಿಸಿದ ಉದ್ಗಾರ ಇವುಗಳನ್ನೆಲ್ಲಾ ನೆನೆದು ಆಕೆ ಭಯದಿಂದ ತತ್ತರಿಸಿದಳು.

ತನ್ನ ಗಂಡ ಅಂದುಕೊಂಡಿದ್ದನ್ನು ಮಾಡದೆ ಬಿಡುವವರಲ್ಲ. ಒಂದು ರೀತಿಯ ವಿಚಿತ್ರ ಹಠಮಾರೀ ಸ್ವಭಾವ ಎಲ್ಲದಕ್ಕೂ ಹಠ ಹಿಡಿಯುವ ಪ್ರವೃತ್ತಿಯಿಲ್ಲ. ತಮ್ಮ ವಿರುದ್ಧ ಎಷ್ಟೇ ಅನ್ಯಾಯವಾದರೂ ಅವರು ಗಣನೆಗೆ ತೆಗೆದುಕೊಳ್ಳುವವರಲ್ಲ. ಸಾಕಷ್ಟು ಭೂಮಿ ಕಾಣಿಯಿದ್ದು ಹೊಲದಲ್ಲಿ ಕಷ್ಟಪಟ್ಟು ದುಡಿಯುತ್ತಾರೆ. ನಮಗಿರುವ ಭೂಮಿ ಅದರಲ್ಲಿ ಗೈಯ್ಯುವ ಗೇಯ್ಮೆಗೆ ಮನೆಯ ಕಬ್ಬಿಣದ ಪೆಟ್ಟಿಗೆಯ ತುಂಬಾ ಹಣ, ನನ್ನ ಮೈ ಮೇಲೆಲ್ಲಾ ಆಭರಣ, ಮನೆಯಲ್ಲಿ ಸಾಕಷ್ಟು ಕಾಳುಕಡಿ ಇರಬಹುದಾಗಿತ್ತು. ಆದರೆ ಪ್ರತಿವರ್ಷವೂ ವರ್ಷಾರಂಭಕ್ಕೆ ಗದ್ವಾಲಕ್ಕೆ ಹೋಗಿ ದೊಡ್ಡ ಸಾಹುಕಾರರಲ್ಲಿ ಸಾಲ ಪಡೆದೇ ವ್ಯವಸಾಯ ಆರಂಭಿಸಬೇಕು.

ಏತಕ್ಕೆ ಹೀಗೆ? ಹಾಗೆ ನೋಡಿದರೆ ಯಾವ ದುರಭ್ಯಾಸವೂ ಅವರಿಗಿಲ್ಲ. ಮನರಂಜನೆಗೆಂದು ಪ್ರಾರಂಭವಾಗಿ ಕಡೆಕಡೆಗೆ ಆವೇಶಗೊಂಡು ನೂರಾರು ಹಣವನ್ನು ಹಾಳು ಮಾಡಿಕೊಳ್ಳುವ ಕೋಳಿ ಪಂದ್ಯ, ಟಗರು ಕಾಳಗಗಳಲ್ಲಿ ಇವರಿಗೆ ಆಸಕ್ತಿಯಿಲ್ಲ. ಯಾವ ಜೂಜಾಟಕ್ಕೂ ಹೋಗುವುದಿಲ್ಲ. ಪರಸ್ತ್ರೀಯರನ್ನು ಕಣ್ಣೆತ್ತಿಯೂ ನೋಡುವ ಸ್ವಭಾವವಲ್ಲ. ಯಾವ ದುರಭ್ಯಾಸವಿಲ್ಲದಿದ್ದರೂ ಹಣ ಮಾತ್ರ ಉಳಿಯುವುದಿಲ್ಲ, ಹೀಗೇಕೆ?

ಯೋಚಿಸಿದಳು ಆಕೆ. ಗಂಡನ ಸ್ವಭಾವಗಳನ್ನು ಒಂದೊಂದಾಗಿ ಮೆಲಕು ಹಾಕಿಕೊಂಡಳು.

ಇವರ ಸ್ವಭಾವವೇ ಒಂದು ವಿಚಿತ್ರ. ತನ್ನ ಸುತ್ತಲೂ ಜನ ಇರಬೇಕು. ತಾನಂದದ್ದನ್ನು ಹೌದು ಹೌದು ಎನ್ನುತ್ತಿರಬೇಕು. ಮಾಡಿದ್ದೆಲ್ಲಾ ಸರಿ ಎನ್ನುವ ಮುಖಸ್ತುತಿ ಮಾಡುವ ಮಂದಿ ಎಂದರೆ ಇವರಿಗೆ ಪಂಚಪ್ರಾಣ. ಧಣಿ ಧಣಿ ಎಂದು ಸುತ್ತೆಲ್ಲಾ ಮುತ್ತಿಕೊಂಡು ಹಾಳು ಮಾಡುವ ಸ್ನೇಹಿತರೇ ಇವರಿಗೆ ಇಷ್ಟ. ಇವರನ್ನು ದುರಭ್ಯಾಸಗಳಿಗೆ ಇಳಿಸಲು ಸ್ನೇಹಿತರಿಗೆ ಸಾಧ್ಯವಾಗಿಲ್ಲವಾದರೂ ತಮ್ಮ ದುರಭ್ಯಾಸಗಳಿಗೆ ಬೇಕಾದ ಹಣವನ್ನು ಇವರಿಂದ ಕಿತ್ತುಕೊಳ್ಳಲು ಅವರು ತೋರುವ ಜಾಣತನ ಇವರಿಗೆ ಗೊತ್ತಾಗುವುದಿಲ್ಲ. ತಮ್ಮ ಟಗರನ್ನು ಮುಂದಿನ ವರ್ಷ ಕಣಕ್ಕೆ ಇಳಿಸಿ ಎದುರಾಳಿಯನ್ನು ನೆಲಗಚ್ಚಿಸಲು ತಮ್ಮಂಥ ದೊಡ್ಡವರ ಬೆಂಬಲ ಬೇಕು ಎಂದಾಗ ಹಿರಿ ಹಿರಿ ಹಿಗ್ಗಿಬಿಡುತ್ತಾರೆ. ಅವರು ಹೇಳಿದ ಟಗರಿನ ಬಗ್ಗೆಯಾಗಲೀ, ಪಂದ್ಯಾಟದ ಬಗ್ಗೆಯಾಗಲೀ ಅವರು ಯೋಚಿಸುವುದಿಲ್ಲ. ನಿಮ್ಮಂಥ ದೊಡ್ಡವರು ಎಂಬ ಶಬ್ದವೇ ಅವರನ್ನು ಮೈ ಮರೆಸಿ ಬಿಡುತ್ತದೆ. ಟಗರುಗಳನ್ನು ಕೊಳ್ಳಲು ಅವರಿಗೆ ಹಣ ನೀಡುತ್ತಾರೆ. ಮೇಯಿಸಿ ಕೊಬ್ಬಿಸಲು ಮನೆಯಲ್ಲಿದ್ದ ಧಾನ್ಯ

ಅಳೆದುಕೊಡುತ್ತಾರೆ. ಮುಂದಿನ ಸಲ ಅವರು ಹಣ ಕಳೆದುಕೊಂಡಾಗಲು ಇವರು ಎಚ್ಚೆತ್ತುಕೊಳ್ಳುವುದಿಲ್ಲ. ಪುನಃ ಪುನಃ ನೀಡಿ ಅವರನ್ನು ಸಂತೋಷಗೊಳಿಸುತ್ತಾರೆ. ಇವರು ಸಾಲ ನೀಡಿದರೆ ಬಡ್ಡಿ ಇಲ್ಲ. 'ಇಷ್ಟು ಹೊಲ, ಭೂಮಿ ಕಾಣೆ ಇರುವ ದೊಡ್ಡ ರೈತ ಬಡ್ಡಿ ಹಣ ಇಸಿದುಕೊಳ್ಳುವುದೇ' ಎಂದಾಗ ಹೌದು ಹೌದು ಎಂದು ತಲೆ ಆಡಿಸಿಬಿಡುತ್ತಾರೆ. ಪಕ್ಕದ ಪಟ್ಟಣಕ್ಕೆ ಹೋಗಿ ದೊಡ್ಡ ವರ್ತಕರಲ್ಲಿ ತಾವು ಸಾಲ ತರುವಾಗ 'ನಿಮ್ಮಂಥ ದೊಡ್ಡ ರೈತರಿಗೆ ಮಾತ್ರ ನಾವು ಮುಂಗಡ ನೀಡುವುದು' ಎಂಬ ಮಾತಿಗೆ ಸಿಕ್ಕಾಪಟ್ಟೆ ಬಡ್ಡಿ ತೆತ್ತು ಬರುತ್ತಾರೆ. ಬೆಳೆದ ಧಾನ್ಯಕ್ಕೆ ಉತ್ತಮ ಬೆಲೆ ನೀಡುವ ಬೇರೆ ದಲ್ಲಾಳಿ ವರ್ತಕರಿದ್ದರೂ ದೊಡ್ಡ ರೈತ ಎಂದು ಹೊಗಳಿ ಸಾಲ ನೀಡಿದ ವರ್ತಕನಿಗೆ ಕಡಿಮೆ ಬೆಲೆಯಲ್ಲಿ ಧಾನ್ಯ ನೀಡಿ ಬರುತ್ತಾರೆ. ಪಕ್ಕದ ಮನೆಯ ಸೋಮಣ್ಣ ಮೊನ್ನೆ ಮೊನ್ನೆ ಇಪ್ಪತ್ತು ಗಿದ್ನ ಜೋಳವನ್ನು ಪಟ್ಟಣದಲ್ಲಿ ಮಾರಿ ಎಷ್ಟು ಹಣ ತಂದನೋ, ಅರವತ್ತು ಗಿದ್ನ ಜೋಳವನ್ನು ಒಯ್ದು ತನ್ನ ಗಂಡ ಅದರ ಅರ್ಧ ಭಾಗದಷ್ಟೂ ಹಣ ತರಲಿಲ್ಲ.

ಏಕೆ ಹೀಗೆ? ತನ್ನ ಗಂಡನಿಗೆ ಇರುವುದೋ ಇದೊಂದು ದುರ್ಗುಣ. ತನ್ನನ್ನು ಹೊಗಳುವವರು ಸುತ್ತೆಲ್ಲಾ ಇರಬೇಕು. ಹೊಗಳುತ್ತಲೇ ಎಷ್ಟು ಶೋಷಣೆ ಮಾಡಿದರೂ ಅವರು ಉತ್ತಮ ಸ್ನೇಹಿತರು ಇವರಿಗೆ.

ಸಿಟ್ಟು ಬಂದಿತು ಆಕೆಗೆ. ಗಂಡನ ಕಡೆ ಮೆಲ್ಲನೆ ಹೊರಳಿ ನೋಡಿದಳು. ಹುಬ್ಬು ಗಂಟು ಹಾಕಿದಂತೆ ಹಾಗೆಯೇ ನಿದ್ರೆ ಬಂದಿರಬೇಕು. ಪೂರ್ತಿ ನಿದ್ರೆ ಬಂದಿಲ್ಲವಾದ್ದರಿಂದಲೇ ಹುಬ್ಬಿನ ಗಂಟು ಇನ್ನೂ ಬಿಚ್ಚಿಲ್ಲ. ಮನಸಿನ ಅಸ್ತವ್ಯಸ್ತತೆಯನ್ನು ಅರೆನಿದ್ರೆಯ ಮುಖ ಸಾರಿ ಸಾರಿ ಹೇಳುತ್ತಿದೆ.

ಏಕೆ ತನ್ನ ಯಜಮಾನರಿಗೆ ಈ ದಿನ ಇಷ್ಟೊಂದು ಸಿಟ್ಟು?... ಈ ಗಂಡಸರೇ ಇಷ್ಟು ಯಾವುದಕ್ಕೆ ಸಿಟ್ಟಾಗಬೇಕೋ ಅದಕ್ಕೆ ಸಿಟ್ಟಾಗುವುದಿಲ್ಲ. ಯಾರ ಮೇಲೆ ರೊಚ್ಚಿಗೇಳಬೇಕೋ ಅವರ ಮೇಲೆ ರೊಚ್ಚಿಗೇಳುವುದಿಲ್ಲ.

ಜೀವನದಲ್ಲಿ ಇಂದು ಪ್ರತಿ ಕ್ಷೇತ್ರದಲ್ಲಿಯೂ ಶೋಷಣೆ ನಡೆಯುತ್ತಿದೆ. ಒಂದಕ್ಕೆ ಹತ್ತು ಬೆಲೆ ಇಟ್ಟು ವರ್ತಕ ಮಾರುತ್ತಾನೆ. ಮಾರಿದ ಮಾಲಿನಲ್ಲಿ ಅಪ್ಪಟತೆ ಇರುವುದಿಲ್ಲ. ಎಣ್ಣೆ ತೆಗೆಯಲು ಸೇಂಗಾ ಬೀಜವನ್ನೋ, ಎಳ್ಳನ್ನೋ ಗಾಣಕ್ಕೆ ಕಳಿಸಿದರೆ ಅದನ್ನು ಅವನು ಹಾಗೆಯೇ ಎಣ್ಣೆ ತೆಗೆದು ಕಳಿಸುವುದಿಲ್ಲ. ಅದರಲ್ಲಿ ಸ್ವಲ್ಪ ಭಾಗ ತಾನು ಬಚ್ಚಿಟ್ಟುಕೊಂಡು, ಅದರ ತೂಕಕ್ಕೆ ಬೇರೆ ಏನೇನೋ ಸೇರಿಸಿ ಎಣ್ಣೆ ತೆಗೆದು ಕಳಿಸುತ್ತಾನೆ. ಆ ಎಣ್ಣೆಯಿಂದ ಒಮ್ಮೆ ಭೇದಿ ಹೆಚ್ಚಾಗಿ ತಾವೆಲ್ಲಾ ಹಾಸಿಗೆ ಹಿಡಿದದ್ದೂ ಉಂಟು.

ಆ ದಿನ ಊರ ಪಟೇಲರಿಗೆ ದೂರು ಕೊಡುವ ಗೋಜಿಗೆ ಹೋಗಲಿಲ್ಲ. ಪಂಚಾಯ್ತಿ ಕಟ್ಟೆಗೆ ವಿಷಯವನ್ನು ಒಯ್ಯಲಿಲ್ಲ. ಆ ಎಣ್ಣೆಯನ್ನು ಚೆಲ್ಲಿ ಬೇರೆಡೆಯಲ್ಲಿ ಎಣ್ಣೆ ಮಾಡಿಸಿಕೊಂಡು ಬಂದರಷ್ಟೆ. ಹಣವನ್ನು ಕಿತ್ತುಕೊಳ್ಳುವುದರ ಜೊತೆಗೆ ಆರೋಗ್ಯವನ್ನೇ ಹಾಳು ಮಾಡುವ ಇಂಥ ಅನೇಕ ಸಂಗತಿಗಳ ಬಗ್ಗೆ ಈ ಗಂಡಸರಿಗೆ ಸಿಟ್ಟು ಬರುವುದಿಲ್ಲ. ಇವರ ಸಿಟ್ಟೆಲ್ಲಾ ಧಾರ್ಮಿಕ ಕ್ಷೇತ್ರದ ವಿಷಯಗಳಲ್ಲಿ ಮಾತ್ರ! ಪಕ್ಕದ ಮನೆ ನೀಲಮ್ಮ ಸೋಮವಾರದ ದಿವಸ ರಾತ್ರಿ ಊಟ ಮಾಡುವುದಿಲ್ಲ. ಅದನ್ನು ಕೇಳಿದರೆ ಇವರಿಗೆ ಸಿಟ್ಟು. ಯಾರ ಮಾತನ್ನೋ ಕಟ್ಟಿಕೊಂಡು ಈಕೆ ಉಪವಾಸದಿಂದ ಸಾಯುತ್ತಾಳೆ ಎಂಬ ವಾದ ಅವರದು. ನೀಲಮ್ಮನ ಗಂಡ ಸೋಮಣ್ಣ ಪ್ರತಿ ನಿತ್ಯ ಬೆಳಿಗ್ಗೆ ಹೋಗಿ ಊರ ಹೊರಗಿರುವ ಬಿಲ್ವಪತ್ರೆ ಗಿಡಕ್ಕೆ ನೀರೆರದು ಬರುತ್ತಾನೆ. 'ಹೊಲದ ಬೆಳೆಗೆ ಕಪ್ಪಲಿ ಹೊಡೆದು ನೀರು ಸರಿಯಾಗಿ ಬಿಡುವುದಿಲ್ಲ. ಬಿಲ್ವಪತ್ರೆ ಗಿಡಕ್ಕೆ ನೀರೆರದು ಬರುತ್ತಾನೆ' ಎಂದು ಸಿಡಿಮಿಡಿಗೊಳ್ಳುತ್ತಾರೆ. ಸೋಮವಾರದ ದಿವಸ ಕಲ್ಲೇಶನ ಗುಡಿಗೆ. ಶನಿವಾರದ ದಿವಸ ಹನುಮಪ್ಪನ ಗುಡಿಗೆ ಸೋಮಣ್ಣ ಭಜನೆಗೆ ಹೋದರೆ ಇವರಿಗೆ ಸಿಟ್ಟು ಸಿಟ್ಟು. ಮೂಢತನ ಬೆಳೆಯುತ್ತಿದೆ ಎಂದು ಹಬಹಬಿಸುತ್ತಾರೆ. ನೀಲಮ್ಮ ಸೋಮವಾರದ ರಾತ್ರಿ ಊಟ ಬಿಟ್ಟರೆ ಇವರಿಗೇನು ನಷ್ಟ? ಸೋಮಣ್ಣ ಬಿಲ್ವಪತ್ರೆ ಗಿಡಕ್ಕೆ ನೀರೆರದು ಬಂದರೆ ಇವರಿಗೇಕೆ ಆಕ್ರೋಶ? ಅದು ತಪ್ಪೇ ಇರಬಹುದು. ಇವರ ದೃಷ್ಟಿಯಿಂದ ಅದು ಅಲ್ಲದ ಕೆಲಸವೇ ಆಗಿರಬಹುದು. ಆದರೆ ಅವರ ಈ ವರ್ತನೆಯಿಂದ ಗ್ರಾಮಕ್ಕೇನು ತೊಂದರೆ? ಜನರಿಗೇನು ಅಪಕಾರ? ಅದು ಅವರವರ ನಂಬಿಕೆ. ಅದರಿಂದ ಅವರಿಗೆ ಒಂದು ರೀತಿಯ ತೃಪ್ತಿಸಿಕ್ಕಬಹುದು. ಅದರಿಂದ ಬೇರೆಯವರಿಗೆ ನಷ್ಟವಾಗದಿದ್ದರೆ ಸಾಕಷ್ಟೆ? ಇಲ್ಲ ತನ್ನ ಯಜಮಾನರದು ಆ ಸ್ವಭಾವವಲ್ಲ. ಅನೇಕ ಜನರ ಧಾರ್ಮಿಕ ನಡವಳಿಕೆಗಳನ್ನು ಟೀಕಿಸುವುದರಲ್ಲಿ ಒಂದು ರೀತಿಯ ರಾಕ್ಷಸೀ ತೃಪ್ತಿ ಹೊಂದುತ್ತಾರೆ. ತಾವು ಬಹಳ ಮುಂದುವರಿದವರು ಎಂದು ಭ್ರಮಿಸುತ್ತಾರೆ. ಜನರನ್ನು ಶೋಷಣೆ ಮಾಡುವ, ಜನ ಜೀವನವನ್ನು ಕಲುಷಿತಗೊಳಿಸುವ ವಿಷಯಗಳ ಬಗ್ಗೆ ಇಲ್ಲದ ಆಕ್ರೋಶ ಯಾರೊಬ್ಬರಿಗೂ ಹಾನಿ ಮಾಡದೆ ತಮ್ಮಷ್ಟಕ್ಕೆ ತಾವು ತಮಗೆ ಸರಿ ಎನಿಸಿದ್ದನ್ನು ಆಚರಿಸಿದರೆ ಅಂಥವರ ವಿರುದ್ಧ ಆಕ್ರೋಶ ತೋರುತ್ತಾರೆ.

ಗಂಡನ ಗುಣಗಳನ್ನು ಮೆಲಕು ಹಾಕಿಕೊಂಡಳು ಮಲ್ಲಣ್ಣನ ಮಡದಿ.

ಕೂಡಲೇ ಈ ದಿನದ ಸಿಟ್ಟಿಗೆ ಮುಖ್ಯಕಾರಣಗಳು ಅವಳಿಗೆ ಸ್ವಲ್ಪ ಸ್ವಲ್ಪ ಹೊಳೆಯತೊಡಗಿದುವು.

ತನ್ನ ಗಂಡ ಇಂಥ ಧಾರ್ಮಿಕ ವಿಷಯವನ್ನು ಎಲ್ಲಿಯೋ ಖಂಡಿಸಿರಬೇಕು. ಸುತ್ತಲೂ 'ಹೌದಪ್ಪ' ಸ್ನೇಹಿತರು ಇಲ್ಲದೆ ಇವರ ವಿರುದ್ಧ ವಾದಿಸುವವರು ಎದುರಾಗಿರಬೇಕು. ಆದ್ದರಿಂದಲೇ ಇವರಿಗೆ ಇಷ್ಟೊಂದು ಸಿಟ್ಟು.

ಆದರೆ ಸಿಟ್ಟು ಯಾರ ವಿರುದ್ಧ? ಪಾಪ ಪುಟ್ಟ ಮಗು. ಯಾರ ಗೊಡವೆಗೂ ಹೋಗದೆ ತನ್ನಷ್ಟಕ್ಕೆ ತಾನು ಯಾವುದೋ ಪೂಜೆಯಲ್ಲಿ ನಿರತನಾದರೆ ಇವರಿಗೆ ಸಿಟ್ಟು ಬರುವುದು ನ್ಯಾಯವೇ? ಇಲ್ಲ. ಅಷ್ಟಕ್ಕೆ ಇಷ್ಟು ಉಗ್ರರಾಗುವುದು ಸಾಧ್ಯವಿಲ್ಲ. ಇವರ ಮಾತಿಗೆ ಎದುರು ಹೇಳುವವರು ಬಲವಾಗಿ ಇವರನ್ನು ಅಲ್ಲಗಳೆದಿರಬೇಕು. ಮೊದಲೇ ಧಾರ್ಮಿಕ ಸಂಗತಿ, ಜೊತೆಗೆ ವಿರುದ್ಧದವರ ವಾದ. ಇವರನ್ನು ಇಷ್ಟು ಕೆರಳಿಸಿದೆ. ಅದಕ್ಕಾಗಿ ಹಠಕ್ಕೆ ಇಳಿದಿದ್ದಾರೆ.

ಜಗಳವಾಡಿದ್ದು ವಿಶ್ವಾಮಿತ್ರ ವಶಿಷ್ಟ! ಪಂಥ ಹುಟ್ಟಿದ್ದು ಅವರವರ ಮಾತಿನ ಮಧ್ಯೆ. ಆದರೆ ನಾನಾ ಕಷ್ಟಕೋಟಲೆಗಳಿಗೆ ಒಳಗಾಗಿದ್ದು ದೂರದಲ್ಲಿದ್ದ ಹರಿಶ್ಚಂದ್ರ ಚಂದ್ರಮತಿ ತಾನೆ?

ಈ ದಿನವೂ ಹಾಗೆಯೇ ನಡೆದಿರಬೇಕು. ಯಾರೊಂದಿಗೋ ಜಗಳವಾಡಿ ತನ್ನ ಯಜಮಾನರು ಮುನಿದು ಬಂದಿದ್ದಾರೆ. ಅದಕ್ಕಾಗಿ ಹಠ ತೊಟ್ಟಿದ್ದಾರೆ. ಹಠಕ್ಕೆ ಇಳಿದರೆ ಅವರು ಹಿಂದೇಟು ಹಾಕುವವರೇ ಅಲ್ಲ. ಕಡೆಯತನಕವೂ ಅದನ್ನು ಸಾಧಿಸುವ ಪ್ರವೃತ್ತಿ ಅವರದು.

ಗಂಡನ ಹಠಮಾರಿತನ, ಮುಖಸ್ತುತಿ ಪ್ರಿಯತ್ವದ ಘಟನೆಯೊಂದು ನೆನಪಾಯಿತವಳಿಗೆ.......

ಶ್ಯಾನುಭೋಗ ಗುಂಡಪ್ಪ ಸಾತ್ವಿಕ ವ್ಯಕ್ತಿ. ಸಾಧ್ಯವಾದಷ್ಟು ಬೇರೆಯವರಿಗೆ ಉಪಕಾರ ಮಾಡುವ ಸ್ವಭಾವ. ಊರಿನ ಕುಲಕರ್ಣಿಕೆ ಅವರಿಗೆ ಸೇರಿದ್ದಲ್ಲ. ನಾಲ್ಕೈದು ತಲೆಮಾರುಗಳ ಹಿಂದೆ ಅವರಿಗೆ ಸೇರಿದ ಕುಲಕರ್ಣಿಕೆಯನ್ನು ಮಹಾರಾಜರು ಕಸಿದುಕೊಂಡು ದಾಯಾದಿಗಳಿಗೆ ನೀಡಿಬಿಟ್ಟರಂತೆ. ಕುಲಕರ್ಣಿಕೆ ಹೋಗಿ ನಾಲ್ಕೈದು ತಲೆಮಾರಾಗಿದ್ದರೂ ಹೆಸರಿನ ಜೊತೆಗೆ ಶ್ಯಾನಭೋಗ ಎಂಬ ವಿಶೇಷಣೆ ತಪ್ಪಿರಲಿಲ್ಲ. ಕುಲಕರ್ಣಿಕೆ ಇಲ್ಲದಿದ್ದರೂ ಬೇಸಾಯ ಕೆಲಸದಲ್ಲಿ ಗುಂಡಪ್ಪ ಬಹಳ ಮುಂದುವರೆದಿದ್ದ. ಆರು ಜೊತೆ ಎತ್ತಿನ ವ್ಯವಸಾಯ. ಮನೆಯಲ್ಲಿ ಹತ್ತಾರು ಎಮ್ಮೆ ಹಸುಗಳು, ಆಳುಕಾಳು ತುಂಬಿದ ಮನೆ ಅವರದು. ಅವರೇ ತಾನೇ ನಮ್ಮ ವೆಂಕಮ್ಮನ ಮಗ ಭಾಗಣ್ಣನಿಗೆ ಉಪನಯನ ಮಾಡಿದ್ದು! ಯಾರ ಮನೆಯಲ್ಲಿ

ಮದುವೆಯಾದರೂ ದೊಡ್ಡ ಹಬ್ಬ ಹುಣ್ಣಿಮೆಯಾದರೂ ಭಾರೀ ಅಡುಗೆಗೆ ಬೇಕಾದ ದೊಡ್ಡ ದೊಡ್ಡ ಪಾತ್ರೆಗಳನ್ನು ಗುಂಡಣ್ಣನವರೇ ನೀಡುತ್ತಿದ್ದರು. ಕಾರಹುಣ್ಣಿಮೆಯೇ ಇರಲಿ, ಊರ ಜಾತ್ರೆಯೇ ನಡೆಯಲಿ, ಬೀದಿಗಳಲ್ಲಿ ತೋರಣ ಕಟ್ಟಲು ಗುಂಡಣ್ಣನ ತೋಪಿನಲ್ಲಿ ಬೆಳೆದ ಮಾವಿನ ಮರಗಳ ಎಲೆಗಳೇ ಬೇಕು. ಊರ ದೇವಸ್ಥಾನಗಳಿಗೆ ಸುಣ್ಣ ಬಳಿಯಲು ಗುಂಡಣ್ಣನ ಹೊಲದಲ್ಲಿ ಸುಡಿಸಿದ ಸುಣ್ಣವೇ ಆಗಬೇಕು. ಯಾರ ಮನೆಯಲ್ಲಿ ಸಣ್ಣಪುಟ್ಟ ಕಾಯಿಲೆಗಳು ಬಂದರೂ ಕಷಾಯ ತಯಾರಿಸಿ ಕೊಡುತ್ತಿದ್ದುದು ಗುಂಡಣ್ಣನ ಹೆಂಡತಿಯೆ. ಅವರ ಮನೆಗೆ ಹೋದ ಭಿಕ್ಷುಕರಾರೂ ಬರಿಗೈಯಿಂದ ಬಂದುದಿಲ್ಲ. ಗಂಡ ಹೆಂಡತಿಯರಿಬ್ಬರದೂ ಧಾರಾಳ ಕೈ.

ಆದರೆ ಗ್ರಾಮದ ಕುಲಕರ್ಣಿಕೆ ನಡೆಸುವ ವೆಂಕಣ್ಣನೋ-ಪರಮ ಲೋಭಿ. ಮಹಾಚಾಣಾಕ್ಷ. ಚತುರ ಮಾತುಗಾರ. ಎದುರಿಗೆ ಸಿಕ್ಕವರನ್ನು ನುಣ್ಣಗೆ ಬೋಳಿಸಿ ಕಳಿಸುವುದರಲ್ಲಿ ಅವನನ್ನು ಮೀರಿಸುವವರು ಸುತ್ತಮುತ್ತಲ ಗ್ರಾಮಗಳಲ್ಲಿಯೇ ಇರಲಿಲ್ಲ.

ಮಲ್ಲಣ್ಣನ ಹೆಂಡತಿ ಯೋಚಿಸುತ್ತಿದ್ದಳು......

ಒಂದೇ ಗ್ರಾಮದ ಒಂದೇ ಶಾನಭೋಗ ಮನೆತನದ ಇಬ್ಬರು ವ್ಯಕ್ತಿಗಳಲ್ಲಿ ಎಷ್ಟೊಂದು ಭಿನ್ನತೆ!

ಗ್ರಾಮಕ್ಕೆ ಯಾವ ದೊಡ್ಡ ಅಧಿಕಾರಿಯೇ ಬರಲಿ, ಅವರು ಇಳಿಯುತ್ತಿದ್ದುದು ಕುಲಕರ್ಣಿ ವೆಂಕಣ್ಣನ ಮನೆಯಲ್ಲಿಯೆ. ಅವರಿಗೆ ಅಲ್ಲಿ ಭಾರಿ ಆದರೋಪಚಾರ. ಆದರೆ ಅದರ ವೆಚ್ಚವನ್ನು ಮಾತ್ರ ಗ್ರಾಮಸ್ಥರಿಂದ ಆತ ವಸೂಲಿ ಮಾಡುತ್ತಿದ್ದ. ಆದ ಒಂದು ವೆಚ್ಚಕ್ಕೆ ಹತ್ತನ್ನು ಸೇರಿಸಲು ವೆಂಕಣ್ಣ ಮರೆಯುತ್ತಿರಲಿಲ್ಲ. ಒಬ್ಬ ಅಧಿಕಾರಿ ಒಂದು ದಿನ ಗ್ರಾಮದಲ್ಲಿದ್ದರೆ ಒಂದೊಂದೇ ಮನೆಯಿಂದ ಒಂದೊಂದೇ ಲೋಟ ತುಪ್ಪ, ಎರಡು ನಿಂಬೆ ಹಣ್ಣಿನ ಗಾತ್ರದಷ್ಟು ಬೆಣ್ಣೆ ಕಳಿಸಲೇಬೇಕು. ಹಾಗೆ ಹತ್ತಾರು ಮನೆಗಳಿಂದ ಒಂದೇ ದಿನ ತರಿಸಿ ಅಧಿಕಾರಿಯ ಹೆಸರಿನಲ್ಲಿ ಹತ್ತಾರು ದಿನಗಳ ಕಾಲ ಮನೆಯವರೆಲ್ಲಾ ಮಜಾ ಮಾಡುತ್ತಿದ್ದರು. ಅಧಿಕಾರಿಗಳಿಗೆ ಗ್ರಾಮದ ಒಳಗುಟ್ಟು ಅಷ್ಟಾಗಿ ತಿಳಿಯುತ್ತಿರಲಿಲ್ಲ. ತಮಗೆ ಆದರೋಪಚಾರ ಮಾಡಿದ ವೆಂಕಣ್ಣನ ಔದಾರ್ಯ ಹೊಗಳಿ,ಆತ ಹೇಳಿದಂತೆ ಸರಕಾರಿ ಆಜ್ಞೆ ಹೊರಡಿಸುತ್ತಿದ್ದರು. ತಮಗೆ ಬೇಕಾದವರಿಗೆ ಒಂದೆರಡು ಸಣ್ಣ ಉಪಕಾರ, ಬೇಡವಾದವರ ಮೇಲೆ ಕಕ್ಷೆ

ತೀರಿಸಿಕೊಳ್ಳಲು ಇಂಥ ಅವಕಾಶಗಳು ಅವನಿಗೆ ಬೇಕಾದಷ್ಟು ಸಿಕ್ಕುತ್ತಿದ್ದುವು. ಆತನಿಗೆ ಇಂಥ ಅವಕಾಶಗಳು ಸಿಕ್ಕುತ್ತವೆಂದೇ ಗ್ರಾಮಸ್ಥರು ಹೆದರುತ್ತಿದ್ದರು.

ಮಾಡಿದ ಉಪಕಾರಕ್ಕೆ ಕೃತಜ್ಞತೆ ಇರುವುದಿಲ್ಲ ಈ ಜನಕ್ಕೆ. ಮಾಡಬಹುದಾದ ಅಪಕಾರಕ್ಕೆ ಹೆದರುತ್ತಾರೆ ಇವರು. ಆದ್ದರಿಂದಲೇ ಶ್ಯಾನಭೋಗ ವೆಂಕಣ್ಣನ ಹಿಂದೆ ಇರುವಷ್ಟು ಜನ ಗುಂಡಣ್ಣನ ಹಿಂದೆ ಎಂದೂ ಇದ್ದುದಿಲ್ಲ.

ಕೆರೆಯ ಪಕ್ಕದಲ್ಲಿ ಇರುವ ಹತ್ತು ಕೂರಿಗೆ ಹೊಲ ಫಲವತ್ತಾದ ಭೂಮಿ ತಮ್ಮದು. ಅದರಲ್ಲಿ ನಾಲ್ಕು ಕೂರಿಗೆ ಹೊಲದ ಫಲವನ್ನು ಶ್ಯಾನಭೋಗ ವೆಂಕಣ್ಣ ವರ್ಷವರ್ಷವೂ ಸುಲಭದಲ್ಲಿ ಕಸಿದುಬಿಡುತ್ತಿದ್ದ. ರಾಜಗಂದಾಯವಾಗಿ ಹತ್ತನೇ ಒಂದು ಭಾಗ ನೀಡಿದ್ದರೂ ಸಾಕಿತ್ತು. ಅದನ್ನು ತಮ್ಮ ಬೇರೆ ಹೊಲಗಳಲ್ಲಿ ಪಡೆಯುತ್ತಿದ್ದ ವೆಂಕಣ್ಣ ಈ ಹೊಲದಲ್ಲಿ ಅರ್ಧಕ್ಕಿಂತಲೂ ಹೆಚ್ಚು ಕಸಿಯುತ್ತಿದ್ದದ್ದುದನ್ನು ನೆನೆದಳು ಮಲ್ಲಣ್ಣನ ಮಡದಿ.

ಶ್ಯಾನಭೋಗ ವೆಂಕಣ್ಣನ ನಯಗಾರಿಕೆಗೆ ತನ್ನ ಗಂಡ ಒಳಗಾಗುತ್ತಿದ್ದುದು ಗೊತ್ತಿತ್ತು. ಆದರೆ ಅವರು ಏತಕ್ಕಾಗಿ ವೆಂಕಣ್ಣನ ಟೋಪಿಗೆ ತಲೆಕೊಡುತ್ತಾರೆ ಎಂಬ ಸಂಗತಿಯ ಅರಿವೂ ಆಕೆಗಿದ್ದುದರಿಂದ ಅದೊಂದು ತಿದ್ದಲಾರದ ತನ್ನ ಗಂಡನ ಬಲಹೀನತೆ ಎಂದು ಸುಮ್ಮನಿದ್ದುಬಿಡುತ್ತಿದ್ದಳು.

ಶ್ಯಾನಭೋಗ ವೆಂಕಣ್ಣ ಮಾಡುತ್ತಿದ್ದುದೂ ಇಷ್ಟೆ. ಗ್ರಾಮಕ್ಕೆ ಯಾವ ಅಧಿಕಾರಿಯೇ ಬರಲಿ ಮಲ್ಲಣ್ಣನನ್ನು ಕರೆಸಿ ಪರಿಚಯಿಸುತ್ತಾ 'ನಮ್ಮ ಊರಿನ ದೊಡ್ಡ ರೈತ, ರಾಜಭಕ್ತ' ಎಂದೆಲ್ಲಾ ಹೊಗಳುತ್ತಿದ್ದುದೇ ಗಂಡನು ಮಾರು ಹೋಗುವುದಕ್ಕೆ ಕಾರಣ ಎಂದು ಆಕೆಗೆ ಗೊತ್ತಿತ್ತು. ಆದರೇನು ಮಾಡುವುದು? ಮುಖಸ್ತುತಿಗೆ ಮರುಳಾಗುವ ಸ್ವಭಾವ ತನ್ನ ಗಂಡನ ಹುಟ್ಟುಗುಣ. ಹುಟ್ಟಿದಾಗಲೇ ಬಂದದ್ದು. ತಾನು ಮಡದಿಯಾಗಿ ಬಂದಿದ್ದು ಅವರ ಜೀವನದಲ್ಲಿ ಹನ್ನೆರಡು ವರ್ಷಗಳ ನಂತರ ತಾನೆ? ಮಧ್ಯದಲ್ಲಿ ಬಂದ ತಾನು ಮೊದಲಿನಿಂದಲೂ ಬಂದ ಗುಣವನ್ನು ಹೇಗೆ ಬದಲಾಯಿಸಲು ಸಾಧ್ಯ ಎಂದು ಆಕೆ ಸುಮ್ಮನಾಗಿ ಬಿಡುತ್ತಿದ್ದಳು.

ಶ್ಯಾನಭೋಗ ವೆಂಕಣ್ಣನ ನಯಗಾರಿಕೆಯ ಸುಲಿಗೆಗೆ ಒಳಗಾಗುತ್ತಿದ್ದ ತನ್ನ ಗಂಡ ಗುಂಡಪ್ಪನವರ ಹಸು ಒಮ್ಮೆ ತನ್ನ ಹೊಲದಲ್ಲಿ ನುಗ್ಗಿ ಮೇಯಿತೆಂಬ ದೂರನ್ನು ಹತ್ತಾರು ಹಳ್ಳಿಯ ಪಾರುಪತ್ತೆದಾರ - ಕೊತವಾಲರವರೆಗೂ ದೂರು

ಒಯ್ದಿದ್ದ, ಇಪ್ಪತ್ತು ಗಿದ್ನ ಜೋಳವನ್ನು ದಂಡರೂಪವಾಗಿ ಸರ್ಕಾರಕ್ಕೆ ನೀಡಿಸಿ, ಇಪ್ಪತ್ತು ಗಿದ್ನ ಪರಿಹಾರವಾಗಿ ತಾನೂ ಪಡೆದಿದ್ದ. ಆಮೇಲೆ ವೆಂಕಣ್ಣನೇ ಅದನ್ನು ಇಸಿದುಕೊಂಡ ಸಂಗತಿ ತನಗೆ ಮಾತ್ರ ಗೊತ್ತು.

ಈಗ ಅದೇ ಗುಂಡಪ್ಪನವರು ಮುಂದೆ ನಿಂತು ಉಪನಯನ ಮಾಡಿದ ಹುಡುಗ ಭಾಗಣ್ಣ. ಅವನನ್ನು ಈಗ ಊರಲ್ಲೆಲ್ಲಾ ಹೊಗಳುತ್ತಿದ್ದಾರೆ.

ರೇಗುವುದಕ್ಕೆ - ಆವೇಶಗೊಳ್ಳುವುದಕ್ಕೆ ಗಂಡನ ಸಹಜ ಗುಣಗಳು ನೆರವಾಗಿವೆ ಎಂದು ಮಲ್ಲಣ್ಣನ ಮಡದಿಗೆ ಹೊಳೆಯಿತು.

ನಾಳೆ ಏನೋ ಅನಾಹುತ ನಡೆಯಲಿದೆ. ಕಂದ ಭಾಗಣ್ಣನಿಗೆ ಏನೋ ತೊಂದರೆಯನ್ನು ತನ್ನ ಗಂಡ ಕೊಡಲಿದ್ದಾನೆ ಎಂದು ಆಕೆಗೆ ಹೊಳೆದುಹೋಯಿತು.

ಆದನ್ನು ತಡೆಯುವುದು ಹೇಗೆ? ತನ್ನ ಆತ್ಮೀಯಲ್ಲೊಬ್ಬಳಾದ ವೆಂಕಮ್ಮನ ಚೊಚ್ಚಲ ಮಗ - ಇನ್ನೂ ಹನ್ನೆರಡು ವರ್ಷದ ಪುಟ್ಟ ಕಂದ. ಭಾಗಣ್ಣನನ್ನು ಹೇಗೆ ಪಾರು ಮಾಡಬೇಕು?

ಯೋಚಿಸುತ್ತಾ ಇದ್ದಂತೆ ಏನೋ ಉಪಾಯ ಹೊಳೆಯಿತು ಆಕೆಗೆ. ಗಂಡ ಪಕ್ಕದಲ್ಲಿ ನಿದ್ರಿಸುತ್ತಿದ್ದ - ಆಕೆಯೂ ಕಣ್ಣು ಮುಚ್ಚಿದಳು.

೨

ನಿದ್ದೆಯು ಮನುಷ್ಯನ ಸ್ವಾಧೀನದಲ್ಲಿಲ್ಲ ಎಂದು ಕೆಲವರು ಹೇಳುತ್ತಾರೆ. ವೇಳೆಗೆ ಸರಿಯಾಗಿ ಎಚ್ಚರವಾಗುವುದಿಲ್ಲ ಎಂದು ಹಲವರು ಪೇಚಾಡುತ್ತಾರೆ. ಅಂಥವರಿಗೆ ಮನಸ್ಸಿನ ಶಕ್ತಿಯ ಬಗ್ಗೆ ಸರಿಯಾಗಿ ಗೊತ್ತಿಲ್ಲ ಎಂದು ವಿಷಾದದಿಂದ ಹೇಳಬೇಕಾಗುತ್ತದೆ. ನಿರ್ದಿಷ್ಟ ಕಾರಣದಿಂದ ಇಂಥ ವೇಳೆಗೇ ಏಳಬೇಕೆಂದು ದೃಢ ನಿಶ್ಚಯ ಮಾಡಿಕೊಂಡು ಮಲಗಲಿ, ವೇಳೆಗೆ ಸರಿಯಾಗಿ ನಿದ್ದೆ ತಾನೇ ಹಿಂದೆ ಸರಿದು ಹೇಗೆ ಎಚ್ಚರಿಕೆ ಮೂಡುತ್ತದೆ ಎಂದು ಪರೀಕ್ಷಿಸಿನೋಡಲಿ.

ಹಾಗಿಲ್ಲದಿದ್ದರೆ ಕೋಳಿ ಕೂಗುವ ಸ್ವಲ್ಪ ಕಾಲ ಮುಂದಷ್ಟೇ ಮಲ್ಲಣ್ಣ ಹೇಗೆ ಎಚ್ಚರಗೊಳ್ಳುತ್ತಿದ್ದ? ಅವನು ಮಲಗಿದ ಎಷ್ಟೋ ವೇಳೆಯ ನಂತರ ನಿದ್ರಿಸಿದ ಆತನ ಹೆಂಡತಿಗೆ ಗಂಡ ಎದ್ದ ವೇಳೆಗೆ ಸರಿಯಾಗಿ ಹೇಗೆ ಎಚ್ಚರವಾಯಿತು?

ಭಾಗಣ್ಣ ಕೋಳಿ ಕೂಗುವ ವೇಳೆಗೆ ಸರಿಯಾಗಿ ಪೂಜೆಗೆಂದು ಭಾವಿಯ ಬಳಿ ಹೋಗುತ್ತಾನೆಂದು ಅವರಿವರಿಂದ ಕೇಳಿದ್ದ ಮಲ್ಲಣ್ಣನಿಗೆ ಅದೇ ವೇಳೆಗೆ ಸರಿಯಾಗಿ

TIRUPATI 54675

ಎಚ್ಚರವಾಯಿತು. ಗಂಡನು ಮಾಡಲಿರುವ ಏನೋ ಅನಾಹುತ ಕಾರ್ಯವನ್ನು ತಡೆಗಟ್ಟಲು ನಿರ್ಧರಿಸಿದ್ದ ಆತನ ಮಡದಿಗೆ ಗಂಡ ಎದ್ದೊಡನೆ ಎಚ್ಚರವಾಗಿತ್ತು.

ಮಲ್ಲಣ್ಣ ಎದ್ದವನೇ ಮನೆಯಲ್ಲಿ ತುಂಬಿಟ್ಟಿದ್ದ ಗಡಿಗೆಯ ನೀರನ್ನು ಚೆಲ್ಲಿದ. ಹೊಲಗಳಿಗೆ ರಾತ್ರಿ ಕಾಯಲು ಒಯ್ಯುತ್ತಿದ್ದ ದೊಡ್ಡ ಕೈದೀಪವನ್ನು ಹಚ್ಚಿಕೊಂಡು ಹೊರಗೆ ಹೊರಡಲು ಅನುವಾದ.

ಕೋಳಿ ಕೂಗಿದ್ದು ಆಮೇಲೆ ಕೇಳಿಸಿತು. ಭಾವಿಯ ಕಟ್ಟೆಯ ಬಳಿ ಕುಳಿತ ಭಾಗಣ್ಣನನ್ನು ಹೇಗೆ ಮಾತನಾಡಿಸಬೇಕು? ಅಕಸ್ಮಾತ್ ಮಾತನಾಡಿಬಿಟ್ಟರೆ ಮುಂದೇನು ಮಾಡಬೇಕು?

ಬಹುಶಃ ಹುಡುಗ ಮಾತನಾಡಲಿಕ್ಕಿಲ್ಲ. ಆ ರೀತಿ ಕುಳಿತಾಗ ಮಾತನಾಡುವುದಿಲ್ಲ ವೆಂದು ಊರಿಗೆ ಊರೇ ಹೇಳುತ್ತಿದೆಯಲ್ಲಾ ? ಆ ರೀತಿ ಮಾತನಾಡದಿದ್ದಾಗ ಮೂರು ಸಲ ಎಚ್ಚರಿಸಬೇಕು. ಎಲ್ಲ ಜನರಿಗೆ ಮಂಕು ಎರಚಿದಂತೆ ನನ್ನನ್ನೂ ಮರಳು ಮಾಡಲು ಅವನು ಮಾತನಾಡಲಿಕ್ಕಿಲ್ಲ. ಆಗ ಅವನಿಗೆ ಹೇಗೆ ಬುದ್ಧಿ ಕಲಿಸಬೇಕು ಎಂದೆಲ್ಲಾ ಲೆಕ್ಕಾಚಾರ ಹಾಕಿದ.

ಜೊತೆಗಿರಲಿ ಎಂದು ಸಣ್ಣ ಕೊಡವೊಂದನ್ನು ದೀಪ ಹಿಡಿದ ಕೈಯಲ್ಲಿಯೇ ತೆಗೆದುಕೊಂಡು ಹೊರಡಲನುವಾದ.

ಅವನು ಅಷ್ಟೆಲ್ಲಾ ಯೋಚಿಸಿ ಹೊರಡುವಷ್ಟರಲ್ಲಿ ಹೊರಗೆ ಸ್ವಲ್ಪ ಸ್ವಲ್ಪ ಬೆಳಕು ಮೂಡುತ್ತಿತ್ತು. ಹೆಂಡತಿಯ ಕಡೆ ನೋಡಿದ. ಅವಳಿನ್ನೂ ಕಣ್ಣು ತೆಗೆದಿರಲಿಲ್ಲ. ಪ್ರತಿನಿತ್ಯ ಈ ವೇಳೆಗಾಗಲೇ ಎದ್ದು ಅಂಗಳ ಗುಡಿಸುತ್ತಿದ್ದ ಆಕೆ ಇನ್ನೂ ಎದ್ದಿಲ್ಲವೇಕೆಂದು ಯೋಚಿಸಲಿಲ್ಲ. ಮಲಗಿದ್ದಾಳೆಂದೇ ನಂಬಿದ.

ಬಾಗಿಲನ್ನು ಮುಂದೂಡಿಕೊಂಡು ಭಾವಿಯ ಕಡೆ ಹೊರಟ ಮಲ್ಲಣ್ಣ.

ಅವನು ಹೋದ ಒಂದೆರಡು ಕ್ಷಣಗಳಲ್ಲಿಯೇ ಅವನ ಮಡದಿ ಕಣ್ಣು ತೆರೆದಳು. ಗಂಡ ದೂರದಲ್ಲಿ ಹೋಗುತ್ತಿದ್ದುದನ್ನು ನೋಡಿದಳು.

ಗಡಿಗೆ, ಕೊಡ, ಕೈ ದೀಪ ಇವೆಲ್ಲಾ ಒಯ್ಯುತ್ತಿದ್ದುದರಿಂದ ರಾತ್ರಿ ಅವರಾಡಿದ 'ಚುರುಕು ತಗಲಿಸಬೇಕು, ಬಿಸಿ ಮೂಡಿಸಬೇಕು' ಮೊದಲಾದ ಮಾತುಗಳಿಂದ ನೀರನ್ನು ಚೆನ್ನಾಗಿ ಕಾಯಿಸಿ ಅವನ ಮೇಲೆ ಎರಚ ಹೊರಟಿದ್ದಾರೆಂದು ಆಕೆಗೆ ದೃಢವಾಗಿಬಿಟ್ಟಿತು.

ಬಡವರ ಮಗು 'ಅಂಥವರಿಗೆ ಏನು ಮಾಡಿದರೂ ಯಾರೂ ಕೇಳುವುದಿಲ್ಲ. ಊರ ಶ್ಯಾನಭೋಗನೋ' ಅವನು ಯಾವಾಗಲೂ ತನ್ನ ಯಜಮಾನರ ಹೊಗಳು ಭಟ್ಟಂಗಿ. ಅವರು ನೀಡುವ ಎಂಜಲು ಕಾಸಿಗೆ ಬಾಯಲ್ಲಿ ಜೊಲ್ಲು ಸುರಿಸುವ ಹೀನ ನಾಯಿ. ಸರಕಾರವೆಲ್ಲಾ ವೆಂಕಣ್ಣನ ಮಾತಿನಂತೆಯೇ ನಡೆಯುತ್ತದೆ. ಈ ಸರ್ಕಾರದ ಪ್ರತಿನಿಧಿಗಳೇ ಅಷ್ಟು. ಯಾವಾಗಲೂ ಹಣವಂತರ ಪರವೇ. ಧನವಂತರು ಏನು ಮಾಡಿದರೂ ಅವರು ಬೆಂಬಲಿಸುತ್ತಾರೆ.

ಈ ಸಮಯದಲ್ಲಿ ಏನು ಮಾಡಬೇಕೆಂದು ತೋಚಲಿಲ್ಲ ಆಕೆಗೆ. ಕೂಡಲೇ ವೆಂಕಮ್ಮ ವಾಸಿಸುತ್ತಿದ್ದ ಊರಿನ ಇನ್ನೊಂದು ಕೊನೆಯಲ್ಲಿದ್ದ ಹನುಮಪ್ಪನ ಗುಡಿಯತ್ತ ಧಾವಿಸಿದಳು.

ಅದೊಂದು ಪುಟ್ಟ ಗುಡಿ. ಬಾಗಿಲೇ ಇಲ್ಲ ಅದಕ್ಕೆ. ಗರ್ಭಗುಡಿಯ ದ್ವಾರ ಚಿಕ್ಕದಾದರೂ ಮೂರೇ ಗೋಡೆ ಗುಡಿಗೆ. ಗೋಡೆಯ ಕಲ್ಲುಗಳಿಗೆ ಹಾಕಿದ್ದ ಮಣ್ಣಿನ ಮೆದುಗೆ ಉದುರಿಹೋಗಿದೆ. ಅದರ ಮೂಲೆಯೊಂದರಲ್ಲಿ ವೆಂಕಮ್ಮನ ಸಂಸಾರ. ಆಕೆಯ ಸಮಸ್ತ ಸಂಪಾದನೆಯೆಂದರೆ ಒಂದೆರಡು ಒಡಕು ಡಬ್ಬಿಗಳು, ಮಣ್ಣಿನ ಪಾತ್ರೆಗಳು, ಅಡುಗೆ ಮಾಡುತ್ತಿದ್ದುದು ಗುಡಿಯ ಹೊರಗಿನ ಮುಂಭಾಗದಲ್ಲಿಯೆ.

ವೆಂಕಮ್ಮ ಆ ವೇಳೆಗಾಗಲೇ ಎದ್ದು ಗುಡಿಯ ಮುಂದೆ ಕಸ ಗುಡಿಸುತ್ತಿದ್ದಳು. ಮಲ್ಲಣ್ಣನ ಹೆಂಡತಿ ಧಾವಿಸಿ ಬಂದ ರೀತಿ, ಪಡುತ್ತಿದ್ದ ಉಬ್ಬಸ ಮುಖದಲ್ಲಿ ಮೂಡಿದ್ದ ಭೀತಿಯನ್ನು ಕಂಡು ವೆಂಕಮ್ಮ ಹೌಹಾರಿದಳು.

"ವೆಂಕಮ್ಮ, ನಿಮ್ಮ ಭಾಗಣ್ಣ ಆಗಲೇ ಪೂಜೆಗೆ ಹೋದನೆ?"

"ಇಲ್ಲಮ್ಮಾ, ಇನ್ನೂ ಪೂಜೆಗೆ ಬರುವುದು ಬಹಳ ಹೊತ್ತಾಗುತ್ತದೆ" ಹೇಳಿದಳು ವೆಂಕಮ್ಮ.

"ಹಾಗಾದರೆ ಭಾಗಣ್ಣ ಎಲ್ಲಿ?" ಕೇಳಿದಳು ಆ ಗೃಹಿಣಿ.

"ಸಂಧ್ಯಾವಂದನಕ್ಕೆಂದು ಅರಳಿಮರದ ಹತ್ತಿರ ಹೋಗಿದ್ದಾನೆ."

ಮಲ್ಲಣ್ಣನ ಹೆಂಡತಿಗೆ ಸಂಧ್ಯಾವಂದನವೆಂದರೇನು ಗೊತ್ತು? ಬ್ರಾಹ್ಮಣರ ವಿವಿಧ ಆಚಾರಗಳ ಕಲ್ಪನೆ ಆಕೆಗೆ ಹೇಗೆ ಹೊಳೆದೀತು? 'ಸಂಧ್ಯಾವಂದನೆ ಎನ್ನುವುದು ಪೂಜೆ ಎನ್ನುವುದು ಎಲ್ಲಾ ಒಂದೆ' ಎಂದು ಆಕೆಯ ಕಲ್ಪನೆ. ಆಕೆಯ ಕಲ್ಪನೆಯೇ ಸರಿಯೇನೋ!

ಆದರೆ ವಿವರಗಳನ್ನು ಹೆಚ್ಚು ತಿಳಿಯುವ ಗೋಜಿಗೆ ಆಕೆ ಹೋಗಲಿಲ್ಲ.

ಆತುರಾತುರವಾಗಿ ಹೇಳಿದಳು

"ನಿನ್ನ ಮಗನ ತಪಸ್ಸು ಕೆಡಿಸಿ, ಪೂಜೆಯನ್ನು ಧ್ವಂಸ ಮಾಡಲು ನಮ್ಮ ಯಜಮಾನರು ಭಾರೀ ಕೋಪದಿಂದ ಹೋಗಿದ್ದಾರೆ. ನೀರನ್ನು ಚೆನ್ನಾಗಿ ಮರಳಿಸಿ ಆ ಕಂದನ ಮೇಲೆ ಚಲ್ಲುವ ಯೋಚನೆ ಅವರದು. ಅನ್ಯಾಯವಾಗಿ ನಿನ್ನ ಮಗ ಸತ್ತುಹೋಗುತ್ತಾನೆ. ಬೇಗನೆ ಜನಗಳನ್ನು ಕರೆದುಕೊಂಡು ಹೋಗಿ ನಿನ್ನ ಮಗನನ್ನು ಉಳಿಸುಕೋ ತಾಯಿ"

ಮಲ್ಲಣ್ಣನ ಮಡದಿ ಒಂದೇ ಉಸುರಿಗೆ ಹೇಳಿದ ಈ ಸಂಗತಿಯನ್ನು ಕೇಳಿ ವೆಂಕಮ್ಮ ತತ್ತರಿಸಿಹೋದಳು.

ಮಲ್ಲಣ್ಣ ಹಣವಂತ. ಅವನ ವಿರುದ್ಧ ಹೋಗುವವರು ಆ ಊರಲ್ಲಿ ಬಹಳ ಕಡಿಮೆ ಜನ. ಅದರಲ್ಲಿಯೂ ತಮ್ಮಂಥ ಅನಾಥರ ಪರವಾಗಿ ಯಾರು ತಾನೆ ಮುಂದೆ ಬರುತ್ತಾರೆ? ಮಲ್ಲಣ್ಣನಿಗೆ ಯಾರು ತಿಳಿ ಹೇಳುತ್ತಾರೆ? ಈ ನಸುಕಿನ ಜಾವ ಯಾರು ತನ್ನ ಹಿಂದೆ ಬರುತ್ತಾರೆ?

ರೋದಿಸಿತು ತಾಯಿಯ ಹೃದಯ. ಅದರಲ್ಲಿಯೂ ಒಂದು ಉಪಾಯ ಹೊಳೆಯಿತು. ಮಾತೃಹೃದಯಕ್ಕೆ.

ಓಡಿ ಬಿಟ್ಟಳು ಶ್ಯಾನಭೋಗ ಗುಂಡಪ್ಪನವರ ಮನೆಗೆ.

ಗುಂಡಪ್ಪನವರು ಆಗ ತಾನೇ ಎದ್ದು ಹಸುಗಳಿಗೆ ಹುಲ್ಲು ಹಾಕುತ್ತಿದ್ದರು.

ಇಬ್ಬರು ಹೆಂಗಸರು ಏಕಕಾಲಕ್ಕೆ ಬಂದು - ಹೇಳಿದ ಸಂಗತಿ ಕೇಳಿ ಅವರು ಹೌಹಾರಿದರು.

ಮಲ್ಲಣ್ಣನ ಸ್ವಭಾವ ಅವರಿಗೆ ಚೆನ್ನಾಗಿ ಗೊತ್ತಿತ್ತು. ಯಾರು ಹೇಳಿದರೂ ಅವನು ಕೇಳುವವನಲ್ಲ ಎಂಬುದು ಅವರಿಗೆ ಅನುಭವವಾಗಿದೆ. ಏನು ಮಾಡಬೇಕು ಈಗ?

"ನೀವೇ ನಮ್ಮ ಹುಡುಗನಿಗೆ ಉಪನಯನ ಮಾಡಿದಿರಿ. ಗಾಯತ್ರಿ ಮಂತ್ರದ ಮಹಿಮೆಯನ್ನು ಮನದಟ್ಟಾಗಿಸಿದಿರಿ. ಸಕಲ ಅನಿಷ್ಟಗಳು ನಿವಾರಣೆಯಾಗಿ, ಸರ್ವ ಇಷ್ಟಾರ್ಥಗಳೂ ಸಿದ್ಧಿಸಬೇಕಾದರೆ ಗಾಯತ್ರಿ ಮಂತ್ರವೊಂದರಿಂದ ಮಾತ್ರ ಸಾಧ್ಯ

ಎಂದು ನೀವು ಹೇಳಿದ್ದು ನಮ್ಮ ಹುಡುಗನಿಗೆ ಚೆನ್ನಾಗಿ ಹಿಡಿದುಬಿಟ್ಟಿದೆ. ಆ ದಿನದಿಂದ ಗಾಯತ್ರಿ ಮಂತ್ರದ ಪುರಶ್ಚರಣಕ್ಕೆ ನಿಂತುಬಿಟ್ಟಿದ್ದಾನೆ. ಬೆಳಗಿನ ಜಾವ ನಾಲ್ಕು ತಾಸಿಗೇ ಸಂಧ್ಯಾವಂದನಕ್ಕೆ ಹೋಗುವ ವಿಷಯ ನಿಮಗೆಲ್ಲಾ ಗೊತ್ತಿದೆ. ಗುಡಿಯಲ್ಲಿಯೇ ಮಾಡಪ್ಪ ಎಂದರೆ ಅವನು ಕೇಳುವುದಿಲ್ಲ. ತಮ್ಮಂದಿರು ಮಲಗಿರುತ್ತಾರೆ. ಇರುವ ಜಾಗ ಬಹಳ ಸ್ವಲ್ಪ. ಬಯಲಿಗೆ ಹೋಗಿ ಮಾಡುವುದೇ ಸರಿ ಎಂದು ವಾದಿಸುತ್ತಾನೆ. ಹಾಗೆಯೇ ಅವನಿಗೆ ಪ್ರೇರಣೆಯಂತೆ. ನಾರಾಯಣ ಒಳಗೆ ಕಾಣಿಸಿಕೊಂಡು ಹೊರಗೂ ವ್ಯಾಪಿಸುತ್ತಾನಂತೆ. ವ್ಯಾಪಿಸುವ ಪರಮಾತ್ಮನಿಗೆ ಗೋಡೆ ಅಡ್ಡ ಬರುತ್ತದಂತೆ. ಏನೇನೋ ಹೇಳಿ ಆಕಾಶದ ಕೆಳಗೆ ಬಯಲಿನಲ್ಲಿ ಮಾಡುವುದೇ ತನಗೆ ಇಷ್ಟ ಎಂದು ವಾದಿಸಿ ಹೋಗುತ್ತಿದ್ದಾನೆ. ಹೋಗಲಿ; ಬೇಗ ಬರುತ್ತಾನೆಯೇ? ಬಹಳ ಹೊತ್ತು ಕುಳಿತುಬಿಡುತ್ತಾನೆ. ಹೊರ ಪ್ರಪಂಚದ ಪರಿವೆಯೇ ಇರುವುದಿಲ್ಲ. ಜನರು ಏನು ಮಾತನಾಡಿಸಿದರೂ ಎಚ್ಚರಗೊಳ್ಳುವುದಿಲ್ಲ. ನಾನೇ ಹೋಗಿ ಅವನನ್ನು ಎಬ್ಬಿಸಲು ಪ್ರಯತ್ನಿಸಿ ಸೋತು ಬಂದಿದ್ದೇನೆ. ಈ ದಿನ ಮಲ್ಲಣ್ಣ ಏನಾದರೂ ಹೇಳಿದರೆ ಇವನಿಗೆ ಗೊತ್ತಾಗುವುದಿಲ್ಲ. ಏನೇನು ಅನಾಹುತ ಆಗಲಿದೆಯೋ ! ನೀವೇ ಕಾಪಾಡಬೇಕು ಗುಂಡಪ್ಪನವರೆ'' ಕಾಲು ಹಿಡಿದು ಗೋಳಾಡಿಬಿಟ್ಟಳು ವೆಂಕಮ್ಮ.

ಗುಂಡಪ್ಪನವರು 'ಸರಿ' ಎಂದು ಹೊರಗೆ ಬಂದರು.

"ರಾಮಣ್ಣಾ, ಭೀಮಣ್ಣಾ ಬನ್ರೋ. ಊರ ಹೊರಗಿನ ಭಾವಿಯ ಬಳಿ ಮಲ್ಲಣ್ಣ ನಮ್ಮ ವೆಂಕಮ್ಮನ ಮಗನನ್ನು ಚಚ್ಚಿಹಾಕಲು ಹೋಗಿದ್ದಾನೆ."

ಗುಂಡಪ್ಪನವರ ಕೂಗು ಕೇಳಿದವರೇ ಮನೆಯಲ್ಲಿದ್ದ ಆಳುಕಾಳುಗಳು ಕೈಯಲ್ಲಿ ಕೋಲು ಹಿಡಿದು ಹೊರಬಂದರು.

ಆಳುಕಾಳುಗಳಿಗೂ ಗೊತ್ತಿತ್ತು; ತಮ್ಮ ಧಣಿ ಗುಂಡಪ್ಪನವರಿಗೂ, ಸಾಹುಕಾರ ಮಲ್ಲಣ್ಣನವರಿಗೂ ಸರಿ ಹೋಗುವುದಿಲ್ಲವೆಂದು. ಒಂದು ವೇಳೆ ಏನೋ ಅನಾಹುತವಾದರೆ ಆ ಅಪರಾಧವನ್ನು ಮೊದಲೇ ದ್ವೇಷದಿಂದ ಉರಿಯುತ್ತಿರುವ ಶ್ಯಾನುಭೋಗ ವೆಂಕಣ್ಣನವರು ತಮ್ಮ ಧಣಿಯ ವಿರುದ್ಧ ತಿರುಗಿಸುತ್ತಾರೆ. ಕೊತವಾಲರ ಚಾಟಿ ಏಟು ತಮಗುಂತೂ ತಪ್ಪಿದ್ದಲ್ಲ. ಗುಂಡಪ್ಪನವರಿಗೆ ಮಹಾರಾಜರು ಏನು ಶಿಕ್ಷೆ ನೀಡುತ್ತಾರೋ !

ಯೋಚಿಸಿದ ಆಳುಗಳು ಇಂಥ ಒಂದು ಸನ್ನಿವೇಶದಲ್ಲಿ ಊರ ಜನರು ಸಾಕ್ಷಿ ಇದ್ದರೇ ಸರಿ ಎಂದು ಊಹಿಸಿ "ಬರ್ರೆಪ್ಪೊ ಬರ್ರಿ. ಊರ ಹೊರಗಿನ ಭಾವಿ ಬಳಿ

ತಪಸ್ಸು ಮಾಡುತ್ತಿರುವ ನಮ್ಮೂರಿನ ಹುಡುಗ ಭಾಗಣ್ಣನನ್ನು ಕೊಂದು ಹಾಕಲು ಯಾರೋ ಬೇರೆ ಊರಿನವರು ಹೋಗಿದ್ದಾರಂತೆ. ನಿನ್ನೆ ಹಾವು ಸುತ್ತಿಕೊಂಡರೂ. ಏಳದ ಭಕ್ತ ಭಾಗಣ್ಣನನ್ನು ಅವರು ಕೊಲ್ಲದೆ ಬಿಡುವವರಲ್ಲ. ನಮ್ಮ ಊರಿನ ಹುಡುಗನನ್ನು ಉಳಿಸಿಕೊಳ್ಳೋಣ ಬರ್ರಿ" ಎಂದು ಬೀದಿಯಲ್ಲಿ ಬರುವ ಪ್ರತಿ ಮನೆಯ ಮುಂದೆ ಕೂಗು ಹಾಕಿ ಸಾಗಿದರು. ಹಾವು ಸುತ್ತಿಕೊಂಡರೂ ಏಳದ ಹುಡುಗನ ಬಗ್ಗೆ ಜನರಲ್ಲಿ ಅಭಿಮಾನ ಮೂಡಿತ್ತು. ಅಂಥ ತಪಸ್ವಿಗಳಿಂದ ಗ್ರಾಮಕ್ಕೆ ಸರಿಯಾಗಿ ಮಳೆ ಬಂದು ಉತ್ತಮ ಬೆಳೆ ಬರುತ್ತದೆ ಎಂದು ಹಿಂದಿನ ದಿನ ತರ್ಕಿಸಿದ್ದರು.

ಈಗ ಯಾರೋ ಬೇರೆ ಊರಿನವರು ತಮ್ಮ ಹುಡುಗನನ್ನು ಹೊಡೆಯಲು ಬಂದಿದ್ದಾರೆಂದು ಕೇಳಿದ ಆ ಜನ - ಗುಂಪು ಗುಂಪಾಗಿ ಕೇಕೆ ಹಾಕುತ್ತಾ ಗುಂಡಪ್ಪ ನವರನ್ನು ಹಿಂಬಾಲಿಸಿದರು.

ಜನರೆಲ್ಲಾ ಹೋಗಿ ನೋಡುತ್ತಾರೆ.

ಹುಡುಗನ ಹತ್ತಿರ ತಮ್ಮ ಊರಿನವರೇ ಆದ ಸಾಹುಕಾರ ಮಲ್ಲಣ್ಣನವರು ಭಯಂಕರ ಉಗ್ರರಾಗಿ ನಿಂತಿದ್ದಾರೆ. ಕೈಯಲ್ಲಿ ಎತ್ತಿರುವ ಗಡಿಗೆಯಿಂದ ಉಗಿ ಬರುತ್ತಿದೆ. ಅದರ ತಳವನ್ನು ಬಟ್ಟೆ ಬಳಸಿ ಎತ್ತಿರುವ ಮಲ್ಲಣ್ಣ ಕಣ್ಣಲ್ಲಿ ಕೆಂಡ ಕಾರುತ್ತಾ ನಿಂತಿದ್ದಾರೆ.

ಜನರನ್ನು ನೋಡಿ ಭೀತಿಗೊಳ್ಳಲಿಲ್ಲ ಮಲ್ಲಣ್ಣ. ಅವರೆಲ್ಲಾ ತನ್ನ ಊರಿನವರೆ ಅವರ್‍ಯಾರೂ ತನ್ನ ವಿರುದ್ಧ ಕೋಲು ಎತ್ತಲಾರರು. ಆದರೂ ಕೂಗಿ ಹೇಳಿದ ಮಲ್ಲಣ್ಣ.

"ಯಾರೂ ಹತ್ತಿರ ಬರಬೇಡಿ. ಈ ಹುಡುಗನ ಠಕ್ಕುತನವನ್ನು ಬಯಲಿ ಗೆಳೆಯುತ್ತೇನೆ. ಕಳ್ಳ ಇವನು. ನಾನು ಬಂದಾಗ ಎದ್ದು ನಿಂತಿದ್ದ. ಸಣ್ಣ ಸೌಟಿನಿಂದ ಸ್ವಲ್ಪ ಸ್ವಲ್ಪ ನೀರು ಕುಡಿದ. ತಾನೇ ಸುತ್ತು ಹಾಕಿದ. ಸುತ್ತೆಲ್ಲಾ ನೀರು ಚೆಲ್ಲಿಕೊಂಡ. ಅಂಗಾಂಗಳನ್ನೆಲ್ಲಾ ಮುಟ್ಟಿಕೊಂಡ. ಸುಮ್ಮನೆ ಬಹಳ ಹೊತ್ತು ನಿಂತಿದ್ದ. ಈಗ ತಾನೇ ಕುಳಿತುಕೊಂಡಿದ್ದಾನೆ. ಇವನಿಗೆ ನಾನೇ ಕೂಗಿ ಹೇಳಿದೆ. ಉತ್ತರಿಸದಿದ್ದರೆ ಬಿಸಿ ನೀರನ್ನು ಚೆಲ್ಲುತ್ತೇನೆಂದು ಎಚ್ಚರಿಸಿದೆ. ಆದರೂ ಈ ಕಳ್ಳ ನನ್ನೆಡೆಗೆ ನೋಡಲಿಲ್ಲ. ಇಲ್ಲಿಯೇ ಒಲೆ ಹಚ್ಚಿ ನೀರು ಕಾಸುತ್ತಿದ್ದಾಗಲೂ ಸುಮ್ಮನೆ ಬೆದರಿಸುತ್ತಿದ್ದಾನೆಂದು ಭಾವಿಸಿ ಕಳ್ಳನಂತೆ ಕುಳಿತಿದ್ದಾನೆ. ಈಗ ತೋರಿಸುತ್ತೇನೆ ಇವನ ತಪಸ್ಸಿನ ಪರಿಯೇನೆಂದು! : ಇಂಥ ಕಳ್ಳ ತಪಸ್ಸಿನಿಂದಲೇ ಹಾವು ಸಿಟ್ಟಿಗೆದ್ದು ನಿನ್ನೆ ಇವನನ್ನು ಸುತ್ತಿಕೊಂಡಿತ್ತು.

ಅದು ಬಂದು ಎಚ್ಚರಿಸಿದರೂ ಈ ಭಡವ ತನ್ನ ಆಟ ಮುಂದುವರಿಸಿದ್ದಾನೆ. ಇವನನ್ನು ಹೀಗೆಯೇ ನಡೆಯಬಿಟ್ಟರೆ ನಾಳೆ ಹಾವುಗಳು ಮನೆ ಮನೆಗೂ ನುಗ್ಗಿ ಬಿಟ್ಟಾವು. ಊರಿಗೇ ಅನಿಷ್ಟ ಬಡೆದೀತು. ಅದನ್ನು ತಪ್ಪಿಸುವುದಕ್ಕಾಗಿಯೇ ನಾನು ಇಲ್ಲಿಗೆ ಬಂದಿದ್ದೇನೆ. ಗ್ರಾಮದ ಕ್ಷೇಮಕ್ಕಾಗಿ ಹೀಗೆ ಮಾಡುತ್ತಿದ್ದೇನೆ. ಯಾರಾದರೂ ಅಡ್ಡಿ ಬಂದರೆ ಅವರ ಮೇಲೆಯೇ ಈ ನೀರನ್ನು ಚಲ್ಲಿಬಿಡುತ್ತೇನೆ. ಹುಷಾರ್" - ದೈತ್ಯಾವೇಶ ತುಂಬಿತ್ತು ಅವನಲ್ಲಿ. ಮುಖದಲ್ಲಿ ರಾವು ರಾವು ಹೊಡೆಯುತ್ತಿತ್ತು.

ಊರಿನ ಕ್ಷೇಮದ ಬಗ್ಗೆ ಮಾತನಾಡಿದ್ದರಿಂದಲೋ ಅಥವಾ ಕೈಯಲ್ಲಿ ಹೊತ್ತಿರುವ ಬಿಸಿ ನೀರಿನ ಬಗ್ಗೆ ಭೀತಿಯಿಂದಲೋ ಧಾವಿಸಿ ಬಂದ ಜನರು ಸ್ವಲ್ಪ ಹಿಂದೆ ಮುಂದೆ ನೋಡುತ್ತಾ ದೂರದಲ್ಲಿಯೇ ನಿಂತುಕೊಂಡರು.

ಗುಂಡಪ್ಪನವರು ಮಾತ್ರ ಧೈರ್ಯವಾಗಿ ಹೇಳಿದರು "ಆ ಹುಡುಗ ಮಾಡಿದ್ದು ಮೋಸವಲ್ಲ ಮಲ್ಲಣ್ಣಾ. ಹಾಗೆ ಸ್ವಲ್ಪ ಸ್ವಲ್ಪ ನೀರು ಕುಡಿದದ್ದು, ಎದ್ದು ನಿಂತದ್ದು, ಸುತ್ತೆಲ್ಲಾ ನೀರು ಚೆಲ್ಲಿಕೊಂಡಿದ್ದು ಇವೆಲ್ಲಾ ಸಂಧ್ಯಾವಂದನೆಯ ವಿವಿಧ ಉಪಕರ್ಮಗಳು. ಪೂಜೆಯ ವಿವಿಧ ಅಂಗಗಳು. ಈಗ ಸೂರ್ಯ ಕಾಣಿಸಿಕೊಳ್ಳುತ್ತಿರುವುದರಿಂದ ಕುಳಿತು ಗಾಯತ್ರೀ ಮಂತ್ರ ಜಪಿಸುತ್ತಿದ್ದಾನೆ. ಇದರಲ್ಲಿ ಮೋಸವಾಗಲೀ ಕುಟಿಲವಾಗಲೀ ಏನೂ ಇಲ್ಲ. ಪೂರ್ವಜನ್ಮದ ಪುಣ್ಯ. ಇವನಿಗೆ ಇಂಥ ಏಕ ಮನಸ್ಸು ಸಿದ್ಧಿಸಿದೆ. ಅವನ ಪೂಜೆಯೇನೋ ಅವಸು ಮಾಡಿಕೊಳ್ಳುತ್ತಿದ್ದಾನೆ. ನೀನೇಕೆ ಸಿಟ್ಟಿಗೇಳುತ್ತೀ?."

ಮಲ್ಲಣ್ಣನಿಗೆ ಗುಂಡಪ್ಪನವರನ್ನು ನೋಡಿ ಆವೇಶ ಇನ್ನೂ ಹೆಚ್ಚಿಬಿಟ್ಟಿತು.

"ಓಹೋ, ಇದು ಪೂಜೆಯೋ?" ಎರಡು ಹೆಜ್ಜೆ ಮುಂದೆ ಇಟ್ಟ ಮಲ್ಲಣ್ಣ. ಅವನ ಹಿಂಭಾಗದಲ್ಲಿದ್ದ ಭಾಗಣ್ಣ ಇದಾವುದರ ಪರಿವೆ ಇಲ್ಲದೆ ಕೈಗಳನ್ನು ಬಟ್ಟೆಯಲ್ಲಿ ಮುಚ್ಚಿಕೊಂಡು ತಣ್ಣಗೆ ಕುಳಿತು ಬಿಟ್ಟಿದ್ದಾನೆ.

ಗಾಯತ್ರಿ ಮಂತ್ರದ ಪುರಶ್ಚರಣೆಯ ಪ್ರಭಾವದಿಂದ ಮುಖದಲ್ಲಿ ದಿವ್ಯ ತೇಜಸ್ಸು ರಾರಾಜಿಸುತ್ತಿದೆ.

ಮಲ್ಲಣ್ಣನೇನಾದರೂ ಈಗ ಒಮ್ಮೆ ಆ ಹುಡುಗನ ಮುಖವನ್ನು ನೋಡಿದ್ದರೆ ತನ್ನ ಮನಸ್ಸನ್ನು ಬದಲಿಸುತ್ತಿದ್ದನೇನೋ! ಆದರೆ ಮಲ್ಲಣ್ಣ ನೋಡುತ್ತಿದ್ದುದು ತನ್ನ ಪರಮ ಶತ್ರು ಗುಂಡಪ್ಪನವರ ಮುಖವನ್ನು.

ಮಲ್ಲಣ್ಣನ ಆವೇಶ ಇನ್ನೂ ಹೆಚ್ಚಿತು. ಗಟ್ಟಿಯಾಗಿ ಹೇಳಿದ.

"ಈ ಗುಂಡಪ್ಪ ಹೇಳಿದ ಗಾಯತ್ರೀದೇವಿ. ಈ ಹುಡುಗನ ತಪಸ್ಸು ಎಲ್ಲಾ ನೀವೇ ನೋಡಿ. ಹುಡುಗ ಎದ್ದು ಕೂಗಿ ಕೊಳ್ಳುತ್ತಾ ನನ್ನ ಕಾಲು ಹಿಡಿಯುತ್ತಾನೆ. ಇವನಿಗೆ ನಿಜವಾದ ಬುದ್ಧಿ ಬರುತ್ತದೆ. ನಿನ್ನೆ ನನ್ನ ಮಾತನ್ನು ಅಲ್ಲವೆಂದು ಹೇಳಿದ ಜನರ ಮುಖಕ್ಕೆ ಈಗ ತಾನೇ ನೀರೆರಚಿದಂತಾಗುತ್ತದೆ." ಕೂಗಿ ಹೇಳಿದ ಮಲ್ಲಣ್ಣ. ಗಡಿಗೆಯ ನೀರನ್ನು ಸರ್ರೆಂದು ತಿರುಗಿ ಹುಡುಗನ ಮುಖಕ್ಕೆ ಫಳೀರೆಂದು ಎರಚಿದ.

"ಅಯ್ಯೋ! ಅಯ್ಯಯ್ಯೋ!" ಕೂಗು ಕೇಳಿಸಿತು. ಆದರೆ ಕೂಗಿಕೊಂಡದ್ದು ಭಾಗಣ್ಣನಲ್ಲ. ನಡೆದ ಅನಾಹುತ ಕಂಡ ನೆರೆದಿದ್ದ ಜನರೂ ಅಲ್ಲ.

ಬಿಸಿ ನೀರು ಎರಚಿದ ಮಲ್ಲಣ್ಣನೇ ಆ ರೀತಿ ಕೂಗಿ ಕೊಂಡಿದ್ದ.

ಎರಚಿದ ನೀರು ಬೀಸಿದ ರಭಸಕ್ಕೆ ಎದುರಿನ ಅರಳೀ ಮರದ ಬೊಡ್ಡಿಗೆ ಬಡಿದು ಹಿಂದಕ್ಕೆ ಚಿಮ್ಮಿತ್ತು .

ಭಾಗಣ್ಣನ ಮುಖದ ಮೇಲೆ ದೇಹದ ಮೇಲೆ ಹೊಗೆ ಏಳುತ್ತಿದ್ದರೂ ಆ ಹುಡುಗ ನಿಶ್ಚಲನಾಗಿ ಕುಳಿತಿದ್ದ.

ಅರಳೀ ಮರದ ಬುಡಕ್ಕೆ ರಾಚಿ - ಎದುರು ಚಿಮ್ಮಿದ ನೀರಿನ ಸ್ವಲ್ಪ ಭಾಗ ಮಾತ್ರ ಮಲ್ಲಣ್ಣನ ಮುಖಕ್ಕೆ ತಗುಲಿತ್ತು. ಅಷ್ಟಕ್ಕೇ ಅವನು ಕೂಗಿಕೊಂಡಿದ್ದ. ಹನಿ ಹನಿಯಾಗಿ ಸ್ವಲ್ಪ ಭಾಗ ತಗಲಿದ್ದಕ್ಕೇ ಮಲ್ಲಣ್ಣ ಆ ರೀತಿ ಹಾರಿ ಬಿಟ್ಟಿದ್ದ. ಕಾದ ನೀರಿನ ಪ್ರಖರತೆಯ ಅರಿವು ಈಗ ಅವನಿಗೆ ಮೂಡಿರಬೇಕು. ಮೈಯೆಲ್ಲಾ ಉರಿ. ಕಣ್ಣಿಗೆ ನೀರು ಬಿದ್ದು ತೆಗೆಯಲು ಸಾಧ್ಯವಿಲ್ಲದಂತೆ ಮಾಡಿದೆ. ಉರಿಯ ಪ್ರಖರತೆ ತಾಳಲಾರದೆ ಅವನು ಕೂಗುತ್ತಲೇ ಇದ್ದ.

"ಅಯ್ಯೋ -- ಅಯ್ಯಯ್ಯೋಽಽ--"

ಎಲ್ಲಿ ಹೋಯಿತು ಮಲ್ಲಣ್ಣನ ಆವೇಶ? ಈಗ ಆಕ್ರಂದನವಾಗಿ ಏಕೆ ಪರಿವರ್ತನೆಗೊಂಡಿದೆ? ಎರಚಿದ ನೀರು ಎದುರು ಚಿಮ್ಮಿ ಇಷ್ಟು ವೇದನೆಯಾಗಿರಬೇಕಾದರೆ ಬಿಸಿನೀರಿಗೆ ನೇರವಾಗಿ ಮೈಯೊಡ್ಡಿದ ಭಾಗಣ್ಣನೇಕೆ ಅಲ್ಲಾಡದೆ ಕುಳಿತಿದ್ದಾನೆ?

ಜನರಿಗೆ ವಿಷಯ ತಿಳಿಯಲಿಲ್ಲ. ತಿಳಿಯುವಂಥ ವಿಷಯವೂ ಅದಾಗಿರಲಿಲ್ಲ.

ತನ್ನ ಕಣ್ಣಲ್ಲಿ ಬಿದ್ದಿದ್ದ ನೀರಿನಿಂದ ಸುಟ್ಟುಕೊಂಡು ಕಣ್ಣು ಮುಚ್ಚಿಕೊಂಡಿದ್ದ ಮಲ್ಲಣ್ಣ ಮೈಯೆಲ್ಲಾ ಉರಿಯುತ್ತಿದೆ ಎಂದು ಬೊಬ್ಬೆ ಹೊಡೆಯುತ್ತಾ ಕುಸಿದು ಬಿದ್ದ.

ಗುಂಪಿನಲ್ಲಿದ್ದ ಮಲ್ಲಣ್ಣನ ಹೆಂಡತಿ ಓಡಿ ಬಂದು ಗಂಡನನ್ನು ಹಿಡಿದು ಕೊಂಡಳು.

'ಆಹಾಹಾ, ಏನು ತಪಸ್ಸಿನ ಪ್ರಭಾವ?' ಎಂದು ಜನ ಆಶ್ಚರ್ಯಪಡುತ್ತಾ ಮಲ್ಲಣ್ಣನನ್ನು ಎತ್ತಿ ಕೊಂಡು ಗ್ರಾಮದೊಳಕ್ಕೆ ಸಾಗಿದರು.

ಇದಾವುದರ ಪರಿವೆ ಇಲ್ಲ ಬಾಲಕ ಭಾಗಣ್ಣನಿಗೆ.

'ಧೀಯೋ ಯೋನಃ ಪ್ರಚೋದಯಾತ್'

ಎಂದು ಜಪಿಸುತ್ತಿದ್ದ ಭಾಗಣ್ಣ-ಅವನಲ್ಲಿಯ ಪ್ರಚೋದನಾ ಶಕ್ತಿ ಅವನನ್ನು ಶ್ರೇಷ್ಠ ಗಮ್ಯದತ್ತ ಸಾಗಿಸಿಕೊಂಡು ಹೋಗುತ್ತಿತ್ತು.

ಪ್ರಾಣೋಪಾನ, ವ್ಯಾನೋಽದಾನ, ಸಮಾನ, ಸಪ್ರಾಣ ಎಲ್ಲೆಲ್ಲೂ ಒಂದೇ ರೂಪ. ಒಳಗೂ ಹೊರಗೂ ಮೇಲೂ ಕೆಳಗೂ ಅತಿಶ್ರೇಷ್ಠ ರೂಪದ ಚಿಂತನೆ ಸಾಗಿತ್ತು. ಲೌಕೀಕದ ಈ ಕನಿಷ್ಠ ಘಟನೆಗಳ ಪರಿವೆ ಇಲ್ಲದೆ ಕುಳಿತಿದ್ದ ಬಾಲಕನಿಗೆ ವಂದಿಸಿ- ಮಲ್ಲಣ್ಣನನ್ನು ಹೊತ್ತುಕೊಂಡು ಹೋದರು ಜನರು.

೩

ಮಲ್ಲಣ್ಣ ಚೆಲ್ಲಿದ ಬಿಸಿನೀರಿನಿಂದ ಬಾಲಕ ಭಾಗಣ್ಣನಿಗೆ ಯಾವ ಹಾನಿಯೂ ಆಗಿಲ್ಲದ್ದನ್ನು ನೂರಾರು ಜನರು ನೋಡಿದ್ದರು. ಪ್ರತ್ಯಕ್ಷವಾಗಿ ನೋಡಿದ ಈ ಘಟನೆಯಿಂದ ಯಾರಲ್ಲಿಯೂ ಸಂಶಯ ಉಳಿಯಲಿಲ್ಲ. ಆದರೆ ಭಾಗಣ್ಣನಿಗೆ ಏನಾದರೂ ಆಗಿರಬೇಕೆಂದು ಸಂಶಯಿಸಿದವರು ಇಡೀ ಗ್ರಾಮದಲ್ಲಿ ಇಬ್ಬರೇ ಇಬ್ಬರು ಮಾತ್ರ. ಗಾಯಿತ್ರೀ ಮಂತ್ರ ಪುರಶ್ಚರಣೆಯ ಮಹತ್ವವನ್ನು ಕೇಳಿದ್ದರೂ ವೈಯಕ್ತಿಕವಾಗಿ ಮಲ್ಲಣ್ಣನನ್ನು ಬೆಂಬಲಿಸಿ ಅವನಿಂದ ಏನಾದರೂ ಗಿಟ್ಟಿಸಲು ಪ್ರಯತ್ನಿಸುವ ಶ್ಯಾನಭೋಗ ವೆಂಕಣ್ಣನವರೊಬ್ಬರು.

ಇನ್ನೊಬ್ಬರೆಂದರೆ ಮಾತೃಮೂರ್ತಿ ಮಮತೆಯ ಗಣಿ ವೆಂಕಮ್ಮ ಮಾತ್ರ.

ತಾಯಿ ಹೃದಯವೇ ಅಷ್ಟು. ಮಗನು ಎಷ್ಟೇ ದೊಡ್ಡವನಾದರೂ ಅವನಿನ್ನೂ ಕಂದ. ಅವನಿಗೆ ಏನಾದರೂ ಹಾನಿಯಾದೀತು ಎಂದು ಸಂಶಯಿಸುತ್ತದೆ ಮಮತೆಯ ಹೃದಯ.

ಪುಟ್ಟ ಕಂದನಿರುವಾಗಲೇ ಪೂತನಿಯಂತ ಹತ್ತಾರು ರಾಕ್ಷಸರನ್ನು ಸಂಹರಿಸಿದ್ದನ್ನು ಕಣ್ಣಾರೆ ನೋಡಿಯೂ ಶ್ರೀಕೃಷ್ಣನ ಅಗಾಧಶಕ್ತಿಯ ಬಗ್ಗೆ ತಾಯಿ ಯಶೋದೆಗೆ ನಂಬಿಕೆ ಬರಲಿಲ್ಲ. ಮಣ್ಣು ತಿಂದು ಹೊಟ್ಟೆನೋವು ತಂದುಕೊಳ್ಳು ತ್ತಾನೆಂದು ಭ್ರಮಿಸಿ ಬಾಯಿಯಲ್ಲಿಯ ಮಣ್ಣನ್ನು ತೆಗೆಯಲು ಪ್ರಯತ್ನಿಸಿದ್ದಳು. ಬಾಯಿಯಲ್ಲಿ ಈರೇಳು ಲೋಕಗಳನ್ನು ನೋಡಿದ ಮೇಲೆಯೂ ಕಂದನಿಗೆ ಹಾನಿಯಾದೀತೆಂಬ ಬೆದರಿಕೆ ಆಕೆಯಿಂದ ದೂರವಾಗಲಿಲ್ಲ.

ವೆಂಕಮ್ಮ ಗಾಯಿತ್ರೀ ಮಂತ್ರದ ಮಹಿಮೆಯನ್ನು ಕೇಳಿದ್ದಳು. ಮಗನು ನಿಷ್ಣಾತನಾಗಿ ಸಾಧನೆ ಮುಂದುವರಿಸಿದ್ದಾನೆಂಬ ವಿಷಯ ಆಕೆಗೆ ಗೊತ್ತಿತ್ತು. ಇತ್ತೀಚಿನ ಆತನ ವರ್ತನೆಯೊಂದಿಗೆ ಹಿಂದಿನ ದಿನವಷ್ಟೇ ಹೊಟ್ಟೆಗೆ ಸುತ್ತಿಕೊಂಡ ಹಾವು ಏನೂ ಹಾನಿ ಮಾಡದೆ ಹೋಗಿದ್ದನ್ನು ಕೇಳಿದ್ದಳು. ಹಾಗಿದ್ದರೂ ಮಲ್ಲಣ್ಣನ ಬಿಸಿನೀರು ಏನು ಮಾಡಲಾರದೆಂಬ ನಂಬಿಕೆ ಮಾತ್ರ ಆಕೆಗೆ ಮೂಡಲಿಲ್ಲ.

ಜನರು ಮಲ್ಲಣ್ಣನನ್ನು ಹೊತ್ತುಕೊಂಡು ದೂರ ಸಾಗಿದ ಮೇಲೆ ವೆಂಕಮ್ಮ ಪುನಃ ಹಿಂದಿರುಗಿ ಭಾಗಣ್ಣನ ಬಳಿ ಬಂದಳು.

ಆಕೆ ಬರುವಷ್ಟರಲ್ಲಿ ಮಗನು ಎದ್ದು ನಿಂತಿದ್ದ. ಕೈಗಳನ್ನು ಮೇಲಕ್ಕೆ ಚಾಚಿ ಸುತ್ತಲೂ ಪ್ರದಕ್ಷಿಣೆ ಹಾಕುತ್ತಿದ್ದ. ಅವನು ದಿಗ್ದೇವತೆಗಳಿಗೆ ನಮಸ್ಕರಿಸುತ್ತಿದ್ದಾನೆಂದು ಮಾತ್ರ ವೆಂಕಮ್ಮನಿಗೆ ತಿಳಿಯಲಿಲ್ಲ.

ಪೂರ್ವದಿಕ್ಕಿನಲ್ಲಿರುವ ಇಂದ್ರ ಶಚಿಗಳಿಗೂ ಅವರಿಂದ ಪೂಜೆಗೊಳ್ಳುತ್ತಿರುವ ಸರ್ವೋತ್ತಮ ಶ್ರೀ ವಾಮನಮೂರ್ತಿಗೂ, ದಕ್ಷಿಣ ದಿಕ್ಕಿನಲ್ಲಿ ಯಮ ಶ್ಯಾಮಲೆ ಯರಿಗೂ, ಅವರಿಂದ ಪೂಜೆಗೊಳ್ಳುತ್ತಿರುವ ಶ್ರೀ ರಾಮಚಂದ್ರನಿಗೂ, ಪಶ್ಚಿಮ ದಿಕ್ಕಿನಲ್ಲಿ ವರುಣ ಭಾಗಿರಥಿಯರಿಗೂ, ಅವರಿಂದ ಆರಾಧಿಸಲ್ಪಡುತ್ತಿರುವ ನಾರಾಯಣ ನಿಗೂ, ಉತ್ತರ ದಿಕ್ಕಿನಲ್ಲಿ ಚಂದ್ರ ರೋಹಿಣಿ ಕುಬೇರ ಭದ್ರೆಯರಿಗೂ, ಪರಮಾತ್ಮನ ಕಲ್ಕಿ ರೂಪಕ್ಕೂ ಹೀಗೆ ದಿಕ್ಕು ದಿಕ್ಕುಗಳಲ್ಲಿಯ ಅಭಿಮಾನಿ ದೇವತೆಗಳಿಗೂ ಅವರ ಅಂತರ್ಯಾಮಿಯಾಗಿರುವ ಪರಮಾತ್ಮನ ವಿವಿಧ ರೂಪಗಳಿಗೂ ನಮಸ್ಕರಿಸುತ್ತಾ ಅನುಸಂಧಾನಯುಕ್ತವಾಗಿ ಮಗನು ಪ್ರದಕ್ಷಿಣೆ ಹಾಕುತ್ತಿದ್ದಾನೆಂದು ಮಾತ್ರ ವೆಂಕಮ್ಮನಿಗೆ ತಿಳಿಯಲಿಲ್ಲ. ಇವೆಲ್ಲಾ ಸಂಧ್ಯಾವಂದನದ ವಿವಿಧ ಅಂಶಗಳು ಎನ್ನುವ ವಿಷಯ ಆ ವೆಂಕಮ್ಮನಿಗೆ ಹೇಗೆ ಗೊತ್ತಾಗಬೇಕು?

ಮಗನು ಕೈಗಳನ್ನು ಮೇಲಕ್ಕೆತ್ತಿ ನಿಧಾನವಾಗಿ ಸುತ್ತುತ್ತಿದ್ದರೆ ಕಾಲಿಗೆ ಏನೋ ಆಗಿದೆಯಾದ್ದರಿಂದ ಪ್ರದಕ್ಷಿಣೆ ಹಾಕಲು ಬರುತ್ತಿಲ್ಲ ಎಂಬ ತರ್ಕ ವೆಂಕಮ್ಮನದು.

ಆದರೆ ಏನು ಮಾಡುವುದು? ಏನಾಗಿದೆ ಕಂದಾ ಎಂದು ಕೇಳಲು ಮಗನ ಪೂಜೆಗೆ ಅಡ್ಡಿಯಾಗುತ್ತದೆಂಬ ಭೀತಿ. ನೂರಾರು ಜನರು ಬಂದು, ಬೇಕಾದಷ್ಟು ಗದ್ದಲವಾಗಿ, ಮೈ ಮೇಲೆ ಬಿಸಿ ನೀರು ಬಿದ್ದಾಗಲೂ ಎಚ್ಚರಗೊಳ್ಳದಿದ್ದ ಮಗ ತನ್ನ ಪ್ರಶ್ನೆಗೆ ಉತ್ತರಿಸಲು ಎಚ್ಚರಗೊಳ್ಳಲಾರ ಎಂಬ ವಿಷಯ ಆಕೆಗೆ ಹೊಳೆಯಲಿಲ್ಲ.

ಮಗನ ಸಾಧನೆಗೆ ಅಡ್ಡಿಯಾಗಲಿಲ್ಲ. ಹಾಗೆಯೇ ಕಾದು ಕುಳಿತಳಾಕೆ.

ಬಹಳ ಹೊತ್ತಿನ ಮೇಲೆ ಮೂರು ಸಲ ಆಪೋಶನ ತೆಗೆದುಕೊಂಡು ಕೈ ಮುಗಿಯುತ್ತಾ ಕಣ್ಣು ತೆಗೆದಿದ್ದನ್ನು ನೋಡಿದ ಮೇಲೆ ಆಕೆಗೆ ಸಮಾಧಾನವಾಯಿತು.

"ಏನಮ್ಮಾ, ಏಕೆ ಬಂದೆ ?" ಪ್ರಶ್ನಿಸುತ್ತಾ ಭಾಗಣ್ಣ ಬಂದು ತನಗೆ ನಮಸ್ಕರಿಸಿದ ಮೇಲೆ ವೆಂಕಮ್ಮ ಸಮಾಧಾನದ ಉಸಿರುಬಿಟ್ಟಳು.

"ಏನಿಲ್ಲಪ್ಪಾ, ನಿನ್ನನ್ನು ನೋಡಿ ಹೋಗಲು ಬಂದೆ. ನಿನಗೇನೂ ಹಾನಿಯಾಗಿಲ್ಲ ವಷ್ಟೇ?" ಮಗನ ತಲೆ ನೇವರಿಸುತ್ತಾ ಕೇಳಿದಳು ವೆಂಕಮ್ಮ.

"ನನಗೇನಮ್ಮಾ ಆಗಲಿಕ್ಕೆ? ನಾಭಿಯ ಎಡ ಭಾಗದಲ್ಲಿ ಕುಳಿತು ಪಾಪ ಕಾರ್ಯ ಗಳನ್ನು ಪ್ರೇರೇಪಿಸುವ ಭೂತವನ್ನು ಉಚ್ಚಾಟನೆ ಮಾಡಿ, ಸುತ್ತೆಲ್ಲಾ ಮಂತ್ರಜಲ ದಿಂದ ಭದ್ರಕೋಟೆ ಕಟ್ಟಿ, ಗಾಯಿತ್ರೀ ನಾಮದ ಪರಮಾತ್ಮನ ಚಿಂತನೆ ನಡೆಸು ತ್ತಿರುವಾಗ ಎಲ್ಲಿಯಾದರೂ ಹಾನಿಯಾಗಲಿಕ್ಕುಂಟೆ? ಆಂಜನೇಯ ಅಂತರ್ಗತನಾದ ಪರಮಾತ್ಮನಿಗೆ ಸೇವೆ ಸಲ್ಲಿಸುವಾಗ ಅಡ್ಡಿ ಬರಲು ಯಾವ ದೈತ್ಯರಿಗೆ ಸಾಧ್ಯ? ಹಾನಿ ಯಾಗಲಿಕ್ಕೆ ದಾರಿ ಎಲ್ಲಿದೆ?" ತಾಯಿಯ ಪ್ರಶ್ನೆಗೆ ಮಗನೂ ಪ್ರತಿ ಪ್ರಶ್ನೆ ಹಾಕಿದ.

ಸಂಧ್ಯಾವಂದನದ ರೀತಿ ನೀತಿ, ಚಿಂತನೆಯ ಶ್ರೇಷ್ಠ ಮಾರ್ಗ, ಅದರಿಂದ ಸಿಕ್ಕುವ ಫಲದ ಮಹಿಮೆ, ಪಾಪ ಹೆಂಗಸು ವೆಂಕಮ್ಮನಿಗೆ ಹೇಗೆ ತಿಳಿಯಬೇಕು?

ಹೌದು, ಆ ಗ್ರಾಮದಲ್ಲಿ ಯಾರಿಗೆ ತಿಳಿಯುತ್ತದೆಂದು ವೆಂಕಮ್ಮನಿಗೆ ತಿಳಿಯಲಿಲ್ಲವೆಂದು ಹೇಳಬೇಕು? ಗಾಯತ್ರಿ ಮಂತ್ರವನ್ನು ಕಿವಿಯಲ್ಲಿ ಉಸಿರಿ ಬೋಧಿಸಿದ ಶ್ಯಾನಭೋಗ ಗುಂಡಪ್ಪನವರಿಗೇ ತಿಳಿಯಲಿಲ್ಲ. ಅವರೇ ಅವನಿಗೆ ಹಾನಿಯಾದೀತೆಂದು ಓಡಿ ಬಂದಿದ್ದರು. ಪ್ರತಿನಿತ್ಯ ತ್ರಿಕಾಲದಲ್ಲಿ ಸಂಧ್ಯಾವಂದನೆ ಮಾಡುತ್ತಿರುವ ಗುಂಡಪ್ಪನಿವರಿಗೇ ಮಂತ್ರದ ಮಹತ್ತು ತಿಳಿಯಲಿಲ್ಲ. ಹೇಳುವ ಮಂತ್ರಗಳು, ತದ್ ಮೂಲಕ ಋಷಿಗಳೊಂದಿಗೆ ಆಹ್ವಾನಿಸುವ ದೇವತೆಗಳು ಎಲ್ಲಾ ಅರ್ಥ ಗೊತ್ತಿರುವ ಗುಂಡಪ್ಪನವರೇ ಅವಸರಿಸಿ ಬಂದಿರುವಾಗ ಗ್ರಾಮದ ನೂರಾರು ಜನರಿಗೆ ಅರ್ಥವಾಗಲಿಲ್ಲವೆಂದು ಏಕೆ ವ್ಯಾಖ್ಯಾನಿಸಬೇಕು?

ಮಂತ್ರ ಹೇಳಿದರೆ ಸಾಲದು. ಅದರ ಅರ್ಥ ಗ್ರಹಿಸಬೇಕು. ಅರ್ಥ ತಿಳಿದರಷ್ಟೇ ಸಾಲದು. ಅದನ್ನು ಅನುಸಂಧಾನಯುಕ್ತವಾಗಿ ಆಚರಿಸಲು ಸಾಧಕನು ಪ್ರಯತ್ನಿಸ ಬೇಕು. ಅವರವರ ಸಾಧನೆ ಹಾಗೂ ಯೋಗ್ಯತೆಗೆ ತಕ್ಕಷ್ಟು ಸಾಧನೆಯ ಫಲ ಸಿಕ್ಕೇ ಸಿಕ್ಕುತ್ತದೆ. ನದಿಯಲ್ಲಿ ಇಳಿದವರು ಎಲ್ಲಾ ನೀರನ್ನೂ ಕುಡಿಯುವುದಿಲ್ಲ. ಎಲ್ಲರೂ ಒಂದೇ ಅಳತೆಯ ನೀರನ್ನು ಕುಡಿಯುವುದಿಲ್ಲ. ಅವರವರ ದಾಹಕ್ಕೆ ತಕ್ಕಷ್ಟು ನೀರು ಅವರಲ್ಲಿ ಸೇರುತ್ತದೆ. ಅವರವರ ಯೋಗ್ಯತೆಗೆ ತಕ್ಕಷ್ಟು ಸಂಧ್ಯಾವಂದನ ಫಲ ಪಡೆಯುತ್ತಾರೆ. ಸಾಧನೆಯ ಮಾರ್ಗವನ್ನು ಮಾತ್ರ ಸಂಧ್ಯಾವಂದನ ಕ್ರಮ ತಿಳಿಸುತ್ತದೆ. ನೀರಡಿಸಿದವನಿಗೆ ನದಿಯ ಮಾರ್ಗ ತೋರಿಸುವಂತೆ ಸಂಧ್ಯಾವಂದನದ ವಿವಿಧ ಕ್ರಮಗಳು ಸಾಧಕನಿಗೆ ಮಾರ್ಗದೀಪ್ತಿಯಷ್ಟೇ. ಮಿಕ್ಕಿದ್ದನ್ನು ಪರಮಾತ್ಮನೆ ಪ್ರೇರೇಪಿಸುತ್ತಾನೆ. ಪ್ರೇರೇಪಿಸುವಂತೆ ಪ್ರಾರ್ಥಿಸುವುದಷ್ಟೇ ಸಾಧಕನ ಕೆಲಸ. ಪ್ರಾರ್ಥಿಸುವುದಕ್ಕೂ ಆತನ ಅನುಗ್ರಹಬೇಕು.

ಈ ವಿಷಯಗಳೆಲ್ಲಾ ನಿತ್ಯ ಸಂಧ್ಯಾವಂದನೆ ಮಾಡುವ ದೊಡ್ಡ ದೊಡ್ಡ ಪಂಡಿತರಿಗೇ ಸಾಕಷ್ಟು ಗೊತ್ತಿಲ್ಲದಿರುವಾಗ ಪಾಪ ಹೆಂಗಸು ವೆಂಕಮ್ಮ ಹೇಗೆ ತಿಳಿದಾಳು? ಅದರಲ್ಲಿಯೂ ಭಾಗಣ್ಣ ಯಾವ ಉನ್ನತ ಮಟ್ಟಕ್ಕೆ ತಲುಪಿದ್ದಾನೆ ಎಂದು ಯಾರಿಗೆ ಗೊತ್ತಾಗಬೇಕು?

ಆದ್ದರಿಂದ ವೆಂಕಮ್ಮ ಉತ್ತರಿಸಲಿಲ್ಲ. ಮಗನ ಮೈ ತಡವಿದಳು. ಅದು ಕಲ್ಲು ಗುಂಡಿನಂತೆ ಗಟ್ಟಿಯಾಗಿತ್ತು. ಸ್ವಲ್ಪ ನೀರು ಸಿಂಪಡಿಸಿಕೊಂಡ ಮಲ್ಲಣ್ಣನಿಗೆ ಬೊಬ್ಬೆ ಎದ್ದು ಅವನು ಬೊಬ್ಬೆ ಹಾಕುತ್ತಿದರೆ - ತನ್ನ ಮಗ ಭಾಗಣ್ಣನಿಗೆ ಏನೂ ಆಗದಿರುವು ದನ್ನು ಕಂಡು ಕಾಪಾಡಿದ ಪರಮಾತ್ಮನಿಗೆ ಮನದಲ್ಲಿಯೇ ನಮಿಸಿದಳಷ್ಟೆ.

ಮಗನನ್ನು ಕರೆದುಕೊಂಡು ಗ್ರಾಮದ ಇನ್ನೊಂದು ಭಾಗದಲ್ಲಿದ್ದ ಹನುಮಪ್ಪನ ಗುಡಿಗೆ ಸಾಗುತ್ತಿದ್ದಾಗ ಊರ ಜನರು ಮನೆಯೊಳಗಿನಿಂದ ಬಂದು ತಾಯಿ ಮಕ್ಕಳಿಗೆ ದೂರದಿಂದಲೇ ನಮಸ್ಕರಿಸುತ್ತಿದ್ದರು.

ಶ್ಯಾನಭೋಗ ವೆಂಕಣ್ಣನು ಮಾತ್ರ ಅವರನ್ನು ದೂರದಿಂದಲೇ ನೋಡಿ ಮುಖ ಸಿಂಡರಿಸಿಕೊಂಡು ಮನೆಯೊಳಗೆ ಮರೆಯಾದ.

ಪಾಸಿಸುವ ಗುಡಿಯನ್ನು ಪ್ರವೇಶಿಸುತ್ತಲೇ ಭಾಗಣ್ಣ ಆಂಜನೇಯ ಸ್ವಾಮಿಗೆ ನಮಸ್ಕರಿಸಿದ.

ತಮ್ಮಂದಿರು ಆಗಲೇ ಎದ್ದಿದ್ದರು. ತಾಯಿಯನ್ನು ನೋಡಿದೊಡನೆ ಕಡೆಯ ಮಗ ರಂಗ ಅಳತೊಡಗಿದ.

ತಾಯಿ ಮಕ್ಕಳಿಗೆ ಗಂಜಿ ಕಾಸಲು ಮೂಲೆಯಲ್ಲಿಟ್ಟಿದ್ದ ಸಣ್ಣ ಪುಟ್ಟ ಗಡಿಗೆಗಳನ್ನು ತೆಗೆದು ನೋಡಿದಳು. ಎಲ್ಲವೂ ಖಾಲಿ. ಆಕೆಗೆ ಏನು ಮಾಡಲು ತೋಚಲಿಲ್ಲ. ರಂಗ ಅಳುವುದನ್ನು ಜಾಸ್ತಿ ಮಾಡಿದ.

ಉಳಿದ ಇಬ್ಬರು ಮಕ್ಕಳು ದಾಸಪ್ಪ ಸೀನಪ್ಪರು ಅಲ್ಲಿಯೇ ಹತ್ತಿರವಿದ್ದ ಹುಣಸೇಮರವನ್ನು ಹತ್ತಿ ಎಳೆಯ ಚಿಗುರುಗಳನ್ನು ಕಿತ್ತು ತಂದರು. ಅವನ್ನೇ ಹಸಿಯಾಗಿ ತಿನ್ನುತ್ತಿದ್ದುದನ್ನು ನೋಡಿ ತಾಯಿಯ ಕರಳು 'ಚುರುಕ್' ಎಂದಿತು.

'ಹಾಗೆಯೇ ತಿನ್ನಬೇಡಿರೋ, ಉಪ್ಪು ಹಾಕಿ ಬೇಯಿಸಿ ಕೊಡುತ್ತೇನೆ' ಎಂದು ಹೇಳಿದ ತಾಯಿ ಗುಡಿ ಹೊರಗೆ ಬಂದು ಕಲ್ಲು ಒಲೆಗೆ ಬೆಂಕಿ ಹಚ್ಚಿದಳು. ಇರುವ ಸ್ಥಿತಿ ಕಂಡು ಭಾಗಣ್ಣನಿಗೆ ಕಸಿವಿಸಿಯಾಯಿತು. ಕಡೆಯ ತಮ್ಮ ರಂಗನನ್ನು ಸಮಾಧಾನ ಪಡಿಸಲು ಪ್ರಯತ್ನಿಸಿ ನೋಡಿದ. ಹುಣಸೇ ಚಿಗುರು ಬೇಯುವವರೆಗೂ ಅವನು ಅಳು ನಿಲ್ಲಿಸುವ ಪರಿ ಕಾಣಲಿಲ್ಲ.

ತನ್ನ ಪಾತ್ರೆಯಲ್ಲಿದ್ದ ಸಣ್ಣ ತುಳಸೀದಳವನ್ನು ತೆಗೆದು ಬಾಯಿಯಲ್ಲಿಟ್ಟು ಕೊಳ್ಳಲೆಂದು ರಂಗನಿಗೆ ಕೊಟ್ಟ. ಅವನು ಅದನ್ನು ಬೀಸಿ ಒಗೆದಾಗ ಅದು ಹನುಮಪ್ಪನ ತಲೆಯ ಮೇಲೆ ಹೋಗಿ ಬೀಳಬೇಕೆ?

ಭಾಗಣ್ಣ ಕಣ್ಣು ಮುಚ್ಚಿದ. ಇದ್ದಕ್ಕಿದ್ದಂತೆ 'ಅಮ್ಮಾ' ಎಂದು ಕೂಗಿಬಿಟ್ಟ. ತಾಯಿ ಭೀತಿಯಿಂದ ತಿರುಗಿ ನೋಡಿದಳು.

"ಹುಣಸೇ ಚಿಗುರನ್ನು ಕೆಳಗಿಳಿಸಿ ಬೇರೆ ನೀರನ್ನು ಎಸರಿಗಿಡಮ್ಮಾ, ಈಗ ಅಕ್ಕಿ ಬೇಳೆ ಎಲ್ಲ ಆದಿಯಾಗಿ ನಮ್ಮ ಅಡುಗೆಗೆ ಬೇಕಾದ ಪದಾರ್ಥಗಳೆಲ್ಲಾ ಬರುತ್ತಿವೆ" ನುಡಿದ ಭಾಗಣ್ಣ.

ತಮ್ಮನನ್ನು ಸಮಾಧಾನ ಪಡಿಸಲು ಭಾಗಣ್ಣ ಈ ರೀತಿ ಹೇಳುತ್ತಿರಬೇಕೆಂದು ಕಲ್ಪಿಸಿಕೊಂಡ ವೆಂಕಮ್ಮ "ಆಗಲಿ ಕಣೋ, ಮೊದಲು ಹುಣಸೇ ಚಿಗುರಿನ ನೀರು ಕುಡಿಯಲಿ, ಉಪ್ಪು ಚೆನ್ನಾಗಿ ಹಾಕಿದ್ದೇನೆ. ಅವರು ಆಟ ಆಡುವಷ್ಟರಲ್ಲಿ ಅಡುಗೆ ಮಾಡಿದರಾಯಿತು" ಧ್ವನಿ ಕೂಡಿಸಿದಳು ತಾಯಿ.

"ಇಲ್ಲಮ್ಮಾ, ನೀರನ್ನು ಬೇಗ ಎಸರಿಗೆ ಇಡು. ಅಡುಗೆ ಬೇಗ ಮಾಡುವಿಯಂತೆ. ಬರುವ ಆರು ಬೆಲ್ಲದ ಉಂಡೆಯಲ್ಲಿ ಒಂದನ್ನು ತೆಗೆದು ತಮ್ಮಂದಿರಿಗೆ ಒಡೆದು ಕೊಡು. ಅದನ್ನು ಸವಿಯುವಷ್ಟರಲ್ಲಿ ಅಡುಗೆ ಆಗಿಬಿಡಲಿ. ಅಕ್ಕಿಯ ಅನ್ನವನ್ನು ಸ್ವಲ್ಪ ಬೇರೆ ತೆಗೆದು ಪಾಯಸ ಮಾಡಿದರೂ ಆಯಿತು. "ಆದರೆ ಪಾಯಸಕ್ಕೆ ಹಾಕಲು

ಗೋಡಂಬಿ ಏನೂ ಇಲ್ಲ. ದ್ರಾಕ್ಷಿ ಬೇಕಾದಷ್ಟು ಇವೆಯಲ್ಲಾ. ಸ್ವಲ್ಪ ಭಾಗ ತೆಗೆದು ಪಾಯಸಕ್ಕೆ ಹಾಕು." ಭಾಗಣ್ಣ ಗಂಭೀರವಾಗಿ ಹೇಳಿದ. ಅವನ ಧ್ವನಿಯಲ್ಲಿರುವ ದೃಢತೆಯನ್ನು ಕಂಡು ವೆಂಕಮ್ಮನಿಗೆ ಆಶ್ಚರ್ಯವಾಯಿತು. ಹುಡುಗನನ್ನು ಸಮಾಧಾನ ಪಡಿಸಲು ಹೇಳುವ ರೀತಿ ಅದಾಗಿರದೆ ಕಣ್ಣಿನಿಂದ ನೋಡುತ್ತಿರುವುದನ್ನು ಹೇಳುತ್ತಿರುವ ಗಟ್ಟಿತನವಿತ್ತು ಅವನ ಧ್ವನಿಯಲ್ಲಿ.

ಅಕ್ಕಿ ! ಎಲ್ಲಿಯ ಅಕ್ಕಿ? ಜೋಳ ಸಿಕ್ಕಿದರೆ ಸಾಕು. ಜೋಳದ ಭಕ್ಕರಿ ಕಾಣದೆ ಎರಡು ದಿನವಾಯಿತು. ಅಕ್ಕಿಯನ್ನು ನೋಡದೆ ಒಂದು ವರ್ಷಕ್ಕೂ ಹೆಚ್ಚು ಕಾಲವಾಗಿರಬೇಕು. ಹೀಗಿರುವಾಗ ಪಾಯಸದ ಹೆಸರು ಹೇಳುವ ಭಾಗಣ್ಣನ ಪರಿ ಕಂಡು ಅವಳಿಗೆ ಹೆದರಿಕೆ ಆಯಿತು.

"ಸ್ವಲ್ಪ ಹೊತ್ತಾದರೂ ಅಡ್ಡಿಯಿಲ್ಲ. ನಾಲ್ಕನೇ ಪೊಟ್ಟಣದಲ್ಲಿರುವ ಗೋಧಿ ಹಿಟ್ಟನ್ನು ಈ ದಿನವೇ ಬಳಸಿಬಿಡು. ಸಣ್ಣ ಕುಡಿಕೆಯಲ್ಲಿರುವ ತುಪ್ಪ ಕಡಬು ಮಾಡಲಿಕ್ಕಾದೀತು. ಈ ದಿನ ಹೂರಣದ ಕಡುಬು ಮಾಡಿಬಿಡಮ್ಮಾ" ಭಾಗಣ್ಣ ಆಸೆಯ ಕಣ್ಣಿಂದ ತಾಯಿಯ ಕಡೆ ನೋಡುತ್ತಾ ಹೇಳಿದಾಗ ವೆಂಕಮ್ಮ ಈಗ ನಿಜಕ್ಕೂ ಬೆದರಿ ಹೋದಳು.

ಸಣ್ಣ ಕಂದ, ರಂಗ ಹಸಿವೆಯಿಂದಷ್ಟೇ ಅಳುತ್ತಿದ್ದಾನೆ.

ದೊಡ್ಡವನು, ಭಾಗಣ್ಣ ಕಡಬು ಬಯಸಿ ರಂಪ ಮಾಡುತ್ತಿದ್ದಾನೆಯೇ ಎಂಬ ಹೆದರಿಕೆ ಆಕೆಗೆ ಹುಟ್ಟಿಕೊಂಡಿತು. ವಯಸ್ಸಿಗೆ ತಕ್ಕಂತೆ ರಂಗ ಅತ್ತು ಗಲಾಟೆ ಮಾಡುತ್ತಿದ್ದರೆ, ದೊಡ್ಡವನಾದ ಇವನು ದೊಡ್ಡ ರೀತಿಯಲ್ಲಿ ಹಠ ಹಿಡಿಯುತ್ತಿದ್ದಾನೆಯೇ ಎಂಬ ಭೀತಿಯಿಂದ ಮಗನನ್ನು ನೋಡಿದಳು.

"ಹೌದಮ್ಮಾ, ಈ ದಿನ ನನಗೆ ವಿಪರೀತ ಹಸಿವಾಗಿದೆ. ಇಪ್ಪತ್ತೊಂದು ಕಡಬು ನಾನು ತಿನ್ನಬೇಕು. ಎಲ್ಲರಿಗೂ ಸಾಕಾಗುವಷ್ಟು ಆಗುತ್ತದೆ. ಈ ದಿನವೇ ಕಡಬು ಮಾಡಮ್ಮಾ" ಭಾಗಣ್ಣ ದೃಢ ಧ್ವನಿಯಿಂದ ಹೇಳಿದ.

ವೆಂಕಮ್ಮನಿಗೆ ಈಗ ನಿಜಕ್ಕೂ ಪೇಚಾಟಕ್ಕಿಟ್ಟುಕೊಂಡಿತು.

ದಾಸು, ಸೀನ ಇಬ್ಬರೂ ಸಣ್ಣವರಾದರೂ ಕಷ್ಟದಿಂದ ಮರ ಹತ್ತಿ ಹುಣಸೇ ಚಿಗುರು ಹರಿದು ತಂದರು. ಇವನು ಕೂತಲ್ಲಿಯೇ ಕುಳಿತು ಆಂಜನೇಯನಿಗೆ ನಮಸ್ಕರಿಸಿ ನಾನಾ ರೀತಿಯ ಅಡುಗೆ ಮಾಡಲು ಹೇಳುತ್ತಿದ್ದಾನೆ.

ವಿಶ್ವ ಪ್ರದಕ್ಷಿಣೆ ಹೊರಟ ಷಣ್ಮುಖ, ಇದ್ದಲ್ಲಿಯೇ ತಂದೆ ತಾಯಿಗೆ ಪ್ರದಕ್ಷಿಣೆ ಹಾಕಿ ಹಣ್ಣು ಪಡೆದ ಗಜಮುಖ.

ಅವರೇನೋ ದೇವತೆಗಳು. ಅವರ ಪ್ರತಿ ವರ್ತನೆಗೂ ಒಂದು ಕಾರಣ, ಮೂಲ ಸ್ವಭಾವ ಕಾಣಿಸಿಕೊಳ್ಳುತ್ತದೆ.

ಭಾಗಣ್ಣನೋ, ಕದಲದೆ ಒಂದೆಡೆ ಕುಳಿತು ಇಪ್ಪತ್ತೊಂದು ಕಡಬು ಕೇಳುತ್ತಿದ್ದಾನೆ.

ತಾಯಿಗೆ ಮಗನ ವಿಚಿತ್ರ ವರ್ತನೆ ಕಂಡು ಸ್ವಲ್ಪ ಸಿಟ್ಟೂ ಬಂದಿತು.

ಆದರೆ ಭಾಗಣ್ಣ ಮಾತ್ರ ಮೆಲ್ಲಗೆ ಎದ್ದು - ಒಲೆಯ ಹತ್ತಿರ ಹೋಗಿ ತಾನೇ ಕಟ್ಟಿಗೆ ಸರಿಮಾಡಿ "ನೀರು ಎಸರಿಗೆ ಇಡಮ್ಮಾ" ಎಂದು ಹೇಳಿದಾಗ ತಾಯಿಗೆ ದಿಕ್ಕೇ ತೋಚಲಿಲ್ಲ.

ಅವಳು ದಿಕ್ಕು ದಿಕ್ಕು ನೋಡುತ್ತಿದ್ದಳು.

ಒಂದು ದಿಕ್ಕಿನಿಂದ ಮಲ್ಲಣ್ಣನ ಹೆಂಡತಿ ಕೈಯಲ್ಲಿ ದೊಡ್ಡ ಹರಿವಾಣದೊಂದಿಗೆ ಬರುತ್ತಿದ್ದುದನ್ನು ಕಂಡು ಅವಳಿಗೆ ಆಶ್ಚರ್ಯವಾಯಿತು. ಮಲ್ಲಣ್ಣನ ಹೆಂಡತಿ ಬಂದವಳೇ, ತಂದಿದ್ದ ಹರಿವಾಣವನ್ನು ವೆಂಕಮ್ಮನ ಮುಂದೆ ಇಟ್ಟು,

"ನಿನ್ನ ಮಗ ಏನು ಮಹಿಮಾವಂತನಮ್ಮಾ! ನಮ್ಮ ಯಜಮಾನರಿಗೆ ಮೈಯೆಲ್ಲಾ ಬೊಬ್ಬೆಯೆದ್ದು ಕಣ್ಣು ತೆಗೆಯಲೂ ಬಾರದೆ ಗಟ್ಟಿಗಟ್ಟಿಯಾಗಿ ರೋದಿಸುತ್ತಿದ್ದರು. ಯಾರೋ ಕೊಟ್ಟ ಸೂಚನೆಯ ಮೇರೆಗೆ ನಿಮಗೆಲ್ಲಾ ಈ ದಿನ ಹಬ್ಬದ ಊಟ ಮಾಡಿಸುತ್ತೇನೆ ಎಂದು ದೇವರಲ್ಲಿ ಪ್ರಾರ್ಥಿಸಿದೊಡನೆಯೇ ಅವರ ಉರಿ ಸ್ವಲ್ಪ ತಣಿದಿರಬೇಕು. ಗಟ್ಟಿಗಟ್ಟಿಯಾಗಿ ರೋದಿಸುತ್ತಿದ್ದವರು ಈಗ ಪ್ರಶಾಂತ ವಾಗಿ ನಿದ್ರಿಸುತ್ತಿದ್ದಾರೆ. ನಿನ್ನ ಮಗ ನಮ್ಮ ಮನೆಗೆ ಬಂದು ನಮ್ಮ ಯಜಮಾನರನ್ನು ಮುಟ್ಟಿದರೆ ಗುಣವಾಗುತ್ತದೆಂಬ ನಂಬಿಕೆ ನನಗೀಗ ಬಂದಿದೆ. ಏಳು ತಾಯಿ, ನಾನು ತಂದಿಟ್ಟಿರುವ ಸಾಮಗ್ರಿಗಳಿಂದ ಹಬ್ಬದ ಅಡುಗೆ ಮಾಡಿ ನಿನ್ನ ಮಕ್ಕಳಿಗೆ ಉಣಿಸು. ನಮ್ಮವರು ಏಳುವಷ್ಟರಲ್ಲಿ ಭಾಗಣ್ಣನನ್ನು ಕರೆದುಕೊಂಡು ಬಾ" ಎಂದು ನುಡಿದಳು.

ಮಲ್ಲಣ್ಣನ ಹೆಂಡತಿಯ ಮಾತಿನಲ್ಲಿ ಕೃತ್ರಿಮತೆಯಿರಲಿಲ್ಲ. ಮುಖದಲ್ಲಿ ದೈನ್ಯತೆ ತುಂಬಿತ್ತು.

"ಏನೋ ಅಮ್ಮ, ನಿಮ್ಮ ನಂಬಿಕೆ. ನಮ್ಮಿಂದ ಬೇರೆಯವರಿಗೆ ಒಳ್ಳೆಯ ದಾಗುತ್ತದೆಂಬ ನಂಬಿಕೆಯೇ ನನಗೆ ಬಂದಿಲ್ಲ. ಅಂಥ ಕಾಲ ಬರುವ ದಿನಗಳೂ ಈಗಿಲ್ಲ. ಮಕ್ಕಳೆಲ್ಲಾ ಇನ್ನೂ ಸಣ್ಣವು. ಇವರೆಲ್ಲಾ ದೊಡ್ಡವರಾಗಿ ಬೆಳೆದು ಕೈ

ತುಂಬಾ ಸಂಪಾದಿಸತೊಡಗಿದರೆ ಯಾರಿಗಾದರೂ ನಾವು ಸಹಾಯ ಮಾಡಬಹುದು." ಲೊಚಗುಟ್ಟಿದಳು ವೆಂಕಮ್ಮ.

"ಭಾಗಣ್ಣ ಸಣ್ಣವನಾದರೇನಮ್ಮಾ. ದೊಡ್ಡ ಸಿದ್ಧಿಯನ್ನು ಪಡೆದಿದ್ದಾನೆ. ಅಜ್ಞಾನದಿಂದ ಅವನ ಮೇಲೆ ಬಿಸಿನೀರು ಎರಚಿದ ನಮ್ಮ ಯಜಮಾನರು ಈಗ ಪಶ್ಚಾತ್ತಾಪದಿಂದ ಬಳಲುತ್ತಿದ್ದಾರೆ. ಬೇಗ ಏಳು ತಾಯಿ.ಅಡುಗೆ ಮಾಡಿ ಊಟ ಮುಗಿಸಿಕೊಂಡು ನಮ್ಮ ಮನೆಗೆ ಬನ್ನಿ. ಅವರು ಅಲ್ಲಿ ಮಲಗಿರುವಾಗ ನಾನು ಇಲ್ಲಿ ಹೆಚ್ಚು ಹೊತ್ತು ಇರಲಾರೆ." ಎಂದು ಹೇಳುತ್ತಾ ಭಾಗಣ್ಣನ ಗಲ್ಲ ಸವರಿ ಲಟಿಗೆ ತೆಗೆದ ಆ ಮಮತಾಮೂರ್ತಿ ಸರ ಸರನೆ ಹಿಂದಿರುಗಿದಳು.

ವೆಂಕಮ್ಮನಿಗೆ ಆಶ್ಚರ್ಯವಾಯಿತು. ಮಲ್ಲಣ್ಣ ತನ್ನ ಮೇಲೆಯೇ ಬಿಸಿನೀರು ಎರಚಿದ್ದು ಗೊತ್ತಿಲ್ಲ ಈ ಕಂದನಿಗೆ. ಇನ್ನು ಅಡುಗೆಗೆ ಪದಾರ್ಥಗಳು ಬರುವ ವಿಷಯ ಹೇಗೆ ಗೊತ್ತಾಯಿತು?

ಮೇಲೆ ಮುಚ್ಚಿದ್ದ ಎಲೆಯನ್ನು ತೆಗೆದು ಹರಿವಾಣದ ಮೇಲೆ ಕಣ್ಣೋಡಿಸಿದಳು.

ಇದ್ದುದು ಸರಿಯಾಗಿ ಬೆಲ್ಲದ ದೊಡ್ಡ ಉಂಡೆಗಳು ಆರು! ಭಾಗಣ್ಣ ಹೇಳಿದಷ್ಟೆ! ಬೇಳೆ, ಗೋದಿಹಿಟ್ಟು ಎಲ್ಲಾ ಸರಿ. ಸಣ್ಣ ಕುಡಿಕೆ ತುಂಬಾ ತುಪ್ಪ.

ಅರೆ, ದ್ರಾಕ್ಷಿಯೂ ಸಾಕಷ್ಟು ಇವೆ.

ಗೋಡಂಬಿ ಮಾತ್ರ ಇಲ್ಲ!

ಹುಡುಗ ಇದನ್ನು ಮೊದಲೇ ಹೇಗೆ ಹೇಳಿದ? ಇಷ್ಟು ವಿವರವಾಗಿ ಅವನಿಗೆ ಹೇಗೆ ಗೊತ್ತಾಯಿತು ?

ಆಶ್ಚರ್ಯದಿಂದ ಮಗನೆಡೆಗೆ ನೋಡಿದಳು ವೆಂಕಮ್ಮ.

ಭಾಗಣ್ಣ ಆಕಾಶದೆಡೆಗೆ ನೋಡುತ್ತಿದ್ದ !

***

"ನಿನ್ನ ಕೈಯಲ್ಲಿ ಏನು ಚಮತ್ಕಾರವಿದೆಯೋ ಮಗೂ. ನೀನು ಮುಟ್ಟಿದ್ದರಿಂದ ನನ್ನ ಕಣ್ಣುಗಳು ತೆಗೆಯಲು ಬಂದವು. ಮೈಯ ಉರಿ ಶಾಂತವಾಗುತ್ತಿದೆ. ಭಾಗಣ್ಣಾ ನಿನ್ನ ಕೈಗೆ ಯಾವುದಾದರೂ ಔಷಧ ಹಚ್ಚಿಕೊಂಡು ಬಂದೆಯಾ? ನಾನೇ ಎರಚಿದ ಬಿಸಿನೀರು ನಿನಗೆ ಯಾವ ಹಾನಿಯನ್ನೂ ಮಾಡದಿರುವುದನ್ನು ನೋಡಿದರೆ

ಆಶ್ಚರ್ಯವಾಗುತ್ತಿದೆ. ಬಿಸಿಯನ್ನು ನಿರೋಧಿಸುವ ಯಾವುದಾದರೂ ಔಷಧಿಯನ್ನು ಕಂಡು ಹಿಡಿದಿರುವೆಯಾ? ಇಲ್ಲವೇ ಯಾವುದಾದರೂ ಶಕ್ತಿಯನ್ನು ವಶಪಡಿಸಿ ಕೊಂಡಿದ್ದೀಯಾ ?" ಭಾಗಣ್ಣನ ಕೈ ಹಿಡಿದು ಅಂಗಲಾಚುತ್ತಾ ಕೇಳಿದ ಮಲ್ಲಣ್ಣನ ಪ್ರಶ್ನೆಗೆ ಮುಗುಳ್ನಗೆಯಷ್ಟೇ ಉತ್ತರವಾಗಿತ್ತು. ಇನ್ನು ಏನೇನೋ ಪ್ರಶ್ನಿಸಬೇಕೆಂದು ಮಲ್ಲಣ್ಣ ಪ್ರಯತ್ನಿಸುತ್ತಿರುವಾಗಲೇ ಅವನ ಹೆಂಡತಿ ಮಾತಿನ ಮಧ್ಯೆ ಪ್ರವೇಶಿಸಿದಳು.

"ಇದೊಂದು ನಿನಗೆ ರೋಗ. ಪ್ರತಿಯೊಂದಕ್ಕೂ ಕಾರಣಗಳೊಂದಿಗೆ ಹೇಳ ಬೇಕು! ಎಲ್ಲದಕ್ಕೂ ಕಾರಣಗಳು ಎಲ್ಲಿ ತಿಳಿಯುತ್ತವೆ? ನೀನು ಬಿಸಿನೀರು ಎರಚುವ ವಿಷಯ ಪಾಪ ಈ ಕಂದನಿಗೆ ಗೊತ್ತಿತ್ತೆ? ಈ ದಿನ ನಡೆದ ಘಟನೆಗಳನ್ನೆಲ್ಲಾ ನಾನು ಹೇಳುವವರೆಗೂ ಇವನಿಗೆ ಗೊತ್ತಿರಲಿಲ್ಲ. ಬಿಸಿನೀರು ಸಿಡಿದು ನಿನಗಾಗಿರುವ ಹಾನಿ ಯನ್ನು ಕೇಳಿ ಕಣ್ಣೀರುಗರೆಯಿತು ಕೂಸು. ನಾನೇ ಹೇಳಿದೆ. ನೀನು ಶಿವನ ಪುತ್ರನಪ್ಪಾ, ನಿನ್ನ ಕೈಯಿಂದಲೇ ನನ್ನ ಯಜಮಾನರಿಗೆ ಗುಣವಾಗಬೇಕು. ಬಂದು ನಮ್ಮನ್ನು ಉದ್ಧರಿಸು ಎಂದು ಪ್ರಾರ್ಥಿಸಿದೊಡನೆಯೇ ಹೊರಟು ಬಂದಿದ್ದಾನೆ. ಅವನನ್ನು ಏನೇನೆಲ್ಲಾ ಪ್ರಶ್ನಿಸಿ ಗೋಳು ಗುಟ್ಟಿಸಬೇಡಿ. ಹೆಚ್ಚು ಮಾತನಾಡುವವನಲ್ಲ ಅವನು"

ಹೆಂಡತಿಯ ಮಾತು ಕೇಳಿ ಮಲ್ಲಣ್ಣ ಸುಮ್ಮನಾದ.

ಭಾಗಣ್ಣನೇ ಮಾತಿಗೆ ಶುರು ಮಾಡಿದ.

"ನನಗೇನೂ ಗೊತ್ತಿಲ್ಲ ಮಲ್ಲಣ್ಣನವರೆ. ನನ್ನ ತಾಯಿಯೂ ಈ ವಿಷಯ ಹೇಳಿರಲಿಲ್ಲ. ಈ ತಾಯಿ ಕರೆಯಲು ಬರುತ್ತಾರೆಂದು ಮಾತ್ರ ಗೊತ್ತಾಯಿತು. ಏಕೆ, ಏನು ಎಂದು ಯೋಚಿಸುವಷ್ಟರಲ್ಲಿ ಅಮ್ಮನವರು ಬಂದುಬಿಟ್ಟರು. ನೀವು ನೀಡಿದ ಪದಾರ್ಥ, ಅದನ್ನು ಈ ದಿನ ಉಂಡು ನಲಿದಿದ್ದೇವೆ. ಅನ್ನದ ಋಣ ಹೇಗೆ ತೀರಿಸಲಿಯೆಂದು ಯೋಚಿಸುತ್ತಿರುವಾಗಲೇ ಈ ಅಮ್ಮನು ಪುನಃ ಬಂದು ವಿಷಯ ವನ್ನು ಹೇಳಿದಳು. ನನಗೆ ಎರಚಿದ ನೀರು ನಿಮ್ಮನ್ನು ಸುಡಬೇಕಾದರೆ ಅದು ನನ್ನ ಮೇಲೆ ಬಿದ್ದಿಲ್ಲವೆಂದೇ ಅರ್ಥ. ನನ್ನ ಹೃದಯದಲ್ಲಿ ಕುಳಿತು ಎಲ್ಲವನ್ನೂ ನೋಡುತ್ತಿರುವ ಪರಮಾತ್ಮನಿಗೆ ಆ ಬಿಸಿನೀರು ತಗಲಿರಬೇಕು. ಶರೀರದಲ್ಲಿರುವ ವಿವಿಧ ದೇವತೆಗಳಿಗೆ ಅದರ ನೋವು ಬಾಧಿಸಿರಬೇಕು. ಆ ದೇವತೆಗಳೇ ನಿಮ್ಮಲ್ಲಿಯೂ ಇರುವುದರಿಂದ ಅಲ್ಲಿ ನೋವು ವ್ಯಕ್ತಪಡಿಸಿರಬಹುದು. ನನ್ನನ್ನು ಕಾಪಾಡಿದ ಪರಮಾತ್ಮ ನಿಮ್ಮನ್ನೂ ರಕ್ಷಿಸಲಿ ಎಂದು ಪ್ರಾರ್ಥಿಸುತ್ತಾ ಬಂದೆ. ಈ ಅಮ್ಮ ನವರು ಹೇಳಿದಂತೆ ನಿಮ್ಮ ಕಣ್ಣುಗಳನ್ನು ಸ್ಪರ್ಶಿಸಿದೆ. ಆದ ಗಾಯಗಳ ಮೇಲೆ

ಕೋಮಲವಾಗಿ ಮುಟ್ಟಿದೆ. ಅಷ್ಟೇ ನನಗೆ ಗೊತ್ತು. ನನ್ನ ಮೇಲೆ ವಿಪರೀತ ಅಭಿಮಾನ ನಿಮ್ಮಲ್ಲೀಗ ಹುಟ್ಟಿದೆ. ಅಭಿಮಾನ ಪ್ರೀತಿಗಳೇ ನಿಮ್ಮ ನೋವನ್ನು ಕಡಿಮೆ ಮಾಡಿರಬೇಕು. ವಿಶ್ವಾಸವೇ ನಿಮಗೆ ನೋವನ್ನು ಕಳೆದಿದೆ. ಇಲ್ಲವೇ ನನ್ನ ಹೃದಯದಲ್ಲಿ ಕುಳಿತು, ನನ್ನನ್ನು ಪ್ರಚೋದಿಸಿ, ಸಾಧನೆ ಮಾಡಿಸುತ್ತಿರುವ ಪರಮಾತ್ಮ ನಿಮಗೆ ಈ ಶಾಂತಿ ನೀಡುತ್ತಿದ್ದಾನೆ."

ಎರಡು ಕಾರಣಗಳೂ ಸತ್ಯ. ಒಂದಕ್ಕೆ ನೇರವಾಗಿ ಉತ್ತರ. ಇನ್ನೊಂದಕ್ಕೆ ಬೇಗ ಉತ್ತರ ಹೊಳೆಯುವುದಿಲ್ಲ. ನಮಗೆ ಹೊಳೆಯುವುದಿಲ್ಲ ಎಂದ ಮಾತ್ರಕ್ಕೆ ಆ ಸತ್ಯವೇ ಇಲ್ಲವೆಂದು ಪರಿಗಣಿಸಲಿಕ್ಕಾಗದು. ಕೆಲವಕ್ಕೆ ಶಬ್ದಗಳಿಂದ ಉತ್ತರಿಸಬಹುದು. ಶಬ್ದಗಳಿಂದ ಹೇಳಲಾಗದ ಉತ್ತರ ಹೃದಯಕ್ಕೆ ಗೊತ್ತಾಗುತ್ತದೆ. ಹೃದಯಕ್ಕೂ ಬುದ್ಧಿಗೂ ತಳಕು ಹಾಕಲು ಪ್ರಯತ್ನಿಸಿ ನಾವು ವಿಫಲರಾಗುತ್ತಿದ್ದೇವೆ. ನಾನು ಜಪಿಸುತ್ತಿರುವ ಗಾಯತ್ರಿ ಮಂತ್ರ ತುಟಿ ಅಲುಗಾಡಿಸದೆ, ನಾಲಿಗೆ ಕದಲಿಸದೆ ಮನಸ್ಸಿನಲ್ಲಿಯೇ ಜಪಿಸಬೇಕು ಎಂದು ನಮ್ಮ ಹಿರಿಯರು ನಿರ್ದೇಶಿಸಿದ್ದಾರೆ. ಮನಸ್ಸಿನಿಂದ ಮಂತ್ರ ಹೇಳಬೇಕು. ಮನಸ್ಸಿನಲ್ಲಿಯೇ ಪರಮಾತ್ಮನನ್ನು ಕಾಣಬೇಕು. ಬುದ್ಧಿಗೆ ಮೀರಿದ ಪರಮಾತ್ಮನ ದಿವ್ಯ ಸ್ವರೂಪ ಸುತ್ತಲೂ ವ್ಯಾಪಿಸಿ ಒಳಗೂ ಹೊರಗೂ ಎಲ್ಲೆಲ್ಲಿಯೂ ಒಬ್ಬನೇ ಆಗಿ ಎಲ್ಲವನ್ನೂ ಕಾಪಾಡುತ್ತಾನೆ. ಅವನ ಈ ರೂಪ ಚಿಂತನೆಯೇ ನಮ್ಮ ಜನರನ್ನು ಸ್ವಲ್ಪ ತಬ್ಬಿಬ್ಬುಗೊಳಿಸುತ್ತದೆ. ಆತ ಜಗದಗಲ, ಭುವಿಯಗಲ, ಮುಗಿಲಗಲ, ಮಿಗೆಯಗಲ, ಎತ್ತರ-ಪಾತಾಳದ ಆ ಕಡೆಯಿಂದ ಆಕಾಶದ ಮೇಲೆ ಇನ್ನೂ ಎತ್ತರ, ಎತ್ತರ. ಆತನ ರೂಪದ ಮುಂದೆ ನಾವೆಷ್ಟು? ಆಗಲೇ ನಾವು ಭ್ರಮೆಗೊಳಗಾಗುತ್ತೇವೆ. ನಾನೇ ಆತ ಎಂಬ ತಪ್ಪು ಕಲ್ಪನೆ ಕೆಲವರಲ್ಲಿ ಉಂಟಾಗುತ್ತದೆ." ಹುಡುಗ ಹೇಳುತ್ತಿದ್ದ - ಹೇಳುವಾಗ ಆತನ ದೃಷ್ಟಿ ದಿಗಂತದಲ್ಲಿ ನೆಟ್ಟಿತ್ತು. ಇನ್ನೂ ಅವನು ಏನೇನು ಹೇಳುತ್ತಿದ್ದನೊ, ಮಾತಿನ ಮಧ್ಯದಲ್ಲಿ ತಡೆದ ಮಲ್ಲಣ್ಣ.

"ಬಹಳ ದೊಡ್ಡವನಪ್ಪಾ ನೀನು. ವಯಸ್ಸಿಗೆ ಮೀರಿದ ಯೋಚನೆ ನಿನ್ನದು. ನೀನು ಹೇಳುವ ಮಾತುಗಳ್ಯಾವುವೂ ನನಗೆ ಅರ್ಥವಾಗಲಿಲ್ಲ. ಆದರೆ ನೀನು ಕಂಡು ಅನುಭವಿಸಿದ್ದನ್ನು ಮಾತ್ರ ನೀನು ಹೇಳುತ್ತಿದ್ದಿ ಎಂಬ ನಂಬಿಕೆ ನನಗೆ ಸಂಪೂರ್ಣ ಉಂಟಾಗಿದೆ. ಲೋಕಕ್ಕೆ ನಿನ್ನಂಥವರು ಬೇಕು. ನಿನ್ನಂಥವರು ಹೆಚ್ಚು ಯೋಚಿಸಿ ನೀಡುವ ಸಲಹೆಗಳಿಂದ ಜಗತ್ತಿಗೆ ಕಲ್ಯಾಣವಾಗುತ್ತದೆ. ನೀವು ಯೋಚಿಸಲಿಕ್ಕಾಗಿ ಅಥವಾ ಸಾಧನೆ ಮಾಡುವುದಕ್ಕಾಗಿ ಸಮಾಜ ನಿಮ್ಮ ಅವಶ್ಯಕತೆಗಳನ್ನು ಪೂರೈಸಬೇಕು. ಆದರೆ ಅಂಥ ಜನ ನಮ್ಮಲ್ಲಿ ಬಹಳ ಕಡಿಮೆ. ಲೋಕದ ಗೊಡವೆ ನನಗೆ

ಬೇಕಾಗಿಲ್ಲ. ನಿನ್ನ ಪೂಜೆ ಸಾಂಗವಾಗಿ ಸಾಗಲು ನನ್ನಿಂದ ಏನಾದರೂ ಕಾಣಿಕೆ ನೀನು ಪಡೆಯಬೇಕು. ಆದ್ದರಿಂದ ನಿನಗೆ ಏನು ನೀಡಲಿ ಹೇಳು" ಪ್ರಶ್ನಿಸಿದ ಮಲ್ಲಣ್ಣ.

ಅಬ್ಬಾ, ಆ ಸನ್ನಿವೇಶವೇ ಆಶ್ಚರ್ಯ. ಪುಟ್ಟ ವಯಸ್ಸಿನ ಬಾಲಕ ದೊಡ್ಡ ದೊಡ್ಡ ಮಾತುಗಳನ್ನು ಹೇಳುತ್ತಿದ್ದಾನೆ. ಎಲ್ಲವೂ ಸುಳ್ಳು, ಠಕ್ಕುತನ ಎಂದು ನಂಬಿದ್ದ ಮಲ್ಲಣ್ಣ ಪಶ್ಚಾತ್ತಾಪದಿಂದ ಏನು ಕೇಳಿದರೂ ಕೊಡಲು ಸಿದ್ಧನಾಗಿದ್ದಾನೆ!

ಈಗ ಮಲ್ಲಣ್ಣನನ್ನು ಮೂಢ ಎಂದೆನ್ನಬೇಕೆ? ಆತನ ಅನುಭವವನ್ನು ಇಲ್ಲವೆಂದು ಸಾಧಿಸಬೇಕೆ? ಹೋಗಲಿ; ಆ ದಿನ ನೂರಾರು ಜನರು ಈ ಘಟನೆಯನ್ನು ಕಣ್ಣಾರೆ ನೋಡಿದರು. ಅವರು ನೋಡಿದ ಸಂಗತಿ ಅವರಿಗೆ ಮನದಟ್ಟಾಗಿರಬೇಕು. ಆದರೆ ಎಲ್ಲರೂ ನೋಡಲು ಸಾಧ್ಯವಿಲ್ಲವಲ್ಲಾ? ಆ ರೀತಿ ನೋಡದವರೆಲ್ಲಾ ಇದನ್ನು ಸುಳ್ಳು ಎಂದೋ, ತರ್ಕಕ್ಕೆ ಸಿಕ್ಕುವುದಿಲ್ಲವೆಂದೋ ವಾದಿಸಿದರೆ ಏನು ಉತ್ತರ ಕೊಡಲು ಸಾಧ್ಯ?

ಪವಾಡ ಎನ್ನುವ ಘಟನೆಗಳೇ ಹಾಗೆ. ಇದನ್ನು ನಂಬುವವರು ಎಲ್ಲಾ ಕಾಲದಲ್ಲಿಯೂ ಇದ್ದಾರೆ. ನಂಬದವರು ಹಾಗೆಯೇ ಎಲ್ಲಾ ಕಾಲದಲ್ಲಿಯೂ ಇರುತ್ತಾರೆ.

ಅವರ ದೃಷ್ಟಿಯಲ್ಲಿ ಇವರು ಮೂಢರು. ಇವರ ದೃಷ್ಟಿಯಲ್ಲಿ ಅವರು ಅಜ್ಞಾನಿಗಳು.

ಆದ್ದರಿಂದಲೇ ಶ್ಯಾನಭೋಗ ವೆಂಕಣ್ಣ ಮಾತ್ರ ಈ ಘಟನೆಯನ್ನು ನಂಬಲಿಲ್ಲ.

ಭಾಗಣ್ಣ ಬೇಡ ಬೇಡವೆಂದರೂ ಹೆಂಡತಿಯ ಸೂಚನೆಯಂತೆ ಮಲ್ಲಣ್ಣ ತನ್ನ ಹೊಲಗಳಲ್ಲಿಯೇ ಅತಿ ಫಲವತ್ತಾದ ಕೆರೆಯಂಗಳದ ಭೂಮಿಯ ಸ್ವಲ್ಪ ಭಾಗವನ್ನು ದಾನ ನೀಡಿದ. ಎಲ್ಲವನ್ನೂ ಕೊಡಲು ಆತ ಸಿದ್ಧನಿದ್ದ. ಏನೂ ಬೇಡವೆಂದು ಭಾಗಣ್ಣ ವಾದಿಸಿದ್ದ. ಮಲ್ಲಣ್ಣನ ಹೆಂಡತಿ ಕಂಡ ರಾಜೀಮಾರ್ಗದಂತೆ ಜಮೀನಿನ ಸ್ವಲ್ಪ ಭಾಗವನ್ನು ಪಡೆಯದೆ ಇರಲು ಸಾಧ್ಯವಾಗಲಿಲ್ಲ.

ಪಡೆದ ಭೂಮಿಯ ವ್ಯವಸಾಯದ ಜವಾಬ್ದಾರಿಯನ್ನು ವೆಂಕಮ್ಮನೇ ವಹಿಸಿಕೊಂಡಳು.

ಆ ಭೂಮಿಯ ಹೆಚ್ಚಿನ ಬೆಳೆಯನ್ನು ಶ್ಯಾನಭೋಗ ವೆಂಕಣ್ಣನವರೇ ಉಪಾಯವಾಗಿ ಮಲ್ಲಣ್ಣನಿಂದ ಪಡೆಯುತ್ತಿದ್ದರು. ಈಗ ಆ ಹೊಲ ವೆಂಕಮ್ಮನಿಗೆ ಹೋಗಿದ್ದನ್ನು ಕಂಡು ಅವರ ಹೊಟ್ಟೆ ಉರಿ ಹೆಚ್ಚಾಗಿ ಹೋಯಿತು.

ಯಾರೇ ಕರುಬಲಿ. ಮತ್ತಾರೇ ಸಂತೋಷಿಸಲಿ ಲೋಕದ ಗೊಡವೆ ತನಗೇಕೆ ಎಂದು ಬಾಲಕ ಭಾಗಣ್ಣ ತನ್ನ ಗಾಯತ್ರಿ ಮಂತ್ರ ಪುರಶ್ಚರಣದ ತಪಸ್ಸನ್ನು ಮುಂದುವರಿಸಿದ.

ತಾಯಿ ವೆಂಕಮ್ಮನ ಜೀವನದಲ್ಲಿ ಒಂದು ರೀತಿಯ ನೆಮ್ಮದಿ.

ತನ್ನ ಮಗ ಯಾವುದೋ ದೊಡ್ಡ ಸಿದ್ಧಿಯಲ್ಲಿ ನಿರತನಾಗಿದ್ದಾನೆಂದು ಮನವರಿಕೆ ಯಾದ ಮೇಲೆ ಆಕೆಗೆ ಎಲ್ಲಿಲ್ಲದ ಸಂತೋಷ.

ಹೊಲದ ವ್ಯವಸಾಯಕ್ಕೆ ನೆರೆಹೊರೆಯ ಜನ ಸಹಾಯ ಮಾಡಿದರು. ಭಾಗಣ್ಣನ ತಪಸ್ಸಿನ ಮಹಿಮೆ ಅರಿತ ಜನ ಪ್ರತಿನಿತ್ಯ ಒಂದಲ್ಲ ಒಂದು ರೀತಿಯಲ್ಲಿ ಸಾಮಗ್ರಿಗಳನ್ನು ಕಳಿಸಿ ಸಂಸಾರ ನಿರ್ವಹಣೆಗೆ ನೆರವಾದರು. ಆ ರೀತಿ ಮಾಡಿದ ಸಹಾಯ ಅಕ್ಷಯವಾಗಿ ತಮಗೆ ಶುಭ ನೀಡುತ್ತಿರುವುದನ್ನು ಕಂಡು ಜನರು ಆಶ್ಚರ್ಯಪಡುತ್ತಿದ್ದರು.

ಭೂರಮಣ ಒಲಿದ ಮೇಲೆ ಭೂಮಾತೆ ಸುಮ್ಮನಿರುತ್ತಾಳೆಯೆ?

ಭಾಗಣ್ಣ ಪಡೆದ ಹೊಲದಲ್ಲಿ ಸಮೃದ್ಧಿಯಾಗಿ ಬೆಳೆ ಬೆಳೆಯಿತು. ತೆನೆಭರಿತ ಗಿಡಗಳು ಗಾಳಿಗೆ ತುಯ್ದಾಡುತ್ತಿದ್ದಂತೆ ವೆಂಕಮ್ಮ ಹರ್ಷದಿಂದ ಲೋಲಾಡುತ್ತಿದ್ದಳು.

ಬರಲಿರುವ ಉತ್ಪತ್ತಿಯ ಬಗ್ಗೆ ಆಕೆ ಲೆಕ್ಕ ಹಾಕಿದ್ದೇ ಹಾಕಿದ್ದು.

ಕಿರಿಯ ಮಗನಿಗೆ ಹೇಳಿದಳು.

"ರಂಗಾ, ಬೆಳೆ ಮನೆಗೆ ಬಂದ ಮೇಲೆ ನಿಮಗೆ ಪಾಠ ಹೇಳುತ್ತಿರುವ ಅಯ್ಯನವರಿಗೆ ಎರಡು ಕೊಡ ಜೋಳ ಕೊಡೋಣ. ನಿನಗೆ ಒಂದಲ್ಲ, ಎರಡು! ಒಟ್ಟಿಗೇ ಜೊತೆ ಚಲ್ಲಣ ಹೊಲಿಸಿ ಬಿಡುತ್ತೇನೆ ಕಣೋ" ಉಬ್ಬಿ ಉಬ್ಬಿ ಹೇಳಿದಳು ಆಕೆ.

ಪಕ್ಕದಲ್ಲಿ ಕುಳಿತಿದ್ದ ಇನ್ನೊಬ್ಬ ಮಗ ಶೀನ ತನ್ನ ಅಪೇಕ್ಷೆಯನ್ನೂ ಮುಂದಿಟ್ಟ.

"ಅಮ್ಮಾ, ನನಗೂ ಒಂದು ಜೊತೆ ಚಲ್ಲಣ ಹೊಲಿಸಮ್ಮ, ಲಕ್ಷಣವಾಗಿ ಉಟ್ಟುಕೊಂಡು ಊರಲ್ಲೆಲ್ಲಾ 'ಜುಂ' ಎಂದು ಅಡ್ಡಾಡಿ ಬರುತ್ತೇನೆ."

"ಹಾಗೆಲ್ಲಾ ಕೇಳಬೇಡ ಮರಿ. ರಂಗ ಸಣ್ಣವನು. ಬಟ್ಟೆಗಳನ್ನು ಬೇಗ ಹರಿದುಕೊಳ್ಳುತ್ತಾನೆ. ಅವನಿಗಿನ್ನೂ ತಿಳಿಯದು. ಆದ್ದರಿಂದ ಅವನಿಗೆ ಎರಡು ಚಲ್ಲಣ. ನೀನು ದೊಡ್ಡವನು. ನಿನಗೆ ಎರಡು ಕೊಡಿಸಿದರೆ ಹೇಗೊ? ಈ ವರ್ಷ ಒಂದು ಹೊಲಿಸುತ್ತೇನೆ. ಅದನ್ನು ಹಾಕಿಕೊಂಡು 'ಜುಂ' ಅಂತ ಅಡ್ಡಾಡಿ ಬರುವಿಯಂತೆ."

"ಈಗ ತೊಡುತ್ತಿರುವ ಚಲ್ಲಣ ಹರಿದು ಹೋಗಿದೆ" ತೋರಿದ ಸೀನ - ಹಿಂದೆ ಮುಂದೆ ಕೂಡಾ ದೊಡ್ಡ ತೂತುಗಳು.

"ಹರಿದಿರಲಿ ಬಿಡೋ. ಬೆಳಿಗ್ಗೆ ಎದ್ದೊಡನೆ 'ಅಮ್ಮ ಬಿಚ್ಚು. ಅವರಸರವಾಗಿದೆ' ಎಂದು ಕೂಗುವ ಪ್ರಮೇಯವೇ ಇಲ್ಲ. ಮುಲಾಜಿಲ್ಲದ ಕೆಲಸ ನಿನ್ನದು. ಸಾಲೆಯ ಅಯ್ಯಪ್ಪನವರು ನೀನು ಎದ್ದು ಒಂದು ಅಥವಾ ಎರಡು ಬೆರಳು ತೋರಿಸಿದೊಡನೆ 'ಹೋಗು ಹೋಗು' ಎಂದು ಕಳಿಸಿಬಿಡುತ್ತಾರೆ. ಸಾಲೆ ಹೊಲಸಾಗುತ್ತದೆ ಎಂದು ಅಯ್ಯಪ್ಪನವರೇ ನಿನಗೆ ಹೆದರುತ್ತಾರೆ" ಹೇಳುತ್ತಾ ಕಿಸಿ ಕಿಸಿ ನಕ್ಕ ಇನ್ನೊಬ್ಬ ಮಗ ದಾಸಣ್ಣ.

ಸೀನನಿಗೆ ರೇಗಿ ಹೋಯಿತು.

"ನಿನ್ನ ಚಲ್ಲಣ ಏನು ಮಹಾ ಬಿಡೋ, ಮೊನ್ನೆ ಗಾರೇ ಮನೆ ಲಿಂಗಜ್ಜಿ ನಿನ್ನ ಬಕುಣದಲ್ಲಿ ಹುರಕ್ಕಿ ಹಾಕಲು ಪ್ರಯತ್ನಿಸಿ ಆಮೇಲೆ ಗುಡಿಸಲು ಕಸಬರಿಗೆ ಹುಡುಕ ಬೇಕಾಯಿತು. ಮೊನ್ನೆ ನಾಗರ ಪಂಚಮಿ ದಿನ - ರಾಮಕ್ಕ ಕೊಟ್ಟ ತಂಬಿಟ್ಟು, ನಿನ್ನ ಜೇಬಿನಲ್ಲಿ ಇಳಿಬಿಟ್ಟು, ಕೆಳಗೆ ಬಿದ್ದು ಆಯ್ತು ಹಿಟ್ಟೆಟ್ಟು" ದಾಸನ ಮುಖ ಪೆಚ್ಚಾಗಿದ್ದು ನೋಡಿ ಸೀನ ಹಿರಿಹಿರಿ ಹಿಗ್ಗಿದ.

"ಸುಮ್ಮನೆ ಜಗಳವಾಡಬೇಡಿರೋ, ಈ ವರ್ಷ ಇಬ್ಬರಿಗೂ ಒಂದೊಂದು ಚಲ್ಲಣ ಹೊಲಿಸುತ್ತೇನೆ. ಚಲ್ಲಣಕ್ಕೆ ದೊಡ್ಡ ಬಕುಣ ಇಡುವಂತೆ ಮಾಡುತ್ತೇನೆ" ತಾಯಿಯ ಮಾತು ಕೇಳಿ ದಾಸಣ್ಣ ಹಿರಿ ಹಿರಿ ಹಿಗ್ಗಿದ.

ಆದರೆ ಸೀನ ಸಮಾಧಾನಗೊಳ್ಳಲಿಲ್ಲ. ಅವನ ತಕರಾರು ಅವನದು.

"ಈಗ ತೊಡುತ್ತಿರುವ ಚಲ್ಲಣ ಪೂರ್ತಿ ಹರಿದು ಹೋಗಿದೆ. ಮುಂದೆಯೂ ಒಂದೇ ಆದರೆ ಹೇಗಮ್ಮಾ? ಅದನ್ನು ಒಗೆದು ಆರಿ ಹಾಕಿದಾಗ - ಉಟ್ಟುಕೊಳ್ಳಲು ಇನ್ನೊಂದು ಬೇಕೇ ಬೇಕಮ್ಮಾ" ಹಠ ಹಿಡಿದ ಸೀನ.

"ಇನ್ನೊಂದು ಸುಮ್ಮನೆ ಏಕೋ? ಈಗೆಲ್ಲಾ ಚಲ್ಲಣ ಒಗೆಯುತ್ತಿರುವಾಗ ಗುಡಿಯ ಅಂಗಳದಲ್ಲಿ ಹಾಗೆಯೇ ಆಡಿಕೊಂಡಿರುವುದಿಲ್ಲವೇ? ಮುಂದೆಯೂ ಹಾಗೆಯೇ ಇದ್ದರಾಯಿತಪ್ಪಾ. ಹೇಗೂ ಇನ್ನೊಂದು ವರ್ಷಕ್ಕೆ ಮತ್ತೊಂದು ಹೊಲಿಸುತ್ತೀನಲ್ಲಾ; ಆಗ ಒಟ್ಟಿಗೆ ಎರಡಾಗುವುದಿಲ್ಲವೇ?" ತಾಯಿ ತರ್ಕಬದ್ಧವಾಗಿ ವಾದಿಸಿದಳು. "ಹೋಗಮ್ಮ, ಚಲ್ಲಣ ಇಲ್ಲದೆ ಆಡಿಕೊಂಡಿರುವುದಕ್ಕೆ ನನಗೆ ನಾಚಿಕೆಯಾಗುತ್ತದೆ" ಮುನಿಸಿನಿಂದ ಹೇಳಿದ ಸೀನ.

"ನಿನ್ನ ತಲೆ; ಏನು ಬಹಳ ದೊಡ್ಡವನಾಗಿದ್ದಿ. ನಾಚಿಕೆಯಂತೆ ನಾಚಿಕೆ. ಬಿಸಿಲಿನಲ್ಲಿ ಹಾಗೆಯೇ ಆಡಿಕೊಂಡಿದ್ದರೆ ಮಕ್ಕಳ ಮೈ ಗಟ್ಟಿಯಾಗುತ್ತದೆ ಕಣೋ" ರಮಿಸುವ ಧ್ವನಿಯಲ್ಲಿ ಹೇಳಿದಳು ತಾಯಿ.

ಬಿಡಲಿಲ್ಲ ಸೀನ. ಇನ್ನೊಂದು ಚಲ್ಲಣ ಬೇಕೇ ಬೇಕು ಎನ್ನುವುದಕ್ಕೆ ಸರಿಯಾದ ಕಾರಣ ಕೊಟ್ಟ.

"ನಾನೇನೋ ಹಾಗೆ ಆಡಿಕೊಂಡಿರುತ್ತೇನೆ. ಆದರೆ ಈ ರಂಗ ಸುಮ್ಮನಿರುತ್ತಾನೆಯೇ? ಹಾಗೆ ನಿಂತೊಡನೆ ಜಗ್ಗಲು ಇವನು ಓಡಿ ಬರುತ್ತಾನಮ್ಮಾ" ದೂರು ಕೊಟ್ಟ ಅವನು.

"ಇನ್ನೊಮ್ಮೆ ಅವನು ಹಾಗೆ ಮಾಡಿದರೆ ಅವನದನ್ನೇ ಕಪ್ಪೆಗೆ ಕೊಟ್ಟು ಬಿಡೋಣ ಸುಮ್ಮನಿರೋ" ಮಾತಿನ ಮಧ್ಯೆ ಇನ್ನೊಬ್ಬ ಮಗ ದಾಸಣ್ಣ ಪ್ರವೇಶಿಸಿ ಪರಿಹಾರ ಸೂಚಿಸಿದ ಭೂಪ.

ತಾಯಿ ಮುಸಿ ಮುಸಿ ನಕ್ಕಳು. ಸೀನನಿಗೆ ಈಗ ನಿಜಕ್ಕೂ ಯೋಚನೆಗಿಟ್ಟು ಕೊಂಡಿತು. ಅವನಿಗೆ ಏನೋ ಹೆದರಿಕೆ. ಮೆಲ್ಲಗೆ ತಾಯಿಯ ಪಕ್ಕಕ್ಕೆ ಸರಿದು ಪ್ರಾರ್ಥನೆಯ ಧ್ವನಿಯಲ್ಲಿ ಹೇಳಿದ.

"ಅಮ್ಮಾ, ರಂಗನದು ಕಪ್ಪೆಗೆ ಕೊಡುವುದು ಬೇಡಮ್ಮಾ, ಪಾಪ ಅವನದು ಅವನಿಗಿರಲಿ. ನನ್ನದನ್ನು ಜಗ್ಗಲು ಬಂದಾಗ ಓಡಿ ಹೋಗಿ ನಾನೇ ತಪ್ಪಿಸಿಕೊಳ್ಳುತ್ತೇನೆ" ತಮ್ಮನ ಮೇಲೆ ಭಾರೀ ಪ್ರೀತಿ ಅವನಿಗೆ.

ಆದರೆ ಅವನಿಗೆ ಇದ್ದಕ್ಕಿದ್ದಂತೆ ಇನ್ನೊಂದು ಭಯ ಹುಟ್ಟಿಕೊಂಡಿತು.

"ಅಮ್ಮಾ, ರಂಗನದೇನೋ ಕಪ್ಪೆಗೆ ಕೊಡುವುದು ಬೇಡ. ಆದರೆ ಕಪ್ಪೆ ನನ್ನದನ್ನೇ ತಿನ್ನಲು ಬಂದರೆ.......?" ಅವನ ತರ್ಕ ಅವನಿಗೆ.

ತಾಯಿ ಸಮಾಧಾನ ಪಡಿಸಿದಳು.

"ನೀನು ಓಡಾಡಿಕೊಂಡಿರುತ್ತಿ. ಕಪ್ಪೆ ಹೇಗೆ ಬರುತ್ತದೋ ನಿನ್ನ ತಲೆ."

"ಅಲ್ಲಮ್ಮಾ, ಆಡಿಕೊಂಡಿರುವಾಗ ಭಯವಿಲ್ಲ. ಆದರೆ ರಾತ್ರಿ ಭಾಗಣ್ಣನ ಪಕ್ಕದಲ್ಲಿ ಮಲಗಿದ್ದಾಗ ....ಕಪ್ಪೆ ಬಂದರೆ............?" ಸಂಶಯ ವ್ಯಕ್ತಪಡಿಸಿದ ಅವನು.

"ಭಾಗಣ್ಣನಿಗೂ ಕಪ್ಪೆಗೂ ಏನೋ ಸಂಬಂಧ?"ತಾಯಿ ಸಿಟ್ಟಿನಿಂದ ಕೇಳಿದಳು.

"ಸುಮ್ಮನಿರಮ್ಮ. ನಂಗೆಲ್ಲಾ ಗೊತ್ತು. ಅವೊತ್ತು ಶ್ಯಾನುಭೋಗ ಗುಂಡಪ್ಪನವರು ಭಾಗಣ್ಣನ ತೊಡೆ ಕೊಯ್ದು ಕಪ್ಪೆ ಬಿಟ್ಟಿಲ್ಲವೇ?. ಅದಕ್ಕೆ, ಅಲ್ಲವೇ ಮುಂಜಿ ಎಂದು ಹೇಳುವುದು? ಆ ದಿನ ಬಿಟ್ಟ-ಅಣ್ಣನ ತೊಡೆಯಲ್ಲಿಯ ಕಪ್ಪೆ - ನಾವೆಲ್ಲಾ ಮಲಗಿದ್ದಾಗ ಮೆಲ್ಲಗೆ ಹೊರಗೆ ಬಂದು ನನ್ನದನ್ನು ತಿಂದು ಬಿ.....ಟ್ಟ......ರೆ?" ನ್ಯಾಯವಾದ ಸಂಶಯ ಅವನದು.

ಇಂಥ ಪ್ರಶ್ನೆಗಳನ್ನು ಎದುರಿಸದ ತಾಯಂದಿರು ಎಲ್ಲಿದ್ದಾರೆ? ಇಂಥವಕ್ಕೆಲ್ಲಾ ಯಾವ ತಾಯಿ ಉತ್ತರ ಕೊಟ್ಟಿದ್ದಾಳೆ?

"ಸುಮ್ಮನೆ ಮಲಗಿರೋ. ಭಾಗಣ್ಣ ಮಲಗಿದ್ದಾನೆ. ಅವನು ಬೆಳಗಿನ ಜಾವ ಹೊತ್ತಾರೆ ಏಳುವವನು. ಗಲಾಟೆ ಮಾಡಿ ಅವನನ್ನು ಎಬ್ಬಿಸಬೇಡಿ" ಗದರಿದಳು ತಾಯಿ. ಮಕ್ಕಳೇನೋ ಗಪ್ಪಗೆ ಮಲಗಿದರು.

ತಾಯಿ ವೆಂಕಮ್ಮ ಬೆಳೆ ಬಂದ ಮೇಲೆ ಏನೆಲ್ಲಾ ಮಾಡಬೇಕೆಂದು ನಾನಾ ಕನಸುಗಳನ್ನು ಕಾಣತೊಡಗಿದಳು.

ತನ್ನ ಕನಸು ಕನಸಾಗಿಯೇ ಉಳಿಯುತ್ತದೆ ಎಂದು ತಿಳಿಯಲಿಲ್ಲ ಆಕೆಗೆ. ಶ್ಯಾನಭೋಗ ವೆಂಕಣ್ಣನವರು ಬಂದು ಗುತ್ತಿಗೆ ಧನ ಕೇಳಿದಾಗಲೇ ಆಕೆ ವಾಸ್ತವಿಕ ಜಗತ್ತಿಗೆ ಬಂದದ್ದು.

"ಬೆಳೆಯೇ ಕೈಗೆ ಬಂದಿಲ್ಲ. ಗುತ್ತಿಗೆ ಎಲ್ಲಿ ನೀಡುವುದು ಶ್ಯಾನಭೋಗರೆ"

"ಹೊಲಕ್ಕಷ್ಟೇ ಆಗಿದ್ದರೆ ಬೆಳೆ ಬಂದ ಮೇಲೆ ಗುತ್ತಿಗೆ ಧನ ನೀಡಬಹುದಿತ್ತು. ಆದರೆ ನಿನ್ನ ಹೊಲಕ್ಕೆ ಸರ್ಕಾರಿ ಕೆರೆಯ ನೀರನ್ನು ಅಪ್ಪಣೆ ಇಲ್ಲದೆ ಉಪಯೋಗಿಸಿ ಕೊಂಡಿದ್ದಿ. ದರ್ಬಾರಿನಿಂದ ಮಂಜೂರಾತಿ ಬಂದ ಮೇಲೆ ಬಳಸಬೇಕಾದ ನೀರನ್ನು ಮೊದಲೇ ಬಳಸಿದ್ದಕ್ಕಾಗಿ 'ದಂಡ' ವಿಧಿಸಲಾಗಿದೆ. ಇದು ರಾಜ ಶಾಸನ. ಈ ಶಾಸನ ಯಾರಿಗೂ ತಪ್ಪಿದ್ದಲ್ಲಮ್ಮಾ" ಶ್ಯಾನಭೋಗ ನಯವಾಗಿ ಹೇಳಿದ.

ಕೆರೆಯ ನೀರನ್ನು ವೆಂಕಮ್ಮ ಬಳಸಿಯೇ ಇರಲಿಲ್ಲ. ಆರೋಪವನ್ನು ಕೇಳಿ ಆಕೆ ಕಕ್ಕಾಬಿಕ್ಕಿಯಾದಳು.

"ಕೆರೆಯ ನೀರನ್ನು ಹೊಲಕ್ಕೆ ಎಲ್ಲಿ ಹರಿಸಿದ್ದೇನೆ ಶ್ಯಾನಭೋಗರೇ? ಆ ನೀರಿನ ಗೊಡವಿಗೇ ನಾನು ಹೋಗಿಲ್ಲ" ಗದ್ಗದಿತ ಕಂಠದಿಂದ ನಿವೇದಿಸಿದಳು ವೆಂಕಮ್ಮ.

"ನೀರಿನ ಗೊಡವೆಗೆ ನೀನು ಹೋಗದಿದ್ದರೆ ಏನಾಯಿತಮ್ಮ? ನೀರೇ ನಿನ್ನ ಹೊಲದ ಗೊಡವೆಗೆ ಬಂದಿದೆಯಲ್ಲಾ? ಕೆರೆ ನೀರಿನ ತಣಿವನ್ನು ನಿನ್ನ ಹೊಲ ಪಡೆದುಕೊಂಡಿದೆ. ನಿನ್ನ ಬೆಳೆಯ ಬೇರುಗಳು ಕೆರೆಯ ನೀರನ್ನು ಒಳಗಿಂದೊಳಗೆ ಸೇವಿಸಿವೆ. ಕೆರೆಯ ನೀರನ್ನು ನೀನು ಹರಿಸಿಕೊಂಡರೂ ಅಷ್ಟೆ. ನಿನ್ನ ಬೆಳೆ ತಾನೇ ಪಡೆದುಕೊಂಡರೂ ಅಷ್ಟೆ. ಒಟ್ಟಿನ ಮೇಲೆ ನಿನ್ನ ಪೈರು ಸರ್ಕಾರಿ ನೀರನ್ನು ಪಡೆದಿವೆ. ಆದ್ದರಿಂದ ನಿನಗೆ ದಂಡ ತಪ್ಪಿದ್ದಲ್ಲ" ಕಟುವಾಗಿ ಹೇಳಿದರು ವೆಂಕಣ್ಣನವರು.

"ದಂಡ ಎಷ್ಟಾಗಬಹುದು?" ಭೀತಿಯಿಂದ ಕೇಳಿದಳು ವೆಂಕಮ್ಮ.

ವೆಂಕಣ್ಣನವರು ಬಹಳ ಹೊತ್ತು ಲೆಕ್ಕಾಚಾರ ಮಾಡತೊಡಗಿದರು. ಅವರ ಸ್ವಭಾವವೇ ಅಷ್ಟು. ಕಾನೂನನ್ನು ಹೇಗೆ ಬೇಕಾದರೂ ತಿರುಚುತ್ತಾರೆ. ಲೆಕ್ಕದಲ್ಲಿ ಹೇಗೆ ಬೇಕಾದರೂ ಹೆಚ್ಚಿಸುತ್ತಾರೆ. ಅದೇನೆಂದು ಜನರು ಪ್ರಶ್ನಿಸುವಂತಿಲ್ಲ. ರಾಜರವರೆಗೆ ಯಾರೂ ದೂರು ಒಯ್ಯುವುದಿಲ್ಲ. ಸರ್ಕಾರಿ ದಾಖಲೆಯ ವಿಷಯವೆಂದರೆ ತಿದ್ದುಪಡಿ ಇಲ್ಲದ್ದು ಎಂಬ ಭಾವನೆ. ಸರ್ಕಾರಿ ಹಣದ ಪ್ರಶ್ನೆ ಬಂದರೆ ಗ್ರಾಮದಲ್ಲಿ ಯಾರೂ ಎದುರು ಮಾತನಾಡುವಂತಿಲ್ಲ. ಅದು ರಾಜದ್ರೋಹವೆಂದು ಜನರ ನಂಬಿಕೆ.

ಬಹಳ ಹೊತ್ತು ಲೆಕ್ಕಾಚಾರ ಮಾಡಿದ ವೆಂಕಣ್ಣನವರು ಕಡೆಗೆ ಹೇಳಿದರು;

"ಈಗ ಹೊಲದಲ್ಲಿ ಬೆಳೆದಿರುವ ಬೆಳೆಯನ್ನೆಲ್ಲಾ ನಾವು ಒಯ್ದು ಮೇಲೆ ಇನ್ನೂ ಎರಡು ಪಲ್ಲ ಧಾನ್ಯ ನೀನೇ ನೀಡಬೇಕಾಗುತ್ತದಮ್ಮ."

ಏನು ಲೆಕ್ಕಾಚಾರ ಅವರದು! ಹೌದು, ಲೆಕ್ಕಕ್ಕೇ ಆಚಾರವಿಲ್ಲ. ಈ ವಿಚಾರ ಊರಿಗೆಲ್ಲಾ ಗೊತ್ತಾದರೂ ಯಾರೂ ಚಕಾರವೆತ್ತಲಿಲ್ಲ.

ಮರುದಿನ ಬೆಳೆಯನ್ನೆಲ್ಲಾ ಕೊಯ್ದುಕೊಂಡು ಹೋಗಲು ಆಳುಗಳೊಂದಿಗೆ ವೆಂಕಣ್ಣನವರು ಹೊಲಕ್ಕೆ ಬಂದಾಗ ವೆಂಕಮ್ಮನಿಗೆ ಆಕಾಶವೇ ತಲೆಯ ಮೇಲೆ ಕಳಚಿ ಬಿದ್ದಂತಾಯಿತು.

ಶ್ಯಾನಭೋಗರ ಕಾಲು ಹಿಡಿದು ಕೇಳಿದಳು ಆಕೆ.

"ಮಕ್ಕಳುಂದಿಗಳು ನಾನು. ಮಕ್ಕಳು ಉಪವಾಸದಿಂದ ಸಾಯುತ್ತವೆ. ಈ ಬೆಳೆ ಇಲ್ಲವಾದರೆ ನನ್ನ ವಂಶ ನಿರ್ವಂಶವಾಗುತ್ತದೆ. ಶ್ಯಾನಭೋಗರೇ ನಮ್ಮನ್ನು ನಾಶ ಮಾಡಬೇಡಿ."

ಆಕೆಯ ಆರ್ತತೆಯಿಂದ ಶ್ಯಾನಭೋಗರ ಹೃದಯ ದ್ರವಿಸಲಿಲ್ಲ.

ಅಷ್ಟರಲ್ಲಿ ಅದು ಹೇಗೋ ಭಾಗಣ್ಣ ಆ ಹೊಲದ ಬಳಿ ಬಂದ.

ಶ್ಯಾನಭೋಗರು ವೆಂಕಮ್ಮನಿಗೆ ಹೇಳಿದರು.

"ನಿನ್ನ ಮಕ್ಕಳು ಸಾಯುವ ಮಾತು ಇರಲಮ್ಮಾ. ನಾಳೆ ರಾಜರಿಗೆ ಹಣ ಮುಟ್ಟಿಸದಿದ್ದರೆ ನನ್ನ ಮಕ್ಕಳು ಸಾಯಬೇಕಾಗುತ್ತದೆ. ಕೆರೆಯ ನೀರಿಗೆ ಯಾವಪ್ಪ ಲೆಕ್ಕ ಕೊಡಬೇಕು?"

ಬೆಳೆ ಕೊಯ್ಯಲು ಆಳುಗಳಿಗೆ ಆಜ್ಞೆ ಆಯಿತು. ಬೆಳೆ ಕೊಯ್ದು ಒಂದೊಂದು ಸೂಡುಕಟ್ಟಿ ಆಳುಗಳು ಒಯ್ಯುತ್ತಿದ್ದರೆ ವೆಂಕಮ್ಮನಿಗೆ ಹೃದಯವನ್ನು ಸೀಳಿ ಸೂಡು ಕಟ್ಟಿ ಒಯ್ಯುತ್ತಿರುವಂತೆ ಭಾಸವಾಯಿತು.

ಗೋಳಾಡಿಬಿಟ್ಟಳು ವೆಂಕಮ್ಮ. ಕೆರೆಯ ನೀರಿನ ಬೆಲೆ ವೆಂಕಮ್ಮನ ಕಣ್ಣೀರಿಗೆ ಬರಲಿಲ್ಲ.

ಕಡೆಯ ಸೂಡನ್ನು ಮನೆಗೆ ಸಾಗಿಸುತ್ತಾ ಶ್ಯಾನಭೋಗರು ಹೇಳಿದರು.

"ಕೆರೆಯ ನೀರಿನ ಲೆಕ್ಕವಮ್ಮ ಇದು. ರಾಜರಿಗೆ ಇದನ್ನು ಮುಟ್ಟಿಸದಿದ್ದರೆ ನಿನ್ನ ಮಕ್ಕಳು ಇರಲಿ! ನನ್ನ ಮಕ್ಕಳು ಸಾಯಬೇಕಾಗುತ್ತದೆ" ಕುಟಿಲ ಧ್ವನಿಯಿಂದ ಹೇಳಿ ವೆಂಕಣ್ಣ ಮನೆಯ ಕಡೆಗೆ ಸಾಗಿದ.

ವೆಂಕಮ್ಮ ಕುಸಿದು ಕುಳಿತಳು.

ಭಾಗಣ್ಣ ಮೆಲ್ಲಗೆ ಬಂದು ತಾಯಿಯನ್ನು ಎಬ್ಬಿಸುತ್ತಾ ಹೇಳಿದ.

ಅವನ ಮುಖದಲ್ಲಿ ಆವೇಶ ತುಂಬಿತ್ತು. ತಾಯಿಯ ಕಣ್ಣೀರು ಅವನ ಶಾಂತತೆಯನ್ನು ಕದಡಿಬಿಟ್ಟಿತ್ತು.

"ಅಮ್ಮ, ಎದ್ದೇಳು. ಕೆರೆಯ ನೀರಿನ ಲೆಕ್ಕವಲ್ಲವೇ ಇವರಿಗೆ ! ಆಗಲಿ. ಇನ್ನು ಮೇಲೆ ಲೆಕ್ಕವಷ್ಟೇ ಇರಲಿ. ಕಾಗೆ ಬಂದು ಕುಡಿಯುವುದಕ್ಕೂ ಇನ್ನು ಮುಂದೆ ಈ ಕೆರೆಗೆ ನೀರು ಬರುವುದಿಲ್ಲ. ತಮ್ಮ ಮಕ್ಕಳು ಸಾಯುತ್ತಾರೆಂದಲ್ಲವೇ ಶ್ಯಾನಭೋಗರು ಹೇಳಿದ್ದು ! ಆಗಲಮ್ಮ ಅವರೇ ಹೇಳಿದ್ದಾರೆ. ಅವರ ವಂಶ ಹಾಗೆಯೇ ಆಗಲಿ."

ಗಂಭೀರ ಧ್ವನಿಯಿಂದ ಭಾಗಣ್ಣ ನುಡಿದದ್ದನ್ನು ಕೇಳಿ ವೆಂಕಮ್ಮ ಭೀತಿಯಿಂದ ಮಗನನ್ನು ನೋಡಿದಳು. ಈ ದೃಶ್ಯ ನೋಡುತ್ತಿದ್ದ ಗ್ರಾಮದ ಅನೇಕ ಜನರು ಭಾಗಣ್ಣನ ಮುಖದಲ್ಲಿ ಉಕ್ಕುತ್ತಿದ್ದ ಆವೇಶ ಕಂಡು ಅವಾಕ್ಕಾದರು.

ಶಾಂತ ಸ್ವಭಾವದ ಹುಡುಗ. ಎಂದೂ ಮುನಿದಿದ್ದನ್ನು ಯಾರೂ ನೋಡಿಲ್ಲ. ಅಂಥವನು ಈ ದಿನ ಆಡಿದ ಮಾತು ಕೇಳಿ ಊರಿನ ಜನ ಭೀತಿಗೊಂಡರು. ಶ್ಯಾನಭೋಗ ವೆಂಕಣ್ಣನಿಗೆ ಏನೋ ವಿನಾಶ ಕಾದಿದೆ ಎಂದು ಅವರು ತರ್ಕಿಸಿದರು.

ಜನರ ತರ್ಕ ಹುಸಿಯಾಗಲಿಲ್ಲ. ಅವರಿಗಿದ್ದ ಮೂರು ಗಂಡು ಮಕ್ಕಳೂ ಮೂರೇ ಮಾಸದಲ್ಲಿ ಮಸಣ ಸೇರಿದರು.

ಒಬ್ಬನು ಭಾವಿಯಲ್ಲಿ ಬಿದ್ದು ಸತ್ತ. ಇನ್ನೊಬ್ಬನಿಗೆ ಅಡವಿ ಇಲಿ ಕಡಿದು ವಿಷದ ನಂಜೇರಿ ಸತ್ತ. ಇನ್ನೊಬ್ಬನಿಗೆ ಹಾವು ಕಡಿಯಿತು.

ಅದಕ್ಕಿಂತ ಮೊದಲೇ ಹೊಲದ ಪಕ್ಕದಲ್ಲಿದ್ದ ಕೆರೆಯ ನೀರು ಬತ್ತಿ ಹೋಗಿತ್ತು.

ಭಾಗಣ್ಣನ ವಾಕ್‌ಶಕ್ತಿ ಜನರಿಗೆಲ್ಲಾ ಗೊತ್ತಾಗಿ ಹೋಯಿತು. ತಪಸ್ ಸಿದ್ಧಿ ಕಂಡು ಜನರು ಅವಾಕ್ಕಾದರು.

ಪರಿಹಾರವಾಗಿ ವೆಂಕಮ್ಮನಿಗೆ ಅವರು ನೀಡಿದ ಧಾನ್ಯ ಗುಡಿಯಲ್ಲಿ ರಾಶಿ ರಾಶಿಯಾಗಿ ಬಂದು ಬಿದ್ದಿತು. ಅದನ್ನು ನೋಡಿ ವೆಂಕಮ್ಮನಿಗೆ ಆನಂದವೋ ಆನಂದ.

ಭಾಗಣ್ಣ ಮಾತ್ರ ಈ ಘಟನಾವಳಿಗಳಿಂದ ತತ್ತರಿಸಿ ಹೋದ.

"ಪರಮಾತ್ಮಾ, ನನ್ನಿಂದ ಎಂಥಾ ನುಡಿ ಆಡಿಸಿಬಿಟ್ಟೆ. ಪಾಪ, ಶ್ಯಾನಭೋಗರ ವಂಶ ನಿರ್ವಂಶವಾಗಿಸಿ ಬಿಟ್ಟೆಯಲ್ಲಾ, ನನ್ನಿಂದ ಏಕೆ ಅಂಥಾ ಕಠೋರ ನುಡಿ ಆಡಿಸಿಬಿಟ್ಟೆ? ಏಕಯ್ಯಾ ನನ್ನಿಂದ ಆ ದಿನ ಅಷ್ಟು ಸಿಟ್ಟು ಹೊರ ಹೊಮ್ಮಿಸಿದೆ? ನನ್ನ ಯತ್ನ ಮೀರಿ ಬಂದ ವಾಕ್ಯಗಳವು. ಪರಮಾತ್ಮಾ ಈ ಅಪರಾಧದಿಂದ ನೀನೇ ಕಾಪಾಡು."

ಎಂದು ಕಣ್ಣೀರು ತುಂಬಿ ಆಕಾಶದೆಡೆಗೆ ನೋಡುತ್ತಾ ಕೈ ಮುಗಿಯುತ್ತಿದ್ದ

ಜನರು ಮಾತ್ರ ಆತನಿಗೇ ಕೈ ಮುಗಿಯುತ್ತಿದ್ದರು.

೫

ಶ್ಯಾನಭೋಗ ವೆಂಕಣ್ಣನವರ ಮಕ್ಕಳೆಲ್ಲಾ ತೀರಿ ಹೋದರು. ಭಾಗಣ್ಣನ ಶಾಪಶಕ್ತಿಗೆ ಕೆರೆಯ ನೀರು ಬತ್ತಿ ಹೋಯಿತು. ಆಮೇಲೆ ಬಿದ್ದ ಮಳೆಯಿಂದಲೂ ಕೆರೆಯಲ್ಲಿ ನೀರು ನಿಲ್ಲಲಿಲ್ಲ.

ಈ ಘಟನೆಯಿಂದ ಶ್ಯಾನಭೋಗ ವೆಂಕಣ್ಣನಿಗೆ ಭಾಗಣ್ಣನ ಯೋಗ್ಯತೆ ಯೇನೆಂಬ ಅರಿವು ಉಂಟಾಯಿತು. ತನ್ನ ದುಷ್ಕೃತ್ಯಕ್ಕೆ ತಾನೇ ಪಶ್ಚಾತ್ತಾಪ ಪಟ್ಟ. ಆದ ಅನಾಹುತಕ್ಕೆ ಕಣ್ಣೀರು ಇಟ್ಟ.

ವೆಂಕಣ್ಣನಿಗಿಂತಲೂ ಈ ಘಟನೆಯಿಂದ ಹೆಚ್ಚು ರೋದಿಸಿದವರೆಂದರೆ ಬಾಲಕ ಭಾಗಣ್ಣನೆ.

ತನ್ನಿಂದ ಇಂಥ ಘೋರ ಮಾತುಗಳು ಬಂದವೇಕೆ? ತನ್ನ ಪ್ರಯತ್ನವಿಲ್ಲದೆ ಹೊಮ್ಮಿದ ಈ ನುಡಿಗಳಿಗೆ ಅಷ್ಟೊಂದು ಮಹತ್ವ ಬರಬೇಕೆ ? ಇಂಥ ಮಾತಿನ ಶಕ್ತಿಯನ್ನು ತಾನು ಹೀಗೆ ಉಪಯೋಗಿಸಬಹುದೆ? ಮಾತನಾಡುತ್ತಿರುವುದರಿಂದ ಇಂಥ ನುಡಿ ಹೊಮ್ಮಿತು. ದಿವ್ಯಶಕ್ತಿಯ ಅಪವ್ಯಯವಾಯಿತು. ಎಂದೆಲ್ಲಾ ಯೋಚಿಸಿ ಯೋಚಿಸಿ ಕಣ್ಣೀರುಗರೆಯುತ್ತಿದ್ದ ಭಾಗಣ್ಣ.

ಪಶ್ಚಾತ್ತಾಪದಿಂದ ನೊಂದು ಬೆಂದ ವೆಂಕಣ್ಣನವರು ಕಡೆಗೊಮ್ಮೆ ಭಾಗಣ್ಣನ ಬಳಿ ಬಂದರು.

"ಅಯ್ಯಾ ಮಹಾತ್ಮ. ಪುಟ್ಟ ಬಾಲಕ ನೀನು. ಪೆದ್ದು ಪೆದ್ದಾಗಿ ವರ್ತಿಸುವ ನಿನ್ನಲ್ಲಿ ಅಂಥ ಶಕ್ತಿಯಿರುತ್ತದೆಂದು ನಾನು ಊಹಿಸಿಕೊಳ್ಳಲಿಲ್ಲ. ನಿನಗೂ ನಿನ್ನ ತಾಯಿಗೂ ಬಹಳ ವೇದನೆ ಕೊಟ್ಟೆ. ಅದಕ್ಕಾಗಿ ನಾನು ಸಾಕಷ್ಟು ಶಿಕ್ಷೆ ಅನುಭವಿಸಿದ್ದಾಯಿತು. ಇನ್ನಾದರೂ ಕರುಣಿಸಿ ನನ್ನನ್ನು ಉದ್ಧರಿಸಪ್ಪಾ. ನನ್ನ ಆಸ್ತಿಯನ್ನೆಲ್ಲಾ ನಿನಗೆ ಧಾರೆಯೆರೆಯುತ್ತೇನೆ. ನನಗಿರುವ ಅಧಿಕಾರವನ್ನು ನಿನಗೆ ಬಿಟ್ಟುಕೊಡುತ್ತೇನೆ. ನನ್ನ ವಂಶ ನಿರ್ವಂಶವಾಗದಂತೆ ಮತ್ತೇನಾದರೂ ದಾರಿ ತೋರಿಸಿ ನನ್ನನ್ನು ಉದ್ಧರಿಸಪ್ಪಾ" ಪ್ರಾರ್ಥಿಸಿದ ವೆಂಕಣ್ಣ. ಕಣ್ಣಿನಲ್ಲಿ ಧಾರೆ ಧಾರೆಯಾಗಿ ನೀರಿಳಿಯುತ್ತಿತ್ತು.

ಭಾಗಣ್ಣನೂ ಸಮನಾಗಿ ದುಃಖಿಸುತ್ತಾ ನುಡಿದ.

"ನನ್ನನ್ನು ಕ್ಷಮಿಸಿಬಿಡಿ ಶ್ಯಾನಭೋಗರೆ, ಆ ದಿನ ಅಂಥ ನುಡಿ ಆಡಿದ್ದಕ್ಕಾಗಿ ನಿತ್ಯವೂ ರೋದಿಸುತ್ತಿದ್ದೇನೆ. ಮುತ್ತು ಒಡೆದರೆ ತರಬಹುದಲ್ಲದೆ ಆಡಿದ ಮಾತು, ಅದರಿಂದಾದ ಪರಿಣಾಮ ಮತ್ತೆ ವಾಪಸ್ ಬರುತ್ತದೆಯೆ? ಏನೆಲ್ಲಾ ಆಗಿದ್ದು ಪರಮಾತ್ಮನ ಸಂಕಲ್ಪ. ನಿಮ್ಮ ಹುಡುಗರ ಆಯುಷ್ಯ ಮುಗಿದಿತ್ತೇನೊ ! ಅದಕ್ಕಾಗಿಯೇ ನನ್ನಿಂದ ಅಂಥ ಮಾತು ಹೊರಟಿರಬೇಕು. ಆದ್ದರಿಂದ ಇನ್ನು ಮೇಲೆ ಮನಸ್ಸಿನ ಸಂಪೂರ್ಣ ನಿಯಂತ್ರಣಕ್ಕಾಗಿ ಎರಡು ವರ್ಷಗಳ ಕಾಲ ಮೌನ

ವ್ರತವನ್ನು ಆಚರಿಸಬೇಕೆಂದು ನಿರ್ಧರಿಸಿದ್ದೇನೆ. ನಾಳೆಯಿಂದಲೇ ನಾನು ಯಾರೊಂದಿಗೂ ಮಾತನಾಡುವುದಿಲ್ಲ. ಈ ದಿನ ನೀವು ಬಂದಿದ್ದು ನನ್ನ ಪುಣ್ಯದಿಂದಲೇ ಎಂಬ ನಂಬಿಕೆ ನನಗೆ. ನಿಮ್ಮ ಕ್ಷಮೆ ಕೇಳಬೇಕೆಂದು ನನ್ನ ಮನಸ್ಸು ಸದಾ ಹಂಬಲಿಸುತ್ತಿತ್ತು. ಆದರೆ ನಿಮ್ಮ ಬಳಿ ಬರುವುದಕ್ಕೆ ಅದೇಕೋ ಹಿಂಜರಿತ. ಈ ದಿನ ಬಂದಿದ್ದೀರಿ. ನಿಮ್ಮ ಕಾಲು ಹಿಡಿದು ಪ್ರಾರ್ಥಿಸುತ್ತೇನೆ. ನಿಮಗೆ ಸರಿ ಕಂಡ ಯಾವ ಶಿಕ್ಷೆಯನ್ನಾದರೂ ನೀಡುವುದರ ಮೂಲಕ ನನಗೆ ಸಮಾಧಾನ ಮಾಡಿ" ಭಾಗಣ್ಣನ ಪ್ರಾರ್ಥನೆ ಕೇಳಿ ವೆಂಕಣ್ಣ ಅವಾಕ್ಕಾಗಿ ಹೋದ.

ತನ್ನ ಕೃತ್ಯಕ್ಕೆ ಭಾಗಣ್ಣ ಇನ್ನೂ ಮುನಿದಿರಬೇಕೆಂದು ಅವನು ತರ್ಕಿಸಿದ್ದ. ಮತ್ತೆ ಕಾಣಿಸಿಕೊಂಡರೆ ತನ್ನನ್ನೂ ಶಪಿಸಿಯಾನು ಎಂದು ಹೆದರಿದ್ದ. ಆದರೆ ತುಂಬು ಹೃದಯದ ಭಾಗಣ್ಣನ ರೀತಿಯೇ ಬೇರೆಯಾಗಿತ್ತು.

ತುಂಬಿದ ಕೊಡ ಭಾಗಣ್ಣನ ಗುಣ.

ಬಂಗಾರದ ಪಾತ್ರೆ ಅವನ ಹೃದಯ. ತುಂಬಿದ ಕೊಡ ತುಳುಕುವುದಿಲ್ಲ. ಬಂಗಾರದ ಪಾತ್ರೆ ಕಿಲುಬು ಹಿಡಿಯುವುದಿಲ್ಲ.

ದೊಡ್ಡವರ ಮಾತಿನಲ್ಲಿ ಕೆಲವೊಮ್ಮೆ ಕಠಿಣತೆ ಕಂಡರೂ ಅದು ಹೆಚ್ಚು ಕಾಲ ಉಳಿಯುವುದಿಲ್ಲ. ದ್ವೇಷವನ್ನು ದೊಡ್ಡವರು ಎಂದೂ ಸಾಧಿಸುವುದಿಲ್ಲ. ತನ್ನಂಥ ಕ್ಷುದ್ರರೇ ಹಗೆತನ ಮುಂದುವರಿಸುತ್ತಾರೆ - ಮನದಟ್ಟಾಯಿತು ವೆಂಕಣ್ಣನವರಿಗೆ.

ವಂಶ ನಿರ್ವಂಶವಾಗಲಿ ಎಂದು ಆ ದಿನ ಬಾಲಕನ ಬಾಯಿಂದ ಬಂದಾಗಿತ್ತು. ಅದನ್ನು ವಾಪಸ್ ಪಡೆಯುವಂತೆ ಪ್ರಾರ್ಥಿಸಬೇಕೆಂದು ಈ ದಿನ ಬಂದಿದ್ದರೂ ಅದನ್ನು ಬಾಯಿಬಿಟ್ಟು ಕೇಳುವುದಕ್ಕೆ ಅವರಿಗೆ ನಾಚಿಕೆಯಾಯಿತು.

ಭಾಗಣ್ಣನೇ ಹೇಳಿದ.

"ನೋಡಿ ಶ್ಯಾನಭೋಗರೇ, ಈ ದಿನ ನೀವು ಬರುತ್ತೀರೆಂದು ನನಗೆ ಹೇಗೋ ಗೊತ್ತಾಯಿತು. ಅದು ಹೇಗೆ ಗೊತ್ತಾಗುತ್ತದೆಂದು ಮಾತ್ರ ಗೊತ್ತಾಗಿಲ್ಲ. ಎಷ್ಟೋ ಜನರು ನನ್ನ ಮುಂದೆ ಹಾಯ್ದಾಗ ಈ ದಿನ ಅವರು ಏನು ಉಣ್ಣುತ್ತಾರೆ, ನಾಳೆ ಏನು ಮಾಡುತ್ತಾರೆ ಎಂದೆಲ್ಲಾ ಕಣ್ಣಿಗೆ ಕಟ್ಟಿದಂತಾಗುತ್ತದೆ. ಅದನ್ನು ಪರೀಕ್ಷಿಸಿದಾಗ ನಿಜವೆಂದೂ ಗೊತ್ತಾಗಿದೆ. ನನಗೆ ಲಭ್ಯವಾಗಿರುವ ಈ ಶಕ್ತಿಯ ದುರ್ವಿನಿಯೋಗವಾದರೆ ಗತಿಯೇನು ಎಂಬ ಹೆದರಿಕೆ ಉಂಟಾಗಿದೆ. ಆದ್ದರಿಂದ ನಾಳೆಯಿಂದಲೇ ಮೌನವ್ರತ ಹಿಡಿಯುತ್ತೇನೆ. ಈ ದಿನ ನೀವು ಹೇಗೂ ಬಂದಿದ್ದೀರಿ. ನಿಮ್ಮ ಮಕ್ಕಳೆಲ್ಲ

ಸತ್ತು ನಿರ್ವಂಶವಾಗಿದೆ. ಆ ದಿನ ತಾನೇ ತಾನಾಗಿ ಹೊರಟ ವಾಕ್ಯಗಳಿಗೆ ಈ ದಿನ ನಾನೂ ಏನೂ ಮಾಡಲಾರೆ. ನಿಮಗೀಗ ಪಶ್ಚಾತ್ತಾಪವಾಗಿದೆ. ಆದ್ದರಿಂದ ಗಾಯತ್ರಿ ನಾಮದ ಪರಮಾತ್ಮ ನಿಮ್ಮನ್ನು ಅನುಗ್ರಹಿಸಲಿದ್ದಾನೆ. ಈ ಇಳಿವಯಸ್ಸಿನಲ್ಲಿಯೂ ನಿಮಗೆ ಹೆಣ್ಣು ಮಕ್ಕಳು ಹುಟ್ಟುತ್ತಾರೆ. ಅವರಿಂದ ನಿಮ್ಮ ಸಂತತಿ ಮುಂದುವರಿಯುತ್ತದೆ. ದೌಹಿತ್ರ ಸಂತತಿ ವರ್ಧನೆ ಮಾತ್ರ ನಿಮಗೀಗ ಪ್ರಾಪ್ತಿ. ಮುಂದೆ ಏಳು ತಲೆಮಾರುಗಳ ನಂತರ ಶಾಪ ವಿಮೋಚನೆಯಾಗಿ ವಂಶ ವರ್ಧಿಸುತ್ತದೆ. ಇದೇ ಹರಿಯ ಇಚ್ಛೆ. ನೀವು ನನ್ನನ್ನು ಕ್ಷಮಿಸಿ ನನ್ನ ವ್ರತಾನುಷ್ಠಾನಕ್ಕೆ ಅನುಮತಿ ಕೊಡಬೇಕು."

ಭಾಗಣ್ಣನ ಮಾತು ಕೇಳಿ ಸಮಾಧಾನವಾಯಿತು ವೆಂಕಣ್ಣನವರಿಗೆ. ಹೆಣ್ಣು ಮಕ್ಕಳ ಮೂಲಕವಾದರೂ ಸಂತಾನ ಮುಂದುವರಿಯುವಂತಾಯಿತಲ್ಲಾ ಎಂಬ ತೃಪ್ತಿ ಅವರಿಗೆ.

ಮುಂದುವರಿದು ಭಾಗಣ್ಣ ಹೇಳಿದ.

"ಹೆಣ್ಣು ಮಕ್ಕಳು ಎಂದು ಸಣ್ಣದಾಗಿ ಭಾವಿಸಬೇಡಿ ವೆಂಕಣ್ಣನವರೆ. ಗಂಡು ಮಕ್ಕಳಿಂದ ಒಂದು ವಂಶ ಮಾತ್ರ ಉದ್ಧಾರವಾಗುತ್ತದೆ. ಹೆಣ್ಣು ಮಕ್ಕಳಿಂದ ಎರಡು ವಂಶಗಳು ಉದ್ಧಾರವಾಗುತ್ತವೆ. ತಂದೆ ತಾಯಿಗಳನ್ನು ಪ್ರೀತಿಸುವುದರಲ್ಲಾಗಲೀ, ಕುಲದ ಏಳ್ಗೆಯನ್ನು ಬಯಸುವುದರಲ್ಲಾಗಲೀ, ಗಂಡು ಮಕ್ಕಳಿಗಿಂತ ಹೆಣ್ಣು ಮಕ್ಕಳೇ ಮುಂದೆ. ಅಂಥ ಹೆಣ್ಣು ಮಕ್ಕಳು ನಿಮಗಾಗಲಿ."

ತುಂಬು ಮನದಿಂದ ನುಡಿದ ಭಾಗಣ್ಣ.

ಕೃತಜ್ಞತೆ ಉಕ್ಕಿ ಹರಿಯಿತು ವೆಂಕಣ್ಣನವರಿಗೆ. ಭಾಗಣ್ಣನಿಗಾಗಿ ಏನೆಲ್ಲಾ ತ್ಯಾಗ ಮಾಡಲು ಸಿದ್ಧರಾದರು.

"ಮೌನವ್ರತ ಎಷ್ಟು ದಿನ ಸಾಗುತ್ತದೆ ? ಈ ಅವಧಿಯಲ್ಲಿ ನಿಮ್ಮ ಸಂಸಾರ ನಿರ್ವಹಣೆಯ ಎಲ್ಲಾ ವೆಚ್ಚವನ್ನು ಭರಿಸುವ ಅವಕಾಶ ನನಗೆ ಕೊಡಿ" ಪ್ರಾರ್ಥಿಸಿದರು ವೆಂಕಣ್ಣ.

ಅಷ್ಟರಲ್ಲಿ ಹೊರಗೆ ಹೋಗಿದ್ದ ವೆಂಕಮ್ಮ ತನ್ನ ಮೂರು ಮಕ್ಕಳೊಂದಿಗೆ ಗುಡಿಗೆ ಆಗಮಿಸಿದಳು. ಮಕ್ಕಳ ಕೈಯಲ್ಲಿ ಅವರು ಹೊರಬಹುದಾದಷ್ಟು ಗಂಟುಗಳಿದ್ದವು. ತಾಯಿ ದೊಡ್ಡ ಚೀಲವನ್ನು ಹೊತ್ತು ತಂದಿದ್ದಳು.

ನೋಡಿದ ಭಾಗಣ್ಣ ತಾಯಿಗೆ ಹೇಳಿದ.

5/6/95

"ಅಮ್ಮಾ ನಾಳೆಯಿಂದ ನಾನು ಪ್ರಾಯೋಪವಾಸ ವ್ರತ ಕೈಗೊಳ್ಳಲಿದ್ದೇನೆ. ಸಂಸಾರ ನಿರ್ವಹಣೆಯ ಸಂಪೂರ್ಣ ವೆಚ್ಚವನ್ನು ತಾವೇ ಭರಿಸುವುದಾಗಿ ಶ್ಯಾನಭೋಗರು ಹೇಳುತ್ತಿದ್ದಾರೆ" ಭಾಗಣ್ಣನ ಮಾತು ಕೇಳುತ್ತಿದ್ದಂತೆಯೇ ತಾಯಿಯ ಮುಖದಲ್ಲಿ ಹರ್ಷ ಅರಳಿತು. ಭಾಗಣ್ಣ ಮುಂದುವರಿದು ಹೇಳಿದ.

"ಆದರೆ ನಾನು ಹಾಗೆ ಇಸಿದುಕೊಳ್ಳುವುದಕ್ಕೆ ಪರಮಾತ್ಮನ ಅಪ್ಪಣೆ ಇಲ್ಲಮ್ಮ. ನೀನೂ ಇನ್ನು ಮುಂದೆ ಹೀಗೆಲ್ಲಾ ದವಸಧಾನ್ಯಗಳನ್ನು ಸಂಗ್ರಹಿಸಬೇಡ. ನಾನಿನ್ನೂ ಬ್ರಹ್ಮಚಾರಿ. ವಯಸ್ಸು ಸಣ್ಣದಾದರೂ ಮನೆಯ ಹಿರಿಯ ಮಗ. ಬ್ರಹ್ಮಚಾರಿಯ ಸಂಸಾರ ಬ್ರಹ್ಮಚಾರಿಗಳಿಗೆ ತಕ್ಕಂತೆಯೇ ಇರಬೇಕು. ಸಂಗ್ರಹ ಮಾಡಿಡುವುದು ಬ್ರಹ್ಮಚಾರಿಗಳಿಗೆ ತಕ್ಕುದುದಲ್ಲ. ಅಧ್ಯಯನವೊಂದೇ ನಮ್ಮ ಗುರಿಯಾಗಿರಬೇಕು. ನಮ್ಮ ಮನೆಯಲ್ಲಿ-ಅಂದರೆ ಈ ಹನುಮಪ್ಪನ ಗುಡಿಯಲ್ಲಿ ಯಾವುದೂ ಸಂಗ್ರಹವಾಗಿ ನಿಲ್ಲಬಾರದು. ಪ್ರತಿದಿನದ ವೆಚ್ಚವನ್ನು ಪರಮಾತ್ಮನೇ ನೋಡಿಕೊಳ್ಳುತ್ತಾನೆ."

ತಾಯಿಗೆ ಮಗನ ಈ ಮಾತು ಹಿಡಿಸಲಿಲ್ಲ. ಜನರೇ ಸ್ವಯಂ ಸ್ಫೂರ್ತಿಯಿಂದ ಕರೆ ಕರೆದು ನೀಡುತ್ತಿರುವಾಗ ಅದನ್ನು ಕೂಡಿಡಬಾರದೇಕೆ ಎಂಬ ತರ್ಕ. ಬಹಳ ದಿನಗಳ ಕಾಲದಿಂದ ಭಿಕ್ಷೆ ಬೇಡಿ ಬೇಡಿ, ಅರೆ ಹೊಟ್ಟೆ ಉಂಡು ಉಂಡು ಸಾಕಾಗಿ ಹೋಗಿತ್ತು ಆಕೆಗೆ. ಎಣ್ಣೆ ಬಂದಾಗ ಕಣ್ಣು ಮುಚ್ಚುವುದೆ? ಜನರೇ ತಾವಿದ್ದಲ್ಲಿಗೆ ಬಂದು ಅಥವಾ ಮನೆಗೆ ಹೇಳಿ ಕಳಿಸಿ ಕರೆ ಕರೆದು ನೀಡುತ್ತಿರುವ ಈ ಕಾಲದಲ್ಲಿ ಅದನ್ನು ನಿರಾಕರಿಸುವುದೇ? ಹುಬ್ಬು ಗಂಟು ಹಾಕಿದಳು ವೆಂಕಮ್ಮ. ತಾಯಿಯ ಭಾವ ಗ್ರಹಿಸಿದ ಭಾಗಣ್ಣ ಬಿಡಿಸಿ ಬಿಡಿಸಿ ಹೇಳಿದ.

"ಹಣ ಸಂಗ್ರಹ ಒಂದು ಬೆಂಬಿಡದ ಪಿಪಾಸತ್ವ. ಅದಕ್ಕೆ ಸಿಕ್ಕಿಕೊಂಡರೆ ತಪ್ಪಿಸಿಕೊಳ್ಳುವುದು ಬಹಳ ಕಷ್ಟ. ಆಸೆ ಎನ್ನುವುದು ಹೆಚ್ಚುತ್ತಲೇ ಹೋಗುತ್ತದಾಗಲೀ ಕಡಿಮೆಯಾಗುವುದಿಲ್ಲ. ಈಗ ನೋಡು. ಜನರು ನಾವಿದ್ದಲ್ಲಿಗೇ ಬಂದು ಧಾನ್ಯ ನೀಡುತ್ತಿದ್ದಾರೆ. ಹಾಗಿದ್ದರೂ ಮುಂದಿನದು ಹೇಗೆಂಬ ಭೀತಿ ಹೋಗಿದೆಯೆ?"

ತಾಯಿ ಫಕ್ಕನೆ ಮಾತಿಗೆ ಅಡ್ಡ ಬಂದು ಹೇಳಿದಳು.

"ನಿನ್ನೆ ನಾಲ್ಕು ಬಳ್ಳ ಜೋಳವನ್ನು ದುರುಗಮ್ಮ ನೀಡಿದ್ದಳು ಕಣೋ. ಈ ಗುಡಿಯಲ್ಲಿ ಏನಿಟ್ಟರೆ ಉಳಿಯುತ್ತದೆ ಹೇಳು. ಬೆಳಿಗ್ಗೆ ನೋಡುವಾಗ ಜೋಳವನ್ನೆಲ್ಲಾ ಇಲಿಗಳು ತಿಂದು ಬಿಟ್ಟಿದ್ದವು. ಆದ್ದರಿಂದ ಈ ದಿನ ಬೇರೆಡೆಗೆ ಬೇಡಲಿಕ್ಕೆ ಹೋಗಬೇಕಾಯಿತು.

ಇಲಿಗಳು !

ಕೇಳಿ ಬೆಚ್ಚಿಬಿದ್ದ ಭಾಗಣ್ಣ.

"ಹೌದಮ್ಮ, ನಾನಿದ್ದಲ್ಲಿ ಇಲಿಗಳು ಬರುತ್ತವೆ. ಅರಳೀಮರದ ಅಡಿಯಲ್ಲಿ ಕುಳಿತಾಗಲೂ ಇಲಿಯೊಂದು ನನ್ನ ಮುಂದೆ ಸುಮ್ಮನೆ ಪಿಳಿ ಪಿಳಿ ನೋಡುತ್ತಾ ಕುಳಿತಿರುತ್ತದೆ. ಇನ್ನು ನನ್ನ ಹೆಸರಿನಿಂದ ಬಂದ ಧಾನ್ಯವನ್ನು ಹೆಚ್ಚು ಸಂಗ್ರಹಿಸಿಟ್ಟರೆ ಅದು ತಿನ್ನದೆ ಬಿಟ್ಟೀತೆ?" ಭಾಗಣ್ಣ ಇನ್ನೂ ಹೇಳುತ್ತಿದ್ದಂತೆಯೇ ಶ್ಯಾನಭೋಗ ವೆಂಕಣ್ಣನವರಿಗೆ ತಮ್ಮ ಮಗನ ಸಾವಿಗೆ ಕಾರಣವಾದ 'ಮೂಷಿಕದಂಶ'ದ ಘಟನೆ ನೆನಪಾಯಿತು.

ಇಲಿ ಕಡಿದು ಎಲ್ಲಾದರೂ ಸಾಯುವುದುಂಟೆ? ಅದು ವಿಷಪೂರ್ಣ ಇಲಿ ಯೆಂದೇ ನಂಬೋಣ. ಆದರೆ ಎಲ್ಲಿಯೋ ಆಡುತ್ತಿದ್ದ ಹುಡುಗನಿಗೆ ಬೆನ್ನಟ್ಟಿ ಇಲಿ ಕಡಿಯಿತಂತೆ. ಸಾಯುವವರೆಗೂ ಹುಡುಗ ಇಲಿ ಇಲಿ ಎಂದೇ ಕೂಗುತ್ತಿದ್ದ.

ಹುಲಿ ಕಡಿದವರು ಬದುಕುತ್ತಾರೆ. ಇಲಿ ಕಡಿದ ತನ್ನ ಮಗ ಪ್ರಾಣ ಬಿಟ್ಟ!

ಇಲಿಗೂ ಭಾಗಣ್ಣನಿಗೂ ಏನು ಸಂಬಂಧ? ಯೋಚನಾಶ್ವ ವೆಂಕಣ್ಣನವರ ತಲೆಯಲ್ಲಿ ಎಲ್ಲೆಲ್ಲೋ ಓಡುತ್ತಿತ್ತು. ಅಷ್ಟರಲ್ಲಿ ಕಡಿವಾಣ ಹಾಕಿದ ಭಾಗಣ್ಣ. ಆ ಮಾತು ತಾಯಿಗೂ ಹೇಳಿದಂತಿತ್ತು.

"ನಾನು ಮೌನವ್ರತ ಮಾಡುವ ಎರಡು ವರ್ಷಗಳ ಕಾಲ ನಿತ್ಯ ಹಬ್ಬದ ಅಡುಗೆ ನಮ್ಮ ಈ ಗುಡಿಯಲ್ಲಿ. ಅದಕ್ಕಾಗಿ ಯಾರೂ ಕಷ್ಟಪಡಬೇಕಿಲ್ಲ. ಈ ಆಂಜನೇಯನ ಗುಡಿಯಲ್ಲಿ ದೇವರ ನೈವೇದ್ಯಕ್ಕೆ ಎಂದೂ ಚ್ಯುತಿ ಬರುವುದಿಲ್ಲ. ನೀನು ನಿಶ್ಚಿಂತೆಯಾಗಿರು ಅಮ್ಮಾ. ನಾಳೆಯಿಂದ ಮೊದಲು ದಾನ ತಂದುಕೊಟ್ಟವರು ಯಾರೇ ಆಗಲಿ, ಆ ದಿನಕ್ಕೆ ಬೇಕಾಗುವಷ್ಟನ್ನೇ ಸ್ವೀಕರಿಸು. ಅದನ್ನಷ್ಟೇ ನಾನು ದೇವರಿಗೆ ನೈವೇದ್ಯ ಮಾಡುವುದು. ಈ ಶ್ಯಾನಭೋಗರ ಮನೆಗೆ ದೇವರ ನೈವೇದ್ಯ ಆದ ಮೇಲೆ ನಿತ್ಯ ಪ್ರಸಾದ ಕಳಿಸು. ಅದರಿಂದ ಅವರ ಪಾಪ ಕಡಿಮೆಯಾಗುತ್ತದೆ. ಇಳಿವಯಸ್ಸಿನಲ್ಲಿಯೂ ಹೆಣ್ಣುಮಕ್ಕಳು ಜನಿಸುತ್ತಾರೆ. ಅವರಿಂದ ವೆಂಕಣ್ಣನವರ ವಂಶ ವರ್ಧಿಸುತ್ತದೆ. ದುರ್ಬಲರ ಶೋಷಣೆ ಸಾಧಾರಣ ಪಾಪವಲ್ಲವಮ್ಮಾ, ಅಬಲೆ ಹೆಂಗಸಿನ ಅನ್ನವನ್ನು ಕಸಿದ ಪಾಪದ ಫಲ ಅನುಭವಿಸಿದ್ದಾಯಿತು. ಏಳು ತಲೆಮಾರಿನವರೆಗೂ ಇದರ ಶಾಖ ಇದ್ದೇ ಇರುತ್ತದೆ. ಅದನ್ನು ಸೌಮ್ಯಗೊಳಿಸುವಂತೆ ಎಲ್ಲರೂ ಪ್ರಾರ್ಥಿಸೋಣ." ನುಡಿದ ಭಾಗಣ್ಣ ನಿಧಾನವಾಗಿ ಕಣ್ಣುಮುಚ್ಚಿದ.

ಪುಟ್ಟ ವಯಸ್ಸು. ಎಂಥ ಸಂಯಮ! ಎಷ್ಟು ವಿವೇಚನೆ.

ಕೈ ಮುಗಿದು ಎದ್ದರು ಶ್ಯಾನಭೋಗರು. ಅಷ್ಟರಲ್ಲಿ ಕಣ್ಣು ತೆಗೆದು ಭಾಗಣ್ಣ ಹೇಳಿದ.

"ಶ್ಯಾನಭೋಗರೆ. ನೀವು ಶ್ರೇಷ್ಠವಾದ ಬ್ರಾಹ್ಮಣ ಕುಲದಲ್ಲಿ ಹುಟ್ಟಿದ್ದೀರಿ. ಹುಟ್ಟಿದ ಮಾತ್ರಕ್ಕೆ ಶ್ರೇಷ್ಠತೆ ಬರುವುದಿಲ್ಲ. ಗಟ್ಟಿಯಾದ ಸಾಧನೆಗೆ ಮಾತ್ರ ಸಿಕ್ಕುತ್ತದೆ ಶ್ರೇಷ್ಠತೆ. ಹುಟ್ಟು ಎನ್ನುವುದು ಸಾಧನೆಗೆ ಒಂದು ಮಾರ್ಗವಷ್ಟೆ. ಗಾಯತ್ರಿ ಮಂತ್ರವನ್ನು ತ್ರಿಕಾಲದಲ್ಲಿ ಜಪಿಸಬೇಕಾದ ಕುಲದಲ್ಲಿ ನೀವು ಹುಟ್ಟಿದ್ದೀರಿ. ಈ ದಾರಿ ಕ್ರಮಣದಿಂದ ಮಾತ್ರ ನಿಮಗೆ ಶ್ರೇಯಸ್ಸು. ಬೇರೆಯವರಿಗೆ ಆ ಶ್ರೇಯಸ್ಸು ಇನ್ನೂ ಸುಲಭದಲ್ಲಿ ಸಿಕ್ಕೀತು. ಅದು ಅವರವರಿಗೆ ಭಗವಂತನು ನೀಡಿದ ನಿರ್ದೇಶನ. ನಿಮ್ಮದು ಗಾಯತ್ರಿ ಮಂತ್ರ ಜಪದಲ್ಲಿ ಸಾಗಲು ನಿರ್ದಿಷ್ಟವಾಗಿದೆ. ಆ ದಾರಿ ಬಿಟ್ಟಿದ್ದರಿಂದಲೇ ನಿಮಗೆ ಕೆಟ್ಟ ಯೋಚನೆಗಳು, ದುಷ್ಟಕಾರ್ಯಗಳಿಗೆ ಪ್ರೇರಣೆಯಾಗಿದೆ.

ಗಾಯತ್ರಿ, ಸಾವಿತ್ರಿ, ಸರಸ್ವತಿ ಹೆಸರಿನಲ್ಲಿ ನಿತ್ಯ ತನ್ನ ಕೈಂಕರ್ಯವನ್ನು ಭಗವಂತ ನಿಮ್ಮಿಂದ ನಿರೀಕ್ಷಿಸಿದ್ದಾನೆ. ನೀವು ಸಂಧ್ಯಾವಂದನೆಗೆ ಕ್ರಮಬದ್ಧವಾಗಿ ಕುಳಿತರೆ ಸಾಕು. ಮಿಕ್ಕದ್ದನ್ನು ಆ ದೇವ ದೇವೋತ್ತಮ........

ಸೂರ್ಯಮಂಡಲದ ಮಧ್ಯೆ ಬಂಗಾರದ ಮೈ ಬಣ್ಣದಿಂದ ಶೋಭಿಸುತ್ತಾ ಮಕರ ಕುಂಡಲ ಹಾರ ಕೇಯೂರಗಳನ್ನು ಧರಿಸಿ, ಶಂಖ ಚಕ್ರಗಳನ್ನು ಹಿಡಿದು ಮುಗುಳ್ನಗೆಯಿಂದ ನಿಮ್ಮ ಹೃದಯದಲ್ಲಿಯೂ ಶೋಭಿಸುತ್ತಾ, ಆತನೇ ಎಲ್ಲವನ್ನೂ ಯೋಗ್ಯತೆಗೆ ತಕ್ಕಷ್ಟು ಪ್ರೇರೇಪಿಸುತ್ತಾನೆ. ನೀವು ಈಗ ನನ್ನ ಬಗ್ಗೆ ಅಪಾರ ಪ್ರೀತಿ ತಾಳಿದ್ದೀರಿ. ಆ ಪ್ರೀತಿ ಸತ್ಯವೇ ಆದರೆ ಸಂಧ್ಯಾವಂದನೆಯನ್ನು ಬಿಡದೆ ಮಾಡಿ. ಹಾಗಾದರೆ ಈಗ ನಾನು ಹೇಳಿದ ಮಾತು ಅಥವಾ ನಿಮ್ಮ ಭಾವನೆಯಲ್ಲಿಯ 'ವರ' ಸಿದ್ಧಿಸುತ್ತದೆ. ದೌಹಿತ್ರ ಸಂತತಿ ವರ್ಧಿಸಿ ಏಳು ತಲೆಮಾರುಗಳ ನಂತರ ಪುರುಷ ಸಂತಾನ ಅಭಿವೃದ್ಧಿಯಾಗುತ್ತದೆ" ಎಚ್ಚರಿಸಿದ ಭಾಗಣ್ಣ.

ಕೈ ಮುಗಿದು ಹೊರಟರು ವೆಂಕಣ್ಣನವರು.

***

ಯಾವ ದೊಡ್ಡ ಕಾರ್ಯವೇ ಆಗಲಿ; ಅದು ವಿಘ್ನಗಳಿಂದಲೇ ಪ್ರಾರಂಭವಾಗುತ್ತದೆ. ಆ ಅಡ್ಡಿಗಳನ್ನು ಎದುರಿಸಿ ಮುಂದೆ ಸಾಗಿದಾಗಲೇ ಅದರಲ್ಲಿ ಒಂದು ಸಿದ್ಧಿ ದೊರೆಯುತ್ತದೆ.

ಭಾಗಣ್ಣನಿಗಾದರೋ, ಜೀವನದ ಪ್ರಾರಂಭದಲ್ಲಿಯೇ ನಾನಾ ವಿಘ್ನಗಳು. ಚಿಕ್ಕ ವಯಸ್ಸಿನಲ್ಲಿಯೇ ತಂದೆ ತೀರಿಕೊಂಡರು. ತಾಯಿ ಬೇರೊಂದು ಊರಿಗೆ ಬಂದು ಭಿಕ್ಷೆ ಬೇಡಿ ಜೀವಿಸತೊಡಗಿದಳು. ಆದರೆ ಬಾಲಕ ಭಾಗಣ್ಣ ಧೃತಿಗೆಡಲಿಲ್ಲ.

ಹುಡುಗನ ಸಚ್ಛೀಲತೆಯನ್ನು ನೋಡಿ ಮಠದ ಅಯ್ಯನವರು ಉಚಿತವಾಗಿ ಪಾಠ ಹೇಳಲು ಒಪ್ಪಿಕೊಂಡರು. ಎಷ್ಟೇ ಬಡತನವಿರಲಿ, ಶಾಲೆಯನ್ನು ತಪ್ಪಿಸಿ ಕೊಳ್ಳಲಿಲ್ಲ. ಭಾಗಣ್ಣನ ಬುದ್ಧಿಮತ್ತೆಗೆ ಅಯ್ಯನವರೇ ಆಶ್ಚರ್ಯಪಡುತ್ತಿದ್ದರು.

ಒಮ್ಮೆ ಅವರೇ ಹೇಳಿದರು.

"ಅಕ್ಷರ ಜ್ಞಾನವನ್ನು ನಾನೇನೋ ಹೇಳಿಕೊಟ್ಟಿದ್ದೇನೆ. ನಾನು ಹೇಳುವಷ್ಟರಲ್ಲಿ ನೀನು ಬರೆದು ಬಿಡುತ್ತಿ. ಬರೆದಿದ್ದನ್ನೆಲ್ಲಾ ಸಂಪೂರ್ಣ ಅರ್ಥಮಾಡಿಕೊಂಡಿರುತ್ತಿ. ಭಾರತವನ್ನು ಭಗವಾನ್ ವೇದವ್ಯಾಸರು ಪುಂಖಾನು ಪುಂಖವಾಗಿ ಹೇಳುತ್ತಿದ್ದಂತೆ ಗಣಪತಿ ಅದನ್ನು ಅರ್ಥ ಮಾಡಿಕೊಂಡು ಅಷ್ಟೇ ವೇಗದಲ್ಲಿ ಲಿಖಿಸುತ್ತಿದ್ದನಂತೆ. ಅವರೇನೋ ದೊಡ್ಡವರು. ಅದಕ್ಕಾಗಿಯೇ ಅವತಾರವೆತ್ತಿದವರು. ಅಷ್ಟು ವೇಗವಾಗಿ ಹೇಳುತ್ತಿದ್ದರು. ಗಣಪತಿ ಬರೆದುಕೊಳ್ಳುತ್ತಿದ್ದ. ಆದರೆ ನಿನ್ನ ವೇಗಕ್ಕೆ ನಾನು ಹೇಳಲು ಅಸಮರ್ಥನಾಗುತ್ತಿದ್ದೇನೋ ಭಾಗಣ್ಣಾ, ವಿಘ್ನೇಶ್ವರನ ಯಾವ ಅನು ಗ್ರಹವೋ ನಿನಗೆ ! ಎಷ್ಟು ಶೀಘ್ರಗ್ರಾಹಿ ನೀನು."

"ವಿಘ್ನೇಶ್ವರ"- ಶಬ್ದ ಕಿವಿಗೆ ಬಿದ್ದೊಡನೆ ಭಾಗಣ್ಣ ಪುಳಕಿತಗೊಳ್ಳುತ್ತಿದ್ದ.

"ನಾನು ಹೇಳಿಕೊಡುವ ಓದು ಮುಗಿಯಿತು. ನಿನ್ನ ವಿದ್ಯಾಕಾಂಕ್ಷೆಗೆ ರಾಜಧಾನಿ ಗದ್ವಾಲ ನಗರದ ವಿದ್ವಾಂಸರೇ ಬೇಕು. ನಿನಗೆ ಈ ಊರಿನ ವಿದ್ಯೆ ಮುಗಿಯಿತಪ್ಪಾ" ಎಂದು ಅಯ್ಯನವರು ಹೇಳಿದ್ದರು.

ಅಷ್ಟರಲ್ಲಿಯೇ ಶ್ಯಾನಭೋಗ ಗುಂಡಪ್ಪನವರು ಉಪನಯನ ಮಾಡಿಸಿದರು. ಪುರೋಹಿತರು ಸಂಧ್ಯಾವಂದನೆಯ ನಾನಾ ಕರ್ಮಾಂಗಗಳನ್ನು ವಿವರಿಸಿದರು. ಗಾಯತ್ರಿ ಮಂತ್ರದ ಹಿರಿಮೆ ಮಹಿಮೆಗಳ ಅರಿವಾಯಿತು. ಅದನ್ನು ಸಾಧಿಸಲು ಭಾಗಣ್ಣ ಸಂಕಲ್ಪ ತೊಟ್ಟ. ದೀಕ್ಷಾ ದಕ್ಷನಾಗಿ ಸಾಧನ ಮುಂದುವರಿಸಿದ. ಅದಕ್ಕೆ ಮೊದಲು ತಾನು ಸಂಧ್ಯಾವಂದನೆಗೆ ಕುಳಿತಾಗ ಹಲವರು ನಗುತ್ತಾ ಹೋಗುತ್ತಿದ್ದರೆ ಹುಡುಗ ಎಷ್ಟು ಚೆನ್ನಾಗಿ ನಟನೆ ಮಾಡುತ್ತಾನೆ ನೋಡಿ ಎಂದು ಮಾತನಾಡಿ ಕೊಳ್ಳುತ್ತಾ ಹೋಗುತ್ತಿದ್ದುದು ಅವನಿಗೆ ಕೇಳಿಸುತ್ತಿತ್ತು. ಆಮೇಲೆ ಯಾವ ಶಬ್ದವೂ ಅವನಿಗೆ ಕೇಳಿಸಲಿಲ್ಲ. ಅಂತರ್‌ಮುಖತ್ವ ಬೆಳೆಯಿತು.

ಹಾವು ಸುತ್ತುಕೊಳ್ಳುವುದು. ಮಲ್ಲಿಣ್ಣ ಬಿಸಿನೀರು ಎರಚುವುದು. ಗ್ರಾಮದ ನೂರಾರು ಜನರು ಸ್ಥಳಕ್ಕೆ ಬಂದು ನೋಡುವುದು ಇವೆಲ್ಲಾ ಜರಗಿದವು.

ಇಂಥ ವಿಘ್ನಗಳೆಲ್ಲಾ ಈಗ ಪರಿಹಾರವಾಗಿದ್ದವು. ಶ್ಯಾನಭೋಗ ವೆಂಕಣ್ಣನವರ ಸ್ಥಿತಿ ಕಂಡು ಗ್ರಾಮದ ಜನರು ಭಾಗಣ್ಣನ ಸಾಧನೆಗೆ ಎಲ್ಲಿ ಅಡ್ಡಿಯಾಗುವುದೋ ಎಂದು ಆ ಸ್ಥಳಕ್ಕೇ ಬರುತ್ತಿರಲಿಲ್ಲ.

ಭಾಗಣ್ಣನ ತಪಸ್ಸಾಧನೆ ನಿರ್ವಿಘ್ನವಾಗಿ ಸಾಗಿತ್ತು.

ಅವರಿದ್ದ ಗುಡಿಗೆ ದಿನದ ವೆಚ್ಚಕ್ಕೆ ಅವಶ್ಯವಾದ ಧನಧಾನ್ಯಗಳನ್ನು ನೀಡ ಬೆಳಗಿನ ಜಾವವೇ ಜನ ತಾ ಮುಂದೆ ನಾ ಮುಂದೆ ಎಂದು ನಿಂತಿರುತ್ತಿದ್ದರು.

ವೆಂಕಮ್ಮನಿಗೆ ಮಗನ ಕಟ್ಟಪ್ಪಣೆಯಾಗಿತ್ತು. ರಾತ್ರಿ ಏನಾದರೂ ಉಳಿದದ್ದು ಕಂಡರೆ ಮರುದಿನ ಮಗ ಉಪವಾಸ ಮಾಡಿ ಬಿಡುತ್ತಿದ್ದ. ಆ ಭೀತಿಯಿಂದ ಆಕೆ ಜನರಿಂದ ಹೆಚ್ಚು ಸ್ವೀಕರಿಸುತ್ತಿರಲಿಲ್ಲ.

ಸಂಕಾಪುರ ಗ್ರಾಮದ ಜನರಿಗೆ ಅದೇನು ಪ್ರೇರಣೆ ಆಗುತ್ತಿತ್ತೋ. ಬೆಳಗಿನ ಜಾವವೇ ಮೊದಲ ಸ್ಥಾನ ಪಡೆಯಲು ಧಾವಿಸಿ ಬರುತ್ತಿದ್ದರು. ಮಿಕ್ಕವರು ತಂದದ್ದನ್ನು ವಾಪಸ್ ಒಯ್ಯುವುದು ಅನಿವಾರ್ಯ ಕ್ರಮವಾಗಿತ್ತು.

"ನನ್ನ ಮಗನಿಗೆ ಎಂಟು ದಿನಗಳಿಂದ ಜ್ವರ ಬರುತ್ತಿತ್ತು. ನಾನು ಒಯ್ದ ಧಾನ್ಯವನ್ನು ವೆಂಕಮ್ಮ ಸ್ವೀಕರಿಸಿದ ದಿನದಿಂದಲೇ ಅದು ವಾಸಿಯಾಯಿತು" ಎಂದು ಒಬ್ಬರು ಹೇಳಿದರೆ "ನಮ್ಮ ಎಮ್ಮೆ ಕಳೆದು ಹೋಗಿ ಹನ್ನೆರಡು ದಿನಗಳಾಗಿತ್ತು. ಹನ್ನೆರಡು ದಿನದಿಂದ ಪ್ರತಿನಿತ್ಯ ವೆಂಕಮ್ಮನಿಗೆ ಧಾನ್ಯ ನೀಡಲು ಪ್ರಯತ್ನಿಸಿದೆ. ನನ್ನ ಪುಣ್ಯ ಫಲಿಸಿದ ದಿನ ವೆಂಕಮ್ಮ ನನ್ನ ಧಾನ್ಯ ಸ್ವೀಕರಿಸಿದಳು. ಆ ದಿನವೇ ನಮ್ಮ ಎಮ್ಮೆ ವಾಪಸ್ ಬಂದಿತು. ಅದು ತಪ್ಪಿಸಿಕೊಂಡು ಹೋಗುವಾಗ ಅರ್ಧ ತಂಬಿಗೆ ಹಾಲು ಕೊಡುತ್ತಿತ್ತು. ಬಂದ ಮೇಲೆ ಮೂರು ತಂಬಿಗೆ ಹಾಲು ಕರೆಯುತ್ತಿದೆ" ಎಂದು ಇನ್ನೊಬ್ಬರು ಹೇಳುತ್ತಾರೆ. ಹೀಗೆ ಹಲವರ ಹಲವು ಅನುಭವಗಳು!

ಅದು ಅವರವರ ಅನುಭವ. ಅದನ್ನು ಮೂಢತೆ ಎಂದಾದರೂ ಕರೆಯಲಿ ದೃಢತೆ ಎಂದಾದರೂ ಕರೆಯಲಿ - ಬಿಡದೆ ಆ ಗ್ರಾಮದಲ್ಲಿ ನಡೆದ ಘಟನೆಗಳ ಸರಮಾಲೆಯಂತೂ ಹೌದು.

ವೆಂಕಮ್ಮನ ಅಡುಗೆ ಪಾತ್ರೆಗಳು ನಿತ್ಯ ಒಲೆ ಏರುತ್ತಿದ್ದುದು ಈ ಸಮಯ ದಲ್ಲಿಯೆ. ಹಿಂದೆಂದೂ ಈ ಸೌಭಾಗ್ಯ ಸಿಕ್ಕಿರಲಿಲ್ಲ.

ಕಾಲರಾಯ ಸಾಗಿದ. ಎರಡು ವರ್ಷಗಳ ಕಾಲ ಬಹು ಬೇಗ ಸಾಗಿದಂತೆ ಕಂಡು ಬಂದಿತು. ವೆಂಕಮ್ಮನ ಇತರ ಮೂರು ಮಕ್ಕಳು ದಾಸಣ್ಣ, ಸೀನಣ್ಣ, ರಂಗಣ್ಣರು ಪ್ರತಿನಿತ್ಯ ಶಾಲೆಗೆ ಹೋಗಿ ವಿದ್ಯೆ ಪಡೆದರೆ ಭಾಗಣ್ಣ ಆಧ್ಯಾತ್ಮ ಸಾಧನೆಯಲ್ಲಿ ಬಹಳ ಮುಂದುವರಿದುಬಿಟ್ಟಿದ್ದ.

ತಮ್ಮಂದಿರು ಅಕ್ಷರಗಳನ್ನು ಓದಬಲ್ಲವರಾಗಿದ್ದರು. ಭಾಗಣ್ಣ ಬೇರೆಯವರ ಹಣೇಬರಹವನ್ನೇ ಕಾಣಬಲ್ಲವನಾಗಿದ್ದ. ಯಾರನ್ನು ನೋಡಿದರೂ ಅವರೀಗ ಏನು, ನಾಳೆ ಅವರಿಗೆ ಏನೇನಾಗುತ್ತದೆ ಎಂಬುದು ಅವನಿಗೆ ಕಣ್ಣಿಗೆ ಕಟ್ಟಿ ದಂತಾಗುತ್ತಿತ್ತು. ಬೇರೆಯವರ ಜೀವನ ತನ್ನ ಕಣ್ಣಿಗೆ ಇಷ್ಟು ಸ್ಪಷ್ಟವಾಗಿ ಕಾಣಿಸುವ ಸಿದ್ಧಿಯನ್ನು ನೋಡಿ ಭಾಗಣ್ಣನೇ ಆಶ್ಚರ್ಯ ಪಡುತ್ತಿದ್ದ. ಸಂಕಾಪುರದ ಹನುಮಂತ ರಾಯನ ಕೃಪೆ ಭಾಗಣ್ಣನಿಗೆ ಸಂಪೂರ್ಣ ಆಗಿರಬೇಕು. ಆದ್ದರಿಂದಲೇ ಮೌನ ವ್ರತ ಮುಗಿದೊಡನೆ ಪಕ್ಕದ ಹಳ್ಳಿ ಉತ್ತನೂರಿಗೆ ಹೋಗಿ ಅಲ್ಲಿರುವ ಶ್ರೀ ವೆಂಕಟರಮಣನ ಸೇವೆ ಮಾಡುವಂತೆ ಪ್ರೇರಣೆ ಆಯಿತು.

ಒಂದು ದಿನ ತಾಯಿಗೆ ಹೇಳಿದ.

"ಅಮ್ಮಾ ನಾವೆಲ್ಲರೂ ಉತ್ತನೂರಿಗೆ ಹೋಗಿ ನೆಲೆಸೋಣ. ಇಲ್ಲಿಯ ಜನ ನಮಗೆ ಭಿಕ್ಷೆ ನೀಡುವುದನ್ನು ನಿಲ್ಲಿಸುವುದಿಲ್ಲ. ಪಕ್ಕದ ಹಳ್ಳಿಯವರು ಬಂದು ನೀಡುವುದಕ್ಕೇ ಅವರು ಅವಕಾಶ ಕೊಟ್ಟಿಲ್ಲ. ಅಷ್ಟೊಂದು ಅಭಿಮಾನ ಸಂಕಾಪುರ ದವರಿಗೆ. ಆದರೆ ಮುಂದೆ ಉತ್ತನೂರಿನಲ್ಲಿ ಜನಕ್ಕೆ ಇಂಥವುಗಳಿಗೆ ಅವಕಾಶವೇ ಕೊಡುವುದು ಬೇಡ. ಇದುವರೆಗೂ ಬ್ರಹ್ಮಚಾರಿಯ ವಯಸ್ಸು. ಆದ್ದರಿಂದ ಜನರು ನೀಡಿದ್ದನ್ನು ಸ್ವೀಕರಿಸುವ ಅಧಿಕಾರವಿತ್ತು. ಇನ್ನು ಮೇಲೆ ದುಡಿಯದೆ ಏನನ್ನೂ ಸ್ವೀಕರಿಸಬಾರದಮ್ಮ."

ಮಗನ ನಿರ್ಣಯ ಕೇಳಿ ವೆಂಕಮ್ಮ ಹೌಹಾರಿದಳು.

ಆಕೆಯ ಜೀವನದಲ್ಲಿ ಹೊಟ್ಟೆ ತುಂಬ ಊಟ ಕಾಣುತ್ತಿದ್ದುದು ಇತ್ತೀಚಿನ ದಿನಗಳಲ್ಲಿಯೆ. ಈಗ ಗ್ರಾಮವನ್ನು ತ್ಯಜಿಸಿ ಬೇರೆ ಗ್ರಾಮಕ್ಕೆ ಹೋಗುವುದೆ?

"ಈ ವಯಸ್ಸಿನಲ್ಲಿ ಆ ಹಿಂದಿನ ಕಷ್ಟಗಳನ್ನು ಅನುಭವಿಸಲಾರೆನಪ್ಪಾ" ಎಂದು ಮಗನಿಗೆ ಹೇಳಿದಳು ವೆಂಕಮ್ಮ.

"ಅಮ್ಮಾ, ಬೇರೆಯವರ ಬಗ್ಗೆ ಭವಿಷ್ಯ ಹೇಳಲು ಅದೇಕೋ ನನಗೆ ಸಿದ್ಧಿ ಸಿಕ್ಕಿದೆ. ಈ ಸಿದ್ಧಿಯನ್ನು ವ್ಯವಹಾರಕ್ಕೆ ಬಳಸುವುದು ಸರಿ ಕ್ರಮವಲ್ಲವಾದರೂ

ದುಡಿಯದೆ ತಿನ್ನುವುದಕ್ಕಿಂತ ಇದು ಪಾಪವೆನಿಸಲಾರದು. ಇಲ್ಲಿರುವ ಹನುಮಪ್ಪ ನಮ್ಮ ಮನೆದೇವರಾದ ವೆಂಕಪ್ಪನ ಬಳಿ ಹೋಗಲು ತಿಳಿಸಿದ್ದಾನೆ. ವೆಂಕಪ್ಪ ಎಲ್ಲಿರುತ್ತಾನೋ ಅಲ್ಲಿ ಹನುಮಪ್ಪ ಇದ್ದೇ ಇರುತ್ತಾನೆ. ಇದೇ ಹನುಮಪ್ಪ ಅಲ್ಲಿಗೆ ಬರಲು ಆಜ್ಞಾಪಿಸಿರುವಾಗ ಇಲ್ಲಿರುವುದು ದೇವರ ಇಚ್ಛೆಗೆ ವಿರುದ್ಧವಮ್ಮ. ಸದ್ಯಕ್ಕೆ ಅಲ್ಲಿಗೆ ಹೋಗೋಣ. ಮುಂದೆ ಏನು ಮಾಡಬೇಕೆಂದು ಆತನೇ ತಿಳಿಸುತ್ತಾನೆ.''

ಭವಿಷ್ಯದ ಬಗ್ಗೆ ಎಷ್ಟೇ ಭಯವಿದ್ದರೂ ಮಗನ ಶಕ್ತಿ ಸಾಧನೆಗಳ ಬಗ್ಗೆ ಅಷ್ಟೇ ನಂಬಿಕೆಯೂ ಆಕೆಗೆ ಇತ್ತು.

ಒಂದು ಶುಭ ಮುಹೂರ್ತದಲ್ಲಿ ಅವರು ಊರು ಬಿಡಲು ನಿರ್ಧರಿಸಿದಾಗ ಊರಿಗೆ ಊರೇ ಗ್ರಾಮ ಬಿಡದಿರುವಂತೆ ಪ್ರಾರ್ಥಿಸಿತು.

ಅವರಿಗೆಲ್ಲಾ ಸಮಾಧಾನ ಪಡಿಸಲು ಭಾಗಣ್ಣನಿಗೆ ಸಾಕು ಬೇಕಾಗಿ ಹೋಯಿತು.

ಒಂದು ಶುಭ ಘಳಿಗೆಯಲ್ಲಿ ಯಾರಿಗೂ ಸಮಯ ತಿಳಿಸದೆ ಸಾಮಾನು ಸರಂಜಾಮುಗಳನ್ನು ಕಟ್ಟಿಕೊಂಡು ಕುಟುಂಬ ಸಹಿತನಾಗಿ ಉತ್ತನೂರಿಗೆ ಹೊರಟುಬಿಟ್ಟ.

***

ಉತ್ತನೂರಿನ ಶ್ರೀ ವೆಂಕಟೇಶ ಭಾಗಣ್ಣನ ಬರುವನ್ನು ಅಕ್ಕರತೆಯಿಂದ ಸ್ವಾಗತಿಸಿರಬೇಕು. ಕುಟುಂಬ ಸಹಿತನಾಗಿ ಬಂದ ಭಾಗಣ್ಣ ಶ್ರೀ ವೆಂಕಟೇಶನ ಗುಡಿಯನ್ನು ಪ್ರವೇಶಿಸಿ ಪೊಡಮಟ್ಟ.

"ಸ್ವಾಮಿ, ನಿನ್ನ ಪರಮ ಪ್ರೀತಿ ಪಾತ್ರನಾದ ಹನುಮಂತರಾಯ ತನ್ನ ಗುಡಿ ಯಲ್ಲಿ ಇದುವರೆಗೂ ಆಶ್ರಯಕೊಟ್ಟಿದ್ದ. ಆತನಿಗೆ ನಮಸ್ಕರಿಸಿ ಸಂಧ್ಯಾವಂದನಕ್ಕೆಂದು ಹೊರಟರೆ ಆತ ಹಿಂದೆ ಹಿಂದೆ ಬರುತ್ತಿರುವಂತೆ- ಆತನನ್ನು ನೋಡಿ ಅಲ್ಲಲ್ಲಿ ವಿಹರಿಸುತ್ತಿದ್ದ ದೈತ್ಯರುಗಳು ಓಡಿ ಹೋಗುತ್ತಿರುವಂತೆ ಭಾಸವಾಗುತ್ತಿತ್ತು. ನಾನು ಅನುಷ್ಠಾನಕ್ಕೆ ಕುಳಿತಾಗ ಸೂರ್ಯ ಮಂಡಲದ ಮಧ್ಯೆ ಕುಳಿತಿರುತ್ತಿದ್ದ ನೀನು, ನನ್ನ ಹೃತ್ಪದ್ಮದಲ್ಲಿಯೂ ರಾರಾಜಿಸುತ್ತಿದ್ದಂತೆ ದರ್ಶನ ಕೊಡುತ್ತಿದ್ದೆ. ಹನುಮಪ್ಪನ ಆಜ್ಞೆಯಂತೆ ಈಗ ನಿನ್ನ ಬಳಿಗೆ ಬಂದಿದ್ದೇನೆ. ಮುಂದಿನ ಭಾರವೆಲ್ಲಾ ನಿನ್ನದೇ ತಂದೆ" ಭಾಗಣ್ಣ ಪ್ರಾರ್ಥಿಸುತ್ತಿದ್ದಂತೆ ದೇವದೇವೋತ್ತಮನಾದ ಶ್ರೀ ವೆಂಕಟೇಶನು ಸಮ್ಮತಿಯ ಮುಗುಳ್ನಗೆ ಸೂಸುತ್ತಿರುವಂತೆ ಭಾಸವಾಯಿತು.

ವೆಂಕಮ್ಮ ಮತ್ತು ಆಕೆಯ ಮಕ್ಕಳು ಗುಡಿಯ ಮೂಲೆಯೊಂದರಲ್ಲಿ ತಾವು ಹೊತ್ತು ತಂದಿದ್ದ ಸಣ್ಣ ಸಣ್ಣ ಗಂಟುಗಳನ್ನು ಮೂಲೆಯೊಂದರಲ್ಲಿ ಇಟ್ಟಿದ್ದರು. ಅವರೆಲ್ಲಾ ತುಂಬಾ ಬಳಲಿದ್ದಂತೆ ಕಾಣುತ್ತಿತ್ತು.

ಸಣ್ಣ ಮಗ ರಂಗ 'ಅಮ್ಮಾ ಹಸಿವೆ' ಎಂದು ಸಣ್ಣ ರಾಗ ಪ್ರಾರಂಭಿಸಿದ.

ಊರಿಗೆ ಬಂದೊಡನೆ ಎಲ್ಲಿಂದ ತರುವುದು ಮಕ್ಕಳಿಗೆ ಊಟವನ್ನು? ಸಂಕಾಪುರದಿಂದ ಯಾವುದೇ ರೀತಿಯ ಧಾನ್ಯವನ್ನು ತರಲು ಭಾಗಣ್ಣ ನಿರಾಕರಿಸಿದ್ದ. ತಾವು ಈ ಊರಿಗೆ ಹೊಸಬರು. ವೆಂಕಮ್ಮ ಯೋಚಿಸುತ್ತಾ ಕುಳಿತಿದ್ದಳು. ಭಾಗಣ್ಣ ವೆಂಕಟೇಶನ ಮುಂದೆ ಕೈ ಮುಗಿದು ನಿಂತು ಬಿಟ್ಟಿದ್ದ.

ರಂಗ ತನ್ನ ಇತರ ಅಣ್ಣಂದಿರಂತಲ್ಲ. ತಾಯಿ ಕರೆದು ನೀಡಿದರೆ ಮಾತ್ರ ಊಟ ಮಾಡುವ ಸ್ವಭಾವ ಇತರ ಮಕ್ಕಳದು. ಪುಟ್ಟ ವಯಸ್ಸಿನ ಹಠಮಾರಿತನವೋ ಅಥವಾ ಅದು ಅವನ ಮೂಲ ಸ್ವಭಾವವೋ ಹಸಿವೆಯನ್ನು ಮಾತ್ರ ರಂಗನಿಗೆ ಸಹಿಸಲಾಗುತ್ತಿರಲಿಲ್ಲ.

"ಅಮ್ಮಾ ಹಸಿವೆ" ಗಟ್ಟಿಯಾಗಿ ಅಬ್ಬರಿಸಿದ. ಅವನ ಅಬ್ಬರಕ್ಕೆ ಗುಡಿ ಪ್ರತಿಧ್ವನಿಸಿತು. ಗುಡಿಯಲ್ಲಿ ಹರಡಿದ ಧ್ವನಿಗೆ ಮೇಲ್ಛಾವಣಿಯಲ್ಲಿದ್ದ ಅಳಿಲೊಂದು ಬೆದರಿ ಅಲ್ಲಿಯೇ ನಿಂತುಬಿಟ್ಟಿತು.

ಗರ್ಭಗುಡಿಯೊಳಗಿನಿಂದ ಬೆದರಿದ ಕೋತಿಯೊಂದು ಠಣ್ಣನೆ ಜಿಗಿದು ಹೊರ ಬಂದಿತು. ಅದು ಹಾರಿ ಬಂದ ರಭಸಕ್ಕೆ ಗರ್ಭಗುಡಿಯ ಹೊಸ್ತಿಲಲ್ಲಿ ಯಾರೋ ಇಟ್ಟಿದ್ದ ರಂಗೋಲಿಯ ಚಿಪ್ಪು ಮೇಲಕ್ಕೆ ಚಿಮ್ಮಿ ಕೆಳಗೆ ಬಿತ್ತು. ಅದರಲ್ಲಿದ್ದ ರಂಗೋಲಿ ಅದರ ಕಣ್ಣಿಗೆ ಸ್ವಲ್ಪ ಬಿದ್ದಿರಬೇಕು. ಹಸಿ ಕೊಬ್ಬರಿಯ ಅರ್ಧ ಹೋಳನ್ನು ಅದು ಅಲ್ಲಿಯೇ ಎಸೆದು ಹೊರಗೆ ಓಡಿ ಹೋಯಿತು.

ವೆಂಕಮ್ಮ ಮಂಗನನ್ನು ಭೀತಿಯಿಂದ ನೋಡಿದಳು. ಅಳುತ್ತಿದ್ದ ಹುಡುಗ ಬೆಪ್ಪಾಗಿ ಪಿಳಿ ಪಿಳಿ ನೋಡುತ್ತಾ ನಿಂತುಬಿಟ್ಟ. ಇತರ ಇಬ್ಬರು ಸ್ತಂಭೀಭೂತರಾಗಿದ್ದರು.

ಭಾಗಣ್ಣ ಮಾತ್ರ ಕೋತಿ ಚೆಲ್ಲಿಹೋದ ರಂಗೋಲಿಯನ್ನು ನೋಡುತ್ತಾ ನಿಂತ.

ಸ್ವಲ್ಪ ಹೊತ್ತು ಎಲ್ಲರೂ ಚೇತರಿಸಿಕೊಂಡ ಮೇಲೆ ವೆಂಕಮ್ಮನೇ ಮುಸಿ ಮುಸಿ ನಗುತ್ತಾ ಮಾತಿಗೆ ಶುರು ಮಾಡಿದಳು.

ಯಾರೋ ಒಡೆದು ಇಟ್ಟು ಹೋಗಿದ್ದ ತೆಂಗಿನ ಕಾಯಿಯನ್ನು ಕಬಳಿಸಲು ಆ ಕೋತಿ ಗರ್ಭಗುಡಿ ಹೊಕ್ಕಿತ್ತೇನೋ, ನಾವೆಲ್ಲಾ ಬಂದಿದ್ದರಿಂದ ಅದು ಒಳಗೇ

ಅವಿತಿಟ್ಟುಕೊಂಡಿರಬೇಕು. ನಮ್ಮ ರಂಗ ಗಟ್ಟಿಯಾಗಿ ಅತ್ತಿದ್ದರಿಂದ ಅದರ ಶಬ್ದಕ್ಕೆ ಹೆದರಿ ಒಳಗಿದ್ದ ಕೋತಿ ಪ್ರಾಣ ಭಯದಿಂದ ಹೆದರಿ ಹೊರಗೆ ಓಡಿತು. ಪಾಪ ಅವನು ಇದ್ದಕ್ಕಿದ್ದಂತೆ ಅಳು ಹೆಚ್ಚಿಸಿದ್ದರಿಂದ ಅದಕ್ಕೆ ತುಪಾಕಿ ಶಬ್ದದಂತೆ ಕೇಳಿಸಿರಬೇಕು.

ಇನ್ನೊಬ್ಬ ಮಗ ಸೀನ ತಾಯಿಯ ಮಾತಿಗೆ ತನ್ನದನ್ನೂ ಜೊತೆಗೂಡಿಸಿದ.

"ಅಮ್ಮಾ. ಇನ್ನು ಮೇಲೆ ರಾತ್ರಿ ನಾನು ಹೊರಗೆ ಹೋದರೆ ನೀನು ಬರ ಬೇಡಮ್ಮ. ಈ ರಂಗನನ್ನು ಜೊತೆಗೆ ಕಳಿಸು. ಅವನು ಅಳುತ್ತಾ ನನ್ನ ಜೊತೆಯಲ್ಲಿ ಬಂದರೆ ಕೋತಿಯಷ್ಟೇಯೇಕೆ, ಕರಡಿ ಹುಲಿಗಳಿದ್ದರೂ ಓಡಿ ಹೋಗುತ್ತವಮ್ಮ. ಪ್ರಾಣಭಯ ಯಾವ ಪ್ರಾಣಿಗಳಿಗೆ ಇರುವುದಿಲ್ಲ ಹೇಳು."

ಈ ಮಾತು ಕೇಳಿ ದಾಸಣ್ಣ ಕಿಸಿ ಕಿಸಿ ನಕ್ಕ. ಅಣ್ಣಂದಿರಿಬ್ಬರ ನಗುವಿನಿಂದ ರಂಗನಿಗೆ ರೇಗಿ ಹೋಯಿತು.

"ಯಾವ ಪ್ರಾಣಿಯ ಮಾತೇಕೆ? ನಿನಗಂತೂ ಎಲ್ಲಿಲ್ಲದ ಜೀವಭಯ. ಪ್ರತಿಯೊಂದಕ್ಕೂ ಅಮ್ಮ ಜೊತೆಗಿರಬೇಕು" ಹುಬ್ಬು ಗಂಟು ಹಾಕಿ ತುಟಿ ಮುಂದೆ ಮಾಡಿ ಮೊಂಡವಾದಕ್ಕೆ ಇಳಿದ.

"ಇಲ್ಲ, ನನಗೆ ಯಾವ ಭಯವೂ ಇಲ್ಲ" ಬಹಳ ಧೈರ್ಯವಂತನ ಭಂಗಿ ನೀಡಿ ಸೀನಣ್ಣ ಸೆಟೆದು ನಿಂತು ಹೇಳಿದ.

"ಹಾಗಾದರೆ ಸ್ವಲ್ಪ ಕತ್ತಲಾದೊಡನೆಯೇ ಅಮ್ಮ ಜೊತೆಗಿರಬೇಕೆಂದು ಏಕೆ ಹಠ ಹಿಡಿಯುತ್ತಿ" ಒಂದು ಅಂಗೈಯನ್ನು ಕೆಳಗೆ ಮಾಡಿ ಮತ್ತೊಂದು ಕೈಯಿಂದ ಪ್ರಶ್ನಾರ್ಥಕವಾಗಿ ಕುಟ್ಟುತ್ತಾ ರಾಗವಾಗಿ ಕೇಳಿದ. ಅಣ್ಣ ಮಾತಿನಲ್ಲಿ ಸಿಕ್ಕು ಬಿದ್ದ ಎಂಬ ಸಂತೋಷ ರಂಗನಿಗೆ.

ಸೀನ ಸ್ವಲ್ಪ ಪುಕ್ಕಲು ಸ್ವಭಾವದವ. ಆದರೆ ಮಾತಿನಲ್ಲಿ ಜಾಣ.

"ಕತ್ತಲಾದೊಡನೆ ಅಮ್ಮ ಜೊತೆಗಿರಬೇಕೆಂದು ಹಠ ಹಿಡಿಯುವುದು ನನ್ನ ಹೆದರಿಕೆಗಲ್ಲವೋ ಬೆಪ್ಪೇ."

"ಮತ್ತೆ"

"ಅಮ್ಮ ಹೆದರಿಕೊಳ್ಳುತ್ತಾಳೆ ಎಂದು"

"ಪಾಪ ಹಾಗಾದರೆ ರಾತ್ರಿಯೆಲ್ಲಾ ಅಮ್ಮನ ಹಚ್ಚಡದಲ್ಲಿ ಒಳಗೆ ತೂರಿ ತೂರಿ ಮಲಗಿಕೊಳ್ಳುತ್ತೀಯೇಕಪ್ಪಾ" ರಂಗ ಕೇಳಿದ.

"ಬೂಚಿ ಬಂದು ಅಮ್ಮನನ್ನು ಎಳೆದುಕೊಂಡು ಹೋದರೆ ನಿನಗೆ ಊಟ ಹಾಕುವರ್‍ಯಾರು? ನಿನಗಾಗಿ ನಾನು ಅಮ್ಮನನ್ನು ಹಿಡಿದುಕೊಳ್ಳುತ್ತೇನೆ. ಗೊತ್ತೇನೋ ಪುಕ್ಕಲಿ" ಸೀನ ದಬಾಯಿಸಿ ಹೇಳಿದ.

ಸೀನ ಹೇಳಿದ. ರಂಗ ಅದನ್ನು ನಂಬಿದ.

"ಹಾಗಾದರೆ ನಿನಗೆ ಹೆದರಿಕೆಯೇ ಇಲ್ಲವೇನೋ" ಆಶ್ಚರ್ಯದಿಂದ ಕೇಳಿದ ರಂಗ.

"ಹೂಂ, ನಾನು ಯಾರಿಗೂ ಹೆದರುವುದಿಲ್ಲ. ಯಾವುದಕ್ಕೂ ಹೆದರುವುದಿಲ್ಲ" ಧೈರ್ಯದ ಭಂಗಿಯಲ್ಲಿ ಹೇಳಿದ ಸೀನ.

ರಂಗ ಪಿಳಿ ಪಿಳಿ ನೋಡತೊಡಗಿದ.

"ಆದರೆ ಒಂದಕ್ಕೆ ಮಾತ್ರ ಹೆದರುತ್ತೇನೆ" ಸೀನನ ಮಾತು ಕೇಳಿ ರಂಗನಿಗೆ ಖುಷಿ ಆಯಿತು.

"ಯಾವುದಕ್ಕೆ ಹೆದರುತ್ತೀ ಹೇಳೋ" ನಮಿಸುವ ಧ್ವನಿಯಲ್ಲಿ ಕೇಳಿದ ರಂಗ. ಸೀನ ಉತ್ತರಿಸಲಿಲ್ಲ.

"ಹುಲಿಗೆ ಹೆದರುತ್ತೀ" ಊಹಿಸಿ ನುಡಿದ ರಂಗ.

"ಹೂಂ ಹೂಂ ಇಲ್ಲ"

"ಬೂಚಿಗೆ ಹೆದರುತ್ತಿ"

"ಇಲ್ಲ"

"ರಾಜಭಟರು ಬಂದರೆ ಹೆದರುತ್ತಿ"

"ಹೂಂ ಹೂಂ, ಅವರು ನಮ್ಮಂಥ ಹುಡುಗರನ್ನು ಕಂಡರೆ ಕುದುರೆ ಮೇಲೆ ಸ್ವಲ್ಪ ಹೊತ್ತು ಕೂಡಿಸಿಕೊಂಡು ಆಡಿಸಿ ಕಳಿಸುತ್ತಾರೆ" ಏನೋ ಲೋಕ ಜ್ಞಾನ ಬಲ್ಲವನಂತೆ ನುಡಿದ ಸೀನ.

"ಹಾಗಾದರೆ ಏತಕ್ಕೆ ಹೆದರುತ್ತೀ" ರಂಗ ಬಹಳ ಕಾತುರದಿಂದ ಕೇಳಿದ. ಉತ್ತರಿಸಿದ ಸೀನ.

"ಕಿವಿ ಕೊರೆಯುವ ನಿನ್ನ ಅಳುವಿಗೆ ಮಾತ್ರ ಹೆದರುತ್ತೀನಿ ನೋಡಪ್ಪಾ" ರಂಗನಿಗೆ ರೇಗಿ ಹೋಯಿತು.

ಗಟ್ಟಿಯಾಗಿ ಅಳುತ್ತಾ "ಅಮ್ಮಾ ನೋಡೇ ಇವನು" ತಾಯಿಗೆ ದೂರು ನೀಡಿದ.

"ಸಾಕು ಸುಮ್ಮನಿರ್ರೋ. ನಿಮ್ಮ ಗಲಾಟೆ. ಪಾಪ ಕೋತಿ ಕೊಬ್ಬರಿ ಬಟ್ಟಲು ಕಡವಿಕೊಂಡು ಹೋಗಿದೆ. ದೊಡ್ಡ ಬಟ್ಟಲು. ಅದನ್ನು ತುರಿದು ಕೊಡುತ್ತೇನೆ. ತಿಂದು ಸ್ವಲ್ಪ ಹೊತ್ತು ಹೊರಗೆ ಆಟವಾಡಿಕೊಳ್ಳಿ" ತಾಯಿ ಹೇಳುತ್ತಾ ಭಾಗಣ್ಣನ ಕಡೆ ನೋಡಿದಳು.

ಭಾಗಣ್ಣನಿಗೆ ಈ ಮಾತುಗಳ ಕಡೆ ಗಮನವೇ ಇಲ್ಲ. ಕೋತಿ ಚೆಲ್ಲಿ ಹೋದ ರಂಗೋಲಿ ಕಡೆ ನೋಡುತ್ತಾ ನಿಂತುಬಿಟ್ಟಿದ್ದ. ಚಲ್ಲಾಪಿಲ್ಲಿಯಾಗಿ ಹರಡಿದ್ದ ರಂಗೋಲಿಯಲ್ಲಿ ಅವನಿಗೆ ಅದೇನು ಆಕಾರಗಳು ಕಾಣುತ್ತಿದ್ದವೊ !

ತಾನು ತೋರಿದ ಕೊಬ್ಬರಿ ಕಡೆ ನೋಡದೆ ಚೆಲ್ಲಿದ ರಂಗೋಲಿ ಕಡೆ ನೋಡುತ್ತಾ ನಿಂತ ಭಾಗಣ್ಣನ ಕ್ರಮದಿಂದ ತಾಯಿಗೆ ಆಶ್ಚರ್ಯವಾಯಿತು.

ನಿಧಾನವಾಗಿ ಭಾಗಣ್ಣ ಹೇಳಿದ.

"ಅಮ್ಮಾ, ಒಳಗಿನಿಂದ ಬಂದ ಪ್ರಾಣಿ ಸಾಧಾರಣ ಕೋತಿಯಲ್ಲಮ್ಮಾ, ಸಂಕಾಪುರದ ಹನುಮಂತರಾಯನೇ ಈತ. ಪ್ರಸಾದ ನೀಡಿ ಹೋಗಿದ್ದಷ್ಟೇ ಅಲ್ಲ. ಮುಂದಿನ ದಾರಿಯನ್ನೂ ಆತ ತೋರಿ ಹೋಗಿದ್ದಾನೆ.

ಭಾಗಣ್ಣನ ಮುಖದಲ್ಲಿ ವಿಚಿತ್ರ ಕಾಂತಿ ಹೊಮ್ಮುತ್ತಿತ್ತು. ಮುಂದುವರಿದು ಆತ ಹೇಳಿದ.

"ನಮ್ಮ ಹನುಮಪ್ಪ ವೆಂಕಟೇಶನ ಮುಂದೆ ರಂಗೋಲಿ ಹಾಕಿ ಹೋಗಿದ್ದಾನೆ. ಚಿಪ್ಪು ಬೀಳುವಾಗ ಎರಡು ಸಲ ಪುಟಿದು ತಾಳ ಹಾಕಿದಂತೆ ಮಾಡಿ ಉರುಳಿ ಹೋಯಿತು. ಅಮ್ಮಾ ಇಲ್ಲಿ ನೋಡು ರಂಗೋಲಿಯಲ್ಲಿ ಚಿತ್ರ ವಿಚಿತ್ರ ಗೆರೆಗಳು ಬಿದ್ದಿವೆ. ಅಲ್ಲಿಲ್ಲಿ ಚುಕ್ಕೆ ಇಟ್ಟಂತೆ ಹರಡಿದೆ. ಭಕ್ತಿ ಪೂರ್ಣವಾಗಿ ಹಾಕಿದ ರಂಗೋಲಿಯಲ್ಲಿ ದೇವರ ವಿಶೇಷ ಸಾನಿಧ್ಯವಿರುತ್ತದೆ. ಮಂತ್ರನಿಷ್ಠವಾಗಿ ಹಾಕಿದ ಗೆರೆಗಳಲ್ಲಿ ಪರಮಾತ್ಮ ವಿಶೇಷ ಸನ್ನಿಹಿತನಾಗಿರುತ್ತಾನೆಂದು ಹನುಮಪ್ಪ ಸೂಚನೆ ನೀಡಿದ್ದಾನಮ್ಮ. ಆದ್ದರಿಂದ ಸೂರ್ಯೋದಯಕ್ಕಿಂತ ಮೊದಲು ಎದ್ದು ಯಾವ ಮನೆಗಳ ಮುಂದೆ ರಂಗೋಲಿ ಹಾಕುತ್ತಾರೋ ಅಂಥ ಮನೆಗೆ ಮಹಾಲಕ್ಷ್ಮಿಯೊಂದಿಗೆ

ನಮ್ಮ ವೆಂಕಟೇಶ ಪ್ರವೇಶ ಮಾಡುತ್ತಾನೆ. ಕೋತಿ ಆಟದಂತೆ ಮಾಡುತ್ತಾ ಮುಂದೆ ನಾವು ಮಾಡಬೇಕಾದ ಕೆಲಸವನ್ನು ತೋರಿ ಹೋಗಿದ್ದಾನಮ್ಮ. ನಮ್ಮ ಮುಖ್ಯ ಪ್ರಾಣ. ಚಿಪ್ಪು ಬಿದ್ದ ರೀತಿಯಿಂದ ಭಜನೆ ಮಾಡು ಎಂಬ ಸಂದೇಶವೂ ಸೇರಿ ಕೊಂಡಿದೆ" ಆಕಾಶ ನೋಡುತ್ತಾ ಭಾಗಣ್ಣ ಹೇಳುತ್ತಿದ್ದರೆ ಇತರ ತಮ್ಮಂದಿರು ಬೆಪ್ಪಾಗಿ ಅಣ್ಣನನ್ನು ನೋಡುತ್ತಾ ಕುಳಿತಿದ್ದರು. ತಾಯಿಗೆ ಮಗನ ಮಾತು ಸರಿಯಾಗಿ ಅರ್ಥವಾಗದಿದ್ದರೂ ಏನೋ ರಹಸ್ಯವನ್ನು ಮಗನು ಕಂಡಿದ್ದಾನೆಂದು ಆಕೆಗೆ ಅದೇನೋ ನಂಬಿಕೆ.

ಭಾಗಣ್ಣ ಮುಂದುವರೆದು ಹೇಳಿದ."ಪ್ರಾಣ ದೇವರೇ ನೈವೇದ್ಯ ಮಾಡಿ ತಂದುಕೊಟ್ಟ ಪ್ರಸಾದವನ್ನು ಭುಜಿಸುವ ಮುನ್ನ ಆತನ ಸಂದೇಶದಂತೆ ಭಜನೆ ಮಾಡೋಣ ಬನ್ನಿ" ತಮ್ಮಂದಿರನ್ನು ಎಬ್ಬಿಸಿದ.

ಮೂರು ಜನ ತಮ್ಮಂದಿರಿಗೂ ಅಣ್ಣನ ಬಗ್ಗೆ ವಿಪರೀತ ಗೌರವ. ಅವರವರು ಹುಡುಗುತನದಿಂದ ಜಗಳವಾಡಿಕೊಂಡರೂ ಭಾಗಣ್ಣನ ಮಾತಿಗೆ ಎದುರು ಹೇಳುವವರಲ್ಲ.

ಎಲ್ಲರೂ ಎದ್ದು ನಿಂತರು. ಭಾಗಣ್ಣ ಭಜನೆಗೆ ನಿಂತ. ಪರಮಾತ್ಮನ ರೂಪ ಅವನ ಕಣ್ಣಿಗೆ ಕಟ್ಟಿದಂತೆ ಆಗುತ್ತಿತ್ತು. ಆದರೆ ಶಬ್ದಗಳು ಮಾತ್ರ ಹೊರಡಲಿಲ್ಲ. ತಮ್ಮಂದಿರಿಗೆ ಏನು ಮಾಡಬೇಕೆಂದು ತೋಚಲಿಲ್ಲ. ಕಡೆಗೆ ಭಾಗಣ್ಣ ಶುರು ಮಾಡಿದ. ಶಬ್ದಗಳೇ ಇಲ್ಲ. ಆದರೆ ಎಲ್ಲಾ ಶಬ್ದಗಳಿಗೂ ಮಿಗಿಲಾದ ಅರ್ಥವ್ಯಾಪ್ತಿ ಆ ನಿನಾದಕ್ಕೆ! ವಿಶಿಷ್ಟ ಶಕ್ತಿಯ ಅಕ್ಷರವದು.

"ಓಂ........"

ಏರಿದ ಭಾಗಣ್ಣನ ಶೃತಿಗೆ ಜೊತೆಗೂಡಲಾಗಲಿಲ್ಲ ತಮ್ಮಂದಿರಿಗೆ. ಅದನ್ನು ಕಂಡ ಭಾಗಣ್ಣ ಭಜನೆಯ ರೀತಿ ಬದಲಾಯಿಸಿದ.

"ಗೋವಿಂದಾ...... ಗೋಪಾಲ"

ತಮ್ಮಂದಿರು ಅನುಸರಿಸಿದರು.

"ಉತ್ತಮೋತ್ತಮ ಗೋವಿಂದಾ, ಉತ್ತನೂರಿನ ಗೋವಿಂದಾ" ದಾಸಣ್ಣ ಸೀನಣ್ಣ ಅದರಂತೆ ನುಡಿದರು.

"ಸರ್ವತ್ರ ವ್ಯಾಪಕ ಗೋವಿಂದಾ, ಸರ್ವಶಕ್ತ ಗೋವಿಂದಾ."

ತಾಯಿಗೂ ಸ್ಫೂರ್ತಿ ಉಕ್ಕಿತು. ಮಗನು ಹೇಳುವ ರಾಗಕ್ಕೆ ಅನುಗುಣವಾಗಿ ಗುಡಿಯಲ್ಲಿಯ ಗಂಟೆಯಿಂದ ತಾಳ ಹಾಕಿದಂತೆ ಬಾರಿಸತೊಡಗಿದಳು.

ಭಾಗಣ್ಣ ಕುಣಿದ. ತಾಯಿ ತಾಳ ಹಾಕಿದಳು.

ತಮ್ಮಂದಿರು ಧ್ವನಿಗೂಡಿಸಿದರು.

'ಗೋವಿಂದಾ, ಗೋವಿಂದಾ.'

ದೇವರ ನಾಮೋಚ್ಚಾರ ಅಲೆ ಅಲೆಯಾಗಿ ಸುತ್ತೆಲ್ಲಾ ಹರಡಿತು. ವೆಂಕಮ್ಮ ಬಾರಿಸುತ್ತಿದ್ದ ಗಂಟೆಯ ಝೇಂಕಾರ ಸುತ್ತಮುತ್ತೆಲ್ಲಾ ವ್ಯಾಪಿಸಿ ಹಳ್ಳಿಯಲ್ಲೆಲ್ಲಾ ಕೇಳಿಸಿತು.

ಹೊತ್ತಿಲ್ಲದ ಹೊತ್ತಿನಲ್ಲಿ ಕೇಳಿ ಬಂದ ಗಂಟೆಯ ನಿನಾದ, ಗೋವಿಂದ ನಾಮೋಚ್ಚಾರದಿಂದ ಆಶ್ಚರ್ಯಗೊಂಡ ಹಳ್ಳಿಯ ಕೆಲವು ಜನರು ದೇವಸ್ಥಾನದ ಬಳಿ ಧಾವಿಸಿ ಬಂದರು.

ಈ ತಾಯಿ ಮಕ್ಕಳ ದೇವಪೂಜಾ ರೀತಿಯನ್ನು ಕಣ್ಣಾರೆ ಕಂಡರು.

ಭಾಗಣ್ಣ ಕುಣಿಯುತ್ತಲೇ ಇದ್ದ. ಬಂದ ಜನರಿಗೂ ಭಜನೆಯಲ್ಲಿ ಭಾಗವಹಿಸುವ ಅಪೇಕ್ಷೆ. ಅವರೂ ಜೊತೆಗೂಡಿದರು. ಎಲ್ಲರ ಬಾಯಿಯಲ್ಲಿಯೂ ಹೊರಟಿತು.

"ಗೋವಿಂದಾ, ಗೋವಿಂದಾ"

ಸ್ವಲ್ಪ ಹೊತ್ತು ಸಾಗಿದ ಮೇಲೆ ಭಾಗಣ್ಣ ಹಾಡು ನಿಲ್ಲಿಸಿಬಿಟ್ಟ. ಆದರೆ ಕುಣಿತ ನಿಲ್ಲಲಿಲ್ಲ. ಕುಣಿಯುತ್ತಲೇ ಇದ್ದ. ಮುಖದಲ್ಲಿ ಮೂಡಿದ್ದ ಬೆವರು ವಿಚಿತ್ರ ಶೋಭೆಯನ್ನು ಕೊಡುತ್ತಿತ್ತು.

ಕುಣಿದು ಕುಣಿದು ದಣಿದ ಭಾಗಣ್ಣ ಆಮೇಲೆ ಸುಮ್ಮನೆ ನಿಂತುಬಿಟ್ಟ. ಮುಖದಲ್ಲಿ ದಿವ್ಯಕಾಂತಿ ರಾರಾಜಿಸುತ್ತಿತ್ತು.

ಎದುರಿಗಿನ ವೆಂಕಟೇಶನನ್ನು ಹೃದಯದಲ್ಲಿ ಕಾಣುತ್ತಾ ಭಾಗಣ್ಣ ನಿಂತೇ ಇದ್ದ. ಅವನನ್ನು ನೋಡುತ್ತಾ ಜನರು ಹಾಗೆಯೇ ಕುಳಿತೇ ಇದ್ದರು.

ಬಹಳ ಹೊತ್ತಿನ ಮೇಲೆ 'ಶ್ರೀ ಕೃಷ್ಣಾ ನಿನಗೆ ಅರ್ಪಣೆ' ಎಂದೆನ್ನುತ್ತಾ ಕೈಮುಗಿದು ಕಣ್ಣು ತೆಗೆದ ಭಾಗಣ್ಣ.

ಆಗಲೇ ಗುಡಿಯಲ್ಲಿ ಹಳ್ಳಿಯ ಹತ್ತಾರು ಸಮಸ್ತರು ಸೇರಿದ್ದರು. ಅವರನ್ನು ಕಂಡು ಭಾಗಣ್ಣನಿಗೆ ಆಶ್ಚರ್ಯ.

"ನೀವೆಲ್ಲಾ ಏಕೆ ಬಂದಿದ್ದೀರಿ ?" ಕೇಳಿದ ಭಾಗಣ್ಣ. ಮುಂದೆ ನಿಂತಿದ್ದ ಒಬ್ಬ ವೃದ್ಧರನ್ನು ನೋಡಿ ಆಶ್ಚರ್ಯವೂ ಪಟ್ಟ.

ತನ್ನನ್ನೇ ನೋಡಿ ಆಶ್ಚರ್ಯಪಡುವುದನ್ನು ಕಂಡು ಆ ಯಜಮಾನನಿಗೆ ಇನ್ನೂ ಆಶ್ಚರ್ಯವಾಯಿತು. ಏಕೆ ಈ ಹುಡುಗ ತನ್ನನ್ನೇ ನೋಡುತ್ತಿದ್ದಾನೆ. ಕೌತುಕ ಅವರಿಗೆ.

ಉತ್ತನೂರಿನ ಬಹಳ ಜನರು ಭಾಗಣ್ಣನ ತಪಸಿನ ಶಕ್ತಿ ಅರಿತಿದ್ದರು. ಸುಮಾರು ಎರಡು ಕೂಗಳತೆ ದೂರದಲ್ಲಿರುವ ಸಂಕಾಪುರ ಗ್ರಾಮದ ಜನ ಭಾಗಣ್ಣನನ್ನು ಎಷ್ಟು ಗೌರವಿಸುತ್ತಿದ್ದರು ಎಂದು ಅವರಲ್ಲಿ ಬಹಳ ಜನರಿಗೆ ಗೊತ್ತಿತ್ತು. ಆದರೆ ಭಾಗಣ್ಣನಿಗೆ ಆ ಗ್ರಾಮದ ಯಾರ ಪರಿಚಯವೂ ಇರಲಿಕ್ಕೆ ಸಾಧ್ಯವಿಲ್ಲ. ಸಂಕಾಪುರದ ಜನರ ಪರಿಚಯವೂ ಅಷ್ಟಕ್ಕಷ್ಟು. ಇನ್ನು ನೆರೆ ಹಳ್ಳಿಯ ಜನರನ್ನು ತಿಳಿಯುವ ಸ್ವಭಾವವೇ ಭಾಗಣ್ಣನದು ?

ಭಾಗಣ್ಣ ಯಜಮಾನರನ್ನು ಪ್ರಶ್ನಿಸಿದ.

"ಭೀಮಣ್ಣನವರೇ, ನಿಮ್ಮ ಹೆಂಡತಿಯನ್ನು ಬಚ್ಚಲು ಮನೆಯಲ್ಲಿಯೇ ಕೂಡಿಸಿ ಬಂದಿದ್ದೀರಲ್ಲಾ? ಅಷ್ಟು ಹೊತ್ತು ಥಂಡೀ ನೆಲದಲ್ಲಿ ಬಿಟ್ಟರೆ ನೆಗಡಿಯಾಗುವುದಿಲ್ಲವೇ ಆಕೆಗೆ? "

ಭಾಗಣ್ಣನ ಈ ಪ್ರಶ್ನೆಯಿಂದ ಊರಿನವರಿಗೆಲ್ಲಾ ಆಶ್ಚರ್ಯವಾಗಿ ಹೋಯಿತು. ಆತನ ಹೆಸರು ಭೀಮಣ್ಣನೆಂದೂ ಊರಿನವರಿಗೇನೋ ಗೊತ್ತು. ಆದರೆ ಊರಿಗೆ ಹೊಸಬನಾದ ಈ ಬಾಲಕನಿಗೆ ಅವರ ಹೆಸರು ಹೇಗೆ ತಿಳಿಯಿತು ?

ಜನರು ಆಶ್ಚರ್ಯಗೊಂಡಿದ್ದಕ್ಕಿಂತಲೂ ಹೆಚ್ಚಾಗಿ ಭೀಮಣ್ಣ ಆಶ್ಚರ್ಯಪಟ್ಟ.

ಆತನ ಹೆಂಡತಿಗೆ ಪಾರ್ಶ್ವವಾಯು ಬಡಿದು ಸುಮಾರು ಆರು ಮಾಸಗಳಾಗಿದ್ದವು. ಪ್ರತಿನಿತ್ಯವೂ ಆಕೆಯ ಸೇವೆಯನ್ನು ಮಾಡಲಾರದೆ ಮನೆಯಲ್ಲಿಯ ಮಕ್ಕಳು ಸೊಸೆಯಂದಿರು ರೋಸಿ ಹೋಗಿದ್ದರು. ಆದರೆ ಮೃದು ಹೃದಯಿ, ಪ್ರೇಮಮಯಿ ಗಂಡನಿಗೆ ಚಾಕರಿ ಮಾಡುವುದು ತಪ್ಪೀತು ಹೇಗೆ ?

ಆಕೆಯನ್ನು ಬಹಿರ್‌ದೆಸೆಗೆ ಕರೆದುಕೊಂಡು ಹೋಗುವುದು. ಬೇಕೆಂದಾಗ ಬಚ್ಚಲು ಮನೆಗೆ ಹೊತ್ತುಕೊಂಡು ಹೋಗುವುದು. ಭೀಮಣ್ಣನ ದಿನಚರ್ಯೆ ಆಗಿತ್ತು.

ಆ ದಿನವೂ ಅಷ್ಟೇ. ಭೀಮಣ್ಣ ಬಚ್ಚಲು ಮನೆಯಲ್ಲಿ ಹೆಂಡತಿಯನ್ನು ಕೂಡಿಸಿ ಹೊರಗೆ ಬಂದಿದ್ದ. ಸ್ವಲ್ಪ ವೇಳೆ ತಡೆದು ಪುನಃ ಎತ್ತಿಕೊಂಡು ಬಂದು ಹಾಸಿಗೆಯಲ್ಲಿ ಮಲಗಿಸಬೇಕಾಗಿತ್ತು. ಅಷ್ಟರಲ್ಲಿ ಪಕ್ಕದ ಮನೆಯ ರಾಮಪ್ಪ ಬಂದು ಕರೆದಿದ್ದರಿಂದ ಅದನ್ನು ಮರೆತು ಗುಡಿಗೆ ಧಾವಿಸಿ ಬಂದು ಬಿಟ್ಟಿದ್ದ. ಗಂಡು ಮಕ್ಕಳೆಲ್ಲಾ ಹೊಲಗಳಿಗೆ ಕೆಲಸಕ್ಕೆ ಹೋಗಿದ್ದರು. ಹೆಂಡತಿಯನ್ನು ಹೊತ್ತುಕೊಂಡು ಬರಲು ಸೊಸೆಯಂದಿರಿಗೆ ಆಗುತ್ತಿರಲಿಲ್ಲ. ಹೀಗಾಗಿ ಭೀಮಣ್ಣ ಹಿಂದಿರುಗುವವರೆಗೆ ಆಕೆ ಬಚ್ಚಲು ಮನೆಯಲ್ಲಿಯೇ ಇರುವುದು ಅನಿವಾರ್ಯವಾಗಿತ್ತು.

ತನ್ನ ಕುಟುಂಬದ ಒಳ ರಹಸ್ಯ ಈ ಬಾಲಕನಿಗೆ ಹೇಗೆ ಗೊತ್ತಾಯಿತು? ಆಶ್ಚರ್ಯ ಭೀಮಣ್ಣನಿಗೆ.

ಬಾಲಕ ಭಾಗಣ್ಣ ಹೇಳಿದ.

"ಹೋಗಿ ಭೀಮಣ್ಣನವರೇ, ಮೊದಲು ಆ ತಾಯಿಯನ್ನು ಹಾಸಿಗೆ ಮೇಲೆ ಮಲಗಿಸಿ ಬನ್ನಿ. ಮೊದಲೇ ಬಲಹೀನ ಶರೀರ. ನೆಗಡಿ ಆಗದಂತೆ ನೋಡಿಕೊಳ್ಳ ಬೇಕಾಗಿತ್ತು. ಆದರೂ ಪರವಾ ಇಲ್ಲ. ನಮ್ಮ ಪ್ರಭು ಶ್ರೀವೆಂಕಟೇಶನ ದರ್ಶನಕ್ಕಾಗಿ ಬಂದಿದ್ದೀರಿ. ಆದ್ದರಿಂದ ಆತನ ಈ ಪ್ರಸಾದವನ್ನು ಆ ತಾಯಿಗೆ ನೀಡಿ" ತಾಯಿ ತೆಗೆದಿಟ್ಟಿದ್ದ ತೆಂಗಿನಕಾಯಿ ಹೋಳಿನ ಸ್ವಲ್ಪ ಭಾಗವನ್ನು ಮುರಿದುಕೊಟ್ಟ ಭಾಗಣ್ಣ.

ಜನರು ಈ ಹುಡುಗನ ದಿವ್ಯಶಕ್ತಿ ಕಂಡು ಮಾರುಹೋಗಿಬಿಟ್ಟರು.

"ಅಮ್ಮಾ ಕೊಬ್ರಿ ನನಗೆ" ಇರುವ ಹೋಳಿನಲ್ಲಿಯೇ ಭಾಗಣ್ಣ ತೆಗೆದು ಕೊಡುತ್ತಿರುವುದನ್ನು ನೋಡಿ ರಂಗನಿಗೆ ಕಸಿವಿಸಿ. ಅವನಿಗಾಗಿರುವ ಹಸಿವು ಮುಖದಲ್ಲಿ ಕಾಣುತ್ತಿತ್ತು.

ವೆಂಕಮ್ಮನು ತಂದಿದ್ದ ಆಸ್ತಿಯ ಮೇಲೆ ಜನರು ಕಣ್ಣೋಡಿಸಿದರು. ಹರಕು ಸೀರೆಯ ಗಂಟಿನಲ್ಲಿಟ್ಟಿದ್ದ ಮಕ್ಕಳ ಹರಕು ಬಟ್ಟೆಗಳು ಎದ್ದು ಕಾಣುತ್ತಿದ್ದವು. ಹುಡುಗರು ಹೊತ್ತು ತಂದಿದ್ದ ಗಂಟಿನಲ್ಲಿ ಒಂದೆರಡು ಸಣ್ಣ ಗಡಿಗೆ ಸಣ್ಣ ಪುಟ್ಟ ಡಬ್ಬಿಗಳು ಇಣಿಕಿ ನೋಡುತ್ತಿದ್ದವು.

ಅವರಲ್ಲಿ ಆ ಕೊಬ್ಬರಿ ಬಟ್ಟಲು ಹೊರತು ಮತ್ತೇನೂ ಇಲ್ಲ ಎಂಬ ವಿಷಯ ತಿಳಿಯಲು ಜನರಿಗೆ ಹೆಚ್ಚು ಕಷ್ಟವಾಗಲಿಲ್ಲ.

"ಬನ್ನಿ ತಾಯಿ, ನಿಮ್ಮಂಥ ಪುಣ್ಯಾತ್ಮರು ನಮ್ಮ ಊರಿಗೆ ಬಂದಿದ್ದರಿಂದ ನಾವು ಉದ್ಧಾರವಾದೆವು. ಈ ದಿನ ನಮ್ಮ ಮನೆಗೆ ಬಂದು ಅಡುಗೆ ಮಾಡಿಕೊಳ್ಳಿ. ನಿಮಗೆ ಬೇಕಾದ ಸಾಮಗ್ರಿಗಳನ್ನು ನಾನು ಒದಗಿಸುತ್ತೇನೆ" ಭೀಮಣ್ಣನ ಮಾತು ಕೇಳಿ ಆನಂದವಾಯಿತು ವೆಂಕಮ್ಮನಿಗೆ. ಹೊರಡಲು ಕೂಡಲೇ ಅನುವಾದಳು.

ಆದರೆ ಭಾಗಣ್ಣ ತನ್ನ ತಾಯಿಯನ್ನು ತಡೆದ. " ಬೇಡಮ್ಮ, ದುಡಿಯದೆ ತಿನ್ನುವ ವಯಸ್ಸಲ್ಲ ನನ್ನದು. ದುಡಿಯದೆ ಏನನ್ನೂ ಪಡೆಯಬಾರದು."

ಹುಡುಗನ ಮಾತು ಕೇಳಿ ಭೀಮಣ್ಣನ ಕಣ್ಣಿನಲ್ಲಿ ನೀರು ಒತ್ತರಿಸಿ ಬರತೊಡಗಿತು.

"ನಮ್ಮ ಮನೆಗೆ ಬನ್ನಿ ತಾಯಿ, ನಿಮ್ಮ ಮಗ ಈ ಪ್ರಸಾದವನ್ನು ನೀಡಿದ್ದಾನೆ. ಅದಕ್ಕಿಂತ ಮೊದಲು ಭಗವಂತನನ್ನು ಭಕ್ತಿಯಿಂದ ಭಜಿಸಿದ್ದಾನೆ. ನಿಜವಾದ ಭಕ್ತಿಯಿಂದ ದೇವರನ್ನು ಪೂಜಿಸಿ ಆತನ ನೇವೇದ್ಯವನ್ನು ವಿನಿಮಯಿಸುವುದು ಬ್ರಾಹ್ಮಣರ ದುಡಿಮೆಗಳಲ್ಲೊಂದು. ಈ ದಿನ ನೀಡಿದ ಪ್ರಸಾದದ ಪ್ರಭಾವದಿಂದ ನನ್ನ ಹೆಂಡತಿಗೆ ನೆಗಡಿಯಾಗುವುದಿಲ್ಲ ಎಂಬ ಆಶ್ವಾಸನೆ ಸಿಕ್ಕಿದೆ. ತಾವು ಮಾಡಿದ ಪೂಜೆ, ಆರ್ಜಿಸಿದ ಪುಣ್ಯದ ಭಾಗವನ್ನು ನೀಡುವುದು ಪರಂಪರಾಗತವಾಗಿ ಬಂದ ಬ್ರಾಹ್ಮಣರ ಕಸಬು. ನಿಮ್ಮದನ್ನು ನೀವು ನಿರ್ವಹಿಸಿದ್ದೀರಿ. ಇನ್ನು ನಿಮಗೆ ಬೇಕಾದ ಅವಶ್ಯಕತೆಗಳನ್ನು ಪೂರೈಸುವ ಜವಾಬ್ದಾರಿ ನಮಗೆ ಸೇರಿದ್ದು. ನಮ್ಮ ಕರ್ತವ್ಯವನ್ನು ನಾವು ನಿರ್ವಹಿಸಲು ಅವಕಾಶ ಕೊಡಿ ತಾಯಿ. ಎಲ್ಲರೂ ಅವರವರ ಕಸುಬುಗಳನ್ನು ಅವರವರು ನಿರ್ವಹಿಸುವಂತೆ ಮಾರ್ಗದರ್ಶನ ನೀಡುವುದೂ ಬ್ರಾಹ್ಮಣರ ಕರ್ತವ್ಯ ತಾನೇ?"

ಭೀಮಣ್ಣನ ತರ್ಕಬದ್ಧವಾದ ಮಾತು ವೆಂಕಮ್ಮನಿಗೆ ಹಿಡಿಸಿತು. ಭಾಗಣ್ಣನಿಗೆ ಭೀಮಣ್ಣನ ಮಾತು ಒಪ್ಪಿಗೆಯಾದರೂ ಅದನ್ನು ಒರೆ ಹಚ್ಚಿಯೇ ಬಿಟ್ಟ.

"ಈ ಪ್ರಸಾದ ಭಕ್ಷಣೆಯಿಂದ ನಿಮ್ಮ ಹೆಂಡತಿಗೆ ನೆಗಡಿ ಕಾಯಿಲೆ ಆಗುವುದಿಲ್ಲ ಎಂದೇನೋ ನಾನು ಹೇಳಿದೆ. ಅಷ್ಟಕ್ಕೇ ಪ್ರತಿಫಲ ನೀಡುವುದು ದುರುಪಯೋಗವಾಗುವುದಿಲ್ಲವೇ ಭೀಮಣ್ಣನವರೆ?"

"ಇಲ್ಲ" ಭೀಮಣ್ಣ ಖಡಾಖಂಡಿತ ಧ್ವನಿಯಲ್ಲಿ ಹೇಳಿದ.

'ಅದು ಹೇಗೆ ?' ಭಾಗಣ್ಣನ ಪ್ರಶ್ನೆ.

ಬಿಡಿಸಿ ಬಿಡಿಸಿ ಹೇಳಿದ ಭೀಮಣ್ಣ.

"ನಾವು ವೈದ್ಯರ ಬಳಿ ಹೋಗುತ್ತೇವೆ. ಪಂಡಿತರು ನೀಡುವ ಮದ್ದಿಗೆ ಹಣ ತೆತ್ತು ಬರುತ್ತೇವೆ ಅದರಿಂದ ಖಂಡಿತಾ ಗುಣವಾಗುತ್ತದೆಂದು ಏನು ಭರವಸೆ? ಅಷ್ಟೇಕೆ ! ನಿನ್ನೆ ಒಬ್ಬ ಮುದುಕಿ ಎಳೇ ಸೌತಿಕಾಯಿ ಹೊತ್ತು ತಂದಿದ್ದಳು. ಜೋಳ ಹಾಕಿ ನಾವು ಅದನ್ನು ಕೊಂಡೆವು. ತಿಂದು ನೋಡಿದಾಗ ಅವುಗಳಲ್ಲಿ ಬಹಳಷ್ಟು ಕಾಯಿಗಳು ಕಹಿಯಾಗಿದ್ದವು. ವೈದ್ಯರಲ್ಲಿ ಮದ್ದು ತರುವಾಗಲಾಗಲೀ, ಸೌತೆಕಾಯಿಯನ್ನು ಕೊಳ್ಳುವಾಗಲಾಗಲೀ ನಾವು ಹಣವನ್ನು ಮೊದಲೇ ಏಕೆ ನೀಡಬೇಕೆಂದು ಯೋಚಿಸುವುದಿಲ್ಲ. ದೇವರು, ಪೂಜೆ ಪ್ರಸಾದ ವಿಷಯಗಳಲ್ಲಿ ಮಾತ್ರ ಏಕೆ ಮೊದಲು ಯೋಚಿಸಬೇಕು ? ನಂಬಿಕೆಯಷ್ಟೇ ವ್ಯವಹಾರಕ್ಕೆ ಬುನಾದಿ. ಆ ಹಾದಿ ತಪ್ಪದಂತೆ ನೋಡಿಕೊಳ್ಳುವುದು ವ್ಯವಹಾರಿಕ ಧರ್ಮ. ಆಶೀರ್ವದಿಸಿ ನೀವು ಪ್ರಸಾದ ನೀಡಿದ್ದೀರಿ. ಇದರಿಂದ ನನ್ನ ಹೆಂಡತಿಗೆ ಗುಣವಾಗುತ್ತದೆ ಎಂಬ ನಂಬಿಕೆಯಂತೂ ನನಗೆ ಬಂದಿದೆ. ಒಂದು ವೇಳೆ ಗುಣವಾಗದಿದ್ದರೆ ರೋಗ ಗುಣ ವಾಗಲಿಲ್ಲ ಎಂದು ಪಂಡಿತರಲ್ಲಿ ಹೇಗೆ ಹಣ ವಾಪಸ್ ಕೇಳಲಾಗುವುದಿಲ್ಲವೋ ಇದೂ ಹಾಗೆಯೇ ! ವೈದ್ಯ ಪಂಡಿತರು ತಮ್ಮ ಕರ್ತವ್ಯ ತಾವು ಮಾಡಿದ್ದರು. ಗುಣವಾಗದಿದ್ದರೆ ನಮ್ಮ ಹಣೆ ಬರಹ. ಆನಂತರ ಬೇರೆಡೆಗೆ ಪ್ರಯತ್ನಿಸಬೇಕಾದುದು ನಮ್ಮ ಕರ್ತವ್ಯ. ಈಗ ನಿಮ್ಮ ಬಳಿಗೆ ಬಂದಿದ್ದೇವೆ. ನಿಮ್ಮ ಕರ್ತವ್ಯ ನೀವು ಮಾಡಿದ್ದೀರಿ. ಇನ್ನು ನನ್ನ ಕರ್ತವ್ಯ ನಾನು ನಿರ್ವಹಿಸಲು ಅವಕಾಶ ಕೊಡಿ."

ಭೀಮಣ್ಣನ ಮಾತಿಗೆ ಭಾಗಣ್ಣ ತಲೆದೂಗಿ ಹೇಳಿದ.

"ವ್ಯವಹಾರಗಳಲ್ಲಿ ನಂಬಿಕೆಯ ಮಾತು ಬೇರೆ. ಆಧ್ಯಾತ್ಮದ ವಿಷಯದಲ್ಲಿ ನಂಬಿಕೆಯೊಂದೆ ಚಲಾವಣೆಯಲ್ಲಿರುವ ನಾಣ್ಯ. ಪ್ರಭು ವೆಂಕಟೇಶನನ್ನು ನೀವು ನಂಬಿದ್ದೀರಿ. ಸನ್ನಿಧಾನದಲ್ಲಿ ನೀಡಿದ ಪ್ರಸಾದ ನಿಮಗೆ ತೃಪ್ತಿ ಕೊಟ್ಟಿದೆ. ಭಕ್ತರು ತೃಪ್ತಿಪಟ್ಟು ಸ್ವಯಂ ಪ್ರೇರಣೆಯಿಂದ ನೀಡಿದ ಭಾಗ್ಯವನ್ನು ನಿರಾಕರಿಸುವುದು ಅಷ್ಟೇ ದೇವ ಸಮ್ಮತವಲ್ಲವಪ್ಪಾ. ನಡೆಯಿರಿ ಹೋಗೋಣ" ಎಂದು ಭಾಗಣ್ಣ ಎದ್ದ. ಹಾಗೆಯೇ ಮನೆಯವರನ್ನೆಲ್ಲಾ ಎಬ್ಬಿಸುತ್ತಾ ಭೀಮಣ್ಣನಿಗೆ ಹೇಳಿದ, ಹಾಗೆ ಹೇಳುವಾಗ ಭಾಗಣ್ಣನ ಮುಖದಲ್ಲಿ ವಿಚಿತ್ರ ಕಾಂತಿ ಹೊಮ್ಮುತ್ತಿತ್ತು.

"ನಾವೆಲ್ಲಾ ಹಸಿದು ಬಂದಿದ್ದೇವೆ. ನಮಗೆ ನೀವು ಉಣ್ಣಲಿಕ್ಕಿದ್ದೀರಿ. ಅದರ ಪುಣ್ಯ ಪ್ರಭಾವವೂ ಸೇರಿ ನಾಳೆ ಬೆಳಗ್ಗೆ ನಿಮ್ಮ ಹೆಂಡತಿ ಪೂರ್ತಿ ಚೇತರಿಸಿಕೊಂಡು

ಬಿಡುತ್ತಾಳೆ. ನಾಡಿದ್ದು ಆ ತಾಯಿಯೇ ನಮಗೆ ನವಣೆ ಕುಟ್ಟಿ ಅಕ್ಕಿ ಮಾಡಿ ಕೊಡುತ್ತಾಳೆ."

ಭಾಗಣ್ಣನ ಧ್ವನಿಯಲ್ಲಿ ಆತ್ಮವಿಶ್ವಾಸವಿತ್ತು.

ಭೀಮಣ್ಣನ ಮುಖದಲ್ಲಿ ಆಸೆ ಅರಳಿತ್ತು.

ಜೈ ವೆಂಕಟೇಶ ಎಂದೆನ್ನುತ್ತಾ ಎಲ್ಲರೂ ಭೀಮಣ್ಣನ ಮನೆಗೆ ಹೊರಟರು.

೮

ಎಲ್ಲೆಲ್ಲಿಯೂ ಅದೇ ಮಾತು. ಯಾರೊಬ್ಬರ ಬಾಯಿಯಲ್ಲಿಯೂ ಅದೇ ವಿಷಯ. ಉತ್ತನೂರಿಗೆ ಉತ್ತನೂರೇ ಈ ವಿಷಯ ಮಾತನಾಡಿ ಆಶ್ಚರ್ಯ ವ್ಯಕ್ತಪಡಿಸುತ್ತಿತ್ತು.

ಪಾರ್ಶ್ವವಾಯು ಬಡೆದು ಆರು ತಿಂಗಳಿಂದ ಹಾಸಿಗೆ ಸೇರಿದ್ದ ಭೀಮಣ್ಣನ ಹೆಂಡತಿ ಒಂದು ದಿನದಲ್ಲಿಯೇ ಗುಣವಾಗಿ ಹೊಸದಾಗಿ ಬಂದ ಬ್ರಾಹ್ಮಣ ಕುಟುಂಬದವರಿಗೆ ನವಣೆ ಕುಟ್ಟಿಕೊಟ್ಟಳಂತೆ.

'ಹೇಗಾಯಿತಂತೆ ಗುಣ ?'

'ಏನೋ ಅಮ್ಮ, ಇನ್ನು ನಾಲ್ಕೈದು ದಿನಗಳಲ್ಲಿ ಸಾಯುತ್ತಾಳೆಂದು ಕುಟುಂಬದವರು ಅಂದುಕೊಂಡಿದ್ದರಂತೆ. ಮದ್ದು ನೀಡುತ್ತಿದ್ದ ಪಂಡಿತರು "ಇನ್ನು ಮುಗಿಯಿತು. ಹತ್ತಿರದ ನೆಂಟರಿಷ್ಟರಿಗೆ ಹೇಳಿ ಕಳುಹಿಸಿಬಿಡಿ. ಬರುವವರು ಬಂದು ನೋಡಿಕೊಂಡು ಹೋಗಲಿ" ಎಂದು ಹೇಳಿದ್ದರಂತೆ. ಅಷ್ಟರಲ್ಲಿಯೇ ಶ್ರೀ ವೆಂಕಟೇಶನ ಗುಡಿಯಲ್ಲಿ ಇಳಿದುಕೊಂಡಿರುವ ಬ್ರಾಹ್ಮಣರ ಹುಡುಗನೊಬ್ಬ ಅವರಿಗೆ ಏನೋ ಮಂತ್ರಿಸಿ ಕೊಟ್ಟನಂತೆ. ಮರುದಿನ ಬೆಳಗಾಗುವುದರೊಳಗೆ ಆಕೆ ಎದ್ದು ಓಡಾಡಿಬಿಟ್ಟಳಂತೆ."

'ಏನು ಅದು ಹೇಗೆ ಸಾಧ್ಯ ? ಆಕೆಯನ್ನೇ ಕೇಳಿಕೊಂಡು ಬರೋಣ ನಡೆಯಿರಿ'

ಗುಂಪು ಗುಂಪು ಜನ ಭೀಮಣ್ಣನ ಮನೆಗೆ ಬಂದು ಕೇಳಿದ್ದೇ ಕೇಳಿದ್ದು. ಭೀಮಣ್ಣನ ಹೆಂಡತಿ ತನಗಾದ ಅನುಭವವನ್ನು ಹೇಳಿದ್ದೇ ಹೇಳಿದ್ದು.

ಆಕೆ ಹೇಳುತ್ತಿದ್ದಳು,

"ವೆಂಕಟೇಶನ ಗುಡಿಯಲ್ಲಿ ಇಳಿದುಕೊಂಡಿರುವ ಬ್ರಾಹ್ಮಣ ಹುಡುಗ ಸಾಮಾನ್ಯನಲ್ಲಮ್ಮ. ಆತ ದೊಡ್ಡ ಋಷಿ ಇರಬೇಕು. ಮೊನ್ನೆರಾತ್ರಿ ಬಂದು ನಮ್ಮ

ಮನೆಯಲ್ಲಿ ರಂಗೋಲಿ ಹಾಕಿದ. ಅದನ್ನು ನೋಡುತ್ತಾ ಪ್ರಾರ್ಥಿಸಿ ಮಲಗಿಕೊಳ್ಳಿ. ಶ್ರೀ ವೆಂಕಟೇಶ್ವರ ನಿಮಗೆ ಶುಭವನ್ನುಂಟು ಮಾಡುತ್ತಾನೆ ಎಂದು ಹೇಳಿದ. ಆತ ಹೇಳಿದಂತೆ ರಂಗೋಲಿ ನೋಡಿದೆ. ಅದೇನೋ ಅಮ್ಮಾ ವಿಚಿತ್ರ. ರಂಗೋಲಿಯ ಸಾಮಾನ್ಯ ಚಿತ್ರವಲ್ಲವದು. ಜೀವಂತವಾಗಿ ಏನೇನೋ ಚಲಿಸುತ್ತಿರುವಂತೆ ಕಂಡಿತು. ಹಾಗೆಯೇ ಕಣ್ಣು ಮುಚ್ಚಿ ಮಲಗಿದೆ. ಸ್ವಲ್ಪ ನಿದ್ದೆ ಬಂದಂತೆ ಭಾಸವಾಗುತ್ತಿತ್ತು. ಅಷ್ಟರಲ್ಲಿ ರಂಗೋಲಿಯಿಂದ ಹಾವೊಂದು ಎದ್ದು ಬಂದಂತೆ ಭಾಸವಾಯಿತು. ಅದು ಬುಸುಗುಟ್ಟುತ್ತಾ ಬಂದು ನನ್ನ ಕಾಲಿಗೆ ಸುತ್ತು ಹಾಕಿಕೊಂಡಿತು. ಅದು ಎಲ್ಲಿ ಕಡಿದು ಬಿಡುವುದೋ ಎಂದು ಹೆದರಿದೆ. ಯಾರಾದರೂ ಬಂದು ಸುತ್ತಿಹಾಕಿಕೊಂಡಿರುವ ಹಾವಿನಿಂದ ಬಿಡಿಸಲಿ ಎಂಬ ಅಪೇಕ್ಷೆ. ಅಷ್ಟರಲ್ಲಿ ಇನ್ನೊಂದು ಕಡೆಯಿಂದ ಇಲಿಯೊಂದು ಬಂದು ನನ್ನ ತಲೆ ಏರಿ ಕುಳಿತುಕೊಂಡಿತು. ಮೇಲೆ ಇಲಿ ಕಡಿಯುತ್ತಿದೆ. ಕಾಲು ಕೆಳಗೆ ಹಾವು ಸುತ್ತಿದೆ. ಅಯ್ಯೋ ಎಂದು ಕೂಗಿಕೊಳ್ಳುತ್ತಾ ಎರಡು ಕಾಲನ್ನು ಜಾಡಿಸಿ ಒದ್ದೆ. ಎರಡು ಕೈಗಳಿಂದ ತಲೆ ಕೊಡವಿಕೊಳ್ಳುತ್ತಾ ಮೇಲೆದ್ದೆ. ಕೂಗಿಕೊಳ್ಳುತ್ತಲೇ ಇದ್ದೆ. ಮನೆಯವರೆಲ್ಲಾ ಹೆದರಿಕೆಯಿಂದ ಬಂದು ನನ್ನ ಸುತ್ತ ನಿಂತಿದ್ದರು. ಅವರೆಲ್ಲಾ ಏನು ಏನಾಯಿತು ಎಂದು ಕೇಳುತ್ತಿದ್ದಾಗಲೇ ಹಾವು, ಇಲಿ ಎಂದು ಕೂಗಿಕೊಂಡು ಹೇಳಿದೆ. ಕಣ್ಣು ತೆರೆದು ಪೂರ್ತಿ ಎಚ್ಚರಿಕೆ ಬಂದಾಗ ಹಾವೂ ಇಲ್ಲ ಇಲಿಯೂ ಇಲ್ಲ. ಆದರೆ ಆರು ತಿಂಗಳಿನಿಂದ ನನ್ನ ಸ್ವಾಧೀನದಲ್ಲಿ ಇಲ್ಲದಿದ್ದ ದೇಹದ ಬಲಭಾಗಕ್ಕೆ ವಿಶೇಷ ಶಕ್ತಿ ಬಂದಿತ್ತು. ಕೈ ಕಾಲುಗಳು ಚೆನ್ನಾಗಿ ಆಡುತ್ತಿದ್ದವು. ನಾನು ಗುಣವಾಗಿ ನಿಂತಿದ್ದನ್ನು ಕಂಡು ಮನೆಯವರೆಲ್ಲಾ ಆಶ್ಚರ್ಯ ದಿಂದ ನೋಡುತ್ತಿದ್ದರು. ಸ್ವಲ್ಪ ಹೊತ್ತಾದ ಮೇಲೆ ನನಗೆ ಗುಣವಾಗಿರುವ ವಿಷಯ ಹೊಳೆದು ನಾನೂ ಆಶ್ಚರ್ಯಪಟ್ಟೆ. ಜೀವನಾಂತ್ಯಕ್ಕೆ ಬಂದ ರೋಗವೆಂದು ನಂಬಿದ್ದು ಇಷ್ಟು ಸುಲಭವಾಗಿ ಗುಣವಾಗಿದ್ದು ನೆನೆದು ಆ ಬ್ರಾಹ್ಮಣ ಹುಡುಗನ ದಿವ್ಯಶಕ್ತಿಗೆ ಮಣಿಯಬೇಕೆನಿಸಿತು. ಅದೇನು ಆಶ್ಚರ್ಯವೋ, ಅದೇನು ಬಲ ಬಂದಿತೋ ಕೂಡಲೇ ವೆಂಕಟೇಶನ ಗುಡಿಗೆ ಓಡೋಡಿ ಹೋಗಿ ಆ ಹುಡುಗನ ಕಾಲಿಗೆ ಬಿದ್ದೆ. ಆತ ಮಾತ್ರ "ಇದರಲ್ಲಿ ನನ್ನದೇನೂ ಇಲ್ಲ ತಾಯಿ. ಎಲ್ಲಾ ಶ್ರೀ ವೆಂಕಟೇಶನ ದಯ. ಆತನ ಕರುಣೆ ನಿಮ್ಮ ಮೇಲೆ ಬಿದ್ದಿದೆ. ಗುಣ ಮಾಡಬೇಕೆಂದು ಆತ ಸಂಕಲ್ಪಿಸಿದ್ದ. ಅದಕ್ಕೆ ನಿಮಿತ್ತನಾಗಿ ನನ್ನನ್ನು ಬಳಸಿಕೊಂಡ ಅಷ್ಟೇ. ಇದರಲ್ಲಿ ನನ್ನ ಶಕ್ತಿಯೇನೂ ಇಲ್ಲ ತಾಯಿ" ಎಂದು ವಿನಯಪೂರ್ಣನಾಗಿ ಹೇಳಿದ. ಆಮೇಲೆ ನಮ್ಮ ಯಜಮಾನರ ಸೂಚನೆಯಂತೆ ನವಣೆಯನ್ನು ನಾನೇ ಕುಟ್ಟಿ ದೇವರಿಗೆ ನೈವೇದ್ಯ ಮಾಡಲು ಅವರಿಗೆ ಕೊಟ್ಟೆ ಎಂದು ಆಕೆ ಹೇಳುತ್ತಿದ್ದಂತೆ ಜನರು ಆಶ್ಚರ್ಯದಿಂದ ಬಾಯಿಬಿಟ್ಟು ಕೇಳುತ್ತಿದ್ದರು.

ಗುಂಪಿನಲ್ಲಿದ್ದ ಒಬ್ಬ ಯುವಕ ನಡೆದ ಘಟನೆಗಳನ್ನೆಲ್ಲಾ ಕೇಳಿ ತರ್ಕಪೂರ್ಣವಾಗಿ ತನ್ನ ವಾದವನ್ನು ಹೀಗಿಟ್ಟ.

"ಪಾರ್ಶ್ವವಾಯು ಎನ್ನುವುದು ನರಗಳಿಗೆ ಸಂಬಂಧಪಟ್ಟ ಒಂದು ಖಾಯಿಲೆ. ದೇಹದ ಯಾವುದೋ ಒಂದು ಭಾಗದ ನರದಲ್ಲಿ ರಕ್ತ ಹರಿಯುವುದು ನಿಂತು ರಕ್ತ ಹೆಪ್ಪುಗಟ್ಟಿ ಬಿಡುತ್ತದೆ. ಹೀಗಾಗಿ ಶರೀರದ ಆ ಭಾಗವೆಲ್ಲಾ ನಿಷ್ಕ್ರಿಯೆಗೊಳ್ಳುತ್ತದೆ. ಮೊನ್ನೆ ಅವರಿಗೆ ಬಿದ್ದ ಕನಸಿನಲ್ಲಿ ಹಾವು ಬಂದಂತಾಗಿ ಭೀತಿಗೊಂಡಿದ್ದಾರೆ. ಇಲಿ ಕಡಿದಂತೆ ಭ್ರಮಿಸಿ ಕೂಗಿಕೊಂಡಿದ್ದಾರೆ. ಹೆದರಿಕೆಯ ಅವಾಂತರದಲ್ಲಿ ಕಾಲನ್ನು ಜಾಡಿಸಿ ಒದ್ದಿದ್ದಾರೆ. ರಕ್ತ ಹೆಪ್ಪುಗಟ್ಟಿದ್ದ ಭಾಗ ಜೋರಾಗಿ ಜಾಡಿಸಿದ ವೇಗಕ್ಕೆ ತಡೆ ಕಡಿದು ಬಿಟ್ಟಿದೆ. ಅನಂತರ ರಕ್ತ ಸಂಚಾರ ಸರಾಗವಾಗಿ ಸಾಗಿರಬೇಕು. ಆದ್ದರಿಂದ ರೋಗ ಗುಣವಾಗಿದೆ. "

ಹೌದು ; ಆ ಯುವಕನ ತರ್ಕದಲ್ಲಿಯೂ ಸರಿಯಾದ ಸಿದ್ಧಾಂತವಿದೆ. ವೈದ್ಯಕೀಯ ವಿವರಣೆ ಇದೆ.

ಭೀಮಣ್ಣನ ಹೆಂಡತಿಯ ನಂಬುಗೆಗೂ ಒಂದು ಆಧಾರವಿದೆ. ಅನುಭವದ ಹಿನ್ನೆಲೆಯಿದೆ.

ಹಾವು ಇಲಿಗಳು ಕನಸಿನಲ್ಲಿ ಬಂದು ತೊಂದರೆ ಕೊಡುವುದಕ್ಕೆ ಆ ದಿನವನ್ನೇ ಏಕೆ ಆರಿಸಿಕೊಂಡವು ? ಅದಕ್ಕೂ ಮೊದಲು ಅಂಥ ಸ್ವಪ್ನ ಏಕೆ ಬೀಳಲಿಲ್ಲ ?

ಯುವಕನ ತರ್ಕಕ್ಕೆ ವಿರುದ್ಧವಾಗಿ ಮಧ್ಯ ವಯಸ್ಸಿನವನೊಬ್ಬ ತನ್ನ ವಾದ ವನ್ನು ಮುಂದಿಟ್ಟ. ಕಾಣದ ಯಾವುದೋ ಒಂದು ಶಕ್ತಿ ಇಲ್ಲಿ ಕಾರ್ಯ ನಿರ್ವಹಿಸಿದೆ ಎಂಬ ವಾದ ಆತನದು. ಅಂಥ ಶಕ್ತಿಯೇನೂ ಇಲ್ಲ ಎಂಬ ವಿವರಣೆ ಯುವಕನದು.

ವಿಜ್ಞಾನಕ್ಕೂ ಆಧ್ಯಾತ್ಮದ ವಿವರಣೆಗೂ ಅಷ್ಟೇನೂ ಭೇದವಿಲ್ಲ. ಒಂದನ್ನು ಬಿಟ್ಟು ಒಂದಿಲ್ಲ. ಆದರೆ ಭೌತಿಕ ವಿಜ್ಞಾನ ತನ್ನ ಕಣ್ಣಿಗೆ ಕಾಣುವದಷ್ಟನ್ನೆ ಒಪ್ಪುತ್ತದೆ. ಕಣ್ಣಿಗೆ ಕಾಣದ ವಿಷಯಗಳು ಈ ಲೋಕದಲ್ಲಿ ಎಷ್ಟಿಲ್ಲ ? ವಿಜ್ಞಾನಕ್ಕೂ ಒಂದು ಪರಿಮಿತಿಯಿದೆ. ಅದರ ಶಕ್ತಿಯಿದ್ದಷ್ಟು ಅದು ಸಂಚರಿಸಿ ಕಡೆಗೆ ಶಕ್ತಿಹೀನವಾಗಿ ಕೂಡುತ್ತದೆ.

ಮುಂದೆ ಕೆಲವು ಕಾಲಾನಂತರ ವಿಜ್ಞಾನ ಪುನಃ ಶಕ್ತಿ ಪಡೆದು ಮುಂದೆ ಸಾಗುತ್ತದೆ. ತಾನು ಕಾಣದ ಮುಂದಿನ ಭಾಗವನ್ನು ಸುಳ್ಳು ಎಂದು ವಾದಿಸಿದ ವಿಜ್ಞಾನ ಮುಂದುವರಿದು ಆ ವಿಷಯ ಕಂಡಾಗ ಒಪ್ಪಿಕೊಳ್ಳುತ್ತದೆ. ಹಾಗೆ

ಒಪ್ಪಿಕೊಂಡರೂ ಅದು ಸೋಡಿಸ್ಸು ಇನ್ನೂ ಅಲ್ಪವೆ ! ನೋಡಬೇಕಾದ್ದು ಬಹಳಷ್ಟಿದೆ. ಆದರೆ ಭಾರತೀಯ ಆಧ್ಯಾತ್ಮ ಚಿಂತನೆ ಬಹಳ ಮುಂದೆ ಸಾಗಿಬಿಟ್ಟಿದೆ. ಇವೆರಡೂ ಒಂದೇ ಮಾರ್ಗದಲ್ಲಿ ಕ್ರಮಿಸಿದರೂ ಅಂತರ ಅಪಾರವಾಗಿರುವುದರಿಂದ ಅವೆರಡೂ ಭಿನ್ನ ಮಾರ್ಗಗಳೇನೋ ಎಂಬ ಭಾವನೆ ಮೂಡುತ್ತದೆ. ಉದಾಹರಣೆಗೆ ಅರ್ಜುನನ ಒಂದೊಂದು ಬಾಣಕ್ಕೆ ನೂರಾರು ಜನರು ಅಸುನೀಗುತ್ತಿದ್ದರು ಎಂದು ಓದಿದಾಗ ನಂಬಲು ಮನಸ್ಸು ಬೇಗ ಒಪ್ಪುವುದಿಲ್ಲ. ಬಿಟ್ಟ ಒಂದು ಬಾಣ ಒಬ್ಬನನ್ನು ಮಾತ್ರ ಇರಿಯಲು ಸಾಧ್ಯ. ನೂರಾರು ಜನರನ್ನು ಹೇಗೆ ಕೊಂದೀತು ಎಂದು ತರ್ಕಿಸುತ್ತೇವೆ. ಈಗೀಗ ಬಂದ ತುಪಾಕಿಗಳು, ಉಪಯೋಗಿಸುವ ಮದ್ದು ಗುಂಡುಗಳು ಪ್ರಯೋಗಿಸುವವ ಒಬ್ಬನೇ ಆದರೂ ಸಾಯುವವರು ಎಷ್ಟು ಜನ ? ಆಗ ತರ್ಕಕ್ಕೆ ಸಿಕ್ಕದಿದ್ದ ಅರ್ಜುನನ ಬಾಣ ಪ್ರಯೋಗದ ಸಾಧ್ಯತೆ ಈಗಿನ ತುಪಾಕಿಗಳು ಮಾಡುತ್ತಿಲ್ಲವೇ ? ಏನೋ ಯಾರಿಗೆ ಗೊತ್ತು ? ಈಗ ನಾವು ಊರಿನ ಭದ್ರತೆಗೆಂದು ಕಟ್ಟುತ್ತಿರುವ ಕೋಟೆ ಕೊತ್ತಲಗಳು ಮುಂದೆ ಯಾವ ಉಪಯೋಗಕ್ಕೂ ಬಾರದೆ ಹೋಗಬಹುದು ! ವಿಜ್ಞಾನ ಮುಂದುವರೆದು ಪ್ರಯೋಗಿಸುವ ಒಂದೇ ಗುಂಡಿನಿಂದ ಇಡೀ ಕೋಟೆಯನ್ನು ಕ್ಷಣಾರ್ಧದಲ್ಲಿ ಇಲ್ಲವಾಗಿಸುವ ಶಕ್ತಿ ಬರಬಹುದು. ಮುಂದು ವರೆಯುತ್ತಿರುವ ಬಾಲ್ಯ ವಯಸ್ಸು ವಿಜ್ಞಾನದ್ದು. ಬಹಳ ದೂರ ಕ್ರಮಿಸಿರುವ ಚಾರಿತ್ರ್ಯ ನಮ್ಮ ದೇಶದ ಆಧ್ಯಾತ್ಮದ್ದು. ವಿಜ್ಞಾನದ ಕನ್ನಡಕದಲ್ಲಿ ಕಾಣುತ್ತಿಲ್ಲ ಎನ್ನುವ ಒಂದು ಕಾರಣಕ್ಕಾಗಿ ಇರುವ ಶಕ್ತಿಯನ್ನು ಇಲ್ಲವೆಂದು ಹೇಳಲಿಕ್ಕಾಗುವುದಿಲ್ಲ. ಆ ಮುದಕಿಯ ಅನುಭವವನ್ನು ಒಪ್ಪಿಕೊಳ್ಳೋಣ."

ಎಂದು ಒಬ್ಬ ಮುದುಕ ಹೇಳುತ್ತಿದ್ದ. ಅವನಿಗೆ ತೋಚಿದ್ದು ಅವನು ಹೇಳುತ್ತಿದ್ದ. ಯಾರ್‍ಯಾರಿಗೆ ಅನಿಸಿದ್ದು ಅವರವರು ಹೇಳುತ್ತಿದ್ದರು. ಭೀಮಣ್ಣ ಮಾತ್ರ ಕುಟುಂಬ ಸಹಿತನಾಗಿ ಶ್ರೀ ವೆಂಕಟೇಶನ ಗುಡಿಗೆ ಹೋಗಿ ಭಾಗಣ್ಣನಿಗೆ ಕೈ ಮುಗಿದು ಕುಳಿತು ಪ್ರಾರ್ಥಿಸಿದ.

"ನೀವು ವಯಸ್ಸಿನಲ್ಲಿ ಚಿಕ್ಕವರಾದರೂ ಬುದ್ಧಿ ಶಕ್ತಿಯಲ್ಲಿ ಬಹಳ ದೊಡ್ಡವರು. ನಿಮ್ಮೊಂದಿಗೆ ವಾದಿಸುವಷ್ಟು ಬುದ್ಧಿ ಶಕ್ತಿ ನನ್ನದಲ್ಲ. ಆದರೂ ಮೊನ್ನೆ ನೀವು ಹೇಳಿದಂತೆ ಈ ದಿನ ನಡೆದುಕೊಳ್ಳಲೇಬೇಕು."

ಭಾಗಣ್ಣನಿಗೆ ಆಶ್ಚರ್ಯವಾಯಿತು. ಭೀಮಣ್ಣ ತನ್ನ ವಿಷಯದಲ್ಲಿ ಯಾವುದೋ ಒಂದು ನಿರ್ಧಾರಕ್ಕೆ ಬಂದು ಅದನ್ನು ಒತ್ತಾಯಿಸಲು ಈ ಪೀಠಿಕೆ ಹಾಕಿದ್ದಾನೆಂದು ಗ್ರಹಿಸಿದ.

"ಏನು ಭೀಮಣ್ಣ ನೀವು ಮಾತನಾಡುತ್ತಿರುವ ವಿಷಯವಾದರೂ ಏನು ? ನಾನು ಯಾವ ರೀತಿ ನಡೆದುಕೊಳ್ಳಬೇಕೆಂದು ಕೇಳುತ್ತಿದ್ದೀರಿ ?"

"ದುಡಿಯದೇ ಏನನ್ನೂ ಪಡೆಯಬಾರದೆಂದು ಮೊನ್ನೆ ನೀವು ಹೇಳಿದ್ದೀರಿ. ನೀವು ದುಡಿದಿದ್ದೀರಿ. ಈಗ ಪಡೆಯುವ ಹೊಣೆಯೂ ನಿಮ್ಮದು" ಭೀಮಣ್ಣ ಸುತ್ತು ಹಾಕಿ ಮಾತು ಪ್ರಾರಂಭಿಸಿದ.

"ದುಡಿಯದೇ ಏನನ್ನು ಪಡೆಯಬಾರದು ಎಂದು ನೀವು ಹೇಳಿದ ಮಾತು ಬ್ರಾಹ್ಮಣರಿಗೆ ಮಾತ್ರವಷ್ಟೇ ಅಲ್ಲವಲ್ಲಾ" ಭೀಮಣ್ಣ ಪ್ರಶ್ನೆ ಹಾಕಿದ.

"ಹೌದು, ಅದು ಎಲ್ಲರಿಗೂ ಅನ್ವಯಿಸುತ್ತದೆ." ಒಪ್ಪಿಕೊಂಡ ಭಾಗಣ್ಣ.

"ಹಾಗಾದರೆ ನನ್ನ ಹೆಂಡತಿಗೆ ದೃಢವಾದ ಆರೋಗ್ಯವನ್ನು ನೀವು ಕೊಟ್ಟರಿ. ಅದನ್ನು ನಾನು ಹೇಗೆ ಉಚಿತವಾಗಿ ಪಡೆಯಲಿ ?" ಭೀಮಣ್ಣನ ಮಾತಿನ ಸರಣಿ ಬೇಗ ಅರ್ಥವಾಗಲಿಲ್ಲ ಭಾಗಣ್ಣನಿಗೆ.

ಕಡೆಗೆ ಭೀಮಣ್ಣನೆ, ಬಿಡಿಸಿ ಹೇಳಿದ.

"ಸ್ವಾಮೀ ಬೆಳೆಯನ್ನು ತುಂಬಿಡಲು ನಾನು ಇನ್ನೊಂದು ಮನೆಯನ್ನು ಕಟ್ಟಿಸಿದ್ದೇನೆ. ಅದರಲ್ಲಿ ನಾವ್ಯಾರು ವಾಸಿಸುವುದಿಲ್ಲ. ಬೆಳೆಯನ್ನು ಮಾರಿದ ಮೇಲೆ ಅದು ಖಾಲಿಯಾಗಿಯೇ ಇರುತ್ತದೆ. ಈಗ ಆ ಮನೆ ಖಾಲಿ ಇದೆ. ತಾವು ಅದರಲ್ಲಿ ವಾಸಿಸಬೇಕು. ನಿತ್ಯ ಈ ಸ್ವಾಮಿಗೆ ಪೂಜೆ ಮಾಡಬೇಕು. ಕುಟುಂಬ ನಿರ್ವಹಣೆಗೆ ಬೇಕಾದ ದವಸ ಧಾನ್ಯಗಳನ್ನು ನನ್ನಿಂದಲೇ ಪಡೆಯಬೇಕು."

ಭೀಮಣ್ಣನ ಪ್ರಾರ್ಥನೆಯನ್ನು ಪೂರ್ತಿ ಮನ್ನಿಸಲಿಲ್ಲ ಭಾಗಣ್ಣ. ಜೊತೆಗೆ ತಾಯಿ ವೆಂಕಮ್ಮನ ಒತ್ತಾಯ ಗಮನಿಸಿ ಪೂರ್ತಿ ನಿರಾಕರಿಸಲೂ ಇಲ್ಲ.

"ಸದ್ಯಕ್ಕೆ ನಿಮ್ಮ ಖಾಲಿ ಇರುವ ಮನೆಯಲ್ಲಿ ನಾವು ವಾಸಿಸುತ್ತೇವೆ. ದೇವಸ್ಥಾನ ದಲ್ಲಿ ನಿತ್ಯ ಸೇವೆಯನ್ನೂ ಮಾಡುತ್ತೇವೆ. ಆದರೆ ಊಟ ತಿಂಡಿಯ ವಿಷಯದಲ್ಲಿ ಮಾತ್ರ ಒತ್ತಾಯಿಸಬೇಡಿ. ಈ ಮಾಸಕ್ಕೆ ಬೇಕಾಗುವಷ್ಟು ಧಾನ್ಯವನ್ನು ಮಾತ್ರ ನೀವು ತಂದು ಕೊಡಬಹುದು. ಯೋಗ್ಯತೆಗೆ ಮೀರಿ ಐಶ್ವರ್ಯ ಬಯಸುವುದು ದುಡಿಮೆಗೆ ಮೀರಿ ಕೂಲಿ ಕೇಳುವುದು ವ್ಯವಹಾರ ಸಮ್ಮತವಲ್ಲವಪ್ಪಾ."

ಭಾಗಣ್ಣನ ಮಾತಿಗೆ ಅರೆ ಮನಸ್ಸಿನಲ್ಲಿಯೇ ಒಪ್ಪಿಕೊಂಡ ಭೀಮಣ್ಣ. ಅಷ್ಟಾದರೂ ಈ ತಪಸ್ವಿ ಒಪ್ಪಿಕೊಂಡು ಅನುಗ್ರಹಿಸಿದನಲ್ಲಾ ಎಂಬ ತೃಪ್ತಿಯೂ ಆತನಿಗೆ ಆಗದೆ ಇರಲಿಲ್ಲ.

'ಒಂದು ಮಾಸದ ಕಾಲ ಚಿಂತೆ ಇಲ್ಲದೆ ಇರುವಷ್ಟು ಅವಕಾಶ ಸಿಕ್ಕಿತಲ್ಲಾ' ಎಂಬ ತೃಪ್ತಿ ವೆಂಕಮ್ಮನಿಗೆ. ಇದಾವುದರ ಯೋಚನೆಯಿಲ್ಲ ಭಾಗಣ್ಣನಿಗೆ. ತಮ್ಮಂದಿರನ್ನು ಮಠದ ಶಾಲೆಗೆ ಸೇರಿಸಿದ.

ಪಕ್ಕದ ಐಜಿ ಗ್ರಾಮದಲ್ಲಿ ವಿದ್ವಾಂಸರ ಮನೆಗಳಿರುವುದನ್ನು ಕೇಳಿ ಅಲ್ಲಿ ಸಂಸ್ಕೃತ ಅಭ್ಯಸಿಸಲು ನಿರ್ಧರಿಸಿದ.

ಪ್ರತಿದಿನ ಐಜಿ ಗ್ರಾಮಕ್ಕೆ ಹೋಗುವುದು ಅಲ್ಲಿಯ ಪಂಡಿತರೊಬ್ಬರು ಹೇಳಿಕೊಟ್ಟ ಪಾಠಗಳನ್ನು ಅಭ್ಯಾಸಿಸುವುದು, ಪುನಃ ಊರಿಗೆ ಬಂದು ವೆಂಕಟೇಶನ ಗುಡಿಯಲ್ಲಿ ಪೂಜೆ ಮಾಡಿ ಭಜನೆ ಮಾಡುತ್ತಾ ಕೂಡುವುದು ನಡೆಯುತ್ತಾ ಬಂದಿತು.

ಭಾಗಣ್ಣನ ಭಜನೆಯಲ್ಲಿ ಭಾಗವಹಿಸುವುದೆಂದರೆ ಜನರಿಗೆ ಎಲ್ಲಿಲ್ಲದ ಸಂತೋಷ. ಅದೆಷ್ಟು ಹಾಡುಗಳೋ ಭಾಗಣ್ಣನ ಬಾಯಿಯಲ್ಲಿ.

ಆಗ ತಾನೆ ಕಲಿತು ಬಂದ ದ್ವಾದಶ ಸ್ತೋತ್ರವನ್ನು ಹಾಡುತ್ತಾ ಕುಣಿಯುತ್ತಿದ್ದರೆ ಪರಮಾತ್ಮ ಆತನ ತಲೆಯ ಮೇಲೆ ನರ್ತಿಸುತ್ತಿರುವಂತೆ ಭಾಸವಾಗುತ್ತಿತ್ತು.

ಜನರು ಭಜನೆಗೆ ಸುಮ್ಮನೆ ಬರಿಗೈಯಲ್ಲಿ ಬರುತ್ತಿರಲಿಲ್ಲ. ದಿನದ ವೆಚ್ಚಕ್ಕಲ್ಲದೆ ಹೆಚ್ಚು ಬಂದಿದ್ದನ್ನು ಭಾಗಣ್ಣ ಪಡೆಯುತ್ತಿರಲಿಲ್ಲ.

ಜೊತೆಜೊತೆಗೆ ಭಾಗಣ್ಣನ ವಿದ್ಯಾಭ್ಯಾಸವೂ ಸಾಗುತ್ತಿತ್ತು.

ಒಮ್ಮೆ ಕೇಳಿದ ಮಾತ್ರಕ್ಕೆ ಪೂರ್ತಿ ಗ್ರಹಿಸಿಟ್ಟುಕೊಳ್ಳುವ ಭಾಗಣ್ಣನ ಬುದ್ಧಿಶಕ್ತಿಗೆ ಬೆರಗಾಗಿ ಹೋದ ಐಜಿಯ ಪಂಡಿತರು ಒಮ್ಮೆ ಹೇಳಿದರು.

"ಶ್ರೀ ಮಧ್ವಾಚಾರ್ಯರಿಗೆ, ಶ್ರೀ ಅಚ್ಯುತ ಪ್ರೇಕ್ಷರು ಪಾಠ ಹೇಳಿಕೊಟ್ಟರು. ಆದರೆ ಅದುವರೆಗೂ ವ್ಯಾಪ್ತಿಯಲ್ಲಿದ್ದ ಪಾಠಗಳ ಲೋಪಗಳನ್ನು, ತಪ್ಪು ವ್ಯಾಖ್ಯಾನಗಳನ್ನು ಶ್ರೀಮಧ್ವಾಚಾರ್ಯರು ತೋರುತ್ತಿದ್ದಂತೆ ಶ್ರೀ ಅಚ್ಯುತ ಪ್ರೇಕ್ಷರು ಅವಾಕ್ಕಾಗಿ ಬಿಡುತ್ತಿದ್ದರಂತೆ. ನನಗೂ ಅದೇ ಅನುಭವವಾಗುತ್ತಿದೆಯಲ್ಲೋ ಭಾಗಣ್ಣ. ಒಮ್ಮೆ ಹೇಳಿದ ಪಾಠವನ್ನು ಕೂಡಲೇ ಒಪ್ಪಿಸಿ ಬಿಡುತ್ತಿ. ಜೊತೆಗೆ ಸರ್ವಮೂಲ ಗ್ರಂಥಗಳ ಪ್ರತಿ ಶ್ಲೋಕಕ್ಕೂ ನನಗೆ ಹೊಳೆಯದಿರುವ ವಿಷಯವನ್ನು ನೀನೇ ಹೇಳುತ್ತಿ. ನೀನು ಲೋಕದ ರೀತ್ಯಾ ಓದಿಕೊಳ್ಳಬೇಕು ಅದಕ್ಕಾಗಿ ನನ್ನ ಬಳಿ ಬರುತ್ತಿದ್ದಿ. ಶ್ರೀ ಮಧ್ವಾಚಾರ್ಯರು ತಮ್ಮ ಗ್ರಂಥಗಳ ಸಾರವನ್ನು ನೀನು ತೆಗೆದು

ಕೊಳ್ಳುವ ಉಸಿರಿನ ಮೂಲಕವೇ ನಿನಗೆ ಬೋಧಿಸುತ್ತಿದ್ದಾರೇನೋ ಎಂದು ಭಾಸವಾಗುತ್ತಿದೆ " ಎಂದು ಆಶ್ಚರ್ಯ ವ್ಯಕ್ತಪಡಿಸಿದರು.

ಸರ್ವಮೂಲ ಗ್ರಂಥಗಳ ಸಾರವನ್ನು ವಿವರಿಸಿರುವ ಶ್ರೀ ನರಹರಿ ತೀರ್ಥರು, ಶ್ರೀ ಶ್ರೀಪಾದ ರಾಜರು ಶ್ರೀ ವ್ಯಾಸರಾಯರು. ಶ್ರೀ ಗುರು ವಾದಿರಾಜರು. ಶ್ರೀ ಪುರಂದರ ಕನಕದಾಸಾರ್ಯರ ಹಾಡುಗಳನ್ನು ಅವರಿವರು ಹೇಳುತ್ತಿದ್ದಾಗ ಕೇಳಿ ಬರೆದಿಟ್ಟುಕೊಂಡ.

ಹೆಂಗಸರ ಗುಂಪು ಎಲ್ಲಿಯೇ ಇರಲಿ, ಅಲ್ಲಿ ಭಾಗಣ್ಣ ಹಾಜರ್. ಅವರೆಲ್ಲರಿಗೂ ನಮಸ್ಕರಿಸಿ ಭಾಗಣ್ಣ ಹೇಳುತ್ತಿದ್ದ.

"ನೀವೆಲ್ಲರೂ ನನಗೆ ತಾಯಿಯ ಹಾಗೆ ಕಾಣುತ್ತಿದ್ದೀರಿ. ಶ್ರೀ ಮಧ್ವಾಚಾರ್ಯರ ಸಿದ್ಧಾಂತ ಸಾರವನ್ನು ವಿವರಿಸುವ ಹರಿದಾಸ ಸಾಹಿತ್ಯವನ್ನು ನೀವು ನಿತ್ಯ ಹೇಳಿ ಕೊಳ್ಳುತ್ತಾ ಅವನ್ನು ಉಳಿಸಿಕೊಂಡು ಬಂದಿದ್ದೀರಿ. ಅದನ್ನು ನನಗೂ ಉಣಲಿಕ್ಕುತ್ತಿ ದ್ದೀರಿ. ನನ್ನ ಹೆತ್ತ ತಾಯಿ ನನ್ನ ಹೊಟ್ಟೆಗೆ ಆಹಾರ ನೀಡುತ್ತಿದ್ದಾಳೆ. ನೀವು ನೆತ್ತಿಗೆ ಆಹಾರ ನೀಡುತ್ತಿದ್ದೀರಿ" ಭಾಗಣ್ಣನ ಮಾತು ಕೇಳಿ ಮಹಿಳೆಯರೆಲ್ಲಾ ಆನಂದ ಗೊಳ್ಳುತ್ತಿದ್ದರು. ತಮತಮಗೆ ಬರುವ ಹಾಡುಗಳನ್ನು ಅವನಿಗೆ ಹೇಳಿ ಕೊಡುತ್ತಿದ್ದರು.

ಮಹಿಳೆಯರ ಗುಂಪಿಗೆ ಭಾಗಣ್ಣನೆಂದರೆ ಬಹಳ ಅಚ್ಚುಮೆಚ್ಚು. ತಮ್ಮ ಹಾಡುಗಳನ್ನು ಹುಡುಗ ಭಕ್ತಿ ಶ್ರದ್ಧೆಯಿಂದ ಕೇಳುತ್ತಾನೆ. ಅಷ್ಟೇ ಬೇಗ ಸುಶ್ರಾವ್ಯವಾಗಿ ತಾನೂ ಇತರರ ಮುಂದೆ ಹಾಡಿ ಈ ಪದಗಳನ್ನು ಇಂಥವರು ಹೇಳಿಕೊಟ್ಟರುಎಂದು ಉಪಕಾರ ಸ್ಮರಿಸುತ್ತಾನೆ. ಅದೆಲ್ಲಕ್ಕಿಂತ ಹೆಚ್ಚಾಗಿ ಹುಡುಗನು ಹಾಕುತ್ತಿದ್ದ ರಂಗೋಲಿಯ ಸೊಬಗಿಗೆ ಮಾರು ಹೋಗದ ಮಹಿಳೆಯರೇ ಆ ಸುತ್ತಮುತ್ತಲ ಗ್ರಾಮಗಳಲ್ಲಿ ಇಲ್ಲವೆಂದು ಹೇಳಬೇಕು. ವಿವಿಧ ಬಣ್ಣಗಳ ಎಲೆಗಳು ಹಣ್ಣು ಕಾಯಿಗಳನ್ನು ತಂದು ಅವನ್ನು ಒಣಗಿಸಿ ಕುಟ್ಟಿ ಪುಡಿಮಾಡಿ ಬಣ್ಣ ಬಣ್ಣಗಳಲ್ಲಿ ಅವನ್ನು ಸಂಯೋಜಿಸುತ್ತಿದ್ದ ರೀತಿ ಕಂಡು ಹೆಂಗಸರು ಮೂಗಿನ ಮೇಲೆ ಬೆರಳಿಟ್ಟುಕೊಳ್ಳುತ್ತಿದ್ದರು. ಹಬ್ಬ ಹುಣ್ಣಿಮೆಗಳೆಂದರೆ ಸುತ್ತಮುತ್ತಲ ಗ್ರಾಮಗಳ ಮಹಿಳೆಯರಿಗೆ ಉತ್ತನೂರಿನ ಶ್ರೀವೆಂಕಟೇಶನ ದೇವಾಲಯ ಒಂದು ಕಲಾಕೇಂದ್ರ ವಾಗಿರುತ್ತಿತ್ತು. ಸುಣ್ಣದ ತಿಳಿನೀರಿನಿಂದ ದೇವಸ್ಥಾನದ ಅಂಗಳದಲ್ಲಿ ಬಿಡಿಸುತ್ತಿದ್ದ ರಂಗೋಲಿಯ ಚಿತ್ರಗಳು ಹೆಂಗಸರಿಗೆ ಕೌತುಕಭರಿತವಾಗಿರುತ್ತಿದ್ದವು. ಪೌರಾಣಿಕ ದೃಶ್ಯಗಳು, ಭಗವಂತನ ಅವತಾರಗಳು ಆ ರಂಗೋಲಿಗಳಲ್ಲಿ ಒಡಮೂಡಿರುತ್ತಿದ್ದವು.

ಅಭಿಮನ್ಯು ಸಂಹಾರವಾದ ದ್ರೋಣಾಚಾರ್ಯರಿಂದ ರಚಿತಗೊಂಡ ಚಕ್ರಬಿಂಬ ಕೋಟೆ ಹೇಗಿದ್ದಿರಬಹುದು ? ಒಳಗೆ ಹೋಗುವುದೇ ಕಷ್ಟ. ಹೊರಗೆ ಬರುವಾಗಲಂತೂ ಎಂಥವರೂ ತಬ್ಬಿಬ್ಬುಗೊಳ್ಳುವ ಆ ವಾಸ್ತು ರಚನೆ ಎಷ್ಟು ಚಮತ್ಕಾರ ! ಮಹಾಭಾರತವನ್ನು ಎಲ್ಲರೂ ಕೇಳುತ್ತಾರೆ. ಆದರೆ ಸೈನ್ಯ ನಿರ್ಮಿತ ಚಿತ್ರಬಿಂಬ ಕೋಟೆ ಹೇಗಿದ್ದೀರಬೇಕೆಂಬ ಕಲ್ಪನೆ ಎಷ್ಟು ಮಂದಿಗೆ ಬರಲಿಕ್ಕೆ ಸಾಧ್ಯ ?

ಭಾಗಣ್ಣ ಅದನ್ನು ರಂಗೋಲಿಯಲ್ಲಿ ಚಿತ್ರಿಸಿ ತೋರಿಸಿದ್ದ. ದ್ವಿರೇಷೆಯೊಂದಿಗೆ ಹೆಣೆಯಲಾಗುತ್ತಿದ್ದ ಆ ರಂಗೋಲಿಯಲ್ಲಿ ಮಧ್ಯ ಬೆರಳಿಟ್ಟು ಅದನ್ನು ಮೇಲಕ್ಕೆತ್ತದೆ ಕೇಂದ್ರ ಬಿಂದುವಿಗೆ ಬರಲು ಸೂಚನೆ ಕೊಡುತ್ತಿದ್ದ. ಪುನಃ ವಾಪಸ್ಸು ಬರಲು ಪ್ರಯತ್ನಿಸಿ ಎಂದು ಹೇಳಿದಾಗ ಎಲ್ಲಾ ಹೆಂಗಸರೂ ಆ ಕ್ರಮದಲ್ಲಿ ತಪ್ಪುತ್ತಿದ್ದರು. ಅಭಿಮನ್ಯುವಿನಂಥ ಹುಟ್ಟಾಯೋಧನಿಗೂ ಗುಟ್ಟು ಗೊತ್ತಾಗದೆ ಹುಟ್ಟಡಗುವಂತೆ ಮಾಡಿದ ಆ ಚಕ್ರಬಿಂಬ ರಚನೆಯ ವ್ಯೂಹ ಕಂಡು, ಹೆಂಗಳೆಯರು ತಾಸುತಾಸು ಗಟ್ಟಲೆ ರಂಗೋಲಿಯಲ್ಲಿ ಬೆರಳೋಡಿಸುತ್ತಾ ಆಟದಲ್ಲಿ ತನ್ಮಯಗೊಳ್ಳುತ್ತಿದ್ದರು.

ಶಿಶುಪಾಲನಿಗೆ ಪ್ರವೇಶಿಸಲು ಅಸಾಧ್ಯವೆನಿಸಿದ್ದ ದ್ವಾರಕಾ ನಗರವನ್ನು ಶ್ರೀ ಕೃಷ್ಣ ಹೇಗೆ ನಿರ್ಮಿಸಿದ್ದ ? ಅದರ ರಂಗೋಲಿ ಚಿತ್ರಗಳು ನೋಡುಗರ ಹೃದಯ ಗಳನ್ನು ಸೂರೆಗೊಳ್ಳುತ್ತಿದ್ದವು! ಭಾಗಣ್ಣ ರಚಿಸುತ್ತಿದ್ದ ಚಿತ್ರಗಳ, ರಂಗೋಲಿಯ ದರ್ಶನ ಮನೋರಂಜನೆಯೊಂದಿಗೆ ಮನೋವಿಕಾಸಕ್ಕೂ ಕಾರಣವಾಗುತ್ತಿದ್ದವು.

ಪ್ರತಿ ನಿತ್ಯ ಸಂಜೆ ಶ್ರೀ ವೆಂಕಟೇಶನ ಗುಡಿಯ ಭಜನಾ ಕಾರ್ಯಕ್ರಮವೆಂದರೆ ಉತ್ತನೂರಿನ ಗ್ರಾಮಸ್ತರಿಗೆಲ್ಲಾ ನಿತ್ಯ ಹಾಜರಾಗುವ ಕಾರ್ಯಕ್ರಮಗಳಲ್ಲಿ ಒಂದಾಗಿ ಹೋಯಿತು.

ಸಂಧ್ಯಾವಂದನೆ, ಏಕಾಂತ ಪೂಜೆಗಳಲ್ಲಿಯೇ ನಿರತನಾಗಿದ್ದ ಭಾಗಣ್ಣ ಹೀಗೆ ಸಾರ್ವಜನಿಕ ವ್ಯಕ್ತಿಯಾಗಿ ರೂಪಗೊಳ್ಳುತ್ತಿದ್ದುದನ್ನು ಕಂಡು ತಾಯಿ ವೆಂಕಮ್ಮನಿಗೆ ಎಲ್ಲಿಲ್ಲದ ಸಂತೋಷ. ಭಕ್ತಿ, ಶ್ರೇಷ್ಠ ಅನುಸಂಧಾನ ಚಿಕ್ಕ ವಯಸ್ಸಿಗೆ ಅಳವಟ್ಟರೂ ಅದು ಸರಿಯೆ? ತಾನು ನಿರ್ವಹಿಸುತ್ತಿರುವ ರೀತಿ ಕ್ರಮಬದ್ಧವಾದುದೆ ಎಂದೆಲ್ಲಾ ಸಂಶಯಗಳು ಭಾಗಣ್ಣನಿಗೆ ಬರುತ್ತಿದ್ದುದುಂಟು. ಅದಕ್ಕೆಲ್ಲಾ ಉತ್ತರಗಳು ಸಂಸ್ಕೃತ ಗ್ರಂಥಗಳಲ್ಲಿ ಪುರಂದರಾದಿ ನಿರ್ಮಿತ ಹರಿದಾಸ ಸಾಹಿತ್ಯದಲ್ಲಿ ಸಿಕ್ಕುತ್ತಿದ್ದುದನ್ನು ಕಂಡು ಭಾಗಣ್ಣ ಸಂತೋಷಗೊಳ್ಳುತ್ತಿದ್ದ. ಅಧ್ಯಯನ ಆಳವಾಗಿ ಸಾಗುತ್ತಿದ್ದಂತೆ ಅನುಷ್ಠಾನವೂ ಸರಿಸರಿಯಾಗಿ ಸಾಗಿತ್ತು. ಸಾರ್ವಜನಿಕರಿಗೆ ಬೇಕಾಗಿದ್ದ ಭಾಗಣ್ಣ

ಸಂಘ ಜೀವನದ ಸಡಗರದಲ್ಲಿ ಏಕಾಂತ ಪೂಜೆಯ ಮಹತ್ವವನ್ನೂ ಮರೆಯಲಿಲ್ಲ. ಕೋಳಿ ಕೂಗುವ ಮುನ್ನವೇ ಏಳುತ್ತಿದ್ದ ಭಾಗಣ್ಣ ರಾತ್ರಿ ಬಹಳ ಹೊತ್ತಿನವರೆಗೂ ಕಾರ್ಯಪ್ರವೃತ್ತನಾಗಿರುತ್ತಿದ್ದ.

ಮನೆಯ ಖರ್ಚು ವೆಚ್ಚಗಳ ಬಗ್ಗೆ ಆತನಿಗೆ ಯಾವ ರೀತಿಯ ಚಿಂತೆಗೆ ಅವಕಾಶವಾಗಲಿಲ್ಲ.

ಯಾರ್‍ಯಾರೋ ಧಾನ್ಯ ನೀಡುತ್ತಿದ್ದರು. ಅದಕ್ಕೆ ನಾನಾ ಕಾರಣಗಳನ್ನು ನೀಡಿ ಭಾಗಣ್ಣನನ್ನು ಒಪ್ಪಿಸುತ್ತಿದ್ದರು.

"ನಿನ್ನೆ ನೀಡಿದ ಪ್ರಸಾದವನ್ನು ನಮ್ಮ ಮಗುವಿಗೆ ಉಣಿಸಿದೆವು ಭಾಗಣ್ಣಾ, ಆ ಕ್ಷಣದಿಂದ ಅದಕ್ಕೆ ಬಂದ ಕಾಯಿಲೆ ಗುಣವಾಗಿದೆ" ಎಂದು ಒಬ್ಬರು ಹೇಳಿದರೆ "ನಮ್ಮ ಹಸು ಹಾಲು ಕೊಡದೆ ನಾಲ್ಕೈದು ದಿನಗಳಿಂದ ಸತಾಯಿಸುತ್ತಿತ್ತು. ನೀನು ನೀಡಿದ ಮಂತ್ರಾಕ್ಷತೆಯನ್ನು ಅದರ ಮೇಲೆ ಎರಚಿದ ನಂತರ ಅದು ಸರಿ ಹೋಗಿದೆ" ಎಂದು ಮತ್ತೊಬ್ಬರು ಹೇಳುತ್ತಿದ್ದರು.

ಭಾಗಣ್ಣ ಅದಾವುದನ್ನೂ ಅಷ್ಟಾಗಿ ಹಚ್ಚಿಕೊಳ್ಳುತ್ತಿರಲಿಲ್ಲ. ಅವನ ಅಧ್ಯಯನ, ಚಿಂತನ ಭರದಿಂದ ಸಾಗಿತ್ತು. ಸುತ್ತುಮುತ್ತಲ ಹಳ್ಳಿಗಳ ಮನೆಗಳಿಗೆಲ್ಲಾ ಹೋಗಿ ಅವರ ಮನೆಗಳ ಮೂಲೆಗಳಲ್ಲಿ ಎಸೆದಿರುತ್ತಿದ್ದ ನಾನಾ ತಾಳೆ ಓಲೆಗರಿಗಳನ್ನು ಸಂಗ್ರಹಿಸಿ ಅಧ್ಯಯನ ಮಾಡುತ್ತಿದ್ದ.

ಜನಗಳಿಗೆ ಒಂದು ರೀತಿಯ ವ್ಯಾಧಿ. ಮನೆಯಲ್ಲಿರುವ ಗ್ರಂಥಗಳನ್ನು ಯಾರೂ ಮುಟ್ಟಬಾರದು. ಅವರೂ ತೆಗೆದು ಓದಬಾರದು. ಈ ಭಾವನೆಯಿಂದ ಮೂಲೆಯಲ್ಲಿಟ್ಟು ಮರೆತವರು ಕೆಲವರಾದರೆ, ದೇವರ ಮನೆಯಲ್ಲಿಟ್ಟು ಪೂಜಿಸುವವರು ಹಲವರು. ಆದರೆ ಭಾಗಣ್ಣನ ದಿವ್ಯ ತೇಜಸ್ಸು ಅವನ ವಿನಯತೆ, ಗ್ರಂಥಗಳನ್ನು ಪವಿತ್ರಭಾವನೆಯಿಂದ ತೆಗೆದು ಓದುವ ಪರಿ ಮೊದಲಾದವುಗಳಿಂದ ಪ್ರಭಾವಿತರಾದ ಜನರು ಅವನು ಕೇಳಿದರೆ ಯಾವುದನ್ನಾದರೂ ತೆಗೆದುಕೊಡುತ್ತಿದ್ದರು. ಅದನ್ನು ಪಠಿಸಿದ ಮೇಲೆ ಅಷ್ಟೇ ಜೋಪಾನವಾಗಿ ಹಿಂದಕ್ಕೆ ಮರಳಿಸುತ್ತಿದ್ದುದರಿಂದ ಆತನ ಬಗ್ಗೆ ಉತ್ತಮ ಅಭಿಪ್ರಾಯ ವ್ಯಾಪಿಸಿತ್ತು. ಗ್ರಂಥಗಳನ್ನು ಪೂಜಿಸುವುದೆಂದರೆ ಅವುಗಳ ಅಧ್ಯಯನ ಎಂದು ಭಾಗಣ್ಣ ಹೇಳಿದರೆ ಅನೇಕ ಜನರಿಗೆ ಅರ್ಥವಾಗುತ್ತಿರಲಿಲ್ಲ. ನಿಮ್ಮ ಹಿರಿಯರು ಸಂಗ್ರಹಿಸಿಟ್ಟ ಗ್ರಂಥಗಳನ್ನು ಪೂಜಿಸಿ ತರುತ್ತೇನೆ ಎಂದು ಹೇಳಿ ಒಯ್ಯುತ್ತಿದ್ದ. ಆತನ ಗ್ರಂಥ ಪೂಜೆಯೆಂದರೆ ಅದರ ಕೂಲಂಕುಷ ಅಧ್ಯಯನವೇ.

ಆತನು ಗ್ರಂಥ ಪೂಜಿಸಿ ತಂದರೆ ಮನೆಗೆ ಶುಭವಾಗುತ್ತದೆ ಎಂಬ ಅಭಿಪ್ರಾಯ ವ್ಯಾಪಿಸಿದ್ದರಿಂದ ಅನೇಕರು ತಮ್ಮ ತಮ್ಮ ಮನೆಗಳಲ್ಲಿದ್ದ ಗ್ರಂಥಗಳನ್ನು ತಂದು ಒಪ್ಪಿಸುತ್ತಿದ್ದುದುಂಟು. ಈ ರೀತಿಯಿಂದಾಗಿ ಭಾಗಣ್ಣನ ವಿದ್ಯಾಭ್ಯಾಸ ವಿಸ್ತೃತವಾಗಿ ಸಾಗಿತ್ತು.

ತತ್ವಶಾಸ್ತ್ರದ ಗ್ರಂಥಗಳಲ್ಲದೆ ಜ್ಯೋತಿಷ್ಯಶಾಸ್ತ್ರ, ರಮಲ ಶಾಸ್ತ್ರ , ಹಸ್ತ ಸಾಮುದ್ರಿಕಾ ಶಾಸ್ತ್ರ, ಸಸ್ಯ ಶಾಸ್ತ್ರ, ಮನೋಶಾಸ್ತ್ರ ಹೀಗೆ ಎಷ್ಟೋ ಗ್ರಂಥಗಳು ಅವನಿಗೆ ಸಿಕ್ಕವು.

ಕೆಲವು ಜ್ಯೋತಿಷ್ಯ ಶಾಸ್ತ್ರದ ಗ್ರಂಥಗಳು ಅವನನ್ನು ಬಹಳವಾಗಿ ಆಕರ್ಷಿಸಿದವು. ವಿವಿಧ ಗ್ರಹಗಳು, ಅವುಗಳು ಸ್ವಗೃಹ, ವಿವಿಧ ಗೃಹಗಳಲ್ಲಿ ಅವು ಬೀರುವ ಪ್ರಭಾವ ಓದುತ್ತಿದ್ದಂತೆ ಆತನಿಗೆ ಆ ಗ್ರಹಗಳೇ ಕಣ್ಣಿಗೆ ಕಾಣಿಸಿ ತಮ್ಮ ಕರ್ತವ್ಯವನ್ನು ವಿವರಿಸುತ್ತಿದ್ದಂತೆ ಭಾಸವಾಗುತ್ತಿತ್ತು.

ಸಕಲಗ್ರಹ ಬಲನಾದ ಸರಸಿಜಾಕ್ಷನ ಕೃಪೆಗೆ ಪಾತ್ರನಾದ ಭಾಗಣ್ಣನಿಗೆ ಜ್ಯೋತಿಷ್ಯಶಾಸ್ತ್ರದ ಬಲದಿಂದ ಜನರನ್ನು ಸನ್ಮಾರ್ಗದಲ್ಲಿ ಕರೆದುಕೊಂಡು ಹೋಗಲು ಸಾಧ್ಯವೇನೋ ಎಂಬ ಅಭಿಪ್ರಾಯ ತಲೆಯಲ್ಲಿ ಸುಳಿಯಿತು.

ಅವನು ಆ ಬಗ್ಗೆ ಯೋಚಿಸುತ್ತಿದ್ದಾಗಲೇ ಇಬ್ಬರು ಮೂವರು ಗುಡಿಯೊಳಗೆ ಬಂದು ಕೈ ಮುಗಿದು ಕುಳಿತರು.

ಭಾಗಣ್ಣ ಗ್ರಂಥದ ಸತ್ಯತ್ವವನ್ನು ಪರೀಕ್ಷಿಸಲು ಮೂವರಲ್ಲಿ ಒಬ್ಬರನ್ನು ಹತ್ತಿರ ಕರೆದು ಒಂದು ಸಂಖ್ಯೆಯನ್ನು ಹೇಳಿ ಎಂದ. ಅವರು ಹೇಳಿದರು. ಒಂದು ಹೂವಿನ ಹೆಸರು ಕೇಳಿ ಬರೆದುಕೊಂಡ. ಏನೇನೋ ಪ್ರಶ್ನಿಸಿ ಉತ್ತರ ಪಡೆದು ಮತ್ತೇನನ್ನೋ ಲೆಕ್ಕ ಹಾಕಿ ಕಡೆಗೆ ಭಾಗಣ್ಣ ಹೇಳಿದ.

"ಈ ದಿನ ನಿಮ್ಮ ಮನೆಯಲ್ಲಿ ಹೆರಿಗೆಯಾಗುತ್ತದೆ."

ಕೇಳಿದಾತ ತಬ್ಬಿಬ್ಬುಗೊಂಡ. ಮನೆಯಲ್ಲಿರುವುದು ಗಂಡ ಹೆಂಡತಿ ಇಬ್ಬರೆ. ಹೆಂಡತಿಗೆ ಈಗಾಗಲೇ ಅರವತ್ತು ವರ್ಷ ಮೀರಿದೆ. ಮಗ ಗದ್ವಾಲ ಸೈನ್ಯದಲ್ಲಿ ಕೆಲಸದಲ್ಲಿದ್ದಾನೆ. ಅವನಿಗಿನ್ನೂ ಮದುವೆಯಾಗಿಲ್ಲ.

"ಇಲ್ಲ ಸ್ವಾಮಿ, ನಮ್ಮ ಮನೆಯಲ್ಲಿ ಹೆರಿಗೆಯ ಸಂಭವವೇ ಇಲ್ಲ"

ಭಾಗಣ್ಣ ಮತ್ತೊಮ್ಮೆ ಲೆಕ್ಕಾಚಾರ ಹಾಕಿದ. ಹೆರಿಗೆ ಆಗಿಯೇ ಆಗುತ್ತದೆಂದು ಶಾಸ್ತ್ರ ನಿಷ್ಕರ್ಷೆಯಾಗಿ ಹೇಳಿತು.

'ಇಲ್ಲ, ನಿಮ್ಮ ಮನೆಯಲ್ಲಿ ಹೆರಿಗೆ ಆಗಲೇಬೇಕು.'

ಕೇಳಿದಾತ ಒಳಗಿಂದೊಳಗೆ ನಕ್ಕುಬಿಟ್ಟ. ಭಾಗಣ್ಣನಿಗೆ ತನ್ನ ಲೆಕ್ಕಾಚಾರದಲ್ಲಿಯೇ ಗಮನ. ಅದು ಸಂಭವನೀಯವೇ ಎಂದು ಯೋಚಿಸುವ ಗೊಡವೆಗೆ ಹೋಗಲಿಲ್ಲ.

ಇನ್ನೊಬ್ಬರನ್ನು ಕರೆದು ಮೂರು ಸಲ ಕವಡೆ ಹಾಕಲು ಹೇಳಿದ. ಬಿದ್ದ ಸಂಖ್ಯೆಗಳನ್ನು ಲೆಕ್ಕ ಹಾಕಿ ಈ ರೀತಿ ಕಣಿ ಹೇಳಿದ.

"ಈ ದಿನ ನಿಮ್ಮ ಮನೆಯಲ್ಲಿ ಎರಡು ಕೊಲೆಗಳಾಗುತ್ತವೆ."

ಕೇಳಿದವನು ಹೌಹಾರಿದ. ಅವನ ಮನೆಯಲ್ಲಿ ಸದ್ಯಕ್ಕಿರುವುದು ಗಂಡ ಹೆಂಡತಿ ಇಬ್ಬರೇ. ತಾವಿಬ್ಬರೂ ಕೊಲೆಯಾದರೆ ? ಅವನಿಗೆ ಹೆದರಿಕೆ ಇಟ್ಟುಕೊಂಡಿತು.

"ಮತ್ತೊಮ್ಮೆ ಲೆಕ್ಕ ಸರಿಯಾಗಿ ಮಾಡಿ ನೋಡಿ ಸ್ವಾಮಿ. ನಿಮ್ಮ ಲೆಕ್ಕಾಚಾರದಂತೆ ಈ ದಿನ ನನ್ನ ಆಯುಷ್ಯ ಮುಗಿದಂತಾಯಿತು" ಭೀತಿಯಿಂದ ಕೇಳಿದ.

ಸಾವು ಎನ್ನುವ ವಿಷಯ ಯಾರಿಗೆ ತಾನೇ ಭೀತಿ ಹುಟ್ಟಿಸುವುದಿಲ್ಲ ? ಕೇಳಿದವನ ಮುಖದಲ್ಲಿ ಬೆವರು ಮೂಡಿತ್ತು. ತುಟಿ ಕಂಪಿಸುತ್ತಿತ್ತು.

ಬೇರೆ ಯಾರಾದರೂ ಹೇಳಿದ್ದರೆ ಅದನ್ನು ಲಘುವಾಗಿ ಪರಿಗಣಿಸಿ ಬಿಡುತ್ತಿದ್ದನೇನೋ !

ಈ ಊರಿಗೆ ಬಂದ ಹೊಸತದರಲ್ಲಿ ಭೀಮಣ್ಣನ ಹೆಂಡತಿಗಾದ ಉಪಕಾರ, ಊರಿಗೆ ಹೊಸಬನಾದರೂ ಮೊದಲ ಭೇಟಿಯಲ್ಲಿಯೇ 'ಭೀಮಣ್ಣಾ"ಎಂದು ಹೆಸರಿನೊಂದಿಗೆ ಕರೆದದ್ದು ಇವೆಲ್ಲಾ ಕೇಳಿದ್ದ ಅವನಿಗೆ ಭಾಗಣ್ಣನ ವಾಕ್‌ಸಿದ್ಧಿಯ ಬಗ್ಗೆ ಸಾಕಷ್ಟು ನಂಬಿಕೆಯಿತ್ತು.

ಆದರೆ ಇತ್ತೀಚೆಗೆ ಭಾಗಣ್ಣನಿಂದ ವಾಗ್‌ಸಿದ್ಧಿ ದರ್ಶನದ ಘಟನೆಗಳಾವವೂ ನಡೆದಿರಲಿಲ್ಲ.

ಈ ಬಗ್ಗೆ ಭಾಗಣ್ಣನನ್ನು ಯಾರಾದರೂ ಕೇಳಿದರೆ ನಕ್ಕು ಸುಮ್ಮನಾಗಿ ಬಿಡುತ್ತಿದ್ದ. ತತ್ವಶಾಸ್ತ್ರದ ಅಧ್ಯಯನ, ರಂಗೋಲಿ, ಚಿತ್ರ ಕಲೆಗಳ ಪ್ರದರ್ಶನ ಪ್ರತಿನಿತ್ಯ ರಾತ್ರಿ ಭಜನೆ, ಇವುಗಳೇ ಇತ್ತೀಚೆಗೆ ಭಾಗಣ್ಣನ ಕೀರ್ತಿಯನ್ನು ಹೆಚ್ಚಿಸಿದ್ದವು.

'ಎರಡು ಕೋಲಿಗಳು' ಎಂಬ ಸಂಗತಿ ಕೇಳಿ ತನ್ನ ಸಾವನ್ನು ತರ್ಕಿಸಿದ್ದ ಅವನಿಗೆ ಭಾಗಣ್ಣ ಮತ್ತೊಮ್ಮೆ ಲೆಕ್ಕ ಹಾಕಿ ಹೇಳಿದ.

"ತಪ್ಪಿದ್ದಲ್ಲ ಯಜಮಾನರೆ. ಆದರೆ ನಿಮ್ಮ ಕೈಯಲ್ಲಿಯೇ. ಒಂದು ಪ್ರಾಣ ಹೋಗುತ್ತದೆ ಎಂದು ಲೆಕ್ಕ ಬರುವುದರಿಂದ ನೀವಂತೂ ಸಾಯುವುದಿಲ್ಲ. ಆದರೂ ಎರಡು ಕೊಲೆ ನಿಮ್ಮ ಮನೆಯಲ್ಲಿ ತಪ್ಪಿದ್ದಲ್ಲ" ಏಕಾಖಂಡಿತವಾಗಿ ಹೇಳಿದ ಭಾಗಣ್ಣ.

ಅಲ್ಲಿದ್ದ ಮತ್ತೊಬ್ಬನನ್ನು ಮುಂದಕ್ಕೆ ಕರೆದಾಗ ಅವನು ಹೆದರಿಯೇ ಬಿಟ್ಟಿದ್ದ.

ಆದರೂ ಹದಿನೆಂಟು ಮಂಡಲಗಳ ಮನೆಯೊಂದನ್ನು ಬರೆದು ಕಣ್ಣು ಮುಚ್ಚಿ ಅದರಲ್ಲಿ ಕೈಯಿಡುವಂತೆ ಆತನಿಗೆ ಹೇಳಿದ.

ಹೆದರುತ್ತಲೆ ಆತ ಕೈಯಿಟ್ಟ

"ಅರರೆ, ಸ್ವಲ್ಪ ಈ ಕಡೆ ಕೈ ಇಡಬೇಕಾಗಿತ್ತಪ್ಪಾ ಪ್ರಮಾದದ ರೇಖೆಯ ಮೇಲೆ ಬೆರಳಿಟ್ಟಿದ್ದಿ, ಆದರೂ ನಿನಗೆ ನಾಳೆ ನಿಧಿಯೊಂದು ಸಿಕ್ಕುತ್ತದೆ."

'ಹಣ ಸಿಕ್ಕುತ್ತದೆ' ಎಂದು ಕೇಳಿದೊಡನೆಯೇ ಅವನ ಮುಖದಲ್ಲಿ ಆನಂದ ಮಿಂಚಿತ್ತು. ಎಷ್ಟು ಸಿಕ್ಕುತ್ತದೆ, ಎಲ್ಲಿ ಸಿಕ್ಕುತ್ತದೆ ಎಂದು ತಿಳಿಯುವ ಆತುರ ಅವನಿಗೆ.

"ಸ್ವಾಮಿ, ಈ ಮಂಡಲ, ಕಣ್ಣು ಮುಚ್ಚಿ ಕೈ ಬೆರಳು ಇಡುವ ಶಾಸ್ತ್ರ ಇವೆಲ್ಲಾ ನನಗೆ ಬೇಡ. ನೀವೇ, ಕಣ್ಣು ಮುಚ್ಚಿ, ಅದನ್ನು ಒಳಗಣ್ಣಿನಿಂದ ನೋಡಿ ನಿಷ್ಕರ್ಷೆಯಾಗಿ ಹೇಳಿ"

ಈ ಮಾತು ಕೇಳಿ ಭಾಗಣ್ಣ ಬೆಚ್ಚಿ ಬಿದ್ದ. ಯಾರನ್ನಾದರೂ ಮುಂದೆ ಕೂಡಿಸಿಕೊಂಡು, ಅವರ ಬಗ್ಗೆ ಯೋಚಿಸುತ್ತಾ ಕಣ್ಣು ಮುಚ್ಚಿದರೆ ಅವರ ಭೂತ ವರ್ತಮಾನ, ಭವಿಷ್ಯತ್ ವಿಷಯಗಳೆಲ್ಲಾ ದೃಶ್ಯ ದೃಶ್ಯವಾಗಿ ಅವನ ಮುಂದೆ ಸುಳಿಯುತ್ತಿದ್ದವು. ತನಗೆ ದೊರೆತ ಈ ಶಕ್ತಿ, ಗಾಯತ್ರಿ ಮಂತ್ರ ಪುರಶ್ಚರಣೆಯಿಂದ ದೊರೆತ ಸಿದ್ಧಿಯೆಂದು ಅವನಿಗೆ ಅರಿವಾಗಿತ್ತು. ಅದನ್ನು ಹಾಗೆಲ್ಲಾ ಲಘುವಾಗಿ ಉಪಯೋಗಿಸಿಕೊಂಡು ತಪಸ್ಸಿನ ಶಕ್ತಿಯನ್ನು ಹ್ರಾಸ ಮಾಡಿಕೊಳ್ಳಬಾರದೆಂದೂ ಯಾವುದೋ ಗ್ರಂಥದಲ್ಲಿ ಓದಿದ್ದರಿಂದ ಅದನ್ನು ಉದ್ದೇಶಪೂರ್ವಕವಾಗಿ ಬಿಟ್ಟಿದ್ದ. ಜನರು ಆ ಬಗ್ಗೆ ಪ್ರಶ್ನಿಸದಂತೆ ಬಹಳ ಜಾಗರೂಕತೆ ವಹಿಸಿದ್ದ.

ಕಡೆಗೆ ಭಾಗಣ್ಣ ಅವನಿಗೆ ಹೇಳಿದ. "ನಾನು ಕಣ್ಣು ಮುಚ್ಚಿ ನೋಡುವುದು ಮುಖ್ಯವಲ್ಲಪ್ಪಾ, ಶಾಸ್ತ್ರಗಳ ಆಧಾರದ ಮೇಲೆ, ಯಾವುದೊ ಕಾಲದಲ್ಲಿ ನಿಷ್ಕರ್ಷೆ

ಯಾಗಿ ಬರೆದಿಟ್ಟ ಗ್ರಂಥಗಳು ಹೇಳುವುದು ಸುಳ್ಳು. ಈಗ ಮನೆಗೆ ಹೋಗು. ನಾಳೆ ನೀವೇ ಬಂದು 'ಕಣಿ' ನಿಜವಾಯಿತೆಂದು ಒಪ್ಪಿಕೊಳ್ಳುತ್ತೀರಿ. ಇಂಥ ಅನೇಕ ಶಾಸ್ತ್ರಗಳು ಸುಮ್ಮನೆ ಬರೆಯಲ್ಪಟ್ಟಿಲ್ಲ. ಆಳವಾದ ಅನುಭವದಿಂದಲೇ, ಅವು ರಚಿಸಲ್ಪಟ್ಟಿವೆ. ನೋಡೋಣ. ನಾಳೆ ನೀವು ಬನ್ನಿ" ಎಂದು ಅವರನ್ನು ಬಲವಂತದಿಂದ ಕಳಿಸಿಕೊಟ್ಟ. ಅವರು ಹೋದ ಮೇಲೆ ಅವರಿಗೆ ತಾನು ಹೇಳಿದ ಕಣಿಯ ಬಗ್ಗೆ ಯೋಚಿಸಿದ ಭಾಗಣ್ಣ.

ವೃದ್ಧ ದಂಪತಿಗಳಿರುವ ಮನೆಯಲ್ಲಿ ತೊರಿಗೆಯಾಗುತ್ತದೆ! ಇಬ್ಬರೇ ಇರುವ ಮನೆಯಲ್ಲಿ ಎರಡು ಕೊಲೆಗಳಾಗಿ ಒಬ್ಬರ ಕೈಯಲ್ಲಿ ಒಂದು ಜೀವ ಹೋಗುತ್ತದೆ. ಮತ್ತೊಬ್ಬರಿಗೆ ಅನಿರೀಕ್ಷಿತವಾಗಿ ನಿಧಿ ಸಿಕ್ಕುತ್ತದೆ!

ತಾನು ಹೇಳಿದ ಮೊದಲ ಎರಡು ಸಂಗತಿಗಳ ವಿಸಂಗತ್ವವನ್ನು ನೆನೆದು ಅವನಿಗೆ ಆಶ್ಚರ್ಯವಾಯಿತು. ಅಸಂಭವವಾದ ಇಂಥ ಫಲಿತಾಂಶ ಶಾಸ್ತ್ರದಲ್ಲಿ ಹೀಗೇಕೆ ಬಂದಿತು?

ಇಂಥ ವಿಷಯಗಳಲ್ಲಿ ಶಾಸ್ತ್ರವೊಂದೇ ಆಧಾರವಲ್ಲ. ಹೇಳುವವನ ತಪಸ್ಸು, ಶುದ್ಧ ಜೀವನ ಹಾಗೂ ವಾಕ್ ಸಿದ್ಧಿಯೂ ಕೂಡಿರಬೇಕು ಎಂಬ ಶಾಸ್ತ್ರ ಗ್ರಂಥದ ಮೂಲ ವಿಷಯ ಅವನ ನೆನಪಿಗೆ ಬಂದವು.

ಇಂಥ ವಿಸಂಗತೆಗಳು ಹೊರಹೊಮ್ಮಬೇಕಾದರೆ ತನ್ನಲ್ಲಿಯೇ, ಏನೋ, ಲೋಪ ಇರಬೇಕು ತಾನು ಶುದ್ಧ ಜೀವನವನ್ನು ನಡೆಸುತ್ತಿಲ್ಲವೆ? ತನಗೆ ವಾಕ್ ಸಿದ್ಧಿಯೇನೋ ಇದೆಯೆಂದು ಸಂಕಾಪುರದ ಶ್ಯಾನಭೋಗ ವೆಂಕಣ್ಣನ ಹೀನವಾದ ಸಂತತಿ, ಬತ್ತಿ ಹೋಗಿರುವ ಕೆರೆ ಇವುಗಳಿಂದ ಸ್ಪಷ್ಟವಾಗಿ ಗೊತ್ತಾಗಿ ಹೋಗಿತ್ತು. ಹಾಗಾದರೆ ಇತ್ತೀಚಿಗೆ ತಾನು ಪಥಭ್ರಷ್ಟನಾಗಿದ್ದೇನೆಯೆ? ಈ ಅವಧಿಯಲ್ಲಿ ನಡೆಸಿದ ಶಾಸ್ತ್ರಾಧ್ಯಯನ, ಗ್ರಂಥ ವಾಚನ, ಭಜನೆ, ಪೂಜೆ, ದೇವರ ಮುಂದೆ ರಂಗೋಲಿ ರಚನೆ ಇವುಗಳೆಲ್ಲಾ ತಪಸ್ಸಲ್ಲವೆ?

ಯೋಚನೆಗಿಟ್ಟುಕೊಂಡಿತು ಭಾಗಣ್ಣನಿಗೆ. ತನ್ನ ವೈಯಕ್ತಿಕ ಜೀವನದ ಬಗ್ಗೆ ಸಮಸ್ಯೆಗಳು ಬಂದಿದ್ದರಿಂದ ಅನಿವಾರ್ಯವಾಗಿ ತನ್ನ ಹಿಂದಿನ ಶಕ್ತಿಯ ಬಗ್ಗೆ ಪರೀಕ್ಷೆಗೆ ಕುಳಿತ. ಭಗವಂತನನ್ನು ಸ್ಮರಿಸಿ ಕಣ್ಣು ಮುಚ್ಚಿ ಕುಳಿತು ತಾನು ಕಣಿ ಹೇಳಿದವರನ್ನು ಸ್ಮರಿಸಿಕೊಂಡು ಅವರ ಭವಿಷ್ಯದ ಬಗ್ಗೆ ಚಿಂತಿಸಿದ.

ಚಿತ್ರಗಳು ಕಣ್ಣು ಮುಂದೆ ಸುಳಿದವು.

ಹಾಗೆ ಒಳಗಣ್ಣಿನಿಂದ ನೋಡುತ್ತಾ, ನೋಡುತ್ತಾ ಕುಳಿತವನೇ, ಗಪ್ಪನೆ ನಕ್ಕು ಬಿಟ್ಟ.

ಅವನಿಗೆ ಸಮಾಧಾನವೂ ಆಯಿತು. ತನ್ನ ತಪಸ್ಸಿನ ಶಕ್ತಿಯೇನೂ ಕಳೆದು ಹೋಗಿಲ್ಲ. ಆದ್ದರಿಂದ ಈಗ ನೆನಸಿದೊಡನೆಯೇ ವಾಸ್ತವಿಕ ಚಿತ್ರ ಕಣ್ಣ ಮುಂದೆ ಸುಳಿಯಿತು. ಇತ್ತ ತನಗೆ ಶಾಸ್ತ್ರವೂ ಸುಳ್ಳು ಹೇಳಿಲ್ಲ.

ಈ ಸ್ವಾರಸ್ಯ ಸಂಗತಿ ಬಗ್ಗೆ ಯೋಚಿಸುತ್ತಾ ಅವನು ಮುಸಿಮುಸಿನಕ್ಕ.

ಕಣಿ ಕೇಳಿದ್ದ ಮೂವರೂ ಮರುದಿನ ಭಾಗಣ್ಣನ ಬಳಿ ಬಂದರು.

ಭಾಗಣ್ಣ ಹೇಳಿದ್ದು ತಪ್ಪಾಯಿತು ಎಂದೇ ಅವರು ನಂಬಿದ್ದರು.

ತಾನು ಹೇಳಿದ್ದು ಸಂಪೂರ್ಣ ಸರಿ ಎಂದು ಭಾಗಣ್ಣನಿಗೂ ಮನವರಿಕೆಯಾಗಿತ್ತು.

ಮೊದಲನೆಯವನನ್ನು ಕೇಳಿದ ಭಾಗಣ್ಣ "ಏನಪ್ಪಾ, ನಿಮ್ಮ ಮನೆಯಲ್ಲಿ ಹೆರಿಗೆಯಾಗಲಿಲ್ಲವೆ?"

ಅವನಿಗೆ ತನ್ನ ಹೆಂಡತಿ ಹಡೆದಿಲ್ಲ ಎಂದು ಹೇಳಲು ನಾಚಿಕೆ. ಅರವತ್ತೈದು ವರ್ಷದ ಮುದುಕಿ ಹಡೆದಿಲ್ಲವೆಂದು ಯಾವ ಮುಖದಿಂದ ಹೇಳಿಯಾನು?"

'ನಿಮ್ಮ ಮಾತು ಸುಳ್ಳುಸ್ವಾಮಿ' ಖಂಡಿತ ಧ್ವನಿಯಲ್ಲಿ ಹೇಳಿದ.

"ಹಾಗಾದರೆ ನಿಮ್ಮ ಮನೆಯ ಅಡಕಲು ಕೋಣೆಗೆ ಹೋಗಿ ಅಲ್ಲಿಟ್ಟಿರುವ ಹತ್ತಿಕಾಳು ಚೀಲದ ಹಿಂದೆ ನೋಡಿ ಬಾರಪ್ಪಾ, ಹೆರಿಗೆಯಾಗಿದೆಯೋ ಇಲ್ಲವೋ ನಿನಗೇ ತಿಳಿಯುತ್ತದೆ" ನಗುತ್ತಾ ನುಡಿದ ಭಾಗಣ್ಣ. ಅರ್ಥವಾಗಲಿಲ್ಲ ಅವನಿಗೆ. ಆದರೂ ಭಾಗಣ್ಣನ ಮಾತು ಪರೀಕ್ಷಿಸಿ ಬಿಡಲು ಮನೆಗೆ ಹೋಗಿ ಕೂಡಲೇ, ಹಿಂದಿರುಗಿ ಹೇಳಿದ.

ಆತನ ಧ್ವನಿಯಲ್ಲಿ ಅಶ್ಚರ್ಯವೂ ಇತ್ತು. ನಗುವೂ ತುಂಬಿತ್ತು.

"ನೀವು ಹೇಳಿದ ಜಾಗದಲ್ಲಿ ಹೆರಿಗೆಯಾಗಿರುವುದೇನೊ ಸತ್ಯ. ಆದರೆ ಅದನ್ನು ಹೆರಿಗೆ ಎನ್ನಬೇಕೆ?" ಕೇಳಿದ ಆತ.

ಭಾಗಣ್ಣ ಹೇಳಿದ.

"ಹೌದು, ನಿಮ್ಮ ಮನೆಯ ಬೆಕ್ಕು ಅಲ್ಲಿ ಮರಿಗಳನ್ನು ಹಾಕಿದೆ. ಹೆರಿಗೆ ಎಂದಷ್ಟೆ ಶಾಸ್ತ್ರ ಹೇಳುತ್ತದೆ. ಅದನ್ನಷ್ಟೇ ನಾನು ಹೇಳಿದ್ದು" ಮುಸಿಮುಸಿ ನಕ್ಕ ಭಾಗಣ್ಣ.

ಇನ್ನಿಬ್ಬರು ಆಶ್ಚರ್ಯದಿಂದ ಭಾಗಣ್ಣನನ್ನು ನೋಡುತ್ತಿದ್ದರು. ಭಾಗಣ್ಣನೇ ಬಿಡಿಸಿ ಹೇಳಿದ.

"ನಿನ್ನೆ ಸಾಯಂಕಾಲ ನಿನ್ನ ಕೋಳಿ ತನ್ನ ಮರಿಗಳೊಂದಿಗೆ ಅಂಗಳದಲ್ಲಿ ಅಡ್ಡಾಡುತ್ತಿತ್ತು. ಹದ್ದೊಂದು ಬಂದು ಒಂದು ಮರಿಯನ್ನು ಕುಕ್ಕಿ ಒಯ್ಯಲು ಪ್ರಯತ್ನಿಸಿತು. ತಾಯಿ ಕೋಳಿ ಧೈರ್ಯದಿಂದ ಎದುರಿಸ ಬಂದೊಡನೆ ಅದು ಆ ಮರಿಯನ್ನು ಬಿಟ್ಟು ದೂರದಲ್ಲಿದ್ದ ಇನ್ನೊಂದು ಮರಿಯನ್ನು ಕುಕ್ಕಿಕೊಂಡು ಹೋಯಿತು. ತಪ್ಪಿಸಿಕೊಂಡ ಮರಿಗಾದ ಗಾಯ ಕಂಡು ನೀನು ಅದನ್ನು ಕೈಗೆತ್ತಿಕೊಂಡೆ. ಹದ್ದಿನ ಕೊಕ್ಕಿನಿಂದಾದ ಆಘಾತಕ್ಕೆ ಅದು ಸ್ವಲ್ಪ ಹೊತ್ತು ಒದ್ದಾಡಿ ನಿನ್ನ ಕೈಯಲ್ಲಿಯೇ ಪ್ರಾಣ ಬಿಟ್ಟಿತು. ಆಯಿತಲ್ಲಾ, ಎರಡು ಕೊಲೆಯೂ ಹೌದು ಅದರಲ್ಲಿ ನಿನ್ನ ಕೈಯಲ್ಲಿಯೇ ಒಂದು ಸಾವು. ಶಾಸ್ತ್ರದ ಮಾತು ಸುಳ್ಳೆಲ್ಲಿ ಆಯಿತು?"

ಆತ ಮರುಪ್ರಶ್ನೆ ಹಾಕಿದ.

"ನನ್ನ ಹೆಂಡತಿಗೇನೂ ಅಪಾಯವಾಗಿಲ್ಲವಲ್ಲಾ? ಅವಳ ಕೊಲೆಯೆಲ್ಲಿ ಆಯಿತು?"

"ನಿನ್ನ ಹೆಂಡತಿ ಕೊಲೆಯಾಗುತ್ತಾಳೆಂದು ನಾನೆಲ್ಲಿ ಹೇಳಿದೆ" ಭಾಗಣ್ಣ ನಗುತ್ತಾ ಪ್ರಶ್ನಿಸಿದ.

ಹೌದು. ಭಾಗಣ್ಣ ಹೇಳಿದ್ದು ಅಷ್ಟು. ಅಷ್ಟೆ! ಅಷ್ಟರ ಮೇಲೆ ತಾನೇ, ಏನೇನೋ ಲೆಕ್ಕ ಹಾಕಿ ಸುಳ್ಳು ಎಂದು ವಾದಿಸ ಬಂದಿದ್ದಕ್ಕೆ ನಾಚಿಕೆಯಾಯಿತು.

ಮೂರನೆಯವನು ಮಾತ್ರ ತನಗೆ ನಿಧಿ ಸಿಕ್ಕಲಿಲ್ಲವೆಂದು ಸ್ಪಷ್ಟವಾಗಿ ಸಾರಿ ಬಿಟ್ಟ.

ಇಬ್ಬರ ವಿಚಿತ್ರ ಅನುಭವ ಕೇಳಿದ ಮೇಲೆಯೂ ಆತ ತನ್ನ ಅಭಿಪ್ರಾಯ ಬದಲಿಸಿರಲಿಲ್ಲ.

"ಇವರಿಬ್ಬರು ನಡೆದಿರುವ ಘಟನೆಯನ್ನು ಒಪ್ಪಿಕೊಂಡಿದ್ದು ನೋಡಿಯೂ ನೀವು ಇಲ್ಲವೆಂದು ಹೇಳಬಹುದೇ" ಭಾಗಣ್ಣ ನಗುತ್ತಾ ಪ್ರಶ್ನಿಸಿದ.

"ಇಲ್ಲವಲ್ಲಾ, ನನಗೆ ನಿಧಿಸಿಕ್ಕಿದ್ದರೆ ನಿಮ್ಮ ಮುಂದೆ ಸುಳ್ಳು ಹೇಳುತ್ತಿದ್ದನೆ?" ಆತ ಧೈರ್ಯವಾಗಿ ಪ್ರಶ್ನಿಸಿದ.

ಭಾಗಣ್ಣ ಬಿಡಿಸಿ ಹೇಳಿದ.

"ನೀವು ಮನೆಬಿಟ್ಟು ಬರುವಾಗ ಅಂಗಳದಲ್ಲಿ ಕಾಲಿಗೆ ಏನೋ ತಡಿಯಿತು. ಅದು ಕಾಲಿಗೆ ಚುಚ್ಚಿದ್ದರಿಂದ ಏನೆಂದು ನೆಲದಡಿ ಪರೀಕ್ಷಿಸಿ ನೋಡಿದಿರಿ. ಬೆರಳಿನಿಂದ ಕೆದಕಿದಾಗ ಸಣ್ಣ ಮಳೆಯಿದ್ದ ಎತ್ತಿನ ಲಾಳವೊಂದು ಸಿಕ್ಕಿತು. ಕೂಡಲೇ, ಅದನ್ನು ತೆಗೆದು ಮನೆಯೊಳಗೆ ಎಸೆದು ಬರಲಿಲ್ಲವೆ. ನೀವು?" ಭಾಗಣ್ಣನ ವಿವರಣೆಗೆ ತಬ್ಬಿಬ್ಬುಗೊಂಡ ಆತ. ಅದೆಲ್ಲವೂ ಸತ್ಯವೆ ಆಗಿತ್ತು. ನಿಧಿಯೆಂದರೆ ಧನದ ರಾಶಿಯೆಂದು ಅವನ ಲೆಕ್ಕಾಚಾರವಾಗಿತ್ತು. ಸಿಕ್ಕಿದ್ದೇನೋ ನಿಜ. ಆದರೆ ಅದೊಂದು ಕಬ್ಬಿಣದ ಚೂರು. ಧನವೇ ಸಿಕ್ಕುತ್ತದೆಂದು ಭಾಗಣ್ಣನವರೇನೂ ಹೇಳಿರಲಿಲ್ಲ.

ಅವನಿಗಾದ ನಿರಾಶೆ ಕಂಡು ಭಾಗಣ್ಣನೇ ಸಮಾಧಾನ ಮಾಡಿದ.

"ಯೋಚಿಸಬೇಡಿ ಯಜಮಾನರೇ, ಶಾಸ್ತ್ರ ಸುಳ್ಳು ಹೇಳುವುದಿಲ್ಲ. ಅದನ್ನು ಹೇಳುವವರಿಗೂ ಕೇಳುವವರಿಗೂ ಸ್ವಲ್ಪ ವಿವೇಚನೆ ಬೇಕಾಗುತ್ತದೆ. ಜೊತೆಗೆ ಅಲ್ಪಸ್ವಲ್ಪ ಹೆಚ್ಚು ಕಡಿಮೆಯಾಗುವುದು ಅವರವರ ಪಾಪ ಪುಣ್ಯಗಳನ್ನವ ಲಂಬಿಸಿರುತ್ತದೆ. ನೀವು ಮಾಡಿದ ಪುಣ್ಯದ ಫಲ ಬಹಳ ಸ್ವಲ್ಪ. ಅದು ಈ ಜನ್ಮದಲ್ಲಿ ಇನ್ನೂ ಕಡಿಮೆ. ಹೀಗಾಗಿ ನಿಧಿ ಸಿಕ್ಕಬೇಕಾದ ನಿಮ್ಮ ಯೋಗ ಕಬ್ಬಿಣದ ಚೂರಿನಲ್ಲಿಯೇ, ಮುಗಿದು ಹೋಯಿತು. ಅವರಿಬ್ಬರದೂ ಅಷ್ಟೆ. ಅವರ ಜೀವನದಲ್ಲಿ ಸಂಭವಿಸಲೇ ಬೇಕಾಗಿದ್ದ ಘಟನೆಗಳು ಚಿತ್ರವಿಚಿತ್ರವಾಗಿ ನಡೆದು ಹೋದವು. ಹೆಚ್ಚು ಪರಿಣಾಮ ಬೀರಲಿಲ್ಲ. ಹರಿಧ್ಯಾನ, ಗುರುಭಕ್ತಿ, ಬಡವರ ಬಗ್ಗೆ ಅನುಕಂಪ, ಸಮಾಜ ಸೇವೆ ಮೊದಲಾದವುಗಳ ಮೂಲಕ ಪುಣ್ಯ ಹೆಚ್ಚಿಸಿಕೊಂಡಿದ್ದರೆ ಇಂಥ ಯೋಗಗಳಿಂದ ಉತ್ತಮ ಫಲ ದೊರೆಯುತ್ತಿತ್ತು. ಪ್ರತಿಯೊಬ್ಬರಿಗೂ ನಾನಾ ಯೋಗಗಳು, ಅವುಗಳಿಂದ ನಾನಾ ಘಟನೆಗಳು ನಡೆಯುವುದು ನಿಷ್ಕರ್ಷೆಯಾಗಿದೆ. ಆದರೆ ಅವನ್ನು ಅಧಿಕ ಅಥವಾ ಸೌಮ್ಯಗೊಳಿಸಿಕೊಳ್ಳುವ ಅವಕಾಶ ಪ್ರತಿ ವ್ಯಕ್ತಿಗೂ ಪರಮಾತ್ಮ ನೀಡಿದ್ದಾನಪ್ಪಾ" ಭಾಗಣ್ಣ ಬಿಡಿಸಿ ಬಿಡಿಸಿ ಹೇಳಿದಾಗ ಅವರೆಲ್ಲರೂ ಶ್ರೀ ವೆಂಕಟೇಶನಿಗೆ ಕೈ ಮುಗಿದು "ನಿನ್ನ ಲೀಲೆಯೇ ಲೀಲೆ. ನಿನ್ನ ಆಟವೆ ಆಟ. ನಿನ್ನದನ್ನು ತಿಳಿಯಲು ಯಾರಿಂದ ಸಾಧ್ಯವಯ್ಯಾ, ಲಕ್ಷ್ಮೀರಮಣಾ" ಎಂದೆನ್ನುತ್ತಾ ಎದ್ದು ಭಾಗಣ್ಣನಿಗೆ ನಮಸ್ಕರಿಸಿ ಹೊರಟರು.

ಭಾಗಣ್ಣನ ಮಾತು ಸುಳ್ಳಾಯಿತು ಎಂದು ಲೇವಡಿ ಧ್ವನಿಯಲ್ಲಿ ಹೇಳಿ ಹಿಂದಿರುಗಬೇಕೆಂಬ ಅವರ ಹುಚ್ಚೇನೋ ಹೋಯಿತು. ಆದರೆ ಈ ಸಂಗತಿಯನ್ನೆಲ್ಲಾ ಕೇಳಿದ ಭಾಗಣ್ಣನ ತಾಯಿ ವೆಂಕಮ್ಮನಿಗೆ ಹೊಸ ಹುಚ್ಚು ಹಿಡಿಯಿತು.

ಇದೇ ಅವಕಾಶವನ್ನು ಉಪಯೋಗಿಸಿಕೊಂಡು ಮಗನಿಗೆ ಬುದ್ಧಿವಾದ ಹೇಳ ತೊಡಗಿದಳು.

"ನಿನ್ನ ಪ್ರಭಾವದಿಂದ ತಮ್ಮಂದಿರ ಓದೇನೋ ಸಾಗುತ್ತಿದೆ. ಮನೆಯ ಖರ್ಚುವೆಚ್ಚಗಳೂ ನಡೆಯುತ್ತಿವೆ. ಜೊತೆಗೆ ನಿನ್ನ ಅಧ್ಯಯನವೂ ನಡೆಯಿತು. ಇನ್ನೆಷ್ಟು ಕಾಲವೋ ನಿನ್ನ ಅಧ್ಯಯನ? ನೀನು ನುಡಿದದ್ದು ಸತ್ಯವಾಗುತ್ತದೆ. ಜನರು ನಿನ್ನ ಮಾತಿಗೆ ಒಪ್ಪಿಕೊಳ್ಳುತ್ತಿದ್ದಾರೆ. ಇದನ್ನೇ, ಮುಂದುವರಿಸಿ ಭವಿಷ್ಯ ನುಡಿಯುವ ಕೆಲಸವನ್ನಾದರೂ ಮಾಡೋ ಎಂದಾಗ ನೀನು ನಿರಾಕರಿಸುತ್ತಿದ್ದಿ ತಪಸ್ಸಿನ ಶಕ್ತಿಯನ್ನು ದೈನಂದಿನ ಜೀವನ ನಿರ್ವಹಣೆಯ ವ್ಯವಹಾರಕ್ಕೆ ಬಳಸಬಾರದೆಂದು ಹೇಳುತ್ತಿದ್ದಿ. ಆದರೆ ಈಗ ದೊರೆತ ಶಾಸ್ತ್ರ ಗ್ರಂಥಗಳ ಆಧಾರದ ಮೇಲೆ ಭವಿಷ್ಯ ಹೇಳುವ ಜಾಣತನ ಸಿದ್ಧಿಸಿದೆಯಲ್ಲಾ. ನಿನ್ನ ತಪಸ್ಸಿನ ಶಕ್ತಿಯೇನೂ ಇದರಿಂದ ಹ್ರಾಸವಾಗುವುದಿಲ್ಲವಲ್ಲಾ. ಇದನ್ನೇ ವೃತ್ತಿ ಮಾಡಿಕೊಂಡು ಏಕೆ ಮುಂದುವರಿಯಬಾರದು?" ತಾಯಿ ಪ್ರಶ್ನಿಸಿದಳು.

"ಇಲ್ಲಮ್ಮಾ ಈ ವೃತ್ತಿಯೇ ವಿಚಿತ್ರ. ಯಾವ ಗ್ರಂಥ ಏನೇ ಹೇಳಲಿ, ಅದನ್ನು ನಿಷ್ಕರ್ಷೆಯಾಗಿ ಹೇಳುವುದಕ್ಕೆ ಸ್ವಲ್ಪವಾದರೂ ನಮ್ಮ ಪುಣ್ಯ ವಿನಿಯೋಗವಾಗುತ್ತದೆ. ಹಾಗಾದಾಗ ಮಾತ್ರ ನಮ್ಮ ನುಡಿಯಂತೆ ನಡೆಯುತ್ತದೆ. ಅದಕ್ಕಾಗಿ ಇಷ್ಟು ಯೋಚಿಸುತ್ತಿದ್ದೀನಮ್ಮಾ" ಭಾಗಣ್ಣ ತಾಯಿಗೆ ಬಿಡಿಸಿ ಹೇಳಿದ.

"ಭಾಗಣ್ಣಾ ಚಿಕ್ಕ ಹುಡುಗನಾಗಿದ್ದಾಗಿನಿಂದ ನೀನು ಅಪೂರ್ವ ಶಕ್ತಿಯನ್ನು ತೋರಿಸುತ್ತಲೇ ಬಂದಿದ್ದಿ. ನಿನ್ನ ಪ್ರಭಾವದಿಂದಲೇ ನಮ್ಮ ಸಂಸಾರ ನಡೆದುಕೊಂಡು ಬಂದಿದೆ. ಆಗೆಲ್ಲಾ ನೀನು ಹುಡುಗನಾಗಿದ್ದೀಯೆಂದು ಸುಮ್ಮನಿರಬಹುದಿತ್ತು. ಈಗ ನಿನಗೆ ಇಪ್ಪತ್ತು ವರ್ಷವಾಗುತ್ತಿದೆಯಪ್ಪಾ, ಇನ್ನಾದರೂ ನೀನು ಒಲಿದುಬಂದ ವೃತ್ತಿಯನ್ನು ಪ್ರಾರಂಭಿಸು. ಇದರಿಂದ ನಾವೆಲ್ಲರೂ ಮುಂದೆ ಬರುತ್ತೇವೆ."

ಭಾಗಣ್ಣ ಬೇಗ ಒಪ್ಪಿಕೊಳ್ಳಲಿಲ್ಲ. ತಾಯಿ ದೈನ್ಯಾತಿ ದೈನ್ಯದಿಂದ ಮಗನನ್ನು ಕೇಳಿಕೊಂಡಳು.

"ಜನರು ಕೊಡುತ್ತಲೇ ಇದ್ದಾರೆ, ನಾನು ತೆಗೆದುಕೊಳ್ಳುತ್ತಲೇ ಇದ್ದೇನೆ. ಹೊಲ ಹೊಲಕ್ಕೆ ಹೋಗಿ, ಕಣಕಣದಲ್ಲಿ ಭಿಕ್ಷೆ ಬೇಡಿದರೆ ಒಂದು ಚೀಲ ಧಾನ್ಯವೂ ಸರಿಯಾಗಿ ಸಿಕ್ಕುತ್ತಿರಲಿಲ್ಲ. ಮನೆಮನೆಗೆ ಹೋಗಿ ಕೂಲಿ ಕೆಲಸ ಮಾಡಿದರೂ ಹೊಟ್ಟೆ ತುಂಬುವಷ್ಟು ಧಾನ್ಯ ಬರುತ್ತಿರಲಿಲ್ಲ. ನಿನ್ನ ಮಹಿಮೆ ಒಂದೊಂದಾಗಿ ಪ್ರಕಟಗೊಳ್ಳುತ್ತಿದ್ದಂತೆ ಜನರು ತಾವಾಗಿಯೇ ಬಂದು ಧಾನ್ಯ ನೀಡತೊಡಗಿದರು.

ಅದನ್ನೂ ಹೆಚ್ಚು ಪಡೆಯಬಾರದು ಎಂದು ನಿಖರವಾಗಿ ಹೇಳಿಬಿಟ್ಟಿದ್ದೆ. ಭಾಗಣ್ಣಾ, ಈಗ ನನಗೂ ಆಸೆಯಾಗುತ್ತಿದೆ ಕಣೋ. ನನ್ನ ಮಗ ಕೈತುಂಬಾ ಸಂಪಾದಿಸಬೇಕು. ಆತನ ಈ ಮನೆಯಲ್ಲಿ ಧನಧಾನ್ಯ ಲಕ್ಷ್ಮಿ ರಾರಾಜಿಸಬೇಕು. ಯಾವ ಕೈಗಳಿಂದ ದಾನ ಪಡೆಯುತ್ತಿದ್ದೆನೋ ಅವೇ ಕೈಗಳಿಂದ ನಾನೂ ದಾನ ಮಾಡಬೇಕು. ನನ್ನ ಈ ಒಂದು ಅಪೇಕ್ಷೆಯನ್ನು ನೆರವೇರಿಸಿಕೊಡಲಾರೆಯಾ ಕಂದಾ" ಮಗನ ಗಲ್ಲ ಹಿಡಿದು ಕೇಳಿಕೊಂಡಳು ವೆಂಕಮ್ಮ. ಹೀಗೆ ಕೇಳುವಾಗ ತಾಯಿಯ ಕಣ್ಣ ತುಂಬಾ ನೀರು ತುಂಬಿದ್ದನ್ನು ಭಾಗಣ್ಣ ನೋಡಿದ. ತಾಯಿಯ ಈ ಕಣ್ಣೀರು ಭಾಗಣ್ಣನನ್ನು ಬಹಳ ತಳಮಳಗೊಳಿಸಿತು.

ಮಗ ತನ್ನ ಮಾತಿಗೆ ಪ್ರತಿ ಹೇಳದೆ ಸುಮ್ಮನಿರುವುದನ್ನು ಕಂಡು ಇದೇ ಸರಿಯಾದ ಸಮಯವೆಂದು ವೆಂಕಮ್ಮನಿಗೆ ತಿಳಿದು ಹೋಯಿತು. ಕಬ್ಬಿಣ ಕಾದಾಗಲೇ ಸರಿ ಏಟು ಹಾಕಿ, ಬೇಕಾದ ಆಕಾರ ಮಾಡಿಕೊಳ್ಳಬೇಕೆಂಬ ವ್ಯವಹಾರ ಜಾಣ್ಮೆ ವೆಂಕಮ್ಮನಿಗೆ ಯಾರೂ ಹೇಳಿ ಕೊಡಬೇಕಾಗಿರಲಿಲ್ಲ.

"ನನ್ನ ಮಗ ಯಾರಿಂದಲೂ ದಾನ ಪಡೆಯಬಾರದು. ವ್ಯವಹಾರದಲ್ಲಿ ವೃತ್ತಿಯಲ್ಲಿ ಅತಿ ಚತುರ ಎಂಬ ಕೀರ್ತಿಗಳಿಸಬೇಕು. ನಿನ್ನ ಕೀರ್ತಿ ದೊರೆಗಳ ಕಿವಿಯವರೆಗೂ ಹೋಗಿ ಅವರು ನಿನಗೆ ಹೇಳಿಕಳಿಸಬೇಕು. ನನ್ನ ಮಗನೂ ಮದುವೆ ಮಾಡಿಕೊಂಡು....." ಇನ್ನೂ ಏನು ಹೇಳುತ್ತಿದ್ದಳೋ ವೆಂಕಮ್ಮ, ಅಷ್ಟರಲ್ಲಿ ಭಾಗಣ್ಣ ಗಟ್ಟಿಯಾಗಿ ಕೂಗಿಬಿಟ್ಟ.

"ಅಮ್ಮಾ............"

'ಮದುವೆ' ಎನ್ನುವ ಶಬ್ದ ಕಿವಿಗೆ ಬಿದ್ದೊಡನೆ ಹೀಗೆ ಕೂಗಿದನೆಂದು ವೆಂಕಮ್ಮನಿಗೆ ತಿಳಿಯಲಿಲ್ಲ. ವ್ಯವಹಾರ ಮಾಡಿ ಸಂಪಾದಿಸು ಎನ್ನುವ ಮಾತಿಗೆ ಮಗನು ಪ್ರತಿಭಟಿಸುತ್ತಿದ್ದಾನೆ ಎಂದು ಆಕೆ ಊಹಿಸಿದಳು. ಗಟ್ಟಿಯಾಗಿ 'ಅಮ್ಮಾ' ಎಂದು ಕೂಗಿದ ಭಾಗಣ್ಣ ನಿಧಾನವಾಗಿ ತಾನೇ ಸಮಾಧಾನ ಮಾಡಿಕೊಂಡ.

"ಅಮ್ಮಾ ನಾನು ವ್ಯವಹಾರ ನಿಪುಣನೆನಿಸಬೇಕು, ಹೌದಲ್ಲವೆ?"

ತಾಯಿ ಸಂತೋಷದಿಂದ 'ಹೌದು ಹೌದು' ಎಂದಳು.

"ನಾನು ಇದನ್ನು ವೃತ್ತಿ ಮಾಡಿಕೊಂಡು ಕೈತುಂಬಾ ಸಂಪಾದಿಸಬೇಕು. ನನ್ನ ಕೀರ್ತಿ ದೊರೆಗಳ ಕಿವಿಗೂ ಹೋಗಿ ಅವರು ನನ್ನ ಪ್ರತಿಭೆಗೆ ನಮಸ್ಕರಿಸಬೇಕು, ಅಷ್ಟೇ ಅಲ್ವೇನಮ್ಮಾ ನಿನ್ನ ಅಪೇಕ್ಷೆ?"

"ಅಷ್ಟೆ ಅಷ್ಟೆ. ಇದುವರಿಗೂ ಜನರಿಂದ ನಾನು ಪಡೆದ ದಾನದ ನೂರರಷ್ಟು ನಾನು ಜನರಿಗೆ ನೀಡಬೇಕು. ನನ್ನ ಮನೆ ಅತಿಥಿ ಅಭ್ಯಾಗತರ ಆಸರೆಯಾಗಿ, ಬಂಧು ಬಳಗದವರ ಬೆಲ್ಲವಾಗಿ ಆಚಾರ ವಿಚಾರ ಶೀಲರ ನೆಲೆಯಾಗಿ ರಾರಾಜಿಸಬೇಕು" ತಾಯಿ ತುಂಬು ಹೃದಯದಿಂದ ನುಡಿದಳು.

ಭಾಗಣ್ಣ ಎದ್ದು ನಿಂತು ಬಿಟ್ಟ.

ತಾಯಿಯ ಬಾಯಿಯಿಂದ ಯಾವ ಕೋರಿಕೆ ಮತ್ತೆ ಬರುತ್ತದೆ ಎಂದು ಹೆದರಿದ್ದನೋ ಆ ಮಾತು ಹೊರಡುವಷ್ಟರಲ್ಲಿ ತಾಯಿಗೆ ಮಾತು ಕೊಟ್ಟ. ಹೆಚ್ಚು ವೇಳೆ ಸಿಕ್ಕರೆ ಮದುವೆ ವಿಷಯ ಎಲ್ಲಿ ಎತ್ತಿ ಬಿಡುವಳೋ ಎಂಬ ಹೆದರಿಕೆ ಅವನಿಗೆ.

"ಅಮ್ಮಾ ಈಗ ನೀನು ಹೇಳಿದಂತೆ ನಾನು ನಡೆಸಿ ಕೊಡುತ್ತೇನೆ. ಇಷ್ಟೇ ಅಲ್ಲವೇ ನಿನ್ನ ಅಪೇಕ್ಷೆ? "ಭಾಗಣ್ಣ ಕೇಳಿದ.

"ಹೌದು, ಹೌದು" ಎಂದು ಸಂತೋಷದಿಂದ ತಲೆ ಹಾಕಿದಳು ವೆಂಕಮ್ಮ.

"ನಾನು ಕೈ ತುಂಬಾ ದುಡಿಯುತ್ತೇನೆ" ಭಾಗಣ್ಣ ಹೇಳಿದ.

"ಆಗಲಿ, ಆಗಲಿ' ವೆಂಕಮ್ಮನಿಗೆ ಸಂತೋಷವೋ ಸಂತೋಷ.

"ನೀನು ದಾನ ಮಾಡುವುದರಲ್ಲಿ ದಣಿಯುವಷ್ಟು ಸಂಪಾದಿಸಿ ಹಾಕುತ್ತೇನೆ."

ವೆಂಕಮ್ಮನಿಗೆ ಹರ್ಷ ತಡೆಯಲಾಗಲಿಲ್ಲ. "ತಮ್ಮಂದಿರನ್ನೆಲ್ಲಾ ಮುಂದೆ ತರುತ್ತೇನೆ. ಅವರಿಗೆಲ್ಲಾ ಸೂಕ್ತ ದರ್ಶನ ನೀಡುತ್ತೇನೆ. ದೊರೆಗಳವರೆಗೆ ನನ್ನ ಕೀರ್ತಿ ಹೋಗುವ ಮಾತು ಒಂದೆಡೆಗಿರಲಿ; ದೊರಗಳೇ ಸತ್‌ಪುತ್ರರನ್ನು ಪಡೆದಿದ್ದೀಯಿ ಎಂದು ನಿನಗೆ ನಮಸ್ಕರಿಸುವಂತೆ ಮಾಡುತ್ತೇನೆ. ಸಾಕಷ್ಟೆ?" ಭಾಗಣ್ಣ ಒತ್ತಿ ಒತ್ತಿ ಕೇಳಿದ 'ಹೌದು ಕಣೊ, ಅಷ್ಟು ಸಾಕು. ಅಷ್ಟಾದರೆ ನಾನು ಧನ್ಯೆ, ಎಂದು ಭಾವಿಸುತ್ತೇನೆ ನನ್ನ ಜೀವನ ಸಾರ್ಥಕವಾಯಿತೆಂದು ನಂಬುತ್ತೇನೆ."

ತಾಯಿ ಆನಂದದಿಂದ ಉಬ್ಬಿ ಉಬ್ಬಿ ಹೇಳಿದಳು.

ಭಾಗಣ್ಣನು ಸಹ ಸಂತೋಷದಿಂದ ಒಪ್ಪಿಗೆ ಕೊಟ್ಟ. "ನಿನ್ನ ಇಷ್ಟು ಅಪೇಕ್ಷೆಗಳನ್ನು ನೆರವೇರಿಸುವ ಜವಾಬ್ದಾರಿ ನನಗಿರಲಮ್ಮ, ಆದರೆ ಇದಕ್ಕಿಂತ ಇನ್ನೇನನ್ನೋ ಕೇಳಿ ನನ್ನನ್ನು ಗೊಂದಲದಲ್ಲಿ ಕೆಡವಬೇಡ. ಅದಕ್ಕಿಂತ ಹೆಚ್ಚಿನದೇನೂ ಇಲ್ಲವೆಂದು ತಾಯಿಯ ಆಗಿನ ಅನಿಸಿಕೆ.

"ಈ ಒಗ್ಗೆ ಮಾತು ಕೊಡುತ್ತೀಯಾ. ಈ ಕೋರಿಕೆಗಳಲ್ಲದೆ ಮತ್ಯಾವುದನ್ನೂ ಮುಂದೆ ಕೇಳುವುದಿಲ್ಲ ಎಂದು" ಒತ್ತಿ ಕೇಳಿದ ಭಾಗಣ್ಣ.

"ಇಲ್ಲ. ಇಲ್ಲ. ಇಲ್ಲ." ಒಪ್ಪಿಗೆ ಕೊಟ್ಟಳು ತಾಯಿ. ಭಾಗಣ್ಣ ಗೆದ್ದೆನೆಂದು ಉಸಿರು ಬಿಟ್ಟ.

ತಾನೂ ಗೆದ್ದೆನೆಂದು ವೆಂಕಮ್ಮನೂ ಸಂತೋಷದಿಂದ ಲೋಲಾಡಿ ಬಿಟ್ಟಳು.

ಭಾಗಣ್ಣ ತಾಯಿ ಕೇಳಬಾರದೆಂದು ಅಪೇಕ್ಷಿಸಿದ್ದು.... ತಾಯಿ ಕೇಳುವುದನ್ನು ಮರೆತದ್ದು---? ಒಂದೇ.

ಅದೇ... ಭಾಗಣ್ಣನ ಮದುವೆ!

೬

ತಾಯಿಗೆ ಮಾತು ಕೊಟ್ಟ ದಿನದಿಂದಲೇ ಭಾಗಣ್ಣ ವ್ಯವಹಾರಿಕ ಜಗತ್ತಿಗೆ ಧುಮುಕಿದ. ತನಗೆ ಸಿಕ್ಕ ಜ್ಯೋತಿಷ್ಯ ಶಾಸ್ತ್ರದ ಗ್ರಂಥಗಳ ವಿಷಯವನ್ನು ಕರತಲಾಮಲಕ ಮಾಡಿಕೊಂಡ. ಅದಕ್ಕೆ ತನ್ನ ವ್ಯವಹಾರ ಜಾಣ್ಮೆಯನ್ನು ಜೊತೆಗೂಡಿಸಿದ.

ಭಾಗಣ್ಣನ ಕಣಿ ಎಂದರೆ ಮುಂದಾಗುವ ದೃಶ್ಯಗಳನ್ನು ಕಣ್ಣ ಮುಂದೆ ಕುಣಿಸಿದಂತೆ ಎಂದು ಜನರು ನಂಬತೊಡಗಿದರು.

ಯಾವ ಗ್ರಹವು ಎಲ್ಲಿಯೇ ಇರಲಿ; ಅದೆಷ್ಟೇ ಕ್ರೂರ ದೃಷ್ಟಿಯನ್ನು ಪಸರಿಸಿರಲಿ. ಅದನ್ನು ಸೌಮ್ಯಗೊಳಿಸುವ ಮಾರ್ಗ ಭಾಗಣ್ಣ ಕಂಡುಕೊಂಡ. ವಿವಿಧಾಕಾರದ ಮಂಡಲಗಳನ್ನು ಚಿತ್ರಿಸಿ, ಅದರಲ್ಲಿ ಬೀಜಾಕ್ಷರಗಳನ್ನು ಬರೆದು 'ತಾಯಿತ' ಕೊಡುವುದರಿಂದ ತಮಗೆ ಶುಭವಾಗುತ್ತಿದೆಯೆಂದು ಜನರು ಅನುಭವದಿಂದ ನಂಬತೊಡಗಿದರು. ಯಾರಿಗೆ ಏನೇ ಹೇಳಲಿ, ಕಷ್ಟ ಪರಿಹಾರಕ್ಕೆ ಸರ್ವಶ್ರೇಷ್ಠನ ಪೂಜೆ, ದೇವರ ಶತನಾಮಾವಳಿ ಪಠನ ಮೊದಲಾದ ಪರಿಹಾರಗಳನ್ನೂ ಅವನು ಸೂಚಿಸುತ್ತಿದ್ದ.

ಭಾಗಣ್ಣನ ದಿವ್ಯ ತೇಜಸ್ಸು, ಸದಾ ಮಂದಹಾಸ ಯುಕ್ತ ಮುಖ, ಜನರ ಕಷ್ಟ ಕಾರ್ಪಣ್ಯಗಳನ್ನು ಕೇಳುವ ಸಹೃದಯ ಹೆಚ್ಚು ಹೆಚ್ಚು ಜನರನ್ನು ಆಕರ್ಷಿಸತೊಡಗಿತು.

ಮಣ್ಣಿನಲ್ಲಿ ಮುಚ್ಚಿದ್ದ ಮಾಣಿಕ್ಯವೊಂದು ಬಯಲಿಗೆ ಬಂದಿತು. ಅದರ ಮಹಾಪ್ರಭೆಯಿಂದ ಅನೇಕರು ಬೆಳಕು ಪಡೆಯತೊಡಗಿದರು.

ಬಾಲಕ ಭಾಗಣ್ಣನಲ್ಲ ಈಗ ಅವನು. ಶಾಸ್ತ್ರಾಧ್ಯಯನ ಸಂಪನ್ನ, ವೇದ ವಿದ್ಯಾ ಪ್ರವೀಣ. ಜೊತೆಗೆ ಜ್ಯೋತಿಷ್ಯ ಶಾಸ್ತ್ರದ ಮಹಾಮೇಧಾವಿಯೆಂಬ ಕೀರ್ತಿ ಜೊತೆ ಜೊತೆಯಾಗಿ ಹರಡಿ ಎಲ್ಲರೂ 'ಭಾಗಣ್ಣನವರು' ಎಂದು ಕರೆಯತೊಡಗಿದರು.

ಯಾವ ಊರಿನಲ್ಲಿ ಯಾವ ಪ್ರತಿಭಾವಂತನೇ ಹುಟ್ಟಿರಲಿ. ಅಲ್ಲಿಯೇ ಅವನ ಪ್ರತಿಭೆ ಗುರುತಿಸಲ್ಪಟ್ಟು ಮಾನ ಸನ್ಮಾನಗಳು ಸಿಕ್ಕುವುದು ಬಹಳ ಅಪರೂಪ. ರಾಜಕೀಯ ಸ್ಥಾನಮಾನಗಳಿಗೆ ಹೆದರಿ ಮರ್ಯಾದೆ ಕೊಟ್ಟವರು ಅಥವಾ ಅದನ್ನು ಪಡೆದವರು ಇತಿಹಾಸದಲ್ಲಿ ನಮಗೆ ಸಿಕ್ಕುತ್ತಾರೆ. ಯಾವ ಊರಿಗೆ ನಿರ್ಗತಿಕನಾಗಿ ಬಂದನೋ ಆ ರೀತಿ ಬಂದಾಗ ಯಾರು ಇನ್ನೂ ಬಾಲ್ಯವಸ್ಥೆಯಲ್ಲಿದ್ದರೋ, ಅಂಥ ವರಿಗೆ ಅದೇ ಗ್ರಾಮದಲ್ಲಿ ಮಾನಮರ್ಯಾದೆಗಳು ಸಿಕ್ಕ ಉದಾಹರಣೆಗಳು ನಮಗೆ ಬಹಳ ಸ್ವಲ್ಪ ಮಾತ್ರ ಸಿಕ್ಕುತ್ತವೆ.

ಸಿಕ್ಕ ಅಂಥ ಸ್ವಲ್ಪ ಉದಾಹರಣೆಗಳಲ್ಲಿ ನಮ್ಮ ಭಾಗಣ್ಣನವರೂ ಒಬ್ಬರಾಗಿ ಸೇರಿಹೋದರು.

ಸಣ್ಣವರು ದೊಡ್ಡವರು ಎಲ್ಲರಿಗೂ ಭಾಗಣ್ಣನವರೆಂದರೆ ಅಚ್ಚುಮೆಚ್ಚು. ತಮ್ಮ ಜೀವನದ ಕಷ್ಟಕಾರ್ಪಣ್ಯಗಳನ್ನು ಅವರಲ್ಲಿ ಹೇಳಿ ಸೂಕ್ತ ಸಲಹೆ ಸೂಚನೆ ಗಳನ್ನು ಪಡೆಯುವುದು ಗ್ರಾಮದ ಪ್ರತಿ ಕುಟುಂಬಕ್ಕೂ ಅಭ್ಯಾಸವಾಗಿ ಹೋಯಿತು.

ಸುತ್ತಮುತ್ತಲ ಗ್ರಾಮಗಳಿಂದ ಜನರು ಕಣಿ ಕೇಳಲು ಸಾಲುಗಟ್ಟಿ ಬಂದರು. ಬಂದವರೆಲ್ಲರಿಂದ ಕಾಣಿಕೆ ಸಂದಾಯವಾಗುತ್ತಿತ್ತು.

ಸಂಪತ್ತು ಸಂಪತ್ತು ಎಂದು ಎಲ್ಲರೂ ಹಂಬಲಿಸುತ್ತಾರೆ. ಅದಕ್ಕಾಗಿ ಹಾತೊರೆ ಯುತ್ತಾರೆ. ಅದು ಬಂದ ಮೇಲೆ ನೀಡುವ ಮಾನಸಿಕ ಕಿರುಕುಳ, ಸಮಾಜದ ಅಸೂಯೆ, ಸರೀಕರ ಅಸಹನೆಗಳಿಂದ ಹಲವರು ತಬ್ಬಿಬ್ಬುಗೊಂಡು ಬಿಡುತ್ತಾರೆ. ಅದು ಏಕೆ ಬಂದಿತಪ್ಪಾ ಎಂದು ಪರಿತಪಿಸುತ್ತಾರೆ. ಹಾಗೆಂದು ಅದನ್ನು ಬಿಟ್ಟುಬಿಡುವ ಮನಸ್ಸು ಬರುವುದಿಲ್ಲ. ಸಂಪತ್ತಿನ ಲಕ್ಷಣವೇ ಅದು. ಬಂದಷ್ಟೂ ಇನ್ನೂ ಬೇಕು ಬೇಕು ಎಂಬ ಅಪೇಕ್ಷೆ. ಅಪೇಕ್ಷೆ ನೆರವೇರುತ್ತಿದ್ದಂತೆಲ್ಲಾ ಮನಸಿಗೆ ಅಷ್ಟೇ ಘೋರ ಶಿಕ್ಷೆ.

ದೊರೆತ ಸಂಪತ್ತನ್ನು ಸರಿಯಾಗಿ ವಿನಿಯೋಗಿಸುವ ವಿವೇಚನೆ ಬಹಳ ಜನರಿಗೆ ಬರುವುದಿಲ್ಲ.

ಜ್ಞಾನಿಯಾದ ಭಾಗಣ್ಣ ಧನ ತರುವ ಪ್ರಲೋಭಗಳನ್ನು ಚೆನ್ನಾಗಿ ಅರಿತವನು. ಅದು ಒಡ್ಡುವ ಆಮಿಷಗಳಿಗೆ ದೂರವಾಗಿರಲು ನಿರ್ಧರಿಸಿದವನು. ಹೀಗಾಗಿ ಧನದಲ್ಲಿರುವ ಕಲಿಯ ಅಂಶ ಅವನನ್ನು ಬಾಧಿಸಲು ಸಾಧ್ಯವಿಲ್ಲವಾಯಿತು.

ಧನ ಬಂದಂತೆಲ್ಲಾ ಭಾಗಣ್ಣನ ಮನೆ ಅನ್ನಪೂರ್ಣೇಶ್ವರಿ ನಿಲಯವಾಯಿತು. ಅನ್ನದಾನ ನಡೆದಷ್ಟೂ ಧನಾಗಮನ ಜಾಸ್ತಿಯಾಯಿತು.

ಬಹು ಜನರು ಈ ವಿಷಯದಲ್ಲಿಯೇ ಪಡವೃತ್ತಿರುವುದನ್ನು ಭಾಗಣ್ಣ ಗಮನಿಸಿದ್ದ. ಮನೆಯಲ್ಲಿ ಹೆಚ್ಚು ಜನರು ಉಂಡರೆ ಧನ ವ್ಯಯವಾಗುತ್ತದೇನೋ ನಿಜ. ಆದರೆ ಧನ ಕೊಟ್ಟು ಧಾನ್ಯ ತರುವಂತೆ, ಧಾನ್ಯ ವಿನಿಯೋಗಿಸಿದಂತೆಲ್ಲಾ ಧನ ಬರುವುದನ್ನು ಕಾಣುವುದಕ್ಕೆ ಅಂತರ್‌ದೃಷ್ಟಿ ಬೇಕಾಗುತ್ತದೆ. ಅಂಥ ದೃಷ್ಟಿ ಭಾಗಣ್ಣನಿಗೆ ಇತ್ತು ಎಂದು ಬೇರೆ ವಿವರಿಸಬೇಕೆ?

ಕಣಿ ಅಥವಾ ಭವಿಷ್ಯ ಹೇಳುವುದು ಸಮಾಜದಲ್ಲಿ ಮೂಢನಂಬಿಕೆ ಹರಡಲು ಕಾರಣವಾಗುವುದಿಲ್ಲವೆ? ಇಂಥ ವೃತ್ತಿಯಿಂದ ಜನಮನ ಶಾಂತಿ ಪೋಷಣೆಯಾಗದೆ ಜನಜೀವನ ಶೋಷಣೆಯಾಗುತ್ತದೆಯೇ.

ಭಾಗಣ್ಣ ಈ ಬಗ್ಗೆ ಹಲವಾರು ಸಲ ಯೋಚಿಸಿದ್ದ

ಜನರು ತನ್ನಲ್ಲಿ ಬಂದಾಗ ತೋರುತ್ತಿದ್ದ ಕಳವಳ, ಮರಳುವಾಗ ಹೊಂದಿರುತ್ತಿದ್ದ ಆತ್ಮವಿಶ್ವಾಸ ನೆನೆದು ಅವನಿಗೆ ಸಮಾಧಾನವಾಯಿತು. ಇಷ್ಟು ಜನರಿಗೆ ತನ್ನ ವಿದ್ಯೆ ಹಾಗೂ ವೃತ್ತಿಯಿಂದ ಸಮಾಧಾನ ಸಿಕ್ಕು ಅವರು ಬದುಕಿನಲ್ಲಿ ಭರವಸೆ ಪಡೆಯುವುದಾದರೆ ಇದರಿಂದ ಸಮಾಜ ಶ್ರೇಯ ಸಾಧಿಸಿದಂತಾಗುವುದಿಲ್ಲವೆ? ಹಲವಾರು ಕಷ್ಟನಷ್ಟಗಳಿಂದ ನೊಂದು ಬಾಳುವೆಯಲ್ಲಿ ಒಳಿತೇ ಇಲ್ಲವೆಂಬ ನಿರಾಶೆಯಿಂದ 'ಜಗತ್ತು ಒಂದು ಮಾಯೆ' ಎಂಬ ಭ್ರಮೆಯಲ್ಲಿ ಬಳಲುತ್ತಿದ್ದವರಿಗೆ ಬದುಕು ಒಂದು ಭಗವಂತನು ಸೃಜಿಸಿಕೊಟ್ಟ ಮಹದವಕಾಶ. ಜಗತ್ತೆಂಬ ಗರಡೀ ಮನೆಯಲ್ಲಿ ಸಾಮು ಮಾಡುವುದೇ ಜೀವಿಯ ಕರ್ತವ್ಯ. ಕರ್ತವ್ಯದಿಂದ ವಂಚಿತನಾಗುವುದು ಅನಾರೋಗ್ಯದ ಅವಲಕ್ಷಣ ಎಂಬ ಅರಿವು ಮೂಡಿಸಿ ಜನರ ಕ್ರಿಯಾಶಕ್ತಿಯನ್ನು ಅರಳಿಸುವುದರಲ್ಲಿ ಯಾವ ತಪ್ಪಿದೆ? ಜನರನ್ನು ಕರ್ತವ್ಯೋನ್ಮುಖರನ್ನಾಗಿ ಮಾಡಬೇಕು. ಅವರ ಜೀವನದಲ್ಲಿ ಭಕ್ತಿಯ ಬೀಜವನ್ನು ಬಿತ್ತಿ, ಅದು ಹೃದಯದಲ್ಲಿ ಸುಂದರ ಹೂ ಬಿಡುವುದನ್ನು ನೋಡಬೇಕು. ಅದು ಫಲವಾಗಿ ಪರಿವರ್ತನೆಗೊಂಡು ಲೋಕ ತಣಿಯಬೇಕು. ಈ ಗುರಿ ಸಾಧನೆಗೆ ತನ್ನ ವೃತ್ತಿ ಸರಿಮಾರ್ಗ ಎಂದು ಭಾಗಣ್ಣ ನಿರ್ಧಾರಕ್ಕೆ ಬಂದ.

ಯಾವ ಕಾರಣದಿಂದಲೇ ಜನರು ತನ್ನಲ್ಲಿ ಬಂದಿರಲಿ. ಅವರಿಗೆ ಭಕ್ತಿಯ ಶ್ರೇಷ್ಠತೆ ವಿವರಿಸಿ ಅವರನ್ನು ಸನ್ಮಾರ್ಗದಲ್ಲಿ ಕರೆದೊಯ್ಯುವುದರತ್ತ ಭಾಗಣ್ಣನ ಪ್ರಯತ್ನ ನಡೆದಿತ್ತು.

ಜ್ಯೋತಿಷ್ಯ ಶಾಸ್ತ್ರ ಎನ್ನುವುದು ಬುರುಡೆಯ ಕಂತೆಯಾಗಿರಬಹುದೆ? ಇಲ್ಲ. ನೂರಾರು ಜನರು ಈ ಬಗ್ಗೆ ತಮ್ಮಲ್ಲಿ ತೃಪ್ತಿ ವ್ಯಕ್ತಪಡಿಸಿದ್ದಾರೆ ಅವರೂ ಮೌಢ್ಯತೆಯಿಂದ ತಲೆದೂಗಿರಬಹುದೆ?

ಭಾಗಣ್ಣ ಯೋಚಿಸಿದ.

"ಇಲ್ಲ. ಹಾಗಿರಲಾರದು. ಕಾಲವು ಒಂದು ನಿಯಮದ ಮೇಲೆ ಒಂದು ಲೆಕ್ಕಾಚಾರದ ಮೇಲೆ ನಡೆಯುತ್ತಿದೆ. ಆ ಲೆಕ್ಕವನ್ನು ನಮ್ಮ ಹಿರಿಯರು ಸ್ಪಷ್ಟವಾಗಿ ಉಲ್ಲೇಖಿಸಿದ್ದಾರೆ. ಕಾಲದ ನಿಯಮಗಳನ್ನು ಅಧ್ಯಯನ ಮಾಡಿದ್ದ ಅವರು ಅದು ಇಷ್ಟೇ ವೇಗದಲ್ಲಿ ಸಾಗುತ್ತದೆಂದು ಲೆಕ್ಕ ಹಾಕಿ ಬರೆದಿಟ್ಟು ಹೋಗಿದ್ದಾರೆ. ಆ ನಿಯಮವೇ ಪಂಚಾಂಗ ರಚನೆಗೆ ಮೂಲಾಧಾರ.

ಇಂಥ ಪ್ರದೇಶದ, ಇಂಥ ವೇಳೆಗೆ ಸೂರ್ಯ ಅಥವಾ ಚಂದ್ರಗ್ರಹಣ ಇಷ್ಟೇ ಕಾಲ ಆಗುತ್ತದೆ ಎಂದು ಎಷ್ಟು ಸ್ಪಷ್ಟವಾಗಿ ನಮ್ಮ ಪಂಚಾಂಗಗಳು ಹೇಳುತ್ತಿವೆ! ಆಕಾಶದ ಪರಿಣಾಮಗಳನ್ನು ನಿರ್ದಿಷ್ಟವಾಗಿ ವಿವರಿಸುವ ನಮ್ಮ ಪಂಚಾಂಗ ರಚನಾಶಾಸ್ತ್ರ ಎಷ್ಟೊಂದು ನಿಖರ!! ನಮ್ಮ ಹಿರಿಯರು ಇವುಗಳನ್ನೆಲ್ಲಾ ಬರೆದಿಡುವಾಗ ಆಕಾಶ ಅಥವಾ ಗ್ರಹಗಳನ್ನು ನೋಡುವುದಕ್ಕೆ ಯಾವ ಸಾಧನಗಳಿದ್ದವು? ಆದರೂ ಸ್ಪಷ್ಟವಾಗಿ ಅವರು ಬರೆದಿಟ್ಟಿದ್ದಾರೆ. ಅದರಂತೆ ನಡೆಯುತ್ತಿದೆ. ಅದನ್ನೇ ಖಗೋಳಶಾಸ್ತ್ರ ಎಂದು ಎಲ್ಲರೂ ಒಪ್ಪಿಕೊಳ್ಳುತ್ತಾರೆ.

ಇನ್ನು ಆಕಾಶದಲ್ಲಿ ಅಥವಾ ಗ್ರಹಗಳಲ್ಲಿ ಆಗುವ ಬದಲಾವಣೆಗಳಿಂದ ಭೂಮಿಯ ಮೇಲೆ ಪರಿಣಾಮವಾಗುವುದಿಲ್ಲವೆ? ಋತುಮಾನಕ್ಕನುಗುಣವಾಗಿ ಮರಗಳಲ್ಲಿ ಹೂ ಬಿಡುತ್ತದೆ. ಫಲ ಬರುತ್ತದೆ. ಭೂಮಿಯ ಮೇಲಾಗುವ ಈ ಬದಲಾವಣೆಗಳಿಂದ ಜೀವಿಗಳ ಮೇಲೆ ಪರಿಣಾಮ ಇದ್ದೇ ಇರುತ್ತದೆ. ಅಂತೆಯೇ ಮಾನವ ಶರೀರದ ಮೇಲೂ ಅದು ಬೀರುವ ಪರಿಣಾಮವನ್ನು ಎಲ್ಲರೂ ಅರಿತಿದ್ದೇವೆ. ಚಳಿಗಾಲದಲ್ಲಿ ಕಂಬಳಿ ಹೊದೆಯುತ್ತೇವೆ. ಬೇಸಿಗೆಯಲ್ಲಿ ಕಡಿಮೆ ಉಡುಪು ಧರಿಸುತ್ತೇವೆ. ಬೇಸಿಗೆಯಲ್ಲಿ ಕೆಲವರಿಗೆ ಪಿತ್ತ ಉದ್ರೇಕವಾಗುತ್ತದೆ. ವಾತದೋಷಿತರು ಚಳಿಮಳೆಗಾಲಗಳಲ್ಲಿ ಹೆಚ್ಚು ಬಳಲುತ್ತಾರೆ. ಅಮಾವಾಸ್ಯೆ ಹುಣ್ಣಿಮೆಗಳ ಮುಂದೆ ಕೆಲವರ ಬುದ್ಧಿ ವಿಕಲ್ಪವಾಗುತ್ತದೆ. ಹೆಚ್ಚು ಉದ್ರೇಕ ಗೊಳ್ಳುತ್ತಾರೆ. ನಿಸರ್ಗದ ಬದಲಾವಣೆಗಳಲ್ಲಿ ಮಾನವ ಶರೀರ ಹೇಗೆ ಸ್ಪಂದಿಸುತ್ತದೆ ಎನ್ನುವುದಕ್ಕೆ ಇವುಗಳಿಗಿಂತ ಬೇರೆ ಉದಾಹರಣೆಗಳು ಬೇಕೆ?

ಆದರೆ ಈ ಪರಿಣಾಮ ಎಲ್ಲರಿಗೂ ಒಂದೇ ರೀತಿಯಾಗಿರುವುದಿಲ್ಲ ಎನ್ನುವುದೂ ಅಷ್ಟೇ ಸತ್ಯ. ಎಲ್ಲಾ ಪ್ರದೇಶಗಳಿಗೂ ಸಮನಾಗಿರುವುದಿಲ್ಲ ಎನ್ನುವುದು ಅನುಭವ ವೇದ್ಯ. ಮಳೆಗಾಲ ಬಂದರೂ ಎಲ್ಲಾ ಪ್ರದೇಶಗಳಿಗೂ ಏಕೆ ಸಮನಾಗಿ ಮಳೆ ಬೀಳುವುದಿಲ್ಲ! ಬಿಸಿಲಿನ ಪ್ರಖರತೆ ಎಲ್ಲಾ ಕಡೆಗೂ ಒಂದೇ ರೀತಿ ಏಕೆ ಇಲ್ಲ?

ಆಕಾಶದಿಂದ ಅಥವಾ ಗ್ರಹಗಳಿಂದಾಗುವ ಪ್ರಭಾವ ಭೂಮಿಯ ಎಲ್ಲಾ ಪ್ರದೇಶಕ್ಕೂ ಒಂದೇ ರೀತಿಯಾಗಿರುವುದಿಲ್ಲ. ಪ್ರದೇಶ ಪ್ರದೇಶಕ್ಕೂ ಭಿನ್ನತೆಯಿದೆ.

ಸೂರ್ಯಗ್ರಹ ಭೂಮಿಯಿಂದ 2 ಕೋಟಿ 30 ಲಕ್ಷ ಹರದಾರಿ ದೂರದಲ್ಲಿ ದ್ದಾನೆ. ಅವನ ತೋರಿಕೆಯ ವ್ಯಾಸ ಎರಡು ಲಕ್ಷದ ಹನ್ನೆರಡು ಸಾವಿರದ ಐದುನೂರು ಹರದಾರಿ. ಅಷ್ಟುದೂರದಿಂದ ಅವನು ಮಾಡುವ ಪರಿಣಾಮ ಶರೀರಕ್ಕಾಗುತ್ತದೆ. ಆ ಗ್ರಹಕ್ಕೂ ಮೀರಿ ಪರಿಣಾಮ ಬೀರುವ ಬೇರೆ ಗ್ರಹಗಳಿವೆ ಯೆಂದು ನಮ್ಮವರು ಹೇಳುತ್ತಿದ್ದಾರೆ. ಅವುಗಳ ಪ್ರಭಾವವೂ ನಮ್ಮ ಮೇಲೆ ಆಗುತ್ತಿರಲೇ ಬೇಕು - ಅವನ್ನೆ ಚಂದ್ರ, ರಾಹು, ಕೇತು, ಶನಿ, ಶುಕ್ರ, ಗುರು ಎಂದೆಲ್ಲಾ ವಿಭಾಗಿಸಿದ್ದಾರೆ.

ಆದರೆ ಅವು ಬೀರುವ ಪರಿಣಾಮ ಎಲ್ಲರಿಗೂ ಒಂದೇ ರೀತಿಯಾಗಿರುವುದಿಲ್ಲ ಎನ್ನುವುದು ಸೂರ್ಯಗ್ರಹದ ಪರಿಣಾಮದ ಮೇಲೆಯೇ ಊಹಿಸಬಹುದು.

ಚಳಿಗಾಲದಲ್ಲಿ ಕೆಲವರ ಕಾಲು ಒಡೆಯುತ್ತದೆ. ಹಲವರ ತುಟಿ ಮುಖ ಬಿರುಕು ಬಿಡುತ್ತವೆ. ಕಾಲದ ಪ್ರಭಾವ ಎಲ್ಲರಿಗೂ ಒಂದೇ ರೀತಿಯಾಗಿರುವುದಿಲ್ಲ. ಕೆಲವರು ಚಳಿಗಾಲದಲ್ಲಿ ಸುಖವಾಗಿದ್ದು ಬೇಸಿಗೆಯಲ್ಲಿ ಹೆಚ್ಚು ಬಳಲುತ್ತಾರೆ.

ಚಳಿಗಾಲ ಬಂದೊಡನೆಯೇ ಕೆಲವರ ಉಬ್ಬಸ ಜಾಸ್ತಿಯಾಗುತ್ತದೆ. ಹಲವರಿಗೆ ಕೈ ಕಾಲು ಹಿಡಿದುಕೊಳ್ಳುತ್ತವೆ. ಅದೇ ಪರಿಣಾಮ ಹಲವರಿಗೆ ಬೇಸಿಗೆಯಲ್ಲಾಗು ತ್ತದೆ. ಆದರೆ ಎಲ್ಲರಿಗೂ ಒಂದೇ ರೀತಿಯ ಪರಿಣಾಮವಾಗುವುದಿಲ್ಲವೆಂದು ನೆನಪಿನಲ್ಲಿಟ್ಟುಕೊಳ್ಳಬೇಕು. ಶರೀರದ ಈ ಲಕ್ಷಣಗಳನ್ನು ಪಿತ್ತ, ಶೀತ, ಕಫ ಎಂದು ವೈದ್ಯಕೀಯ ಶಾಸ್ತ್ರದಲ್ಲಿ ಸ್ಥೂಲವಾಗಿ ವಿಂಗಡಿಸಲಾಗಿದೆ. ಆದರೂ ವ್ಯಕ್ತಿ ವ್ಯಕ್ತಿ ಗಳಲ್ಲಿ ಅದು ಭಿನ್ನಭಿನ್ನವಾಗಿ ಪ್ರಕಟವಾಗುತ್ತದೆ.

ಹಾಗೆಯೇ ಪ್ರತಿ ಶಿಶುವು ತಾಯಿಯ ಗರ್ಭದಿಂದ ಹೊರಬಂದ ಕಾಲದ ಮೇಲೆ, ಆ ಕಾಲ ಬೀರುವ ಪ್ರಭಾ ಕಿರಣಗಳ ಮೇಲೆ - ಒಂದು ಲೆಕ್ಕಾಚಾರವನ್ನು ನಮ್ಮವರು ಬರೆದಿಟ್ಟಿದ್ದಾರೆ. ಅದನ್ನೇ "ಜಾತಕ" ಎಂದು ಕರೆಯಲ್ಪಾಗುತ್ತದೆ.

ಅದರಿಂದ ವ್ಯಕ್ತಿಗಳಿಗೆ ಭವಿಷ್ಯದ ಬಗ್ಗೆ ಸ್ವಲ್ಪ ಮುನ್ಸೂಚನೆ ಗ್ರಹಿಸಲು ಸಾಧ್ಯವಾಗುತ್ತದೆ.

'ಜ್ಯೋತಿಷಿಗಳು ಹೇಳುವುದು ಹಲವಾರು ಸಲ ಸುಳ್ಳಾಗುತ್ತಿದೆಯಲ್ಲಾ' ಎಂಬ ಪ್ರಶ್ನೆ ಉದ್ಭವಿಸುತ್ತದೆ.

ಬಹಳ ಮುಂದುವರೆದುದು ಎಂದು ಹೇಳಲಾಗುತ್ತಿರುವ ವೈದ್ಯಶಾಸ್ತ್ರದ ಔಷಧಿಗಳು ಎಲ್ಲರಿಗೂ ಒಂದೇ ರೀತಿಯ ಪರಿಣಾಮ ಬೀರುತ್ತಿದೆಯೆ? ಯಾವ ವೈದ್ಯನೇ ಆಗಲಿ. ಔಷಧಿ ಕೊಡುವಾಗ ಒಂದು ಆಧಾರದ ಮೇಲೆ ಅದನ್ನು ನಿರ್ಧರಿಸುತ್ತಾನೆ. ಅದು ಕೆಲವೊಮ್ಮೆ ಕೆಲವರಿಗೆ ಪ್ರತಿಕೂಲವಾಗುವುದೂ ಉಂಟು. ಅವನು ನೀಡಿದ ಮದ್ದಿನಿಂದ ಗುಣವಾಗಲಿಲ್ಲವೆಂದ ಮಾತ್ರಕ್ಕೆ ಅದು ಮದ್ದಿನ ತಪ್ಪೂ ಅಲ್ಲ. ವೈದ್ಯರ ಅಪರಾಧವೂ ಅಲ್ಲ. ಭಿನ್ನ ಭಿನ್ನ ಪ್ರಕೃತಿಯೇ ಇದಕ್ಕೆ ಕಾರಣವೆಂದು ಎಲ್ಲರಿಗೂ ಗೊತ್ತು.

ಒಂದೆಡೆಗೆ ಗುಣವಾಗಲಿಲ್ಲವೆಂದು ಬೇರೆಡೆಗೆ ಹೋಗುತ್ತೇವಾಗಲಿ ವೈದ್ಯ ಶುಶ್ರೂಷೆಯನ್ನೇ ಬಿಟ್ಟುಬಿಡುವುದಿಲ್ಲ. ಹಾಗೆಯೇ ಜ್ಯೋತಿಷ್ಯ ಶಾಸ್ತ್ರ ಹೇಳುವುದೂ ಕೆಲವೊಮ್ಮೆ ತಪ್ಪುವುದುಂಟು. ನೋಡುವವರ ಯೋಗ್ಯತೆಯೂ ಹೆಚ್ಚು ಇರ ಬೇಕಾಗುತ್ತದೆ.

ಹಾಗೆ ನೋಡಿದರೆ ಯಾವ ಶಾಸ್ತ್ರ ಪರಿಪೂರ್ಣ? ಯಾವ ವಿಜ್ಞಾನ ಸಂಪೂರ್ಣ?

ಮಾನವ ಆಗಲೇ ತನಗೆ ಕಾಣದ ಒಂದು ಶಕ್ತಿ ಅವುಗಳ ಪರಿಣಾಮ ಒಪ್ಪಿ ಕೊಳ್ಳಲೇಬೇಕಾಗುತ್ತದೆ. ಅದು ಎಷ್ಟಾಗುತ್ತದೆ. ಯಾವಾಗ ಆಗುತ್ತದೆ ಎಂದು ತಿಳಿಯುವುದಕ್ಕೆ ಜ್ಯೋತಿಷ್ಯ ಶಾಸ್ತ್ರದ ಮೊರೆ ಹೋಗಬೇಕಾಗುತ್ತದೆ.

ದುರ್ದೈವದಿಂದ ಈ ಶಾಸ್ತ್ರ ಹೇಳಲು ಪ್ರವೇಶಿಸುವ ಅನೇಕರು ಆತುರದವರು ಅಜ್ಞಾನಿಗಳೂ ಆಗಿದ್ದರಿಂದ ಜನರಲ್ಲಿ ಅಪನಂಬಿಕೆ ಹೆಚ್ಚುತ್ತಾ ಸಾಗಿದೆ.

ಧಾಗಣ್ಣ ಚಿಂತಿಸಿದ.

ನಮ್ಮ ಹಿರಿಯರು ಬರೆದಿಟ್ಟ ಶಾಸ್ತ್ರಗಳ ಮಹತ್ತು ಜನರಿಗೆ ತಿಳಿಯಬೇಕು. ಅವರು ರಚಿಸಿದ ಗ್ರಂಥಗಳ ಆಧಾರದಿಂದ ನಾನೇನೋ ವೃತ್ತಿ ನಿರ್ವಹಿಸುತ್ತಿದ್ದೇನೆ. ನಾನು ಹೇಳಿದ್ದು ಸರಿಯಾಗುತ್ತಿದೆಯೆಂದು ಹಲವರು ನಂಬುತ್ತಿದ್ದಾರೆ. ಇದರಲ್ಲಿ ಜನರನ್ನು ಮೋಸ ಮಾಡುವ ಕ್ರಿಯೆ ಎಲ್ಲಿದೆ?

ಅಥವಾ ಈ ವೃತ್ತಿ ಜನತೆಯನ್ನು ಮೂಢ ನಂಬಿಕೆಯತ್ತ ಕರೆದೊಯ್ಯುವ ಕ್ರಮವಾಗಿದೆಯೇ ?

ಜನರಲ್ಲಿ ಕ್ರಿಯಾಶಕ್ತಿಯನ್ನು ಅರಳಿಸುವುದು ವಿದ್ಯೆ. ಬದುಕಿನಲ್ಲಿ ಸ್ಫೂರ್ತಿ ತುಂಬುವುದು ಶಾಸ್ತ್ರ!

ಈಗಿನ ನಮ್ಮ ಸಾಮಾಜಿಕ ಸ್ಥಿತಿ ಹೇಗಿದೆ? ಎಲ್ಲೆಲ್ಲಿಯೂ ಸಣ್ಣಪುಟ್ಟ ರಾಜ್ಯಗಳು. ಒಬ್ಬರ ಮೇಲೆ ಮತ್ತೊಬ್ಬರ ಆಕ್ರಮಣ. ಪರಸ್ಪರರಲ್ಲಿ ಕೊಲೆ ಸುಲಿಗೆ! ಒಬ್ಬರ ಮೇಲೆ ಒಬ್ಬರಿಗೆ ನಂಬಿಕೆಯಿಲ್ಲ. ಯಾರೊಬ್ಬರಿಗೂ ಭದ್ರತೆಯ ಭರವಸೆಯಿಲ್ಲ. ಹೀಗಾಗಿ ಬದುಕಿನಲ್ಲಿ ನಂಬಿಕೆ ಕಳೆದುಕೊಳ್ಳುತ್ತಿದ್ದಾರೆ. ಶಾಸ್ತ್ರಾಧ್ಯಯನದಿಂದ ಅವರ ಪರಿ ಅರಿತುಕೊಂಡು, ಅವರಿಗೆ ಸರಿದಾರಿ ತೋರುತ್ತಾ ಅವರ ಬದುಕಿನಲ್ಲಿ ಸ್ಫೂರ್ತಿ ತುಂಬಬೇಕು. ತಪ್ತ ಮನಸ್ಸಿಗೆ ಸಾಂತ್ವನ ದೊರಕಿಸುವ ಹೊಣೆ ಜ್ಯೋತಿಷ್ಯ ಶಾಸ್ತ್ರದ ಪರಿಣತರ ಮೇಲೆ ಇರುತ್ತದೆ.

ನಮ್ಮ ಜನಗಳ ರೀತಿಯೇ ವಿಚಿತ್ರ. ಬದುಕಿನಲ್ಲಿ ಕಷ್ಟಗಳು ಎದುರಾದಾಗ ಅದರಲ್ಲಿ ತಮ್ಮ ಶಕ್ತಿಗೆ ಮೀರಿದ ಬೇರೊಂದು ಶಕ್ತಿಯ ಕೈವಾಡ ಕಂಡು ಗ್ರಹಗಳ ಪೀಡೆ ಎಂದು ಒಪ್ಪಿಕೊಳ್ಳುತ್ತಾರೆ. ಆದರೆ ಅದಕ್ಕೆ ಪರಿಹಾರವೂ ಇದೆಯೆಂದು ಮಾತ್ರ ಒಪ್ಪಿಕೊಳ್ಳುವುದಿಲ್ಲ. ಭಗವಂತನನ್ನು ನಿತ್ಯ ಸ್ಮರಿಸಿಕೊಂಡು ಅವನ ಲೀಲಾ ವಿನೋದಗಳನ್ನು ಗ್ರಹಿಸಿ ಅವನಲ್ಲಿ ಮೊರೆ ಹೋಗುವುದಾದರೆ ಆ ಕಾಣದ ಶಕ್ತಿಯ ಕೆಟ್ಟ ಪರಿಣಾಮ ಕಡಿಮೆಯಾಗುತ್ತದೆ ಎಂದು ಒಪ್ಪಿಕೊಳ್ಳುವಾಗ ಮಾತ್ರ ಹಿಂದೇಟು ಹಾಕುತ್ತಾರೆ.

ಕಾಣದ ಕೆಟ್ಟಶಕ್ತಿಯನ್ನು ಒಪ್ಪಿಕೊಳ್ಳುತ್ತಾರೆ. ಪ್ರತಿಕ್ಷಣವೂ ತನ್ನ ಇರುವನ್ನು ಸಾರುತ್ತಿರುವ ಪರಮಾತ್ಮನ ಶಕ್ತಿಗೆ ಮಾತ್ರ ಸಂಶಯಿಸುತ್ತಾರೆ. ದೆವ್ವ ಭೂತಗಳ ಬಗ್ಗೆ ಇರುವ ನಂಬಿಕೆ ಹರಿಗುರುಗಳಲ್ಲಿ ತೋರುವುದಿಲ್ಲ. ಕೆಟ್ಟದ್ದಕ್ಕೆ ನಮಸ್ಕರಿಸುವಷ್ಟು ನಿಷ್ಠೆಯನ್ನು ಜಗತ್ ಶ್ರೇಷ್ಠನಲ್ಲಿ ತೋರುವುದಿಲ್ಲ. ಜನತೆಯಲ್ಲಿ ವ್ಯಾಪಿಸಿರುವ ಈ ಮೂಢತೆಯನ್ನು ಓಡಿಸಿ ದೃಢ ಭಕ್ತಿಯ ಹಿರಿಮೆಯನ್ನು ಎತ್ತಿ ಹಿಡಿಯಲು ತನಗೆ ದೊರೆತ ಈ ವೃತ್ತಿ ಉತ್ತಮ ಮಾಧ್ಯಮ

ಎಂದು ಭಾಗಣ್ಣ ನಿರ್ಧರಿಸಿದ. ಆದ್ದರಿಂದಲೇ ಅವನು ತನ್ನ ವೃತ್ತಿಯಲ್ಲಿ ಭಗವಂತನ ಶ್ರೇಷ್ಠತ್ವವನ್ನು ಬಿಂಬಿಸುವುದನ್ನು ಎಂದೂ ಮರೆಯಲಿಲ್ಲ.

ಆಧ್ಯಾತ್ಮ ಎಂದರೆ ಬದುಕಿನಿಂದ ಭಿನ್ನವಾದುದೆಂದು ಅವನು ಎಂದೂ ಭಾವಿಸಲಿಲ್ಲ. ಅಥವಾ ಜೀವನದ ವೃದ್ಧಾಪ್ಯದಲ್ಲಿ ತೆಗೆದುಕೊಳ್ಳುವ ಒಂದು ಸಾಮಾನ್ಯ ಹವ್ಯಾಸವೆಂದು ಪರಿಗಣಿಸಲಿಲ್ಲ. ಆಧ್ಯಾತ್ಮ ಎನ್ನುವುದು ಒಂದು ವೃತ್ತಿಯಲ್ಲ. ಒಂದು ಹವ್ಯಾಸವಲ್ಲ ಅದು ಬದುಕಿನೊಂದಿಗೆ ಸಮಸಮವಾಗಿ ಹೆಣೆದುಕೊಂಡ ಒಂದು ಪರಿ ಎಂಬುದನ್ನು ಜನತೆಯಲ್ಲಿ ಬಿಂಬಿಸಲು ಅವನ ಪ್ರಯತ್ನ ನಡೆದಿತ್ತು.

ಒಮ್ಮೆ ಭಾಗಣ್ಣನ ಬಳಿ ಒಬ್ಬ ಕಣಿ ಕೇಳಲು ಬಂದ. ಬದುಕನ್ನು ಪೀಡಿಸುತ್ತಿರುವ ನಿತ್ಯ ಚಿಂತೆ ಅವನದು. ಪ್ರತಿದಿನವೂ ಅವನಿಗೆ ತಲೆಶೂಲಿ. ಬಹಳ ಕಾಲದಿಂದ ಅವನನ್ನು ಬಾಧಿಸುತ್ತಿತ್ತು. ಏನೆಲ್ಲಾ ವೈದ್ಯಚಿಕಿತ್ಸೆ ಮಾಡಿಸಿದ್ದರೂ ಅದರಿಂದ ಗುಣವಾಗಿರಲಿಲ್ಲ.

ಅವನು ಬಹಳ ವೇದನೆಯಿಂದ ಅದನ್ನು ಹೇಳಿದ. ಭಾಗಣ್ಣ ಲೆಕ್ಕಾಚಾರ ಹಾಕಿ ನೋಡಿದ. ವೈದ್ಯಶಾಸ್ತ್ರದ ವಿಚಾರಗಳನ್ನೂ ಪರಿಶೀಲಿಸಿ ಕಡೆಗೆ ಹೇಳಿದ.

"ನೋಡಪ್ಪಾ, ನಿನಗೆ ಒಂದು ಯಂತ್ರವನ್ನು ಬರೆದು ಕೊಡುತ್ತೇನೆ. ಅದನ್ನು ಎದುರಿನಲ್ಲಿ ಇಟ್ಟುಕೊಂಡು 'ಓಂ ನಮೋ ವೆಂಕಟೇಶಾಯ' ಎಂದು ಮೊದ ಮೊದಲು ಗಟ್ಟಿಯಾಗಿ ಉಚ್ಚರಿಸುತ್ತಾ, ಕ್ರಮೇಣ ಮನಸ್ಸಿನಲ್ಲೇ ಅದನ್ನು ದಿನಕ್ಕೆ ಸಾವಿರ ಸಲ ಜಪಿಸಿ ಮೂರನೇ ದಿನ 'ಬಾ' ಎಂದು ಭರವಸೆ ಕೊಟ್ಟು ಕಳಿಸಿದ.

ಮೂರನೇ ದಿನ ಅವನು ಬಂದಾಗ ಅವನ ಮುಖ ಹರ್ಷದಲ್ಲಿ ಅರಳಿತ್ತು. ತೃಪ್ತಿಯ ಭಾವ ತುಂಬಿತ್ತು.

'ನೀವು ಹೇಳಿದಂತೆ ಮಾಡಿದೆ ಸ್ವಾಮಿ, ತಲೆನೋವು ನಿಂತು ಹೋಗಿದೆ' ತುಂಬು ಸಂತೋಷದಿಂದ ಅವನು ಹೇಳಿದ.

ಭಾಗಣ್ಣನಿಗೂ ಕೇಳಿ ಹರ್ಷವಾಯಿತು. ಮಂತ್ರವನ್ನು ಇನ್ನೂ ಕೆಲವು ಕಾಲ ಪಠಿಸು, ನಿನಗೆ ಶುಭವಾಗುತ್ತದೆ ಎಂದು ಹೇಳಿ ಆಶೀರ್ವದಿಸಿ ಕಳಿಸಿದ. ಈ ವಿಷಯವನ್ನು ಅಲ್ಲಿಯೇ ಕುಳಿತು ಕೇಳುತ್ತಿದ್ದ ಭಾಗಣ್ಣನ ತಮ್ಮ ದಾಸಣ್ಣನಿಗೆ ಆಶ್ಚರ್ಯವಾಯಿತು. ಇತ್ತೀಚಿಗೆ ದಾಸಣ್ಣ ಅಣ್ಣನ ಚರ್ಯೆಯನ್ನು ಬಹು ಆಸಕ್ತಿಯಿಂದ ಗಮನಿಸುತ್ತಿದ್ದ. ಅವರು ಕಣಿ ಹೇಳುತ್ತಿದ್ದ ರೀತಿ, ಕೇಳಿ ಹೋದವರು

ವಾಪಸ್ ಬಂದು 'ಹೇಳಿದಂತೆ ಘಟಿಸಿತು' ಎಂದು ಒಪ್ಪಿಸುತ್ತಿದ್ದ ವರದಿ ಕೇಳಿ ಅವನಿಗೆ ಆಶ್ಚರ್ಯವಾಗುತ್ತಿತ್ತು.

'ಓಂ ನಮೋ ವೆಂಕಟೇಶಾಯ' ಎಂದು ಪಠಿಸಿದವನು ತಲೆನೋವು ಹೋಯಿತೆಂದು ಹೇಳಿವಾಗ ದಾಸಣ್ಣನಿಗೆ ಬಹಳ ಅಚ್ಚರಿ. ಅದಕ್ಕೆ ಅಷ್ಟೊಂದು ಶಕ್ತಿಯಿದೆಯೇ ಎಂಬ ಸಂಶಯ. ಅಣ್ಣನನ್ನು ಈ ಬಗ್ಗೆ ನೇರವಾಗಿ ಪ್ರಶ್ನಿಸಿಯೇ ಬಿಟ್ಟ.

"ಅಲ್ಲಣ್ಣಾ. ಭಕ್ತಿಯಿಂದ ಸ್ಮರಿಸಿದರೆ ಜಗದೊಡೆಯನಾದ ನಮ್ಮ ವೆಂಕಟ ರಮಣ ಎಲ್ಲಾ ಕಷ್ಟಗಳನ್ನು ಪರಿಹರಿಸಿ ಇಷ್ಟಾರ್ಥಗಳನ್ನು ಕೊಡುತ್ತಾನೆ ಎಂದೇನೋ ಒಪ್ಪಿಕೊಳ್ಳೋಣ. ಆದರೆ ಈಗ ಹೋದವನಿಗೆ ಭಕ್ತಿಯ ಗಂಧವೇ ಗೊತ್ತಿಲ್ಲ. ದೇವರ ಸ್ಮರಣೆಯ ಮಹಿಮೆ ಅರಿತಿಲ್ಲ ಅಂಥವನಿಗೆ ಮಂತ್ರ ಪಠಿಸಿದ್ದರಿಂದ ಗುಣ ಆಗಲು ಹೇಗೆ ಸಾಧ್ಯ?"

"ನಮ್ಮ ಹಿರಿಯರು ರಚಿಸಿರುವ ಮಂತ್ರಗಳು ನಿರ್ಜೀವ ಅಕ್ಷರಗಳೆಂದು ಭಾವಿಸಿದ್ದೀಯಾ ದಾಸಣ್ಣಾ, ಅವಕ್ಕೆ ಅಷ್ಟು ಶಕ್ತಿಯಿಲ್ಲದಿದ್ದರೆ ಪಠಿಸಲು ನಮ್ಮ ಹಿರಿಯರು ಹೇಳುತ್ತಲೇ ಇರಲಿಲ್ಲ. ಅಕ್ಷರ ಸಂಯೋಜನೆಯಲ್ಲಿ ಒಂದು ನಿಯಮವನ್ನು ಅವರು ಪಾಲಿಸಿಕೊಂಡು ಬಂದಿದ್ದಾರೆ. ಒಂದು ಕ್ರಮದಲ್ಲಿ ಮನಸನ್ನು ನಡೆಸಿಕೊಂಡು ಹೋಗುವ ಶಕ್ತಿ ಈ ಅಕ್ಷರಗಳ ಸಂಯೋಜನೆಯಲ್ಲಿದೆ. ಅವನ್ನೆ 'ಮಂತ್ರ' ಎಂದು ನಾವು ಕರೆಯುತ್ತೇವೆ. ಮಂತ್ರಗಳ ಪಠಣೆಯಿಂದ ದೇವರು ಒಲಿಯುತ್ತಾನೆ ಎನ್ನುವುದೇನೋ ನಿಜ. ಜೊತೆಗೆ ಶರೀರದ ಅನೇಕ ನರನಾಡಿಗಳು ಶುದ್ಧಿಗೊಂಡು ಸಕ್ರಮಗೊಳ್ಳುತ್ತವೆ ಎನ್ನುವುದನ್ನೂ ನಾವು ಮರೆಯಬಾರದು. ಮಂತ್ರೋಚ್ಚಾರಣೆಯಿಂದ ಕೇವಲ ಅಲೌಕಿಕ ಲಾಭವಷ್ಟೇ ಅಲ್ಲ. ಲೌಕಿಕ ಲಾಭವೂ ಕಾಣುತ್ತದೆ."

'ಅದು ಹೇಗೆ ಸಾಧ್ಯ' ದಾಸಣ್ಣನ ಕುತೂಹಲ ಪ್ರಶ್ನೆ.

"ಇಲ್ಲಿ ನೋಡು ದಾಸಣ್ಣಾ, 'ಓಂ' ಎನ್ನುವುದು ನೋಡುವುದಕ್ಕೆ ಒಂದು ಅಕ್ಷರ ಮಾತ್ರ. ಇದರ ಉಚ್ಚಾರವನ್ನು ನೀನು ನಿಧಾನವಾಗಿ ಮಾಡು. ಸರಿಯಾದ ರೀತಿಯಲ್ಲಿ ಕುಳಿತುಕೊಂಡು ಭಾಗಣ್ಣ ಹೇಳಿಕೊಟ್ಟ ರೀತಿಯಲ್ಲಿ ಅದನ್ನು ನಿಧಾನವಾಗಿ ಉಚ್ಚರಿಸಿದ.

ಅಬ್ಬಾ! ಹಿಡಿದುಕೊಂಡಿದ್ದ ತಲೆಯ ಮೆದುಳು ಕೊಡವಿ ಎದ್ದಂಥ ವಿಚಿತ್ರ ಅನುಭವ.

ಮತ್ತೆ ಹೇಳಿದ

"ಓಂ"

ದೇಹದ ನರನಾಡಿಗಳೆಲ್ಲಾ ಉದ್ದೀಪನಗೊಳ್ಳುತ್ತಿವೆಯೇನೊ ಎಂಬ ಅನಿಸಿಕೆ.

ಭಾಗಣ್ಣ ಆಗಲೇ ತಮ್ಮನಿಗೆ ಬಿಡಿಸಿ ಹೇಳಿದ. "ನಮೋ ವೆಂಕಟೇಶಾಯ' ಎನ್ನುವುದರಿಂದ ನಿನ್ನ ತುಟಿ ನಾಲಿಗೆಗಳು ಹೇಗೆ ಚಲಿಸುತ್ತವೆ ಎಂದು ಪರಿಶೀಲಿಸಿ ನೋಡು. ಮುಖದ ನರಮಂಡಲಕ್ಕೆ ಅದರಿಂದಾಗುವ ಉಪಯೋಗದ ಅರಿವು ನಿನಗೆ ಹೊಳೆಯಲಿಕ್ಕೆ ಸಾಕು."

"ಹೌದು, ಹೌದು" ಎಂದ ದಾಸಣ್ಣ.

ಹಾಗೆಯೇ ಈಗ ಬಂದವರು ಏಕಾಗ್ರತೆಯಿಂದ ಆ ಮಂತ್ರ ಪಠಿಸಿರಬೇಕು ಮುಖದ ನರನಾಡಿಗಳು ಮೌನೋಚ್ಚಾರದಿಂದ ಮೆದುಳಿನಲ್ಲಿ ಉಂಟಾದ ತರಂಗದ ಫಲವಾಗಿ ನಾಡಿಶುದ್ಧಿಯಾಗಿರಬೇಕು ಅದರಿಂದ ಆತನ ತಲೆನೋವು ಗುಣವಾಗಿದೆ. ಎಂದು ಹೇಳಿ ಭಾಗಣ್ಣ ಮುಗುಳ್ನಕ್ಕ.

ಎಷ್ಟು ವಿಶಾಲ ದೃಕ್ಪಥದಿಂದ ನಮ್ಮ ಮಂತ್ರಗಳು ರಚಿಸಲ್ಪಟ್ಟಿವೆ ಎಂಬ ವಿಷಯ ಹೊಳೆದು ದಾಸಣ್ಣ ಆಶ್ಚರ್ಯಪಟ್ಟ.

"ಅಷ್ಟಕ್ಕೇ ಸೀಮಿತವಲ್ಲ ಮಂತ್ರದ ಉಪಯೋಗ. ಇನ್ನೂ ಅದರ ವ್ಯಾಪ್ತಿ ಬಹಳ ವಿಶಾಲವಾದುದು. ಆದರೆ ಈ ಮೇಲ್ನೋಟದ ಉಪಯೋಗವನ್ನಷ್ಟೇ ನೀನು ತಿಳಿದುಕೊಂಡರೆ ಸಾಕು. ಮಿಕ್ಕ ಅಲೌಕಿಕ ಉಪಯೋಗ ಅನುಭವದಿಂದ ಅರಿವಾಗುತ್ತದೆಯೇ ವಿನಹ ಶಬ್ದಗಳಿಂದ ಬಿಡಿಸಿ ಹೇಳಲಾಗುವುದಿಲ್ಲ. ಹೀಗೆಯೇ ನಮ್ಮ ಮಂತ್ರಗಳೆಲ್ಲಾ ಇಹಪರಗಳೆರಡರ ಶ್ರೇಯಸ್ಸನ್ನು ಗಮನಿಸಿಯೇ ಸಂಯೋಜಿಸಲ್ಪಟ್ಟಿವೆ."-- ಭಾಗಣ್ಣ ಬಿಡಿಸಿ ಬಿಡಿಸಿ ಹೇಳಿದ.

ನಮ್ಮ ವಾಯುಸ್ತುತಿ ಪಠಿಸಿ ನೋಡು, ನಾಲಿಗೆ ಹೇಗೆ ಚುರುಕಾಗುತ್ತದೆ. ಶ್ರೀ ವಾದಿರಾಜರು ರಚಿಸಿರುವ ಅಶ್ವಧಾಟಿಯ ದಶಾವತಾರ ಸ್ತುತಿಯನ್ನು

ಕ್ರಮಬದ್ಧವಾಗಿ ಹಾಡಿ ನೋಡು. ಹಾಡಿದವನ ಹೃದಯ ಪುಷ್ಪಸಗಳು ಹೇಗೆ ಬಲಗೊಳ್ಳುತ್ತವೆ ಎನ್ನುವುದು ಅನುಭವಕ್ಕೆ ಬರುತ್ತದೆ. -ಭಾಗಣ್ಣ ಹೇಳುತ್ತಿದ್ದಂತೆಯೇ ಯಾರೋ ಇಬ್ಬರು ಅಲ್ಲಿಗೆ ಧಾವಿಸಿ ಬಂದರು. ಅವರ ಮುಖ ಭೀತಿಯಿಂದ ಬಿಳಿಚಿಕೊಂಡಿತ್ತು. ಅವರು ಕಂಪಿಸುತ್ತಿದ್ದರು. ಬಂದವರೇ ಭಾಗಣ್ಣನಿಗೆ ಅಡ್ಡಬಿದ್ದು ಹೇಳತೊಡಗಿದರು.

"ಭಾಗಣ್ಣಾ, ಈ ದಿನ ನಮ್ಮ ಮನೆಯಲ್ಲಿ ದೊಡ್ಡ ಹಾವೊಂದು ಪ್ರವೇಶಿಸಿ ಬಿಟ್ಟಿದೆ. ಅಡುಗೆಮನೆಯಲ್ಲಿ ಕುಳಿತು ಬುಸುಗುಟ್ಟುತ್ತಿದೆ. ಏನಾದರೂ ಮಾಡಿ ಅಲ್ಲಿಂದ ಅದನ್ನು ಕದಲಿಸಪ್ಪಾ, ಮಕ್ಕಳು ಮರಿಗಳು ತುಂಬಿರುವ ಮನೆ, ಹಾವು ಏಕೆ ಬಂದಿತೋ ಕಾರಣ ತಿಳಿಯಲಿಲ್ಲ."

ಸಮಾಧಾನದಿಂದ ಕೇಳಿದ ಭಾಗಣ್ಣ ಅವರು ಹೇಳುವುದನ್ನೆಲ್ಲಾ ಹೇಳಲು ಬಿಟ್ಟು ಕಡೆಗೆ ತನ್ನ ಪರಿಹಾರ ಸೂಚಿಸಿದ.

"ಗರುಡ ಮಂತ್ರ ಲಿಖಿಸಿರುವ ಈ ಯಂತ್ರವನ್ನು ಮನೆಗೆ ತೆಗೆದುಕೊಂಡು ಹೋಗಿ. ಹನುಮಂತ ದೇವರ ಮುಖ ಇರುವ ಗಂಟೆಯನ್ನು ಬಾರಿಸುತ್ತಾ ದೇವರ ಮನೆಯಲ್ಲಿ ಮಹಾಮಂಗಳಾರತಿ ಮಾಡಿ. ಸುಮಾರು ಹತ್ತು ಉಂಡೆಗಳ ಕರ್ಪೂರದ ಆರತಿ ಇರಲಿ. ಆಗ ನಾಗರಾಜ ನಿಮ್ಮ ಮನೆ ಬಿಟ್ಟು ಹೋಗುತ್ತಾನೆ. ಅವನು ಹೊರಗೆ ಹೋಗಲಿಕ್ಕೆ ಯಾರೂ ಅಡ್ಡಿ ಮಾಡಬೇಡಿ. ಗೋಡೆಯ ಬದಿಗುಂಟ ಅವನು ಹೋಗುವುದರಿಂದ ಯಾರೂ ಗೋಡೆಯ ಬದಿಗೆ ನಿಲ್ಲಬೇಡಿ. ಭಗವಂತನು ನಿಮಗೆ ಒಳ್ಳೆಯದು ಮಾಡುತ್ತಾನೆ."

ಭಾಗಣ್ಣನು ಸೂಚಿಸಿದ ಮಾರ್ಗವನ್ನು ವಿವರವಾಗಿ ಪಡೆದು - ನೀಡಿದ ಯಂತ್ರದೊಂದಿಗೆ ಅವರು ಮನೆಗೆ ಹೊರಟರು.

ಅವರು ಹೋದ ಮೇಲೆ ದಾಸಣ್ಣ ತನ್ನ ಅಣ್ಣನನ್ನು ಈ ಬಗ್ಗೆ ವಿವರ ಪ್ರಶ್ನಿಸಿದ.

"ಅಲ್ಲಣ್ಣಾ, ಹಾವು ಇರುವ ಮನೆಯಲ್ಲಿ ಧೈರ್ಯವಾಗಿ ಹೋಗಿ ಎಂದು ಕಳಿಸಿಬಿಟ್ಟೆಯಲ್ಲಾ, ಅಕಸ್ಮಾತ್ ಹಾವು ಅವರ ಮೇಲೆ ಎರಗಿ ಕಚ್ಚಿಬಿಟ್ಟರೆ...?"

ಭಾಗಣ್ಣ ಮುಗುಳ್ನಗುತ್ತಾ ಉತ್ತರಿಸಿದ "ಗರುಡ ಯಂತ್ರದಲ್ಲಿ ಅಷ್ಟೊಂದು ಪ್ರಭಾವವಿದೆಯಪ್ಪಾ, ಅದರಲ್ಲಿಯೂ ಮುಖ್ಯ ಪ್ರಾಣನ ಮುಖ ಇರುವ ಗಂಟೆಯ

ನಾದದಿಂದ ಅದಕ್ಕೆ ಹೋಗು ಎನ್ನುವ ಆದೇಶ ದೊರೆಯುತ್ತದೆ. ಪರಮಾತ್ಮನಿಗೆ ಮಾಡಿದ ಮಂಗಳಾರತಿಯಿಂದ ಸಂತೃಪ್ತಿಗೊಂಡ ಅದು ಹೊರಟು ಹೋಗುತ್ತದೆ ಎನ್ನುವುದು ಆಧ್ಯಾತ್ಮ ಸತ್ಯ. ಅದನ್ನು ಒಪ್ಪಲಿ ಅಥವಾ ಬಿಡಲಿ ಇನ್ನೊಂದು ಲೌಕಿಕ ಸತ್ಯವನ್ನು ಅವರು ಗ್ರಹಿಸಬಹುದು. ಗಂಟೆಯ ಶಬ್ದ ಅದಕ್ಕೆ ಕಿರಿಕಿರಿಯಾಗುತ್ತದೆ. ಮಂಗಳಾರತಿ ಮಾಡುವಾಗ ಹೊರಡುವ ಧೂಮ ಅದಕ್ಕೆ ಆಗಲಿಕ್ಕಿಲ್ಲ. ಪೂಜೆ ಮಾಡುವಾಗ ಹೊರಡುವ ಧ್ವನಿತರಂಗಗಳು ಅದರ ಪ್ರಶಾಂತತೆಯನ್ನು ಕದಡುತ್ತಿರಬೇಕು. ಹೀಗಾಗಿ ಅದು ಅಲ್ಲಿಂದ ಹೊರಟು ಹೋಗುತ್ತದೆ. ಹೇಗೆ ಬೇಕಾದರೂ ಅವರು ತರ್ಕಿಸಲಿ."

"ಅವರು ಹೇಗೆ ಬೇಕಾದರೂ ತರ್ಕಿಸಲಿ ಅಣ್ಣಾ, ಅದರಲ್ಲಿ ಯಾವುದು ಸತ್ಯ?" ದಾಸಣ್ಣನ ಪ್ರಶ್ನೆ.

"ಎರಡೂ ಸತ್ಯ! ನೋಡುವವರ ಹೃದಯ ಗಮ್ಯವಾದುದು ಒಂದು, ಬುದ್ಧಿ ಗಮ್ಯವಾದುದು ಮತ್ತೊಂದು. ಯಾವುದಾದರೂ ಏನಂತೆ? ಹಾವು ಮನೆಯಿಂದ ಹೊರಗೆ ಹೋಗಬೇಕಾದ್ದಷ್ಟೇ ಎಲ್ಲರಿಗೂ ಬೇಕಾಗಿರುವುದು."

ಭಾಗಣ್ಣನ ವಿವರಣೆ ತೃಪ್ತಿ ತರಲಿಲ್ಲ ದಾಸಣ್ಣನಿಗೆ. ಇನ್ನೂ ಬಿಡಿಸಿ ಬಿಡಿಸಿ ಕೇಳುವ ಅಪೇಕ್ಷೆ. ತಮ್ಮನ ಕುತೂಹಲ ಅರಿತ ಭಾಗಣ್ಣನೇ ಬಿಡಿಸಿ ಹೇಳಿದ.

ಆಧ್ಯಾತ್ಮ ಸತ್ಯಕ್ಕೂ ಲೌಕಿಕ ಸತ್ಯಕ್ಕೂ ಅಷ್ಟೇನೂ ಭೇದವಿಲ್ಲ ದಾಸಣ್ಣಾ. ಅವರೆಡನ್ನು ಸಮನ್ವಯಿಸಿ ಸತ್ಯವನ್ನು ಅರಿಯುವುದಕ್ಕೆ ಸ್ವಲ್ಪ ಯೋಚನಾ ಶಕ್ತಿ ಬೇಕಾಗುತ್ತದೆ. ಕೆಲವಕ್ಕೆ ಹೊಳೆಯುತ್ತವೆ. ಕೆಲವೆಡೆ ಸ್ಪಷ್ಟ ಕಾರಣಗಳು ಬೇಗ ಹೊಳೆಯುವುದಿಲ್ಲ. ನಮಗೆ ತಿಳಿಯಲಿಲ್ಲ ಎಂದ ಮಾತ್ರಕ್ಕೆ ಅವು ಅಲ್ಲವೆಂದು ಹೇಳುವುದು ಅವಸರದ ಕ್ರಮವಾಗುತ್ತದೆ. ಗರುಡ ಮಂತ್ರ ಎಂದೊಡನೆ ನಿನಗೆ ಆಶ್ಚರ್ಯವಾಗುತ್ತಿದೆಯಲ್ಲವೆ? ಮಂತ್ರದ ಶಬ್ದಕ್ಕೆ ಅಷ್ಟೊಂದು ಶಕ್ತಿ ಇರುತ್ತದೆಯೇ ಎಂಬ ಸಂಶಯ ಬಾಧಿಸುತ್ತಿಲ್ಲವೆ?"

"ಹೌದು, ಹೌದು" ಎಂದ ದಾಸಣ್ಣ

ಕೂಡಲೇ ಭಾಗಣ್ಣ ರೇಗಿಬಿಟ್ಟ. "ನಿನ್ನ ತಲೆ, ಹೋಗು ಈಚೆಗೆ, ಪ್ರತಿಯೊಂದಕ್ಕೂ ಅಡ್ಡಪ್ರಶ್ನೆ. ಶುದ್ಧ ಅವಿವೇಕಿ ನೀನು, ಮುಠ್ಠಾಳ ನೀನು. ತಲೆ ಹರಟೆ ನಿನ್ನದು - ನಿನ್ನಂಥ ಅಲ್ಪನ ಪ್ರಶ್ನೆಗೆ ನಾನೇಕೆ ಉತ್ತರಿಸಬೇಕು?" ಭಾಗಣ್ಣನ ಈ ವಾಗ್ಧಾಳಿಗೆ

ಬೆದರಿಬಿಟ್ಟ ದಾಸಣ್ಣ. ತನ್ನ ಅಣ್ಣ ಹೀಗೆಂದೂ ಮಾತನಾಡಿರಲಿಲ್ಲ. ಪರಮ ಶಾಂತಮೂರ್ತಿಯಾದ ಅಣ್ಣನನ್ನು ರೇಗಿಸುವಂಥ ಪ್ರಶ್ನೆ ಕೇಳಿಬಿಟ್ಟೆನಲ್ಲಾ ಎಂದು ದಾಸಣ್ಣ ದುಃಖಿದಿಂದ ಮುದುಡಿಹೋದ. ತಾನು ಮಾಡಿದ್ದು ಮಹಾ ಅಪರಾಧ ಎಂಬ ಭಾವನೆ ಮೂಡಿ ನಾಚಿಕೆಯಿಂದ ತಲೆತಗ್ಗಿಸಿ ಹೊರಗೆ ಹೊರಟ.

ಹೋಗುತ್ತಿದ್ದ ತಮ್ಮನನ್ನು ಮತ್ತೆ ಕರೆದು ಭಾಗಣ್ಣ ಹೇಳಿದ.

"ಇನ್ನು ಮೇಲೆ ನಿನ್ನ ಮುಖವನ್ನು ತೋರಿಸಬೇಡ. ತೊಲಗಾಚೆ"

ಅಣ್ಣನ ಮಾತು ಕೇಳಿ ದಾಸಣ್ಣನಿಗೆ ದುಃಖ ತಡೆಯಲಾಗಲಿಲ್ಲ. ಭುಗಿಲೆದ್ದಿತು ಪಶ್ಚಾತ್ತಾಪದ ಕಿಡಿ.

ತಾಯಿ ವೆಂಕಮ್ಮನಿಗೂ ಭಾಗಣ್ಣನ ಈ ರೀತಿ ಕಂಡು ಆಶ್ಚರ್ಯ. ಮಗನು ಈ ರೀತಿ ಉಗ್ರನಾಗಿದ್ದನ್ನು ಅವಳೆಂದೂ ಕಂಡಿರಲಿಲ್ಲ. ಅವಳ ಮುಖದಲ್ಲಿ ದುಃಖದ ಛಾಯೆ ಆವರಿಸಿತ್ತು. ಇತರ ಇಬ್ಬರು ತಮ್ಮಂದಿರು ಭೀತಿಯಿಂದ ಮೂಲೆ ಸೇರಿದ್ದರು.

ಉಕ್ಕಿ ಬರುತ್ತಿದ್ದ ಕಣ್ಣೀರನ್ನು ತಡೆದುಕೊಳ್ಳುತ್ತಾ ದಾಸಣ್ಣ ಹೊರಗೆ ಹೋಗುತ್ತಿದ್ದ.

ಅಷ್ಟರಲ್ಲಿ ಭಾಗಣ್ಣ ಘೊಳ್ಳೆಂದು ನಕ್ಕು 'ದಾಸೂ' ಎಂದು ಪ್ರೀತಿಯಿಂದ ಕರೆದ. ಅವನ ಕರೆಯುವಿಕೆಯಲ್ಲಿರುವ ಅಪ್ಯಾಯತೆಯನ್ನು ಕಂಡು ದಾಸಣ್ಣನ ಮುಖದಲ್ಲಿ ಸಮಾಧಾನದ ಛಾಯೆ ಮೂಡಿತು. ಕೂಡಲೇ ಹಿಂದಿರುಗಿ ಅಣ್ಣನ ಕಾಲುಗಳನ್ನು ಹಿಡಿದು "ನನ್ನ ತಪ್ಪನ್ನು ಕ್ಷಮಿಸಿ ಬಿಡಣ್ಣಾ, ಇನ್ನೊಮ್ಮೆ ಹೀಗೆಂದೂ ಅಡ್ಡ ಪ್ರಶ್ನೆಗಳನ್ನು ಹಾಕುವುದಿಲ್ಲ" ಗದ್ಗದಿತ ಕಂಠದಿಂದ ಪ್ರಾರ್ಥಿಸಿದ ದಾಸಣ್ಣ.

"ತಪ್ಪು ! ಇದರಲ್ಲಿ ತಪ್ಪೇನಿದೆ ದಾಸಣ್ಣಾ? ಕ್ಷಮಿಸುವ ವಿಷಯವಾದರೂ ಏನಿದೆ?" ಮುಗುಳ್ನಗುತ್ತಾ ಭಾಗಣ್ಣ ಪ್ರಶ್ನಿಸಿದ.

"ನಾನು ಅಡ್ಡ ಪ್ರಶ್ನೆ ಹಾಕಿದ್ದು ನಿಮಗೆ ಕೋಪ ತರಿಸಲಿಲ್ಲವೆ?" ಆಶ್ಚರ್ಯದಿಂದ ಕೇಳಿದ ದಾಸಣ್ಣ.

"ಇಲ್ಲ"

"ಹಾಗಾದರೆ ನೀವು ರೇಗಿದ್ದು ಏಕೆ?"

"ಇಲ್ಲವಲ್ಲಾ, ನಾನೆಲ್ಲಿ ರೇಗಿದ್ದೇನೆ?"

"ಏನು ನೀವು ಕೋಪಗೊಳ್ಳಲಿಲ್ಲವೆ?"

"ಇಲ್ಲ"

"ಮತ್ತೇಕೆ ಆ ರೀತಿ ನಿಂದಿಸಿದಿರಿ"

"ಎಲ್ಲಿ? ನಾನು ನಿಂದಿಸಿಯೇ ಇಲ್ಲವಲ್ಲಾ"

ದಾಸಣ್ಣನಿಗೆ ಆಶ್ಚರ್ಯವಾಗಿ ಹೋಯಿತು.

ಭಾಗಣ್ಣನೇ ಬಿಡಿಸಿ ಹೇಳಿದ

"ದಾಸೂ, ಧರ್ಮ, ಆಚಾರ, ವಿಚಾರ ಇವುಗಳ ಬಗ್ಗೆ ಪ್ರಶ್ನಿಸಿದಾಗ ನಾನು ಎಂದಾದರೂ ಸಂಯಮ ಕಳೆದುಕೊಂಡಿದ್ದೇನೆಯೇ? ಅಂಧರಾಗಿ ಅನುಸರಿಸಿ ಎಂದು ನಾನು ಎಂದೂ ಹೇಳುವುದಿಲ್ಲ. ನಾನಷ್ಟೇ ಅಲ್ಲ, ನಮ್ಮ ಶ್ರೀ ಮಧ್ವಾಚಾರ್ಯರ ಸಿದ್ಧಾಂತವೇ ಹಾಗೆ ಪ್ರಶ್ನಿಸುವುದನ್ನು ಸ್ವಾಗತಿಸುತ್ತದೆ. ಶ್ರೀಮಧ್ವಾಚಾರ್ಯರು ಇಪ್ಪತ್ತೊಂದು ಭಾಷ್ಯಗಳ ಮೇಲೆ ವಾದ ಮಾಡಿ ತಾವು ಕಂಡ ಸತ್ಯವನ್ನು ಮೂವತ್ತೇಳು ಗ್ರಂಥಗಳಲ್ಲಿ ಸ್ಪಷ್ಟವಾಗಿ ಪ್ರತಿಪಾದಿಸಿದ್ದಾರೆ. ಸುಮ್ಮನೆ ಅನುಸರಿಸಿ ಎಂದು ಹೇಳುವುದಾದರೆ ಅಷ್ಟೊಂದು ಗ್ರಂಥಗಳಲ್ಲಿ ವಿವರಿಸುತ್ತಿದ್ದರೇಕೆ? ಅವರಷ್ಟೇ ಅಲ್ಲ, ಅವರ ನಂತರ ಹಲವಾರು ಲೋಕೋದ್ಧಾರಕ ವ್ಯಕ್ತಿಗಳು, ದೇವತೆಗಳು ಅವತಾರವೆತ್ತಿ ಈ ಗ್ರಂಥಗಳ ಸಾರವನ್ನು ವಿವರಿಸಲಿ ಎಂದು ಹೇಳಿ ಹೋಗಿದ್ದಾರೆ. ಜನರ ಜಿಜ್ಞಾಸೆಯನ್ನು ತಣಿಸುವುದಕ್ಕಾಗಿಯೇ ಶ್ರೀ ಜಯತೀರ್ಥರು, ಶ್ರೀ ಶ್ರೀಪಾದ ರಾಜರು, ಶ್ರೀ ಚಂದ್ರಿಕಾಚಾರ್ಯರು, ಶ್ರೀ ವಾದಿರಾಜರು, ಶ್ರೀ ರಾಘವೇಂದ್ರ ಗುರು ಸಾರ್ವಭೌಮರು ಅಷ್ಟೇಕೆ, ನೂರಾರು ಜನ ಯತಿ ಶ್ರೇಷ್ಠರು, ಸಾವಿರಾರು ಜನ ವಿದ್ವಾಂಸರು ಅವತಾರವೆತ್ತಿ ಶ್ರೀ ಮಧ್ವಾಚಾರ್ಯರ ತತ್ವಗಳಿಗೆ ವಿವರಣೆ ಕೊಡುತ್ತಲೇ ಇದ್ದಾರೆ. ಮುಕ್ತ ಚಿಂತನೆಗೆ ಹಾದಿ ಮಾಡಿಕೊಡುವ ಶ್ರೇಷ್ಠ ತತ್ವವೋ ನಮ್ಮದು! ಹೀಗಿರುವಾಗ ತಿಳಿಯಬೇಕೆಂಬ ತವಕದಿಂದ ಕೇಳುವ ನಿನ್ನ ಧಾರ್ಮಿಕ ಪ್ರಶ್ನೆಗೆ ನಾನು ಕೋಪಗೊಳ್ಳುವುದುಂಟೆ?"

"ಮತ್ತೆ ಹಾಗಾದರೆ ತೊಲಗಾಚೆ, ಮುಠ್ಠಾಳ ಎಂಬ ಶಬ್ದಗಳನ್ನು ಬಳಸಿದ್ದೇಕೆ?" ದಾಸಣ್ಣನ ಪ್ರಶ್ನೆ. "ಈ ಸಾಮಾನ್ಯ ಶಬ್ದಗಳಿಗೆ, ನಿನ್ನ ಮನಸ್ಸು ಅಷ್ಟೊಂದು

ನೊಂದಿತು. ಮನದ ಶಾಂತಿ ಕದಡಿ ಕಣ್ಣಿನಲ್ಲಿ ನೀರು ಉಕ್ಕಿತು. ಈ ಪುಟ್ಟ ಶಬ್ದ ಗಳಿಗೇ ಅಷ್ಟೊಂದು ಪ್ರಭಾವವಿದೆಯಾದರೆ ತಲೆತಲಾಂತರಗಳಿಂದ ಜಪಿಸಿಕೊಂಡು ಬರುವ ಶಬ್ದಗಳ ಜೋಡಣೆಯಾದ ಮಂತ್ರಗಳಿಗೆ ಪ್ರಭಾವವಿಲ್ಲವೆಂದು ಹೇಗೆ ಭಾವಿಸುತ್ತಿ? ಅವಕ್ಕಿರುವ ಶಕ್ತಿಯನ್ನು ಗ್ರಹಿಸಬೇಕಾದರೆ ನಿಯಮಬದ್ಧವಾಗಿ ಜಪಿಸಿಯೇ ನೋಡಬೇಕು. ಈಗ ಉದಾಹರಣೆಗೆ ನೋಡು ಹಾವು ಅವರ ಮನೆಯಿಂದ ಹೊರಟು ಹೋಯಿತೆಂದು ಅವರೇ ಈಗ ಬಂದು ತಿಳಿಸುತ್ತಾರೆ.

"ಅಲ್ಲಣ್ಣಾ, ಒಂದು ವೇಳೆ ಹಾವು ಥಕ್ಕನೆ ಅವರ ಮೇಲೆ ಎರಗಿ ಕಚ್ಚಿಬಿಟ್ಟರೆ?" ದಾಸಣ್ಣ ಸಂಶಯಿಸುತ್ತಾ ಮೆಲ್ಲಗೆ ರಾಗವೆಳೆದು ಕೇಳಿದ.

"ಹಾವು ಅಷ್ಟು ಕ್ರೂರ ಜಂತು ಅಲ್ಲಪ್ಪಾ. ಹಾವಷ್ಟೇ ಅಲ್ಲ, ಯಾವ ಪ್ರಾಣಿಯೂ ಮನುಷ್ಯನಿಗೆ ಸುಮ್ಮಸುಮ್ಮನೆ ಹಾನಿ ಮಾಡುವುದಕ್ಕೆ ಬರುವುದಿಲ್ಲ. ಗೊತ್ತಿಲ್ಲದೆ ನಾವು ತುಳಿದಾಗ ಹಾವು ಪ್ರಾಣಭೀತಿಯಿಂದ ಕಡಿಯಬಹುದಷ್ಟೆ; ಅಜ್ಞಾನದಿಂದ ಅದು ಹಾನಿ ಮಾಡೀತು. ಆದರೆ ಜ್ಞಾನವಿರುವ ಮನುಷ್ಯನೆ ಅಲ್ಲದ ಮಾರ್ಗದಲ್ಲಿ ನಡೆದು ಬೇರೆಯವರ ಅಶಾಂತಿಗೆ ಕಾರಣನಾಗುತ್ತಿದ್ದಾನೆ" ಭಾಗಣ್ಣ ಇನ್ನೂ ಹೇಳುತ್ತಿದ್ದಂತೆಯೇ ಗರುಡಮಂತ್ರದ ಯಂತ್ರ ಬರೆಸಿಕೊಂಡು ಹೋದ ಜನರು ಕುಟುಂಬ ಸಹಿತರಾಗಿ ಬಂದು ಭಾಗಣ್ಣನಿಗೆ ಅಡ್ಡಬಿದ್ದರು.

"ನೀವು ಹೇಳಿದಂತೆ ಮಾಡಿದೆವು ಸ್ವಾಮಿ, ಜನರು ನೋಡು ನೋಡುತ್ತಿದ್ದಂತೆಯೇ ಹಾವು ಎಲ್ಲರ ಮುಂದೆ ಹರಿದು ಹೋಗಿಬಿಟ್ಟಿತು. ಎಂಥ ಯಂತ್ರ ಸ್ವಾಮಿ ಅದು ! ನಿಮ್ಮ ಯಂತ್ರವೇ ಯಂತ್ರ!" ಅವರು ಹೇಳಿದರು.

"ಹಾವುಗಳಲ್ಲಿ ದೊಡ್ಡ ಹಾವು ನಮ್ಮ ಶೇಷ ದೇವರು. ಆತನ ಮೇಲೆ ಪವಡಿಸಿರುವ ಪರಮಾತ್ಮ ಪರಮ ದಯಾಳುವಪ್ಪಾ. ಆತನ ಕೃಪೆಯಿದ್ದರೆ ಎಲ್ಲವೂ ಸಿದ್ಧಿಯೇ! ನಿತ್ಯವೂ ಆತನನ್ನು ಸ್ಮರಿಸಿ, ಆತ ನಿಮಗೆ ಒಳ್ಳೆಯದನ್ನೇ ಮಾಡುತ್ತಾನೆ." ಎಂದು ಭಾಗಣ್ಣ ಹೇಳಿದ.

ಬಂದವರು ಕೈ ತುಂಬಾ ನಾಣ್ಯವನ್ನು ತಂದಿದ್ದರು. "ನಮ್ಮ ಭೀತಿಯನ್ನು ಅಳಿಸಿದಿರಿ. ನಮ್ಮ ಮನೆಯಲ್ಲಿ ನಾವು ನಿರ್ಭೀತಿಯಾಗಿ ಓಡಾಡಿಕೊಂಡಿರುವುದಕ್ಕೆ ಅವಕಾಶ ಕಲ್ಪಿಸಿಕೊಟ್ಟಿರಿ. ಈ ಹಣವನ್ನು ಸ್ವೀಕರಿಸಿ ನಮ್ಮನ್ನು ಸಂತೋಷಪಡಿಸಿ" ಎಂದು ಆ ನಾಣ್ಯಗಳನ್ನು ಭಾಗಣ್ಣನ ಮುಂದೆ ಇಟ್ಟು ಅವರು ಮರಳಿದರು.

ಝಘಗಝಘಿಸುವ ನಾಣ್ಯ. ಕಣ್ಣಮುಂದೆ. ಹಣ ಕುಪ್ಪೆಯಾಗಿ ಕುಳಿತಿದೆ. ಭಾಗಣ್ಣ ನೋಡಿ ಮುಗುಳ್ನಕ್ಕ.

ಅಷ್ಟರಲ್ಲಿ ದೂರದ ಹಳ್ಳಿಯಿಂದ ಇಬ್ಬರು ಬ್ರಾಹ್ಮಣರು ಬಂದರು. ಅಂಗಾರ ವಿಲ್ಲದ ಅವರ ಹಣೆ, ಹಸಿವೆಯಿಂದ ಕಂಗಾಲಾಗಿದ್ದ ಮುಖ, ಒಣಗಿದ್ದ ತುಟಿ ಎಲ್ಲವನ್ನೂ ಭಾಗಣ್ಣ ಪರಿಶೀಲಿಸಿದ. ಅವರು ಬಂದ ಕ್ಷಣವನ್ನು ಭಾಗಣ್ಣ ಗುರುತು ಹಾಕಿಕೊಂಡ. ಏನೇನೋ ಲೆಕ್ಕಹಾಕಿ ತಾನೇ ಕಣಿ ಹೇಳಲು ಭಾಗಣ್ಣ ಪ್ರಾರಂಭಿಸಿದ. "ನೀವಿಬ್ಬರೂ ತಂದೆ ಮಕ್ಕಳಿದ್ದೀರಿ. ನಿಮ್ಮ ಮಗಳ ಮದುವೆ ನಿಶ್ಚಯವಾಗಿದೆ. ನಿಮ್ಮ ಊರಿನ ಸಾಹುಕಾರರು ಕೊಟ್ಟ ಆಶ್ವಾಸನೆಯ ಮೇಲೆ ಮದುವೆ ಹಮ್ಮಿಕೊಂಡಿರಿ. ಆಮೇಲೆ ಅವರು ಕೈ ತಿರುವಿಬಿಟ್ಟಿದ್ದಾರೆ. ಜೀವನದಲ್ಲಿ ಈಗ ಹೌಹಾರಿ ಬಿಟ್ಟಿದ್ದೀರಿ. ಮುಂದೆ ಗದ್ವಾಲದಲ್ಲಿ ಎಲ್ಲಿಯಾದರೂ ಸಾಲ ಸಿಕ್ಕುತ್ತ ದೇನೋ ಎಂದು ಹುಡುಕಿಕೊಂಡು ಹೊರಟಿದ್ದೀರಿ. ಆದರೆ ಗದ್ವಾಲದಲ್ಲಿ ಕೊಡಬಹುದೆಂದು ನೀವು ನಂಬಿಕೊಂಡು ಹೊರಟಿರುವ ಸಾಹುಕಾರರು ನಿಮಗೆ ಸಿಕ್ಕುವುದಿಲ್ಲ. ಅವರ ಬಳಿ ಈಗ ಹಣವೂ ಇಲ್ಲ. ಈಗೇನು ಮಾಡುತ್ತೀರಿ?" ಪ್ರಶ್ನಿಸಿ ಮುಗುಳ್ನಕ್ಕ ಭಾಗಣ್ಣ.

ತಮ್ಮ ಹಣೆ ಬರಹವನ್ನೆಲ್ಲಾ ಕಣ್ಣಾರೆ ಕಂಡಂತೆ ವಿವರಿಸಿದ ಭಾಗಣ್ಣನ ಜ್ಯೋತಿಷ್ಯಶಾಸ್ತ್ರದ ಪರಿಣತತ್ವ ಕಂಡು ಅವರು ಬೆರಗಾಗಿ ಹೋದರು.

ಭಾಗಣ್ಣ ಮುಂದುವರಿದು ಹೇಳಿದ.

"ಬಹಳ ಹಸಿದು ಬಂದಿದ್ದೀರಿ. ಮೊದಲು ಸ್ನಾನ ತೀರಿಸಿ ಊಟ ಮಾಡಿ. ಅನಂತರ ನಿಮ್ಮ ಸಮಸ್ಯೆಗೆ ಪರಿಹಾರವನ್ನು ಶ್ರೀ ವೆಂಕಟೇಶನೇ ತೋರುತ್ತಾನೆ" ಎಂದು ಹೇಳಿ ಊಟಕ್ಕೆಂದು ಮನೆಯೊಳಕ್ಕೆ ಕರೆದೊಯ್ದರು. ಎಲ್ಲರು ಊಟ ತೀರಿಸಿಕೊಂಡು ಹೊರಗೆ ಬರುವಷ್ಟರಲ್ಲಿ ಸಾಕಷ್ಟು ವೇಳೆಯಾಗಿತ್ತು.

ಭಾಗಣ್ಣನೊಬ್ಬನೇ ಒಳಗೆ ಹೋಗಿ ಮನೆಯನ್ನೆಲ್ಲಾ ಒಮ್ಮೆ ತಡಕಾಡಿ ಹಿಡಿ ತುಂಬ ನಾಣ್ಯದೊಂದಿಗೆ ಬಂದು ಆ ದಿನ ಬಂದದ್ದನ್ನೂ ಸೇರಿಸಿದ.

"ತೆಗೆದುಕೊಳ್ಳಿ ಈ ಧನವನ್ನು. ಇದರಿಂದ ನಿಮ್ಮ ಶುಭಕಾರ್ಯ ಮುಂದುವರಿಸಿ. ನಾಳೆ ಹಾಡಿದ್ದು ಇನ್ನು ಸ್ವಲ್ಪ ಹಣ ಬರುತ್ತದೆ. ನಮ್ಮ ದಾಸಣ್ಣನೊಂದಿಗೆ ನಿಮಗೆ ಹಣ ಕಳಿಸುವ ವ್ಯವಸ್ಥೆ ಮಾಡುತ್ತೇನೆ. ಆಗಬಹುದಷ್ಟೆ?"

ಭಾಗಣ್ಣನ ಮಾತನ್ನು ಬೇಗ ಅವರು ನಂಬಲಿಲ್ಲ. ಅನಂತರ ಅವನ ವಿಶಾಲ ಹೃದಯ ಕಂಡು ಆಶ್ಚರ್ಯಪಟ್ಟಿದ್ದು ಬಂದವರಿಗಿಂತ ಹೆಚ್ಚಾಗಿ ತಮ್ಮ ದಾಸಣ್ಣನೇ! ಹಾವಿನ ಸಂಕಟದಿಂದ ಪಾರಾದ ಗೃಹಸ್ಥರು ನೀಡಿದ ಹಣವನ್ನು ಅಣ್ಣ ಪಡೆದಾಗ ಅದು ದುರಾಸೆಯಾಯಿತು ಎಂಬ ಭಾವನೆ ಬಂದಿತ್ತು.

ಖರ್ಚು ಮಾಡಿದ ರೀತಿ ಕಂಡು ಅವನಿಗೆ ಆಶ್ಚರ್ಯದೊಂದಿಗೆ ಆನಂದವೂ ಆಯಿತು.

ಆ ದಿನ ಬಂದ ಹಣವಷ್ಟೇ ಅಲ್ಲ. ಹಿಂದಿನದನ್ನೂ ಸೇರಿಸಿ, ಮುಂದೆ ಕೂಡಿಸಿಯೂ ಕೊಡುವ ಸಾಲವನ್ನೂ ಹೊತ್ತಿದ್ದ ಅವರ ಅಣ್ಣ.

'ಬೇಕಿರಲಿ ಬೇಡಿರಲಿ; ಅಣ್ಣನಿಗೆ ಹಣ ಬರುತ್ತಿದೆ. ಬಂದ ಹಣವನ್ನು ಅವನು ಪಡೆಯುತ್ತಿದ್ದಾನೆ. ಪಡೆದದ್ದನ್ನು ಹೇಗೆ ವಿನಿಯೋಗಿಸುತ್ತಿದ್ದಾನೆ ಎನ್ನುವುದು ಮಾತ್ರ ಬಹು ಜನರಿಗೆ ಗೊತ್ತಾಗುವುದಿಲ್ಲ' ಎಂದೆನಿಸದೆ ಇರಲಿಲ್ಲ ದಾಸಣ್ಣನಿಗೆ.

ಹಣದ ಸ್ವಭಾವವೇ ವಿಚಿತ್ರ. ಬೇಕು ಬೇಕು ಎಂದು ಎಲ್ಲರೂ ಪರಿತಪಿಸುತ್ತಾರೆ. ಬಂದಾಗ ಮಾತ್ರ ಹಣದಿಂದ ಏನೆಲ್ಲಾ ಸತ್ಫಲ ಪಡೆಯಬಹುದೋ ಅದನ್ನು ಪಡೆಯುವುದರಲ್ಲಿ ವಿಫಲರಾಗುತ್ತಾರೆ.

ಭಾಗಣ್ಣನಿಗೆ ಮಾತ್ರ ಆ ತೊಂದರೆ ಪೀಡಿಸಲಿಲ್ಲ. ಹಣ ಬಂದಂತೆಲ್ಲಾ ಧಾರಾಳ ಗುಣವನ್ನೂ ಬೆಳೆಸಿಕೊಂಡ. ಬಡಬಗ್ಗರಿಗೆ ಕೈತುಂಬಾ ಹಂಚುತ್ತಿದ್ದ. ಅವರ ಮನೆಯಲ್ಲಿ ನಿತ್ಯ ಸಂತರ್ಪಣೆ. ಊರಿಗೆ ಬಂದವರೆಲ್ಲಾ ಅವರ ಮನೆಯಲ್ಲಿಯೇ ಉಣ್ಣಬೇಕು. ಧನವೂ ಹಾಗೆ ಬರತೊಡಗಿತು.. ಖರ್ಚು ಮಾಡಿದಂತೆಲ್ಲಾ ಬರುತ್ತಿತ್ತು. ಬಂದಂತೆಲ್ಲಾ ಖರ್ಚು ಮಾಡುತ್ತಿದ್ದ.

ತಾಯಿ ವೆಂಕಮ್ಮನಿಗೆ ಎಲ್ಲಿಲ್ಲದ ಸಂಭ್ರಮ. ಬಂದವರಿಗೆ ಬಡಿಸುವುದೆಂದರೆ ಆಕೆಗೆ ಎಣೆಯಿಲ್ಲದ ಆನಂದ. ತಾಯಿ ಹೆಚ್ಚು ದಣಿಯುವುದನ್ನು ಕಂಡು ಭಾಗಣ್ಣನೇ ಅಡುಗೆಯವರನ್ನು ನೇಮಿಸಿಕೊಂಡ. ಹಣ ಬರದಿದ್ದರೆ ಚಿಂತೆಯಿಲ್ಲ. ಬಂದ ಮೇಲೆ ಅದು ಉಳಿಯುತ್ತಿಲ್ಲ ಎಂದಾಗ ಮಾತ್ರ ಅನೇಕರು ಗಾಬರಿಗೊಳ್ಳುತ್ತಾರೆ. ವೆಂಕಮ್ಮನಿಗೂ ಬರುಬರುತ್ತಾ ಅದೇ ವ್ಯಾಧಿ ವ್ಯಾಪಿಸಿತು. ಮಗ ಕೈ ತುಂಬಾ ಸಂಪಾದಿಸುವುದನ್ನು ಕಂಡು ಆಕೆಗೆ ಆನಂದವಾದರೂ ಅದನ್ನು ಉಳಿಸಿಕೊಳ್ಳದೆ ವೆಚ್ಚ ಮಾಡುವುದನ್ನು ಕಂಡು ಆಕೆ ಭೀತಿಗೊಳ್ಳತೊಡಗಿದಳು.

ಯಾವಾಗಲೂ ಹೀಗೆ ಬರುತ್ತದೆಂಬ ಖಾತರಿಯೇನು? ಬಂದಾಗ ನಾಲ್ಕು ಕಾಸು ಉಳಿಸಿಕೊಳ್ಳಬೇಕೆಂದು ಆಕೆಯ ಯೋಚನೆ. ಮನೆಯ ಮುಕ್ತ ಸ್ಥಳದಲ್ಲಿ ಹಣ ಇಡುತ್ತಿದ್ದರಿಂದ ಅದನ್ನು ಆಕೆ ಹೇಗೆ ಬೇಕಾದರೂ ಬಳಸಬಹುದಿತ್ತು. ಮಗ ಮಾತು ಕೊಟ್ಟಿದ್ದ.

'ಬೇಡಿ ಬೇಡಿ ಬಳಲಿದ ನಿನ್ನ ಕೈಗಳು ನೀಡಿ ನೀಡಿ ದಣಿಯುವಂತೆ ಮಾಡುತ್ತೀನಮ್ಮಾ'

ನಡೆಸಿಬಿಟ್ಟ ವರಪುತ್ರ!

ಮೊದಮೊದಲು ಮಗನ ಧಾರಾಳ ಗುಣ ನೋಡಿ ಆನಂದಿಸುತ್ತಿದ್ದ ವೆಂಕಮ್ಮ ಬಂದಿದ್ದನ್ನೆಲ್ಲಾ ವ್ಯಯಿಸುತ್ತಿರುವ ರೀತಿ ಕಂಡು ಹೆದರತೊಡಗಿದಳು.

"ಅಲ್ವೋ, ದಾನಧರ್ಮ ಮಾಡಬೇಕು, ಜೊತೆಗೆ ಸಂಸಾರದ ಯೋಚನೆಯನ್ನೇ ಬಿಟ್ಟರೆ ಹೇಗೋ? ನಾಳೆ ನಿನ್ನ ತಮ್ಮಂದಿರ ಉಪನಯನವಾಗಬೇಕು, ಮದುವೆಗಳಾಗಬೇಕು."

"ಅಮ್ಮಾ.... " ಮಧ್ಯದಲ್ಲಿಯೇ ಉಚ್ಚರಿಸಿ ತಾಯಿಯ ಮಾತನ್ನು ತಡೆದ ಭಾಗಣ್ಣ.

ಮದುವೆಯ ವಿಷಯವನ್ನೆತ್ತಿದಾಗಲೆಲ್ಲಾ ಭಾಗಣ್ಣನದು ಇದೇ ಪರಿ.

ತಾಯಿಗೆ ಮಾತ್ರ ಮಗನು ಮದುವೆಯ ವಿಷಯ ಹಾರಿಬಿಡುತ್ತಿದ್ದಾನೆಂಬ ಕಲ್ಪನೆಯೇ ಬರಲಿಲ್ಲ. ಉಳಿದ ಮೂರು ಮಕ್ಕಳಿಗೆ ಉಪನಯನವಾಗಿಲ್ಲವೆಂಬ ಚಿಂತೆ ಆಕೆಗೆ, ಆದರೆ ಭಾಗಣ್ಣ ಬಂದ ಹಣವನ್ನೆಲ್ಲಾ ಹೀಗೆ ವ್ಯಯಿಸುತ್ತಿದ್ದರೆ ಉಪನಯನಾದಿ ಖರ್ಚಿನ ಕಾರ್ಯಕ್ರಮಗಳನ್ನು ನಿರ್ವಹಿಸುವುದು ಹೇಗೆ ಎಂಬ ಯೋಚನೆ ಶುರುವಾಗಿತ್ತು.

ಮಗ ಎಷ್ಟೇ ಪ್ರಸಿದ್ಧನಿರಲಿ, ಎಷ್ಟೇ ಬುದ್ಧಿವಂತನೆಂದು ಜನರಿಂದ ಹೊಗಳಿಸಿಕೊಳ್ಳಲಿ, ತಾಯಿಗೆ ಅದನ್ನು ಕೇಳಿಯೇನೋ ತೃಪ್ತಿ. ಇನ್ನೂ ಕೇಳಬೇಕೆಂಬ ಅಪೇಕ್ಷೆ. ಆದರೂ ತಮ್ಮ ಮಗನಿಗೆ ಸರಿಯಾಗಿ ಗೊತ್ತಾಗುವುದಿಲ್ಲ ಎಂಬ ಅಭಿಪ್ರಾಯ ಎಲ್ಲಾ ತಾಯಂದಿರಿಗೂ ಇರುತ್ತದೆ.

ಭಾಗಣ್ಣನು ಭವಿಷ್ಯ ಹೇಳುವುದರಲ್ಲಿ ಅತಿ ಬುದ್ಧಿವಂತನೆಂಬ ಖ್ಯಾತಿ ಸುತ್ತೆಲ್ಲಾ ಹರಡಿ ದೂರದೂರದ ಊರುಗಳಿಂದ ಜನರು ಬರುತ್ತಲೇ ಇರುತ್ತಾರೆ. ಕೈಯಲ್ಲಿ ದಕ್ಷಿಣೆ ತುಂಬುತ್ತಲೇ ಇರುತ್ತದೆ.

'ನೀಡುವ ಪುಣ್ಯಾತ್ಮರು ಯಾರೋ, ಕಿತ್ತುಕೊಳ್ಳುವ ಬುದ್ಧಿವಂತರು ಯಾರೋ? ಇವನಿಗೆ ಒಂದೂ ಗೊತ್ತಾಗುವುದಿಲ್ಲ' ಎಂದು ವೆಂಕಮ್ಮ ವೇಚಾಡ ತೊಡಗಿದಳು.

ಬಂದ ಹಣದಲ್ಲಿ ಸ್ವಲ್ಪ ಸ್ವಲ್ಪ ಭಾಗ ಭವಿಷ್ಯದ ದೃಷ್ಟಿಯಿಂದ ಬಚ್ಚಿಡ ತೊಡಗಿದಳು. ಸಾಸ್ವಿ ಡಬ್ಬಿ, ಜೀರಿಗೆ ಡಬ್ಬಿಗಳಲ್ಲಿ ಬಚ್ಚಿಡುವುದು ಬಹಳಷ್ಟು ಹೆಂಗಸರಿಗೆ ತಿಳಿದ ಗುಟ್ಟೇನೋ ಹೌದು; ಆದರೆ ವೆಂಕಮ್ಮ ಬರುತ್ತಿದ್ದ ಹಣರಾಶಿ ಯನ್ನು ನೆಲತೋಡಿ ಬಚ್ಚಿಡತೊಡಗಿದಳೆಂಬುದು ಅವಳಿಗೆ ಮಾತ್ರ ಗೊತ್ತಾಗಿರುವ ಗುಟ್ಟಾಗಿತ್ತು.

ಮನೆಗೆ ಯಾರಾದರೂ ಭಿಕ್ಷುಕರು ಬಂದರೆ ಬೊಗಸೆ ತುಂಬಾ ಧಾನ್ಯ ನೀಡುವುದು ವೆಂಕಮ್ಮನಿಗೆ ಅಭ್ಯಾಸವಾಗಿತ್ತು. ಆದರೆ ಆ ಬೊಗಸೆಯನ್ನೇ ಚಿಕ್ಕದು ಮಾಡುತ್ತಾ ಹೋಗಿದ್ದು ಇತ್ತೀಚೆಗೆ ಬೆಳೆದ ಜಿಪುಣತನದ ಲಕ್ಷಣವಾಗಿತ್ತು.

ಶ್ರೀ ವೆಂಕಟೇಶನ ದರ್ಶನಕ್ಕೆಂದು ಆ ಊರಿಗೆ ಯಾರು ಬಂದರೂ ಭಾಗಣ್ಣನ ಮನೆಯಲ್ಲಿಯೇ ಆತಿಥ್ಯ. ಅವರು ಯಾವ ಜಾತಿಯವರೇ ಆಗಿರಲಿ, ಕುಲಮತಗಳ ಅಂತರ ಈ ವಿಷಯದಲ್ಲಿ ಅಡ್ಡಿ ಬರಲಿಲ್ಲ.

ಒಮ್ಮೆ ಮದುವೆಯ ದೊಡ್ಡ ತಂಡವೊಂದು ಗದ್ವಾಲಿಗೆ ಪ್ರಯಾಣಿಸುತ್ತಾ ಉತ್ತನೂರಿಗೆ ಆಗಮಿಸಿತ್ತು. ಅವರೆಲ್ಲರನ್ನೂ ಊಟಕ್ಕೆ ಒತ್ತಾಯಿಸಿ ನಿಲ್ಲಿಸಿಬಿಟ್ಟ ಭಾಗಣ್ಣ.

"ಅವರ ಮನೆ ಸಮಾರಂಭಕ್ಕೆ ಅವರು ಹೊರಟಿದ್ದಾರೆ, ಅದು ಅವರವರಿಗೆ ಸೇರಿದ ಜವಾಬ್ದಾರಿ, ಅವರನ್ನೇಕೆ ಊಟಕ್ಕೆ ಎಬ್ಬಿಸಿದೆಯೋ?" ತಾಯಿ ಕೇಳಿದಳು.

"ಮಕ್ಕಳು ಮರಿಗಳು ಬಹಳ ಇವೆಯಮ್ಮಾ, ಈ ವಿಷಯ ಗ್ರಹಿಸಿ ಅವರು ಈ ವೇಳೆಯೊಳಗೆ ಎಲ್ಲಿಯೋ ವ್ಯವಸ್ಥೆ ಮಾಡಿಕೊಳ್ಳಬೇಕಾಗಿತ್ತು. ಪಾಪ; ತಂಡದ ಯಜಮಾನರಿಗೆ ತೋಚಿಲ್ಲವೆಂದು ಕಾಣುತ್ತದೆ. ಊಟದ ವೇಳೆಯಾಗಿದ್ದರಿಂದ ಈಗ ತಬ್ಬಿಬ್ಬುಗೊಂಡಿದ್ದಾರೆ. ಅದನ್ನು ಗಮನಿಸಿಯೇ ನಾನು ಎಲ್ಲರನ್ನೂ ಎಬ್ಬಿಸಿದೆ.

ದೊಡ್ಡ ಗುಂಪು. ಹತ್ತಾರು ಎತ್ತಿನ ಚಕ್ಕಡಿಗಳಲ್ಲಿ ಬಂದಿದ್ದಾರೆ. ಪಾಪ ಈ ಪರಸ್ಥಳದಲ್ಲಿ ಏನು ಮಾಡಿಕೊಳ್ಳುತ್ತಾರೆ" ಎಂದ ಭಾಗಣ್ಣ. ಬೇಗ ಬೇಗ ತಯಾರಿಸುವಂತೆ ಅಡುಗೆಯವನಿಗೆ ಸೂಚನೆ ಕೊಟ್ಟ.

ಅಷ್ಟು ಜನಕ್ಕೆ ಅಡುಗೆಗೆ ಬೇಕಾದಷ್ಟು ಧಾನ್ಯ ಮನೆಯಲಿಲ್ಲವೆಂದು ಅಡುಗೆಯವನು ಹೇಳಿದಾಗ ಭಾಗಣ್ಣ ಆಶ್ಚರ್ಯಗೊಂಡ.

"ನನ್ನ ಮನೆಯಲ್ಲಿ ಧಾನ್ಯಕ್ಕೆ ಕೊರತೆಯೆ? ಅತಿಥಿ ಅಭ್ಯಾಗತರ ಊಟಕ್ಕೆ ಅಡಚಣೆಯೆ? ಸಾಧ್ಯವೇ ಇಲ್ಲ. ಹೋಗಿ ಸರಿಯಾಗಿ ನೋಡಿಕೊಂಡು ಬಾ" ಎಂದು ಹೇಳಿದ ಭಾಗಣ್ಣ ಒಮ್ಮೆ ನಿಧಾನವಾಗಿ ಯೋಚಿಸಿದ.

ಒಂದು ಕೆರಸಿಯ ತುಂಬಾ ಧಾನ್ಯವಿದ್ದು, ಹೊರಗೆ ಎರಡು ದೊಡ್ಡ ಗಡುಗೆ ತುಂಬಾ ಅಕ್ಕಿ ಇದ್ದುದನ್ನು ಮೊನ್ನೆ ಮೊನ್ನೆ ನೋಡಿದ್ದ. ಅಷ್ಟರಲ್ಲಿ ಅದು ಖರ್ಚಾಗುವುದು ಸಾಧ್ಯವೆ? ಯೋಚಿಸಿದ ಭಾಗಣ್ಣ.

ತಾಯಿಯ ವರ್ತನೆಯಲ್ಲಿ ಇತ್ತೀಚೆಗಾಗುತ್ತಿರುವ ಬದಲಾವಣೆಗಳನ್ನು ಅವನು ಜ್ಞಾಪಿಸಿಕೊಂಡ. ಹಣ ಸ್ವಲ್ಪವೂ ಇರದಿದ್ದಾಗ ಅಕಸ್ಮಾತ್ ಅಲ್ಪಸ್ವಲ್ಪ ಬಂದರೆ ಧಾರಾಳತನವನ್ನು ತೋರಿಸಿ ಇಲ್ಲದ ಶ್ರೀಮಂತಿಕೆ ಪ್ರದರ್ಶಿಸುವ ಹುಚ್ಚು ಕೆಲವರಿಗೆ ಇರುತ್ತದೇನೋ ನಿಜ. ಆದರೆ ಬಹಳ ಕಾಲ 'ಇಲ್ಲ'ದ ಕಾಲ ಕಂಡವರು 'ಇದೆ' ಯ ಕಾಲ ಬಂದಾಗ ತುಂಬಾ ಹೆದರಿಬಿಡುತ್ತಾರೆ. ಪುನಃ 'ಇಲ್ಲ'ದ ಕಾಲ ಬಂದೀತೆಂದು 'ಇದೆ' ಕಾಲದ ಸೌಭಾಗ್ಯದಿಂದ ವಂಚಿತರಾಗುತ್ತಾರೆ.

ತಾಯಿ ವೆಂಕಮ್ಮ ಮೊದಮೊದಲು ಧಾರಾಳವಾಗಿ ನೀಡುತ್ತಿದ್ದುದೇನೋ ನಿಜ. ತಮ್ಮ ಬಡತನ ಕಾಲದ ಸ್ಥಿತಿ ನೆನೆದು ಬಡವರ ಬಗ್ಗೆ ಅನುಕಂಪ ತೋರುತ್ತಿದ್ದುದೂ ಹೌದು.

ಯಾವುದೇ ಮನೆಯ ಮುಂದೆ ಭಿಕ್ಷುಕರು ಕೂಗಿದರೆ ಆ ಮನೆಯಲ್ಲಿ ಜನರಿದ್ದಾರೆಂದು ತಿಳಿಯಬೇಕು. ಹಾಗೆಯೇ ಎರಡನೇ ಸಲ ಕೂಗಿದರೆ ಅದು ಮನೆಯವರ ಸೋಮಾರಿತನವನ್ನು ತೋರುತ್ತದೆ. ಮೂರನೇ ಸಲ ಕೂಗಿದರೆ ದಾನಧರ್ಮಗಳ ಬಗ್ಗೆ ಅವರಿಗಿರುವ ನಿರ್ಲಕ್ಷ್ಯದ ನಿದರ್ಶನವಾಗುತ್ತದೆ. ನಾಲ್ಕನೇ ಸಲವೂ ಕೂಗು ಕೇಳಿ ಬಂದರೆ ಆ ಕೂಗಿದವನಿಗೇ ಬುದ್ಧಿ ಇಲ್ಲವೆಂದು ಹೇಳಬೇಕಾಗುತ್ತದೆ. ಏಕೆಂದರೆ ಅಷ್ಟು ಕೂಗಿಸಿಕೊಂಡವರೆಂದೂ ದಾನ ನೀಡುವುದಿಲ್ಲ.

ನೀಡಿದರೂ ಇಲ್ಲ ಎನ್ನುವುವರ ಇನ್ನೊಂದು ರೂಪವಾಗಿರುತ್ತದೆಂದು ವೆಂಕಮ್ಮನೇ ಹಲವಾರು ಸಲ ಹೇಳಿದ ಮಾತು ಭಾಗಣ್ಣನಿಗೆ ಜ್ಞಾಪಕಕ್ಕೆ ಬಂದಿತು.

ಇತ್ತೀಚಿಗೆ ತಮ್ಮ ಮನೆಯ ಮುಂದೆ ಭಿಕ್ಷುಕರು ಬಹಳ ಹೊತ್ತು ನಿಂತು ಹಲವಾರು ಸಲ ಕೇಳುತ್ತಿದ್ದುದನ್ನು ಭಾಗಣ್ಣ ಗಮನಿಸಿದ್ದ. ಅತಿಥಿಗಳು ಊಟಕ್ಕೆ ಕುಳಿತರೆ ತಾಯಿ ವೆಂಕಮ್ಮ ಹಿಡಿ ಹಿಡಿದು ಬಡಿಸುತ್ತಿದ್ದುದನ್ನು ಕಂಡು ಕಸಿವಿಸಿಗೊಂಡದ್ದೂ ಉಂಟು. ತಾನೇ ಆನಂತರ ಒತ್ತಾಯ ಮಾಡಿ ಹೆಚ್ಚು ನೀಡುತ್ತಿದ್ದುದು ಅವನ ನೆನಪಿಗೆ ಬಂದವು.

ತಾಯಿಗೆ ಒಮ್ಮೆ ಹೇಳಿದ್ದ

"ಅಮ್ಮಾ, ಭಗವಂತ ನಮ್ಮ ಮೇಲೆ ಕರುಣಿಸಿದ್ದಾನೆ. ಆದ್ದರಿಂದಲೇ, ಅತಿಥಿಗಳು ನಮ್ಮ ಮನೆಗೆ ಬರುತ್ತಿದ್ದಾರೆ. ಅವರನ್ನು ಸಂತೃಪ್ತಿ ಪಡಿಸುವ ಮೂಲಕ ಪೂಜಿಸುವ ಅವಕಾಶ ಸಿಕ್ಕುತ್ತಿದೆ. ಹಿಂದೆಲ್ಲಾ ನಮಗೆಲ್ಲಿತ್ತು ಈ ಅವಕಾಶ? ಭಾಗ್ಯ ಇದ್ದರಷ್ಟೇ ಸಾಲದು. ನಾಲ್ಕು ಜನರೊಂದಿಗೆ ಕಲೆತು ಸಮನಾಗಿ ಹಂಚಿಕೊಂಡು ಉಂಡಾಗಲೆ ಅದಕ್ಕೊಂದು ಸಾರ್ಥಕ್ಯ ಉಂಟಾಗುತ್ತದೆ."

"ನಿನಗೇನೋ ಗೊತ್ತು? ಹುಡುಗುಬುದ್ಧಿ, ದುಡಿಯುವುದು ಅಷ್ಟೇನೂ ಕಷ್ಟವಲ್ಲಪ್ಪಾ, ದುಡಿದದ್ದನ್ನು ಉಳಿಸಿಕೊಳ್ಳುವುದಕ್ಕೆ ಹೆಚ್ಚು ಕಷ್ಟಪಡಬೇಕಾಗುತ್ತದೆ. ಒಂದೊಂದು ಹಿಡಿ ಧಾನ್ಯ ಪಡೆಯುವುದಕ್ಕಾಗಿ ನಾನು ಪರರ ಮನೆಯಲ್ಲಿ ಕೊಡ ಕೊಡ ಅವಲಕ್ಕಿ ಕುಟ್ಟಿದ್ದೇನೆ ಕಣೋ! ಹೊಲಗಳಿಗೆ ಕಣಭಿಕ್ಷೆಕ್ಕೆಂದು ಎರಡೆರಡು ಹರದಾರಿ ನಡೆದು ಹೋದಾಗಲೂ ಎರಡು ಮುಷ್ಟಿ ಧಾನ್ಯವೂ ಸಿಕ್ಕದಿದ್ದ ಕಾಲವನ್ನು ಕಂಡವಳಪ್ಪಾ ನಾನು" ಹೇಳಿದಳಾ ತಾಯಿ.

"ಆಸೆಯಿಂದ ನೀನು ಭಿಕ್ಷೆಗೆ ಹೋದಾಗ ಆದ ನಿರಾಶೆಯನ್ನು ನೀನೇ ಜ್ಞಾಪಿಸಿಕೊಳ್ಳಮ್ಮಾ. ಆಗ ಪಟ್ಟ ಪರಿತಾಪಗಳನ್ನು ಒಮ್ಮೆ ನೆನಪಿಸಿಕೋ. ಆ ನಿರಾಶೆ, ಅಂಥ ಪರಿತಾಪ ಬೇರೆಯವರಿಗೆ ನಿನ್ನಿಂದಾಗಕೂಡದು. ಅದಕ್ಕಾಗಿಯೇ ಅಮ್ಮಾ ನಾನು ದುಡಿಯಲು ಕಟಿ ಬದ್ಧನಾಗಿ ನಿಂತುದು" ಭಾಗಣ್ಣ ಹಾಗೆ ಹೇಳಿದಾಗಲೂ ವೆಂಕಮ್ಮ ಗುನುಗುಟ್ಟುತ್ತಲೆ ಒಳಗೆ ಹೋಗಿದ್ದಳು.

ಮದುವೆಯ ತಂಡಕ್ಕೆ ಅಡುಗೆ ಮಾಡಲು ಅಕ್ಕಿ ಇದ್ದರೂ ಇಲ್ಲದಂತೆ ಮಾಡಿದ್ದು ಯಾರೆಂದು ಭಾಗಣ್ಣನಿಗೆ ಹೊಳೆದು ಹೋಯಿತು. ಇತ್ತೀಚಿಗೆ ತಾಯಿಗೆ

ನೀಡಿದ ಹಣ ಪುನಃ ಯಾವಾಗಲೋ ಕೇಳಿದಾಗ ಇಲ್ಲವೆಂದು ಕೈ ತಿರುವುತ್ತಿದ್ದುದನ್ನು ಜ್ಞಾಪಿಸಿಕೊಂಡ.

ಭಾಗಣ್ಣ ಬೇರೆಲ್ಲೋ ಹೋಗಿ ಸಾಮಗ್ರಿಗಳನ್ನು ಜೋಡಿಸಿ ಅಡುಗೆಯನ್ನೇನೋ ಭರ್ಜರಿಯಾಗಿ ಮಾಡಿಸಿದ. ಅತಿಥಿಗಳು ಸಂತೃಪ್ತಿಗೊಂಡು ಹೋದ ಮೇಲೆ ಭಾಗಣ್ಣ ತಾಯಿ ಹಣವನ್ನು ಏನು ಮಾಡುತ್ತಿದ್ದಾಳೆ? ಧಾನ್ಯ ಎಲ್ಲಿಟ್ಟಿದ್ದಾಳೆ ಎಂದು ಕವಡೆ ಹಾಕಿ ನೋಡಿ ಫಲಿತಾಂಶ ಕಂಡು ಫಕ್ಕೆಂದು ನಕ್ಕುಬಿಟ್ಟ.

ತಾಯಿಗೆ ಕರೆದು ಹೇಳಿದ. "ಅಮ್ಮಾ ಎರಡು ಗಡಿಗೆ ತುಂಬಾ ನಿನ್ನೆ ಬಂದ ಅಕ್ಕಿ ಈ ದಿನ ಇಲ್ಲವಾಗಿದೆ. ಹಾಗೆ ನೋಡಿದರೆ ಇನ್ನೂ ಎಂಟು ಹತ್ತು ಗಿದ್ನ ಅಕ್ಕಿ ಮನೆಯಲ್ಲಿರಬೇಕಾಗಿತ್ತು. ಮನೆಯಲ್ಲಿ ಧನವೂ ಸಾಕಷ್ಟು ಇದೆ. ಆದರೆ ಬಚ್ಚಿಟ್ಟಿದ್ದರಿಂದ ಅದು ಇಲ್ಲವಾಗಿದೆ. ಕೊಟ್ಟಿದ್ದು ತನಗೆ, ಬಚ್ಚಿಟ್ಟಿದ್ದು ಪರರಿಗೆ' ಎಂಬ ಗಾದೆ ಮಾತು ಸ್ವಲ್ಪ ಬದಲಾಯಿಸಿಕೋ ಅಮ್ಮಾ. ನೀನು ಬಚ್ಚಿಟ್ಟಿದ್ದು ನಿನಗೂ ಇಲ್ಲ. ಪರರಿಗೂ ಇಲ್ಲ. ಹೋಗಿ ನೋಡು."

"ನಾನೆಲ್ಲಿ ಬಚ್ಚಿಟ್ಟಿದ್ದೇನೋ? ಸುಮ್ಮನೆ ಏನೆಲ್ಲಾ ಹೇಳಬೇಡ" ತಾಯಿ ಸ್ವಲ್ಪ ಗದರಿಕೊಂಡು ಹೇಳಿದಳು.

"ಅಡುಗೆಮನೆ ಈಶಾನ್ಯ ಮೂಲೆಯ ನೆಲದ ಕೆಳಗೆ ಕಲ್ಲು ಇಟ್ಟು ನೀನು ಮಾಡಿಕೊಂಡ ಅಗೇವು. ಅಡಕಲು ಕೋಣೆಯ ವಾಯುವ್ಯ ಮೂಲೆ ಗೋಡೆಯ ಮೂರನೇ ಕಲ್ಲು ಸರಿಸಿ ನೀನು ಮಾಡಿಕೊಂಡ ಹಣ ಭದ್ರತಾ ವ್ಯವಸ್ಥೆ. ಅದರ ಪರಿಣಾಮ ಏನಾಗಿದೆಯೆಂದು ನೋಡಿಬಾರಮ್ಮಾ" ನಗುತ್ತಾ ಹೇಳಿದ ಭಾಗಣ್ಣಾ.

ಯಾರಿಗೂ ಗೊತ್ತಿಲ್ಲವೆಂದು ಭಾವಿಸಿದ್ದ ತನ್ನ ಗುಟ್ಟಿನ ಜಾಗವನ್ನು ನಿರ್ದಿಷ್ಟವಾಗಿ ಭಾಗಣ್ಣ ಹೇಳಿದಾಗ ಅವನೇ ಪುನಃ ಹೊರಗೆ ತೆಗೆದಿರಬೇಕೆಂದು ತಾಯಿ ತರ್ಕಿಸಿದಳು. ಮಗನ ಬಲತ್ಕಾರಕ್ಕೆ ತಾನಿಟ್ಟ ಜಾಗದಲ್ಲಿ ಹೋಗಿ ನೋಡಿದಾಗ ಗಟ್ಟಿಯಾಗಿ ಕೂಗಿ ಬಿಟ್ಟಳು.

"ಧಾನ್ಯವೆಲ್ಲಾ ಹುಳುವಾಗಿ ಬಿಟ್ಟಿವೆ. ಧನದ ನಾಣ್ಯಗಳೆಲ್ಲಾ ಕಿಲುಬು ಹಿಡಿದು ಜಂಗುಗಟ್ಟಿ ಹೋಗಿವೆ! ಭಾಗಣ್ಣಾ ಏನೋ ಇದು! ನಿನ್ನೆ ಹಾಕಿದ ಧಾನ್ಯ ಕೂಡ ಹುಳ ಹಿಡಿದುಬಿಟ್ಟಿವೆ. ಮೊನ್ನೆ ತೆಗೆದಿಟ್ಟ ನಾಣ್ಯಗಳು ಸಹ ಕಿಲುಬುಗಟ್ಟಿವೆಯಲ್ಲೋ ಭವಿಷ್ಯ ಹೇಳುವುದನ್ನೇನೋ ಕಲಿತಿದ್ದೆ. ಇಂಥ ಮಾಟ ಮಾಡುವುದನ್ನೂ

ಕಲಿತಿದ್ದೆಯೇನೋ?" ತಾಯಿ ದುಃಖ, ಸಿಟ್ಟು, ಆಶ್ಚರ್ಯಗಳು ಮಿಶ್ರಗೊಂಡ ವಿಚಿತ್ರ ಪರಿಸ್ಥಿತಿಯಲ್ಲಿ ಮಗನನ್ನು ಕೇಳಿದಳು.

'ಮಾಟ ..' ನಕ್ಕುಬಿಟ್ಟ ಭಾಗಣ್ಣ.

ಜಗನ್ನಾಟಕ ಕರ್ತನ ಮಾಟವಮ್ಮಾ ಇದು. ನೀನು ಸಹಜವಾಗಿ ದಾನಶೀಲೆ. ದೊಡ್ಡ ಮನಸ್ಸು. ಇತ್ತೀಚೆಗೆ ನಿನಗುಂಟಾದ ಲೋಭತನವನ್ನು ಬಿಡಿಸಲು ಪರಮಾತ್ಮನೇ ಈ ನಾಟಕ ಆಡಿಸಿದ್ದಾನಮ್ಮಾ. ನಿನ್ನನ್ನು ಬೇಗ ಎಚ್ಚರಿಸಿ ಸರಿ ಮಾರ್ಗದಲ್ಲಿ ನಡೆಸುವುದರ ಮೂಲಕ ಉದ್ಧರಿಸುವ ಸಂಕಲ್ಪವಮ್ಮಾ ಆತನದು."

ವೆಂಕಮ್ಮನಿಗೆ ನಾಚಿಕೆಯಾಗಿ ಹೋಯಿತು. ತನ್ನಲ್ಲುಂಟಾದ ಲೋಭತನದ ಪರಿಹಾರಕ್ಕೆ ಪರಮಾತ್ಮನು ಮಾಡಿದ ಈ ಲೀಲೆಯನ್ನು ಕಂಡು ಆಕೆ ಕೃತಜ್ಞತೆಯಿಂದ ತಲೆಬಾಗಿದಳು ಆದರೂ ಮಾತಿನ ವ್ಯಾಮೋಹ ಆಕೆಯನ್ನು ಬಿಡಲಿಲ್ಲ.

"ತೆಗೆದಿಡಬೇಕೆಂದು ಮೊದಲು ಅಪೇಕ್ಷಿಸಲಿಲ್ಲ ಭಾಗಣ್ಣಾ. ನಾಳೆ ನಿನ್ನ ತಮ್ಮಂದಿರ ಉಪನಯನ ಮದುವೆ ಇನ್ನೂ ಏನೆಲ್ಲಾ ಆಗಬೇಕಾಗಿದೆಯಲ್ಲಪ್ಪಾ ಅದಾವುದನ್ನೂ ನೀನು ಯೋಚಿಸುತ್ತಿಲ್ಲ. ನೀನೇನೋ ಹುಡುಗ. ದೊಡ್ಡವಳಾದ ನಾನು ಹಾಗೆ ಇರಲಿಕ್ಕಾಗುತ್ತದೆಯೆ?" ತಾಯಿ ಪ್ರಶ್ನಿಸಿದಳು.

"ನಾನೂ ಅದನ್ನೇ ಯೋಚಿಸುತ್ತಿದ್ದೇನಮ್ಮಾ ನಮ್ಮ ದಾಸಣ್ಣ ಹಾಗೂ ಸೀನಣ್ಣರಿಗೆ ಈಗಾಗಲೇ ಉಪನಯನವಾಗಬೇಕಿತ್ತು. ಅವರಿಗೆ ಎಂಟು ವರ್ಷದೊಳಗೆ ಮಾಡಲಿಕ್ಕಾಗಲಿಲ್ಲ. ಆನಂತರ ಗುರುಬಲ ಇತ್ಯಾದಿಗಳೆಲ್ಲಾ ಸರಿಬರಲಿಲ್ಲ. ಎಲ್ಲಕ್ಕಿಂತ ಹೆಚ್ಚಾಗಿ ನಾನು ಈ ಬಗ್ಗೆ ಭವಿಷ್ಯ ನೋಡಿದಾಗಲೆಲ್ಲಾ ಸದ್ಯಕ್ಕೆ ಬೇಡ ಎಂದೇ ಬರುತ್ತಿತ್ತು. ಭಗವಂತನ ಇಚ್ಛೆ ಅದೇಕೆ ಹಾಗೆ ಎಂದು ಪ್ರಶ್ನಿಸುವ ಅಧಿಕಾರ ಎಲ್ಲಿದೆಯಮ್ಮಾ? ಸ್ವಾಮಿ ಅನುಗ್ರಹಿಸು ಎಂದು ಪ್ರಾರ್ಥಿಸುವ ಕರ್ತವ್ಯ ಮಾತ್ರ ನಮ್ಮದು" ನಿಧಾನವಾಗಿ ನುಡಿದ ಭಾಗಣ್ಣ.

"ಹಾಗಾದರೆ ಯಾವಾಗ ಕರುಣಿಸುತ್ತಾನೋ ಆ ಭಗವಂತ! ನಿನ್ನ ಮದುವೆಯೂ ಆಗಿಬಿಟ್ಟರೆ..."

"ಅಮ್ಮಾ" ಕೂಗಿಬಿಟ್ಟ ಭಾಗಣ್ಣ. ಪುನಃ ಧ್ವನಿ ಬದಲಾಯಿಸಿ ನಿಧಾನವಾಗಿ ಹೇಳಿದ.

"ತಮ್ಮಂದಿರ ಉಪನಯನ ಈ ವರ್ಷದಲ್ಲಿಯೇ ಮುಗಿಸಿಬಿಡೋಣ" ಭಾಗಣ್ಣಾ ಆಕಾಶ ನೋಡುತ್ತಾ ಹೇಳಿದ.

"ಆಗಲಪ್ಪಾ ಬೇಗ ಆ ಕಾಲ ಬರಲಿ" ಎಂದು ಹೇಳಿದ ವೆಂಕಮ್ಮ ಮೆಲ್ಲಗೆ ಪುನಃ ಮಾತು ಮುಂದುವರಿಸಿದಳು.

"ಭಾಗಣ್ಣಾ, ದಾನ ಮಾಡಬೇಕು, ಧರ್ಮ ಮಾಡಬೇಕೆಂಬ ನನ್ನ ಬಹುದಿನದ ಅಪೇಕ್ಷೆಯನ್ನು ಆ ದಿನ ನಿನ್ನ ಮುಂದೆ ಹೇಳಿದಾಗ ದಾನ ನೀಡುವ ಕೈ ನೋಯುವಷ್ಟು ಮಾಡಿಸುತ್ತೇನೆಂದು ವಾಗ್ದಾನ ನೀಡಿದ್ದೆ. ಅದನ್ನು ನೆರವೇರಿಸಿಬಿಟ್ಟೆ. ಆ...ದ.......ರೆ...."

"ಆದರೇನಮ್ಮಾ?" ಮಗನ ಪ್ರಶ್ನೆ

"ನಾನು ಯಾವ ಊರಿನಲ್ಲಿ ಭಿಕ್ಷೆ ಮಾಡುತ್ತಿದ್ದೆನೋ, ಯಾವ ಗ್ರಾಮದ ಜನರು ಉದಾರವಾಗಿ ನೀಡಿದ್ದರಿಂದ ನಾವು ಬದುಕಿ ಬಾಳಿದೆವೋ ಆ ಗ್ರಾಮದಲ್ಲಿ ನನ್ನ ಮಗನ ವೈಭವವನ್ನು ತೋರಬೇಕೆಂಬ ಅಪೇಕ್ಷೆಯಾಗಿದೆಯಪ್ಪಾ, ಮಗನ ಪ್ರತಾಪ, ಸಾಮರ್ಥ್ಯ ತೋರಿ ಹೆಮ್ಮೆ ಪಡಬೇಕೆಂದು ಯಾವ ತಾಯಿಗೆ ಇರುವುದಿಲ್ಲ ಹೇಳು"

"ಅಂದರೆ?" ಭಾಗಣ್ಣ ತಾಯಿಯಿಂದ ವಿವರ ಪಡೆಯಲು ಪ್ರಯತ್ನಿಸಿದ.

"ಸಂಕಾಪುರದಲ್ಲಿ ನಿನ್ನ ಉಪನಯನವನ್ನು ಶ್ಯಾನಭೋಗ ಗುಂಡಪ್ಪನವರು ಆ ದಿನ ನಿರ್ವಹಿಸಿದರು. ಆ ದಿನದಿಂದ ನೀನು ಅಭಿವೃದ್ಧಿಗೆ ಬಂದೆ. ಹಾಗೆಯೇ ನಿನ್ನ ತಮ್ಮಂದಿರಿಗೂ ಅದೇ ಸ್ಥಳದಲ್ಲಿ ಉಪನಯನ ಮಾಡಿಸಬೇಕೆಂದು ಅಪೇಕ್ಷೆ ಯಾಗಿದೆಯೋ"

ಭಾಗಣ್ಣ ತಲೆದೂಗಿಬಿಟ್ಟ

"ಅಮ್ಮಾ ಸರಿಯಾಗಿ ಹೇಳಿದೆ. ಮಹಾ ಬ್ರಹ್ಮಚಾರಿ. ಸರ್ವಶ್ರೇಷ್ಠ ಭಕ್ತ. ಆಂಜನೇಯನ ಸನ್ನಿಧಿಯಲ್ಲಿ ನಿನ್ನ ಮಕ್ಕಳ ಉಪನಯನವಾಗಬೇಕೆಂಬುದು ಶ್ರೀ ವೆಂಕಟೇಶ್ವರನ ಇಚ್ಛೆ. ಆದ್ದರಿಂದಲೇ ಭಗವಂತ ನಿನ್ನಿಂದ ಈ ಮಾತು ಹೊರಡಿಸಿದ್ದಾನೆ...."

ನನ್ನ ಉಪನಯನ ವ್ಯವಸ್ಥೆಯನ್ನು ಆದಿನ ಬೇರೆಯವರು ಮಾಡಿದರು. ಬೇರೆಯವರ ಉಪನಯನವನ್ನು ಈಗ ನಾವು ಮಾಡೋಣ. ಅನೇಕ ಬ್ರಾಹ್ಮಣರ ಮನೆಗಳಲ್ಲಿ ಧನಾನುಕೂಲವಿಲ್ಲದೆ ಎಂಟು ವರ್ಷ ಮೀರಿದ್ದರೂ ತಮ್ಮ ಮಕ್ಕಳ ಉಪನಯನವನ್ನು ಮುಂದೂಡುತ್ತಿದ್ದಾರೆ. ಅಂಥವರಿಗಾಗಿ ಸಂಕಾಪುರದಲ್ಲಿ ವಿಶೇಷ ವ್ಯವಸ್ಥೆ ಮಾಡೋಣ. ಸುತ್ತಮುತ್ತ ಗ್ರಾಮಗಳ ಬ್ರಾಹ್ಮಣರ ಮನೆಗಳಿಗೆ ಹೋಗಿ ವಿಷಯ ವಿವರಿಸಿ ಬರೋಣ. ಬೇರೆ ಬೇರೆ ವೇದದವರಿಗೆ ಅವರವರ ರೀತಿಯಲ್ಲಿ ಕಾರ್ಯಕ್ರಮ ನಿರ್ವಹಿಸೋಣ. ಈ ಸಾಮೂಹಿಕ ಉಪನಯನ ವ್ಯವಸ್ಥೆಯ ಬಗ್ಗೆ ಈಗಿನಿಂದಲೇ ಜನರಿಗೆ ತಿಳಿಸುತ್ತಾ ಬರೋಣ. " ತಾಯಿಗೆ ಈ ಮಾತು ಅರ್ಥವಾಗಲಿಲ್ಲ.

"ಸಾಮೂಹಿಕ ಉಪನಯನ! ಏನೋ ಹಾಗೆಂದರೆ?" ಕೇಳಿದಳು ವೆಂಕಮ್ಮ.

"ಹಣದ ಅಭಾವದಿಂದಲೋ, ಜನಸಹಾಯದ ಕೊರತೆಯಿಂದಲೋ ಅಥವಾ ಮತ್ಯಾವ ಕಾರಣಕ್ಕೋ ಮನೆಗಳಲ್ಲಿ ವಯಸ್ಸಿಗೆ ಬಂದ ಮಕ್ಕಳಿದ್ದರೂ ಅನೇಕರು ಉಪನಯನ ಮಾಡದೆ ಮುಂದೂಡುತ್ತಿದ್ದಾರೆ. ಅಂಥವರಿಗೆ ಇದರಿಂದ ಸ್ಫೂರ್ತಿ ಸಿಕ್ಕುತ್ತದೆ. ಮುಂದೆ ಮುಂದೆ ಇಂಥ ಸಾಮೂಹಿಕ ಉಪನಯನಗಳು ಸಾಮೂಹಿಕ ವಿವಾಹ ಕಾರ್ಯಗಳು ಸಮಾಜದ ಶ್ರೇಯಸ್ಸಿಗೆ ಅನಿವಾರ್ಯವಾಗುತ್ತದಮ್ಮಾ." ಮಗ ಹೇಳುತ್ತಿದ್ದಾಗಲೇ ತಾಯಿ ಮತ್ತೊಂದು ಪ್ರಶ್ನೆ ಹಾಕಿದಳು.

"ಅವರವರ ಬಂಧು ಬಳಗದವರನ್ನೆಲ್ಲಾ ಕರೆಸಿಕೊಂಡು ವೈಭವದಿಂದ ಮಾಡಬೇಕೆಂಬ ಅಪೇಕ್ಷೆ ತಂದೆ ತಾಯಂದರಿಗೆ ಇರುವುದಿಲ್ಲವೇನೋ?"

"ಇರಕೂಡದು. ಬಂಧು ಬಳಗದವರಿಗೆ ಅನುಕೂಲ ಕಲ್ಪಿಸುವ ಕಾರಣಕ್ಕಾಗಿ ಉಪನಯವನ್ನು ಮುಂದೂಡಬಾರದು. ನಮಗೆ ಈ ಪ್ರಶ್ನೆ ಬರುವುದಿಲ್ಲ. ನಾವು ಎಲ್ಲರನ್ನೂ ಕರೆಯೋಣ. ಉಪನಯನ ಮಾಡಿಸುವ ಮಾತಾಪಿತೃಗಳು ಎಷ್ಟು ಜನ ಬಂಧು ಬಳಗದವರನ್ನಾದರೂ ಕರೆತರಬಹುದು. ಹುಡುಗನಿಗೆ ಉಪನಯನವಾದ ಮೇಲೆ ಸಂಧ್ಯಾವಂದನಾದಿ ಎಲ್ಲಾ ಕರ್ಮಾಂಗಗಳನ್ನು ನಿರ್ವಹಿಸುವ ರೀತಿನೀತಿಗಳನ್ನು ಕಲಿಸುವುದಕ್ಕಾಗಿ ಪುರೋಹಿತರನ್ನು ನಾವೇ ನಿಯಮಿಸಿರುತ್ತೇವೆ. ಎರಡು ಪಕ್ಷಗಳ ಕಾಲ ನಡೆಯುವ ಈ ಶಿಬಿರದಲ್ಲಿ ಹುಡುಗನೊಂದಿಗೆ ಆಗಮಿಸಿರುವ ಬಂಧು ಬಳಗದವರು ಜೊತೆಯಾಗಿರಬಹುದು. ಯಾವುದೇ ಮನೆಯಲ್ಲಿ ಉಪನಯನಕ್ಕೆ ಒಬ್ಬ ಹುಡುಗ ಸಿದ್ಧನಿದ್ದರೆ ಇದೊಂದು ಖರ್ಚಿನ ಬಾಬ್ತು ಎಂದು ಪರಿಗಣಿಸುತ್ತಿ

ದ್ದಾರೆ. ಈ ಪರಿಸ್ಥಿತಿ ಹೋಗಿ ಬಂಧು ಬಳಗದವರೆಲ್ಲಾ ಒಂದು ತಿಂಗಳ ಕಾಲ ಒಟ್ಟಾಗಿ ಇರುವ ಒಂದು ಸೌಭಾಗ್ಯ ತಮ್ಮ ಹುಡುಗ ಎಂದು ಅವರು ಹರ್ಷಿಸುವಂತೆ ಮಾಡಬೇಕು. ಈ ಅವಧಿಯಲ್ಲಿ ಪ್ರತಿನಿತ್ಯವೂ ವೈಭವ. ವಟುವಿಗೆ ಮಾರ್ಗದರ್ಶನ. ನಿತ್ಯ ಭೂರಿಭೋಜನ ನಮ್ಮ ಪ್ರಾಣದೇವರ ಸನ್ನಿಧಿಯಲ್ಲಿ ನಡೆಸೋಣಮ್ಮ" ಮಗ ಹೇಳುತ್ತಿದ್ದರೆ ತಾಯಿ ಬಾಯಿ ತೆರೆದು ಕೇಳುತ್ತಿದ್ದಳು.

"ಇದೆಲ್ಲಾ ಸರಿ. ಈ ಬಗ್ಗೆ ಜನರು ಏನೆನ್ನುತ್ತಾರೆ." ತಾಯಿ ಸಂಶಯಿಸುತ್ತಾ ಕೇಳಿದರು.

"ಜನರೇನು, ದೊರೆಗಳೇ ಬಂದು ವಟುಗಳಿಗೆ ಭಿಕ್ಷೆ ಹಾಕುತ್ತಾರೆ. ಸಾವಿರ ಸಾವಿರ ಜನ ಬಂದು ಈ ನೂತನ ಕ್ರಮದಿಂದ ಸಂತೋಷಿಸುತ್ತಾರೆ. ಹತ್ತಾರು ಬಾಲಕರಿಗೆ ಗಾಯತ್ರೀ ದೀಕ್ಷಾ ಸಮಾರಂಭವಾಗುತ್ತದೆ. ನೋಡುತ್ತಿರಮ್ಮಾ."

ಮಗ ಹೇಳುತ್ತಿದ್ದಾಗ ತಾಯಿಗೆ 'ದೊರೆಗಳು' ಎಂಬ ಶಬ್ದ ಕೇಳಿ ಇನ್ನೂ ಕುತೂಹಲ ಹೆಚ್ಚಿತು. ದೊರೆಗಳ ಬಗ್ಗೆ ಕೇಳಿದ್ದಳೇ ಆಗಲಿ ಅವರನ್ನು ನೋಡಿರಲಿಲ್ಲ. ಸಿಕ್ಕಸಿಕ್ಕವರಿಗೆಲ್ಲಾ ದರ್ಶನ ಕೊಡುವುದಕ್ಕೆ ರಾಜದರ್ಶನ ಅಷ್ಟು ಹಗುರವೇ ಎಂಬ ಅಭಿಪ್ರಾಯ ಆಕೆಯದು.

"ಹೇಗಿರುತ್ತಾರೋ ಮಹಾರಾಜರು? ಅವರು ಕುದುರೆ ಏರಿ ಛತ್ರ ಚಾಮರ ದೊಂದಿಗೆ ಬರುತ್ತಾರೇನೋ? ಬೇಗನೆ ಈ ಸಮಾರಂಭ ನಿರ್ವಹಿಸೋ, ಮಹಾರಾಜ ರನ್ನು ಕಣ್ ತುಂಬಾ ನೋಡಿ ಆನಂದಿಸುತ್ತೇನೆ" ತಾಯಿ ಅಂಗಲಾಚಿದಳು.

"ಅಮ್ಮಾ, ನಮಗೆ ವಟುಗಳ ಸಂಖ್ಯೆ ಹೆಚ್ಚಬೇಕು. ಹೆಚ್ಚು ಜನರು ಈ ಸಮಾರಂಭದಿಂದ ಲಾಭ ಪಡೆಯಬೇಕು. ಅದು ನಮಗೆ ಮುಖ್ಯ. ಇನ್ನು ಮಹಾರಾಜರನ್ನು ನೋಡಬೇಕೆಂಬ ನಿನ್ನ ಅಪೇಕ್ಷೆಗೆ ಅಷ್ಟು ದಿನ ಕಾಯಬೇಕಿಲ್ಲ. ಇನ್ನು ಕೆಲವೇ ದಿನಗಳಲ್ಲಿ ಅವರು ನನ್ನನ್ನು ಹುಡುಕಿಕೊಂಡು ಇಲ್ಲಿಗೇ ಬರುತ್ತಾರೆ. ನೋಡುತ್ತಿರು" ಮಗ ಹೇಳಿದ.

ತಾಯಿಗೆ ಮಗನ ಮಾತು ಕೇಳಿ ಆಶ್ಚರ್ಯ.

ಮಗನೋ, ಇನ್ನು ಹುಡುಗ. ಸಾಮಾನ್ಯ ಹಳ್ಳಿಯೊಂದರಲ್ಲಿ ವಾಸಿಸುತ್ತಿರುವ ತಾವೆಲ್ಲಿ? ಮಹಾರಾಜರೆಲ್ಲಿ ! ಅವರು ಬರುವುದು ಸಾಧ್ಯವೇ? ಅದೂ ನಮ್ಮನ್ನು ಹುಡುಕಿಕೊಂಡು - ತಾಯಿಯ ಯೋಚನೆ ಗ್ರಹಿಸಿ ಮಗನೇ ಹೇಳಿದ.

"ಬಂದೇ ಬರುತ್ತಾರಮ್ಮಾ. ನೂರಾರು ಸೈನಿಕರೊಂದಿಗೆ ಬರುವ ಮಹಾರಾಜರು ನೆರೆದಿದ್ದ ಸಾವಿರಾರು ಜನರನ್ನು ದೂರ ಕಳಿಸಿ ನನ್ನೊಂದಿಗೆ ಮಾತ್ರ ಗುಟ್ಟಾಗಿ ಮಾತನಾಡಿ ಹೋಗುತ್ತಾರೆ." ಮುಸಿ ಮುಸಿ ನಗುತ್ತಾ ಹೇಳಿದ ಭಾಗಣ್ಣ.

ಭಾಗಣ್ಣ ನುಡಿದ ಭವಿಷ್ಯ ಸುಳ್ಳಾಗಲಿಲ್ಲ. ಆತನ ಕೀರ್ತಿ ಬಾಯಿಂದ ಬಾಯಿಗೆ ವ್ಯಾಪಿಸಿ, ಕಿವಿಯಿಂದ ಕಿವಿಗೆ ಹರಡಿ ಗದ್ವಾಲ ಸಂಸ್ಥಾನದ ಮಹಾರಾಜರಾಗಿದ್ದ ರಾಜಾರಾಮ ಭೂಪಾಲರ ಕಿವಿಗೆ ತಲುಪಲು ಹೆಚ್ಚು ವೇಳೆಯಾಗಲಿಲ್ಲ.

ಸಣ್ಣ ವಯಸ್ಸಿನ, ಇನ್ನೂ ಅವಿವಾಹಿತ ಬ್ರಾಹ್ಮಣ ಯುವಕನೊಬ್ಬ ಹೆಚ್ಚಿನ ಕೀರ್ತಿಗೆ ಅಪೇಕ್ಷಿಸದೆ, ತನ್ನ ಸಂಸ್ಥಾನದ ಹಳ್ಳಿಯೊಂದರಲ್ಲಿ ವಾಸಿಸುತ್ತಿರುವನೆಂದೂ ಅವನು ಹೇಳುವ ಭವಿಷ್ಯ ಸಂಪೂರ್ಣ ಸತ್ಯವಾಗಿರುತ್ತದೆಂದು ಕೇಳಿ ಮಹಾರಾಜರು ಆಶ್ಚರ್ಯಪಟ್ಟರು. ಅಲ್ಪ ಸ್ವಲ್ಪ ವಿದ್ಯೆ ಬಂದವರು ಸಂಸ್ಥಾನದ ಮನ್ನಣೆ ಪಡೆಯಲು ಪ್ರಯತ್ನಿಸುತ್ತಿರುವ ಈ ಕಾಲದಲ್ಲಿ ಯುವಕನೊಬ್ಬ ಕೀರ್ತಿಗಾಗಿ ಆಶಿಸದೆ ತನ್ನ ರಾಜ್ಯದಲ್ಲಿಯೇ ವಾಸಿಸುತ್ತಿರುವುದನ್ನು ಕೇಳಿ ಅವರಿಗೆ ಪರಮಾನಂದವಾಯಿತು. ಅಂಥ ಯುವ ವಿದ್ವನ್ಮಣಿಯನ್ನು ತಾವೇ ಹೋಗಿ ಕಾಣಬೇಕೆಂದೂ ಅವರ ದರ್ಶನದಿಂದ ಪುನೀತನಾಗಿ, ತಮ್ಮ ಜೀವನದ ಕೆಲವು ಸಮಸ್ಯೆಗಳ ಬಗ್ಗೆ ಚರ್ಚಿಸಬೇಕೆಂದೂ ಅವರು ಯೋಚಿಸಿ ಮಹಾರಾಣಿ ಸಹಿತರಾಗಿ ಉತ್ತನೂರಿಗೆ ಹೋಗಲು ನಿಶ್ಚಯಿಸಿದರು. ಪ್ರಯಾಣಕ್ಕೆ ವ್ಯವಸ್ಥೆ ಮಾಡಲು ಪ್ರಧಾನ ಅಮಾತ್ಯರಿಗೆ ಆಜ್ಞೆಯಾಯಿತು.

ಮಹಾರಾಜರ ಪ್ರಯಾಣವೆಂದರೆ ಸಾಮಾನ್ಯವೆ? ಎಷ್ಟೆಲ್ಲಾ ಸೂಕ್ತ ಬಂದೋಬಸ್ತಿನ ವ್ಯವಸ್ಥೆಯಾಗಬೇಕು. ಏನೆಲ್ಲಾ ಮುಂಜಾಗರೂಕತೆ ವಹಿಸಬೇಕು. ಪೂರ್ವಭಾವಿಯಾಗಿ ಯಾರ್ಯಾರನ್ನು ಮೊದಲು ಅಲ್ಲಿ ಕಳಿಸಬೇಕು ಎಂದೆಲ್ಲಾ ಮಹಾ ಅಮಾತ್ಯರು ಕಾರ್ಯಕ್ರಮಗಳನ್ನು ಸಂಯೋಜಿಸತೊಡಗಿದರು. ಆ ದಾರಿಯಲ್ಲಿ ಬರುವ ಗ್ರಾಮಗಳ ಮುಖಂಡರಿಗೆಲ್ಲಾ ದರ್ಬಾರಿನಿಂದ ಕರೆಯೋಲೆ ಹೋಯಿತು.

ಹಳ್ಳಿಗಳ ಮುಖಂಡರು, ರಾಜ ನೌಕರರು ಮೊದಲಾದವರೆಲ್ಲಾ ಕೂಡಿ ಮಹಾರಾಜರು ಉತ್ತನೂರ ಸಂದರ್ಶನಕ್ಕೆ ಏನೇನು ಸನ್ನಾಹ ಮಾಡಬೇಕೆಂದು ಚರ್ಚಿಸಿ ನಿರ್ಧರಿಸಿದರು.

ಎಲ್ಲರಿಗೂ ಆಶ್ಚರ್ಯ. ಇದ್ದಕ್ಕಿದ್ದಂತೆ ಮಹಾರಾಜರು ಉತ್ತನೂರಿನ ಭೇಟಿಗೆ ಏಕೆ ನಿರ್ಧರಿಸಿದರು? ಯಾರೊಬ್ಬರಿಗೂ ಕೇಳುವ ಧೈರ್ಯವಿಲ್ಲ. ಹಾಗೆಂದು ರಾಜ

ಪ್ರಯಾಣದ ಮಾರ್ಗದಲ್ಲಿ ಯಾವ ವ್ಯವಸ್ಥೆಯೂ ಕಡಿಮೆಯಾಗಲಿಲ್ಲ. ಪ್ರತಿ ಗ್ರಾಮದ ಮುಂದೆ ಭವ್ಯವಾದ ತೋರಣ! ಮಹಾರಾಜರು ತಮ್ಮ ಗ್ರಾಮವನ್ನು ಹಾಯ್ದು ಹೋಗುತ್ತಾರೆಂಬ ಸುದ್ದಿಯೇ ಜನರಿಗೆ ಎಲ್ಲಿಲ್ಲದ ಸಂಭ್ರಮ ತಂದಿತ್ತು. ಮಹಾರಾಜರ ದರ್ಶನವಾಗುತ್ತದೆಂದು ತಿಳಿಸಿ ದೂರ ದೂರ ಗ್ರಾಮಗಳಲ್ಲಿಯ ತಮ್ಮ ಬಂಧು ಬಳಗದವರನ್ನು ಜನರು ಕರೆಸಿಕೊಂಡರು.

ಉತ್ತನೂರು ಜನಗಳ ಉತ್ಸಾಹಕ್ಕಂತೂ ಇತಿಮಿತಿಯಿರಲಿಲ್ಲ. ಮನೆಮನೆಗಳು ಸುಣ್ಣ ಬಣ್ಣಗಳಿಂದ ಅಲಂಕಾರಗೊಂಡವು. ಗ್ರಾಮದ ಸಣ್ಣ ಸಣ್ಣ ಬೀದಿಗಳು ಹಸಿರು ತೋರಣಗಳಿಂದ ಕಂಗೊಳಿಸಿದವು.

ಊರ ಹೊರಗೆ ಮಹಾರಾಜರ ಬಿಡಾರಕ್ಕೆಂದು ಭಾರಿ ಡೇರೆಗಳನ್ನು ಹಾಕಲಾಯಿತು. ಸುತ್ತಲೂ ಪಹರೆಯನ್ನು ಹೇಗೆ ನಿರ್ವಹಿಸಬೇಕೆಂದು ಸೈನಿಕರಿಗೆ ಸೂಚನೆ ನೀಡಲಾಗಿದ್ದಿತು. ಎರಡು ದಿನ ಮೊದಲೇ ನೂರಾರು ಸೈನಿಕರು ಗ್ರಾಮದಲ್ಲಿ ಬಂದು ತಂಗಿದ್ದರು. ಯಾರು ಯಾರು ಎಲ್ಲೆಲ್ಲಿ ನಿಂತು ಹೇಗೆ ಹೇಗೆ ತಮ್ಮ ಕರ್ತವ್ಯ ನಿರ್ವಹಿಸಬೇಕೆಂದು ಸೈನಿಕರಿಗೆ ತರಬೇತಿ ನೀಡಲಾಯಿತು. ಮನೆಗಳಿಂದ ಹೊರಗೆ ಬಂದು ದೂರದಿಂದ ರಾಜದರ್ಶನ ಪಡೆಯುವವರು ಯಾವ ಪೋಷಾಕಿನಲ್ಲಿರಬೇಕೆಂದು ಜನರಿಗೆ ಡಂಗೂರ ಮೂಲಕ ತಿಳಿಸಲಾಯಿತು. ಸುತ್ತಮುತ್ತಲ ಗ್ರಾಮಗಳ ಶಾನ್ಯಭೋಗರುಗಳು, ಪಟೇಲರುಗಳು ಒಂದು ವಾರ ಮೊದಲೇ ಬಂದು ಉತ್ತನೂರಿನಲ್ಲಿ ತಂಗಿದರು. ಪ್ರತಿ ಮನೆಯೂ ಬಂಧು ಬಳಗದವರಿಂದ ತುಂಬಿ ಹೋಯಿತು. ಎಲ್ಲೆಲ್ಲಿಯೂ ಸಂಭ್ರಮ. ಪ್ರತಿ ಕುಟುಂಬದಲ್ಲಿಯೂ ಉಲ್ಲಾಸ.

ಇದಾವುದನ್ನೂ ಅಷ್ಟಾಗಿ ಹಚ್ಚಿಕೊಳ್ಳದೆ ತನ್ನ ವೃತ್ತಿಯಲ್ಲಿ ತಾನು ನಿರತನಾಗಿದ್ದವನೆಂದರೆ ಇಡೀ ಗ್ರಾಮದಲ್ಲಿ ಭಾಗಣ್ಣನೊಬ್ಬನೆ. ಮಹಾರಾಜರ ದರ್ಶನಕ್ಕೆಂದು ಉತ್ತನೂರಿಗೆ ಬಂದ ಜನಗಳು ಭಾಗಣ್ಣನ ಬಳಿ ಕಣಿ ಕೇಳಲು ಆಗಮಿಸುತ್ತಿದ್ದರಿಂದ ಆತನ ಸಂಪಾದನೆಯೂ ಗಣನೀಯವಾಗಿ ಏರಿತು. ಎಣ್ಣೆ ಬಂದಾಗ ಕಣ್ಣು ಮುಚ್ಚಿಕೊಳ್ಳಬಾರದೆಂಬ ಲೋಕದ ರೀತಿ ಬಲ್ಲ ಭಾಗಣ್ಣ - ವೃತ್ತಿಯಲ್ಲಿ ಹೆಚ್ಚು ವೇಳೆ ಕಳೆಯತೊಡಗಿದ್ದನು.

ನಿಯಮಿತ ವೇಳೆಗೆ ಮಹಾರಾಜರು ಉತ್ತನೂರಿಗೆ ಆಗಮಿಸಿದೊಡನೆಯೇ ಕೊಂಬು ಕಹಳೆಗಳು ಮೊಳಗಿದವು. ಹರ್ಷ ಸೂಚಕವಾಗಿ ಕುಶಾಲುತೋಪುಗಳನ್ನು ಹಾರಿಸಲಾಯಿತು.

ಊರ ಹೊರಗೆ ರಚಿಸಲ್ಪಟ್ಟ ಡೇರೆಗಳಲ್ಲಿ ದೊಡ್ಡ ದೊಡ್ಡ ಸೈನ್ಯಾಧಿಕಾರಿಗಳು ಬಿಡಾರ ಮಾಡಿದರೆ. ದೊಡ್ಡ ಡೇರೆಯಲ್ಲಿ ಮಹಾರಾಜರು ಮಹಾರಾಣಿ ಸಹಿತರಾಗಿ ಬಂದು ಇಳಿದರು. ಅರಮನೆಯ ಸಖಿಯರು ಡೇರಿಯ ಸುತ್ತಮುತ್ತ ಬಂದು ನಿಂತರು.

ಮಹಾರಾಜರ ಕಾರ್ಯಕ್ರಮವೇನೆಂದು ಯಾರೊಬ್ಬರಿಗೂ ಗೊತ್ತಿಲ್ಲ.

ಗ್ರಾಮದ ಶ್ಯಾನಭೋಗರು, ಪಟೇಲರು ಸುಮಾರು ದೂರದಲ್ಲಿ ಟೊಂಕಕ್ಕೆ ಬಟ್ಟೆ ಸುತ್ತಿಕೊಂಡು ನಿಂತಿದ್ದರು. ತಮಗೆ ಸಿಕ್ಕ ಹೆಚ್ಚಿನ ಮನ್ನಣೆಯಿಂದ ಅವರು ತುಂಬಾ ಹರ್ಷಭರಿತರಾಗಿದ್ದರು.

ಊರ ಶ್ಯಾನಭೋಗರನ್ನು ತಮ್ಮ ಡೇರಿಯೊಳಗೆ ಬರುವಂತೆ ಮಹಾರಾಜರ ಅಪ್ಪಣೆಯಾಯಿತು.

ರಾಜದೃಷ್ಟಿ ಹೆಚ್ಚು ಬಿದ್ದರೂ ಕಷ್ಟವೆ. ಬೀಳದಿದ್ದರೂ ಕಷ್ಟವೆ. ತಮಗೆ ಮಾತ್ರ ಒಳಗೆ ಬರುವಂತೆ ಆಜ್ಞೆಯಾಗಿದ್ದನ್ನು ಕಂಡು ಶ್ಯಾನಭೋಗರು ಹೆದರು ಹೆದರುತ್ತಲೇ ಡೇರಿಯೊಳಗೆ ಪ್ರವೇಶಿಸಿದರು.

"ನಿಮ್ಮ ಗ್ರಾಮದ ಭಾಗಣ್ಣ ಎನ್ನುವ ಯುವಕನ ಬಗ್ಗೆ ನಿಮಗೇನು ಗೊತ್ತು?"

ಶ್ಯಾನುಭೋಗರು ತಬ್ಬಿಬ್ಬುಗೊಂಡರು. ಯಾವ ಭಾಗಣ್ಣನ ಬಗ್ಗೆ ಇವರು ಕೇಳುತ್ತಿದ್ದಾರೆ ಎಂಬ ಯೋಚನೆ ಅವರಿಗೆ.

ತಮ್ಮ ಗ್ರಾಮದ ಸಾಮಾನ್ಯ ಭಾಗಣ್ಣನೆಲ್ಲಿ? ಮಹಾರಾಜರೆಲ್ಲಿ ! ಮಹಾರಾಜರ ಗಮನ ಸೆಳೆಯುವಂಥ ದೊಡ್ಡ ವ್ಯಕ್ತಿಯಾಗಿದ್ದಾನೆಯೇ ತಮ್ಮ ಭಾಗಣ್ಣ ಎಂದು ಸಹ ಅವರು ಯೋಚಿಸತೊಡಗಿದರು.

"ಬ್ರಾಹ್ಮಣ ಯುವಕ ಭಾಗಣ್ಣನ ಬಗ್ಗೆಯೇ ಮಹಾರಾಜರು ವಿಚಾರಿಸು ತ್ತಿರುವುದು?" ವಿನೀತರಾಗಿ ಕೇಳಿದರು ಶ್ಯಾನುಭೋಗರು.

"ಹೌದು ; ಅವರ ಬಗ್ಗೆ ನಿಮಗೆ ಏನೆನಿಸುತ್ತಿದೆ ?"

ಆತನು ಪರರಾಜ್ಯದ ಗುಪ್ತಚಾರನೆ? ಒಂದು ವೇಳೆ ಹಾಗೆ ಆಗಿದ್ದರೆ ಆತನ ಬಗ್ಗೆ ಸರಕಾರದ ಗಮನಕ್ಕೆ ತಾರದ ಅಪರಾಧಕ್ಕೆ ತನಗೆ ಮರಣದಂಡನೆಯಾದರೆ ಗತಿಯೇನು?

ಶ್ಯಾನಭೋಗರು ಹೆದರುತ್ತಲೇ ನಿಂತರು.

ಮಹಾರಾಜರು ಮತ್ತೆ ಕೇಳಿದರು. "ಹೆದರಬೇಡಿ ಕುಲಕರ್ಣಿಗಳೇ. ನೀವೇನು ಅಪರಾಧ ಮಾಡಿಲ್ಲ ಅಥವಾ ನಿಮ್ಮ ಭಾಗಣ್ಣನೂ ಅಪರಾಧವೆಸಗಿಲ್ಲ. ಅವರು ಭವಿಷ್ಯವನ್ನು ಕರಾರುವಾಕ್ಕಾಗಿ ಹೇಳುತ್ತಾರೆಂದು ನಾವು ಕೇಳಿದ್ದೇವೆ. ಅದು ಎಷ್ಟರ ಮಟ್ಟಿಗೆ ಸತ್ಯ?"

"ನಾನು ಅವರಲ್ಲಿ ಭವಿಷ್ಯ ಕೇಳಿಲ್ಲ ಪ್ರಭುಗಳೇ. ಆದರೆ ನಮ್ಮ ಗ್ರಾಮಕ್ಕೆ ಅನೇಕ ಜನರು ಅವರ ಬಳಿ ಭವಿಷ್ಯ ಕೇಳಲಿಕ್ಕಾಗಿ ಆಗಮಿಸುತ್ತಿರುವ ವಿಷಯವಂತೂ ಸತ್ಯ."

ಯಾವುದೋ ಅಪರಾಧವಾಗಿ ತಮಗೆ ವಿಪತ್ತು ಕಾದಿದೆಯೆಂದು ಹೌಹಾರಿದ್ದ ಶ್ಯಾನಭೋಗರು ಮಹಾರಾಜರ ನಗುಮುಖ ಕಂಡು ಸಮಾಧಾನದ ಉಸಿರು ಬಿಟ್ಟು ವಿವರಿಸಿದರು.

"ಬರೀ ಭವಿಷ್ಯವಷ್ಟೇ ನುಡಿಯುತ್ತಾರೋ ಅಥವಾ ಪರಿಹಾರವನ್ನು ಸೂಚಿಸುತ್ತಾರೋ?" ಮಹಾರಾಜರ ಪಕ್ಕದಲ್ಲಿ ಕುಳಿತಿದ್ದ ಮಹಾರಾಣಿಯವರು ಪ್ರಶ್ನಿಸಿದಾಗ ಶ್ಯಾನಭೋಗರು ಆನಂದ ತುಂದಿಲರಾಗಿ ಹೋದರು. ಮಹಾರಾಣಿಯವರು ತಮ್ಮೊಂದಿಗೆ ಮಾತನಾಡುವುದೆಂದರೆ ಅದೇನು ಸಾಮಾನ್ಯ ಗೌರವವೆ?

ಕೂಡಲೇ ನೆಲಕ್ಕೆ ಬಗ್ಗಿ ತಮ್ಮ ವಿನೀತತ್ವ ವ್ಯಕ್ತಪಡಿಸಿದ ಶ್ಯಾನಭೋಗರು,

"ಹೌದು ತಾಯಿ, ಅವರು ಏನೇನೋ ಚಿತ್ರಗಳನ್ನು ಕುಂಡಲಿಗಳನ್ನು ರಚಿಸಿಕೊಡುತ್ತಾರೆ. ಅದರಿಂದ ತಮಗೆ ಶುಭವಾಯಿತೆಂದು ಅನೇಕರು ಹೇಳುತ್ತಿದ್ದಾರೆ. ಹೆಚ್ಚು ಅನಿಷ್ಟ, ಅಧಿಕ ಪೀಡೆಗಳು ಬಾಧಿಸುತ್ತಿವೆಯೆಂದು ಭಾಗಣ್ಣನವರಿಗೆ ಮನವರಿಕೆಯಾದರೆ ಒಂದೆರಡು ದಿನ ತಮ್ಮ ಮನೆಯಲ್ಲಿಯೇ ಇಟ್ಟುಕೊಂಡು ರಾತ್ರಿ ಭಜನಾ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಸೂಚಿಸುತ್ತಾರೆ ತಾಯಿ. ಅಂಥವರು ಸಂತೋಷದಿಂದ ಮರಳುತ್ತಿರುವುದನ್ನು ನಾನು ಗಮನಿಸಿದ್ದೇನೆ ಮಹಾರಾಣಿಯವರೇ." ಶ್ಯಾನಭೋಗರು ನಮ್ರರಾಗಿ ವಿವರಿಸಿ "ಅಪ್ಪಣೆಯಾದರೆ ಅವರನ್ನು ಈಗಲೇ ಇಲ್ಲಿಗೆ ಕರೆ ತರುತ್ತೇನೆ. " ಎಂದು ವಿನಂತಿಸಿದರು.

"ಅವರೇನೂ ನಮ್ಮನ್ನು ನೋಡಲು ಬಂದಿಲ್ಲವಷ್ಟೇ" ಮಧ್ಯದಲ್ಲಿಯೇ ಮಹಾರಾಜರು ಗಂಭೀರವಾಗಿ ಪ್ರಶ್ನಿಸಿದರು.

"ಇಲ್ಲ ಭೂಪಾಲರೇ. ಅವರಿಗೆ ಕರ್ಮದಲ್ಲಿ ಬಹಳ ಶ್ರದ್ಧೆ. ತಮಗಾಗಿ ಬಂದವರು ಕಾದು ಕುಳಿತಿರುವಾಗ, ತಾವು ಬೇರೆಡೆಗೆ ಹೋದರೆ ಅದು ಕರ್ತವ್ಯ ದ್ರೋಹವಾಗುತ್ತದೆಂದು ಅವರು ಹೇಳುತ್ತಿರುತ್ತಾರೆ. ಹಾಗೆ ಅವರು ಹೋಗಿದ್ದರೆ ಅದು ದೈವ ಕಾರ್ಯಕ್ಕೆ ಮಾತ್ರ. ದೇವರ ಪೂಜೆ, ಅತಿಥಿ ಸತ್ಕಾರಗಳನ್ನು ಬಿಟ್ಟರೆ ಅವರಿಗೆ ತಮ್ಮ ವೃತ್ತಿಯ ವಿನಹ ಬೇರೊಂದರಲ್ಲಿ ಆಸಕ್ತಿಯಿಲ್ಲ. ಜೊತೆಗೆ ಇನ್ನೂ ಸಣ್ಣ ವಯಸ್ಸು. ಮಹಾರಾಜರ ಮಹಿಮೆ ತಿಳಿದಿಲ್ಲ. ರಾಜಕೃಪೆಯ ವೈಭವದ ಕಲ್ಪನೆಯಿಲ್ಲ. ಹೀಗಾಗಿ ಆ ಬ್ರಾಹ್ಮಣ ತಮ್ಮ ಮನೆಯಲ್ಲಿಯೇ ಭವಿಷ್ಯ ಹೇಳುತ್ತಾ ಕುಳಿತಿರಬಹುದು." ಶ್ಯಾನಭೋಗರು ವಿವರಿಸಿದರು.

"ನಾವೇ ಅಲ್ಲಿಗೆ ಹೋಗುವುದಾದರೆ ಅವರ ಅಡ್ಡಿಯಿಲ್ಲ ವಷ್ಟೆ?" ಮಹಾರಾಜರ ಪ್ರಶ್ನೆ ಕೇಳಿ ಶ್ಯಾನಭೋಗರು ಸ್ವಲ್ಪ ತಬ್ಬಿಬ್ಬುಗೊಂಡರೂ ಕೂಡಲೇ ಚೇತರಿಸಿಕೊಂಡು "ಶಾಂತಂ ಪಾಪಂ ಭೂಪಾಲರೇ, ಯಾರೊಬ್ಬರು ಹೋದರೂ ಅತಿ ಪ್ರೀತಿಯಿಂದ ಸ್ವಾಗತಿಸುವ ಆ ಬ್ರಾಹ್ಮಣ ಈ ಭೂಮಂಡಲದ ಸಾರ್ವಭೌಮರು ದಯಮಾಡಿಸಿದರೆ ಅಡ್ಡಿಯೆಂದು ಭಾವಿಸಿಯಾನೆ? ಸಾಮಾನ್ಯವಾಗಿ ಈಗ ಅವರು ವೆಂಕಟೇಶನ ಗುಡಿಯಲ್ಲಿರುವ ಸಮಯ. ಗುಡಿಯ ಮುಂದೆ ಕಸ ಗುಡಿಸುವ, ರಂಗೋಲಿ ಹಾಕುವ ಕೆಲಸಗಳೆಂದರೆ ಅವರಿಗೆ ಬಹಳ ಇಷ್ಟ. ಆದರೆ ಮಹಾರಾಜರು ಚಿತ್ತೈಸಿರುವುದರಿಂದ ಗ್ರಾಮದಲ್ಲಿ ಪ್ರಜೆಗಳು ಹೇಗೆ ಬೇಕೋ ಹಾಗೆ ಓಡಾಡುವಂತಿಲ್ಲ. ಬೀದಿಗಳಲೆಲ್ಲಾ ರಾಜಭಟರು ತುಂಬಿರುವುದರಿಂದ ಅವರು ಮನೆಯಲ್ಲಿಯೇ ಇರಬಹುದು" ವಿವರಿಸಿದರು ಶ್ಯಾನಭೋಗರು.

ಕೂಡಲೇ ಸಿದ್ಧರಾಗುವಂತೆ ರಾಜಾರಾಮ ಭೂಪಾಲರು ಮಹಾರಾಣಿಯವರಿಗೆ ತಿಳಿಸಿದರು.

ತಟ್ಟೆಯ ತುಂಬಾ ಹಣ್ಣು-ಕಾಯಿಗಳನ್ನು ಇಟ್ಟುಕೊಂಡ ಮಹಾರಾಣಿ ಸಖಿಯರು ಸಿದ್ಧರಾಗಿ ನಿಂತರು.

ರಾಜಭಟರಿಗೆ ಯಾವ ಸೂಚನೆಯನ್ನೂ ಕೊಡದೆ ಮಹಾರಾಜರು ರಾಣಿ ದರ್ಬಾರಿನ ಸಹಿತ ಹೊರಗೆ ಬಂದದ್ದನ್ನು ನೋಡಿ ಸುತ್ತಲಿನ ಸೈನಿಕರು ಹೆದರಿದರು. ಸೈನ್ಯಾಧಿಕಾರಿಗಳು ತಬ್ಬಿಬ್ಬುಗೊಂಡರು.

ಮಹಾರಾಜರೇ ಹೇಳಿದರು. "ಕೆಲವೇ ಜನ ಮಾತ್ರ ನಮ್ಮ ಹಿಂದೆ ಬನ್ನಿ. ನಾವು ಪ್ರವೇಶಿಸುವ ಮನೆಯ ಸುತ್ತಮುತ್ತ ದೂರದಲ್ಲಿಯೇ ನೀವೆಲ್ಲಾ ಇರಬೇಕು.

ಅಂಗರಕ್ಷಕರೂ ಒಳಗೆ ಬರಬಾರದು" ಎಂದು ಹೇಳಿ ಭಾಗಣ್ಣನ ಮನೆಗೆ ತಮ್ಮನ್ನು ಕರೆದೊಯ್ಯುವಂತೆ ಶ್ಯಾನುಭೋಗರಿಗೆ ಆಜ್ಞಾಪಿಸಿದರು.

ದೊಡ್ಡ ದೊಡ್ಡ ಸೈನ್ಯಾಧಿಪತಿಗಳಿಗೆ ಇಲ್ಲದ ಮಹಾಭಾಗ್ಯ ತಮಗೆ ಸಿಕ್ಕಿದ್ದಕ್ಕಾಗಿ ಶ್ಯಾನಭೋಗರಿಗೆ ಎಲ್ಲಿಲ್ಲದ ಆನಂದ. ತಮ್ಮನ್ನು ಮುಂದೆ ನಡೆಯಬಿಟ್ಟ ಮಹಾರಾಜರ ಔದಾರ್ಯಕ್ಕೆ ಕೃತಜ್ಞತೆಯಿಂದ ಮನಸ್ಸು ಮಣಿಯಿತು. ಹೆಮ್ಮೆಯಿಂದ ಬೇಗ ಮುಂದೆ ನಡೆದರು. ಗ್ರಾಮದ ಬೀದಿಗಳಲ್ಲಿ ಮಹಾರಾಜರು ರಾಣಿ ಪರಿವಾರ ಸಹಿತರಾಗಿ ನಡೆಯುತ್ತಾ. ಹೊರಟಿರುವುದನ್ನು ಕಂಡು ಗ್ರಾಮದ ಜನರಿಗೆ ಎಲ್ಲಿಲ್ಲದ ಆಶ್ಚರ್ಯ. ರಸ್ತೆ ಬದಿಯಲ್ಲಿ ನಿಂತಿದ್ದ ರಾಜಭಟರು ನಿಂತಲ್ಲಿಯೇ ರಾಜವಂದನೆ ಸಲ್ಲಿಸಿ ಸೆಟೆದು ನಿಲ್ಲುತ್ತಿದ್ದರು.

ಮಹಾರಾಜರು ಒಳಗೆ ಬಂದಾಗ ಭಾಗಣ್ಣನವರು ಏನೋ ಬರೆಯುತ್ತಾ ಕುಳಿತಿದ್ದರು. ಅದಕ್ಕೂ ಮೊದಲು ಬಂದವರನ್ನು ಅವರು ಅವಸರವಸರವಾಗಿ ಕೆಲಸ ಮುಗಿಸಿ ಕಳಿಸುತ್ತಿದ್ದುದನ್ನು ಕಂಡು ವೆಂಕಮ್ಮನಿಗೆ ಆಶ್ಚರ್ಯವಾಗಿತ್ತು. ಈಗ ಮಹಾರಾಜರು, ಮಹಾರಾಣಿಯವರು ಹತ್ತಿಪ್ಪತ್ತು ಸಖಿಯರೊಡನೆ ಮನೆಯೊಳಗೆ ಪ್ರವೇಶಿಸಿದುದನ್ನು ಕಂಡು ಆಕೆ ತಬ್ಬಿಬ್ಬುಗೊಂಡಳು. ಮಗನಿಗೆ ಏನು ಹೇಳಬೇಕೆಂದು ಆಕೆಗೆ ತೋಚಲಿಲ್ಲ.

ಆದರೆ ಭಾಗಣ್ಣನ ಮುಖದಲ್ಲಿ ಸ್ವಲ್ಪವೂ ಆಶ್ಚರ್ಯ ಕಂಡು ಬರಲಿಲ್ಲ. ಮಹಾರಾಜರು ಮನೆಯೊಳಗೆ ಪ್ರವೇಶಿಸಿದೊಡನೆಯೆ ಎದ್ದು ಬಂದು ಭೂಪಾಲರ ಕರಪಿಡಿದು ಅವರನ್ನು ಒಳಗೆ ಬರುವಂತೆ ವಿನಂತಿಸಿದ.

"ನಿಮ್ಮ ಕೀರ್ತಿಯನ್ನು ಕೇಳಿದ್ದೆವು. ಭಾಗಣ್ಣನವರೇ, ಹೇಗೂ ಈ ಊರಿಗೆ ಆಗಮಿಸಿದ್ದೆವಲ್ಲಾ, ನಿಮ್ಮನ್ನು ನೋಡಿಕೊಂಡು ಹೋಗೋಣವೆಂದು ಇಲ್ಲಿಗೆ ಬಂದೆವು." ಮಹಾರಾಜರು ಹೇಳುತ್ತಿದ್ದಂತೆಯೇ ಭಾಗಣ್ಣ ಅವರಿಗೆ ವಂದಿಸಿ,

"ಕ್ಷಮಿಸಬೇಕು ಭೂಪಾಲರು, ಈ ಹುಡುಗನು ಧಾರ್ಷ್ಟ್ಯತನದಿಂದ ಮಾತನಾಡುತ್ತಾನೆಂದು ತಾವು ಭಾವಿಸುವುದಿಲ್ಲವಾದರೆ ಇದ್ದ ವಿಷಯ ಹೇಳಿ ಬಿಡುತ್ತೇನೆ" ವಿನೀತನಾಗಿ ನುಡಿದ ಭಾಗಣ್ಣ. "ಏನಪ್ಪಾ ಆ ಇದ್ದ ವಿಷಯ?" ಮಹಾರಾಜರು ಮುಗುಳ್ನಗುತ್ತಾ ಪ್ರಶ್ನಿಸಿದರು.

"ಇಲ್ಲಿಗೆ ಬರದೆ ಬೇರೆ ಗತ್ಯಂತರವೇ ಇರಲಿಲ್ಲ ಮಹಾರಾಜರಿಗೆ. ಅರಮನೆಯ ರಾಣೀವಾಸ ಸೆರೆಮನೆಯ ಕೋಣೆವಾಸದ ಶಿಕ್ಷೆಯಂತಾಗಿತ್ತು ತಮಗೆ. ಸಂತೋಷ

ವಾಗಿರಲು ತಾವು ರಾಣೀವಾಸಕ್ಕೆ ಬಂದೊಡನೆ ಅಮ್ಮನವರು ಮುನಿದು ಕೊಳ್ಳುತ್ತಿದ್ದರು. ಅವರ ಅಸಮಾಧಾನ ಕಂಡು ನಿಮಗೆ ಕಸಿವಿಸಿಯಾಗುತ್ತಿತ್ತು. ಅವರು ಹಾಕುತ್ತಿದ್ದ ಹುಬ್ಬು ಗಂಟು ಬಿಡಿಸಲಾಗದ ಕಗ್ಗಂಟಾಗಿತ್ತು. ಮೊನ್ನೆ ಮೊನ್ನೆಯಂತೂ ಅವರು ಉತ್ತನೂರಿಗೆ ಹೋಗಲೇಬೇಕೆಂದು ಕಣ್ಣೀರು ತುಂಬಿ ಕೇಳಿದಾಗ ಇಲ್ಲಿಗೆ ಬರಬೇಕಾದ ಅನಿವಾರ್ಯತೆಯನ್ನು ಅರಿತುಕೊಂಡಿರಿ. ಸಪ್ತ ಸಮುದ್ರಗಳನ್ನು ದಾಟಿದರೂ ದಾಟಬಹುದು. ಮುದ್ದಿನ ಮಡದಿಯ ಕಣ್ಣೀರು ಅತಿ ಕ್ರಮಿಸಿ ಯಾರು ಸಾಗಬಲ್ಲರು ಹೇಳಿ ಮಹಾರಾಜರೇ?" ನಗುತ್ತಾ ಭಾಗಣ್ಣ ಹೇಳಿದಾಗ ಮಹಾರಾಜರಿಗೆ ಆಶ್ಚರ್ಯವಾಗಿ ಹೋಯಿತು.

ಕೂಡಲೇ ಸುತ್ತ ಇದ್ದ ಸಖಿಯರಿಗೂ ಅಲ್ಲಿಂದ ಹೊರಗೆ ಹೋಗುವಂತೆ ಸೂಚನೆ ನೀಡಿದ ಮಹಾರಾಜರು ಎಲ್ಲರೂ ಹೋದ ಮೇಲೆ ಭಾಗಣ್ಣನ ಕೈಗಳನ್ನು ಹಿಡಿದು "ನೀವು ತ್ರಿಕಾಲ ಜ್ಞಾನಿಗಳು ನಿಮಗೆ ನಾನು ಹೇಳಬೇಕಾದ್ದು ಏನೂ ಉಳಿದಿಲ್ಲ. ನಮ್ಮ ಸಮಸ್ಯೆಗೆ ತಾವೇ ಪರಿಹಾರ ಸೂಚಿಸಿ ಕಾಪಾಡಬೇಕು" ರಾಜಾರಾಮ ಭೂಪಾಲರು ವಿನೀತರಾಗಿ ಕೇಳಿಕೊಂಡರು.

"ಹೆದರಬೇಡಿ, ಮಹಾರಾಜರೇ, ನಮ್ಮ ಪ್ರಭು ವೆಂಕಟೇಶ ನಿಮ್ಮ ಸಮಸ್ಯೆಗೆ ಪರಿಹಾರ ಸೂಚಿಸದೇ ಬಿಡಲಾರ". ಎಂದು ಕರೆದೊಯ್ದು ಎತ್ತರದ ಆಸನದ ಮೇಲೆ ಮಹಾರಾಜರನ್ನು ಮಹಾರಾಣಿಯವರನ್ನೂ ಕೂಡಿಸಿ. ಅಷ್ಟೇ ಎತ್ತರದ ಇನ್ನೊಂದು ಆಸನದ ಮೇಲೆ ತಾನು ಕುಳಿತು ತನ್ನ ಓಲೆಗರಿ ಗ್ರಂಥಗಳನ್ನು ತೆಗೆದು ಏನೇನೋ ಲೆಕ್ಕ ಹಾಕಿದ. ರಾಜದಂಪತಿಗಳ ಹಸ್ತರೇಖೆಗಳನ್ನೂ ಪರಿಶೀಲಿಸಿ ಒಮ್ಮೆ ಗಟ್ಟಿಯಾಗಿ ನಕ್ಕು ಬಿಟ್ಟ. ನಂತರ ನಿಧಾನವಾಗಿ ಮಹಾರಾಣಿಯವರ ಕಡೆ ತಿರುಗಿ ನುಡಿದ. ಮುಖದಲ್ಲಿ ಮಂದಹಾಸ ಮಿನುಗುತ್ತಿತ್ತು.

"ನಿಮ್ಮ ಮೂಗುತಿ ಕಿತ್ತಲು ಪ್ರಯತ್ನಿಸಿದವನು. ನಿಮ್ಮ ಕುಂಕುಮ ಕೆಡಿಸಿ ಕೇಕೆ ಹಾಕಿದವನು, ನಿಮ್ಮ ತಾಳಿ ಹರಿದವನು- ಈಗ ನಿಮ್ಮ ತಾಳ್ಮೆಯನ್ನು ಒಗೆಹಚ್ಚಿದ್ದಾನೆ. ಆಗ ಅಷ್ಟೆಲ್ಲಾ ಮಾಡಿದರೂ ಸುಮ್ಮನಿದ್ದ ನೀವು ಈಗ ತನ್ನಷ್ಟಕ್ಕೆ ತಾನು ಕೂಗುತ್ತಿದ್ದಾನೆಂದು ಹೆದರಿ ಅವನ ಬಗ್ಗೆ ಅಳುತ್ತಾ ಬಂದಿದ್ದೀರಿ."

ಭಾಗಣ್ಣನ ವಿವರಣೆ ಕೇಳಿ ಮಹಾರಾಜರು ತಮ್ಮ ರಾಣಿಯ ಕಡೆ ನೋಡಿದರು. ಮಹಾರಾಣಿ ಭೀತಿಯಿಂದ ಭಾಗಣ್ಣನನ್ನು ನೋಡುತ್ತಿದ್ದಳು.

ಭಾಗಣ್ಣನೇ ಮುಂದುವರೆದು ಹೇಳಿದ, "ಆಗೆಲ್ಲಾ ಅವನು ನಿಮ್ಮ ಮುಖದ

ಮೇಲೆ ಒದ್ದಾಗಲೂ ನೀವು ಸುಮ್ಮನಿದ್ದಿರಿ. ಅವನು ಬಂದು ಕೆನ್ನೆ ಕಡಿದಾಗಲೂ ನೀವು ಮಹಾರಾಜರಿಗೆ ದೂರುಕೊಡಲಿಲ್ಲ."

ಭಾಗಣ್ಣನ ವಿವರಣೆ ಕೇಳಿ ಮಹಾರಾಜರು ಒಮ್ಮೆ ತಮ್ಮ ರಾಣಿಯ ಕಡೆ ಸಂಶಯ ದೃಷ್ಟಿಯಿಂದ ನೋಡಿದರು.

ಭಾಗಣ್ಣ ಮಹಾರಾಜರಿಗೆ ಹೇಳಿದ.

"ದೊರೆಗಳು ಹಾಗೆಲ್ಲಾ ಮುನಿಯ ಬಾರದು. ಆಗ ನೀವೇ ಅವನಿಗೆ ಹೆದರಿ ಅಮ್ಮನವರನ್ನು ಮುಟ್ಟಲು ಹಿಂದೇಟು ಹಾಕುತ್ತಿದ್ದಿರಿ. ಅಕಸ್ಮಾತ್ ನೀವು ಮುಟ್ಟಿದ್ದು ನೋಡಿದರೆ ಅವರು ಜಾಡಿಸಿ ನಿಮಗೆ ಹೊಡೆಯುತ್ತಿದ್ದರು. ಅವರು ನಿಮ್ಮೆದುರಿಗೆ ಮುಟ್ಟಬಹುದು. ನೀವು ಅವರೆದುರಿಗೆ ಮುಟ್ಟುವಂತಿರಲಿಲ್ಲ. ಆಗೆಲ್ಲಾ ಸುಮ್ಮನಿದ್ದ ನೀವು ಈಗೇಕೆ ಮಹಾರಾಣಿಯವರನ್ನು ಆ ಕೆಟ್ಟಗಣ್ಣಿನಿಂದ ನೋಡುತ್ತಿದ್ದೀರಿ?"

ವಿವರಣೆ ಕೇಳಿದ ಮಹಾರಾಜರು ನಿಧಾನವಾಗಿ ಯೋಚಿಸಿದಾಗ ಸಂಗತಿ ಗ್ರಹಿಸಿ ಗಟ್ಟಿಯಾಗಿ ನಗತೊಡಗಿದರು. ಉಕ್ಕಿ ಉಕ್ಕಿ ಬರುತ್ತಿತ್ತು ಅವರ ನಗು. ಇತ್ತೀಚೆಗೆ ಮನಬಿಚ್ಚಿ ಅವರೆಂದೂ ಇಷ್ಟು ನಕ್ಕಿರಲಿಲ್ಲ.

ರಾಜ್ಯಭಾರ ನಿರ್ವಹಣೆ, ಅರಮನೆ ಸಂಪ್ರದಾಯಗಳ ಕಟ್ಟುನಿಟ್ಟು, ಶತ್ರು ವ್ಯೂಹಗಳನ್ನು ಭೇದಿಸುವ ಮುಂಜಾಗ್ರತಾಕ್ರಮ ನಾನಾ ರಾಜಕೀಯಗಳಲ್ಲಿ ನಿರತ ರಾದ ಮಹಾರಾಜರು ಮನಬಿಚ್ಚಿ ನಗುತ್ತಾರೆಲ್ಲಿ? ಈಗ ಇಷ್ಟೊಂದು ನಗುತ್ತಿ ರುವುದನ್ನು ಕಂಡು ಮಹಾರಾಣಿಯವರಿಗೂ ಆಶ್ಚರ್ಯವಾಯಿತು. ಆದರೂ ಅದರ ಕಾರಣ ತಿಳಿಯದೆ ಕಕ್ಕಾಬಿಕ್ಕಿಯಾಗಿ ನೋಡುತ್ತಿದ್ದರು.

ಮಹಾರಾಜರೇ, ನಗುನಗುತ್ತಾ ಭಾಗಣ್ಣನಿಗೆ ಹೇಳಿದರು "ನೀವಿನ್ನೂ ಬ್ರಹ್ಮಚಾರಿಗಳು. ಇಷ್ಟೆಲ್ಲಾ ಯಾವಾಗ ತಿಳಿದುಕೊಂಡಿರಿ. ಈ ಹಾಸಿಗೆ ಮನೆ ರಹಸ್ಯ ಗಳೆಲ್ಲಾ ನಿತ್ಯ ಸಂಸಾರದಲ್ಲಿ ಲೀನವಾಗಿರುವವರಿಗೇ ತಿಳಿಯುವುದಿಲ್ಲ. ಅನುಭವ ವಾದರೂ ಅರ್ಥವಾಗುವುದಿಲ್ಲ. ಭಲೆ; ಬಹಳ ಜಾಣರಿದ್ದೀರಿ. ಪ್ರಯಾಣದ ಬಳಲಿಕೆ ನಿಮ್ಮ ಮಾತಿನಿಂದ ಪರಿಹಾರವಾಯಿತು. ರಾಜತ್ವದ ಗಂಭೀರತೆಯನ್ನು ಸ್ವಲ್ಪ ಕಾಲ ದೂರ ಸರಿಸಿ ಮನಸ್ಸನ್ನು ಉಲ್ಲಾಸಗೊಳಿಸಿದಿರಿ. ನೀವು ಉತ್ತಮ ಭವಿಷ್ಯಕಾರರಷ್ಟೇ ಅಲ್ಲ; ಚತುರ ಮಾತುಗಾರ, ಹಾಸ್ಯ ಪ್ರಿಯರೂ ಆಗಿದ್ದೀರಿ,

ಭಲೆ. ಭಲೆ" ಮಹಾರಾಜರ ಪ್ರಶಂಸೆ ಕೇಳಿದ ಮೇಲೆಯೂ ಮಹಾರಾಣಿಯವರಿಗೆ ಅರ್ಥವಾಗಲಿಲ್ಲ. ಅವರು ಪಿಳಿಪಿಳಿ ನೋಡುತ್ತಲೆ ಇದ್ದರು.

ಮಹಾರಾಜರು ತಮ್ಮ ಪತ್ನಿಗೆ ಬಿಡಿಸಿ ಹೇಳಿದರು.

ಹುಡುಗರ ಮುಂದೆ ಇಂಥ ವಿಷಯಗಳನ್ನು ಮಾತನಾಡಬಾರದು. ನಿಜ; ಆದರೆ ಈ ಯುವಕರು ಸಾಮಾನ್ಯ ಜ್ಞಾನಿಗಳಲ್ಲ. ಆದ್ದರಿಂದ ಈ ನಿಯಮ ಇವರಿಗೆ ಅನ್ವಯಿಸುವುದಿಲ್ಲ. ನೆನಪಿಸಿಕೊಳ್ಳಿ ಮಹಾರಾಣಿಯವರೇ. ನಿಮ್ಮನ್ನು ಮುಟ್ಟಲು ನಾವು ಹಿಂದೇಟು ಹಾಕುತ್ತಿದ್ದ ಕಾಲವನ್ನು ನೀವು ಮರೆತು ಬಿಟ್ಟಿದ್ದೀರೆಂದು ಕಾಣುತ್ತಿದೆ. ನಿಮ್ಮ ಒಂದು ಪಕ್ಕದಲ್ಲಿ ಮತ್ತೊಬ್ಬರು ಮಲಗಿರುತ್ತಿದ್ದರು. ಅವರು ನಿಮ್ಮನ್ನು ಧಾರಾಳವಾಗಿ ಮುಟ್ಟುತ್ತಿದ್ದರು. ಎದೆಯ ಮೇಲೆ ಕೈಹಾಕುತ್ತಿದ್ದರು! ನಾವು ಮಾತ್ರ ಅವರಿಗೆ ಹೆದರಿ ಅವರು ನಿದ್ರಿಸುವವರೆಗೂ ಕಾದಿರುತ್ತಿದ್ದವು" ಹೇಳಿ ನಗುನಗುತ್ತಲೇ ಇದ್ದರು ಮಹಾರಾಜರು.

ಇಂಥ ವಿಷಯ ಕೈಹಿಡಿದ ಗಂಡ ಹೇಳಿ ನಗಬೇಕಾದರೆ-? ಆವೇಶ ಬರಿಸುವ ಸಂಗತಿಗಳನ್ನು ನಗುನಗುತ್ತಾ ವಿವರಿಸಬೇಕಾದರೆ-----------?

ಅಗ್ನಿಸಾಕ್ಷಿಯಾಗಿ ಕೈ ಹಿಡಿದ ಪತಿ ಪಕ್ಕದಲ್ಲಿ ಮಲಗಿದ್ದು ಮುಟ್ಟಲು ಹಿಂದೇಟು ಹಾಕುವಾಗ - ಇನ್ನೊಂದು ಪಕ್ಕದಲ್ಲಿ ಮಲಗಿ ಮೈಮೇಲೆ ಕೈ ಹಾಕುವುದಾದರೆ ಅವರು ಇನ್ನಾರು?

ಯೋಚಿಸಿದಾಗ ಉತ್ತರ ಹೊಳೆದು ಆಕೆಯೂ ನಗತೊಡಗಿದಳು. ಮೂವರೂ ಬಹಳ ಹೊತ್ತು ನಗುತ್ತಲೇ ಇದ್ದರು.

ಕಡೆಗೆ ಮಹಾರಾಣಿಯವರೇ ಪ್ರಶ್ನಿಸಿದರು.

"ಭಾಗಣ್ಣನವರೇ ಹೇಳಬೇಕಾದ ಸಂಗತಿಯನ್ನು ನೀವು ಸ್ವಾರಸ್ಯವಾಗಿಯೇ ಹೇಳಿದ್ದೀರಿ. ಅವನು ನಮ್ಮ ಚಿರಂಜೀವಿಯೆಂಬುದೇನೋ ಸರಿ. ನಿಮ್ಮ ಆ ಮೇಲಿನ ವಿವರಣೆಯೇನೋ ಸರಿಯಾಗಿಯೇ ಬಂದಿತು. ಆದರೆ ಮೊದಲು ಹೇಳಿದಿರಲ್ಲಾ ಅದೇ ಅರ್ಥವಾಗಲಿಲ್ಲ!

ಜ್ಞಾಪಿಸಿಕೊಂಡರು ಮಹಾರಾಣಿಯವರು.

"ಮೂಗುತಿ ಕಿತ್ತಲು ಕೇಕೆ ಹಾಕಿದವನು, ಹಣೆಯ ಕುಂಕುಮ ಕೆಡಿಸಿದವನು, ತಾಳಿ ಹರಿದವನು! ಇವೇ ಅರ್ಥವಾಗಲಿಲ್ಲ, ಏನು ಹಾಗೆಂದರೆ?"

"ತಾಯಿ, ಯುವರಾಜರ ಮೂರು ನಾಲ್ಕು ವಯಸ್ಸಿನ ಬಾಲ ಲೀಲೆಗಳನ್ನೇನೋ ಜ್ಞಾಪಿಸಿಕೊಂಡಿರಿ. ಇನ್ನೂ ಸ್ವಲ್ಪ ಹಿಂದಕ್ಕೆ ಅಂದರೆ ಒಂದು ವರ್ಷದೊಳಗಿನ ಶಿಶು ಆಟಗಳನ್ನು ನೆನಪಿಸಿಕೊಳ್ಳಿರಿ"

ಭಾಗಣ್ಣ ಹೇಳಿದ.

ಮಹಾರಾಣಿಯವರು ಯೋಚಿಸಿದರು. ಮುಖದಲ್ಲಿ ಮುಗುಳ್ನಗು ಮಿನುಗುತ್ತಿತ್ತು. ಅನೇಕ ರಾಣಿಯರಂತೆ ಮಕ್ಕಳ ಪೋಷಣೆ ಹೊಣೆಯನ್ನು ದಾದಿಗಳಿಗೆ ಒಪ್ಪಿಸದೆ ತಾವೇ ಸಾಕಿದ ರೀತಿಯನ್ನು ಜ್ಞಾಪಿಸಿಕೊಂಡರು. ಮಗುವು ಮೊಲೆ ಹಾಲು ಕುಡಿಯುವಾಗ ಅದು ತಾಯಿಯ ತಾಳಿಯನ್ನು ಗಟ್ಟಿಯಾಗಿ ಹಿಡಿಯುತ್ತಿತ್ತು. ಒಂದೆರಡು ಸಲ ಅದು ಕಿತ್ತು ಬಂದದ್ದೂ ಉಂಟು. ಮುಖದಲ್ಲಿ ಅಗಲವಾಗಿ ರಾರಾಜಿಸುತ್ತಿದ್ದ ಕುಂಕುಮವನ್ನು ಹಿಡಿಯಲು ಅದು ಪ್ರಯತ್ನಿಸುತ್ತಿತ್ತು. ಆಗ ಹಲವಾರು ಸಲ ಕುಂಕುಮ ಕೆಟ್ಟದ್ದೂ ನಿಜ. ಮೂಗಿನಲ್ಲಿ ಮಿನುಗುತ್ತಿದ್ದ ವಜ್ರದ ಮೂಗುತಿಯನ್ನು ನೋಡುತ್ತಾ ಕಿತ್ತಲು ಮಗು ಪ್ರಯತ್ನಿಸುತ್ತಿದ್ದುದು ಆಕೆಯ ಸ್ಮೃತಿ ಪಟಲದಲ್ಲಿ ಹಾಯ್ದು ಹೋದವು.

ಎಲ್ಲಾ ತಾಯಂದಿರಿಗೂ ಈ ಅನುಭವವಾಗಿರುತ್ತದೆ. ಆದರೆ ಅದೇ ಕ್ರಿಯೆಗಳನ್ನು ಶಬ್ದಗಳಲ್ಲಿ ಹೇಳಿದಾಗ ಏನೋ ಅಶುಭವೆಂದೆನಿಸುತ್ತದೆ. ಅಶುಭವನ್ನು ಶುಭವನ್ನಾಗಿ ತೋರುವ ಶ್ರೇಷ್ಠ ವಯಸ್ಸೇ ಶಿಶು ವಯಸ್ಸು.

ಭಾಗಣ್ಣನ ಪ್ರತಿಭೆ, ಸೂಕ್ಷ್ಮಾವಲೋಕನ ನೆನೆದು ಮಹಾರಾಣಿಯವರಿಗೆ ಆಶ್ಚರ್ಯವಾಗಿ ಹೋಯಿತು. "ನಮ್ಮ ಮಗ ಯುವರಾಜರಿಗಿಂತಲೂ ಚಿಕ್ಕ ವಯಸ್ಸು ನಿಮ್ಮದು. ಈಗಲೆ, ಇಷ್ಟೊಂದು ಪ್ರತಿಭೆಯೆ? ಇವೆಲ್ಲಾ ಬಾಲಲೀಲೆಗಳನ್ನು ನೀವು ಹೇಗೆ ಗಮನಿಸಿದಿರಿ?" ಮಹಾರಾಣಿಯವರು ಪ್ರಶ್ನಿಸಿದರು.

"ನಮ್ಮ ಪ್ರಭು ಶ್ರೀ ವೆಂಕಟೇಶ ತನ್ನ ಕೃಷ್ಣಾವತಾರದಲ್ಲಿ ತೋರಿದ ಬಾಲಲೀಲೆಗಳು ಒಂದೇ ಎರಡೇ ತಾಯಿ? ಅವನ ಬಾಲ್ಯ ರೂಪದ ಮೋಹಕತ್ವವನ್ನು ನೋಡಿಯೇ ನಮ್ಮ ಶ್ರೀ ಮಧ್ವಾಚಾರ್ಯರು ಉಡುಪಿಯಲ್ಲಿ ಶ್ರೀ ಗೀತಾಚಾರ್ಯನ ಬಾಲ ರೂಪವನ್ನೇ ಪ್ರತಿಷ್ಠಾಪಿಸಿದರು. ಶ್ರೀಮನ್ನಾರಾಯಣನು ಪ್ರಳಯಕಾಲದಲ್ಲಿ ಆಲದೆಲೆಯ ಮೇಲೆ ಮಲಗುವ ಆತ್ಮಾಕರ್ಷಕ ಅವಸ್ಥೆಯಲ್ಲವೆ ಶಿಶುರೂಪ? ಶ್ರೀ ಕೃಷ್ಣನ ಪ್ರೌಢಾವಸ್ಥೆಯನ್ನು ನೋಡಿದ ಮೇಲೆಯೂ ತಾಯಿ ದೇವಕಿಯು ಶ್ರೀ ಕೃಷ್ಣನ ಬಾಲರೂಪವನ್ನು ನೋಡಲು ಅಪೇಕ್ಷಿಸಿದಳು. ಉಡುಪಿಯಲ್ಲಿ

ಪ್ರತಿಷ್ಠಾಪಿಸಲು ಶ್ರೀಮಧ್ವಾಚಾರ್ಯರಿಗೆ ತನ್ನ ಬಾಲ್ಯ ರೂಪದ ಮೂರ್ತಿಯನ್ನೇ. ಶ್ರೀ ಕೃಷ್ಣ ದೊರಕಿಸಿಕೊಟ್ಟ."

ವಿವರಿಸುತ್ತಿದ್ದಾಗ ಭಾಗಣ್ಣನ ಮುಖದಲ್ಲಿ ಅಲೌಕಿಕವಾದ ಆಧ್ಯಾತ್ಮ ತೇಜಸ್ಸು ರಾರಾಜಿಸತೊಡಗಿತು. ಆ ಕಣ್ಣುಗಳಲ್ಲಿಯ ಕಾಂತಿ. ಮುಖದಲ್ಲಿ ಮೂಡಿದ ದಿವ್ಯ ಕಳೆ ಕಂಡು ನಮಸ್ಕರಿಸದೆ ಇರಲಾಗಲಿಲ್ಲ ಮಹಾರಾಣಿಯವರಿಗೆ

ಕೂಡಲೆ, ಕೇಳಿದರು.

"ನಮ್ಮ ಚಿರಂಜೀವಿಯ ವಿಷಯ ತಿಳಿಯಲಿಕ್ಕಾಗಿಯೇ ನಾವು ಬಂದಿದ್ದೇವೆಂದು ನೀವು ಹೇಳಿದ್ದು ಸರಿ. ಅವರ ವಿಷಯವೇನು! ಅದಕ್ಕೆ ಪರಿಹಾರವೇನು" ದುಗುಡದಿಂದ ಕೇಳಿದರು ಮಹಾರಾಣಿಯವರು.

ಭಾಗಣ್ಣ ನಿಧಾನವಾಗಿ ಯೋಚಿಸಿ, ಏನೇನೋ ಲೆಕ್ಕ ಹಾಕಿ ಕಡೆಗೆ ಹೇಳಿದ. "ಮಹಾರಾಣಿಯವರು ಮುನಿಯುವುದಿಲ್ಲವೆಂದು ಮಾತು ಕೊಡುವುದಾದರೆ ಕೆಲವು ವಿಷಯಗಳನ್ನು ತಿಳಿಸುತ್ತೇನೆಂದು ವಿನಂತಿಸಿದ. ಮಹಾರಾಣಿಯವರು "ನಮ್ಮ ಕುಟುಂಬ ಕಲ್ಯಾಣ ದೃಷ್ಟಿಯಿಂದ, ರಾಜ್ಯ ಹಿತಕಾಂಕ್ಷೆಯಿಂದ ನೀವು ಹೇಳುವ ಪ್ರತಿ ಮಾತೂ ನಮಗೆ ಮಾನ್ಯವೇ. ನೀವು ನೀಡುವ ಸೂಚನೆಗಳನ್ನ ಆಜ್ಞೆಯೆಂದು ಭಾವಿಸಿ ಪಾಲಿಸುತ್ತೇವೆ" ಎಂದು ಪ್ರಾರ್ಥಿಸಿದಳು.

"ಮಹಾರಾಣಿಯವರೇ; ಪ್ರತಿ ಮಹಿಳೆಗೂ ತೌರು ಮನೆಯವರ ಬಗ್ಗೆ ಅತಿಯಾದ ವಾತ್ಸಲ್ಯವಿರುತ್ತದೆ. ಮುಂದಿನ ತಲೆಮಾರಿಗೂ ಆ ಸಂಬಂಧ ಮುಂದು ವರೆದು ಬರಬೇಕೆಂದು ಅಪೇಕ್ಷಿಸುವುದೂ ಸಹಜವೆ. ಹಾಗೆಯೇ ನೀವು ನಿಮ್ಮ ತಮ್ಮನ ಮಗಳನ್ನು ಯುವರಾಜರಿಗೆ ತಂದುಕೊಳ್ಳಬೇಕೆಂಬ ಅಪೇಕ್ಷೆಯಲ್ಲಿದ್ದೀರಿ. ಆದರೆ ಅದು ಆಗಿ ಬರುವುದಿಲ್ಲವೆಂದು ನಮ್ಮ ಶಾಸ್ತ್ರ ಹೇಳುತ್ತಿದೆ."

ಮಹಾರಾಣಿಯವರು ಕೌತುಕದಿಂದ ಕೇಳುತ್ತಿದ್ದಂತೆ ಭಾಗಣ್ಣ ವಿವರಿಸ ತೊಡಗಿದ.

"ಯುವರಾಜರು ಇತ್ತೀಚೆಗೆ ಹುಚ್ಚರಂತೆ ವರ್ತಿಸುತ್ತಿದ್ದಾರೆ. ಕೂತಲ್ಲಿ ಕುಳಿತೇ ಬಿಡುತ್ತಾರೆ. ಎರಡೆರಡು ದಿನವಾದರೂ ಆಹಾರ ಸೇವಿಸುವುದಿಲ್ಲ. ಅವರ ಈ ವರ್ತನೆಯನ್ನು ನೀವು ಮೊದಲು ಮನಸ್ಸಿಗೆ ಅಷ್ಟಾಗಿ ಹಚ್ಚಿಕೊಳ್ಳಲಿಲ್ಲ. ಸರಿಹೋಗಬಹುದೆಂಬ ನಿರೀಕ್ಷೆಯಿಂದ ಉಪೇಕ್ಷೆ ತಾಳಿ ಬಿಟ್ಟಿರಿ. ಈಗ ಸುಮಾರು ಎಂಟು ವಾರಗಳಿಂದ ಅವರ ವರ್ತನೆ ವಿಪರೀತ ಹುಚ್ಚಿದ್ದು ಹೋಗಿದೆ. ಗಟ್ಟಿಗಟ್ಟಿ

ಯಾಗಿ ಅರಚುತ್ತಾರೆ. ಮಾತನಾಡಿಸಲು ಹೋದವರ ಮೇಲೆ ಕೈಗೆ ಸಿಕ್ಕ ಸಾಮಾನು ಗಳನ್ನು ಬೀಸಿ ಬೀಸಿ ಒಗೆಯುತ್ತಾರೆ. ಒಮ್ಮೊಮ್ಮೆ ಅಳುತ್ತಾ ಕೂಡುತ್ತಾರೆ. ಇದ್ದಕ್ಕಿದ್ದಂತೆ ಗಟ್ಟಿಗಟ್ಟಿಯಾಗಿ ನಗತೊಡಗುತ್ತಾರೆ. ಅವರಿಗೆ ಹುಚ್ಚು ಹಿಡಿದಿದೆಯೆಂದು ಹೊರಗೆ ಗೊತ್ತಾದರೆ ರಾಜ್ಯದ ಪ್ರಜೆಗಳು ಮುಂದೆ ಅವರ ರಾಜತ್ವವನ್ನು ಒಪ್ಪಲಿಕ್ಕಿಲ್ಲ. ಅಥವಾ ಶತ್ರುಗಳು ರಾಜ್ಯದ ಮೇಲೆ ಧಾಳಿಯಿಟ್ಟರೂ ಇಡಬಹುದು. ಈ ಮೊದಲಾದ ಕಾರಣಗಳಿಂದ ಯುವರಾಜರನ್ನು ಕೋಣೆಯೊಳಗೆ ಬಂಧಿಸಿ ವಿಷಯವನ್ನು ಗುಟ್ಟಾಗಿಟ್ಟಿದ್ದೀರಿ. ಯುವರಾಜರಿಗಾದ ಈ ಸ್ಥಿತಿಯನ್ನು ಕಂಡು ನಿಮ್ಮ ತಮ್ಮಂದಿರು ತಮ್ಮ ಮಗಳನ್ನು ಕೊಡಲು ಈಗ ಹಿಂದೇಟು ಹಾಕುತ್ತಿದ್ದಾರೆ"

ಭಾಗಣ್ಣ ವಿವರಿಸುತ್ತಿದ್ದಂತೆ ಈ ಮಾತು ಯಾರೂ ಹೊರಗೆ ಕೇಳುತ್ತಿಲ್ಲವಷ್ಟೇ ಎಂದು ಪರಿಶೀಲಿಸಲು ಮಹಾರಾಜರು ಸುತ್ತೆಲ್ಲಾ ಕಣ್ಣಾಡಿಸಿದರು.

ಭಾಗಣ್ಣನ ತಾಯಿ ವೆಂಕಮ್ಮ ತನ್ನ ಇತರ ಮೂವರು ಮಕ್ಕಳನ್ನು ಕೂಡಿಸಿಕೊಂಡು ಮನೆಯ ಮೂಲೆಯೊಂದರಲ್ಲಿ ಕುಳಿತಿದ್ದಾಳೆ. ಆ ಸ್ಥಳದಲ್ಲಿ ಮಹಾರಾಣಿಯವರ ಹೊರತು ಬೇರಾರೂ ಇಲ್ಲವೆಂದು ಖಾತ್ರಿ ಪಡಿಸಿಕೊಂಡ ಮಹಾರಾಜರು ಕೂಡಲೇ, ಭಾಗಣ್ಣನ ಎರಡು ಕೈಗಳನ್ನು ಹಿಡಿದು ದೈನ್ಯದಿಂದ ಪ್ರಾರ್ಥಿಸಿದರು.

"ಏಕೈಕ ಪುತ್ರ ಯುವರಾಜರು. ಅವರಿಗೆ ಹೀಗಾಗಿರುವುದರಿಂದ ನಾವೆಲ್ಲಾ ಹೆದರಿಬಿಟ್ಟಿದ್ದೇವೆ. ಇದಕ್ಕೆ ಏನಾದರೂ ಪರಿಹಾರ ಸೂಚಿಸಿ ನಮ್ಮ ಕುಟುಂಬವನ್ನು ಕಾಪಾಡಬೇಕು. ರಾಜ್ಯದ ಕ್ಷೇಮಕ್ಕಾಗಿ ಯುವರಾಜರು ಸರಿಹೋಗುವಂತೆ ಮಾರ್ಗ ತೋರಬೇಕು."

ಮಹಾರಾಜರ ಭೀತಿಯನ್ನು ಯುವರಾಜರ ಕ್ಷೇಮದ ಬಗ್ಗೆ ಅವರ ಕಳವಳವನ್ನು ಕಂಡು ಭಾಗಣ್ಣ ಸಾಂತ್ವನ ಧ್ವನಿಯಲ್ಲಿ ಹೇಳಿದ.

"ಯುವರಾಜರಿಗೆ ಬೇರೇನೂ ಹೆಚ್ಚಿನ ಪೀಡೆಯಿಲ್ಲ. ವೈದ್ಯಕೀಯ ಭಾಷೆಯಲ್ಲಿ ಹೇಳಬೇಕಾದರೆ ಅವರಿಗೆ ಕಾಮೋನ್ಮಾದವಾಗಿದೆಯಷ್ಟೇ. ಯೌವನ ವಯಸ್ಸು, ಆರೋಗ್ಯ ಪೂರ್ಣವಾದ ದೃಢಕಾಯ, ನೀತಿ ಮೌಲ್ಯಾಧಾರಿತ ಬದುಕು ಅವರದು. ತಣಿವು ಕಾಣದ ಕಾಮ ನೆತ್ತಿಗೇರಿ ಹುಚ್ಚೆದ್ದು ಬಿಟ್ಟಿದ್ದಾರೆ. ಅದನ್ನು ಯೋಗಮಾರ್ಗದಿಂದ ಸರಿಪಡಿಸಿಕೊಳ್ಳಬಹುದಾಗಿತ್ತು. ಆ ದಿಸೆಯಲ್ಲಿ ಪ್ರಯತ್ನಗಳಾಗಿಲ್ಲ. ಅಷ್ಟಕ್ಕೂ ವಯಸ್ಸಿಗನುಗುಣವಾಗಿ ಯುವರಾಜರಿಗೆ ಮದುವೆ ಮಾಡಿಬಿಟ್ಟಿದ್ದರೆ ಈ ಪ್ರಶ್ನೆ ಉದ್ಭವಿಸುತ್ತಿರಲಿಲ್ಲವೇನೋ!

ಹೇಳುತ್ತಿದ್ದ ಭಾಗಣ್ಣ...........

ದೊಡ್ಡ ದೊಡ್ಡವರ ಮನೆಗಳಲ್ಲಿ ವಿವಾಹಕ್ಕೆ ಇನ್ನೂ ಏನೇನೋ ನಂಟು ಹಾಕಿಕೊಳ್ಳುತ್ತಾರೆ. ರಾಜಮಹಾರಾಜರ ಮನೆಗಳಲ್ಲಂತೂ ಪ್ರತಿ ವಿವಾಹಕ್ಕೆ ಒಂದು ರಾಜಕೀಯ ಕಾರಣವನ್ನು ಸಂಯೋಜಿಸುತ್ತಾರೆ. ಹಾಗೆಯೇ ತಾವು ತಮ್ಮ ಭಾವ ಮೈದುನನ ಮಗಳನ್ನು ತಮ್ಮ ಮಗನಿಗೆ ತಂದು ಕೊಳ್ಳಬೇಕೆಂಬ ಅಪೇಕ್ಷೆಯಲ್ಲಿ ಒಂದು ವ್ಯವಹಾರ ಜಾಣತನವಿದ್ದದೂ ಸರಿಯೆ. ಮಹಾರಾಣಿಯವರ ತಮ್ಮಂದಿರು ಸಮರ್ಥ ಆಡಳಿತಗಾರರು. ಶೂರಸೇನಾನಿ. ರಾಜ್ಯದಲ್ಲಿ ಉನ್ನತ ಹುದ್ದೆಯನ್ನು ಅವರಿಗೆ ನೀಡಿದ್ದೀರಿ. ಅವರಿಗಿರುವ ಏಕೈಕ ಮಗಳನ್ನು ಸೊಸೆಯನ್ನಾಗಿ ಮಾಡಿ ಕೊಂಡುಬಿಟ್ಟರೆ ಅವರು ತಮ್ಮ ಮಗಳ ಕಲ್ಯಾಣಕ್ಕಾಗಿ ಅಳಿಯನ ಅಭ್ಯುದಯ ಬಯಸಿ ರಾಜ್ಯಕ್ಕೆ ತಮ್ಮನ್ನು ಸಂಪೂರ್ಣ ಸಮರ್ಪಿಸಿಕೊಂಡು ಬಿಡುತ್ತಾರೆ. ತಮ್ಮ ನಂತರವೂ ಯುವರಾಜರಿಗೆ ಮಾವನವರ ರಕ್ಷಣೆಯಿರುತ್ತದೆ. ಅಕಸ್ಮಾತ್ ರಾಜಕೀಯ ಅಭದ್ರತೆ ಉಂಟಾದರೆ ಸನ್ನಿವೇಶದ ದುರ್ಲಾಭ ಪಡೆದು ತಮ್ಮ ಮಗನಿಗೆ ಅನ್ಯಾಯ ಮಾಡಲಾರರು ಎಂಬ ನಿಮ್ಮ ಯೋಜನೆ ವ್ಯವಹಾರ ಸಮ್ಮತವೇನೋ ಹೌದು. ಆದರೆ ಈ ಲಾಭಾಲಾಭಗಳ ಲೆಕ್ಕಾಚಾರದಲ್ಲಿ ಯುವರಾಜರ ವಯಸ್ಸನ್ನು ತಾವು ಕಡೆಗಣಿಸಿ ಬಿಟ್ಟಿರಿ. ಅವರಿಗೀಗ ಸುಮಾರು ಮೂವತ್ತು ವರ್ಷ. ಬ್ರಹ್ಮಚರ್ಯ ವನ್ನು ಕಟ್ಟುನಿಟ್ಟಾಗಿ ಪಾಲಿಸಲು ನಮ್ಮ ಹಿರಿಯರು ಕೆಲವು ನಿಯಮಗಳನ್ನು ರಚಿಸಿಟ್ಟಿದ್ದಾರೆ. ಅವನ್ನು ಅನುಸರಿಸಿದರೆ ವಯಸ್ಸಿಗನುಗುಣವಾಗಿ ನಿರ್ಮಾಣ ಗೊಂಡ ರೇತಸ್ಸು, ಧೀ ಶಕ್ತಿಯ ಆಧಾರವಾಗಿ ಬುದ್ಧಿ ಶರೀರಗಳ ವಿಕಾಸಕ್ಕೆ ಕಾರಣವಾಗುತ್ತದೆ. ಆದರೆ ಅರಮನೆಯ ಸುಖಸೌಕರ್ಯಗಳು ಅವಕ್ಕೆ ಅಷ್ಟಾಗಿ ಪೋಷಕವಾಗಿರುವುದಿಲ್ಲ. ಹೀಗಾಗಿ ಯುವರಾಜರು ಕಾಮೋನ್ಮಾದಗೊಂಡು ಹೀಗಾಗಿ ಬಿಟ್ಟಿದ್ದಾರೆ. ತಮ್ಮ ಭಾವಮೈದುನನ ಮಗಳು ಇನ್ನೂ ಎಂಟು ವರ್ಷದ ಹಸುಳೆ. ಅವಳು ಯುವರಾಜರ ಜೀವನದಲ್ಲಿ ಪ್ರವೇಶಿಸಬೇಕಾದರೆ ಇನ್ನು ಆರೆಂಟು ವರ್ಷಗಳಾದರೂ ಬೇಕು. ತಾವು ವಿವಾಹದ ವಿಷಯದಲ್ಲಿ ಲಾಭನಷ್ಟಗಳ ಲೆಕ್ಕಾಚಾರವನ್ನು ಬಿಟ್ಟು ತಮ್ಮ ಪುತ್ರರಿಗೆ ಕೂಡಲೇ ವಿವಾಹದ ವ್ಯವಸ್ಥೆ ಮಾಡಿ. ನಾನು ಈಗ ಕೊಡುವ ಯಂತ್ರವನ್ನು ಅವರಿಗೆ ಕಟ್ಟಿ. ವಿವಾಹದ ಸುದ್ದಿ ಕೇಳಿದ್ದಕ್ಕಾಗಿ ನಿರಾಶೆ ತೊಲಗಿ ಅವರಿಗೆ ಗುಣವಾಯಿತು ಎಂದು ಕೆಲವರು ಲೆಕ್ಕಾಚಾರ ಮಾಡಿಕೊಳ್ಳುತ್ತಾರೆ. ಯಂತ್ರದ ಪ್ರಭಾವದಿಂದ ಹೀಗಾಯಿತೆಂದು ಹಲವರು ಭಾವಿಸುತ್ತಾರೆ. ಯಾರು ಹೇಗಾದರೂ ಲೆಕ್ಕಹಾಕಿಕೊಳ್ಳಲಿ. ತೌರು ಮನೆಯವರ ಸಂಬಂಧವನ್ನು ಮುಂದುವರಿಸಿಕೊಂಡು ಹೋಗಬೇಕೆಂಬ ಮಹಾರಾಣಿಯವರ

ಅಪೇಕ್ಷೆ ಇದರಿಂದ ನೆರವೇರಲಿಕ್ಕಿಲ್ಲ. ತಮ್ಮ ನಂತರದ ರಾಜ್ಯಭಾರ ವ್ಯವಸ್ಥೆಗೆ ತಾವು ಹಾಕಿದ ಲೆಕ್ಕಾಚಾರವೂ ಈಡೇರಲಿಕ್ಕಿಲ್ಲ. ಹಾಗಿದ್ದರೂ ಅವರಿಗೆ ಕೂಡಲೇ ವಿವಾಹ ಮಾಡಿದರೆ ಅವರು ಸರಿಹೋಗುವುದಷ್ಟೇ ಅಲ್ಲ, ಯಾರ ನೆರವಿಗೂ ಕಾಯದೆ ರಾಜ್ಯಭಾರ ನಿರ್ವಹಿಸಿಕೊಂಡು ಹೋಗುವ ಸಮರ್ಥರಾಗಿ ಅವರು ರೂಪುಗೊಳ್ಳುತ್ತಾರೆ.

ಭಾಗಣ್ಣನ ಸಲಹೆಯನ್ನು ಕೇಳಿದ ಮಹಾರಾಜರು ತಮ್ಮ ರಾಣಿಯವರ ಕಡೆ ಒಮ್ಮೆ ನೋಡಿದರು.

"ನಮ್ಮನ್ನೇನು ನೋಡುತ್ತೀರಿ. ಪುತ್ರನ ಕಲ್ಯಾಣಕ್ಕಿಂತ ಹೆಚ್ಚಿನದೇನನ್ನು ಯಾವ ತಾಯಿಯೂ ಬಯಸುವುದಿಲ್ಲ. ನಮ್ಮ ತಮ್ಮನ ಮಗಳಿಗಾಗಿ ಕಾಯುವ ಬದಲು ಯುವರಾಜರಿಗೆ ಬೇರೊಂದು ಕಡೆ ಸಂಬಂಧ ನೋಡಿ ಬಿಡೋಣ" ನುಡಿದರು ಮಹಾರಾಣಿಯವರು.

"ಆದರೆ ನಿಮ್ಮ ತಮ್ಮಂದಿರು ಈ ಬಗ್ಗೆ ಬೇಸರ ಮಾಡಿಕೊಳ್ಳಲಿಕ್ಕಿಲ್ಲವಷ್ಟೆ?" ಮಹಾರಾಜರ ಪ್ರಶ್ನೆ.

"ಯುವರಾಜರಿಗೆ ಹೀಗಾಗಿದೆಯೆಂದು ತಿಳಿದೊಡನೆಯೇ ಅವನು ಮುಖವನ್ನು ಸಿಂಡರಿಸಿಬಿಟ್ಟ. ತನ್ನ ಮಗಳನ್ನು ಕೊಡಲು ಅವನು ಹಿಂದೇಟು ಹಾಕುತ್ತಿರುವ ವಿಷಯವನ್ನು ಅವನ ಮುಖವೇ ಹೇಳುತ್ತಿತ್ತು. ಅವನಿಗೆ ಅವನ ಮಗಳ ಹಿತ ಎಷ್ಟು ಮುಖ್ಯವೋ ನಮಗೆ ನಮ್ಮ ಯುವರಾಜರ ಹಿತ ಅಷ್ಟೇ ಮುಖ್ಯವಷ್ಟೆ? ಅವನು ಏನಾದರೂ ಬೇಸರಿಸಿಕೊಳ್ಳಲಿ, ಎಷ್ಟಾದರೂ ಮುನಿಯಲಿ, ಅದರ ಗೊಡವೆ ನಮಗೆ ಬೇಡ. ಕೂಡಲೇ, ಬೇರೆಡೆಗೆ ವಿವಾಹದ ವ್ಯವಸ್ಥೆ ಮಾಡಿ ಬಿಡಿ" ಮಹಾರಾಣಿಯವರು ಉತ್ತರಿಸಿದರು.

ತಮ್ಮ ಕುಟುಂಬದ ಸಮಸ್ಯೆಯೊಂದು ಇಷ್ಟು ಸುಲಭವಾಗಿ ಪರಿಹಾರ ಕಂಡಿದ್ದಕ್ಕಾಗಿ ಮಹಾರಾಜರಲ್ಲಿ ಉಲ್ಲಾಸ ಮೂಡಿತು.

ಭಾಗಣ್ಣನ ಬಗ್ಗೆ ಕೃತಜ್ಞತೆಯಿಂದ ಅವರ ಶಿರಬಾಗಿತು. ಸಂಕಷ್ಟ ಪರಿಹಾರಕ ಯಂತ್ರವನ್ನು ಅವರಿಂದ ತೆಗೆದುಕೊಂಡು ರಾಜದಂಪತಿಗಳು ಅವರಿಗೆ ನಮಸ್ಕರಿಸಿದರು.

ಮಹಾರಾಜರು ಹೊರಗೆ ಹೋಗಿ ಸೈನಿಕನೊಬ್ಬನಿಗೆ ಏನೋ ಸೂಚಿಸಿದರು.

ಸ್ವಲ್ಪ ಹೊತ್ತಿನಲ್ಲಿಯೇ ಚಿನ್ನದ ನಾಣ್ಯಗಳನ್ನು ಎತ್ತರವಾಗಿ ಪೇರಿಸಿದ ಎರಡು ಬೆಳ್ಳಿ ತಟ್ಟೆಗಳೊಂದಿಗೆ ದಾಸಿಯರು ಪ್ರವೇಶಿಸಿದರು. ಅವನ್ನು ಭಾಗಣ್ಣನಿಗೆ

ಸಮರ್ಪಿಸಿದಾಗ ದೂರದಲ್ಲಿದ್ದ ವೆಂಕಮ್ಮನ ಕಣ್ಣು ಝಗ ಝಗವೆಂದು ಹೊಳೆದವು.

ಅದನ್ನು ಸ್ವೀಕರಿಸುತ್ತಾ ಭಾಗಣ್ಣ ಮಹಾರಾಜರಿಗೆ ವಿನಂತಿಸಿದ.

"ತಮ್ಮ ರಾಜ್ಯದಲ್ಲಿಯೇ ಇರುವ ಪಕ್ಕದ ಸಂಕಾಪುರದಲ್ಲಿ ಒಂದು ದೊಡ್ಡ ಕಾರ್ಯವನ್ನು ನಾನು ಹಮ್ಮಿಕೊಂಡಿದ್ದೇನೆ. ನಿಮ್ಮ ಚಿರಂಜೀವಿಗೆ ವಯಸ್ಸಿಗನು ಗುಣವಾಗಿ ಹೇಗೆ ವಿವಾಹವಾಗಲಿಲ್ಲವೋ, ಹಾಗೆ ನನ್ನ ತಮ್ಮಂದಿರಿಗೆ ವಯಸ್ಸಿಗನು ಗುಣವಾಗಿ ಉಪನಯನವಾಗಲಿಲ್ಲ. ನಮಗಿದ್ದ ಬಡತನವೂ ಅದಕ್ಕೆ ಕಾರಣ ವಾಗಿದ್ದಿತು. ಅನಂತರ ನನ್ನ ಮನಸ್ಸೆಲ್ಲಾ ವ್ಯಕ್ತಿಗತ ಸಾಧನೆಯಲ್ಲಿ ತಲ್ಲೀನ ಗೊಂಡಿದ್ದರಿಂದ ಕುಟುಂಬದ ಕರ್ತವ್ಯವನ್ನು ಕಡೆಗಣಿಸಿ ಬಿಟ್ಟೆ. ನನಗೆ ತಿಳಿಡಿಸಿದಂತೆ ಈ ರಾಜ್ಯದ ಹಲವಾರು ಕಡೆ ಬ್ರಾಹ್ಮಣರು ತೀವ್ರ ಬಡತನದಿಂದ ಬಳಲುತ್ತಿದ್ದಾರೆ. ಆ ಕಾರಣದಿಂದ ಉಪನಯನ ಮುಂದೂಡಲಾಗುತ್ತಿದೆ. ಎಂಟನೇ ವರ್ಷದಲ್ಲಿ ಯಾವ ಕಾರಣಕ್ಕೂ ಉಪನಯನವನ್ನು ಮುಂದೂಡಬಾರದೆಂಬ ನಿಯಮವಿದ್ದರೂ ಅದನ್ನು ಪಾಲಿಸಲಾಗುತ್ತಿಲ್ಲ. ಅಂಥವರಿಗಾಗಿ ಸಾಮೂಹಿಕ ಉಪನಯನ ಕಾರ್ಯ ಕ್ರಮವನ್ನು ಹಮ್ಮಿಕೊಂಡಿದ್ದೇನೆ. ಇದು ಸಮಾಜದ ಒಂದು ಮುಖ್ಯ ಕಾರ್ಯಕ್ರಮವೂ ಹೌದು. ಇಂಥ ಕಾರ್ಯಕ್ರಮಗಳು ರಾಜ್ಯದಲ್ಲಿ ನಡೆದರೆ ಧನ ಉಳಿತಾಯ ವಾಗುವುದಲ್ಲದೆ ಅನೇಕ ಕುಟುಂಬಗಳು ಋಣಭಾರದಿಂದ ಪಾರಾಗುತ್ತವೆ. ಈ ರೀತಿ ಸಾಮೂಹಿಕವಾಗಿ ಮಾಡಿದರೆ ತಮ್ಮ ಘನತೆಗೆ ಚ್ಯುತಿ ಎಂದು ಹಲವಾರು ಭಾವಿಸುವ ಸಂಭವವುಂಟು. ಅಂಥ ಭಾವನೆ ಬಾರದಿರುವಂತೆ ತಾವೇ ಈ ಕಾರ್ಯಕ್ರಮದಲ್ಲಿ ಭಾಗವಹಿಸಬೇಕು. ಆಗ ಇದಕ್ಕೊಂದು ವ್ಯಾಪಕ ಅರ್ಥ ಉಂಟಾಗುತ್ತದೆ. ತಮ್ಮ ದರ್ಶನವೂ ದೊರೆಯುತ್ತದೆಂಬ ಸ್ಫೂರ್ತಿಯಿಂದ ಹೆಚ್ಚು ಜನರು ಭಾಗವಹಿಸುತ್ತಾರೆ" ಭಾಗಣ್ಣನ ವಿವರಣೆ ಕೇಳಿ ಮಹಾರಾಜರು ತುಂಬಾ ಸಂತೋಷಪಟ್ಟರು.

"ನೀವು ದೊಡ್ಡ ಋಷಿಗಳು ಭಾಗಣ್ಣನವರೆ, ನಿಮಗಿರುವ ಸಾಮಾಜಿಕ ಕಳಕಳಿ ನಮ್ಮ ನಾಡಿನ ಭಾಗ್ಯ. ತಾವು ಯಾವಾಗ ಹೇಳಿ ಕಳಿಸಿದರೂ ಅದನ್ನು ಗುರುವಾಜ್ಞೆ ಯೆಂದು ಪರಿಗಣಿಸಿ ನಾವು ಆಗಮಿಸುತ್ತೇವೆ." ಎಂದು ನುಡಿದು ತಮ್ಮ ಕುಟುಂಬ ಸಮಸ್ಯೆಗಳ ಬಗ್ಗೆ ಪುನಃ ಚರ್ಚಿಸಿ ಭಾಗಣ್ಣನಿಗೆ ನಮಸ್ಕರಿಸಿ ಮಹಾರಾಜರು ರಾಜಧಾನಿಗೆ ಹಿಂದಿರುಗಿದರು.

ಮಹಾರಾಜರು ಹೋದ ಮೇಲೆ ಉಪನಯನ ಕಾರ್ಯಕ್ರಮದ ಬಗ್ಗೆ ವಿಶೇಷ ವ್ಯವಸ್ಥೆಯಲ್ಲಿ ಭಾಗಣ್ಣ ನಿರತನಾದ. ಹಳ್ಳಿ ಹಳ್ಳಿಗಳಿಗೆ ತಮ್ಮಂದಿರನ್ನು ಕಳಿಸಿ ಹೆಚ್ಚು ಕುಟುಂಬಗಳು ಭಾಗವಹಿಸುವಂತೆ ಪ್ರೇರಣೆ ನೀಡಿದ. ತಮ್ಮ ಮನೆಗೆ ಕಣಿ ಕೇಳಲಿಕ್ಕೆ ಬರುತ್ತಿದ್ದ ಜನಗಳ ಮೂಲಕವೂ ಹಳ್ಳಿಗಳಿಗೆ ಸುದ್ದಿ ಕಳಿಸಲಾಯಿತು.

ಸಂಕಾಪುರದಲ್ಲಿ ನಡೆಯಲಿರುವ ಸಾಮೂಹಿಕ ಉಪನಯನದ ಮಹತ್ವವನ್ನು ಗಮನಿಸಿ. ಮಹಾರಾಜರೇ ಆಗಮಿಸುವರೆಂಬ ಸುದ್ದಿ ಕೇಳಿ ಬಹಳ ಜನ ಬ್ರಾಹ್ಮಣರು ತಮ್ಮ ತಮ್ಮ ಮಕ್ಕಳ ಉಪನಯನವನ್ನು ಅಲ್ಲಿಯೇ ನಿರ್ವಹಿಸಲು ನಿರ್ಧರಿಸಿದರು.

ಭಾಗಣ್ಣ ಒಂದೆರಡು ದಿನ ಮೊದಲೇ ಸಂಕಾಪುರದಲ್ಲಿ ಹೋಗಿ ನಿಂತು ವ್ಯವಸ್ಥೆಯಲ್ಲಿ ನಿರುತನಾದ.

ಗಾಯತ್ರಿಮಂತ್ರದ ಮಹಾಸಿದ್ಧ, ಜಗತ್ತಿನ ಆದಿ ಗುರು ಶ್ರೀ ಆಂಜನೇಯ ಸ್ವಾಮಿ ಗುಡಿಯ ಮುಂದೆ ವಿಶಾಲ ಚಪ್ಪರವನ್ನು ಹಾಕಿಸಲಾಯಿತು. ದೂರ ದೂರದ ಊರುಗಳಿಂದ ಪೌರೋಹಿತ್ಯಕ್ಕಾಗಿ ವೇದವಿದ್ಯಾಪ್ರವೀಣರನ್ನು ಕರೆಸ ಲಾಯಿತು. ಅಲ್ಲಲ್ಲಿ ಹೋಮಕುಂಡಗಳು ನಿರ್ಮಾಣವಾದವು. ದೂರದೂರದಲ್ಲಿ ಪ್ರತ್ಯೇಕ ಪ್ರತ್ಯೇಕವಾಗಿ ವಟುಗಳಿಗೆ ಉಪನಯನ ನಿರ್ವಹಿಸುವ ವ್ಯವಸ್ಥೆ ಆಯಿತು. ಪ್ರತಿ ವಟುವಿಗೂ ಪ್ರತ್ಯೇಕ ಪುರೋಹಿತರು, ಸಹಾಯಕರು ನಿಯಮಿಸ ಲ್ಪಟ್ಟರು. ವಟುವಿನ ಬಂಧು ಬಳಗದವರಿಗೆಲ್ಲಾ ಇಳಿದುಕೊಳ್ಳಲು ವಿಶೇಷ ವ್ಯವಸ್ಥೆ ಮಾಡಲಾಯಿತು.

ಶ್ಯಾನುಭೋಗ ಗುಂಡಪ್ಪನವರಿಗೆ ಈಗಾಗಲೇ, ಸಾಕಷ್ಟು ವಯಸ್ಸಾಗಿದ್ದಿತು. ಜನಿವಾರ ತಯಾರಿಸಿಕೊಳ್ಳಲು ಅರಳಿಗೂ ಗತಿಯಿಲ್ಲದೆ ಕನಲುತ್ತಿದ್ದ ವೆಂಕಮ್ಮನ ಮಗ ಭಾಗಣ್ಣನು ಈಗ ಹತ್ತಾರು ಬಾಲಕರಿಗೆ ಉಪನಯನ ನಿರ್ವಹಿಸುವ ಕಾರ್ಯದಲ್ಲಿ ನಿರುತನಾಗಿರುವುದನ್ನು ಕಂಡು ಎಲ್ಲಿಲ್ಲದ ಸಂತೋಷ. ಶ್ಯಾನಭೋಗ ವೆಂಕಣ್ಣನವರಂತೂ ಸೇವಾನು ಸೇವಕರಂತೆ ಭಾಗಣ್ಣನ ಕಾರ್ಯದಲ್ಲಿ ಸಹಾಯಕರಾಗಿ ನಿಂತರು. ಮಹಾರಾಜರು ಆಗಮಿಸುವರೆಂಬ ಸುದ್ದಿ ಎಲ್ಲೆಡೆಗೆ ಹಬ್ಬಿದ್ದರಿಂದ ಸರಕಾರದ ಪ್ರತಿನಿಧಿಗಳು ಸಕಲ ಸೌಲಭ್ಯಗಳನ್ನೂ ಒದಗಿಸಿದರು.

ನಿಯೋಜಿತ ದಿನ ಬಂದಂತೆಯೇ ಮಹಾರಾಜರು ಪತ್ನೀಸಮೇತರಾಗಿ ಆಗಮಿಸಿ ಇಲ್ಲಿ ಮಾಡಿರುವ ವ್ಯವಸ್ಥೆಯನ್ನು ಕಂಡು ದಂಗು ಬಡೆದು ಹೋದರು.

ನೂರಾರು ಜನರಿಗೆ ಪ್ರತಿನಿತ್ಯ ಊಟ ಉಪಚಾರಾದಿ ವ್ಯವಸ್ಥೆಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ ಭಾಗಣ್ಣನ ಕರ್ತೃತ್ವ ಶಕ್ತಿ, ಧಾರಾಳತನ ಕಂಡು ಅವರಿಗೆ ಆಶ್ಚರ್ಯವಾಗಿ ಹೋಯಿತು. ಸಾರ್ವಜನಿಕರಿಂದ ಹಣ ಕೇಳದೆ, ಸಂಸ್ಥಾನದಿಂದ ಸಹಾಯ ಬಯಸದೆ ತಮ್ಮ ಸಂಪಾದನೆಯಿಂದಲೇ ಇಷ್ಟೆಲ್ಲಾ ಕಾರ್ಯಗಳನ್ನು ನಿರ್ವಹಿಸುತ್ತಿರುವ ಭಾಗಣ್ಣನ ಔದಾರ್ಯ ಕಂಡು ಅವರು ತಲೆದೂಗಿಬಿಟ್ಟರು.

ಪ್ರತಿ ವಟುವಿಗೂ ಸಂಧ್ಯಾವಂದನಕ್ಕೆ ಬೇಕಾದ ಅರ್ಘ್ಯ ಪಾತ್ರೆ, ತಾಮ್ರದ ಥಾಲಿಗಳು, ಉದ್ಧರಣೆಗಳು, ಶಂಖ ಚಕ್ರಾದಿ ಪಂಚಮುದ್ರೆಗಳನ್ನು ಭಾಗಣ್ಣನವರೇ ನೀಡಿದರು. ಅವರ ತಂದೆ ತಾಯಿಗಳಿಗೆ ಜೋಡಿ ಜೋಡಿ ಪಂಚೆ, ರೇಷ್ಮೆ ಸೀರೆಗಳನ್ನು ವಿನಿಮಯಿಸಲಾಯಿತು.

ಭೂರಿ ಭೋಜನ, ಭಾರಿದಕ್ಷಿಣೆ, ಸರಿಯಾದ ವ್ಯವಸ್ಥೆ ಸೂಕ್ತ ಸಂಭಾವನೆಗಳಿಂದ ಬಂದ ಬ್ರಾಹ್ಮಣರೆಲ್ಲಾ ತುಂಬುಮನದಿಂದ ಭಾಗಣ್ಣನನ್ನು ಹರಸಿದರು.

ತನ್ನ ಉಪನಯನ ಕಾಲಕ್ಕೆ ಗತಿಯಿಲ್ಲವಾಗಿ ಶ್ಯಾನಭೋಗ ಗುಂಡಪ್ಪನವರ ಮಗನ ಉಪನಯನದೊಂದಿಗೆ ತನಗೂ ಗಾಯತ್ರೀ ಮಂತ್ರದ ದೀಕ್ಷೆ ಪಡೆದಿದ್ದ ಭಾಗಣ್ಣ ಇಂದು ಹತ್ತಾರು ವಟುಗಳಿಗೆ ದೀಕ್ಷಾ ಸಮಾರಂಭ ನಿರ್ವಹಿಸಿದ್ದನ್ನು ಕಂಡು ಸಂಕಾಪುರ ಗ್ರಾಮದ ಜನರಿಗೆಲ್ಲಾ ಎಲ್ಲಿಲ್ಲದ ಆನಂದ. ಮನೆಮನೆಗೆ ಕೆಲಸಕ್ಕೆ ಬರುತ್ತಿದ್ದ ವೆಂಕಮ್ಮನಿಗೆ ಇಂದು ಅದೇ ಊರಿನಲ್ಲಿ ವಿಶೇಷ ಪುರಸ್ಕಾರ! ಹೊಲದ ಕಣಕ್ಕೆ ಬಂದು ಮುಷ್ಟಿ ಧಾನ್ಯ ಒಯ್ಯುತ್ತಿದ್ದ ವೆಂಕಮ್ಮ ಇಂದು ಮುಷ್ಟಿ ಮುಷ್ಟಿ ಧನವನ್ನೇ ದಾನ ನೀಡುತ್ತಿದ್ದ ಪರಿ ಕಂಡು ಅವರಿಗೆ ಒಂದು ರೀತಿಯ ತೃಪ್ತಿ.

ತನ್ನ ಇಬ್ಬರು ಮಕ್ಕಳಿಗೆ ಉಪನಯನವಾಯಿತು. ತಾನು ಭಿಕ್ಷೆ ಬೇಡಿದ ಊರಿನಲ್ಲಿ ಬೇರಾರು ನೀಡಿರದ ರೀತಿಯಲ್ಲಿ ತಾನು ದಾನ ನೀಡಿದ್ದಳು. ಊರಿಗೆ ಊರೇ ತನ್ನನ್ನು ನಿಕೃಷ್ಟವಾಗಿ ಕಾಣುತ್ತಿದ್ದ ಕಾಲವೊಂದಿತ್ತು. ಈಗ ಅದೇ ಊರಿನಲ್ಲಿ ತನ್ನ ಕೃಪಾಕಟಾಕ್ಷಕ್ಕೆ ಜನರು ಹಾತೊರೆಯುತ್ತಿದ್ದಾರೆ. ಸಾವಿರಾರು ಜನರ ಸಮ್ಮುಖದಲ್ಲಿ ತನ್ನನ್ನು ಉನ್ನತ ಆಸನದ ಮೇಲೆ ಕೂಡಿಸಿ ಮಹಾರಾಜ ಮಹಾರಾಣಿಯವರು ಸೀರೆ ಹೊದಿಸಿ ನಮಸ್ಕರಿಸಿದ್ದನ್ನು ಕಂಡು ವೆಂಕಮ್ಮ ತನ್ಮಯಗೊಂಡು ಬಿಟ್ಟಳು.

"ನಿಮ್ಮ ಮಗ ನಿಮ್ಮ ವಂಶಕ್ಕಷ್ಟೇ ಕೀರ್ತಿಯಲ್ಲಮ್ಮ. ಇಡೀ ರಾಜ್ಯಕ್ಕೆ ಅವರಿಂದ ಕಲ್ಯಾಣ. ಇಂಥವರನ್ನು ಹೆತ್ತು ನಾಡಿಗೆ ನೀಡಿದ ನಿಮ್ಮ ಕೊಡುಗೆಯನ್ನು ಯಾವ ದೇಶವೂ ಮರೆಯಲಾರದು. ನಿಮ್ಮ ಪುತ್ರ ನಾಡಿನ ಹೆಮ್ಮೆಯ ಪುತ್ರ. ಹರಿತಸ

ಗೋತ್ರದ ಕೀರ್ತಿಯನ್ನು ಮತ್ತೊಮ್ಮೆ ಹೆಚ್ಚಿಸಿದ ಶ್ರೇಷ್ಠ ಸಂಜಾತನಮ್ಮಾ ಭಾಗಣ್ಣ" ಮಹಾರಾಣಿಯವರು ತುಂಬು ಹೃದಯದಿಂದ ನುಡಿದು ವೆಂಕಮ್ಮನನ್ನು ಗಟ್ಟಿಯಾಗಿ ಅಪ್ಪಿಕೊಂಡು ಬಿಟ್ಟಳು.

ಮಹಾರಾಜರಿಗೆ ಈ ದೃಶ್ಯವನ್ನೆಲ್ಲಾ ನೋಡಿ ಆನಂದದೊಂದಿಗೆ ಆಶ್ಚರ್ಯವೂ ಆಗಿದ್ದಿತು.

ಉತ್ತನೂರಿನ ಪುಟ್ಟಮನೆಯಲ್ಲಿ ವಾಸಿಸುತ್ತಿರುವ ಭಾಗಣ್ಣ ಸಂಕಾಪುರದಲ್ಲಿ ಇಷ್ಟು ದೊಡ್ಡ ಕಾರ್ಯ ನಿರ್ವಹಿಸಲು ಹೇಗೆ ಹಣ ಹೊಂದಿಸಿದನೆಂಬ ಕುತೂಹಲ. ಅವರ ದೃಷ್ಟಿ ವ್ಯವಹಾರ ನಿಷ್ಠೆಯಷ್ಟೆ ? ಈ ಪ್ರಶ್ನೆಯನ್ನು ಅವರು ಏಕಾಂತದಲ್ಲಿ ಭಾಗಣ್ಣನನ್ನು ಕೇಳಿಯೇ ಬಿಟ್ಟರು.

"ಮಹಾರಾಜರೇ ತಮ್ಮ ಕೃಪಾ ಛತ್ರದ ಅಡಿಯಲ್ಲಿ ನನಗೆ ಯಾವ ಕೊರತೆಯೂ ಕಾಣಲಿಲ್ಲ. ಸತ್‌ಕಾರ್ಯದಲ್ಲಿ ದೀಕ್ಷಾಬದ್ಧನಾಗಿ ಸಾಗಿದ ಯಾರಿಗೇ ಆಗಲಿ ನಮ್ಮ ಶ್ರೀ ಆಂಜನೇಯ ಸ್ವಾಮಿ. ಆತನ ಅಂತರ್ಯಾಮಿಯಾದ ಶ್ರೀ ವೆಂಕಟೇಶನೇ ಎಲ್ಲಾ ನಿಂತು ನಡೆಸಿಬಿಡುತ್ತಾನೆ. ಎಲ್ಲವನ್ನೂ ಅವನೇ ನಿರ್ವಹಿಸಿ ಕೀರ್ತಿ ಮಾತ್ರ ನನಗೆ ನೀಡುತ್ತಿದ್ದಾನೆ. ಆ ದಿನ ತಾವು ತಟ್ಟೆಯ ತುಂಬಾ ಚಿನ್ನದ ವರಹಗಳನ್ನು ನೀಡಿದಾಗ ನನಗೆ ಮೊದಲು ಕಸಿವಿಸಿ ಆಯಿತು. ನಾನು ಹೇಳಿದ ಕಣಿ ಪಟ್ಟ ಶ್ರಮಕ್ಕಿಂತ ಹೆಚ್ಚು ಪಡೆಯುತ್ತಿದ್ದುದನ್ನು ಕಂಡು ನನಗೆ ನಾಚಿಕೆಯೆನಿಸಿತು. ಆಮೇಲೆ ನೆನಪಿಸಿಕೊಂಡೆ. ಇದು ನೀಡುತ್ತಿರುವುದು ನನಗಲ್ಲ. ನನ್ನಿಂದ ಇಂಥ ಕಾರ್ಯಗಳನ್ನು ನಡೆಸಲು ನಿರ್ಧರಿಸಿರುವ ಪರಮಾತ್ಮನಿಗೆ ಎಂಬ ಸತ್ಯ ಸಂಗತಿ ಹೊಳೆದು ಅದನ್ನು ಸ್ವೀಕರಿಸಿದೆ. ತಾವು ಹೋದಮೇಲೆ ಜನರು ಹೆಚ್ಚು ಹೆಚ್ಚು ಬಂದು ನನ್ನ ಸಂಪಾದನೆಯೂ ಬೆಳೆಯಿತು. ಜನರು ನೀಡಿದರು. ಜನರಿಗೇ ವ್ಯಯಿಸಿದೆ. ಅವರ ಹಣ ಅವರಿಗೆ ವಾಪಸ್ ಮರಳಿಸಿದೆ. ಇದರಲ್ಲಿ ನನ್ನ ಹೆಚ್ಚುಗಾರಿಕೆಯೇನೂ ಇಲ್ಲ. ಇಷ್ಟೆಲ್ಲಾ ಉತ್ತಮ ಕಾರ್ಯ ನನ್ನಿಂದಾಗುವಂತೆ ಸೂಕ್ತವಾತಾವರಣವನ್ನು ನೀವು ಸೃಜಿಸಿಕೊಟ್ಟಿರಿ. ಸಮೂಹ ಶ್ರೇಯದ, ಸಮಾಜ ಹಿತ ಚಿಂತನೆಯ ಕಾರ್ಯಗಳಿಗೆ ಯಾವ ರಾಜ್ಯದಲ್ಲಿ ಉತ್ತೇಜನ ಸಿಕ್ಕುತ್ತದೆಯೋ ಆ ರಾಜ್ಯದಲ್ಲಿ ದುರ್ಭಿಕ್ಷೆ ಕಾಡಿಸುವುದಿಲ್ಲ. ಆ ರಾಜ್ಯದ ಪಾಲರು ಸುಖ ಸಂತೋಷದಿಂದ ಇರುತ್ತಾರೆ. ನಿಮ್ಮ ರಾಜ್ಯವೀಗ ಸುಖ ಸಮೃದ್ಧಗಳ ನೆಲೆವೀಡಾಗಿದೆ" ಎಂದು ಭಾಗಣ್ಣ ನುಡಿಯುತ್ತಾ ಯುವರಾಜರ ಕ್ಷೇಮ ಸಮಾಚಾರದ ಬಗ್ಗೆ ವಿಚಾರಿಸಿದ.

"ಭಾಗಣ್ಣನವರೇ ನಿಮ್ಮ ಮಂತ್ರದ ಮಹಿಮೆಯಿಂದ ಯುವರಾಜರ ಹುಚ್ಚು ಹೊರಟು ಹೋಯಿತು. ನಿಮ್ಮ ಆಶೀರ್ವಾದದ ಶ್ರೀರಕ್ಷೆ ನಮ್ಮ ರಾಜಮನೆತನವನ್ನು ಉಳಿಸಿತು. ನಮ್ಮ ಯುವರಾಜರು ಮೊದಲಿನಂತೆ ಲವಲವಿಕೆಯಿಂದಿದ್ದಾರೆ. ಆಡಳಿತದಲ್ಲಿ ಇತ್ತೀಚೆಗೆ ಆಸಕ್ತಿ ತೋರುತ್ತಿದ್ದಾರೆ."

ಎಂದು ಮಹಾರಾಜರು ವಿನೀತರಾಗಿ ವಿವರಿಸಿ ಕೂಡಲೇ ಗಂಭೀರವಾದ ಧ್ವನಿಯಲ್ಲಿ,

"ಇಲ್ಲಿಗೆ ಬಂದವರಿಗೆಲ್ಲಾ ನೀವು ಯಥೇಚ್ಛವಾಗಿ ದಾನ ಧರ್ಮ ಮಾಡಿದ್ದೀರಿ. ಆದರೆ ನಮಗೆ ಮಾತ್ರ ಏನೂ ನೀಡಿಲ್ಲ" ಆಪಾದಿಸಿದರು.

ಮಹಾರಾಜರ ಮಾತು ಕೇಳಿ ವೆಂಕಮ್ಮ ಗಾಬರಿಗೊಂಡಳು. ಹೌದು ಸಮಾರಂಭಕ್ಕೆ ಬಂದವರೆಲ್ಲಾ ಒಂದಲ್ಲ ಒಂದು ರೀತಿ ಉಪಕೃತರಾಗಿದ್ದಾರೆ. ಆದರೆ ಮಹಾರಾಜರಿಗೆ ಮಾತ್ರ ಏನೂ ನೀಡಿಲ್ಲ. ಅವರಿಗೆ ಏನು ನೀಡುವುದು ? ನದಿಗೆ ಮನುಷ್ಯರು ನೀರು ತಂದು ಹಾಕುವುದೇ ? ರಾಜರಿಗೆ ಏನು ನೀಡಿದರೂ ಅದು ಕಂದಾಯ ಎಂದಾಗುತ್ತದಾಗಲೀ, ದಾನ ಎನಿಸುವುದಿಲ್ಲ. ಕುಟುಂಬಕ್ಕೆ ಬೇಕಾದ್ದಕ್ಕಿಂತಲೂ ಇರುವ ಹೆಚ್ಚಿನ ಹಣ ರಾಜರಿಗೇ ಸೇರಬೇಕು. ಹೀಗಿರುವಾಗ ಮಹಾರಾಜರಿಗೆ ದಾನ ನೀಡುವುದಾದರೂ ಹೇಗೆ? ಏನು ಮಾಡುವುದು? ವೆಂಕಮ್ಮ ದಿಕ್ಕು ದಿಕ್ಕು ನೋಡತೊಡಗಿದಳು. ಮಹಾರಾಣಿಯವರಿಗೆ ವೆಂಕಮ್ಮನ ಸ್ಥಿತಿ ಕಂಡು ಕಸಿವಿಸಿಯಾಯಿತು. ಮಹಾರಾಜರ ವಾಕ್‌ಚಾತುರ್ಯವನ್ನು ಪಾಪ ಹಳ್ಳಿ ಹೆಂಗಸು ಹೇಗೆ ಗ್ರಹಿಸಿಯಾಳು? ಕೇಳುವುದನ್ನೇನನ್ನೋ ನೇರವಾಗಿ ಕೇಳುವುದನ್ನು ಬಿಟ್ಟು ಹೀಗೇಕೆ ಸುತ್ತು ಬಳಸಿ ಗೋಳು ಹೊಯ್ದುಕೊಳ್ಳುತ್ತಿದ್ದಾರೆ ಎಂದೆನಿಸದೆ ಹೋಗಲಿಲ್ಲ.

ಆದರೆ ಭಾಗಣ್ಣ ಮಾತ್ರ ಮುಗುಳ್ನಗುತ್ತಲೇ ಇದ್ದ.

"ಏನು: ನೀಡುವುದಿಲ್ಲವೋ ? " ಮಹಾರಾಜರು ಮತ್ತೊಮ್ಮೆ ಗಟ್ಟಿಯಾಗಿ ಕೇಳಿದರು.

"ಒಪ್ಪಿದ್ದೇನೆ ಮಹಾರಾಜರೆ " ಭಾಗಣ್ಣ ನುಡಿದ.

"ಏನು ನೀಡುತ್ತೀರಿ ಹಾಗಾದರೆ ?"

ಈಗ ಮಹಾರಾಜರಿಗೆ ಗೊಂದಲಕ್ಕಿಟ್ಟುಕೊಂಡಿತು. ಅವರಿನ್ನೂ ತಮ್ಮ ಅಪೇಕ್ಷೆಯನ್ನು ಹೇಳಿಲ್ಲ. ಆಗಲೇ ಭಾಗಣ್ಣ ಒಪ್ಪಿದ್ದೇನೆ ಎಂದು ನುಡಿಯುತ್ತಿದ್ದಾನೆ.

ಏನು ಕೊಡುತ್ತಾರೆ ಭಾಗಣ್ಣ ? ಏನು ಅರ್ಥ ಮಾಡಿಕೊಂಡಿದ್ದಾರೆ ಅವರು ಎಂದು ತಬ್ಬಿಬ್ಬುಗೊಂಡರು ಮಹಾರಾಜರು.

ಭಾಗಣ್ಣನೇ ಬಿಡಿಸಿ ಹೇಳಿದ.

"ಮುಂದಿನ ತಿಂಗಳು ಯುವರಾಜರ ವಿವಾಹವನ್ನು ನೆರವೇರಿಸಲು ಅಪೇಕ್ಷಿಸಿದ್ದೀರಿ. ಶುಭ ಮಹೂರ್ತವನ್ನು ಇಟ್ಟುಕೊಡಲು ಕೇಳುತ್ತಿದ್ದೀರಿ. ಜೊತೆಗೆ ಮದುವೆಗೆ ನಾವೆಲ್ಲಾ ಬರುವಂತೆ ಅಪೇಕ್ಷಿಸುತ್ತಿದ್ದೀರಿ. ಅದಕ್ಕೆ ನನ್ನ ಒಪ್ಪಿಗೆಯನ್ನು ನೀಡುತ್ತಿದ್ದೇನೆ. ಆಯಿತಲ್ಲಾ, ನೀವು ಕೇಳಿದ್ದಾಯಿತು. ನಾನು ಕೊಟ್ಟಿದ್ದಾಯಿತು" ಎಂದು ಮುಸಿ ಮುಸಿ ನಗುತ್ತಾ ಭಾಗಣ್ಣ ನುಡಿದ.

ಭಾಗಣ್ಣನ ಭವಿಷ್ಯದ ಜ್ಞಾನ, ದೂರದರ್ಶಿತ್ವ, ಪರಮನ ಇಂಗಿತ ಗ್ರಾಹ್ಯ ಶಕ್ತಿಯನ್ನು ಕಂಡು ಮಹಾರಾಜರು ಮತ್ತೊಮ್ಮೆ ಮನಃಪೂರ್ವ ನಮಿಸಿದರು.

***

ಯುವರಾಜರ ಮದುವೆಯಲ್ಲಿ ಭಾಗಣ್ಣನಿಗೆ ವಿಶೇಷ ಸ್ಥಾನಮಾನ. ಮಹಾರಾಜರು, ಮಹಾರಾಣಿಯವರು ಬೀಗರ ಕಡೆಯವರಿಂದ ಭಾಗಣ್ಣನಿಗೆ ಹೆಚ್ಚಿನ ಸನ್ಮಾನ. ದೂರ ದೂರ ಪ್ರದೇಶಗಳಿಂದ ಅನೇಕ ರಾಜರು, ಪಾಳೆಯಗಾರರು, ಮಾಂಡಲೀಕರು ಬಂದದ್ದಷ್ಟೆ ಅಲ್ಲ , ಮಹಾರಾಷ್ಟ್ರದ ಪೇಶ್ವೆಯವರೂ ಬಂದು ನೂತನ ವಧೂ-ವರರನ್ನು ಆಶೀರ್ವದಿಸಿದರು. ಗದ್ವಾಲ ಸಂಸ್ಥಾನದ ಕೀರ್ತಿ ಇದರಿಂದ ಇಮ್ಮಡಿಯಾಯಿತು. ಇದೆಲ್ಲವೂ ಭಾಗಣ್ಣ ಇಟ್ಟುಕೊಟ್ಟ ಮುಹೂರ್ತದ ಬಲದಿಂದ ಎಂದು ಮಹಾರಾಜರು ಸಂಪೂರ್ಣ ವಿಶ್ವಾಸಿಸಿದರು. ಬಂದವರನ್ನೆಲ್ಲಾ ಬೀಳ್ಕೊಟ್ಟ ಮೇಲೆ ಅರಮನೆಯಲ್ಲಿ ನೂತನ ವಧೂವರರಿಂದ ಭಾಗಣ್ಣನಿಗೆ ಪಾದಪೂಜೆ ಮಾಡಿಸಿದರು.

ರಾಜಾರಾಮ ಭೂಪಾಲರು ಭಾಗಣ್ಣನಿಗೆ ನಮಿಸಿ ಹೇಳಿದರು.

"ಭಾಗಣ್ಣನವರೇ ನಿಮ್ಮ ಭವಿಷ್ಯದ ಜ್ಞಾನ, ಜಾತಕ ನೋಡುವ ಪರಿಣಿತತ್ವ ಈ ಕಾಲದಲ್ಲಿ ಅನನ್ಯವಾದದ್ದು ಲೋಕಾರೂಢಿಯಂತೆ ಕನ್ಯೆಯ ಗೃಹದಲ್ಲಿ ವಿವಾಹವಾಗಬೇಕೆಂಬ ಸಂಪ್ರದಾಯ ತ್ಯಜಿಸಿ, ನಮ್ಮ ಅರಮನೆಯಲ್ಲಿಯೇ ವಿವಾಹ ನಡೆಸಿರೆಂದು ನೀವು ಕೊಟ್ಟ ಸೂಚನೆ ಆಗ ವಿಚಿತ್ರವಾಗಿ ಕಂಡಿತು. ನಮ್ಮ ಕುಲದವರೇ ಆಗಿದ್ದು ಹತ್ತಿರದ ಬಂಧುಗಳಾಗಿದ್ದರೂ ಬಡತನದಲ್ಲಿರುವ ಅವರೊಂದಿಗೆ

ಸಂಬಂಧ ಹೇಗೆ ಬೆಳೆಸುವುದೆಂದು ಯೋಚಿಸಿದ್ದೆವು. ಇತರ ರಾಜರ ದೃಷ್ಟಿಯಿಂದ ನಾವು ಸಣ್ಣವರಾಗುತ್ತೇವೆ. ಯುವರಾಜರ ಸ್ಥಾನಮಾನ ಇದರಿಂದ ಕಮ್ಮಿ ಯಾದೀತೆಂದು ಭಾವಿಸಿ ಹೆದರುತ್ತಿದ್ದೆವು. ಆಗ ನೀವು ಆಡಿದ ಮಾತು ವಿಶೇಷ ಸ್ಫೂರ್ತಿ ನೀಡಿತು." ಮಹಾರಾಜರು ನುಡಿಯುತ್ತಿದ್ದಂತೆ ಮಹಾರಾಣಿಯವರೂ ಮಾತು ಜೋಡಿಸಿದರು.'

"ಪ್ರತಿ ಶ್ರೀಮಂತ ಯುವಕನು ಬಡವರ ಮಗಳನ್ನೇ ವಿವಾಹವಾಗಬೇಕು. ಅಥವಾ ಶ್ರೀಮಂತ ಕನ್ಯೆ ಬಡ ಯುವಕನನ್ನು ಆರಿಸಿಕೊಳ್ಳಬೇಕು. ಇದರಿಂದ ಹಣ ಸಮಾನ ಹಂಚಿಕೆಯಾಗುತ್ತದೆ. ಎರಡು ಕುಟುಂಬಗಳೂ ಊರ್ಜಿತಕ್ಕೆ ಬರುತ್ತವೆ ಎಂದೆಲ್ಲಾ ನೀವು ಹೇಳಿದಾಗ ನಾವು ಆಶ್ಚರ್ಯಪಟ್ಟೆವು."

"ಹೌದು ತಾಯಿ. ಹಣ ಇದ್ದಲ್ಲೆ ಹಣ ಸೇರುವುದಾದರೆ ಅದು ಹಂಚಿಕೆಯಾಗುವುದು ಯಾವಾಗ ? ನಮ್ಮ ಸಮಾಜದಲ್ಲಿ ಈ ಬಗ್ಗೆ ಜನರ ದೃಷ್ಟಿ ಬದಲಾಗಬೇಕು. ಆರ್ಥಿಕ ಸಮಾನಸ್ಕರಲ್ಲಿಯೇ ಸಂಬಂಧ ಬೆಳೆಸಬೇಕೆಂಬ ಭಾವನೆ ಮೊದಲು ಹೊಡೆದಟ್ಟಬೇಕಾಗಿದೆ. ಅದಕ್ಕೆ ನೀವೇ ಆದರ್ಶ ಹಾಕಿ ನಾಡಿನ ಜನರಿಗೆ ದಾರಿ ತೋರಿದ್ದೀರಿ. ಬಡವರ ಮಗಳನ್ನು ಮನೆತನಕ್ಕೆ ತಂದುಕೊಂಡು ಶ್ರೇಷ್ಠ ಮಾರ್ಗದಲ್ಲಿ ಕ್ರಮಿಸಿದ್ದೀರಿ. ಆದ್ದರಿಂದಲೇ ಕೊಲ್ಹಾಪುರದ ಪೇಶ್ವೆಯವರು ಬಹಳ ಸಂತೋಷದಿಂದ ವಿವಾಹಕ್ಕೆ ಆಗಮಿಸಿದರು. ಮಹಾರಾಷ್ಟ್ರದ ವೀರಸೇನಾನಿ ರಘುನಾಥರಾಯರು ಹೆಚ್ಚು ಸಂಭ್ರಮದಿಂದ ಆಗಮಿಸಿದರು. ಅವರು ಬಂದಿದ್ದರಿಂದ ಸುತ್ತಮುತ್ತಲ ಸಂಸ್ಥಾನಗಳಲ್ಲಿ ನಿಮ್ಮ ಪ್ರತಿಷ್ಠೆ ಬೆಳೆಯಿತು. ಅಂಥ ದೊಡ್ಡವರ ಸಂಪರ್ಕ ತಮಗಿದೆಯೆಂದು ಗೊತ್ತಾಗಿದ್ದರಿಂದ ಬೇರೆಯವರು ಈ ರಾಜ್ಯದ ಮೇಲೆ ಧಾಳಿ ಇಡಲು ಹಿಂದೇಟು ಹಾಕುತ್ತಾರೆ" ಎಂದು ಭಾಗಣ್ಣ ನುಡಿದು ಸುತ್ತೆಲ್ಲಾ ಒಮ್ಮೆ ಕಣ್ಣಾಡಿಸಿ ಮೆಲ್ಲಗೆ ನುಡಿದ.

"ನಿಮ್ಮ ತಮ್ಮಂದಿರು ಪ್ರತಾಪವಂತರು ಅವರ ಶೌರ್ಯ ಪರಾಕ್ರಮ ಗಳಿಗನುಗುಣವಾಗಿ ಸಂಸ್ಥಾನದಲ್ಲಿ ಉನ್ನತ ಹುದ್ದೆಯನ್ನು ದೊರಕಿಸಿದ್ದೀರಿ. ಮಹಾರಾಜರು ತಮ್ಮ ಮಾತಿನಂತೆಯೇ ಸೈನ್ಯದಲ್ಲಿ ಅವರಿಗೆ ಉಚ್ಚಸ್ಥಾನ ನೀಡಿದ್ದಾರೆ. ಆದರೂ ಮಹಾರಾಜರಿಗೆ ಯಾವಾಗಲೂ ಸ್ವಲ್ಪ ಹೆದರಿಕೆ. ತಮ್ಮ ನಂತರ ಯುವರಾಜರನ್ನು ಅವರು ಬೆಂಬಲಿಸದಿದ್ದರೆ ಸಂಸ್ಥಾನದ ಮುಂದಿನ ಗತಿಯೇನು ಎಂದು ಹಲವಾರು ಸಲ ಯೋಚಿಸಿದ್ದೂ ಉಂಟು. ಅವರ ಮಗಳನ್ನು ಯುವರಾಜರಿಗೆ ತಂದುಕೊಳ್ಳುವ ಮೂಲಕ ಈ ಸಮಸ್ಯೆಯನ್ನು ಪರಿಹರಿಸ

ಬಹುದೆಂಬ ನಿಮ್ಮ ಸೂಚನೆಗೆ ಮಹಾರಾಜರೂ ಒಪ್ಪಿದ್ದರು. ಆದರೆ ವಿವಾಹ ಎನ್ನುವುದು ದೇವರ ವಿಚಿತ್ರಲೀಲೆ. ಯಾರನ್ನು ಯಾರಿಗೋ ಗಂಟು ಹಾಕಿರುತ್ತಾನೆ. ಒಂದು ಹೆಜ್ಜೆ ಕಲೆತು ನಡೆಯುವುದಕ್ಕೆ ಎಷ್ಟೋ ಋಣಾನುಬಂಧವಿರಬೇಕೆಂಬ ವಿಷಯ ಎಲ್ಲರಿಗೂ ಗೊತ್ತು. ಹಾಗಿರುವಾಗ ಜನ್ಮದ ಕಡೆಯವರೆಗೂ ಕಲೆತು ಇರಬೇಕಾದ ವಿವಾಹದ ಬಗ್ಗೆ ನಾವು ಏನೇನೆಲ್ಲಾ ಯೋಚಿಸುತ್ತೇವೆ. ಆರ್ಥಿಕವಾಗಿ, ರಾಜಕೀಯವಾಗಿ, ಸಾಮಾಜಿಕವಾಗಿ ಏನೇನೋ ಲೆಕ್ಕ ಹಾಕುತ್ತೇವೆ. ಮಾನವ ಲೆಕ್ಕಾಚಾರವೆಲ್ಲಾ ತಲೆಕೆಳಗಾಗಿ ದೈವದ ವಿಚಿತ್ರ ನಿರ್ಣಯ ಇಂಥ ಸಂದರ್ಭದಲ್ಲಿ ಸ್ಪಷ್ಟವಾಗಿ ಕಂಡು ಬರುತ್ತದೆ. ಮದುವೆ ನಾವು ಮಾಡಿದೆವು ಎನ್ನುತ್ತದೆ ಮೂರ್ಖ ಮಾನವನ ಮನಸ್ಸು. ಯಾವುದನ್ನೂ ನಾವು ಮಾಡಲಾರೆವು. ಇನ್ನು ವಿವಾಹದಂಥ ಜೀವನದ ಮುಖ್ಯ ಘಟ್ಟದಲ್ಲಿ ಮಾನವ ನಿರ್ಣಯ ನಡೆಯುತ್ತದೆಯೆ? ಮದುವೆ ಸಂಬಂಧ ಎನ್ನುವುದು ಪರಮಾತ್ಮ ಮೊದಲು ನಿರ್ಣಯಿಸಿಯೇ ಲೋಕಕ್ಕೆ ಕಳಿಸಿರುತ್ತಾನಮ್ಮಾ. ಮಿಕ್ಕ ಘಟನೆಗಳೆಲ್ಲಾ ನಿಮಿತ್ತ ಮಾತ್ರ. ಈಗ ನಿಮ್ಮದನ್ನೇ ತೆಗೆದುಕೊಳ್ಳಿ. ಯುವರಾಜರಿಗೆ ಅನಿರೀಕ್ಷಿತವಾಗಿ ಮನಸ್ಸಿನ ಅಸ್ವಸ್ಥತೆ ಉಂಟಾಯಿತು. ಇದನ್ನು ನೋಡಿ ನಿಮ್ಮ ತಮ್ಮನವರು ತಮ್ಮ ಮಗಳನ್ನು ಕೊಡಲು ಹಿಂದೇಟು ಹಾಕಿದರು. ಯುವರಾಜರಿಗೆ ಏಕೆ ಹಾಗೆ ಮೊದಲು ಹುಚ್ಚು ಹಿಡಿಯಿತು? ಇವೆಲ್ಲಾ ದೈವೀ ರಹಸ್ಯ ತಾಯಿ. ಆ ದೇವರ ಲೀಲೆ ಅರಿಯದೆ ಇದೆಲ್ಲಾ ನನ್ನ ಸೂಚನೆಯಂತೆ ನಡೆಯಿತೆಂದು ನೀವು ಭಾವಿಸಿದ್ದೀರಿ. ಎಲ್ಲವೂ ಶ್ರೀ ವೆಂಕಟೇಶನ ಇಚ್ಛೆ. ಆತನ ಅನುಗ್ರಹದಿಂದ ಈ ವಿವಾಹ ಸಮಾರಂಭದ ನೆಪವಾಗಿ ಉತ್ತರ ಭಾರತದಲ್ಲಿಯೂ ಮಹಾರಾಷ್ಟ್ರದ ಧ್ವಜವನ್ನು ಹಾರಿಸಿದ ರಘುನಾಥರಾಯರು ಈ ಮದುವೆಗೆ ಬಂದರು. ಅವರ ಆತ್ಮೀಯತೆ ಹಾಗೂ ಬೆಂಬಲ ತಮಗಿದೆಯೆಂದು ತಿಳಿದಿದ್ದರಿಂದ ಹೈದರಾಬಾದಿನ ಅರಸರು ಇನ್ನು ಮುಂದೆ ತಮ್ಮಲ್ಲಿ ಎಚ್ಚರಿಕೆಯಿಂದ ವರ್ತಿಸುತ್ತಾರೆ. ಸಂಸ್ಥಾನದ ಕೀರ್ತಿ ಜಾಜ್ವಲ್ಯಮಾನವಾಗುತ್ತದೆ. ಯುವರಾಜರ ಆಡಳಿತಾವಧಿ ಗದ್ವಾಲ ಸಂಸ್ಥಾನದ ಸುವರ್ಣಯುಗವೆನಿಸುತ್ತದೆ. ಫ್ರೆಂಚರು, ಬ್ರಿಟಿಷರು ಭಾರತ ದಲ್ಲಿ ತಳವೂರಲು ಪ್ರಯತ್ನಿಸುತ್ತಿರುವರಾದರೂ ಯುವರಾಜರ ಆಡಳಿತಾವಧಿ ಯಲ್ಲಿ ಗದ್ವಾಲ ಸಂಸ್ಥಾನದ ಕೀರ್ತಿಗೆ ಇದರಿಂದ ಚ್ಯುತಿಯಾಗುವುದಿಲ್ಲ. ಒಬ್ಬ ಸೋದರಮಾವನ ಬೆಂಬಲಕ್ಕೆ ನೀವು ಪ್ರಯತ್ನಿಸಿದಿರಿ. ಆದರೆ ಈ ಮದುವೆಯಿಂದ ನಿಮ್ಮ ಪ್ರತಿಷ್ಠೆ ಹೆಚ್ಚಿ ಇಡೀ ದಕ್ಷಿಣ ಭಾರತದಲ್ಲಿಯೇ ಇದೊಂದು ಶ್ರೇಷ್ಠ ಸಂಸ್ಥಾನವಾಗಿ ರಾರಾಜಿಸುವಂತೆ ನಮ್ಮ ಶ್ರೀ ವೆಂಕಟೇಶ ಅನುಗ್ರಹಿಸಿದ" ಎಂದು.

ಭಾಗಣ್ಣ ವಿವರಿಸುತ್ತಿದ್ದಂತೆಯೇ ಮಹಾರಾಣಿಯವರ ತಮ್ಮಂದಿರು ಅಲ್ಲಿಗೆ ಆಗಮಿಸಿದರು.

ಅವರ ಮುಖದಲ್ಲಿ ಅಷ್ಟು ಹರ್ಷವಿರಲಿಲ್ಲ. ದಿಟ್ಟಿಸಿ ನೋಡಿದಾಗ ಅವರ ಕಣ್ಣುಗಳಲ್ಲಿ ಈರ್ಷೆ ಬೇಡಬೇಡವೆಂದರೂ ಹೊರಹೊಮ್ಮಿ ಕಾಣುತ್ತಿತ್ತು.

"ಏನು ಭಾಗಣ್ಣನವರು ಸಂಸ್ಥಾನದ ಕೀರ್ತಿ, ರಘುನಾಥರಾಯರ ಆಗಮನ ಸಾಕ್ಷಾತ್ ಪೇಶ್ವೆ ಬಾಳಾಜಿಬಾಜೀರಾಯರೇ ದಯಮಾಡಿಸಿದ ವಿಷಯಗಳನ್ನೆಲ್ಲಾ ಪ್ರಸ್ತಾಪಿಸುತ್ತಿದ್ದಾರೆ. ಜಾತಕ ನೋಡುವುದು, ಕಣಿ ನುಡಿಯುವುದು ಇಷ್ಟೇ ಅಲ್ಲ ಇವರ ಕೆಲಸ. ರಾಜಕೀಯವಾಗಿಯೂ ಸಲಹೆ ಕೊಡುತ್ತಿರುವಂತಿದೆಯಲ್ಲಾ" ಮಾತಿನಲ್ಲಿ ಮೊನಚು, ಅದರ ಹಿಂದಿರುವ ಅಸೂಯೆಯನ್ನು ಭಾಗಣ್ಣ ಗಮನಿಸದೆ ಇರಲಿಲ್ಲ.

"ಹಾಗೇನೂ ಇಲ್ಲ. ನಿಮ್ಮ ಅಳಿಯಂದಿರ ವಿವಾಹವನ್ನು ಬಹಳ ಚೆನ್ನಾಗಿ ನಿರ್ವಹಿಸಿದಿರಿ. ನಿಮ್ಮ ಪ್ರತಾಪ, ಅಳಿಯಂದಿರ ಬಗ್ಗೆ ನಿಮಗಿರುವ ವಾತ್ಸಲ್ಯಗಳನ್ನು ಗಮನಿಸಿಯೇ ಪೇಶ್ವೆಯವರು ಬಂದಿರಬೇಕು. ಏನೇ ಆಗಲಿ; ಇದರಿಂದ ಸಂಸ್ಥಾನದ ಕೀರ್ತಿ ಹೆಚ್ಚಿತು ಎಂದು ಹೇಳುತ್ತಿದ್ದೆ" ಭಾಗಣ್ಣ ನುಡಿದ.

"ಕಣಿ ಕೇಳಿ ಕನ್ಯ, ಆರಿಸಿದರು ನುಡಿ ಕೇಳಿ ಮುಹೂರ್ತ ನಿಶ್ಚಯಿಸಿದರು. ಇನ್ನು ಮುಂದೆ ಕವಡೆ ನೋಡಿ ಕೋವಿ ಹಿಡಿಯುತ್ತಾರೆ ಎಂದಂತಾಯಿತು" ಗಟ್ಟಿಯಾಗಿ ನಗುತ್ತಾ ಹೇಳಿ ಹೊರಗೆ ಹೊರಟರು."

ಭಾವಮೈದುನನ ಈ ಮಾತು ಸ್ವಲ್ಪ ಅಧಿಕಪ್ರಸಂಗತನ ಎಂದೆನಿಸದೆ ಇರಲಿಲ್ಲ ಮಹಾರಾಜರಿಗೆ. ಹಾಗಿದ್ದರೂ ಅದೇ ವಿಷಯವನ್ನು ಹೆಚ್ಚು ಮುಂದುವರಿಸಲು. ಇಚ್ಛಿಸದೆ ಕೂಡಲೇ ಭಾಗಣ್ಣನ ಕಡೆ ತಿರುಗಿ

"ಎಷ್ಟು ಹಣ ಕೊಟ್ಟರೂ ಅದನ್ನು ತಾವಿಟ್ಟುಕೊಳ್ಳದೆ ಸಮಾಜಕ್ಕೆ ಹಂಚಿ ಬಿಡುತ್ತೀರಿ. ನಿಮಗಿನ್ನೂ ವಿವಾಹವಾಗಿಲ್ಲ. ಮೂರು ಜನ ತಮ್ಮಂದಿರ ಜವಾಬ್ದಾರಿ ತಮಗೆ ಇದ್ದೇ ಇದೆ. ಹೀಗಿರುವಾಗ ನಿಮ್ಮ ಕುಟುಂಬಕ್ಕೆ ನೇರವಾಗಿ ಸಂಸ್ಥಾನದಿಂದ ಏನು ಮಾಡಬೇಕೆಂದು ತೋಚದಂತಾಗಿದೆ" ಮಹಾರಾಜರು ನುಡಿದರು.

"ಹಣ, ಚಿನ್ನ ಹೀಗೆ ಏನು ನೀಡಿದರೂ ಈ ಭಾಗಣ್ಣನವರು ಅದನ್ನು ಸಾರ್ವಜನಿಕವಾಗಿ ಖರ್ಚು ಮಾಡಿಬಿಡುತ್ತಾರೆ. ಆದ್ದರಿಂದ ಇವರು ಶಾಶ್ವತವಾಗಿ ನಮ್ಮ ದರ್ಬಾರಿನಲ್ಲಿಯೇ ಉಳಿಯುವಂತೆ ಮಾಡುವುದು ಸಮಂಜಸವಲ್ಲವೆ?

ಅರಮನೆಯ ವೆಚ್ಚದಲ್ಲಿಯೇ ಇವರ ಕುಟುಂಬ ನಿರ್ವಹಣೆ ಮಾಡುವುದು ಸೂಕ್ತ" ಮಹಾರಾಣಿಯವರು ನುಡಿದಾಗ ಭಾಗಣ್ಣ ವಿನೀತನಾಗಿ ಹೇಳಿದ.

"ಮಹಾರಾಣಿಯವರಿಗೆ ನಮ್ಮ ಮೇಲೆ ಪುತ್ರವಾತ್ಸಲ್ಯ. ಅತಿ ಅಂತಃಕರಣ. ಇಲ್ಲಿಯೇ ನಾವೆಲ್ಲ ನೆಲಸಬೇಕೆಂಬ ಅವರ ಅಪೇಕ್ಷೆ ಅವರ ವಿಶಾಲ ಮನಸ್ಸಿನ ದ್ಯೋತಕವೇನೋ ಹೌದು. ಆದರೆ ನನಗೆ ಮಾತ್ರ ಗದ್ದಲದಿಂದ ಯಾವಾಗಲೂ ದೂರವಿರಬೇಕೆಂಬ ಬಯಕೆ. ಇತ್ತೀಚೆಗೆ ಜನಸಂದಣಿ ಕಂಡರೆ ಆಗುತ್ತಿಲ್ಲ. ಏಕಾಂತ ಚಿಂತನೆ, ಭಕ್ತಿಯ ಸಾಧನೆಯಿಂದ ದೂರದೂರ ಸರಿಯುತ್ತಿದ್ದೇನೆಂಬ ಭಯ ಉಂಟಾಗುತ್ತಿದೆ. ಅದೇನೇ ಇದ್ದರೂ ಉತ್ತನೂರಿನ ಶ್ರೀ ವೆಂಕಟೇಶನ ಪೂಜೆ ಬಿಟ್ಟು ನಾನು ಬಹಳ ಕಾಲ ಇರಲಾರೆ. ಆ ಹಳ್ಳಿಯಲ್ಲಿದ್ದರೂ ಜನರು ನಾನಿದ್ದಲ್ಲಿ ಬಂದೇ ಬರುತ್ತಾರೆ. ಹೀಗಾಗಿ ನನಗೆ ಇದೊಂದು ಬಿಡಿಸಲಾರದ ಸಮಸ್ಯೆಯಾಗಿದೆ."

"ಹಾಗಾದರೆ ಇಲ್ಲಿಯೇ ಇರಬಹುದಲ್ಲಾ. ಹೆಚ್ಚು ಜನರಿಗೆ ತಿಳಿಯದಂತೆ ವಾಸಿಸಲು ಸಕಲ ವ್ಯವಸ್ಥೆ ಮಾಡುತ್ತೇವೆ" ಮಹಾರಾಜರು ಮತ್ತೊಮ್ಮೆ ಒತ್ತಿ ಹೇಳಿದರು.

"ಇಲ್ಲ ಭೂಪಾಲರೆ. ಶ್ರೀ ವೆಂಕಟೇಶನ ಇಚ್ಛೆಯೇ ಇರಬೇಕು. ರಾಜಧಾನಿಯಲ್ಲಿ ನೆಲಸಿ ವೈಭವದ ಜೀವನ ನಡೆಸಬೇಕೆಂದು ನಮ್ಮ ತಾಯಿಯವರೇನೋ ಅಪೇಕ್ಷಿಸು ತ್ತಿದ್ದಾರೆ. ಆದರೆ ನನಗೆ ಮಾತ್ರ ಉತ್ತನೂರಿನ ಶ್ರೀ ವೆಂಕಟೇಶನ ಪೂಜೆಯಲ್ಲಿಯೇ ಸಂಪೂರ್ಣ ತೃಪ್ತಿ. ಮಹಾರಾಣಿಯವರ ಅಪೇಕ್ಷೆಯಂತೆ ನಾನು ಇಲ್ಲಿ ವಾಸಿಸಿದರೆ ನನಗೆ ಈಗ ಸಿಕ್ಕುತ್ತಿರುವ ತೃಪ್ತಿಯಿಂದ ವಂಚಿತನಾಗುತ್ತೇನೆ. ಪರಮಾತ್ಮನ ಸೇವೆ ಮುಖ್ಯವೋ ನಿಮ್ಮಲ್ಲಿ ವಾಸಿಸುವುದು ಮುಖ್ಯವೋ ನೀವೇ ನಿರ್ಧರಿಸಿ ಹೇಳಿ" ಭಾಗಣ್ಣನ ವಿವರಣೆ ಕೇಳಿ ಹೆಚ್ಚು ಒತ್ತಾಯಿಸುವ ಮನಸ್ಸಾಗಲಿಲ್ಲ ಮಹಾರಾಜರಿಗೆ.

ಮಹಾರಾಣಿಯವರಿಗೆ ಈ ಸಂದರ್ಭದಲ್ಲಿಯೂ ಒಂದು ಉಪಾಯ ಹೊಳೆಯಿತು.

"ನಿಮ್ಮ ತಾಯಿಯವರು ಹೇಗೂ ರಾಜಧಾನಿಯಲ್ಲಿ ನೆಲಸಲು ಅಪೇಕ್ಷಿಸುತ್ತಿ ದ್ದಾರೆ. ಅವರ ಅಪೇಕ್ಷೆ ನೆರವೇರಬೇಕು. ಉತ್ತನೂರಿನಲ್ಲಿಯೇ ವಾಸಿಸಬೇಕೆಂಬ ನಿಮ್ಮ ಬಯಕೆಯೂ ನಡೆಯಬೇಕು. ಆದಕ್ಕಾಗಿ ನಮಗೊಂದು ಹೊಸ ಯೋಜನೆ ಹೊಳೆಯುತ್ತಿದೆ. ಅದನ್ನು ಹೇಳಬಹುದಷ್ಟೆ ?"

ಮಹಾರಾಣಿಯವರ ಮಾತನ್ನು ಆಸಕ್ತಿಯಿಂದ ಕೇಳುತ್ತಿದ್ದರು ಮಹಾರಾಜರು. ಮಾತು ಮುಂದುವರೆದಿತ್ತು.

"ನಿಮ್ಮ ತಮ್ಮಂದಿರು ಈಗ ದೊಡ್ಡವರಾಗುತ್ತಿದ್ದಾರೆ. ಅವರಿಗೆ ಆಸ್ಥಾನದಲ್ಲಿಯೇ ಒಂದು ಹುದ್ದೆ ಕೊಡೋಣ. ನಿಮ್ಮ ತಾಯಿಯವರು ಅವರೊಂದಿಗೆ ಇರಲಿ. ತಾಯಿ ತಮ್ಮಂದಿರಿಗಾಗಿ ಆಗಾಗ ಹೇಗೂ ಬರುತ್ತೀರಿ. ನಿಮಗೆ ಅಲ್ಲಿಯ ವ್ಯವಸ್ಥೆಗಾಗಿ ಅರಮನೆಯಿಂದ ಪರಿವಾರ ಕಳಿಸುತ್ತೇವೆ."

"ಎಂಥ ವಿಶಾಲ ಹೃದಯ ಮಹಾರಾಣಿಯರವದು. ನಮ್ಮ ಕುಟುಂಬದ ಮೇಲೆ ಎಷ್ಟೊಂದು ಅಕ್ಕರತೆ. ಸ್ವಯೋಗ್ಯತೆಯಿಂದ ದೊಡ್ಡ ಸ್ಥಾನದಲ್ಲಿರುವ ನಿಮಗೆ ಯಾವಾಗಲೂ ದೊಡ್ಡ ಯೋಚನೆಗಳೇ ಇರುತ್ತವೆ. ಕೆಳಗಿನವರ ಕೆಟ್ಟ ಯೋಚನೆಗಳ ಬಗ್ಗೆ ಹೊಳೆಯುವುದೇ ಇಲ್ಲ. ನೀವು ತೋರುತ್ತಿರುವ ಈ ಪ್ರೀತಿಯೇ ನಮಗೆ ಈಗಾಗಲೇ ಹಲವಾರು ಶತ್ರುಗಳನ್ನು ನಿರ್ಮಿಸಿರಬೇಕು. ನಿಮ್ಮ ಅಭಿಮಾನವನ್ನು ನಾವು ಸೂರೆಗೊಂಡಿದ್ದೇವೆಂದು ಅವರು ಈಗಾಗಲೇ ಮಾತ್ಸರ್ಯ ಭರಿತರಾಗಿದ್ದಾರೆ. ರಾಜಕೃಪೆ ಅಥವಾ ದೊಡ್ಡವರ ಅಭಿಮಾನ ಎನ್ನುವುದು ಕೆಲವೊಮ್ಮೆ ಒಳಿತಿಗಿಂತ ಕೆಡಕು ಮಾಡುವ ಸಂಭವವೂ ಇರುತ್ತವೆ. ದೇವರ ಪೂಜೆ ಆಧ್ಯಾತ್ಮ ಚಿಂತನೆಯಲ್ಲಿ ಸಾಗಿರುವ ನಮಗೆ ರಾಜಕೀಯ ಜಾಲಗಳ ವ್ಯೂಹ ಹೇಗೆ ತಿಳಿಯಬೇಕು? ತಿಳಿದವರೂ ದುರುಳರ ಮಾತಿಗೆ ಮರುಳಾಗುವುದು ರಾಜಕೀಯ ಕ್ಷೇತ್ರದಲ್ಲಿ ಅಸಂಭವವೇನೂ ಅಲ್ಲ. ಆದ್ದರಿಂದ ನಮ್ಮನ್ನು ನಮ್ಮಷ್ಟಕ್ಕೆ ಬಿಡಿ. ನಿಮ್ಮ ಪ್ರೀತಿ ಇದೇ ರೀತಿ ಶಾಶ್ವತವಾಗಿರಲಿ" ಭಾಗಣ್ಣ ವಿನಂತಿಸಿದ.

"ನಿಮ್ಮ ತಾಯಿಯವರನ್ನು ಕೇಳಿ ನೋಡಿ. ಅವರು ಒಪ್ಪಿದರೆ ನಿಮ್ಮ ತಮ್ಮಂದಿರಿಗೆ ಇಲ್ಲಿ ದೊಡ್ಡ ಹುದ್ದೆ ಸೃಜಿಸಿಕೊಡಲಾಗುವುದು. ಅದರಿಂದ ನಿಮ್ಮ ದರ್ಶನವೂ ಆಗಾಗ ದೊರೆಯುವುದು" ಮಹಾರಾಜರು ಒತ್ತಾಯಿಸಿದರು. ಯಾವುದಕ್ಕೂ ಊರಿಗೆ ಹೋಗಿ ನಿರ್ಧರಿಸುವುದಾಗಿ ಭಾಗಣ್ಣ ಮಾತು ಕೊಟ್ಟು ಉತ್ತನೂರಿಗೆ ಮರಳಿದ.

ವೆಂಕಮ್ಮನಿಗೆ ಈ ವಿಷಯವೆಲ್ಲಾ ಹೇಳಿದಾಗ ಆಕೆ ಆನಂದದಿಂದ ನಲಿದಾಡಿಬಿಟ್ಟಳು.

"ರಂಗ ಇನ್ನೂ ಸಣ್ಣವನು. ಅವನು ಇಲ್ಲಿಯೇ ಇರಲಿ. ಸೀನಣ್ಣ ಹಾಗೂ ದಾಸಣ್ಣರಿಗೆ ರಾಜಾಶ್ರಯ ಕೊಡಿಸೋ. ಅವರು ರಾಜ ನೌಕರಿಯಲ್ಲಿ ಭರ್ಜರಿ

ಜೀವನ ನಡೆಸಲಿ. ದರ್ಬಾರಿನಲ್ಲಿ ರಾಜಪೋಷಾಕನ್ನು ಧರಿಸಿ ಝುಂ ಎಂದು ಓಡಾಡಲಿ" ತಾಯಿಯ ಅಪೇಕ್ಷೆ ಕೇಳಿ ಭಾಗಣ್ಣನಿಗೆ ಕಸಿವಿಸಿ ಆಯಿತು.

"ಅಮ್ಮಾ ರಾಜಾಶ್ರಯ ಜೀವನವೆಂದರೆ ಚಿನ್ನದ ಸೂಜಿಗಳನ್ನು ಚುಚ್ಚಿಟ್ಟ ಸುಪ್ಪತ್ತಿಗೆಯ ಮೇಲೆ ಮಲಗಿದಂತೆ. ನೋಡುವವರ ಕಣ್ಣಿಗೆ ವೈಭವ. ಆದರೆ ಮಾನಸಿಕವಾಗಿ ಅವರು ಇಳಿದು ಹೋಗುತ್ತಾರೆ. ಗುಲಾಮ ಪ್ರವೃತ್ತಿ ಹೆಚ್ಚಿಬಿಡುತ್ತದೆ. ಪರಮಾತ್ಮನಿಗೆ ದಾಸನಾಗುವ ಮಹಾಭಾಗ್ಯ ಬಿಟ್ಟು ಕೇವಲ ಲೌಕಿಕ ಸುಖಕ್ಕಾಗಿ ರಾಜರೊಬ್ಬರಿಗೆ ದಾಸರಾಗುವುದು ಕ್ಷೀರಸಾಗರವನ್ನು ಬಿಟ್ಟು ಉಪ್ಪು ನೀರಿನ ಭಾವಿಗೆ ಇಳಿದಂತೆ. ದಾಸು, ಸೀನರು ಈಗಾಗಲೇ ಆಧ್ಯಾತ್ಮ ಸಾಧನೆಯಲ್ಲಿ ನಿರತ ರಾಗಿದ್ದಾರೆ. ಅವರು ದಿನದಿನಕ್ಕೂ ವೈರಾಗ್ಯ ಮಾರ್ಗದಲ್ಲಿ ಮುಂದುವರಿಯು ತ್ತಿದ್ದಾರೆ. ಅಮೃತದ ಬಟ್ಟಲನ್ನು ಹಿಡಿದು ಕುಡಿಯಲು ಹೊರಟಿರುವ ಅವರಿಗೆ ಅದನ್ನು ಕಸಿದಿಟ್ಟು ಹೇಗಮ್ಮಾ ಲವಣಮಿಶ್ರಿತ ನೀರನ್ನು ನೀಡಲಿ?" ಮಗನ ವಿವರಣೆ ತಾಯಿಗೆ ಸರಿ ಹೋಗಲಿಲ್ಲ.

"ಸುಮ್ಮನಿರೋ ಸಾಕು. ನೀನು ಏನು ಹೇಳಿದರೂ ನಿನ್ನ ತಮ್ಮಂದಿರು ಕೇಳುತ್ತಾರೆ. ಆದರೆ ಅವರಿಗೆ ಯಾವುದರಿಂದ ಕ್ಷೇಮ ಎನ್ನುವುದು ಮಾತ್ರ ನಿನಗೆ ಗೊತ್ತಾಗುತ್ತಿಲ್ಲ. ಹುಡುಗ ನೀನು. ಏನೋ ದೈವಾನುಗ್ರಹ, ಕಣಿ ಹೇಳುವ ಕಸುಬು ಹಸ್ತಗತವಾಯಿತು. ಆದರಿಂದ ನೀನು ಮುಂದುವರಿಯುತ್ತಿದ್ದಿ. ಆದರೆ ಸೀನ ಹಾಗೂ ದಾಸ ಏನೂ ಅರಿಯದ ಹಸುಳೆಗಳು. ಸ್ವಂತಿಕೆ ಎನ್ನುವುದು ಅವರಿಗೇನೂ ಇಲ್ಲ. ಹೊರ ಪ್ರಪಂಚದಲ್ಲಿ ಅವರು ಸುಖವಾಗಿ ಜೀವಿಸಲಾರರು. ನಾಳೆ ನಿನ್ನ ಮದುವೆಯಾದ ಮೇಲೆ ಅವರು ನಿನ್ನ ಹೆಂಡತಿಯ ಸೀರೆ ಒಗೆದುಕೊಂಡು ಇರಬೇಕೇನು? ನಿನ್ನ ಮಕ್ಕಳ ಬಟ್ಟೆ ಒಗೆಯುವುದಕ್ಕೆ ಅವರ ಜೀವನ ಮೀಸಲಾಗಿ ಬಿಡಬೇಕೆ?" ತಾಯಿಯ ಧ್ವನಿಯಲ್ಲಿ ಕಾಠಿಣ್ಯತೆ ತುಂಬಿತ್ತು. ಆಕೆ ಇನ್ನೂ ಹೇಳುತ್ತಿರುವಾಗಲೇ ಭಾಗಣ್ಣ ಮಧ್ಯದಲ್ಲಿ ತಡೆದು ಹೇಳಿದ.

"ಅಮ್ಮಾ, ನನ್ನ ತಮ್ಮಂದಿರ ಬಗ್ಗೆ ಏನೂ ಯೋಚಿಸಬೇಡ. ಅವರಿಗೆ ಅವರಿಗಿಷ್ಟವಾದ ರೀತಿಯಲ್ಲಿ ನಡೆಯಲು ಬಿಡುತ್ತೇನೆ."

"ನೀನು ಸರಿಯಪ್ಪಾ. ಜಗತ್ತಿನಲ್ಲಿ ಎಲ್ಲಾ ಅಣ್ಣಂದಿರು ಮೊದಲು ಹೀಗೆಯೇ ಹೇಳುತ್ತಾರೆ. ಅಣ್ಣತಮ್ಮಂದಿರು ಕಡೆಯವರೆಗೂ ಕಲಿತೇ ಇರುತ್ತೇವೆಂಬ ಕನಸು ಗಳನ್ನು ಕಾಣುತ್ತಾರೆ. ಮದುವೆಯಾದ ಮೇಲೆ ಅವರವರಲ್ಲಿ ವೈಮನಸ್ಸು

ಬೆಳೆಯುತ್ತದೆ. ಅಣ್ಣತಮ್ಮಂದಿರಾಗಿ ಹುಟ್ಟಿದವರು ಬೆಳೆದಂತೆಲ್ಲಾ ದಾಯಾದಿಗಳಂತೆ ಮಾತ್ಸರ್ಯಪಡತೊಡಗುತ್ತಾರೆ. ಪರಸ್ಪರ ಶತ್ರುಗಳಂತೆ ವರ್ತಿಸುವುದೂ ಉಂಟು".

"ನನ್ನ ತಮ್ಮಂದಿರ ಜೀವನ ಸುಖವಾಗಿ ನಡೆಯುವಂತೆ ನಾನು ನೋಡಿಕೊಳ್ಳುತ್ತೇನಮ್ಮಾ. ಅವರಿಗೆ ಯಾವ ವಿಧದಲ್ಲಿಯೂ ಕಷ್ಟವಾಗದಂತೆ ನೋಡಿಕೊಳ್ಳುವ ಜವಾಬ್ದಾರಿ ನನಗೆ ಸೇರಿದ್ದು."

ಭಾಗಣ್ಣನ ಭರವಸೆ ತಾಯಿಗೆ ಸಮಾಧಾನ ನೀಡಲಿಲ್ಲ.

"ನೀನೇನೋ ಸರಿ, ತಮ್ಮಂದಿರನ್ನು ತಂದೆಯಂತೆ ಕಾಯುವ ಹೃದಯ ನಿನ್ನದು. ಆದರೆ ನಾಳೆ ನಿನ್ನ ಮದುವೆಯಾದ ಮೇಲೆ ಈ ಮನೆಯ ಮೊದಲ ಸೊಸೆ..." ತಾಯಿ ಇನ್ನು ಏನೋ ಹೇಳುತ್ತಿದ್ದಳು ಅಷ್ಟರಲ್ಲಿಯೇ ಭಾಗಣ್ಣ

"ಅಮ್ಮಾ" ಎಂದು ಕೂಗಿಬಿಟ್ಟ. ಅವನ ಮುಖದಲ್ಲಿ ಉದ್ವಿಗ್ನತೆ ತುಂಬಿತ್ತು. ಹಣೆಯಲ್ಲಿ ಬೆವರು ಮೂಡಿತು. ನಡುಗುತ್ತಿದ್ದವು ತುಟಿಗಳು. ಕಂಪನದ ಧ್ವನಿ ಅವನಿಗಾಗ ಹೇಳಿದ.

"ಅಮ್ಮಾ ನಿನಗೆ ಬಹಳ ಕಾಲದಿಂದ ಒಂದು ಮಾತು ಹೇಳಲು ಅಪೇಕ್ಷೆಯಾಗುತ್ತಿದ್ದರೂ ಅದನ್ನು ತಡೆದಿಟ್ಟುಕೊಂಡಿದ್ದೆ. ನೀನಾಗಿಯೇ ನನ್ನ ಮದುವೆಯ ಮಾತನ್ನು ಎತ್ತಿದ್ದರಿಂದ ಈಗ ಬಿಡಿಸಿ ಹೇಳುತ್ತಿದ್ದೇನೆ. ಇದರಿಂದ ನಿನ್ನ ಇತರ ಮಕ್ಕಳ ಕ್ಷೇಮದ ಬಗ್ಗೆ ನಿನಗೆ ಭರವಸೆ ಮೂಡಿದರೆ ಸಾಕು. ಬರುವ ಹೆಂಡತಿಯಿಂದ ಒಡಹುಟ್ಟಿದ ತಮ್ಮಂದಿರಿಗೆ ಅನ್ಯಾಯವಾದೀತು ಎಂಬ ನಿನ್ನ ಭೀತಿ ಪರಿಹಾರವಾಗಬೇಕು. ಈ ದಿನವೇ ಪ್ರತಿಜ್ಞೆ ಮಾಡಿ ಹೇಳುತ್ತಿದ್ದೇನೆ. ನಿನ್ನ ಪಾದಸಾಕ್ಷಿಯಾಗಿ ಇನ್ನು ಮುಂದೆ ಎಲ್ಲಾ ಹೆಣ್ಣು ಮಕ್ಕಳು ನನಗೆ ನಿನ್ನ ಸಮಾನ. ಜಗತ್ತಿನಲ್ಲಿ ನನಗೆ ಹೆಂಡತಿ ಹುಟ್ಟಲೇ ಇಲ್ಲ. ಹುಟ್ಟಿದ ಪ್ರತಿ ಹೆಣ್ಣುಮಕ್ಕಳು ನನಗೆ ತಾಯಂದಿರು ಇಲ್ಲವೇ ತಂಗಿಯರು. ಆಯಿತೇ ಅಮ್ಮಾ ಇನ್ನಾದರೂ ಸಮಾಧಾನದಿಂದ ಇರು."

ಮಗನ ನಿರ್ಧಾರ ಕೇಳಿ ತಾಯಿ ಅವಕ್ಕಾಗಿ ಹೋದಳು. ಕಡೆಗೆ ತಾನೇ ಸಮಾಧಾನ ಮಾಡಿಕೊಂಡು. "ಏನೋ ಹಾಗೆಂದರೆ? ಒಡ ಹುಟ್ಟಿದ ತಮ್ಮಂದಿರ ಯೋಗಕ್ಷೇಮಕ್ಕಾಗಿ ಮದುವೆಯನ್ನೇ ಯಾರಾದರೂ ಬಿಡುತ್ತಾರೆಯೆ? ಯಾವ ತಾಯಿಯೂ ಇಂಥ ನಿರ್ಣಯವನ್ನು ಸ್ವಾಗತಿಸಲಾರಳು. ಬೇಡಪ್ಪಾ, ಬೇಡ ಕಂದಾ, ನಿನ್ನ ಈ ಮಾತಿನಿಂದ ನನಗೆ ಸಮಾಧಾನವಾಗುತ್ತದೆಯೆಂದು ಭಾವಿಸಿದೆಯಾ?

ನನಗೆ ಎಲ್ಲಾ ಮಕ್ಕಳ ಕ್ಷೇಮವೂ ಬೇಕು. ಎಲ್ಲರೂ ಸಂತಸದಿಂದ ನಲಿದಾಡಬೇಕು. ಜಗತ್ತಿನಲ್ಲಿ ಪ್ರತಿ ತಾಯಿಯೂ ಇದನ್ನೇ ಹಾರೈಸುತ್ತಾಳೆ. ಬೇರೆ ಮಕ್ಕಳಭ್ಯುದಯಕ್ಕಾಗಿ ಒಬ್ಬ ಮಗನನ್ನು ಬಲಿ ಕೊಡಬೇಕೆಂದು ಯಾವ ತಾಯಿಯೂ ಜಗತ್ತಿನಲ್ಲಿ ಇಚ್ಛಿಸಿಲ್ಲ. ಬೇಕಾದರೆ ತನ್ನ ಬಲಿಯಿಂದ ಮಕ್ಕಳಿಗೆ ಕ್ಷೇಮವಾಗುವುದಾದರೆ ಅದಕ್ಕೆ ಪ್ರತಿ ತಾಯಿ ಸಿದ್ಧಳಾದಾಳು. ಸಾಕು ಹುಚ್ಚು ಹುಚ್ಚು ಮಾತುಗಳು. ನಿನ್ನ ತಮ್ಮಂದಿರಿಬ್ಬರನ್ನು ರಾಜಾಶ್ರಯಕ್ಕೆ ಕಳಿಸಿಕೊಡು. ನೀನು ವಿವಾಹವಾಗಿ ಸುಖದಿಂದ ಬಾಳು" ವೆಂಕಮ್ಮ ಸಮಾಧಾನ ಧ್ವನಿಯಲ್ಲಿ ಇದನ್ನು ಹೇಳಿದಳು.

"ಅಮ್ಮಾ" ಭಾಗಣ್ಣನ ಧ್ವನಿಯಲ್ಲಿ ಒಂದು ನಿರ್ಧಾರವಿತ್ತು.

"ಏನಪ್ಪಾ?"

"ತಮ್ಮಂದಿರನ್ನು ಗದ್ವಾಲಿಗೆ ಕಳಿಸುತ್ತೇನೆ. ಅಲ್ಲಿ ಅವರು ದೊಡ್ಡ ಹುದ್ದೆ ಪಡೆಯುತ್ತಾರೆ. ಮೋಸ, ಅನ್ಯಾಯ, ಮೇಲಕ್ಕೆ ಏರುವವರನ್ನು ನೋಡಿ ಕಾಲು ಹಿಡಿದು ಎಳೆಯುವ ಪ್ರವೃತ್ತಿ, ಪರಸ್ಪರ ವಂಚನೆಗಳ ಆ ರಾಜಕೀಯ ಜಾಲದಲ್ಲಿ ಅವರು ಹೆಚ್ಚು ಕಾಲ ಇರಲಾರರೆಂದು ನನಗೆನಿಸುತ್ತಿದೆ. ಆದರೂ ನಿನ್ನ ಸಂತೋಷಕ್ಕಾಗಿ ಈ ನಿರ್ಣಯ ಮಾಡಿದ್ದೇನೆ. ಆದರೆ..."

"ಏನೋ ಅದು ಆ...ದ...ರೆ?" ತಾಯಿ ಗಡುಸಾಗಿ ಕೇಳಿದಳು.

"ನನ್ನ ಮದುವೆಯ ಬಗ್ಗೆ ಮಾತ್ರ ನನ್ನ ನಿರ್ಣಯ ಬದಲಾಯಿಸಲಾರೆ."

"ಮದುವೆ ಬೇಡ ಎಂದರೆ ಏನೋ ಅರ್ಥ?"

"ಅಮ್ಮಾ, ತಮ್ಮಂದಿರ ಯೋಗಕ್ಷೇಮ, ಅವರ ಭವ್ಯ ಭವಿಷ್ಯದ ಬಗ್ಗೆ ನೀನು ನಿರಾತಂಕವಾಗಿರಲು ಈ ಪ್ರತಿಜ್ಞೆಯನ್ನೇನೋ ಮಾಡಿದೆ. ಆದರೆ ಅದಕ್ಕಿಂತ ಮೊದಲೇ ನನಗೆ ಮದುವೆ ಬೇಡ ಬೇಡ ಎಂದು ಮನಸ್ಸು ಹೇಳುತ್ತಿತ್ತು. ಮದುವೆ ವಿಷಯ ಬಂದಾಗಲೆಲ್ಲಾ ತಾಯಿಯನ್ನು ತೋರಿಸಿ ಹೆಂಡತಿಯೆಂದು ಹೇಳಿದಂತೆ ಹೃದಯ ತಲ್ಲಣಗೊಳ್ಳುತ್ತಿತ್ತು. ಅದೇಕೆಂದು ನನಗೆ ಗೊತ್ತಿಲ್ಲ. ಶ್ರೀ ವೆಂಕಟೇಶ ಮದುವೆಯ ವಿಷಯ ಹೀಗೇಕೆ ನನ್ನಿಂದ ನಿರ್ಣಯ ಮಾಡಿಸಿದನೋ ನನಗೆ ತಿಳಿಯುತ್ತಿಲ್ಲ. ಆದರೆ ಅವನ ಪ್ರತಿಯೊಂದು ಲೀಲೆಗೂ ಒಂದು ಕಾರಣವಿರುತ್ತದೆ. ಜನ್ಮಜನ್ಮಗಳ ಸರಪಳಿ ಇರುತ್ತದೆಂದು ಮಾತ್ರ ಹೇಳಬಲ್ಲೆ. ಅಸ್ಪಷ್ಟವಾಗಿದ್ದ ನನ್ನ ಭಾವನೆಗಳಿಗೆ ಈ ದಿನ ಒಂದು ಆಕೃತಿ ದೊರೆಯಿತು. ಮಸುಕುಮಸುಕಾಗಿದ್ದ ನನ್ನ

ಅನಿಸಿಕೆಗೆ ಒಂದು ಮುಖಿ ಮೂಡಿತು. ಈ ದಿನದಿಂದ ನಾನು ಶಾಶ್ವತ ಬ್ರಹ್ಮಚಾರಿ. ನನ್ನ ತಮ್ಮಂದಿರ ಯೋಗಕ್ಷೇಮಕ್ಕಾಗಿ ನಾನು ಮೀಸಲಾಗಿಬಿಡುತ್ತೇನೆ."

ಮಗನ ಈ ಮಾತು ತಾಯಿಗೆ ಸ್ವಲ್ಪವೂ ಸರಿಬೀಳಲಿಲ್ಲ. ಮಗನ ಮುಖದಲ್ಲಿ ಮೂಡಿದ್ದ ನಿರ್ಧಾರದ ಲಕ್ಷಣಗಳನ್ನು ಆಕೆ ಕಂಡಳಾದರೂ, ಅದರಲ್ಲಿಯೂ ಅದನ್ನು ಬದಲಿಸಲು ಆಕೆ ತನ್ನ ಪ್ರಯತ್ನ ಬಿಡಲಿಲ್ಲ.

"ತಮ್ಮಂದಿರೆಲ್ಲಾ ದೊಡ್ಡವರಾಗುತ್ತಾರೆ. ಅವರೆಲ್ಲಾ ಸುಖವಾಗಿ ಜೀವಿಸುತ್ತಾರೆ. ಆಗಲಾದರೂ ನೀನು ಮದುವೆಯಾಗಬಹುದಲ್ಲಾ" ತಾಯಿಯ ತರ್ಕಪೂರ್ಣ ಪ್ರಶ್ನೆ.

"ಇಲ್ಲಮ್ಮಾ, ಮುಂದೆ ಹುಟ್ಟುವ ಶ್ರೀ ವೆಂಕಟೇಶನ ಭಕ್ತರೆಲ್ಲಾ ನನ್ನ ತಮ್ಮಂದಿರು ಅಥವಾ ತಂಗಿಯರು. ಅವರು ಎಲ್ಲೆಲ್ಲಿಯೂ ಇರುತ್ತಾರೆ. ಅವರಿಗಾಗಿ ಅವರ ಕ್ಷೇಮಕ್ಕಾಗಿ ನಿರತನಾಗಿರುವುದೇ ನನ್ನ ಕರ್ತವ್ಯವೆಂದು ಭಾವಿಸುತ್ತೇನೆ. ರಕ್ತ ಹಂಚಿಕೊಂಡು ಹುಟ್ಟಿದ ಈ ಸಹೋದರರು, ಇವರ ನಂತರ ಭಾವ ಹಂಚಿಕೊಂಡು ಹುಟ್ಟುವ ಸಹೋದರ ಸಹೋದರಿಯರು, ಇವರ ಕ್ಷೇಮಾಭ್ಯುದಯವೇ ನನ್ನ ಜೀವನ ಧ್ಯೇಯ. ಅದಕ್ಕಾಗಿ ನಾನು ಹುಟ್ಟಿದ್ದೇನೆಂದು ಭಾವಿಸುತ್ತೇನೆ. ಈಗ ಸದ್ಯಕ್ಕೆ ನಿನ್ನ ಒತ್ತಾಯಕ್ಕಾಗಿ ತಮ್ಮಂದಿರನ್ನು ಗದ್ವಾಲ ಸಂಸ್ಥಾನದಲ್ಲಿ ಕೆಲಸಕ್ಕೆ ಸೇರಿಸುತ್ತೇನೆ. ನನ್ನ ಮಾತಿಗೆ ಕಟ್ಟುಬಿದ್ದು ಅವರು ಅಲ್ಲಿಗೆ ಹೋಗುತ್ತಾರೆ"

ಮದುವೆ ಬೇಡ ಎಂಬ ಭಾಗಣ್ಣನ ನಿರ್ಣಯವನ್ನು ಮುಂದೆ ಬದಲಿಸುವಂತೆ ಒತ್ತಾಯಿಸಬಹುದು. ಈಗ ತಮ್ಮಂದಿರನ್ನು ಕೆಲಸಕ್ಕೆ ಸೇರಿಸಲು ಒಪ್ಪಿಕೊಂಡಿದ್ದೇ ಸಾಕು. ಸದ್ಯಕ್ಕೆ ಅಷ್ಟು ಮಾಡಲಿ ಎಂದು ವೆಂಕಮ್ಮ ಏನೋ ಒಂದು ರೀತಿಯ ಸಮಾಧಾನ ತಳೆದಳು.

"ಅಮ್ಮಾ" ಮೆಲ್ಲಗೆ ಕರೆದ ಭಾಗಣ್ಣ

ಏನೇನೋ ಯೋಚಿಸುತ್ತಿದ್ದ ವೆಂಕಮ್ಮ ತಕ್ಷಣವೇ ಮಗನ ಕರೆಗೆ ಪ್ರತಿಕ್ರಿಯಿಸಿದಳು.

"ಏನಪ್ಪಾ"

"ರಾಜಧಾನಿಯ ವೈಭವ ಜೀವನದಲ್ಲಿ ವಾಸಿಸಬೇಕೆಂಬ ನಿನ್ನ ಅಪೇಕ್ಷೆಯೂ ನೆರವೇರಿದಂತಾಗುತ್ತದೆ. ನೀನೂ ಕೆಲಕಾಲ ಅವರೊಂದಿಗೆ ಇರಬಹುದಲ್ಲಮ್ಮಾ."

ಭಾಗಣ್ಣನ ಕೋರಿಕೆ ಕೇಳಿ ತಾಯಿಯ ಕಣ್ಣಲ್ಲಿ ನೀರು ಉಕ್ಕಿಬಂದಿತು.

"ನನ್ನ ಸುಖಕ್ಕಾಗಿ ಹೀನ ಹಾಗೂ ದಾಸರನ್ನು ದರ್ಬಾರಿನಲ್ಲಿ ಕೆಲಸಕ್ಕೆ ಸೇರಿಸಲು ಅಪೇಕ್ಷಿಸಿದ್ದೇನೆಂದು ಭಾವಿಸಿದ್ದೀಯಾ? ಹುಚ್ಚಪ್ಪಾ, ಮಕ್ಕಳು ಉನ್ನತ ಸ್ಥಾನಕ್ಕೆ ಬರಲಿ, ವೈಭವ ಜೀವನ ಪಡೆಯಲಿ ಎಂದು ತಾಯಿ ಹಾರೈಸುವುದು ತನ್ನ ಸುಖಕ್ಕಲ್ಲಪ್ಪಾ, ಅವರ ಸುಖಕ್ಕಾಗಿ. ಒಂದು ಹೆಜ್ಜೆ ಈಗಾಗಲೇ ಪರಲೋಕದಲ್ಲಿಟ್ಟಿರುವ ನನಗೇತಕ್ಕಪ್ಪಾ ಸುಖಾಪೇಕ್ಷೆ? ತನ್ನ ಸುಖಕ್ಕಾಗಿ ಮಕ್ಕಳ ಅಭ್ಯುದಯ ಬಯಸುವ ತಾಯಂದಿರು ಈ ಜಗತ್ತಿನಲ್ಲಿಯೇ ಇಲ್ಲ ಕಣೋ. ಮಕ್ಕಳ ಕ್ಷೇಮ ಚಿಂತನೆಯಷ್ಟೇ ತಾಯಿಯ ಅಪೇಕ್ಷೆ. ಅದರಲ್ಲಿ ಸ್ವಾರ್ಥದ ಸಣ್ಣ ಕಣವೂ ಇರುವುದಿಲ್ಲ. ಅಷ್ಟಕ್ಕೂ ನನಗೇತಕ್ಕಪ್ಪಾ ಈ ವಯಸ್ಸಿನಲ್ಲಿ ನಗರ ಜೀವನದ ಹವ್ಯಾಸ? ಇಲ್ಲಿಯ ಶ್ರೀ ವೆಂಕಟೇಶ ನನ್ನ ಮೇಲೆ ಅಪಾರ ಕರುಣೆ ಬೀರಿದ್ದಾನೆ. ನಿನ್ನಂಥ ಮಾತೃಭಕ್ತ ಪುತ್ರನನ್ನು ನೀಡಿ ನನ್ನ ಜೀವನ ಸಾರ್ಥಕ ಮಾಡಿದ್ದಾನೆ. ಇದಕ್ಕಿಂತ ಹೆಚ್ಚಿನ ಅಪೇಕ್ಷೆ ನನಗೆ ಇನ್ನೇನು ಇಲ್ಲ ಕಣೋ. ಸಾಯುವವರೆಗೂ ಶ್ರೀ ವೆಂಕಟೇಶನ ಸೇವೆ ಮಾಡುತ್ತಾ ನಿನ್ನ ಬಳಿಯೇ ಇರಬೇಕೆಂಬ ಅಪೇಕ್ಷೆ ನನ್ನದು."

ತಾಯಿಯ ಮಾತು ಕೇಳಿ ಎದುರು ವಾದಿಸ ಮನಸ್ಸಾಗಲಿಲ್ಲ ಭಾಗಣ್ಣನಿಗೆ. ಪುನಃ ಗದ್ವಾಲಕ್ಕೆ ಹೋಗುವರೆತೆ ಅವನು ಹೇಳಲಿಲ್ಲ. ಆದರೆ ತಮ್ಮಂದಿರಿಬ್ಬರನ್ನು ಗದ್ವಾಲಕ್ಕೆ ಕರೆದೊಯ್ದು ಕೆಲಸಕ್ಕೆ ಸೇರಿಸಿ ಹಿಂದಿರುಗಿದ.

***

ಮಾನವ ಎಷ್ಟೇ ಸಂಘಜೀವಿಯಾದರೂ ಅವನು ಕೆಲವೊಮ್ಮೆ ಏಕಾಂತ ಬಯಸುವುದು ಅನಿವಾರ್ಯ. ಎಷ್ಟೇ ಏಕಾಂತಪ್ರಿಯನಾದರೂ ಜನರೊಂದಿಗೆ ಬೆರೆತಿರಲು ಅಪೇಕ್ಷಿಸುವುದೂ ಅಷ್ಟೇ ಸಹಜ.

ಭಾಗಣ್ಣ ಇತ್ತೀಚಿನ ತನ್ನ ಜೀವನ ವ್ಯವಸ್ಥೆಯಿಂದ ವಿಪರೀತ ಬೇಸರಗೊಂಡಿದ್ದ. ಜನರು ತಮ್ಮ ಭವಿಷ್ಯದ ಬಗ್ಗೆ ತಿಳಿಯಲು ತಂಡತಂಡವಾಗಿ ಧಾವಿಸಿ ಬರುತ್ತಿದ್ದರಿಂದ ಏಕಾಂತ ಚಿಂತನೆಯ ಅವಕಾಶ ಹೆಚ್ಚು ಸಿಕ್ಕಲಿಲ್ಲ. ಬಿಡುವು ಇಲ್ಲದ ಕಾರ್ಯಭಾರದಿಂದ ಪರಮಾತ್ಮನನ್ನು ಮನಸಾರೆ ಪ್ರಾರ್ಥಿಸಲು ಅವಕಾಶವಾಗುತ್ತಿಲ್ಲ ಎಂದು ಪರಿತಪಿಸುತ್ತಿದ್ದ. ಹೀಗಾಗಿ ತಮ್ಮಂದಿರನ್ನು ಗದ್ವಾಲದಲ್ಲಿ ಕೆಲಸಕ್ಕೆ ಸೇರಿಸಿಯಾದ ಮೇಲೆ ರಾತ್ರಿ ವೇಳೆ ಉತ್ತನೂರಿಗೆ ಹಿಂದಿರುಗಿದ್ದ. ತಾನು ವಾಪಸ್ಸಾದ ವಿಷಯವನ್ನು ಜನರಿಗೆ ತಿಳಿಸಬಾರದೆಂದು ತಾಯಿಗೆ ವಿನಂತಿಸಿದ್ದ.

ಬೆಳಗಿನ ಜಾವ ಕೋಳಿ ಕೂಗುವ ಮೊದಲೇ ಎದ್ದು ಸ್ನಾನಾಹ್ನಿಕಗಳನ್ನು ತೀರಿಸಿಕೊಂಡು ಶ್ರೀ ವೆಂಕಟೇಶನ ಗುಡಿ ಹೊಕ್ಕು ಪ್ರಾರ್ಥನೆಗೆ ಕುಳಿತುಬಿಡುತ್ತಿದ್ದ. ಗುಡಿಯ ಮೂಲೆಯೊಂದರಲ್ಲಿ ಅವನು ಚಿಂತನೆಗೆ ಕುಳಿತನೆಂದರೆ ಅದು ತಾಸುತಾಸು ಆಗಿಬಿಡುತ್ತಿತ್ತು. ಅವನ ಸೂಚನೆಯಂತೆ ಅರ್ಚಕರು ತಮ್ಮ ಪೂಜೆ ಮುಗಿಸಿಕೊಂಡು ಬಾಗಿಲು ಹಾಕಿಕೊಂಡು ಹೋಗುತ್ತಿದ್ದರು.

ಒಳಗೆ ತಾನು ಹಾಗೂ ಪರಮಾತ್ಮ. ಆತನ ಪರಿವಾರ. ಇನ್ನಾರು ಇಲ್ಲ. ಪರಮಾತ್ಮನಲ್ಲಿ ಪ್ರಾರ್ಥಿಸಲು ಸಿಕ್ಕ ಮಹದ್ಭಾಗ್ಯವಿದೆಂದು ಅವನು ನಂಬಿದ.

ಪುರಂದರದಾಸರ ಪದಗಳು ಕನಕದಾಸರ ಪದಗಳು ಪುಂಖಾನುಪುಂಖವಾಗಿ ಬಾಯಿಗೆ ಬರತೊಡಗಿದವು. ಯಾವಾಗಲೋ ಕೇಳಿದ್ದು, ಮತ್ತೆಲ್ಲೋ ಓದಿದ್ದು, ಅವನ ಸ್ಮೃತಿಯಲ್ಲಿ ಬರತೊಡಗಿದವು. ಹಾಡುತ್ತಾ ಹಾಡುತ್ತಾ ಕುಣಿಯ ತೊಡಗುತ್ತಿದ್ದ.

ಶ್ರೀ ವೆಂಕಟೇಶ ಶ್ರೀ ಕೃಷ್ಣ ರೂಪನಾಗಿ ಅವನಿಗೆ ಕಾಣುತ್ತಿದ್ದ.
'ವೆಂಕಟಾ, ವೆಂಕಟಾ' ಕುಣಿದು ಹಾಡುತ್ತಿದ್ದ ಭಾಗಣ್ಣ
ಅದೇ ಮೂರ್ತಿ ಶ್ರೀ ಕೃಷ್ಣ ರೂಪನಾಗಿ ಕಂಡಾಗ
ಕೃಷ್ಣಾ ಕೃಷ್ಣಾ ಕುಣಿಯುತ್ತಾ ಇರುವಂತೆ

ವೆಂಕಟಕೃಷ್ಣಾ ವೆಂಕಟಕೃಷ್ಣಾ ಎಂದು ಉದ್ಗರಿಸುತ್ತಾ ಮೈಮರೆತು ಬಿಡುತ್ತಿದ್ದ ಭಾಗಣ್ಣ.

ಕುಣಿದು ಕುಣಿದು ದಣಿವಾದಾಗ ವೆಂಕಟಕೃಷ್ಣನ ಪಾದ ಸ್ಪರ್ಶಿಸುವ ಭಾವನೆ ಉಕ್ಕಿ ಶಿರಸಾಷ್ಟಾಂಗ ಹಾಕಿ ಮಲಗಿ ಬಿಡುತ್ತಿದ್ದ. ಹಾಗೆ ಎಷ್ಟು ಹೊತ್ತು ಭಾವೋದ್ವೇಗದಿಂದ ಮಲಗುತ್ತಿದ್ದನೋ, ಯಾವಾಗ ಮನೆಗೆ ಹಿಂದಿರುಗುತ್ತಿದ್ದನೋ ಶ್ರೀ ವೆಂಕಟಕೃಷ್ಣನ ಹೊರತು ಭಾಗಣ್ಣನಿಗೇ ಗೊತ್ತಾಗುತ್ತಿರಲಿಲ್ಲ.

ಮನೆಗೆ ಬಂದರೂ ಯಾರೊಂದಿಗೂ ಮಾತನಾಡುತ್ತಿರಲಿಲ್ಲ. ತಾಯಿಯ ಒತ್ತಾಯಕ್ಕೆ ಊಟಕ್ಕೆ ಕುಳಿತರೂ ಊಟದ ತುತ್ತುಗಳನ್ನು ಬಾಯಿಗೆ ಇಟ್ಟುಕೊಳ್ಳದೆ ಬೇರೆ ಯಾರ ಬಾಯಿಗೋ ಇಡುತ್ತಿರುವಂತೆ ಶೂನ್ಯದ ಅವಾಂತರದಲ್ಲಿ ತುತ್ತು ಕೈ ಬಿಡುತ್ತಿದ್ದ. ಎಲೆಯ ಸುತ್ತಲೂ ತುತ್ತು ಇಡುತ್ತಾ ಕಣ್ಣೀರುಗರೆಯುತ್ತಿದ್ದ.

ಏನು ಮಗನ ಈ ವರ್ತನೆ?

ಏತಕ್ಕೆ ಹೀಗೆ ಮಾಡುತ್ತಿದ್ದಾನೆ? ತಾಯಿ ವೆಂಕಮ್ಮನಿಗೆ ಏನೆಲ್ಲಾ ಯೋಚನೆಗಿಟ್ಟು ಕೊಂಡಿತು.

ಹಲವೊಮ್ಮೆ ಎಲೆಯ ಸುತ್ತ ತುತ್ತು ಇಡುವಾಗ ಅವನು ಏನೇನೋ ಗೊಣ ಗುಟ್ಟುತ್ತಿದ್ದ. ಕಣ್ಣಿನಲ್ಲಿ ನೀರು ಧಾರೆಧಾರೆಯಾಗಿ ಹರಿಯುತ್ತಿತ್ತು. ಮತ್ತೊಮ್ಮೆ ದೈನ್ಯಾತಿ ದೈನ್ಯನಾಗಿ ಅದೇನೇನೋ ಪ್ರಾರ್ಥಿಸುತ್ತಿರುವಂತೆ ಕೈಯಲ್ಲಿ ತುತ್ತನ್ನು ಇಟ್ಟುಕೊಂಡು ಅಳುತ್ತಾ ಕುಳಿತುಬಿಡುತ್ತಿದ್ದ. ತಾಯಿಯೇ ಅವನನ್ನು ಊಟದಿಂದ ಎಬ್ಬಿಸುತ್ತಾ "ಏಳು ಭಾಗಣ್ಣ ಆಮೇಲೆ ಊಟ ಮಾಡುವಿಯಂತೆ" ಎಂದು ಹೇಳಬೇಕಾಗುತ್ತಿತ್ತು.

ಮಗನ ವಿಚಿತ್ರ ವರ್ತನೆಯಿಂದ ತಾಯಿ ತುಂಬಾ ಕಳವಳಗೊಂಡಳು. ತನ್ನ ಮಗನಿಗೆ ಹುಚ್ಚು ಹಿಡಿಯುತ್ತಿದೆಯೇ ಎಂದೆಲ್ಲಾ ಯೋಚಿಸಿದಳು. ಭಾಗಣ್ಣ ಗದ್ವಾಲ ದಿಂದ ಹಿಂದಿರುಗಿ ಬಂದಿದ್ದಾನೆಂದು ತಿಳಿದ ಜನ ಸುತ್ತಮುತ್ತಲ ಹಳ್ಳಿಗಳಿಂದ ಆಗಮಿಸಿದರು. ಭಾಗಣ್ಣನಲ್ಲಿ ಆದ ಈ ವಿಚಿತ್ರ ಪರಿವರ್ತನೆ ಕಂಡು ಅವರು ಅವಕ್ಕಾಗಿ ಹೋದರು. ಭವಿಷ್ಯದ ಬಗ್ಗೆ ವಿಚಾರಿಸಿದಾಗ ನಗುವಷ್ಟೇ ಅವನ ಉತ್ತರ ವಾಗುತ್ತಿತ್ತು. ಬಂದವರಿಗೆಲ್ಲಾ ತಾನೇ ನಮಸ್ಕರಿಸುತ್ತಿದ್ದ. ಅವರ ಕಾಲುಗಳಿಗೆ ಬೀಳುತ್ತಿದ್ದ. ಕೈಗಳನ್ನು ಹಿಡಿದು ಅವಕ್ಕೇ ನಮಸ್ಕರಿಸುತ್ತಿದ್ದ. ಅವರ ಕಿವಿಯ ಬಳಿ ಕೈ ಜೋಡಿಸಿ ಅನುಗ್ರಹಿಸಿ ಎಂದು ಪ್ರಾರ್ಥಿಸುತ್ತಿದ್ದ. ಅವನ ಅನುಗ್ರಹಕ್ಕಾಗಿ ಬಂದವರು ಅವನಿಂದ ಅನುಗ್ರಹ ಯಾಚನೆಯ ರೀತಿ ಕಂಡು ಅವರು ಹೆದರಿ ಬಿಡುತ್ತಿದ್ದರು.

ಭಾಗಣ್ಣನಿಗೆ ಹುಚ್ಚು ಹಿಡಿದಿದೆಯೆಂದು ಹಲವರು ತರ್ಕಿಸಿದರು. ತಾಯಿ ವೆಂಕಮ್ಮನಂತೂ ಪೂರ್ತಿ ಹೆದರಿಬಿಟ್ಟಳು.

ಆಕೆ ಯಾರ ಮುಂದೆ ಹೇಳಬೇಕು ತನ್ನ ಯೋಚನೆಯನ್ನು? ತನ್ನ ಬೇಗುದಿಯನ್ನು ಯಾರಲ್ಲಿ ತೋಡಿಕೊಳ್ಳಬೇಕು? ದೊಡ್ಡವರಾದ ಇಬ್ಬರು ಮಕ್ಕಳು ಗದ್ವಾಲದಲ್ಲಿ ದ್ದಾರೆ. ರಂಗ ಇನ್ನೂ ಸಣ್ಣವನು. ಅಣ್ಣನಲ್ಲಿ ಆಗಿರುವ ಈ ಪರಿವರ್ತನೆಯನ್ನು ಗ್ರಹಿಸುವ ಸ್ವಭಾವವೂ ಅವನದಲ್ಲ.

ರಂಗನ ಸ್ವಭಾವವೇ ವಿಚಿತ್ರ. ಅವನಿಗೆ ಆಟ, ತಿರುಗಾಟ, ಖುಷಿಯಾಗಿ ಅಡ್ಡಾಡಿಕೊಂಡಿರುವುದು ಇಷ್ಟೇ ಆಸಕ್ತಿ ಅವನಿಗೆ. ಮನೆಗೆ ಬಂದೊಡನೆಯೇ ತಾಯಿ ಊಟಕ್ಕಿಡಬೇಕು. ರುಚಿರುಚಿಯಾಗಿ ಅಡುಗೆ ಮಾಡಿರಬೇಕು. ಸ್ವಲ್ಪ ಲೋಪ ವಾದರೂ ಅವನಿಗೆ ಆಕ್ರೋಶ. ಆಲಸ್ಯವಾದರಂತೂ ಆವೇಶ. ತನ್ನಣ್ಣ ಮನೆಯ ಲಿಲ್ಲದಿದ್ದರೆ ಅವನಿಗೆ ಸ್ವಚ್ಛಂದತೆಯ ಕಲ್ಪನೆ. ಅಣ್ಣನ ವಿಚಿತ್ರ ವರ್ತನೆಯನ್ನು

ಕೌತುಕದಿಂದ ನೋಡುತ್ತಿದ್ದನಾದರೂ ಆ ಬಗ್ಗೆ ಹೆಚ್ಚು ಯೋಚಿಸುವ ಗೊಡವೆಗೆ ಹೋಗುತ್ತಿರಲಿಲ್ಲ.

ಒಮ್ಮೆ ರಾತ್ರಿ ಬಹಳ ಹೊತ್ತಿನ ಮೇಲೆ ಭಾಗಣ್ಣ ಮನೆಗೆ ಬಂದ. ಬರುವಾಗ ಒಂದು ದೊಡ್ಡ ಗಂಟಿನಲ್ಲಿ ದರ್ಭೆಗಳನ್ನು ಕಿತ್ತು ತಂದಿದ್ದ. ಊಟಕ್ಕೆ ಕುಳಿತಾಗ ಎಲೆಯ ಸುತ್ತ ತುತ್ತುಗಳನ್ನಿಟ್ಟು ತಾನು ಮಾತ್ರ ತಲೆಯ ಮೇಲೆ ದರ್ಭೆಗಳನ್ನು ಹಾಕಿಕೊಂಡು ತೇಗಿಬಿಟ್ಟ.

ಊಟವೇ ಮಾಡಿಲ್ಲ! ತೇಗು ಬಂದಿತ್ತು!!

ತಾಯಿ ಪೂರ್ತಿ ಹೌಹಾರಿಬಿಟ್ಟಳು. ಮಗ ಪೂರ್ತಿ ಹುಚ್ಚನಾಗುತ್ತಿದ್ದಾನೆಂದು ಆಕೆಗೆ ಅನಿಸತೊಡಗಿತು. ಗದ್ವಾಲಕ್ಕೆ ಹೋಗಿ ತನ್ನ ಇಬ್ಬರು ಅಣ್ಣಂದಿರುಗಳನ್ನು ಕರೆತರುವಂತೆ ರಂಗನನ್ನು ಕಳಿಸಲು ಆಕೆ ಅಪೇಕ್ಷಿಸಿದಳಾದರೂ ಅವನು ತಾಯಿಯ ಮಾತು ಕೇಳಲಿಲ್ಲ. ರಾಜಧಾನಿಗೆ ಹೋದರೆ ತನ್ನನ್ನು ಹಿಡಿದು ಸೈನ್ಯಕ್ಕೆ ಸೇರಿಸಿ ಕೊಂಡು ಬಿಡುತ್ತಾರೆಂಬ ಹೆದರಿಕೆ ಅವನಿಗೆ.

ಒಮ್ಮೆ ಭಾಗಣ್ಣ ಮಧ್ಯರಾತ್ರಿಯ ಹೊತ್ತಿಗೆದ್ದು ತಲೆಗೆ ಆಸರೆ ಇಟ್ಟುಕೊಂಡಿದ್ದ ಕಲ್ಲನ್ನು ಎತ್ತಿ ಅದನ್ನು ಮುಂದಿಟ್ಟುಕೊಂಡು ಅಳುತ್ತಾ ಕುಳಿತ.

ತಾಯಿ ಕಣ್ಣು ತೆರೆದು ನೋಡಿದಳು. ಮಗನ ಕಣ್ಣಿನಲ್ಲಿ ಧಾರೆಧಾರೆಯಾಗಿ ನೀರು ಬರುತ್ತಿರುವುದನ್ನು ಕಂಡು ಆಕೆಯ ಹೊಟ್ಟೆಯಲ್ಲಿ ಬೆಂಕಿಯನ್ನು ಹಾಕಿ ತಿರುವಿದಷ್ಟು ಸಂಕಟವಾಯಿತು.

ಹತ್ತಿರ ಹೋಗಿ ಭಾಗಣ್ಣನ ಗಲ್ಲವನ್ನು ಹಿಡಿದು "ಏಕಪ್ಪಾ ಕಂದಾ ಏನಾಯಿತೋ ನಿನಗೆ ? ಯಾರು ಮಾಯ ಮಾಡಿದರೋ ? ಏನು ಮಾಟ ವಾಗಿದೆಯೋ? ನಿನ್ನ ಗ್ರಂಥರಾಶಿಯಲ್ಲಿ ನೀನೇ ನೋಡಿ ಕೆಟ್ಟ ಗ್ರಹಗಳಿಂದ ಪಾರಾಗುವ ಉಪಾಯ ಸೂಚಿಸು ಕಂದಾ" ಕೇಳಿಕೊಂಡಳು ತಾಯಿ.

ಮಗ ತಕ್ಷಣವೇ ಜಾಗ್ರತಗೊಂಡಂತೆ ತಾಯಿಯ ಕಡೆ ತಿರುಗಿ ಹೇಳಿದ,

"ಕೆಟ್ಟಗ್ರಹಗಳು ಇದ್ದಿದ್ದರೆ ಇಷ್ಟು ತಣ್ಣಗೆ ಕೂಡುತ್ತಿದ್ದೆನೇನಮ್ಮಾ? ಅವರು ಅಂಥವರಲ್ಲ.. ಅವರಿಂದಲೇ ಎಲ್ಲವೂ ಆಗಬೇಕು. ಅವರು ಕಾಣುತ್ತಿದ್ದಾರೆ. ಅವರಲ್ಲಿ 'ಆತ' ಮಾತ್ರ ಕಾಣುತ್ತಿಲ್ಲ !"

"ಏನೋ ಹಾಗೆಂದರೆ" ಬಹಳ ಕಾಲದ ಮೇಲೆ ಮಗ ತನ್ನ ಪ್ರಶ್ನೆಗೆ ಉತ್ತರಿಸುವುದನ್ನು ಕಂಡು ಆಕೆಗೆ ಸಮಾಧಾನ. ಒತ್ತರಿಸಿ ಬರುತ್ತಿದ್ದ ಕಣ್ಣಲ್ಲಿಯ ನೀರನ್ನು ಒರಸಿಕೊಳ್ಳುತ್ತಾ ಕೇಳಿದಳು ಆಕೆ.

ಮಗ ಹೇಳಿದ

"ನನಗೇನೂ ಆಗಿಲ್ಲಮ್ಮಾ, ಏನು ಆಗಬೇಕೋ ಅದು ಆಗಿಲ್ಲವೆಂದೇ ಈ ಸಂಕಟ."

ಅರ್ಥವಾಗಲಿಲ್ಲ ಆಕೆಗೆ. ಆದರೆ ಅದೇ ಸಮಯವನ್ನು ಬಳಸಿಕೊಂಡು ಮಗನ ಹುಚ್ಚು ವರ್ತನೆಗಳನ್ನು ವಿವರಿಸತೊಡಗಿದಳು.

"ಏನೂ ಆಗಿಲ್ಲದಿದ್ದರೆ ಹೀಗೇಕೆ ಮಾಡುತ್ತಿದ್ದಿ?"

ತಾಯಿಯ ಪ್ರಶ್ನೆ.

"ಏನು ಮಾಡುತ್ತಿದ್ದೇನೆ?".

"ಊಟಕ್ಕೆ ಕುಳಿತಾಗ ಚಿತ್ರಾವತಿಯಿಟ್ಟು ಸುಮ್ಮನಾಗುವುದಿಲ್ಲ. ತುತ್ತುಗಳನ್ನು ಯಾರ ಯಾರ ಬಾಯಿಗೋ ಇಡುತ್ತಿರುವಂತೆ ಶೂನ್ಯದಲ್ಲಿ ತುತ್ತುಗಳನ್ನು ಬಿಟ್ಟು ಕೈ ಮುಗಿಯುತ್ತಿ. ಅಕಸ್ಮಾತ್ ಒಂದು ತುತ್ತು ನುಂಗಿದರೆ ಆಮೇಲೆ ಅಯ್ಯೋ ಎಂದು ಅಳುತ್ತಿ. ಯಾರಾದರೂ ಸಿಕ್ಕರೆ ಅವರ ಕಾಲಿಗೆ ಬೀಳುತ್ತಿ. ಅವರ ಕೈಗಳನ್ನು ಹಿಡಿದು ಕಣ್ಣಿಗೆ ಒತ್ತಿಕೊಳ್ಳುತ್ತಿ. ಏನೇನೋ ವಿಚಿತ್ರ ರೀತಿಯಲ್ಲಿ ವರ್ತಿಸುತ್ತಿದ್ದೀಯ. ಇದೆಲ್ಲಾ ನೋಡಿ ನಿನಗೆ ಹುಚ್ಚು ಹಿಡಿದಿದೆಯೆಂದು ಜನರು ಮಾತನಾಡಿ ಕೊಳ್ಳುತ್ತಿದ್ದಾರೆ."

ತಾಯಿಯ ಮಾತು ಕೇಳಿ ಭಾಗಣ್ಣ ಒಮ್ಮೆ ನಕ್ಕು ಬಿಟ್ಟು ನುಡಿದ.

"ಅಮ್ಮಾ ಜನರು ನನ್ನನ್ನು ನೋಡಿ ಏನೆಂದುಕೊಳ್ಳುತ್ತಿದ್ದಾರೆಂಬ ಚಿಂತೆ ಯಿಲ್ಲ ನನಗೆ. ನನ್ನ ಬಗ್ಗೆ ನಿನಗೇನೆನಿಸುತ್ತಿದೆ ಅದನ್ನು ಹೇಳು."

ನಿನಗೆ ಹುಚ್ಚು ಹಿಡಿದಿದೆಯೆಂದು ಯಾವ ತಾಯಿ ತಾನೇ ಹೇಳುತ್ತಾಳೆ? ಆದರೆ ಆಕೆ ಅದನ್ನೇ ಸುತ್ತು ಹಾಕಿ ಹೇಳಿದಳು.

"ನೀನು ಮೊದಲಿನಂತಿಲ್ಲಪ್ಪಾ, ಏನೇನೋ ಮಾಡುತ್ತಿ. ಅವಕ್ಕೆ ಅರ್ಥವೇ ಇಲ್ಲ, ಅರ್ಥವಿಲ್ಲದ್ದನ್ನು ಮಾಡುವವರಿಗೆ ಲೋಕ ಹುಚ್ಚ ಎಂದು ಹೆಸರಿಸುತ್ತದೆ"

ತಾಯಿಯ ಮಾತಿಗೆ ಮಗ ವಿವರಿಸಿದ

"ಅರ್ಥವಿಲ್ಲದ್ದನ್ನು ನಾನೇಕೆ ಮಾಡಲಮ್ಮಾ, ಮೊದಲು ಕೇವಲ ಅರ್ಥಕ್ಕಾಗಿ ಶ್ರಮಿಸಿದೆ ಅಂದರೆ ಹಣಕ್ಕಾಗಿ ಶ್ರಮಿಸಿದೆ. ಅದು ರಾಶಿರಾಶಿಯಾಗಿ ಬೀಳತೊಡಗಿತು. ಜೀವನದ ಗುರಿ ಇಷ್ಟೇ ಅಲ್ಲ. ಇದಕ್ಕೆ ಬೇರೆ ಏನೋ ಅರ್ಥವಿರಬೇಕು. ಹಾಗೆಂದು ಅದರ ಅರ್ಥಶೋಧನೆಗೆ ತೊಡಗಿದೆ. ಆಗ ಈ ಅನರ್ಥಗಳೆಲ್ಲಾ ಘಟಿಸಿವೆ."

ಯಾರಿಗೆ ಅರ್ಥವಾಗಬೇಕು ಈ ಮಾತುಗಳು? ವೆಂಕಮ್ಮನಂಥ ಸಾಮಾನ್ಯ ಹೆಂಗಸು ಈ ಸುತ್ತು ಮಾತುಗಳ ಅಂತರಾರ್ಥವನ್ನು ಹೇಗೆ ಗ್ರಹಿಸಿಯಾಳು? ಆದರೂ ಮಗನು ಬಹಳ ಕಾಲದ ನಂತರ ತನ್ನೊಂದಿಗೆ ನೇರವಾಗಿ ಮಾತನಾಡುತ್ತಿರುವುದನ್ನು ಕಂಡೇ ಆಕೆಗೆ ಒಂದು ರೀತಿಯ ಸಮಾಧಾನ. ಅದರಲ್ಲಿಯೇ ಕೇಳಿದಳಾಕೆ.

"ಈ ಅರ್ಥ ಅನರ್ಥಗಳ ವಿಷಯ ನನಗೆ ತಿಳಿಯದು ಭಾಗಣ್ಣಾ. ಆದರೆ ನೀನು ಮಾತ್ರ ವಿಚಿತ್ರ ರೀತಿಯಲ್ಲಿ ವರ್ತಿಸುತ್ತಿದ್ದಿ. ಇದರಿಂದ ಏನು ಅನರ್ಥವಾಗುತ್ತದೆಯೋ ಎಂದು ಭಯವಾಗುತ್ತಿದೆ" ವೆಂಕಮ್ಮ ನುಡಿದಳು.

"ಇಲ್ಲಮ್ಮಾ, ನನ್ನ ವರ್ತನೆಯಲ್ಲಿ ವಿಚಿತ್ರವೂ ಇಲ್ಲ, ಅನರ್ಥವೂ ಇಲ್ಲ. ಸರ್ವಾರ್ಥದಾಯಕನಾದ ಪರಮಾತ್ಮನನ್ನು ಕಾಣಲು ಪರಿತಪಿಸುತ್ತಿದ್ದೇನೆ."

"ಎಲೆಯ ಸುತ್ತಲೂ ಅನ್ನವಿಡುವುದು. ಎಲ್ಲಿಯೋ ಶೂನ್ಯದಲ್ಲಿ ತುತ್ತು ತೂರುವುದು, ಕಂಡಕಂಡವರ ಕೈಕಾಲುಗಳಿಗೆ ಬೀಳುವುದು, ನೀನೇ ತುತ್ತು ನುಂಗಿ ಅಳುತ್ತಾ ಕೂಡುವುದು ಇವೆಲ್ಲಾ ಹುಚ್ಚು ವರ್ತನೆಗಳಲ್ಲೇನಪ್ಪಾ?"

"ಅಲ್ಲ. ಸರಿದರ್ಶನಕ್ಕಾಗಿ ನಡೆಸಿರುವ ತೀವ್ರ ಪ್ರಯತ್ನ. ಅದು ಯಶಸ್ವಿಯಾಗದ್ದಕ್ಕಾಗಿ ಪಡುವ ಪರಿತಾಪ" ಅರ್ಥವಾಗದೆ ತಾಯಿ ಪಿಳಿ ಪಿಳಿ ನೋಡುತ್ತಿದ್ದಳು. ಕಡೆಗೆ ಮಗನೇ ಬಿಡಿಸಿ ಹೇಳಿದ.

"ಅಮ್ಮಾ ಜನರ ಕೈ ಕಾಲುಗಳಿಗೆ, ಸಿಕ್ಕ ಸಿಕ್ಕ ವಸ್ತುಗಳಿಗೆ ನಾನು ನಮಸ್ಕರಿಸುವುದು ನಿನಗೆ ಆಶ್ಚರ್ಯವಾಗುತ್ತಿದೆ. ಊಟದ ತುತ್ತುಗಳನ್ನು ನಾನು ಎಲ್ಲೆಲ್ಲಿಯೋ ಇಡುತ್ತಿದ್ದೀನೆಂದು ನೀನು ಯೋಚಿಸುತ್ತಿದ್ದೀಯ ಅಲ್ವೇನಮ್ಮಾ"

"ಹೌದಪ್ಪಾ, ಆ ವಿಚಿತ್ರ ವರ್ತನೆಗಳೇ ಅರ್ಥವಾಗುತ್ತಿಲ್ಲ" ತಾಯಿ ದೈನ್ಯದಿಂದ ಹೇಳಿದಳು.

ಮಗ ಬಿಡಿಸಿ ಬಿಡಿಸಿ ಹೇಳಿದ.

"ಜನರ ಅಂಗಾಂಗಳಲ್ಲಿ, ನಾನಾ ವಸ್ತುಗಳಲ್ಲಿ ಆಯಾಯ ಅಭಿಮಾನಿ ದೇವತೆಗಳು ಕಾಣಿಸುತ್ತಿದ್ದಾರೆ. ಊಟಕ್ಕೆ ಕುಳಿತಾಗ ದೇವಾನುದೇವತೆಗಳು ನಾನು ಇಡುವ ತುತ್ತಿಗೆ ಬಾಯಿ ತೆಗೆದು ಕುಳಿತಿರುತ್ತಾರೆ. ಅವರಿಗೆ ತುತ್ತು ಇಡುತ್ತಿದ್ದೇನೆ. ಎಲ್ಲೆಲ್ಲಿಯೂ ಅವರು ಕಾಣಿಸುತ್ತಿದ್ದಾರೆ. ಆದ್ದರಿಂದ ಅವರಿಗೆಲ್ಲಾ ಕೈ ಮುಗಿಯುತ್ತಿದ್ದೇನೆ."

ಮಗನ ಮಾತು ಕೇಳಿ ಅವಕ್ಕಾಗಿ ಹೋದಳು ವೆಂಕಮ್ಮ. ತನ್ನ ಮಗನಿಗೆ ಇಂಥ ದೊಡ್ಡ 'ಸಿದ್ಧಿ' ಸಿದ್ಧಿಸಿದೆ ಎಂದು ತಿಳಿದಾಗ ಆಕೆಗೆ ಒಮ್ಮೆ ಸಂತೋಷ ಉಕ್ಕಿದರೂ ಕೂಡಲೇ ಮತ್ತೊಂದು ಸಂಶಯ ಸ್ಫುರಿಸಿತು ಆಕೆಗೆ. ಕೇಳಿಯೇ ಬಿಟ್ಟಳು.

"ಹಾಗೆ ದೇವಾನುದೇವತೆಗಳು ನಿನಗೆ ದರ್ಶನ ಕೊಡುತ್ತಿದ್ದರೆ ಕಣ್ಣೀರು ಏಕೆ ಕರೆಯುತ್ತಿ? ರೋಧಿಸುತ್ತಾ ಕೂಡುತ್ತೀಯೇಕೆ?"

"ದೇವಾನುದೇವತಗಳನ್ನು ಅಂದರೆ ವಿವಿಧ ದೇವತೆಗಳನ್ನು ನೋಡುವುದಷ್ಟೆ ಸಾಧನಾಜೀವಿಯ ಗುರಿಯಲ್ಲಮ್ಮ. ಅವರೆಲ್ಲರಲ್ಲಿ ಅಂತರ್ಗತನಾಗಿರುವ ಪರಮಾತ್ಮನ ರೂಪವನ್ನು ಕಾಣಬೇಕು. ದೇವತೆಗಳೆಲ್ಲಾ ತಮ್ಮ ದರ್ಶನ ನೀಡುತ್ತಿದ್ದಾರೆ. ಅವರಲ್ಲಿರುವ ಪರಮಾತ್ಮ ಮಾತ್ರ ತನ್ನ ದರ್ಶನ ನೀಡುತ್ತಿಲ್ಲ. ನಾನು ನೀಡುವ ತುತ್ತುಗಳನ್ನು ಅವರು ಸ್ವೀಕರಿಸುತ್ತಿರುವಂತೆ ಕಾಣುತ್ತಿದೆ. ಹಾಗೆಯೇ ಆ ತುತ್ತುಗಳನ್ನು ಅವರಲ್ಲಿರುವ ಪರಮಾತ್ಮ ಸ್ವೀಕರಿಸುವ ರೀತಿ ಮಾತ್ರ ಕಾಣುತ್ತಿಲ್ಲ. ಅದಕ್ಕಾಗಿ ಆ ದೇವದೇವೋತ್ತಮನನ್ನು ಕಾಣುವುದಕ್ಕೆ ಪರಿತಪಿಸುತ್ತಿದ್ದೇನೆ. ಅವನ ದರ್ಶನವನ್ನು ಮಾಡಿಸಿರಿ ಎಂದು ಆ ದೇವತೆಗಳನ್ನು ಪ್ರಾರ್ಥಿಸುತ್ತಿದ್ದೇನೆ. ಅವನ ಅನುಗ್ರಹಕ್ಕಾಗಿ ನಡೆಸಿರುವ ಪ್ರಯತ್ನವನ್ನು 'ಹುಚ್ಚು' ಎಂದು ಭಾವಿಸಿ ನೀನು ಹೆದರಿದರೆ ಹೇಗಮ್ಮಾ?"

ಮಗನು ಪ್ರಶಾಂತವಾಗಿ ವಿವರಿಸಿದ ಮೇಲೆ ವೆಂಕಮ್ಮನಿಗೆ ಪೂರ್ತಿ ಸಮಾಧಾನವಾಯಿತು. ತಾನು ಎಣಿಸಿದಂತೆ ಅಥವಾ ಲೋಕವು ತರ್ಕಿಸಿದಂತೆ ಮಗನಿಗೆ ಹುಚ್ಚು ಹಿಡಿದಿಲ್ಲವೆಂದು ಆಕೆಗೆ ಪೂರ್ತಿ ಮನವರಿಕೆಯಾದ ಮೇಲೆ ಸಮಾಧಾನದ ನಿಟ್ಟುಸಿರು ಬಿಟ್ಟು ಮಗನಿಗೆ ಹೇಳಿದಳು.

"ಅದೇನೋ ಕಂದಾ, ನನಗೆ ಅವೆಲ್ಲಾ ಬೇಕಿಲ್ಲ. ನೀನು ಮೊದಲಿನಂತೆ ವ್ಯವಹಾರದಲ್ಲಿ ನಿರತನಾಗಬೇಕು. ನಿನ್ನ ಆಧ್ಯಾತ್ಮ ಸಾಧನೆ ನಿನ್ನ ಶ್ರೀ ವೆಂಕಟೇಶನ ಗುಡಿಯಲ್ಲಷ್ಟೇ ಸಾಗಬೇಕು. ಅಲ್ಲಿಯೇ ಪ್ರಾರ್ಥಿಸು. ಅಲ್ಲಿ ನೀಡದವನು ಬೇರೆಲ್ಲೋ ನೀಡುತ್ತಾನೇನೋ? ಅಲ್ಲಿ ನೀಡಿದವನು ಬೇಕಾದರೆ ಬೇರೆಲ್ಲಾ ಕಡೆ ನೀಡಬಹುದು. ಅಲ್ಲಿಯೇ ಪ್ರಯತ್ನಿಸು. ನಿನಗೆ ಸಂಶಯಗಳು ಬಂದರೆ ಯಾವುದಾದರೂ ಗ್ರಂಥದಲ್ಲಿ ಪರಿಹಾರ ಹುಡುಕಿಕೋ ಅಥವಾ ಯಾವ ಗುರುವಿನಲ್ಲಾದರೂ..."

ತಾಯಿಯ ಮಾತು ಕೇಳಿ ಧಿಗ್ಗೆಂದು ಎದ್ದು ಬಿಟ್ಟ ಭಾಗಣ್ಣ. ಕೂಡಲೇ, ತಾಯಿಯ ಕಾಲುಗಳಿಗೆ ನಮಸ್ಕರಿಸಿ "ಅಮ್ಮಾ ಪರಮಾತ್ಮ ಎಲ್ಲಾ ಕಡೆಗೂ ಇದ್ದಾನೆ. ಆದರೆ ಕೆಲವು ಕಡೆ ಹೆಚ್ಚು ಸನ್ನಿಹಿತನಾಗಿರುತ್ತಾನೆ. ನನಗೆ ನಿನ್ನಲ್ಲಿ ಹೆಚ್ಚು ಸನ್ನಿಹಿತನಾಗಿ ಈ ಆಜ್ಞೆ ಕೊಟ್ಟಿದ್ದಾನಮ್ಮಾ ನಿನ್ನ ರೂಪದಲ್ಲಿ ಪರಮಾತ್ಮ ನನಗೆ ಮಾರ್ಗ ತೋರಿದ. ಸಾಕು ಆ ಸ್ಥಳದಲ್ಲಿಯೇ ಮೊರೆ ಹೋಗುತ್ತೇನೆ. ಎಲ್ಲೆಲ್ಲಿಯೂ ಆತ ಕಾಣುವಂತೆ ಆತನಲ್ಲಿಯೇ ಪ್ರಾರ್ಥಿಸುತ್ತೇನೆ. ನೀನು ತಿಳಿಸಿದಂತೆ ಪಥ ದರ್ಶನಕ್ಕಾಗಿ ಗ್ರಂಥಗಳ ಮೊರೆ ಹೋಗಬೇಕು. ಆದರೆ ಕೇವಲ ಗ್ರಂಥಗಳಿಂದ ಪಥ ದರ್ಶನವಾಗುವುದಿಲ್ಲಮ್ಮಾ, ಗುರು ದರ್ಶನಕ್ಕಾಗಿ ಕಾಯಬೇಕು. 'ನಿನ್ನ ತೋರಿಸುವ ನನ್ನ ಗುರುವನ್ನು ನನಗೆ ನೀನೇ ತೋರಿಸು' ಎಂದು ಆತನಲ್ಲಿಯೇ ಪ್ರಾರ್ಥಿಸಬೇಕು. ಪರಮಾತ್ಮನೇ ಅನುಗ್ರಹಿಸಿ ಸರಿ ಗುರುವನ್ನು ತೋರಿಸುತ್ತಾನೆ. ಆ ಗುರುವಿನ ಮೂಲಕ ತನ್ನ ದರ್ಶನ ನೀಡುತ್ತಾನೆ. ಅಲ್ಲಿಯವರೆಗೂ ಅವನನ್ನು ಪ್ರಾರ್ಥಿಸುವುದಷ್ಟೇ ನಮ್ಮ ಕೆಲಸ. ಮರೆತು ಹೋಗಿದ್ದ ಈ ಪ್ರಮೇಯ ಸಂಗತಿಯನ್ನು ಪರಮಾತ್ಮ ನಿನ್ನ ಮೂಲಕ ಜ್ಞಾಪಿಸಿದ್ದಾನೆ. ಇನ್ನು ಮೇಲೆ ನಿನ್ನ ಸಂತೋಷಕ್ಕಾಗಿ ವೃತ್ತಿ ವ್ಯವಹಾರಗಳಲ್ಲಿ ನಿರತನಾಗುತ್ತೇನೆ..........ಸಮಾಧಾನವಾಯಿತೇ ಅಮ್ಮಾ."

ಭಾಗಣ್ಣ ಮೊದಲಿನಂತೆ ತುಂಬು ನಗುಮುಖದೊಂದಿಗೆ ಮಾತನಾಡಿದ್ದನ್ನು ಕಂಡು ತಾಯಿಗೆ ಪರಮಾನಂದವಾಗಿ ಹೋಯಿತು. ತನ್ನ ಮಗ ಮೊದಲಿನಂತೆ ದುಡಿಯಲು ನಿಲ್ಲುತ್ತಾನೆಂದು ಆಕೆ ನಿರೀಕ್ಷಿಸಿರಲಿಲ್ಲ. ಮಗ ದುಡಿಯಲಿ ಬಿಡಲಿ, ಎಲ್ಲರಂತೆ ನಗುನಗುತ್ತಾ ಓಡಾಡಿಕೊಂಡಿದ್ದರೆ ಸಾಕು ಎಂದೆನಿಸಿತ್ತು. ತೊಗಟೆ ಬಯಸಿದ್ದಳು ಆಕೆ. ಕಳಿತ ಫಲ ಕೈಗೆ ಸಿಕ್ಕಂತಾಯಿತು ಅನಂತರದ ಮಗನ ವರ್ತನೆ.

ಆಮೇಲೆ ಶ್ರೀ ವೆಂಕಟೇಶನ ಗುಡಿಯಲ್ಲಿ ಭಾಗಣ್ಣ ಬಹಳ ಕಾಲ ಕಳೆಯುತ್ತಿದ್ದುದೇನೋ ಹೌದು : ಆದರೆ ಹೊರಗೆ ಬಂದಾಗ ತನ್ನ ವೃತ್ತಿಯಲ್ಲಿ ಸಂಪೂರ್ಣ ನಿರತನಾಗುತ್ತಿದ್ದ. ಭವಿಷ್ಯ ಹೇಳುವ ವೃತ್ತಿಯನ್ನು ಪುನಃ ಆರಂಭಿಸಿದ ವಿಷಯ ತಿಳಿದ ಜನರು ತಂಡ ತಂಡವಾಗಿ ಮತ್ತೆ ಆಗಮಿಸತೊಡಗಿದರು.

ಬಂದವರಿಗೆಲ್ಲಾ ಮನೆಯಲ್ಲಿ ಊಟ. ಕೇಳಿದವರಿಗೆಲ್ಲಾ ಅವರ ಜೀವನ ಸಮಸ್ಯೆಗಳ ಬಗ್ಗೆ ಪರಿಹಾರದ ಮಾರ್ಗಸೂಚನೆ. ಭಾಗಣ್ಣನ ದರ್ಶನವೆಂದರೆ ಜೀವನಕ್ಕೆ ಪುನಶ್ಚೇತನವೆಂದು ಜನ ನಂಬತೊಡಗಿತು.

ಜನ ಬಂದೇ ಬರುತ್ತಿತ್ತು. ಹಣದ ಚೀಲ ತುಂಬೇ ತುಂಬುತ್ತಿತ್ತು. ತುಂಬಿದ ಚೀಲವನ್ನು ಖರ್ಚುಮಾಡುವುದರಲ್ಲಿ, ಅವಶ್ಯಕತೆಯಿದ್ದು ಅವಕಾಶವಿಲ್ಲದವರಿಗಾಗಿ ನೀಡುವುದರಲ್ಲಿ ಭಾಗಣ್ಣನ ಕೈ ಕೆಲಸ ಮಾಡುತ್ತಲೇ ಇತ್ತು.

ಮುಖದಲ್ಲಿ ಯಾವಾಗಲೂ ಮುಗುಳ್ನಗೆ ಮಿಂಚುತ್ತಲೇ ಇತ್ತು. ಆದರೆ ಹೃದಯದಲ್ಲಿ ಪರಮಾತ್ಮನನ್ನು ಕಾಣುವ ಪ್ರಯತ್ನ ಅಂತರಮುಖಿಯಾಗಿ ಸಾಗಿತ್ತು.

ತಾಯಿಗೆ ಎಲ್ಲಿಲ್ಲದ ಸಮಾಧಾನ. ತನ್ನ ಮಗ ಮೊದಲಿನಂತೆ ದುಡಿಯುವುದಕ್ಕೆ ನಿಂತದ್ದನ್ನು ಕಂಡು ಆಕೆ ದೇವರಿಗೆ ನಮಸ್ಕರಿಸುತ್ತಲೇ ಇದ್ದಳು.

ಮೊದಲ ಮಗ ಭಾಗಣ್ಣ ಕೈತುಂಬಾ ಗಳಿಸುತ್ತಿದ್ದಾನೆ. ಉಳಿದ ಇಬ್ಬರು ಮಕ್ಕಳು ರಾಜಾಶ್ರಯದಲ್ಲಿ ಉನ್ನತ ಹುದ್ದೆಯಲ್ಲಿದ್ದಾರೆ. ಕಡೆಯ ಮಗ ರಂಗ ಭಾಗಣ್ಣನ ಆಸರೆಯಲ್ಲಿ ಸುಖೀ ಜೀವನ ನಡೆಸುತ್ತಿದ್ದಾನೆ. ಇಷ್ಟಿದ್ದರೂ ಆಕೆಗೆ ಒಂದು ಚಿಂತೆ. ಚಿಂತೆ ಇಲ್ಲದ ಸಂಸಾರದ ಯಾವುದು? ಚಿಂತೆ ಇಲ್ಲದಿದ್ದರೆ ಅದು ಸಂಸಾರವೇ ಅಲ್ಲವೇನೊ!

***

ಭಾಗಣ್ಣನೇನೋ ಮದುವೆ ಬೇಡವೆಂಬ ಹಠದಲ್ಲಿಯೇ ಇದ್ದಾನೆ. ಸೀನಣ್ಣ ಹಾಗೂ ದಾಸಣ್ಣರ ವಿವಾಹಕ್ಕೆ ಏಕೆ ಯೋಚಿಸಬಾರದು. ಅವರಿಗೆ ಉದ್ಯೋಗ ಸಿಕ್ಕಿದೆ. ಕೈ ತುಂಬಾ ಹಣ ಬರುತ್ತಿರಬೇಕು. ಪಾಪ; ಗದ್ವಾಲದಲ್ಲಿ ಅವರು ಕೈ ಬಾಯಿ ಸುಟ್ಟುಕೊಂಡು ಅಡುಗೆ ಮಾಡಿಕೊಳ್ಳುತ್ತಿರಬೇಕು. ಎಷ್ಟು ತೊಂದರೆಯೋ ಹುಡುಗರಿಗೆ! ತಾನು ಹೋಗಬೇಕೆಂದರೆ ಇಲ್ಲಿ ಭಾಗಣ್ಣನನ್ನು ನೋಡಿಕೊಳ್ಳುವ ರಾರು? ಚಿಕ್ಕ ಮಗ ರಂಗ ಇನ್ನೂ ಹುಡುಗಾಟದಲ್ಲಿದ್ದಾನೆ. ತಾನು ಇಲ್ಲಿ ಬಿಟ್ಟು ಹೋಗುವಂತಿಲ್ಲ.

ಒಮ್ಮೆ ಮೆಲ್ಲಗೆ ಭಾಗಣ್ಣನ ಬಳಿ ಈ ವಿಷಯ ಪ್ರಸ್ತಾಪಿಸಿದಳು.

"ಭಾಗಣ್ಣಾ ನನಗೆ ವಯಸ್ಸಾಗುತ್ತಿದೆ. ಮನೆಯಲ್ಲಿ ಕೆಲಸಗಾರರು ಇರುವರಾದರೂ ಅವರ ಮೇಲೆ ಸಂಪೂರ್ಣ ಜವಾಬ್ದಾರಿ ಒಪ್ಪಿಸಲು ಮನಸ್ಸಾಗುತ್ತಿಲ್ಲ. ನೀನೋ ವಿವಾಹವೇ ಬೇಡವೆಂದು ಹಠ ಹಿಡಿದಿದ್ದೀ. ನಿನ್ನ ತಮ್ಮಂದಿರಿಗೆ ಕೆಲಸ ಸಿಕ್ಕಿದೆ. ಅವರಿಗೆ ವಿವಾಹ ಮಾಡುವ ವ್ಯವಸ್ಥೆಯನ್ನಾದರೂ ಮಾಡೋ. ಮಹಾರಾಜರಿಗೆ ಹೇಳಿ ಇಲ್ಲಿಯೇ ಸುತ್ತುಮುತ್ತಲ ಪ್ರದೇಶಕ್ಕೆ ರಾಜ ಪ್ರತಿನಿಧಿಗಳಾಗಿ ವರ್ಗಾಯಿಸಿ ಬಿಡು. ಸೊಸೆಯಂದಿರಿಗೆ ಮನೆಯ ಜವಾಬ್ದಾರಿ ಒಪ್ಪಿಸಿ ಹಾಯಾಗಿ ರಾಮಾಕೃಷ್ಣ ಎಂದು ಇದ್ದು ಬಿಡುತ್ತೇನೆ."

ತಾಯಿಯ ಮಾತು ಕೇಳಿದ ಭಾಗಣ್ಣ ಮುಗುಳ್ನಕ್ಕು ನುಡಿದ.

"ಸೀನ ಹಾಗೂ ದಾಸುರ ಸ್ವಭಾವ ನಿನಗೆ ಗೊತ್ತಿಲ್ಲಮ್ಮಾ. ಅವರು ರಾಜರ ಸೇವೆಯಲ್ಲಿ ಹೆಚ್ಚು ಕಾಲ ಬಾಳಲಾರರು. ಅವರು ಎಣ್ಣೆ ಇದ್ದ ಹಾಗೆ. ರಾಜಾಶ್ರಯ ಎನ್ನುವುದು ನೀರಿದ್ದಂತೆ. ಎಣ್ಣೆ ನೀರು ಒಂದೆಡೆಗೆ ಕಲೆಸಲು ನೀನೇನೋ ಪ್ರಯತ್ನಿಸಿದೆ. ಅದಕ್ಕೆ ನಾನೂ ಸಮ್ಮತಿಸಿದೆ. ನೀರಿನಲ್ಲಿ ಎಣ್ಣೆ ಬಿಟ್ಟದ್ದೂ ಆಯಿತು. ಆದರೆ ಅವು ಪರಸ್ಪರ ಕಲೆಯಲಿಲ್ಲ. ಎಷ್ಟೇ ನೀರಿರಲಿ, ಎಣ್ಣೆ ಪ್ರತ್ಯೇಕವಾಗಿ ತೇಲಿ ಕೊಂಡು ಇರುತ್ತದೆ."

ಭಾಗಣ್ಣ ನೀಡಿದ ವಿವರಣೆ ಹಾಗೂ ಹೋಲಿಕೆ ತಾಯಿಗೆ ಸರಿಬೀಳಲಿಲ್ಲ. ಕೂಡಲೇ ಆಕೆ ಅದನ್ನು ಪ್ರತಿಭಟಿಸಿದಳು. "ಸಾಕು ಸುಮ್ಮನಿರೋ. ಎಣ್ಣೆ ನೀರು ಸೇರಿಸಿಯೇ ಅಡುಗೆ ಮಾಡುತ್ತೇವೆ. ಚೆನ್ನಾಗಿ ಗೊಟಾಯಿಸಿಬಿಟ್ಟರೆ ಅವು ಪರಸ್ಪರ ಕೂಡಿ ಹೆಚ್ಚು ರುಚಿ ಒದಗಿಸುತ್ತವೆ."

ತಾಯಿ ಜೀವನಕ್ಕೆ ಅತಿ ಹತ್ತಿರವಾದ ಹೋಲಿಕೆ ನೀಡಿದರೂ, ಆಕೆ ಅದಕ್ಕೆ ವಿರುದ್ಧವಾದ ವಿವರಣೆ ನೀಡಿದ್ದು ಕೇಳಿ ಭಾಗಣ್ಣನಿಗೆ ನಗು ಬರದೆ ಇರಲಿಲ್ಲ.

"ಇಲ್ಲಿ ಅಡುಗೆಯ ಮಾತು ಬರಲಿಲ್ಲಮ್ಮಾ. ಹೋಗಲಿ ಎಣ್ಣೆ ನೀರು ಇರುವಾಗ ಅದಕ್ಕೆ ಸೀಗೇಕಾಯಿಯೂ ಸೇರಿದರೆ ಎಣ್ಣೆ ಕೊಚ್ಚಿ ಹೋಗುತ್ತದೆ. ನೀರು ಹೊಲಸಾಗುತ್ತದೆ."

"ಏನೋ ಅಪ್ಪಾ, ಏನೇನೋ ಮಾತನಾಡುತ್ತಿ. ಮಾತಿನಲ್ಲಿ ನೀನು ಜಾಣ. ಹಳ್ಳಿ ಹೆಂಗಸು ನಾನು. ನಿನ್ನೊಂದಿಗೆ ವಾದಿಸಿ ನಾನೇನು ಗೆಲ್ಲಬಲ್ಲೆ? ಆದರೂ ರಾಜಾಶ್ರಯದಲ್ಲಿರುವ ನನ್ನ ಮಕ್ಕಳಿಗೆ ಸೀಗೇಕಾಯಿ ಹೇಗೋ ತಗುಲುತ್ತದೆ?"

ಕೂಡಲೇ ಭಾಗಣ್ಣನಿಗೆ ಏನೆನಿಸಿತೋ ಏನೋ, ತನ್ನ ತಮ್ಮಂದಿರ ಬಗ್ಗೆ ಯೋಚಿಸಲು ಈ ಮಾತು ಪ್ರೇರಣೆ ನೀಡಿತೋ, ಕೂಡಲೇ ತನ್ನ ವೃತ್ತಿ ಗ್ರಂಥಗಳನ್ನು ತೆರೆದ. ತಮ್ಮಂದಿರ ಹೆಸರುಗಳನ್ನು ಲಗತ್ತಿಸಿ ಏನೇನೋ ಲೆಕ್ಕ ಹಾಕಿದ. ಲೆಕ್ಕ ಹಾಕುತ್ತಿದ್ದಂತೆಲ್ಲಾ ಆತನ ಮುಖದಲ್ಲಿ ಕಳವಳ ಹೆಚ್ಚುತಿತ್ತು. ಬರುಬರುತ್ತಾ ಭೀತಿ ಹೆಚ್ಚಿತು. ಕೂಡಲೇ ಎದ್ದು ತಾಯಿಗೆ ನಮಸ್ಕರಿಸಿ "ಅಮ್ಮಾ ತಮ್ಮಂದಿರು ಅತಿ ಇಕ್ಕಟ್ಟಿನಲ್ಲಿದ್ದಾರೆ. ಕ್ಷಣಕ್ಷಣವೂ ಅವರಿಗೆ ಯುಗದಂತೆ ಆಗುತ್ತಿದೆ. ಆಲಸ್ಯವಾದರೆ ಅವರು ಆತ್ಮಹತ್ಯೆಯನ್ನೇ ಮಾಡಿಕೊಳ್ಳಬಹುದು. ಈಗ ಬರುತ್ತೇನೆ" ಎಂದು ಅವಸರವಸರವಾಗಿ ಹೇಳಿ ಹೊರಗೆ ಹೊರಟ.

ಭಾಗಣ್ಣನ ಮಾತು ಕೇಳಿ ತಾಯಿ ಹೌಹಾರಿದಳು. ಅವನು ತಮ್ಮಂದಿರನ್ನು ರಕ್ಷಿಸಲು ಗದ್ವಾಲಕ್ಕೆ ಹೋಗುತ್ತಿದ್ದಾನೆಂದು ತರ್ಕಿಸಿದ ಆಕೆ ಮಗನಿಗೆ ಕೂಗಿ ಹೇಳಿದಳು

"ಮೆಟ್ಟುಗಳನ್ನು ಧರಿಸದೆ ಹೊರಟು ಬಿಟ್ಟೆಯಲ್ಲೋ, ಅಷ್ಟು ದೂರ ನೀನು ಹೋಗುವುದು ಯಾವಾಗ? ಏನಪ್ಪಾ ಗತಿ?" ಕೂಗಿಕೊಂಡಳು ತಾಯಿ.

ಭಾಗಣ್ಣನಿಗೆ ಈ ಮಾತು ಕೇಳಿಸಲಿಲ್ಲ. ಯಾವ ಮಾತುಗಳನ್ನು ಕೇಳಿಸಿ ಕೊಳ್ಳುವ ಸ್ಥಿತಿಯಲ್ಲಿ ಆತನಿರಲಿಲ್ಲ.

ಆತ ಹೊರಟಿದ್ದು ಗದ್ವಾಲಕ್ಕೇನೂ ಅಲ್ಲ. ಅಷ್ಟು ದೂರ ಕ್ರಮಿಸಿ ಪರಿಸ್ಥಿತಿ ಸರಿಪಡಿಸುವ ಕಾಲವೂ ಅದಾಗಿರಲಿಲ್ಲ.

ಭಾಗಣ್ಣ ಮೈಮೇಲೆ ಪ್ರಜ್ಞೆ ಇಲ್ಲದೆ ಧಾವಿಸಿ ಹೊರಟಿದ್ದು ಶ್ರೀ ವೆಂಕಟೇಶನ ಗುಡಿಗೆ.

ಓಡುತ್ತಾ ಅಲ್ಲಿಗೆ ಹೋದ ಭಾಗಣ್ಣ ಗುಡಿಯ ಗಂಟೆಯನ್ನು ಢಣಾಢಣಾ ಎಂದು ಭಾರಿಸುತ್ತಾ ಬಹಳ ಕಾಲ ನಿಂತು ಕಡೆಗೆ ಶಿರಸಾಷ್ಟಾಂಗ ನಮಸ್ಕಾರ ಹಾಕಿ ಮಲಗಿ ಬಿಟ್ಟ.

ಹಾಗೆ ಎಷ್ಟೋ ಹೊತ್ತು ಮಲಗಿದ್ದವನು ಮೆಲ್ಲಗೆ ಎದ್ದು ಶ್ರೀ ವೆಂಕಟೇಶನಿಗೆ ಮಂಗಳಾರಾತಿ ಮಾಡಿ "ಪ್ರಭು ನಿನ್ನ ಕರುಣೆಯೇ ಕರುಣೆ. ನನ್ನ ತಮ್ಮಂದಿರನ್ನು ನನಗೆ ಉಳಿಸಿಕೊಟ್ಟೆ. ಇನ್ನು ಮೇಲೆ ಅವರನ್ನು ಬಿಟ್ಟಿರುವುದಿಲ್ಲವೋ ಪ್ರಭೂ. ನಿನ್ನ ನೆಚ್ಚಿನ ಭಕ್ತರನ್ನಾಗಿ ಅವರನ್ನು ಸಮರ್ಪಿಸುತ್ತೇನೆ" ದೇವರಿಗೆ ಮತ್ತೊಮ್ಮೆ ಸಾಷ್ಟಾಂಗ ನಮಸ್ಕಾರ ಹಾಕಿ ಮೆಲ್ಲಗೆ ಮನೆಗೆ ಹಿಂದಿರುಗಿದ.

ಮೈಮೇಲೆ ಉತ್ತರೀಯವನ್ನೂ ಹೊದೆಯದೆ, ಕಾಲಿಗೆ ಮೆಟ್ಟುಗಳನ್ನು ಧರಿಸದೆ ಮಗನು ಓಡಿದ್ದನ್ನು ಕಂಡ ತಾಯಿಗೆ ಬಹಳ ಭಯ ಆವರಿಸಿತ್ತು.. ಮಗನು ಗದ್ವಾಲಕ್ಕೆ ಹೋಗಿರಬೇಕೆಂದು ಆಕೆ ತರ್ಕಿಸಿದ್ದಳು.

ಮನೆಗೆ ಪ್ರಶಾಂತನಾಗಿ ಅವನು ಹಿಂದಿರುಗಿದ್ದನ್ನು ಕಂಡು ಆಕೆಗೆ ಸಮಾಧಾನ ವಾದರೂ ತನ್ನ ಇಬ್ಬರು ಮಕ್ಕಳ ಪರಿಸ್ಥಿತಿಯೇನು ಎಂದು ತಿಳಿಯುವ ತವಕ. ಎಲ್ಲರೂ ಗದ್ವಾಲಕ್ಕೆ ಹೋಗಬೇಕಾಗುತ್ತದೇನೋ ಎಂದು ಆಕೆ ಯೋಚಿಸಿದ್ದಳು.

"ತಮ್ಮಂದಿರ ವಿಷಯ ಮಾತನಾಡುತ್ತಾ ಇದ್ದವನು ಇದ್ದಕ್ಕಿದ್ದಂತೆ ಅವರ ಕಣಿ ನೋಡಲು ಪ್ರಾರಂಭಿಸಿದೆ. ಕೂಡಲೇ ನಿನ್ನ ಮುಖದಲ್ಲಿ ಭೀತಿ ಮೂಡಿತು. ಅದನ್ನು ಕಂಡು ಅವರಿಗೆ ಏನೋ ಆಪತ್ತು ಬಂದಿರಬೇಕೆಂದು ಅಂದುಕೊಳ್ಳುತ್ತಿದ್ದಂತೆಯೇ ನೀನು ಅವಸರವಸರವಾಗಿ ಹೊರಗೆ ಹೊರಟೆ. ಏನೋ ಅವರಿಗೆ ಬಂದ ಆಪತ್ತು? ಅದನ್ನು ಹೇಗೋ ಪರಿಹರಿಸಿದೆ?" ತಾಯಿ ಗದ್‌ಗದಿತ ಕಂಠದಿಂದ ಪ್ರಶ್ನಿಸಿದಳು.

"ಅಮ್ಮಾ ನಿನ್ನ ಊಹೆಯೆಲ್ಲಾ ಸರಿ. ನನ್ನ ತಮ್ಮಂದಿರಿಗೆ ಸೆರೆಮನೆ ವಾಸ ವಾಗಿತ್ತು. ಅಲ್ಲಿ ಕಠಿಣ ರೀತಿಯಲ್ಲಿ ಶಿಕ್ಷಿಸುವ ವ್ಯವಸ್ಥೆಯೂ ನಡೆದಿತ್ತು. ಆದ್ದರಿಂದ ಅಷ್ಟು ಅವಸರವಾಗಿ ಹೊರಟೆ."

"ಅಲ್ಲಿಗೆ ಹೇಗೇ ಹೋದೆಯೋ ಅಷ್ಟು ಬೇಗ?" ತಾಯಿಯ ಪ್ರಶ್ನೆ.

"ಅಲ್ಲಿಗೆ ಹೋಗಿ ಸರಿಪಡಿಸುವುದಕ್ಕೆ ಸಮಯವೆಲ್ಲಿತ್ತಮ್ಮಾ!"

"ಅದಕ್ಕೆ ಏನೋ ಮಾಡಿದೆ?"

ಮನುಷ್ಯ ಹೋಗಿ ಸರಿಪಡಿಸುವ ವೇಳೆ ಅದಾಗಿರಲಿಲ್ಲ. ಅಷ್ಟು ಸ್ವಲ್ಪ ವೇಳೆ ಯಲ್ಲಿ ಯಾವ ಮನುಷ್ಯನೂ ಏನೂ ಮಾಡಲಾರ. ಮನುಷ್ಯರ ಅಳತೆಗೆ ಮೀರಿ ಸಮಸ್ಯೆಗಳು ಎದುರಾದಾಗ ಭಗವಂತನನ್ನಲ್ಲದೆ ಮತ್ತಾರಲ್ಲಮ್ಮಾ ಮೊರೆ ಹೋಗ ಬೇಕು? ಪ್ರಯತ್ನ ಎನ್ನುವುದು ಮಾನವನಿಗೆ ಭಗವಂತನು ನೀಡಿದ ದತ್ತ ಸ್ವಾತಂತ್ರ್ಯ. ಅದೂ ಅವನೇ ಮಾಡಿಸಬೇಕು. ಅಂಥ ಪ್ರಯತ್ನಕ್ಕೂ ಅವಕಾಶವಿಲ್ಲದಾಗ ಏನು ಮಾಡಬೇಕು? ಆದ್ದರಿಂದ ನೇರವಾಗಿ ಅವನ ಗುಡಿಗೆ ಹೋಗಿ ಅವನಲ್ಲಿ 'ಮೊರೆ ಹೊಕ್ಕೆ."

ತಾಯಿಗೆ ಮಗನ ವಿವರಣೆ ಸಮಾಧಾನ ತರಲಿಲ್ಲ. ಮನಸ್ಸೇ ಒಂದು ವಿಚಿತ್ರ. ಅದರಲ್ಲಿ ಪ್ರೀತಿಯ ವಿಷಯ ಬೆರೆತಾಗ ತರ್ಕ ತನ್ನ ಹಾದಿಯಲ್ಲಿಯೇ ತಾನು ಸಾಗುತ್ತದೆ. ಅದಕ್ಕೆ ಒಂದು ದಾರಿಯಿಲ್ಲ, ಒಂದು ಕ್ರಮವಿಲ್ಲ.

ತನ್ನ ಮಕ್ಕಳಿಗೆ ಆಪತ್ತು ಬಂದಿದೆ ಎಂಬ ಭಾಗಣ್ಣನ ಮಾತಿನಲ್ಲಿ ಸಂಪೂರ್ಣ ನಂಬಿಕೆಯಿದೆ. ಆದರೆ ಪರಿಹಾರಕ್ಕೆಂದು ಶ್ರೀ ವೆಂಕಟೇಶನಲ್ಲಿ ಮೊರೆ ಹೊಕ್ಕಿದ್ದು, ಅಲ್ಲಿಂದ ಸಮಾಧಾನವಾಗಿ ಮರಳಿರುವುದು ಆಕೆಗೆ ತೃಪ್ತಿಯಿಲ್ಲ. ಹುಚ್ಚು ಮನಸ್ಸು ಅರ್ಧ ನಂಬುತ್ತದೆ, ಅರ್ಧ ನಂಬುವುದಿಲ್ಲ!

ಭಾಗಣ್ಣನೇ ತಾಯಿಗೆ ಸಮಾಧಾನ ಮಾಡಿ ಹೇಳಿದ.

"ಇನ್ನು ಎರಡು ಮೂರು ದಿನಗಳಲ್ಲಿ ಅವರು ಕ್ಷೇಮವಾಗಿ ಮರಳುತ್ತಾರಮ್ಮಾ. ಅಲ್ಲಿಯ ಅನುಭವಗಳನ್ನು ನೀನೇ ಅವರ ಬಾಯಿಯಿಂದ ಕೇಳುವಿಯಂತೆ."

ಎರಡು ಮೂರು ದಿನಗಳೆನ್ನುವುದು ತಾಯಿಗೆ ಹಲವಾರು ವರ್ಷಗಳನ್ನು ಕಳೆದಷ್ಟು ದೀರ್ಘವೆನಿಸಿತು. ಕ್ಷಣಕ್ಷಣವೂ ಬಾಗಿಲ ಕಡೆ ನೋಡುತ್ತಿದ್ದಳು.

ಸೀನ ಹಾಗೂ ದಾಸಣ್ಣ ಬರುತ್ತಿರುವುದನ್ನು ದೂರದಿಂದಲೇ ಕಂಡ ವೆಂಕಮ್ಮ ಭಾಗಣ್ಣನಿಗೆ ಕೂಗಿ ಹೇಳಿದಳು.

"ನನ್ನ ಮಕ್ಕಳು ಬಂದರು ಕಣೋ, ಶ್ರೀ ವೆಂಕಟೇಶ ಕರುಣಿಸಿ ಬಿಟ್ಟ" ಓಡುತ್ತಾ ಹೋಗಿ ಮಕ್ಕಳನ್ನು ತಬ್ಬಿಕೊಂಡಳಾಕೆ.

ಅವರ ಮುಖ ಒಣಗಿ ಹೋಗಿತ್ತು. ಮುಖದಲ್ಲಿ ದೊರಗು ದೊರಗಾದ ಗಡ್ಡ. ಕಣ್ಣುಗಳು ನಿಸ್ತೇಜವಾಗಿ ಹೋಗಿದ್ದವು.

ಮಕ್ಕಳನ್ನು ಒಳಗೆ ಕರೆದುಕೊಂಡು ಹೋದಳು ವೆಂಕಮ್ಮ. ಭಾಗಣ್ಣ ತಮ್ಮಂದಿರ ತಲೆ ನೇವರಿಸಿ "ಶ್ರೀ ವೆಂಕಟೇಶ ನಿಮ್ಮನ್ನು ಕರುಣಿಸಿದ್ದಾನೆ. ಪ್ರಾರಬ್ಧ ಕರ್ಮ ಕಿಂಚಿತ್‌ನಲ್ಲಿ ಪರಿಹಾರವಾಯಿತು. ಹೋಗಿ ಸ್ನಾನ ಊಟಗಳನ್ನು ತೀರಿಸಿ ಕೊಳ್ಳಿ. ನಾನು ಶ್ರೀ ವೆಂಕಟೇಶನ ಗುಡಿಗೆ ಹೋಗಿ ಬರುತ್ತೇನೆ" ಎಂದು ಹೇಳಿ ಹೊರಗೆ ಹೊರಟ.

ಅತಿ ಸಂತೋಷ, ಅತಿ ದುಃಖ ಏನಾದರೂ ಭಾಗಣ್ಣ ಶ್ರೀ ವೆಂಕಟೇಶನ ಗುಡಿಗೆ ಹೋಗಬೇಕು. ಏನೂ ಇಲ್ಲದಿದ್ದರಂತೂ ಆತನ ದರ್ಶನ ಬೇಕೇ ಬೇಕು. ಈ ಸ್ವಭಾವ ಗೊತ್ತಿದ್ದ ತಮ್ಮಂದಿರು ಅಣ್ಣನಿಗೆ ನಮಸ್ಕರಿಸಿದರು. ಭಾಗಣ್ಣ ಗುಡಿಯಿಂದ ಮರಳಿದಾಗ ಸಾಕಷ್ಟು ವೇಳೆಯಾಗಿತ್ತು.

ತಾಯಿಯನ್ನು ಮುಂದೆ ಕೂಡಿಸಿಕೊಂಡು ತಮ್ಮಂದಿರನ್ನು ಕರೆದು ಅವರನ್ನು ಕೇಳಿದ.

"ಮಹಾರಾಣಿಯವರ ತಮ್ಮಂದಿರು ನಿಮ್ಮ ಮೇಲೆ ಬಹಳ ಮುನಿದು ಬಿಟ್ಟಿದ್ದರು. ವೇಳೆಗೆ ಸರಿಯಾಗಿ ಮಹಾರಾಣಿಯವರು ಬರದಿದ್ದರೆ ನಿಮ್ಮ ಅವಸ್ಥೆ ಮುಗಿದೇ ಹೋಗುತ್ತಿತ್ತಲ್ಲವೆ?"

ಅಣ್ಣ ಕಣ್ಣಿನಿಂದ ನೋಡಿದಂತೆ ವಿವರಿಸುತ್ತಿದ್ದುದನ್ನು ಕೇಳಿ ತಮ್ಮಂದಿರು ಆತನಿಗೆ ನಮಸ್ಕರಿಸಿ, "ಅಣ್ಣಾ, ಮಹಾರಾಣಿಯವರ ತಮ್ಮಂದಿರಿಗೆ ಸತ್ಯ ತಿಳಿಯುವ ಅಪೇಕ್ಷೆಯೇ ಇರಲಿಲ್ಲ. ನಮ್ಮನ್ನು ಶಿಕ್ಷಿಸುವ ತವಕ ಅವರಿಗೆ. ನಮ್ಮನ್ನು ಕಂಡರೆ ಅವರಿಗೆ ಅಷ್ಟೊಂದು ಆವೇಶವೇಕೋ ತಿಳಿಯಲಿಲ್ಲ!" ತಮ್ಮಂದಿರೇ ಪ್ರಶ್ನಿಸಿದರು.

ಸ್ಥಳದಲ್ಲಿ ಇದ್ದು ಕಹಿ ಘಟನೆಗಳನ್ನು ಅನುಭವಿಸಿದವರು - ಅವರೇ, ತಮ್ಮ ಸಂಗತಿಗಳನ್ನು ಕೇಳುವುದು ಅಲ್ಲಿಲ್ಲದಿದ್ದ ಭಾಗಣ್ಣ ಸಂಗತಿಗಳನ್ನು ವಿವರಿಸುವುದು ವೆಂಕಮ್ಮನಿಗೆ ಆಶ್ಚರ್ಯವಾಗಿ ಕಾಣುತ್ತಿತ್ತು.

ಭಾಗಣ್ಣ ಬಿಡಿಸಿ ಬಿಡಿಸಿ ಹೇಳಿದ.

"ಮಹಾರಾಜರು ಅರಮನೆಯಲ್ಲಿ ನಿಮ್ಮ ಬಗ್ಗೆ ತೋರುತ್ತಿದ್ದ ಗೌರವ, ಮಹಾರಾಣಿಯವರು ನಿಮ್ಮಲ್ಲಿಟ್ಟ ವಾತ್ಸಲ್ಯ ಇವುಗಳಿಂದ ಮಹಾರಾಜರ ಭಾವಮೈದುನರಿಗೆ ತುಂಬಾ ಅಸೂಯೆ ಹುಟ್ಟಿತ್ತು. ಅವರ ಸ್ವಭಾವವೇ ಒಂದು ವಿಚಿತ್ರ. ತಮ್ಮ ಮಗಳನ್ನು ಯುವರಾಜರಿಗೆ ಕೊಟ್ಟು ವಿವಾಹ ಮಾಡಬೇಕೆಂದೇನೋ ಮೊದಲು ಅವರು ಯೋಜಿಸಿದ್ದರು. ಆನಂತರ ಯುವರಾಜರಿಗಾದ ಮಾನಸಿಕ ಅಸ್ವಸ್ಥತೆ ಕಂಡು ತಮ್ಮ ನಿರ್ಧಾರದಿಂದ ಅವರೇ ಹಿಂದೆಗೆದರು. ಇದೇ ನೋಡು ಕೆಲವು ಮನುಷ್ಯರ ವಿಚಿತ್ರ ಸ್ವಭಾವ. ತಮ್ಮ ಅಳಿಯನಿಗೆ ಒಳ್ಳೆಯದಾಗಬೇಕು. ಆದರೆ ಆ ಒಳ್ಳೆಯದು ತಮ್ಮಿಂದಲೇ ಆಗಬೇಕು. ತಮ್ಮಿಂದಾಗದಿದ್ದರೆ ಅದು ಆಗಲೇ ಕೂಡದೆಂಬ ವಿಚಿತ್ರಕಾಂಕ್ಷೆ. ತಮ್ಮ ಮಗಳನ್ನು ಕೊಡಲು ಅವರು ಹಿಂದೆಗೆದಿದ್ದೇನೊ ನ್ಯಾಯ. ಆದರೆ ತಮ್ಮ ಮಗಳು ಇಲ್ಲದಿದ್ದರ ಯುವರಾಜರಿಗೆ ವಿವಾಹವೇ ಆಗ ಕೂಡದೆಂಬ ದೈತ್ಯಕಾಂಕ್ಷೆ ಅವರದು. ನನ್ನ ಸೂಚನೆಯಂತೆ ಯುವರಾಜರಿಗೆ ವಿವಾಹವಾದಾಗ ಅತಿಯಾಗಿ ಹೊಟ್ಟೆ ಉರಿದುಕೊಂಡವರು ಅವರೆ. ಅರಮನೆಯಲ್ಲಿ ತಮ್ಮ ಪ್ರಭಾವ ಕಡಿಮೆ ಆಯಿತೆಂಬ ಅತೃಪ್ತಿ ಅವರಿಗೆ. ಅಲ್ಲಿ ನನಗೆ ಸಿಕ್ಕುತ್ತಿದ್ದ ಮನ್ನಣೆ ಮರ್ಯಾದೆ ಕಂಡಾಗ ಅವರಿಗೆ ಸಿಟ್ಟು ಉಕ್ಕುತ್ತಿತ್ತು. ನೀವು ಅಲ್ಲಿ ಹೋಗಿ ಕೆಲಸಕ್ಕೆ ಸೇರಿದಾಗಲಂತೂ ಅವರ ಅಸೂಯೆ ಜಾಸ್ತಿಯಾಗಿ ಹೋಯಿತು. ನಿಮ್ಮ ಪ್ರಭಾವ ಹೆಚ್ಚುವುದನ್ನು ಅವರು ಸಹಿಸದಾದರು. ಏನೋ ತಾವು ಕಡಿಮೆ ಯಾದಂಥ ಭಾವನೆ ಅವರಿಗೆ. ಮಹಾರಾಜರು ನಿಮ್ಮ ಮೇಲ ಇಟ್ಟಿದ್ದ ಅಭಿಮಾನ ವನ್ನು ನೋಡಿದ ಅಧಿಕಾರಿಗಳು ನಿಮ್ಮಲ್ಲಿ ವಿನೀತರಾಗಿ ನಡೆಯುತ್ತಿದ್ದುದನ್ನು ನೋಡಿ ಅವರ ಸಹನೆಯ ಕಟ್ಟೆ ಒಡೆದು ಹೋಯಿತು. ಸ್ವಂತ ಶಕ್ತಿಗಿಂತಲೂ ಬೇರೆಯವರ ಪ್ರಭಾವದಿಂದ ಉನ್ನತ ಸ್ಥಾನ ಗಳಿಸಿದವರಿಗೆ ಇಂಥ ಹೊಟ್ಟೆಉರಿ ಸಾಮಾನ್ಯವೇನೋ. ಸಮಯಕ್ಕಾಗಿ ಕಾಯುತ್ತಿದ್ದ ಅವರು ನಿಮ್ಮ ಮೇಲೆ ಸಲ್ಲದ ಆರೋಪ ಹೊರಿಸಿ ಸೆರೆಮನೆಗೆ ಅಟ್ಟಿದರು. ದೂರು ಕೊಟ್ಟವರು ಅವರೆ. ಶಿಕ್ಷೆ ವಿಧಿಸುವ ನ್ಯಾಯಾಧಿಪತಿಗಳೂ ಅವರೆ. ಅಷ್ಟರಲ್ಲಿ ಮಹಾರಾಣಿಯವರಿಗೆ ವಿಷಯ ಹೇಗೋ ತಿಳಿದು ನಿಮ್ಮನ್ನು ಸೆರೆವಾಸದಿಂದ ಬಿಡಿಸಿದರು. ಆದರೂ ತಮ್ಮನನ್ನು ಕರೆದು ಈ ಬಗ್ಗೆ ಛೀ ಹಾಕಲು ಒಂದು ರೀತಿಯ ಪ್ರೀತಿಯ ತೆರೆ ಅಡ್ಡಬಂದಿತು.

ನಿಮ್ಮನ್ನು ಉತ್ತನೂರಿಗೆ ಅವರೇ ಕಳಿಸಿ ನನ್ನನ್ನು ಕರೆತರುವಂತೆ ಹೇಳಿದ್ದಾರಲ್ಲವೆ? ತಮ್ಮನ ಆಡಳಿತದಲ್ಲಿ ಹಸ್ತಕ್ಷೇಪ ಮಾಡಿದ್ದಕ್ಕೆ, ಅವನ ಉದ್ವಿಗ್ನತೆ ಕಡಿಮೆ ಮಾಡುವ ಕಾಲಾವಕಾಶಕ್ಕಾಗಿ ನಿಮ್ಮನ್ನು ಇಲ್ಲಿಗೆ ಕಳಿಸಿದ್ದಾರೆ. ಮಹಾರಾಜರಿಗೆ ಈ ವಿಷಯಗಳಾವುದೂ ತಿಳಿದಿಲ್ಲ. ನೀವು ಹೋದರೆ ಮಹಾರಾಜರು ನಿಮ್ಮ ಕ್ಷಮೆಯಾಚಿಸಿ ಪುನಃ ಕೆಲಸಕ್ಕೆ ಸೇರಿಸಿಕೊಳ್ಳುತ್ತಾರೆ. ನೀವು ಹೋಗುತ್ತೀರೋ? ಬೇಕಾದರೆ ನಾನೇ ಬಂದು ಮಹಾರಾಜರಲ್ಲಿ ಹೇಳಿಬರುತ್ತೇನೆ" ಮುಗುಳ್ನಗುತ್ತಾ ಭಾಗಣ್ಣ ಪ್ರಶ್ನಿಸಿದ.

ತಾಯಿ ವೆಂಕಮ್ಮನೇ ಮಧ್ಯ ಪ್ರವೇಶಿಸಿ ಹೇಳಿದಳು "ನನ್ನ ಮುದ್ದು ಮಕ್ಕಳ ಮೇಲೆ ಅಷ್ಟೊಂದು ಅಸೂಯೆ ಇಟ್ಟಿರುವ ಆ ಪಾಪಿ ಇರುವ ಜಾಗಕ್ಕೆ ಮತ್ತೆ ಕಳಿಸುವುದೆ? ಇಲ್ಲಿ ರೊಟ್ಟಿ ಚಟ್ನಿ ಉಂಡರೂ ಚಿಂತೆಯಿಲ್ಲ. ನನ್ನ ಕಂದಮ್ಮಗಳು ನನ್ನ ಮುಂದೆ ನಗುನಗುತ್ತಾ ಇದ್ದರೆ ಸಾಕೋ. ನಾನಂತೂ ಅವರನ್ನು ಕಳಿಸುವುದಿಲ್ಲ."

ಪ್ರಕ್ಷುಬ್ಧತೆಯ ಪರಮಾನ್ನಕ್ಕಿಂತ ಪ್ರಶಾಂತತೆಯ ಮುದ್ರೆಯೇ ಸಾಕು ಎಂಬ ಭಾವನೆ ಮೂಡಿರಬೇಕು ಆಕೆಗೆ.

ಕೆಲಸಕ್ಕೆ ಸೇರಿಸುವಂತೆ ಬಲತ್ಕಾರಿಸಿದ್ದವಳು ವೆಂಕಮ್ಮ. ಅಣ್ಣನ ಆಜ್ಞೆಯಂತೆ ಮನಸ್ಸಿಲ್ಲದಿದ್ದರೂ ಹೋದವರು ಅವರಿಬ್ಬರು. ತಮ್ಮ ಸ್ವಭಾವಕ್ಕೆ ಅರಮನೆಯ ರಾಜಕೀಯ ಹಿಡಿಸುವುದಿಲ್ಲವೆಂದೂ, ತಮ್ಮನ್ನು ಪುನಃ ಆ ಕೆಲಸಕ್ಕೆ ಕಳಿಸಕೂಡ ದೆಂದೂ ಅವರು ಅಣ್ಣನಲ್ಲಿ ಪ್ರಾರ್ಥಿಸಿದರು.

"ಶ್ರೀ ವೆಂಕಟೇಶ ನಿಮ್ಮ ಮೇಲೆ ಹೆಚ್ಚು ಕರುಣೆಯಿಟ್ಟಿದ್ದಾನೆ. ಆದ್ದರಿಂದ ಕಿಂಚಿತ್ ಬಿಸಿಯ ಮೂಲಕ ನಿಮ್ಮ ಭಕ್ತಿಯ ಬೆಣ್ಣೆಯನ್ನು ತುಪ್ಪ ಮಾಡಿದ್ದಾನೆ. ಆಘ್ರಾತವನ್ನು ಸವಿದು ಉದ್ಧಾರವಾಗಿರಿ ಎಂಬ ನಿರ್ಣಯ ಅವನದು. ಇನ್ನು ನಿಮ್ಮನ್ನು ನಾನೆಂದೂ ಬಿಟ್ಟಿರುವುದಿಲ್ಲ. ನೀವಿದ್ದಲ್ಲಿ ನಾನು. ಯಾವಾಗಲೂ ಜೊತೆಯಾಗಿ ರೋಣ" ಎಂದು ಹೇಳಿ ಭಾಗಣ್ಣ ತನ್ನ ಇಬ್ಬರು ತಮ್ಮಂದಿರನ್ನು ಬಾಚಿ ತಬ್ಬಿಕೊಂಡ.

ತನ್ನ ಮೂರು ಮಕ್ಕಳು ಪರಸ್ಪರ ಅಪ್ಪಿಕೊಂಡಿರುವುದನ್ನು ಕಂಡು ತಾಯಿಯ ಕಣ್ಣಲ್ಲಿ ಆನಂದದ ನೀರು ತುಂಬಿ ಬಂದಿತ್ತು.

"ಭಗವಂತ ನಿಮ್ಮನ್ನು ಹೀಗಿಯೇ ಇಟ್ಟಿರಲಿ. ಅಣ್ಣನ ಮಾರ್ಗದಲ್ಲಿಯೇ ನೀವು ನಡೆಯಿರಿ. ಮೂರು ಜನ ಹೀಗೆಯೇ ಒಂದೇ ಮಾರ್ಗದಲ್ಲಿ ಕ್ರಮಿಸಿರಿ" ಮನಃ ಪೂರ್ತಿಯಾಗಿ ತಾಯಿ ಆಶೀರ್ವದಿಸಿದಳು.

ತಾಯಿಯ ಆಶೀರ್ವಾದ ಹುಸಿಯಾಗುವುದುಂಟೆ?

ಅಣ್ಣನ ಮಾರ್ಗದಲ್ಲಿಯೇ ನಡೆಯಲು ಸೀನ ಹಾಗೂ ದಾಸಣ್ಣ ದೀಕ್ಷಾ ಬದ್ಧರಾದರು.

ಅಣ್ಣ ವಿವಾಹವಾಗುವುದಿಲ್ಲ. ಆದರೆ ಇವರಿಬ್ಬರು?

ಭಾಗಣ್ಣ ನಡೆದ ಹಾದಿಯಲ್ಲಿಯೇ ಇವರಿಬ್ಬರೂ ನಡೆಯಲಿ ಎಂದು ತಾಯಿ ಹರಿಸಿದ್ದಳು

"ಒಂದು ಹೆಣ್ಣನ್ನು ಎಲ್ಲರೂ ಹಂಚಿಕೊಳ್ಳಿ" ಎಂದು ಮಹಾಭಾರತದಲ್ಲಿ ತಾಯಿ ಕುಂತಿಯು ತನ್ನ ಮಕ್ಕಳಿಗೆ ಹೇಳಿದ್ದಳು. ಅದು ತಪ್ಪೋ ಒಪ್ಪೋ ಅನುಸರಿಸಿ ಬಿಟ್ಟಿದ್ದರು ಪಾಂಡವರು.

ಈಗ ತಮ್ಮ ತಾಯಿ ವೆಂಕಮ್ಮ ಹೀಗೆ ಹೇಳುತ್ತಿದ್ದಾಳೆ. ವಿವಾಹವಾಗದ ಭಾಗಣ್ಣ.

ಅವನ ಮಾರ್ಗದಲ್ಲಿಯೇ ನಡೆಯಲು ತಾಯಿಯ ನಿರ್ದೇಶನ!

ಇಬ್ಬರು ಮಕ್ಕಳೂ ತಾಯಿಯ ಆಶೀರ್ವಾದವನ್ನು ಮೆಲುಕು ಹಾಕಿದರು.

ಕಿರಿಯ ಮಗ ರಂಗಣ್ಣ ಮಾತ್ರ ಆಗ ಹೊರಗೆ ಹೋಗಿದ್ದ. ಅದು ಅವನಿಗೆ ಅನ್ವಯವಾಗಲಿಕ್ಕಿಲ್ಲವೇನೊ!?

***

ರಂಗಣ್ಣನಿಗೆ ವಯಸ್ಸಾಗಿತ್ತು. ಏನೇನೋ ಕಾರಣಗಳಿಂದ ಅವನ ಉಪನಯನ ವಾಗಿರಲಿಲ್ಲ. ಸಂಕಾಪುರದಲ್ಲಿ ಹಿಂದೆ ನಿರ್ವಹಿಸಿದಂತೆ ಸಾಮೂಹಿಕ ಉಪನಯನ ಕಾರ್ಯಕ್ರಮ ಇಟ್ಟುಕೊಳ್ಳಲಾಯಿತು.

ಭಾಗಣ್ಣನ ಕಾರ್ಯಕ್ರಮ ನಿರ್ವಹಣೆಯೆಂದರೆ ಅದರಲ್ಲಿ ಅಷ್ಟೊಂದು ಅಚ್ಚುಕಟ್ಟು. ಯಾರೊಬ್ಬರಿಗೂ ಅವ್ಯವಸ್ಥೆಯೆನಿಸುವುದಿಲ್ಲ. ವಟುವಿನ ಪರವಾಗಿ ಎಷ್ಟು ಜನರಾದರೂ ಬರಬಹುದು. ಬಂದವರಿಗೆಲ್ಲಾ ಸೀರೆ, ಕುಪ್ಪಸ ಕಣ, ಪಂಚೆ ಕೈತುಂಬಾ ದಕ್ಷಿಣೆ.

ಉಪನಯನವಾದ ಕೂಡಲೇ ವಟುವನ್ನು ಕಳಿಸುವ ಅವಸರವಿಲ್ಲ. ಸಂಧ್ಯಾ ವಂದನಾದಿ ನಿತ್ಯ ಕರ್ಮಗಳ ನಿರ್ವಹಣೆಯನ್ನು ಕಲಿಸಲು ಪುರೋಹಿತರ ದೊಡ್ಡ ತಂಡವೇ ಸಂಕಾಪುರದಲ್ಲಿ ಬಿಡಾರ ಬಿಡುತ್ತಿತ್ತು. ಸಂಧ್ಯಾವಂದನೆ ಮಾಡುವಾಗ ಹೇಗೆ

ಕುಳಿತುಕೊಳ್ಳಬೇಕು ಪ್ರಾಣಾಯಾಮವನ್ನು ಮಾಡುವಾಗ ರೇಚಕವನ್ನು ಬಿಡುವುದು ಹೇಗೆ? ಪೂರಕವನ್ನು ಹೇಗೆ ತೆಗೆದುಕೊಳ್ಳಬೇಕು. ಕುಂಭಕದಲ್ಲಿ ಪ್ರಾಣವಾಯು ಏನೇನು ಮಾಡುತ್ತದೆ ಎಂದೆಲ್ಲಾ ಭಾಗಣ್ಣ ಪ್ರತಿ ವಟುವಿಗೂ ವಿವರಿಸಿ ಪ್ರತ್ಯಕ್ಷವಾಗಿ ಮಾಡಿ ತೋರುತ್ತಿದ್ದ. ಪ್ರತಿ ಮಂತ್ರದ ಅರ್ಥವನ್ನು ಬಿಡಿಸಿ ಹೇಳಿ ವಟುವಿಗೆ ಮನದಟ್ಟು ಮಾಡುತ್ತಿದ್ದ.

ಸುತ್ತುಮುತ್ತಲ ಜನಗಳು ಇಂಥ ಅವಕಾಶವನ್ನು ಸರಿಯಾಗಿಯೇ ಉಪಯೋಗಿಸಿಕೊಂಡರು. ಈ ಸಲದ ಕಾರ್ಯಕ್ರಮಕ್ಕೆ ಹೆಚ್ಚು ವಟುಗಳ ಹೆಸರು ನೊಂದಣಿ ಆಯಿತು.

ಈ ಕಾರ್ಯಕ್ರಮದ ಬಗ್ಗೆ ಕಿವಿಯಿಂದ ಕಿವಿಗೆ ಹರಡಿ ಊರಿಂದ ಊರಿಗೆ ವ್ಯಾಪಿಸಿ ಗ್ವಾಲರ ಮಹಾರಾಜರಿಗೂ ವಿಷಯ ತಲುಪಿತು. ಭಾಗಣ್ಣನ ತಮ್ಮಂದಿರು ರಾಜಾಶ್ರಯದ ಹುದ್ದೆಯನ್ನು ಬಿಟ್ಟು ಹೋದ ಸಂಗತಿ ಮಹಾರಾಜರ ಕಿವಿಗೆ ಬೀಳುವುದು ಸ್ವಲ್ಪ ತಡವಾಗಿತ್ತು. ನಡೆದ ಸಂಗತಿಗಳನ್ನು ಕೇಳಿ ಬಹಳ ವ್ಯಥೆಪಟ್ಟರು. ಭಾಗಣ್ಣನಲ್ಲಿ ತಾವೇ ಹೋಗಿ ಕ್ಷಮೆಯಾಚಿಸಿ ಅವರ ತಮ್ಮಂದಿರನ್ನು ಪುನಃ ವಾಪಸ್ಸು ಕರೆತರಬೇಕೆಂದು ಅವರು ಯೋಚಿಸುತ್ತಿದ್ದಂತೆಯೇ ಸಂಕಾಪುರ ಕಾರ್ಯಕ್ರಮ ಅವರಿಗೆ ತಿಳಿದು ಸಮಾರಂಭಕ್ಕೆ ಬರುವುದಾಗಿ ಅವರೇ ಹೇಳಿ ಕಳಿಸಿದರು.

ಭಾಗಣ್ಣನ ಕಡೆಯ ತಮ್ಮ ರಂಗನ ಉಪನಯನ. ಜೊತೆಗೆ ಹತ್ತಾರು ಬಾಲಕರಿಗೂ ಇದೇ ಸಮಯದಲ್ಲಿ ಉಪನಯನ, ಭಾಗಣ್ಣನ ಮೇಲ್ವಿಚಾರಣೆ, ಮಹಾರಾಜರು ಮಹಾರಾಣಿಯವರೊಂದಿಗೆ ಆಗಮನ. ಕೇಳಬೇಕೇ ಸಂಕಾಪುರದ ವೈಭವವನ್ನು! ಎಲ್ಲೆಲ್ಲಿಯೂ ವೇದ ಮಂತ್ರ ಘೋಷಗಳು. ಹನುಮಂತರಾಯನ ಗುಡಿಯ ಸುತ್ತ ಹೋಮದ ಧೂಮ. ಬ್ರಾಹ್ಮಣ ಮುತ್ತೈದೆಯರ ಸಂಭ್ರಮವೋ ಸಂಭ್ರಮ.

ಮುಖ್ಯ ಸಮಾರಂಭದ ನಂತರ ರಾಜಧಾನಿಗೆ ಮರಳುವ ಮೊದಲು ರಾಜರಾಮಭೂಪಲರು ಭಾಗಣ್ಣನನ್ನು ಪ್ರತ್ಯೇಕವಾಗಿ ಭೇಟಿ ಮಾಡಿ ರಾಜ ಧಾನಿಯಲ್ಲಿ ನಡೆದ ಅಚಾತುರ್ಯಕ್ಕೆ ಕ್ಷಮೆ ಕೇಳಿ ಪುನಃ ಸೀನಪ್ಪ ದಾಸಪ್ಪನವರನ್ನು ರಾಜಧಾನಿಗೆ ಕಳಿಸುವಂತೆ ಪ್ರಾರ್ಥಿಸಿದರು.

"ತಮ್ಮಂದಿರಿಗೆ ರಾಜಧಾನಿಯಲ್ಲಿ ನಡೆದ ಅನ್ಯಾಯದಲ್ಲಿ ತಮ್ಮದೇನೂ ತಪ್ಪಿಲ್ಲವೆಂದು ನನಗೆ ಚನ್ನಾಗಿ ಗೊತ್ತು ಮಹಾರಾಜರೆ. ನಾನು ಹೇಳುವ

ಭವಿಷ್ಯದಲ್ಲಿ ತಮಗೆ ಸಂಪೂರ್ಣ ನಂಬಿಕೆಯಿದೆಯಷ್ಟೆ? ನನ್ನ ತಮ್ಮಂದಿರ ಜಾತಕದ ಮೇಲೆ ಅವರಿಗೆ ರಾಜಾಶ್ರಯದ ಹುದ್ದೆಗಳು ಶೋಭಿಸುವುದಿಲ್ಲ. ಅವರಿಗೆ ಆಧ್ಯಾತ್ಮದಲ್ಲಿ ನಿಷ್ಠೆ. ಆ ಕ್ಷೇತ್ರದಲ್ಲಿಯೇ ಅವರು ಶ್ರಮಿಸುವುದು ಶ್ರೀಹರಿಯ ಇಚ್ಛೆ. ಹಾಗಿರುವುದರಿಂದಲೇ ಅವರಿಗೆ ಹಾಗೆ ಆಯಿತು. ನಾವು ನಿಮ್ಮ ರಾಜ್ಯದ ಉತ್ತನೂರಿನಲ್ಲಿಯೇ ಇದ್ದು ನಿಮ್ಮ ಕ್ಷೇಮಕ್ಕೆ ಪ್ರಾರ್ಥಿಸುತ್ತೇವೆ. ದಯವಿಟ್ಟು ನಮ್ಮನ್ನು ಹೆಚ್ಚು ಒತ್ತಾಯಿಸಬೇಡಿ" ಎಂಬ ಭಾಗಣ್ಣನ ಪ್ರಾರ್ಥನೆಗೆ ಮಹಾರಾಜರು ಒಪ್ಪದೆ ವಿಧಿಯಿರಲಿಲ್ಲ.

ಮಹಾರಾಜರಿಗೆ ಯೋಚನೆಗಿಟ್ಟುಕೊಂಡಿತು. ಕೃತಜ್ಞತಾರೂಪವಾಗಿ ಎಷ್ಟೇ ಹಣ ಕೊಟ್ಟರೂ ಭಾಗಣ್ಣನ ಬಳಿ ಅದು ಉಳಿಯುವುದಿಲ್ಲ. ಸಾರ್ವಜನಿಕರಿಗೆ ಅದನ್ನು ವ್ಯಯಿಸಿಬಿಡುತ್ತಾರೆ. ಅದಕ್ಕೆಂದೇ ರಾಜಾಶ್ರಯದಲ್ಲಿ ತಮ್ಮಂದಿರಿಗೆ ದೊಡ್ಡ ಹುದ್ದೆಗಳನ್ನು ನೀಡಿದ್ದು. ಅದರ ಕತೆ ಹೀಗಾಗಿ ಹೋಯಿತು. ಭಾಗಣ್ಣನಂಥವರಿಗೆ ಏನು ನೀಡಿದರೂ ಶ್ರೀ ಹರಿ ಸಂತೋಷಿಸುತ್ತಾನೆ. ಹಾಗಾದರೆ ಏನು ಮಾಡಬೇಕು? ಬಹಳ ಯೋಚಿಸಿದ ಮಹಾರಾಜರು ಕಡೆಗೆ ಭಾಗಣ್ಣನೊಂದಿಗೆ ಹೀಗೆ ಪ್ರಾರ್ಥಿಸಿದರು.

"ಸಂಕಾಪುರದಲ್ಲಿ ನಿಮ್ಮ ತಾಯಿಯವರು ಹಿಂದೊಮ್ಮೆ ವ್ಯವಸಾಯ ಮಾಡಿಸಿದ್ದರೆಂದು ನಾವು ಕೇಳಿದ್ದೇವೆ. ಆಗ ತಮಗೆ ಅದರ ಫಲ ದಕ್ಕಲಿಲ್ಲವಂತೆ. ಮುಂದೆ ಹಾಗಾಗದಂತೆ ನಾವು ನೋಡಿಕೊಳ್ಳುತ್ತೇವೆ. ಇಡೀ ಗ್ರಾಮವನ್ನು ನಿಮಗೆ ಜಹಗೀರು ಹಾಕಿಕೊಡುತ್ತೇವೆ. ತಾವು ಅದನ್ನು ಬೇರೆಯವರಿಗೆ ಕೊಡದೆ ವಂಶ ಪಾರಂಪರ್ಯವಾಗಿ ಅನುಭವಿಸಿಕೊಂಡು ಹೋಗಬೇಕು."

"ನಿಮ್ಮ ಅಭಿಮಾನ ದೊಡ್ಡದು ಭೂಪಾಲರೆ. ಆದರೆ ಜಹಗೀರಿಯ ನೆವದಿಂದ ನಮ್ಮನ್ನು ಇಲ್ಲಿ ಕಟ್ಟಿ ಹಾಕುವ ವ್ಯವಸ್ಥೆ ಮಾಡಬೇಡಿ. ಹೆಚ್ಚಿನ ಐಶ್ವರ್ಯ ಮನುಷ್ಯನನ್ನು ಕ್ರಿಯಾಹೀನನನ್ನಾಗಿ ಮಾಡುತ್ತದೆ. ಶ್ರಮವಿಲ್ಲದೆ ಬರುವ ಸಂಪತ್ತು ದುರ್‌ವ್ಯವಹಾರಗಳಿಗೆ ಪ್ರೇರಣೆಯಿತ್ತು ನಾನಾ ಆಪತ್ತುಗಳಿಗೆ ಕಾರಣವಾಗುತ್ತದೆ. ಜನರನ್ನು ದುಡಿಯುವಂತೆ ಪ್ರೇರಿಸುವುದು ರಾಜಧರ್ಮ. ಅದಕ್ಕೆ ಬರುವ ಅಡ್ಡಿಗಳನ್ನು ಪರಿಹರಿಸುವುದು ರಾಜನೀತಿ. ಆದ್ದರಿಂದ ಜಹಗೀರು ನೀಡುವ ಯೋಚನೆಯನ್ನು ತಾವು ಬಿಟ್ಟು ಬಿಡಿ" ಭಾಗಣ್ಣ ವಿನಂತಿಸಿದ.

"ನಿಮ್ಮ ವೃತ್ತಿ ಪರಿಣತತ್ವದಿಂದ ನಮ್ಮ ಕುಟುಂಬದ ದೊಡ್ಡ ಸಮಸ್ಯೆ ಪರಿಹಾರವಾಯಿತು. ನಿಮ್ಮ ವಿದ್ಯೆಯಿಂದ ನಾವು ಉದ್ಧಾರವಾದೆವು. ನಿಮ್ಮಿಂದ

ಪಡೆದ ಉಪಕಾರಕ್ಕೆ ಪ್ರತಿಯಾಗಿ ಏನನ್ನೂ ನೀಡದಿದ್ದರೆ ಅದು ರಾಜಧರ್ಮ ಎನಿಸುತ್ತದೆಯೆ? ದುಡಿಮೆಗೆ ತಕ್ಕ ಫಲ ಬರುವಂತೆ ಮಾಡುವುದು ದಕ್ಷ ಆಡಳಿತದ ದ್ಯೋತಕವಲ್ಲವೆ? ನಮ್ಮನ್ನು ಉತ್ತಮ ಆಡಳಿತಗಾರರಾಗಿ ಮಾಡಬೇಕೆಂಬ ಅಪೇಕ್ಷೆ ನಿಮಗೆ ಇದ್ದರೆ ನಿಮ್ಮಿಂದಾದ ದೊಡ್ಡ ಸಹಾಯಕ್ಕೆ ಸ್ವಲ್ಪವಾದರೂ ಪ್ರತಿಫಲ ಪಡೆಯಲೇಬೇಕು"

ಮಹಾರಾಜರ ವಿನಂತಿಯನ್ನು ನಿರಾಕರಿಸದಾದ ಭಾಗಣ್ಣ. ಕಡೆಗೆ ಪರಸ್ಪರ ರಾಜೀ ಒಪ್ಪಂದದಂತೆ ಸ್ವಲ್ಪ ಜಮೀನನ್ನು ಮಾತ್ರ ಪಡೆಯಲು ಒಪ್ಪಿಕೊಂಡ. ಆದರೆ ಮಹಾರಾಜರು ಜೊತೆಗೆ ಒಂದು ಷರತ್ತನ್ನು ಸೇರಿಸಿದರು. ಈ ಜಮೀನನ್ನು ಬೇರೆಯವರಿಗೆ ನೀಡಬಾರದು, ತಾವು ತಮ್ಮ ವಂಶದವರು ಅನುಭವಿಸಿಕೊಂಡು ಹೋಗಬೇಕು.

"ನಮ್ಮ ವಂಶದವರೇ, ಈ ಜಮೀನನನ್ನು ಅನುಭವಿಸಬೇಕೆಂದು ತಮ್ಮ ಅಪೇಕ್ಷೆಯಲ್ಲವೆ?" ಭಾಗಣ್ಣ ಮತ್ತೆ ಪ್ರಶ್ನಿಸಿದ.

"ಹೌದು"

"ಒಪ್ಪಿಕೊಂಡೆ ಮಹಾರಾಜರೆ, ನನ್ನ ಕಡೆಯ ತಮ್ಮನ ಉಪನಯನ ಕಾರ್ಯಕ್ರಮಕ್ಕೆ ಬಂದಾಗ ಈ ಹೊಲಗಳನ್ನು ನೀಡಿದ್ದೀರಿ. ಆದ್ದರಿಂದ ಅವನು, ಅವನ ಸಂತಾನ ಭೋಗಿಸಿಕೊಂಡು ಇರುವಂತೆ ಮಾಡುತ್ತೇನೆ. ನನ್ನ ದೊಡ್ಡ ಹೊಣೆಯನ್ನು ತಾವು ಪರಿಹರಿಸಿದ್ದೀರಿ" ಎಂದು ಭಾಗಣ್ಣ ನುಡಿದಾಗ ಮಹಾರಾಜರಿಗೆ ಕೃತಜ್ಞತೆಯ ಭಾರ ಸ್ವಲ್ಪ ಕಡಿಮೆಯಾದಂಥ ಭಾವನೆ. ಹೋಗುವ ಮೊದಲು ತಟ್ಟೆಯ ತುಂಬಾ ಚಿನ್ನದ ನಾಣ್ಯಗಳನ್ನು ಮಹಾರಾಜರು ಭಾಗಣ್ಣನಿಗೆ ನೀಡಿದರು. ಅವರು ಅತ್ತ ಹೋದೊಡನೆ ಶ್ಯಾನಭೋಗ ಗುಂಡಪ್ಪನವರನ್ನು ಭಾಗಣ್ಣ ಕರೆದು ವಿನಂತಿಸಿದ. "ಆ ದಿನ ನನಗೆ ಉಪನಯನ ಮಾಡಿಸಿ ಗಾಯತ್ರಿ ಮಂತ್ರದ ಮಹತ್ ತಿಳಿಯುವುದಕ್ಕೆ ಕಾರಣರಾದಿರಿ. ಆ ದಿನ ವಟುವಾಗಿ ಭಿಕ್ಷೆ ಸ್ವೀಕರಿಸಿದ್ದೆ. ಈಗ ಗೃಹಸ್ಥನಾಗುವ ವಯಸ್ಸಾಗಿದೆ ನನಗೆ. ಕೈ ತುಂಬಾ ದುಡಿಯುತ್ತಿದ್ದೇನೆ. ತಾವು ಇದನ್ನು ಸ್ವೀಕರಿಸಿ ನನ್ನನ್ನು ಉದ್ಧರಿಸಬೇಕು" ಎಂದು ಭಾಗಣ್ಣ ಪ್ರಾರ್ಥಿಸಿ ಅದೆಲ್ಲವನ್ನೂ ಅವರಿಗೆ ನೀಡಿಬಿಟ್ಟ.

ಎಷ್ಟೋ ಹಣವನ್ನು ಸಂಪಾದಿಸಿ ಭಾಗಣ್ಣ ಸಂಕಾಪುರಕ್ಕೆ ತಂದಿದ್ದ. ಇಲ್ಲಿಗೆ ಬಂದ ಮೇಲೂ ಮಹಾರಾಜರು ಸಾಕಷ್ಟು ಹಣ ನೀಡಿದ್ದರು.

ಎಲ್ಲವನ್ನು ವೆಚ್ಚಿಸಿ ಭಾಗಣ್ಣ ತನ್ನ ಕುಟುಂಬದೊಂದಿಗೆ ಬರಿಗೈಯಿಂದಲೇ ಉತ್ತನೂರಿಗೆ ಹಿಂದಿರುಗಿದ.

***

ವೆಂಕಮ್ಮನ ಅದೃಷ್ಟ ದೊಡ್ಡದು. ಎಲ್ಲ ಮಕ್ಕಳು ಕಣ್ಣ ಮುಂದೆಯೆ ಇದ್ದಾರೆ. ಪ್ರತಿನಿತ್ಯ ಶ್ರೀ ವೆಂಕಟೇಶನಿಗೆ ಸಮರ್ಪಿಸಿದ ನೇವೇದ್ಯ ಸಿಕ್ಕುತ್ತಿದೆ. ಮನೆಯಲ್ಲಿ ಯಾವಾಗಲೂ ಅತಿಥಿ ಅಭ್ಯಾಗತರು. ಆಳುಕಾಳುಗಳು ತುಂಬಿದ್ದಾರೆ. ಮಗ ಕೈತುಂಬಾ ಸಂಪಾದಿಸುತ್ತಿದ್ದಾನೆ. ತಮ್ಮಂದಿರನ್ನು ಮಕ್ಕಳಂತೆ ಅತಿ ಅಕ್ಕರತೆಯಿಂದ ಭಾಗಣ್ಣ ನೋಡಿಕೊಳ್ಳುತ್ತಿದ್ದಾನೆ.

ತಾನು ಮದುವೆ ಆಗುವುದಿಲ್ಲವೆಂದು ಭಾಗಣ್ಣ ಹೇಳಿಬಿಟ್ಟಿದ್ದ. ಬೇರೆ ಮಕ್ಕಳ ವಿವಾಹದ ವಿಷಯ ಪ್ರಸ್ತಾಪಿಸಲು ಹಲವಾರು ಸಲ ಪ್ರಯತ್ನಿಸಿದ್ದಳು.

ಆದರೆ ಭಾಗಣ್ಣ ನಡೆದ ಬ್ರಹ್ಮಚರ್ಯದ ಹಾದಿಯಲ್ಲಿಯೇ ಇಬ್ಬರು ತಮ್ಮಂದಿರು ನಡೆಯಲು ನಿರ್ಧರಿಸಿದ್ದಾರೆಂದು ವೆಂಕಮ್ಮನಿಗೆ ತಿಳಿಯಲಿಲ್ಲ.

ಗದ್ವಾಲದಿಂದ ಅವರು ಕೆಲಸಬಿಟ್ಟು ಬಂದಿದ್ದಾಗ ಅಣ್ಣನ ಹಾದಿಯಲ್ಲಿಯೇ ನಡೆಯಲು ಹೇಳಿದ್ದು - ಆ ಬಗ್ಗೆ ಆ ಇಬ್ಬರು ಮಕ್ಕಳು ಭಾಗಣ್ಣನ ಹಾದಿಯಲ್ಲಿಯೇ ಅಂದರೆ ಬ್ರಹ್ಮಾಚಾರಿಗಳಾಗಿಯೇ ಮುಂದುವರೆಯಲು ಸಂಕಲ್ಪಿಸಿದ್ದು ಆಕೆಗೆ ಹೇಗೆ ತಿಳಿಯಬೇಕು? ಅದನ್ನು ಸ್ಪಷ್ಟವಾಗಿ ತಿಳಿಯುವಂಥ ಸನ್ನಿವೇಶಗಳು ಆಕೆಗೆ ಬರಲೇ ಇಲ್ಲ.

ಒಮ್ಮೆ ಆಕೆಗೆ ಇದ್ದಕ್ಕಿದ್ದಂತೆ ವಿಪರೀತ ಜ್ವರ ಬಂದಿತು. ದಾಸಣ್ಣ ಸೀನಣ್ಣರು ಏನೇನೊ, ಔಷಧಿಗಳನ್ನು ತಂದು ಕುಡಿಸಿದರು. ಔಷಧಿಗಳೂ ಹೆಚ್ಚಿದವು. ರೋಗವೂ ಉಲ್ಬಣಗೊಂಡಿತು. ಭಾಗಣ್ಣ ತಮ್ಮಂದಿರಿಗೆ ಹೇಳಿದ "ವೈದ್ಯರನ್ನು ಕರೆತರುವುದು. ಔಷಧಿ ಕುಡಿಸುವುದು ನಿಮ್ಮ ಕೆಲಸ ನೀವು ಮಾಡಿ. ಆದರೆ ನಾನು ಮಾತ್ರ ಅಮ್ಮನನ್ನು ಒಂದು ಕ್ಷಣವೂ ಬಿಟ್ಟಿರುವುದಿಲ್ಲ. ಕಡೆಯ ಕಾಲದಲ್ಲಿ ಆಕೆ ಸಂತೋಷದಿಂದ ಹೋಗುವಂತೆ ನಾವೆಲ್ಲ ಪ್ರಯತ್ನಿಸೋಣ" ಅಣ್ಣನ ಮಾತು ಕೇಳಿ ವಿಷಯ ಗ್ರಹಿಸಿದ ತಮ್ಮಂದಿರು ಭೋರೆಂದು ಅಳತೊಡಗಿದರು.

"ಅಳಬೇಡಿ ನೀವು. ಪುಷ್ಪವೊಂದು ಸಂಪೂರ್ಣ ಅರಳಿ, ಘಮಘಮಿಸಿ, ಪರಮಾತ್ಮನ ಪೂಜೆಗೆ ಉಪಯೋಗವಾಗಿ, ನೈರ್ಮಲ್ಯವಾದ ಮೇಲೆ ಅದಕ್ಕೆ

ಇನ್ನೇನು ಉಳಿಯುತ್ತದೆ? ಎಲ್ಲರಿಗೂ ಶಿರೋಧಾರ್ಯವಷ್ಟೆ ಅದರ ಕೆಲಸ. ನಮ್ಮಮ್ಮ ನಮ್ಮೆಲ್ಲರನ್ನು ಬಹಳ ಕಷ್ಟದಿಂದ ಸಾಕಿದಳು. ಆಕೆಯ ಪುಣ್ಯಪ್ರಭಾವ. ನನಗೆ ಬೇಗ ಸಂಪಾದನೆ ಪ್ರಾರಂಭವಾಯಿತು. ಆಕೆಯ ಆಶೀರ್ವಾದದ ಬಲದಿಂದ ನಾವೆಲ್ಲಾ ಸುಖವಾಗಿದ್ದೇವೆ. ಆಕೆಗೂ ಒಳ್ಳೆಯ ಕಾಲ ಬಂದಿದೆ. ಭಿಕ್ಷೆ ಬೇಡಿದವು ಆಕೆಯ ಕೈಗಳು. ಅವೇ ಕೈಗಳು ನೀಡಿ ನೀಡಿ ದಣಿಯುವಷ್ಟು ದಾನ ಮಾಡಿದಳು. ಸಾವಿರಾರು ಜನರ ಸಂತರ್ಪಣೆ ಆಕೆಯಿಂದಲೇ ನೆರವೇರಿತು. ನಾವೆಲ್ಲರೂ ಮುಂದೆ ಇರುವಾಗಲೇ ಆಕೆ ಕಣ್ಣು ಮುಚ್ಚುತ್ತಿದ್ದಾಳೆ. ಒಂದು ಜೀವದ ಪೂರ್ಣ ದರ್ಶನಕ್ಕೆ ಇದಕ್ಕಿಂತ ಇನ್ನೇನು ಬೇಕು?" ಭಾಗಣ್ಣ ಹೇಳಿ ಸುತ್ತುಮುತ್ತಲ ಗ್ರಾಮಗಳಿಂದ ಬ್ರಾಹ್ಮಣರನ್ನು ಕರೆತರುವಂತೆ ಆಳುಗಳ ಮೂಲಕ ವ್ಯವಸ್ಥೆ ಮಾಡಿದ.

ನೂರಾರು ಬ್ರಾಹ್ಮಣರಿಗೆ ತಾಯಿಯ ಕೈಯಿಂದಲೇ ನಾನಾ ಧರ್ಮಗಳನ್ನು ಮಾಡಿಸಿದ. ಜ್ವರದ ಏರಿನಲ್ಲಿಯೇ ಆಕೆ ಭಾಗಣ್ಣನ ಸೂಚನೆಯಂತೆ ವಿವಿಧ ಧಾರ್ಮಿಕ ಕರ್ಮಗಳನ್ನೂ ನಿರ್ವಹಿಸಿದಳು.

ಕಡೆಯ ಮಗ ರಂಗನನ್ನು ಕರೆದು ಆಕೆ ಹೇಳಿದಳು. ಧ್ವನಿ ಪೂರ್ತಿ ಕ್ಷೀಣಿಸಿ ಹೋಗಿತ್ತು.

"ನೀನಿನ್ನೂ ಚಿಕ್ಕವನು. ಅಣ್ಣನ ಮಾತನ್ನು ಎಂದು ಮೀರಬೇಡ. ನಿನ್ನ ಅಪೇಕ್ಷೆ ಏನೇ ಇರಲಿ; ಅಣ್ಣನ ಆಜ್ಞೆಯನ್ನು ತಪ್ಪದೆ ಪಾಲಿಸು. ನಿಮ್ಮ ಅಣ್ಣ ಭಾಗಣ್ಣ ನಮ್ಮ ವಂಶದ ಶ್ರೇಷ್ಠ ಪುತ್ರ. ಅವನಿಂದ ನಾನೆಲ್ಲವನ್ನೂ ಪಡೆದೆ. ನೀನೂ ಅವನಿಂದ ಎಲ್ಲವನ್ನೂ ಪಡೆಯುತ್ತಿ." ಹೇಳುಹೇಳುತ್ತಿದ್ದಂತೆ ಆಕೆಯ ಧ್ವನಿ ಬಿದ್ದು ಹೋಯಿತು. ಪಕ್ಕದಲ್ಲಿದ್ದ ಭಾಗಣ್ಣ ತಾಯಿಯ ತಲೆಯನ್ನು ತನ್ನ ತೊಡೆಯ ಮೇಲೆ ಇಟ್ಟುಕೊಂಡು ಶ್ರೀವೆಂಕಟೇಶನ ತೀರ್ಥವನ್ನು ತಂದು ಬಾಯಿಯಲ್ಲಿ ಹಾಕುವಂತೆ ತಮ್ಮಂದಿರಿಗೆ ಸೂಚನೆ ಕೊಟ್ಟ. ಅವರೆಲ್ಲರೂ ಹಾಕಿದ ಮೇಲೆ ತಾನು ಮೂರು ಬಾರಿ ತೀರ್ಥವನ್ನು ತಾಯಿಯ ಬಾಯಿಯಲ್ಲಿ ಹಾಕಿದ.

ಎರಡು ಬಾರಿ ಗುಟುಕರಿಸಿದಳು. ಮೂರನೆಯ ಬಾರಿ ತೀರ್ಥ ಹೊರಬಂದಿತು.

ಆಕೆಯ ಜೀವನ ಯಾತ್ರೆ ಮುಗಿದು ಹೋಯಿತು.

***

ತಾಯಿಯ ಅಗಲಿಕೆಯಿಂದ ನೊಂದಿದ್ದ ತನ್ನ ಮೂವರು ತಮ್ಮಂದಿರಿಗೆ ಭಾಗಣ್ಣ ಬೇಕಾದಷ್ಟು ಸಾಂತ್ವನ ನೀಡುತ್ತಿದ್ದ. ಮುಗುಳ್ನಗೆಯಿಂದ ಇರುವಂತೆ ಆತ ಕಾಣಿಸಿಕೊಳ್ಳುತ್ತಿದ್ದರೂ ಆತನ ಹೃದಯದಲ್ಲಿ ಎದ್ದಿದ್ದ ಬೇಗುದಿಯನ್ನು ಪರಮಾತ್ಮನೊಬ್ಬನೇ ಬಲ್ಲ.

ಶ್ರೀವೆಂಕಟೇಶನ ಗುಡಿಯಲ್ಲಿ ಆತ ಏಕಾಂಗಿಯಾಗಿ ಭಜನೆ ಮಾಡುತ್ತಾ ಕುಳಿತುಕೊಳ್ಳತೊಡಗಿದ.

ತಾಯಿಯ ಆನಂದಕ್ಕಾಗಿ, ಆತ ದುಡಿಯಲು ನಿಂತು ಕೈತುಂಬಾ ದುಡಿಯುತ್ತಿದ್ದ.

ಪರಮಾತ್ಮನ ರೂಪವನ್ನು ಎಲ್ಲೆಲ್ಲೂ ಕಾಣಲು ಪರಿ ತಪಿಸಿ ಆಧ್ಯಾತ್ಮದ ಉನ್ಮಾದಕ್ಕೆ ಹಿಂದೊಮ್ಮೆ ಏರಿಬಿಟ್ಟಿದ್ದ.

ತಾಯಿಯ ತೃಪ್ತಿಗಾಗಿ ಪುನಃ ಹಿಂದಕ್ಕೆ ಬಂದು ವ್ಯವಹಾರದಲ್ಲಿ ನಿರತನಾಗಿದ್ದ.

ಈಗ ಏತಕ್ಕಾಗಿ ವ್ಯವಹಾರದಲ್ಲಿ ನಿರತನಾಗಬೇಕು? ತಮ್ಮಂದಿರಿಗೆ ಬೇಕಾದಷ್ಟು ಆಸ್ತಿ ಸಂಕಾಪುರದಲ್ಲಿದೆ. ಸೀನ ಹಾಗೂ ದಾಸನನ್ನು ಜನರು ಈಗ ಗೌರವಿಸಿ ಸೀನಪ್ಪನವರು ದಾಸಪ್ಪನವರು ಎಂದು ಸಂಬೋಧಿಸತೊಡಗಿದ್ದಾರೆ. ರಂಗನಿಗೂ ಭವಿಷ್ಯದಲ್ಲಿ ಭಯವಿಲ್ಲ.

ಹಿಂದೆ ಪ್ರಯತ್ನ ಮಾಡಿ ಅರ್ಧಕ್ಕೆ ನಿಲ್ಲಿಸಿ ಬಿಟ್ಟಿದ್ದ ಪರಮಾತ್ಮನನ್ನು ಕಾಣುವ ಬಯಕೆಯತ್ತ ಈಗೇಕೆ ಸಾಗಬಾರದು?

ಪರಮಾತ್ಮನನ್ನು ಇಡೀ ಬ್ರಹ್ಮಾಂಡದಲ್ಲಿಯೂ, ಒಳಗಿನ ಪಿಂಡಾಂಡದಲ್ಲಿಯೂ ಕಾಣುವ ಪ್ರಯತ್ನ ಏಕೆ ಮುಂದುವರಿಸಬಾರದು?

ಪರಮಾತ್ಮನ ಪರಿಯನ್ನು ಕಾಣುವುದಕ್ಕೆ ಗುರುವಿನ ಮಾರ್ಗದರ್ಶನ ಬೇಕು. ಸ್ವರೂಪಸ್ವಾಮಿಯ ದರ್ಶನ ಮಾಡಿಸುವ ಗುರು ಒಂದು ಸಾವಿರದ ಹದಿಮೂರು ಉತ್ತಮ ಜನ್ಮಗಳ ಸಾಧನೆಯ ನಂತರ ದೊರೆಯುತ್ತಾನೆಂದು ಶಾಸ್ತ್ರ ಗ್ರಂಥಗಳು ಹೇಳುತ್ತಿವೆ.

ಈ ಜನ್ಮದಲ್ಲಿ ತನಗೆ ಬಿಂಬ ಮೂರುತಿಯ ದರ್ಶನ ಮಾಡಿಸುವ ಗುರು ಸಿಕ್ಕಲಿಕ್ಕಿಲ್ಲವೇನೋ! ಆದರೂ ಅಂಥ ಗುರುವನ್ನು ದೊರಕಿಸುವಂತೆ ಪರಮಾತ್ಮನಲ್ಲಿ ಪ್ರಾರ್ಥಿಸದೆ ಮತ್ತೆಲ್ಲಿ ಮೊರೆ ಹೋಗಬೇಕು?

ಭಾಗಣ್ಣ ಶ್ರೀವೆಂಕಟೇಶನ ಬಳಿ ಕುಣಿಯುತ್ತಾ ಕುಣಿಯುತ್ತಾ ನಿಂತು ಬಿಡುತ್ತಿದ್ದ. ಅಣ್ಣನಿಗೆ ಅದರಿಂದ ಒಂದು ರೀತಿಯ ತೃಪ್ತಿ ದೊರೆಯುತ್ತಿದೆಯೆಂದು ತಿಳಿದ

ತಮ್ಮಂದಿರು ಜನರು ಒಳಗೆ ಹೋಗದಂತೆ ಏಕಾಂತ ವೇಳೆಯಲ್ಲಿ ದೇವಸ್ಥಾನದ ಬಾಗಿಲಿಗೆ ಬೀಗ ಹಾಕಿಕೊಂಡು ಹೋಗುತ್ತಿದ್ದರು.

ಭಾಗಣ್ಣನಿಗೆ ಶ್ರೀ ವೆಂಕಟೇಶ ನಗುತ್ತಾ ನಿಂತಂತೆ ಕಾಣುತ್ತಿತ್ತು. ಒಮ್ಮೊಮ್ಮೆ ಶ್ರಿ ಕೃಷ್ಣ ರೂಪದಲ್ಲಿ ಕಾಣಿಸಿ ಕೊಳ್ಳುತ್ತಿದ್ದ. ವೆಂಕಟೇಶನೇ ಹೌದು; ಆತನೇ ಶ್ರೀ ಕೃಷ್ಣನೂ ಹೌದು. ಆತನ ಸ್ತುತಿಗೆ ಅನೇಕ ಶಬ್ದಗಳು ಪುಂಖಾನುಪುಂಖವಾಗಿ ಬರತೊಡಗಿದವು.

ಭಜನೆ ಮಾಡುತ್ತಾ ಮಾಡುತ್ತಾ ಕುಣಿಯುತ್ತಾ ಕುಣಿಯುತ್ತಾ ಭಾಗಣ್ಣ ನಾನಾ ರೀತಿಯ ದೇವಸ್ತುತಿಗಳನ್ನು ಹಾಡುತ್ತಿದ್ದ. ಅವೆಲ್ಲವನ್ನೂ ಶ್ರೀವೆಂಕಟ ಹಾಗೂ ಶ್ರೀ ಕೃಷ್ಣರೂಪಕ್ಕೂ ಸಮರ್ಪಿಸುವ ಅಪೇಕ್ಷೆ ಅವನಿಗೆ. 'ವೆಂಕಟ ಕೃಷ್ಣ' ಅಂಕಿತದಲ್ಲಿ ನಾನಾ ಪದಗಳು ಅವನಿಂದ ಹಾಡಲ್ಪಟ್ಟವು.

ಆ ಹಾಡುಗಳನ್ನು ಕೇಳಲು ತಮ್ಮಂದಿರಿಗೆ ಅಪೇಕ್ಷೆ. ಆದರೆ ಅಣ್ಣನ ಏಕಾಗ್ರತೆಗೆ ಅದರಿಂದ ಅಡ್ಡಿಯಾದೀತೆಂಬ ಹೆದರಿಕೆ. ಭಾಗಣ್ಣ ಹಾಡುತ್ತಿದ್ದಾಗ ಆ ಹಾಡುಗಳ ಮೋಹಕತೆ ಅವರ ಮನಸ್ಸನ್ನು ಸೆರೆಹಿಡಿಯುತ್ತಿದ್ದವು. ಬಾಗಿಲ ಹೊರಗೇ ಕುಳಿತು ಸೀನಣ್ಣ ಹಾಗೂ ದಾಸಣ್ಣರು ಕೆಲವುಗಳನ್ನು ಬರೆದುಕೊಂಡರು.

ಒಮ್ಮೆ ಭಾಗಣ್ಣ ಹಾಡುತ್ತಿದ್ದ. ಏಕಾಂತಪೂಜೆಯಲ್ಲಿ ಕಾಲಿಗೆ ಗೆಜ್ಜೆ ಕಟ್ಟುವ ಅಭ್ಯಾಸವಿರಲಿಲ್ಲ. ಆದರೆ ಗುಡಿಯ ಒಳಗಿನಿಂದ ಗೆಜ್ಜೆಗಳ ಸಪ್ಪಳ ಕೇಳತೊಡಗಿದವು.

'ವೆಂಕಟಕೃಷ್ಣಾ'

ಭಾಗಣ್ಣ ಕರೆಯುತ್ತಿದ್ದ. ಆ ಕರೆಯುವಿಕೆಯಲ್ಲಿ ಒಂದು ರಾಗವಿತ್ತು. ಆ ರಾಗದಲ್ಲಿ ಒಂದು ತಾನವಿತ್ತು. ತಾನಕ್ಕೆ ತಕ್ಕ ತಾಳ ಒಳಗಿನಿಂದ ಕೇಳಿಸತೊಡಗಿತು. ಜೊತೆಗೆ ಘಲ್ ಘಲ್ ಎಂಬ ಗೆಜ್ಜೆಗಳ ಶಬ್ದವೂ ಗುಡಿಯ ಒಳಗಿನಿಂದ ಹೊರ ಬರತೊಡಗಿತು.

ಅದನ್ನು ಕೇಳಿಸಿಕೊಂಡು ದಾಸಣ್ಣ ಹಾಗೂ ಸೀನಣ್ಣ ತಾವೂ ಹೊರಗೆ ಕುಣಿಯ ತೊಡಗಿದರು. ಯಾರ ಕಾಲಲ್ಲಿಯೂ ಗೆಜ್ಜೆಗಳಿಲ್ಲ. ಯಾರ ಕೈಗಳಲ್ಲಿಯೂ ತಾಳಗಳಿಲ್ಲ.

ಗೆಜ್ಜೆ ತಾಳ ಎಲ್ಲಾ ಶಬ್ದಗಳೂ ಕೇಳಿಸುತ್ತಿವೆ! ಅದು ಹೊರಗೆಲ್ಲಾ ಕೇಳಿ ಬಂದು ಉತ್ತನೂರಿನ ಜನ ಗುಡಿಯ ಸುತ್ತ ಜಮಾಯಿಸಿದರು.

ಅವರೆಲ್ಲಾ ಕೈಮುಗಿದುಕೊಂಡು ನಿಂತೇ ಇದ್ದರು. ಬಹಳ ಹೊತ್ತಿನ ಮೇಲೆ ಭಾಗಣ್ಣ ಹೊರಗೆ ಬಂದು ಜನಗಳನ್ನು ನೋಡಿದ.

ಗೆಜ್ಜೆಯ ನಿನಾದ ಕೇಳಿಸಿದ್ದನ್ನು ತಮ್ಮಂದಿರು, ಜನರೂ ಹೇಳಿದಾಗ ಭಾಗಣ್ಣ ಆಶ್ಚರ್ಯಪಟ್ಟ.

"ಸ್ವಾಮಿ, ನೀನು ನನ್ನ ಸೇವೆಯನ್ನು ಸ್ವೀಕರಿಸುತ್ತಿರುವೆ. ಏನೇನೋ ಹಾಡು ಗಳನ್ನು ಹಾಡಿಸುತ್ತಿರುವೆ. ಆದರೂ ಮನಸ್ಸಿಗೆ ಸಂಪೂರ್ಣ ತೃಪ್ತಿಯಿಲ್ಲ. ಇನ್ನೇನೋ ಪಡೆಯುವುದಕ್ಕೆ ಮನಸ್ಸು ಹಾತೊರೆಯುತ್ತಿದೆ. ಅದನ್ನು ಪಡೆಯುವ ಹಾದಿಯನ್ನು ನೀನೇ ತೋರಿಸಿ ಉದ್ಧರಿಸು ತಂದೆ" ಎಂದು ಭಾಗಣ್ಣ ಶ್ರೀ ವೆಂಕಟೇಶ ನಲ್ಲಿ ಪ್ರಾರ್ಥಿಸಿದ.

ಭಾಗಣ್ಣನ ಏಕಾಂತ ಭಜನಾ ಕಾರ್ಯಕ್ರಮ ಪ್ರತಿನಿತ್ಯ ನಡೆಯುತ್ತಿತ್ತು. 'ವೆಂಕಟಕೃಷ್ಣ.' ಅಂಕಿತದಲ್ಲಿ ನಾನಾ ಹಾಡುಗಳು ಹಾಡಲ್ಪಟ್ಟವು. ದಾಸಣ್ಣ ಸೀನಣ್ಣರು ಹೊರಗೆ ಕುಳಿತೇ ತಮಗೆ ಕೇಳಿಸಿದ ಕೆಲವು ಹಾಡುಗಳನ್ನು ಬರೆದುಕೊಂಡರು.

ಉತ್ತನೂರಿನ ಜನರು ಆ ಹಾಡುಗಳನ್ನು ಹಾಡತೊಡಗಿದರು. ಕಣಿ ಕೇಳಲು ಬಂದವರು, ತಮ್ಮ ಮನೆಯ ಶುಭಕಾರ್ಯಗಳ ಬಗ್ಗೆ ಮುಹೂರ್ತ ನಿಶ್ಚಯಿಸ ಬಂದವರು, ಪ್ರತಿನಿತ್ಯರಾತ್ರಿ ನಡೆಯುವ ಸಾಮೂಹಿಕ ಭಜನಾ ಕಾರ್ಯಕ್ರಮಗಳಲ್ಲಿ ಭಾಗವಹಿಸ ಬಂದವರು ಹೀಗೆ ಭಾಗಣ್ಣನ ಮನೆನಿತ್ಯ ಸಂತರ್ಪಣೆಯ ಮಠದಂತಾಗಿ ಹೋಯಿತು. ವೆಂಕಟಕೃಷ್ಣ ಅಂಕಿತದ ಹಾಡುಗಳು ಜನರಿಂದ ಜನರಿಗೆ ಹರಡಿ ಪ್ರದೇಶದಲ್ಲೆಲ್ಲಾ ಮಾರ್ಮೊಳಗಿದವು.

ಅವರ ಕವಿತಾ ಪ್ರತಿಭೆಯ ಕೀರ್ತಿ ರಾಜಧಾನಿಯವರೆಗೂ ಹರಡಿ ಆಸ್ಥಾನ ಪಂಡಿತರೆಲ್ಲಾ ಆ ಕವಿತೆಗಳನ್ನು ಕೇಳಿ ತಲೆದೂಗಿದರು. ಚಿಕ್ಕವಯಸ್ಸಿನಲ್ಲಿಯೇ ಹಸ್ತಸಾಮುದ್ರಿಕ, ಅಂಗ ಸಾಮುದ್ರಿಕ, ಸಂಖ್ಯಾ ಸಾಮುದ್ರಿಕ ಮೊದಲಾದ ವಿಷಯಗಳಲ್ಲಿ ಅವರಿಗಿರುವ ಪಾಂಡಿತ್ಯದೊಂದಿಗೆ ಕಾವ್ಯ ನಿರ್ಮಾಣ ಶಕ್ತಿಯೂ ಜೊತೆಗೂಡಿವೆಯೆಂದು ಕೇಳಿದ ಮಹಾರಾಜರು ಭಾಗಣ್ಣನೊಬ್ಬ ತಮ್ಮ ರಾಜ್ಯದ ಸಾಹಿತ್ಯ ಸಂಪತ್ತೂ ಹೌದು ಎಂದು ಭಾವಿಸಿ ಹರ್ಷಿಸತೊಡಗಿದರು.

ಆ ಕವಿತೆಗಳಲ್ಲಿಯ ಮಾಧುರ್ಯ, ಬುದ್ಧಿಯನ್ನು ಸೆರೆ ಹಿಡಿಯುವ ಶಬ್ದಗಳ ಮೋಡಿ, ಹೃದಯವನ್ನು ಸೂರೆ ಹೊಡೆಯುವ ಭಾವ ಉತ್ಕರ್ಷ, ಉಪಮೆಗಳ ಸೊಗಸು, ವಿವಿಧ ರಸ ಭಾವಗಳ ಹದವಾದ ಮಿಶ್ರಣಕ್ಕೆ ತಲೆದೂಗದವರೇ ಇಲ್ಲ.

ಭಾಗಣ್ಣನ ಕೀರ್ತಿ ಎಲ್ಲೆಲ್ಲಿ ಹರಡಿದರೂ, ಅವರ ಕವಿತೆಗಳು ರಾಜ್ಯಾದ್ಯಂತ ಹಾಡಲ್ಪಟ್ಟರೂ ಆತನಿಗೆ ಮಾತ್ರ ಅದರಿಂದ ಸಮಾಧಾನವಿಲ್ಲ. ತನ್ನ ಸಾಹಿತ್ಯ ನಿರ್ಮಾಣ ಶಕ್ತಿ ಸರಿಯಾಗಿ ವಿನಿಯೋಗವಾಗುತ್ತಿಲ್ಲವೆಂಬ ಬೇಗುದಿ.

ಹಾಡುವಾಗ ಕೆಲವೊಮ್ಮೆ ಭಗವಂತ ಕುಣಿದಂತೆ ಗೆಜ್ಜೆಗಳ ಶಬ್ದ ಕೇಳಿದರೂ ಆತನ ದರ್ಶನವಾಗುತ್ತಿಲ್ಲ ಎಂಬ ವ್ಯಥೆ. ಅದನ್ನು ಪಡೆಯಲು ಏನೆಲ್ಲಾ ಪ್ರಯತ್ನ. ಆದರೆ ಆ ಭಾಗ್ಯ ಮಾತ್ರ ಆತನಿಗೆ ಸಿಕ್ಕುತ್ತಿಲ್ಲ.

ಒಮ್ಮೆ ಮನೆಯಲ್ಲಿ ಭಾಗಣ್ಣ ಕುಳಿತಿದ್ದ. ಭವಿಷ್ಯ ತಿಳಿಯಲು ಬಂದವರು ಸುತ್ತೆಲ್ಲಾ ನೆರೆದಿದ್ದರು. ಇದ್ದಕ್ಕಿದ್ದಂತೆಯೇ ಗ್ರಾಮದಲ್ಲಿ ನಗಾರಿಯ ಶಬ್ದ. ಡೊಳ್ಳಿನ ಭೇರಿ, ಕಹಳೆಯ ಮೊರೆತ ಕೇಳಿ ಬಂದಿತು.

ನೆರೆದಿದ್ದ ಜನಕ್ಕೆ ಈ ವಾದ್ಯ ಅಪರೂಪವಾದರೂ ಅಸಂಭವವಾದುದೇನೂ ಆಗಿರಲಿಲ್ಲ. ದೇಶ ದೇಶಗಳಿಂದ ಬರುವ ಪೈಲ್ವಾನರು, ವಿವಿಧ ವಿದ್ಯಾಪರಿಣಿತರು ತಮ್ಮ ಸಾಧನಾ ಹೆಮ್ಮೆಯ ಸಂಕೇತವಾಗಿ ಆ ರೀತಿ ವಾದ್ಯ ವೈಭವದಿಂದ ಬರುವುದು ದೇಶದಲ್ಲಿ ವಾಡಿಕೆಯಾಗಿತ್ತು.

ದೊಡ್ಡ ಮಠಾಧಿಪತಿಗಳಿಗೆ ಅಡ್ಡಪಲ್ಲಕ್ಕಿ ಉತ್ಸವ, ವಿವಿಧ ಕಲಾಮಂಡಿತರಿಗೆ, ನಾನಾ ಶಾಸ್ತ್ರಗಳ ಪಂಡಿತರಿಗೆ ಈ ವಾದ್ಯ ವೈಭವಕ್ಕೆ ಸಂಸ್ಥಾನಾಧೀಶ್ವರರು ಅಪ್ಪಣೆ ಕೊಟ್ಟಿರುತ್ತಿದ್ದರು.

ಕೆಲವು ಪೈಲ್ವಾನರು ಈ ವಾದ್ಯ ವೈಭವದೊಂದಿಗೆ ಬಂದು ಊರಿನ ಕೋಟೆ ಬಾಗಿಲಿಗೆ ತಮ್ಮ ಕಾಚಾ ಕಟ್ಟುತ್ತಿದ್ದರು. ಯಾರೊಬ್ಬರೂ ಅದರ ಕೆಳಗೆ ಹೋಗ ಬೇಕು ಇಲ್ಲವೇ ತಮ್ಮೊಂದಿಗೆ ಕುಸ್ತಿಯಾಡಬೇಕು. ಯಾರೂ ತಮ್ಮೊಂದಿಗೆ ಕುಸ್ತಿಗೆ ನಿಲ್ಲಲಿಲ್ಲವೆಂದರೆ ಜಯಶೀಲರಾದಂತೆ ಅಲ್ಲಿಯ ರಾಜ ಪ್ರತಿನಿಧಿಗಳಿಂದ ಮಾನ್ಯತೆ ಪಡೆದು ಸಂಭಾವನೆ ಸ್ವೀಕರಿಸಿ ಮುಂದೆ ಪ್ರಯಾಣಿಸುತ್ತಿದ್ದರು. ವಿಜೇತರೆಂದು ಪರಿಗಣಿಸಲ್ಪಟ್ಟವರಿಗೆ ಸಾರ್ವಜನಿಕರು ಮನ್ನಣೆ ನೀಡಿ ಮುಂದೆ ಕಳಿಸುತ್ತಿದ್ದರು.

ಈಗ ಅಂಥಹುದೇ ಒಂದು ಘಟನೆ ನಡೆದಿರಬಹುದೆಂದು ಭಾಗಣ್ಣ ತರ್ಕಿಸಿದ. ಯಾರೊ ಒಬ್ಬ ಪೈಲ್ವಾನರೋ, ಕತ್ತಿ ಗದಾಯುದ್ಧಗಳ ಪರಿಣಿತರೋ, ಬಂದಿರ ಬಹುದೆಂದು ಊಹಿಸುತ್ತಿದ್ದಂತೆಯೇ ನಾಲ್ಕು ಜನ ರಾಜಭಟರು ಭಾಗಣ್ಣನ ಮನೆ ಪ್ರವೇಶಿಸಿ, ನಮಸ್ಕರಿಸಿ ರಾಜವಿನಂತಿ ಪತ್ರವನ್ನು ನೀಡಿದರು.

"ತ್ರಿಲಿಂಗ ದೇಶದ ಪಂಡಿತೋತ್ತಮರೊಬ್ಬರು ನಮ್ಮ ಆಸ್ಥಾನಕ್ಕೆ ಬಂದು ಕಾವ್ಯ ನಿರ್ಮಾಣ ಶಕ್ತಿಯಲ್ಲಿ ನಮ್ಮ ಆಸ್ಥಾನ ವಿದ್ವಾಂಸರನ್ನೆಲ್ಲಾ ಸೋಲಿಸಿದ್ದಾರೆಂದೂ ನಮ್ಮ ರಾಜ್ಯದ ಪರವಾಗಿ ಅವರಿಗೆ ಜಯಪತ್ರ ಕೊಡುವ ಮೊದಲು ಅವರನ್ನು ಉತ್ತನೂರಿಗೆ ಕಳುಹಿಸುತ್ತಿರುವುದಾಗಿಯೂ, ಅವರ ಶಕ್ತಿಯನ್ನು ಪರೀಕ್ಷಿಸಿ ತಮ್ಮ ಅಭಿಪ್ರಾಯ ನೀಡಬೇಕೆಂದೂ ಅವರಿಗೆ ಜಯಪತ್ರ ನೀಡುವುದೆಂದರೆ ರಾಜ್ಯದ ಸೋಲು ಪತ್ರವೂ ಅದಾಗಿರುತ್ತದೆಂದೂ ಪರಿಸ್ಥಿತಿಯನ್ನು ಪರಿಶೀಲಿಸಬೇಕೆಂದೂ" ಮಹಾರಾಜರು ಆ ಪತ್ರದಲ್ಲಿ ಭಾಗಣ್ಣನನ್ನು ಪ್ರಾರ್ಥಿಸಿದ್ದರು.

ಭಾಗಣ್ಣನು ಪತ್ರ ಓದುತ್ತಿರುವಂತೆಯೇ, "ಕವಿರಾಜ, ಕವಿ ಮಾರ್ತಾಂಡ, ಸರ್ವಕವಿಗಳ ಗಂಡ, ಕಾವ್ಯ ರಚಿಸುತ್ತೇವೆಂಬ ಕವಿಗಳ ಲೇಖನಿ ಕಸಿದು ಕುಕ್ಕುವ ಪ್ರಚಂಡ." ಹಲವು ಜನ ಪರಾಕು ಹೇಳುತ್ತಿರುವಂತೆಯೇ ಆ ತ್ರಿಲಿಂಗ ದೇಶದ ಕವಿ ಸಾರ್ವಭೌಮರು ತಾವೇ ನೇರವಾಗಿ ಭಾಗಣ್ಣನ ಮನೆಗೆ ಬಂದರು.

ಜರತಾರಿಯಿಂದ ಕುಸುರಿ ಕೆಲಸ ಮಾಡಿದ ಕಾಶ್ಮೀರದ ಭವ್ಯ ಶಾಲು, ಕೈಗಳಲ್ಲಿ ಚಿನ್ನದ ಕಡಗಗಳು; ಕಿವಿಯಲ್ಲಿ ವಜ್ರದ ಓಲೆ, ಕೊರಳಲ್ಲಿ ಚಿನ್ನದ ಕಟ್ಟು ಹಾಕಿದ ರುದ್ರಾಕ್ಷಿಸರ ಕವಿಯ ಶ್ರೀಮಂತಿಕೆಯನ್ನು ತೋರಿಸುತ್ತಿದ್ದರೆ ಮುಖದಲ್ಲಿ ಆತ್ಮವಿಶ್ವಾಸ ಅಧಿಕಗೊಂಡ ಅಟ್ಟಹಾಸ ಹೊರಹೊಮ್ಮುತ್ತಿತ್ತು.

ಬಂದ ಕವಿಗಳು ಸಾಮಾನ್ಯ ಲೌಕಿಕ ನಿಯಮಗಳಂತೆ ಭಾಗಣ್ಣನಿಗೆ ಸೌಜನ್ಯದ ನಮಸ್ಕಾರವನ್ನೂ ಹೇಳಲಿಲ್ಲ.

ಭಾಗಣ್ಣನನ್ನು ನೋಡಿದ ಕವಿಗಳು

"ಏ ಹುಡುಗಾ, ನಿಮ್ಮಪ್ಪ ಎಲ್ಲಿದ್ದಾನೆ ಕರೆಯೋ" ಎಂದು ಘರ್ಜು ಧ್ವನಿಯಲ್ಲಿ ನುಡಿದರು.

ಮಹಾರಾಜರೇ ಮೆಚ್ಚಿ ತಮ್ಮೊಂದಿಗೆ ಸ್ಪರ್ಧಿಸಬಲ್ಲ ಏಕೈಕ ಕವಿ ಎಂದು ಗುರುತಿಸಿ ಕಳಿಸಬೇಕಾದರೆ ಆತ ದೊಡ್ಡ ವಯಸ್ಸಿನ ಪ್ರೌಢನೇ ಇರಬೇಕೆಂದು ಅವರ ಭಾವನೆ.

ಮೂರು ದಶಕಗಳನ್ನೂ ದಾಟಿರದ ಈ ಪುಟ್ಟ ಬಾಲಕ ರಾಜ್ಯದ ಗಮನ ಸೆಳೆದ ದೊಡ್ಡ ಕವಿ ಇರಲಾರನೆಂದು ಅವರ ಅನಿಸಿಕೆ.

ಭಾಗಣ್ಣ ಒಮ್ಮೆ ಕವಿಯನ್ನು ನಖಶಿಖಾಂತ ನೋಡಿ ತಾನೇ ಎದ್ದು ಅವರಿಗೆ ನಮಸ್ಕರಿಸಿ "ಬನ್ನಿ ಕುಳಿತುಕೊಳ್ಳಿ" ಎಂದು ಆಹ್ವಾನಿಸಿದ.

"ಕುಳಿತುಕೊಳ್ಳಲು ಬಂದಿಲ್ಲ. ಊರ ಚಾವಡಿಯ ಮುಂದೆ ನಿಮ್ಮಪ್ಪನ ಕವಿತ್ವ ಶಕ್ತಿಯನ್ನು ಹರಾಜಿಗೆ ಇಕ್ಕಲು ಬಂದಿದ್ದೇನೆ. ಎಲ್ಲೋ ನಿಮ್ಮಪ್ಪಾ."

ಅಬ್ಬಾ! ಏನು ಪಂಡಿತರ ಆ ಠೇಂಕಾರ! ಎಷ್ಟು ದರ್ಪ ಅವರ ಧ್ವನಿಯಲ್ಲಿ!

ಆತ್ಮ ವಿಶ್ವಾಸವಿರುವ ಕವಿ ಕಲಾವಿದರುಗಳೇ ರಾಜ್ಯದ ಕೀರ್ತಿಯನ್ನು ಹೆಚ್ಚಿಸುತ್ತಾರೆ. ಅವರಲ್ಲಿ ಅದು ಮೂಡುವುದಕ್ಕಾಗಿ ರಾಜ್ಯದ ಜನತೆ ನಾನಾ ರೀತಿಯಲ್ಲಿ ಸನ್ಮಾನಿಸುತ್ತದೆ. ರಾಜ ಮಹಾರಾಜರು ಅವರಿಗೆ ಗೌರವಿಸುತ್ತಾರೆ.

ಆದರೆ ಆತ್ಮ ವಿಶ್ವಾಸ ಅಹಂಕಾರಕ್ಕೆ ಕಾರಣವಾಗಬಾರದು. ಸ್ವವಿಶ್ವಾಸ ಪರರ ಖಂಡನೆಯತ್ತ ಸಾಗಬಾರದು. ಆತ್ಮವಿಶ್ವಾಸಕ್ಕೂ ಅಟ್ಟಹಾಸದ ಅಹಂಕಾರಕ್ಕೂ ಒಂದೇ ರೇಖೆ. ಆದರೆ ಧ್ರುವಗಳು ಮಾತ್ರ ಬೇರೆ ಬೇರೆ. ಆತ್ಮವಿಶ್ವಾಸದ ಗುರಿ ಬಿಟ್ಟು ಧ್ರುವದ ಇನ್ನೊಂದು ಕೊನೆಯಲ್ಲಿ ಬೀಗುತ್ತಿದ್ದ ಕವಿಯ ಧೋರಣೆ ಕಂಡು ಭಾಗಣ್ಣನಿಗೆ ಆಶ್ಚರ್ಯ.

ತಾಯಿ ಸರಸ್ವತಿಯ ನೆಚ್ಚಿನ ಪುತ್ರರು, ಸಾಹಿತ್ಯ ದೇವಿಯ ಉಪಾಸಕರೆಂದೇನೋ ಭಾಗಣ್ಣನಿಗೆ ಅವರ ಬಗ್ಗೆ ಗೌರವ. ಅವರ ಅಹಂಕಾರದ ಮಾತುಗಳನ್ನು ಕಂಡು ಒಳಗಿಂದೊಳಗೆ ನಗು ಬರತೊಡಗಿತು.

ಬಿಮ್ಮನೆ ಬೀಗಿಕೊಂಡಿದ್ದ ಕವಿಗಳು ಮತ್ತೊಮ್ಮೆ ಏರು ಧ್ವನಿಯಲ್ಲಿ ಕೇಳಿದರು.

"ಎಲ್ಲೋ ನಿಮ್ಮಪ್ಪಾ?"

"ನಾನೂ ಅವನನ್ನೇ ಹುಡುಕುತ್ತಿದ್ದೇನೆ. ಮಹಾರಾಯ, ಇರುವಿಕೆಯನ್ನು ತೋರಿಸಿಕೊಳ್ಳುತ್ತಿದ್ದಾನೆ ಕಾಣಿಸಿಕೊಳ್ಳುತ್ತಿಲ್ಲ" ಭಾಗಣ್ಣ ವಿನೀತನಾಗಿ ನುಡಿದ.

ತೋರಿಸಿಕೊಳ್ಳುತ್ತಿದ್ದಾನೆ, ಕಾಣಿಸಿಕೊಳ್ಳುತ್ತಿಲ್ಲ! ಏನು ಇದರ ಅರ್ಥ? ತೋರಿಸುವುದು ಕಾಣಿಸುವುದು ಬೇರೆ ಬೇರೆಯೇನು? ಸರಿಯಾಗಿ ಮಾತನಾಡಲು ಬಾರದ ಬಾಲಕ, ಏನೇನೋ ನುಡಿಯುತ್ತಿದ್ದಾನೆಂದು ಕವಿಗಳ ಭಾವನೆ.

"ಕಾಣಿಸೋ ನಿಮ್ಮಪ್ಪನನ್ನು, ತೋರಿಸಿಕೊಳ್ಳಲಿ ತನ್ನ ಶಕ್ತಿಯನ್ನು ಚಾವಡಿಯ ಮುಂದೆ" ಬಾಲಕನ ಬೆಪ್ಪ ಮಾತನ್ನೇ ಜಾಣತನಕ್ಕೆ ತಿರುಗಿಸಿ ನುಡಿದ ಹೆಮ್ಮೆ ಅವರದು. ಅಹಂಕಾರದಿಂದ ನಗುತ್ತಾ ಸುತ್ತೆಲ್ಲಾ ನೋಡಿದರು. ಕವಿಗಳಿಗಾಗಿರುವ ಪೊರಪಾಟನ್ನು ಗಮನಿಸಿ ಏನು ಮಾಡಬೇಕೆಂದು ತೋಚದೆ ಸೈನಿಕರು ಪಿಳಿಪಿಳಿ ನೋಡುತ್ತಿದ್ದರು.

"ಕಾಣಿಸುವುದಕ್ಕೆ ನಾನೆಷ್ಟರವನು! ನನಗೇ ಇನ್ನೂ ಕಂಡಿಲ್ಲ. ಕಾಣುವುದಕ್ಕಾಗಿ ಕನಲುತ್ತಿದ್ದೇನೆ. ಕಾಲಕ್ಕಾಗಿ ಕಾಯುತ್ತಿದ್ದೇನೆ. ಚಾವಡಿಯಲ್ಲಿ ಆತ ಇದ್ದಾನೆ. ಆ ಚಾವಡಿಯಲ್ಲಿ ಆತನ ಸುತ್ತ ಎಷ್ಟೋ ಜನರಿದ್ದಾರೆ. ಅವರಲ್ಲಿಯೂ ಆತ ಇದ್ದಾನೆ. ಅವರಿಂದ ಹೊರಗೂ ಇದ್ದಾನೆ. ಕಾಣುವ ಕಳಕಳಿ ಇದ್ದು, ಅಲ್ಲಿರುವವರೆಲ್ಲರ ಕೃಪೆ ದೊರಕಿ, ಅವರ ಕೃಪೆ ದೊರಕಿಸುವ ಮಹಾತ್ಮ ದೊರೆಯುವವರೆಗೆ ಆತ ಹೇಗೆ ಸಿಕ್ಕುತ್ತಾನೆ?" ಭಾಗಣ್ಣನ ಮಾತು ಕವಿಗಳಿಗೆ ಅರ್ಥವೇ ಆಗಲಿಲ್ಲ.

"ಏನೋ ಹಾಗೆಂದರೆ? ಚಾವಡಿಯಲ್ಲಿ ಹೋಗಿ ನನ್ನ ಪಂಥಾಹ್ವಾನ ಪತ್ರ ಹಚ್ಚಿಯೇ ಬಂದಿದ್ದೇನೆ. ಅಲ್ಲೆಲ್ಲಿಯೂ ಆತ ಇಲ್ಲ. ಇಲ್ಲೆಲ್ಲೋ ಅಡಗಿಕೊಂಡಿರ ಬೇಕು. ಹೊರಗೆ ಕರೆ ಆತನನ್ನು."

"ಕರೆಯುವುದಕ್ಕೆ ನಾನಾರು? ಆತ ಹೊರಗೆ ಬಂದ ಮೇಲೆ ಉಳಿಯುವುದಾದರೂ ಏನು? ಕಟ್ಟಿಗೆಗಷ್ಟೆ ಕೆಲಸ ಆಗ! ಆತ ಒಳಗೇ ಇರಬೇಕು. ಹೊರಗೂ ಕಾಣಿಸಿ ಕೊಳ್ಳಬೇಕು. ಹೊರಗೆ ಕಂಡಮೇಲೆ ಒಳಗೆ ಕಾಣುವ ಹಂಬಲ ಹೆಚ್ಚಬೇಕು. ಒಳಗಿದ್ದಾಗ ಹೊರಗೆ ಕಾಣಿಸಿಕೊಳ್ಳುತ್ತಾನೆ. ಒಳಗಿಲ್ಲದಿದ್ದರೆ ಹೊರಗೆ ನೋಡು ವುದಾದರೂ ಹೇಗೆ?" ಭಾಗಣ್ಣನ ವಿವರಣೆ ಕವಿಗಳಿಗೆ ಅರ್ಥವಾಗಲಿಲ್ಲ. ಆದರೂ ಇದನ್ನು ಹೇಳುವಾಗ ಬಾಲಕನ ಕಣ್ಣಿನಲ್ಲಿ ಮಿಂಚುತ್ತಿದ್ದ ತೇಜಸ್ಸನ್ನು ಕಂಡು ಅವರು ಆಶ್ಚರ್ಯಪಟ್ಟರು.

"ಹುಡುಗ ಏನೇನೋ ಮಾತನಾಡುತ್ತಿ, ಗದ್ವಾಲದ ಮಹಾರಾಜರು, ಅವರ ಆಸ್ಥಾನದಲ್ಲಿಯ ಪಂಡಿತರು ನಿಮ್ಮಪ್ಪನ ಶಕ್ತಿಗೆ ಮೆಚ್ಚಿ ನನ್ನನ್ನು ಇಲ್ಲಿಗೆ ಕಳಿಸಿದ್ದಾರೆ" ಕವಿಗಳು ಇನ್ನೂ ಹೇಳುತ್ತಿದ್ದಂತೆಯೇ ಭಾಗಣ್ಣ ಮಧ್ಯ ಪ್ರವೇಶಿಸಿ.

"ಗದ್ವಾಲದ ಮಹಾರಾಜರೇನು? ಆಸ್ಥಾನದ ಪಂಡಿತರೆಲ್ಲಾ ಏನು? ಯಾರೇ ಆದರೂ ನಮ್ಮಪ್ಪನ ಶಕ್ತಿಗೆ ತಲೆ ಬಾಗಲೇಬೇಕು. ಏಕೆಂದರೆ ಅವರಿಗೆಲ್ಲಾ ಆಯಾ ಸ್ಥಾನಗಳನ್ನು ನೀಡಿದವನು ನಮ್ಮಪ್ಪ. ನಡೆಸುವವನು ನಮ್ಮಪ್ಪ. ನಮ್ಮಪ್ಪನಿಂದಲೇ ಅವರೆಲ್ಲಾ ಹುಟ್ಟಿದವರು."

ಮಹಾರಾಜರನ್ನು ಹುಟ್ಟಿಸಿದವನು! ಪಂಡಿತರನ್ನೆಲ್ಲಾ ಪಡೆದವನು! ಅಬ್ಬಾ ಏನು ಈ ಬಾಲಕನ ದಾರ್ಷ್ಟ್ಯತನ! ಇದನ್ನು ಕೇಳಿಯೂ ರಾಜಭಟರು ಸುಮ್ಮನಿರು ವುದನ್ನು ಕಂಡು ಕವಿಗಳಿಗೆ ಆಶ್ಚರ್ಯ.

"ಹುಡುಗನೆಂದು ಇವನಿಗೆ ಬಹಳ ಸಲಿಗೆ ಕೊಟ್ಟಂತಿದೆ. ರಾಜನಿಂದೆಯ ಮಾತನಾಡುತ್ತಿದ್ದಾನೆ. ಸೈನಿಕರೇ ಇವನನ್ನು ಮೊದಲು ಬಂಧಿಸಿರಿ" ರಾಜಭಟರಿಗೆ ಕವಿಗಳೇ ಆಜ್ಞಾಪಿಸಿದರು. ಭಟರು ಸುಮ್ಮನೆ ನೋಡುತ್ತಲೇ ನಿಂತಿದ್ದರು.

"ಇವನು ಸಾಮಾನ್ಯ ಹುಡುಗನಲ್ಲ, ಹುಡುಗನೆಂದು ಇವನನ್ನು ಹಗುರವಾಗಿ ಬಿಡಬೇಡಿ" ಕವಿಗಳು ಆರ್ಭಟಿಸಿದರು.

ರಾಜಭಟರು ಕವಿಗಳಿಗೆ ಹೇಳಿದರು.

"ಇವರು ಸಾಮಾನ್ಯ ಹುಡುಗರಲ್ಲ. ಹುಡುಗನೆಂದು ಹಗುರವಾಗಿ ಪರಿಗಣಿಸು ವಂಥವರೂ ಅಲ್ಲ. ತಾವು ಅರಸಿಕೊಂಡು ಬಂದ ಕವಿ ಶ್ರೇಷ್ಠ ಭಾಗಣ್ಣನವರು ಇವರೆ."

ಸೈನಿಕರ ಮಾತು ಕೇಳಿ ಕವಿಗಳು ದಿಗ್‌ಭ್ರಾಂತರಾದರು. ತಾವು ಎಣಿಸಿದಂತೆ ತಲೆನೆರೆತು ಮುಖದ ಚರ್ಮವೆಲ್ಲಾ ಸುಕ್ಕುಗಟ್ಟಿ ಹೋದ ವಯೋವೃದ್ಧರೂಪ ಇವರದಲ್ಲ. ಮುಖದಲ್ಲಿ ಸರಿಯಾಗಿ ಗಡ್ಡಮೀಸೆಯೂ ಮೂಡಿರದ ಈ ಬಾಲಕ ರಾಜಮೆಚ್ಚುಗೆ ಗಳಿಸಿದ ಕವಿಶ್ರೇಷ್ಠ ಎಂದು ತಿಳಿದು ಕವಿಗಳು ಕಕ್ಕಾಬಿಕ್ಕಿಯಾದರು. ಕಡೆಗೆ ಅವರೇ ಚೇತರಿಸಿಕೊಂಡು ಮಾತು ಆರಂಭಿಸಿದರು. "ನಿಮ್ಮಂಥ ಖ್ಯಾತ ಕವಿಗಳು ಹೀಗೆಲ್ಲಾ ಸುಳ್ಳು ಹೇಳಬಾರದು. 'ನಿಮ್ಮಪ್ಪ ಎಲ್ಲಿ' ಎಂದು ಕೇಳಿದಾಗ 'ಇಲ್ಲ ನಾನೆ ಆತ' ಎಂದು ಹೇಳಿಬಿಟ್ಟಿದ್ದರೆ ಆಗಿತ್ತು" ಕವಿಗಳು ಸಮಾಧಾನದ ಧ್ವನಿಯಲ್ಲಿ ನುಡಿದರು.

"ನಾನೇ ಆತನ್ಹೇಗೆ ಆಗುತ್ತೇನೆ? ನಾನು ಯಾವಾಗಲೂ ಮಗನೆ. ಆತ ಯಾವಾಗಲೂ ತಂದೆಯೆ"

ಪುನಃ ಸುತ್ತು ಮಾತು, ಅರ್ಥವಾಗದ ಧೋರಣೆ. ಭಾಗಣ್ಣನ ಮಾತುಗಳು ಅವರಿಗೆ ಅರ್ಥವಾಗಲಿಲ್ಲ.

ಕಡೆಗೆ ಭಾಗಣ್ಣನೇ ಬಿಡಿಸಿ ಹೇಳಿದ.

"ಕವಿಗಳೇ, ಶಾಂತವಾಗಿ ಕೇಳಿ. ನೀವು ಭಾಗಣ್ಣ ಎಲ್ಲಿ ಎಂದು ಕೇಳಿದ್ದರೆ ನಾನೇ ಎಂದು ಹೇಳುತ್ತಿದ್ದೆ. ಆದರೆ ನಮ್ಮಪ್ಪ ಎಲ್ಲಿ ಎಂದು ಕೇಳಿದಿರಿ. ನಮ್ಮಪ್ಪ, ನಿಮ್ಮಪ್ಪ ಅಷ್ಟೇ ಏಕೆ ಮಹಾರಾಜರ ಅಪ್ಪ, ಈ ಮಹಾಜಗತ್ತಿನ ಅಪ್ಪ ಸರ್ವೋತ್ತಮ ಶ್ರೀನಿವಾಸ ಎಲ್ಲಿ ಎಂದು ಕೇಳಿದಂತೆ ಕಾವ್ಯಭಾಷೆಯಲ್ಲಿ ಅರ್ಥವಾಗುತ್ತದೆ. ನೀವು

ಕವಿಗಳೇ ಅಲ್ಲವೆ, ಕಾವ್ಯಭಾಷೆ ನಿಮ್ಮ ಸ್ವತ್ತಲ್ಲವೆ? ಅದಕ್ಕಾಗಿ ಕಾವ್ಯಭಾಷೆಯಲ್ಲಿಯೇ ಉತ್ತರಿಸಿದೆ. ನಮ್ಮಿಬ್ಬರ ಸಂಭಾಷಣೆ ಜ್ಞಾಪಿಸಿಕೊಳ್ಳಿ ಕವಿಗಳೇ, ಅಪ್ಪನನ್ನು ಕಾಣುವುದಕ್ಕೆ ಪರಿತಪಿಸುತ್ತಿದ್ದೇನೆ ಎಂದರೆ ಹೃತ್ಪದ್ಮದಲ್ಲಿ ವಿರಾಜಿಸುತ್ತಿರುವ ಬಿಂಬಮೂರ್ತಿಯನ್ನು ಕಾಣುವುದಕ್ಕೆ ಪರಿತಪಿಸುತ್ತಿದ್ದೇನೆ ಎಂದು ಅರ್ಥ. ಚಾವಡಿಯಲ್ಲಿ ಎಂದರೆ ಈ ಪಿಂಡಾಂಡದೊಳಗಿನ ಬೃಹತ್ ಚಾವಡಿಯಲ್ಲಿ ಆತ ಇದ್ದಾನೆ. ಆತನ ಸುತ್ತಲೂ ದೇವಾನುದೇವತೆಗಳಿದ್ದಾರೆ. ಅವರಲ್ಲಿಯೂ ಆತ ಇದ್ದಾನೆ. ಅವರಿಂದ ಹೊರಗೂ ಇದ್ದಾನೆಂದು ಅರ್ಥ. ಆತ ಚಾವಡಿಯಿಂದ ಹೊರಗೆ ಬಂದರೆ ಅಂದರೆ ಪ್ರಾಣಶಕ್ತಿ ಹೊರಗೆ ಬಂದರೆ ಉಳಿಯುವುದಾದರೂ ಏನು? ಆಗ ಶರೀರ ಶವವಾಗುತ್ತದೆ. ಅದಕ್ಕಾಗಿ ಕಟ್ಟಿಗೆಗಷ್ಟೇ ಬೇಕಾದುದು. ಆತ ಮಹಾರಾಜರ ಅಪ್ಪನಲ್ಲವೇನು? ಜಗತ್ತಿನ ತಂದೆಯಾತ! ಇದರಲ್ಲಿ ರಾಜನಿಂದೆಯ ಮಾತು ಎಲ್ಲಿ ಬರುತ್ತದೆ?"

ಭಾಗಣ್ಣನ ವಿವರಣೆ ಕೇಳಿ ಅವಾಕ್ಕಾಗಿ ಹೋದರು ಕವಿಗಳು.

ಇವರೊಂದಿಗೆ ಸ್ಪರ್ಧಿಸಿ ಗೆಲ್ಲಬಲ್ಲೆನೆಂಬ ವಿಶ್ವಾಸದ್ಯಕಟ್ಟಡ ಸಡಲಿ ಹೋಯಿತು. ಸಾಮಾನ್ಯ ಮಾತಿನಲ್ಲಿಯೇ ಸೊಬಗಿನ ಸುತ್ತು ಇಟ್ಟು, ಸಿದ್ಧಾಂತ ಪ್ರಮೇಯಗಳ ಗುಟ್ಟು ಕಟ್ಟಿ ನುಡಿದ ಭಾಗಣ್ಣನ ವಾಕ್‌ಚಾತುರ್ಯ ಅವರನ್ನು ಹೆದರಿಸಿಬಿಟ್ಟಿತು.

ಜಟ್ಟಿ ಬಿದ್ದರೂ ಮೀಸೆ ಮಣ್ಣಾಗಲಿಲ್ಲ ಎಂದು ವಾದಿಸುವಂತೆ ಸೋಲು ಧ್ವನಿಯಲ್ಲಿಯೇ ಕಾವ್ಯರಚನೆಯ ಸ್ಪರ್ಧೆಗೆಂದು ಭಾಗಣ್ಣನನ್ನು ಚಾವಡಿಗೆ ಆಹ್ವಾನಿಸಿದರು. ಪಾಂಡಿತ್ಯದ ಅಹಂಕಾರ ಕಡಿಮೆಯಾದರೂ ವಯಸ್ಸಿನ ಆಧಿಕ್ಯ ಅವರ ಬಿಗುಮಾನವನ್ನು ಬಿಗಿಹಿಡಿದಿತ್ತು.

"ನೀವು ಸೋತೆನೆಂದು ಒಂದು ಪತ್ರ ಬರೆದುಕೊಟ್ಟರೂ ಸಾಕು. ಅದನ್ನು ಮಹಾರಾಜರಿಗೆ ತೋರಿಸಿ ಜಯಪತ್ರ ಪಡೆದು ನಾನು ಹೋಗುತ್ತೇನೆ. ಸುಮ್ಮನೆ ಕಾವ್ಯರಚನೆಯ ಸ್ಪರ್ಧೆಗೆ ಇಳಿದು ಗ್ರಾಮದಲ್ಲಿ ಅವಮಾನ ಮಾಡಿಕೊಳ್ಳಬೇಡಿ" ಎಂದು ಚಾವಡಿಯ ನೆರೆದಿದ್ದ ಜನಗಳ ಮುಂದೆ ಕವಿಗಳು ಭಾಗಣ್ಣನನ್ನು ಎಚ್ಚರಿಸಿದರು.

"ಮಹಾರಾಜರನ್ನು ಮೆಚ್ಚಿಸುವುದು ನಿಮ್ಮ ಗುರಿ. ಜಗದೇಕ ಮಹಾರಾಜನ ಒಲುಮೆಗಳಿಸುವುದು ನನ್ನ ಧ್ಯೇಯ. ನಿಮ್ಮ ಹಾದಿಯಲ್ಲಿ ನೀವು ಕಾವ್ಯ ರಚಿಸಿ, ನನ್ನ ಮಾರ್ಗದಲ್ಲಿ ನಾನು ನಡೆಯುತ್ತೇನೆ. ಹೂಂ. ಪ್ರಾರಂಭಿಸಿ ನಿಮ್ಮ ಕಾವ್ಯಕದನ.

ಭಾಗಣ್ಣ ನಗುನಗುತ್ತಾ ಆಹ್ವಾನ ಸ್ವೀಕರಿಸಿ ಕಾವ್ಯಕಣಕ್ಕೆ ಧುಮುಕಿದ.

ಕವಿಗಳು ಹೊದ್ದಿದ್ದ ಶಾಲನ್ನು ಒಮ್ಮೆ ಸರಿಪಡಿಸಿಕೊಂಡರು. ಎಲ್ಲೆಲ್ಲಿಯೂ ಜಯಭೇರಿ ಹೊಡೆದು ಬಂದ ಸಂಕೇತವೆನಿಸಿದ್ದ ಕೈಯಲ್ಲಿಯ ಸುವರ್ಣ ಕಡಗವನ್ನು ಒಮ್ಮೆ ಒರಸಿಕೊಂಡು ಕೆಮ್ಮಿ ಕೆಮ್ಮಿ ಗಂಟಲನ್ನು ಸರಿಪಡಿಸಿಕೊಳ್ಳುತ್ತಾ ಹೇಳಿದರು.

"ಮಹಾರಾಜರನ್ನು ಕುರಿತು ನನ್ನ ವರ್ಣನೆ ಹೀಗಿದೆ. ಇದಕ್ಕೆ ಮೀರಿದ ಉಪಮೆಗಳನ್ನು ನೀವು ಕೊಡಬೇಕು" ಎಂದು ಪ್ರಾರಂಭಿಸಿದರು ಸಣ್ಣ ಕವನವೊಂದನ್ನು

**ನಿಮ್ಮ ವ್ಯಕ್ತಿತ್ವ ಹಿಮಾಲಯದೆತ್ತರ।**
**ನಿಮ್ಮ ಹೃದಯ ವಿಶಾಲಸಾಗರ।**
**ನಿಮ್ಮ ವೈಭವ ಆಕಾಶದಿವ್ಯ**
**ನಿಮ್ಮಿಂದಲೇ ಈ ನಾಡಿಗೆ ಭವ್ಯ।**

ಓ, ರಾಜಾರಾಯ ಭೂಪಾಲ ನಿಮ್ಮ ಔದಾರ್ಯಕ್ಕೆ ನಮೋ ನಮೋ

ನೆರೆದಿದ್ದ ಜನರು ಮಹಾರಾಜರ ವರ್ಣನೆ ಕೇಳಿ ಆಹಾಹಾ ಎಂದು ತಲೆದೂಗಿಬಿಟ್ಟರು. ಉಪಮೆಗಳ ಸೊಗಸು ಅವರ ರಾಜಭಕ್ತಿಯನ್ನು ಅರಳಿಸಿತ್ತು. ಜನಮೆಚ್ಚುಗೆಯ ಹರ್ಷೋದ್ಗಾರ ಕೇಳಿ ಕವಿಗಳು ಹೆಮ್ಮೆಯಿಂದ ಬೀಗಿದರು. ಇವಕ್ಕೂ ಮೀರಿದ ಉಪಮೆಗಳನ್ನು ಯಾರೂ ಕೊಡಲು ಸಾಧ್ಯವಿಲ್ಲವೆಂಬ ಆತ್ಮವಿಶ್ವಾಸ ಅವರದು.

ಭಾಗಣ್ಣ ಎದ್ದುನಿಂತು ಒಮ್ಮೆ ನಮಸ್ಕರಿಸಿ ಪ್ರಾರಂಭಿಸಿಯೇ ಬಿಟ್ಟ

**ಹಿಮಾಲಯಕೆ ಎತ್ತರ ನೀಡಿದವನು,**
**ಸಾಗರಕೆ ವಿಶಾಲತೆ ತಂದು ಕೊಟ್ಟವನು,**
**ಆಕಾಶ ದಿವ್ಯತೆಗೆ ವೈಭವವನಿತ್ತವನು**
**ನಾಡಿನ ಭವ್ಯತೆಗೆ ಕಾರಣನಾದವನು**

ಅಯೋಧ್ಯಾ ಭೂಪಾಲ, ವೆಂಕಟಕೃಷ್ಣಾ ನಿನ್ನ ಶಕ್ತಿಗೆ ನಮೋ ನಮೋ

ನೆರೆದಿದ್ದ ಜನರು ಹರ್ಷೋದ್ಗಾರ ಮಾಡಲಿಲ್ಲ. ಚಪ್ಪಾಳೆ ತಟ್ಟಲಿಲ್ಲ. ತಲೆಯನ್ನು ತೂಗಲಿಲ್ಲ. ಅವರೆಲ್ಲಾ ಭಾವತನ್ಮಯಗೊಂಡು ಬಿಟ್ಟಿದ್ದರು. ಅವರಲ್ಲಿದ್ದ ದೈವಭಕ್ತಿ ಗರಿಗೆದರಿ ಹರಡಿತ್ತು.

ಭಾಗಣ್ಣ ಅದನ್ನೇ ಇನ್ನೊಮ್ಮೆ ಹಾಡಿದಾಗ ಎಲ್ಲರೂ ಏಕಕಂಠದಿಂದ ನಮೋ ನಮೋ ಶಬ್ದಕ್ಕೆ ಧ್ವನಿಗೂಡಿಸಿದರು.

ಹೀಗೆ ಹಲವಾರು ಕವನಗಳು ಹಾಡಲ್ಪಟ್ಟವು. ಅವಕ್ಕೆಲ್ಲಾ ಭಾಗಣ್ಣ ಉತ್ತರಿಸು ತ್ತಲೇ ಹೋದ. ಕಡೆಗೆ ಕವಿಗೆ ಹೊಳೆಯಿತು. ಮನುಷ್ಯನನ್ನು ಎಷ್ಟೇ ಹೊಗಳ ಹೊರಟರೂ ಅದಕ್ಕೊಂದು ಪರಿಮಿತತ್ವವಿದೆ. ಸೀಮಾತೀತನಾದ ಪರಮಾತ್ಮನೊಬ್ಬನೇ ನಿಜವಾದ ಶರಣ್ಯ ಎಂದು ಹೊಳೆದು ಅವರು ಭಾಗಣ್ಣನಿಗೆ ನಮಸ್ಕರಿಸಿಬಿಟ್ಟರು.

"ಸಣ್ಣ ವಯಸ್ಸು ನಿಮ್ಮದು. ದೊಡ್ಡ ಚಿಂತನೆ ಸಿದ್ಧಿಸಿದೆ. ನಿಮ್ಮೊಂದಿಗೆ ಸ್ಪರ್ಧಿಸ ಬಯಸಿದ ನನ್ನ ಅವಿವೇಕಿತನಕ್ಕೆ ನಾಚುಕೆಯಾಗುತ್ತಿದೆ. ನನ್ನಂಥ ಕವಿಗಳಿಂದ ಜನರು ಹರ್ಷಿಸಬಹುದು. ನಿಮ್ಮಂಥ ಕವಿಗಳಿಂದ ಜನರು ಮೇಲ್ಮಟ್ಟಕ್ಕೇರುತ್ತಾರೆ. ಮನರಂಜನೆ ನೀಡುವುದಷ್ಟೇ ಸಾಹಿತ್ಯದ ಗುರಿಯಲ್ಲ; ಮನೋವಿಕಾಸಕ್ಕೆ ಅದು ಕಾರಣವಾಗಬೇಕು. ಮನುಷ್ಯನ ಮನಸ್ಸನ್ನು ಮಾರ್ಧವಗೊಳಿಸಿ ಮೇಲ್ಮಟ್ಟಕ್ಕೆ ಕರೆದೊಯ್ಯುವುದೇ ನಿಜವಾದ ಸಾಹಿತ್ಯ. ನಿಮ್ಮಿಂದ ಈ ವಿಷಯ ಗ್ರಹಿಸಿದ್ದಕ್ಕಾಗಿ ನನ್ನ ಸೋಲುಪತ್ರವನ್ನು ಕೊಡುತ್ತೇನೆ" ಎಂದು ಕವಿಗಳು ನುಡಿದು ವಿಜಯದ ಸಂಕೇತವೆಂದು ತಾವು ಭಾವಿಸಿದ್ದ ತಮ್ಮ ಚಿನ್ನದ ಕಡಗವನ್ನು ತೆಗೆದು ಭಾಗಣ್ಣನ ಮುಂದೆ ಇಟ್ಟು ನಮಸ್ಕರಿಸಿದರು.

ಭಾಗಣ್ಣ ಅವರಿಗೆ ಪ್ರತಿ ನಮಸ್ಕರಿಸಿ ವಿನೀತನಾಗಿ ನುಡಿದ.

"ನನಗೇಕೆ ನಿಮ್ಮ ಸೋಲುಪತ್ರ? ಜಯಪತ್ರ ಸಂಗ್ರಹದ ಹುಚ್ಚು ನನ್ನನ್ನು ಎಂದೂ ಪೀಡಿಸದಿರಲಿ. ಈ ಚಿನ್ನದ ಕಡಗದ ಸಂಕೋಲೆ ಎಂದೂ ನನ್ನನ್ನು ಬಂಧಿಸದಿರಲಿ. ಕಾವ್ಯೋತ್ಪತ್ತಿಯ ಪ್ರತಿಭೆಯನ್ನು ಪರಮಾತ್ಮ ನಿಮಗೆ ನೀಡಿದ್ದಾನೆ. ಅದನ್ನು ಪರಮಾತ್ಮನ ಸೇವೆಗೇ ಮೀಸಲಿಡಿ. ಪರಮಾತ್ಮ ಮೆಚ್ಚುವ ಕಾರ್ಯದಲ್ಲಿಯೇ ನಿಮ್ಮ ಶಕ್ತಿ ವಿನಿಯೋಗವಾಗಲಿ. ಹರಿಗುರುಗಳು ನಿಮ್ಮನ್ನು ಅನುಗ್ರಹಿಸಲಿ" ಎಂದು ಹರಸಿ ಸೀನಣ್ಣನನ್ನು ಮನೆಗೆ ಕಳಿಸಿ ನಾಣ್ಯ ತುಂಬಿದ ಚೀಲವನ್ನು ತರಿಸಿದ. ತನ್ನ ಮುಂದೆ ಇದ್ದ ಚಿನ್ನದಕಡಗವನ್ನೂ ಅದರಲ್ಲಿಟ್ಟು ಸಾರ್ವಜನಿಕರೆದುರಿಗೆ ಕವಿಗಳಿಗೆ ನೀಡಿ "ತಾಯಿ ಭಾರತಿ ನಿಮಗೆ ಅನುಗ್ರಹಿಸಿದ್ದಾಳೆ. ಅಲ್ಲಿಗೇ ನಿಲ್ಲಬೇಡಿ, ಭಾರತೀರಮಣನ ಕೃಪೆ ಗಳಿಸಿ, ಆತ ಜಗದಂಬಾ ರಮಣನ ದರ್ಶನ ದೊರಕಿಸುತ್ತಾನೆ. ಶುಭವಾಗಲಿ ನಿಮಗೆ" ಎಂದು ನುಡಿದ.

ಕವಿಗಳ ಹಿಂದೆ ಬಂದಿದ್ದ ಕೊಂಬು ಕಹಳೆ ಡೊಳ್ಳುಗಳು ಮತ್ತೊಮ್ಮೆ ಮೊಳಗಿದವು.

ಕವಿಗಳ ಕಾವ್ಯ ವಿಜಯಕ್ಕಾಗಿ ಅಲ್ಲ. ಭಾಗಣ್ಣನ ತತ್ವಸತ್ಯತೆಗೆ!

ವಿವಿಧ ವಾದ್ಯಗಳ ಅಬ್ಬರದಲ್ಲಿ ನೆರೆದಿದ್ದ ಜನ ಭಾಗಣ್ಣನ ಸೂಚನೆಯಂತೆ "ಸರ್ವೋತ್ತಮ ಗೋವಿಂದಾ ಗೋವಿಂದ" ಎಂದು ಘೋಷಿಸಿದರು. ಕವಿಗಳೂ ಜನಗಳ ಧ್ವನಿಯಲ್ಲಿ ತಮ್ಮ ಧ್ವನಿಯನ್ನು ಸೇರಿಸಿದರು.

***

ಭಾಗಣ್ಣನು ತ್ರಿಲಿಂಗದೇಶದ ದೊಡ್ಡ ಕವಿಯನ್ನು ಸೋಲಿಸಿ ಕಳಿಸಿದ್ದರಿಂದ ಇಡೀ ಗದ್ವಾಲ ರಾಜ್ಯವೇ ಆನಂದಪಟ್ಟಿತು. ತಮ್ಮ ಸಂಸ್ಥಾನದ ಕೀರ್ತಿಯನ್ನು ಹೆಚ್ಚಿಸಿದ್ದರಿಂದ ರಾಜಾರಾಮ ಭೂಪಾಲರಿಗಂತೂ ಮಹದಾನಂದ.

ಕುಸ್ತಿ ಪೈಲ್ವಾನರುಗಳು ವಿಜಯಿಗಳಾದರೆ ಬೆಳ್ಳಿಯ ಗದೆಯನ್ನು ಸಾಕಷ್ಟು ಧನದೊಂದಿಗೆ ನೀಡುವುದು ಸಂಸ್ಥಾನದ ಸಂಪ್ರದಾಯ. ವಿವಿಧ ಕಲಾಮಂಡಿತರಿಗೆ ಚಿನ್ನದ ಪದಕದೊಂದಿಗೆ ಧನ ನೀಡಿ ಸತ್ಕರಿಸುತ್ತಿದ್ದುದು ಕಾಲದ ಪದ್ಧತಿ.

ದೊಡ್ಡ ದೊಡ್ಡ ಸಾಹಿತ್ಯ ಕೃತಿ ರಚಿಸುತ್ತಿದ್ದ ಕವಿಗಳಿಗಂತೂ ರಾಜಸ್ಥಾನದಲ್ಲಿ ವಿಶೇಷ ಮನ್ನಣೆ. ವಿಜಯನಗರ ಸಾಮ್ರಾಜ್ಯದಲ್ಲಿ ಅಲ್ಲಸಾನಿ ಪೆದ್ದನ್ನ ಕವಿಯನ್ನು ಪಲ್ಲಕ್ಕಿಯಲ್ಲಿ ಕೂಡಿಸಿ ಶ್ರೀ ಕೃಷ್ಣದೇವರಾಯ ಮಹಾರಾಯರೇ ಅದನ್ನು ಹೊತ್ತಿದ್ದರೆಂಬುದನ್ನು ಶ್ರೀ ರಾಜಾರಾಮ ಭೂಪಾಲರು ಹಲವಾರು ಸಲ ಕೇಳಿದ್ದರು.

ಯಾವ ರಾಜ್ಯದಲ್ಲಿ ಸಾಹಿತಿಗಳಿಗೆ ಮನ್ನಣೆಯಿಲ್ಲವೋ, ಕಲಾವಿದರಿಗೆ ಉತ್ತೇಜನವಿಲ್ಲವೋ, ಆ ರಾಜ್ಯ ಸ್ಮಶಾನ ಸದೃಶ್ಯ ಸಂಸ್ಕೃತಿ ರಾಜ್ಯವೆಂದು ಜನರು ಭಾವಿಸುತ್ತಿದ್ದರು.

ಇದೆಲ್ಲವನ್ನು ಕೇಳಿ ಪಾಲಿಸಿಕೊಂಡು ಬಂದಿದ್ದ ಗದ್ವಾಲದ ಮಹಾರಾಜರು ಭಾಗಣ್ಣನು ವಿಜಯಿಯಾಗಿ ಸಂಸ್ಥಾನದ ಕೀರ್ತಿಯನ್ನು ಅಧಿಕಗೊಳಿಸಿದ್ದನ್ನು ತಿಳಿದು ಆನೆ ಕುದುರೆ ರಥ ಮೊದಲಾದವುಗಳನ್ನು ಸಮರ್ಪಿಸಬೇಕೆಂದು ತಾವೇ ಸ್ವತಃ ಉತ್ತನೂರಿಗೆ ದಯಮಾಡಿಸಿದರು.

"ಭಾಗಣ್ಣನವರೇ ಶ್ರೀ ಕೃಷ್ಣದೇವರಾಯರ ಆಸ್ಥಾನದಲ್ಲಿ ಎಂಟುಜನ ಕವಿಗಳು ಯಾವಾಗಲೂ ಆಸೀನರಾಗಿರುತ್ತಿದ್ದರಂತೆ. ವಿಕ್ರಮಾದಿತ್ಯನ ರಾಜ್ಯಭಾರದಲ್ಲಿ ಕವಿಗಳಿಗಿದ್ದ ಪ್ರಾಶಸ್ತ್ಯವನ್ನು ನೀವು ಕೇಳಿರಲಿಕ್ಕೆ ಸಾಕು. ನಮ್ಮ ಹಿರಿಯರ ಪುಣ್ಯ ಪ್ರಭಾವವೋ ಅಥವಾ ರಾಜ್ಯಪ್ರಜೆಗಳ ಪುಣ್ಯದ ಲಾಭವೋ ಈ ರಾಜ್ಯದಲ್ಲಿ ನೀವಿದ್ದೀರಿ. ಈ ಶತಮಾನದ ಕವಿಲೋಕದಲ್ಲಿ ನೀವು ಧ್ರುವ ತಾರೆಯಂತೆ

ಶೋಭಿಸುತ್ತಿದ್ದೀರಿ. ಕವಿಗಳಿಗೆ ಎಲ್ಲಿದ್ದರೂ ಮನ್ನಣೆಯೇ. ಆದರೆ ರಾಜರಿಗೆ ಮಾತ್ರ ಕವಿ ಸಾಹಿತಿಗಳಿಂದಲೇ, ಶಾಶ್ವತ ಕೀರ್ತಿ. ನಮ್ಮ ಹೆಸರು ಶಾಶ್ವತವಾಗಿರಬೇಕಾದರೆ ನೀವು ನಮ್ಮ ಆಸ್ಥಾನದಲ್ಲಿ ಸೇರಿ ನಮ್ಮ ಕೀರ್ತಿಯನ್ನು ಹೆಚ್ಚಿಸಬೇಕು" ಎಂದು ಮಹಾರಾಜರು ವಿನಂತಿಸಿದಾಗ ಭಾಗಣ್ಣ ಮುಗುಳ್ನಕ್ಕು ನುಡಿದ.

"ಶ್ರೀ ಕೃಷ್ಣದೇವರಾಯನ ಆಸ್ಥಾನದಲ್ಲಿ ಅಷ್ಟದಿಗ್ಗಜ ಕವಿಗಳು ಇದ್ದ ರೆಂಬುದೇನೋ ಸತ್ಯ. ಆದರೆ ಅವರ ಕಾಲದಲ್ಲಿ ಅಷ್ಟೇ ಹೆಸರು ಗಳಿಸಿ ಅವರಿ ಗಿಂತಲೂ ದೊಡ್ಡ ಕವಿಗಳೆನಿಸಿದ್ದ ಪುರಂದರದಾಸರು, ಕನಕದಾಸರು ಬೇಲೂರು ವೈಕುಂಠದಾಸರು ಇವರಾರೂ ಆಸ್ಥಾನದಲ್ಲಿ ಸೇರಿರಲಿಲ್ಲವೆಂಬುದನ್ನು ಮಹಾರಾಜರು ಮರೆಯಬಾರದು. ಅವರು ಆಸ್ಥಾನ ಕವಿಗಳಲ್ಲಿ ಸೇರದಿದ್ದ ಮಾತ್ರಕ್ಕೆ ಶ್ರೀ ಕೃಷ್ಣದೇವ ರಾಯರ ಕೀರ್ತಿಗೇನೂ ಅದರಿಂದ ಕಳಂಕ ಬರಲಿಲ್ಲ. ಧರ್ಮಪ್ರಸಾರದಲ್ಲಿ ನಿರತರಾದ ಅವರ ಕಾರ್ಯಕ್ಕೆ ಭೂಪಾಲರು ಸಹಾಯಕರಾಗಿ ನಿಂತರಾಗಲೀ ಅವರು ಕ್ರಮಿಸುವ ಮಾರ್ಗಕ್ಕೆ ಅಡ್ಡಿ ಮಾಡಲಿಲ್ಲ. ಅವರಿಂದ ಶ್ರೀ ಕೃಷ್ಣದೇವರಾಯರ ಕೀರ್ತಿ ಇನ್ನೂ ಅಧಿಕಗೊಂಡಿತು. ಹಾಗೆಯೇ ನನ್ನನ್ನು ಆಸ್ಥಾನದ ಪಂಜರದಲ್ಲಿ ಇರುಕಿಸಲು ಮಹಾರಾಜರು ಪ್ರಯತ್ನಿಸಬಾರದು. ರಾಜಸ್ಥಾನದಲ್ಲಿ ಇರುವ ಸರ್ವ ರಿಗೂ ಸಾಹಿತ್ಯ ಸವಿಯುವ ಹಾಗೂ ಧರ್ಮಸೂಕ್ಷ್ಮವನ್ನು ತಿಳಿಯುವ ಅವಕಾಶಗಳು ಯಥೇಚ್ಛವಾಗಿ ಸಿಕ್ಕುತ್ತವೆ. ಆದರೆ ಗ್ರಾಮಾಂತರಗಳಲ್ಲಿ ಅಥವಾ ಸಮಾಜದ ಕೆಳಸ್ತರದಲ್ಲಿರುವ ಜನಗಳನ್ನು ಬೌದ್ಧಿಕವಾಗಿ ಮೇಲೆತ್ತುವ ಕಾಯಕ ಇನ್ನು ಮುಂದೆ ನಡೆಯಬೇಕಾಗಿದೆ. ಆರ್ಥಿಕವಾಗಿ ಅವರನ್ನು ಮೇಲೆತ್ತುವ ಕಾರ್ಯ ಆಡಳಿತದವ ರಿಂದಾಗಬೇಕು. ಅದೇ ವೇಳೆಯಲ್ಲಿ ಬೌದ್ಧಿಕವಾಗಿ ಅವರನ್ನು ಮೇಲೆತ್ತಲು ಕವಿಗಳು ಸಾಹಿತಿಗಳು ಶ್ರಮಿಸಬೇಕು" ಎಂದು ಭಾಗಣ್ಣ ಮಹಾರಾಜರಿಗೆ ವಿವರಿಸಿ "ಕವಿ ಸಾಹಿತಿಗಳು ನಾಲ್ಕು ಗೋಡೆಯ ಮಧ್ಯ ಉನ್ನತಾಸನದಲ್ಲಿ ಕುಳಿತಿರಬಾರದು. ಜನಸಂಪರ್ಕದಿಂದ ದೂರವಿರುವ ಕವಿಗಳು ಅವರ ಬೇಕು ಬೇಡಗಳನ್ನು ಅರಿಯಲಾರರು. ರಚನೆಗಳು ಏಕಾಂತದಲ್ಲಿಯೇ ಆಗಬೇಕಾದರೂ ರಚನಾ ವಿಷಯ ಸಾಮಗ್ರಿ ಸಮೂಹದಿಂದಲೇ ಸಾಧಿಸಿಕೊಳ್ಳಬೇಕು. ಆ ರೀತಿಯಾಗಿ ನೋಡಿದಾಗ ನಾನು ವಿಫಲನಾಗಿದ್ದೇನೇನೋ ಎಂಬ ಭಾವನೆ ಬಲಿಯುತ್ತಿದೆ. ಉತ್ತನೂರು ಸುತ್ತಮುತ್ತ ಬಿಟ್ಟು ನಾನೆಲ್ಲೂ ಹೊರಗೆ ಹೋಗಿಲ್ಲ. ಈ ಸಂದರ್ಭದಲ್ಲಿ ದೇಶ ಸಂಚಾರ ಅವಶ್ಯವೆಂದು ಯೋಚಿಸುತ್ತಿದ್ದೇನೆ. ನನ್ನ ತಾಯಿಯ ನಿಧನದಿಂದಾದ ಆಘಾತದಿಂದ ಚೇತರಿಸಿಕೊಳ್ಳುವುದೂ ಅವಶ್ಯವಿದೆ. ಈ ಕಾರಣಕ್ಕಾಗಿ ಶ್ರಾದ್ಧಾದಿ ಕರ್ಮಗಳನ್ನು ನಿರ್ವಹಿಸಲು ಕಾಶಿ ಹಾಗೂ ಗಯಾ ಯಾತ್ರೆ ಮಾಡಿಬರಬೇಕೆಂಬ

ಮನಸ್ಸಾಗಿದೆ. ನನ್ನ ಜೀವನವೆಲ್ಲಾ ನಿಮ್ಮ ರಾಜ್ಯದಲ್ಲಿಯೇ ಕಳೆದುದಾಗಿದೆ' ಎಂದು ಹೇಳಿದ ಭಾಗಣ್ಣ.

'ನನ್ನ ಜೀವನವೆಲ್ಲಾ ಈ ರಾಜ್ಯದಲ್ಲಿಯೇ ಕಳೆದುದಾಗಿದೆ' ಎಂಬ ಕಡೆಯ ವಾಕ್ಯ ರಾಜಾರಾಮ ಭೂಪಾಲರನ್ನು ತಬ್ಬಿಬ್ಬುಗೊಳಿಸಿತು. ಈ ರಾಜ್ಯವನ್ನು ತೊರೆಯುವ ಮುನ್ಸೂಚನೆಯೇನೋ ಎಂದು ಅವರು ಹೌಹಾರಿದರು.

ಮಹಾರಾಜರ ಮುಖ ಕವಳಿಕೆಯನ್ನು ಗಮನಿಸಿ ಭಾಗಣ್ಣ ವಿಷಯ ವಿವರಿಸಿದ.

"ಕಾಶಿಯಾತ್ರೆಗೆ ಹೋಗಲು ನಿಶ್ಚಯಿಸಿರುವೆನಾದರೂ ಅಲ್ಲಿಯೇ ಇರಲು ಇಚ್ಛಿಸಿಲ್ಲ ಮಹಾರಾಜರೇ. ನಾನು ಯಾವಾಗಲೂ ನಿಮ್ಮ ರಾಜ್ಯದಲ್ಲಿಯೇ ಇರುತ್ತೇನೆ. ಉತ್ತನೂರಿನ ಶ್ರೀ ವೆಂಕಟೇಶನನ್ನು ಬಿಟ್ಟು ನಾನು ಹೆಚ್ಚು ಕಾಲ ಇರಲಾರೆ." ಎಂದು ಭಾಗಣ್ಣ ಸಮಾಧಾನಪಡಿಸಿದ.

"ಆಸ್ಥಾನದಲ್ಲಿ ಇರಲು ಒಪ್ಪಿಕೊಳ್ಳದಿದ್ದರೂ ಆಸ್ಥಾನದ ಪರವಾಗಿ ನೀಡುವ ಆನೆ ಕುದುರೆ ರಥಾದಿಗಳನ್ನು ಸ್ವೀಕರಿಸಿ ನಮ್ಮ ಕೀರ್ತಿಯನ್ನು ಕಾಪಾಡಬೇಕು. ಕವಿಗಳಿಗೆ, ಸಮಾಜದ ಹಿತಚಿಂತಕರಿಗೆ ಈ ರಾಜ್ಯದಲ್ಲಿ ಮನ್ನಣೆಯಿಲ್ಲ ಎಂಬ ಅಪಕೀರ್ತಿ ಬಾರದಂತೆ ತಾವು ಇವನ್ನು ಸ್ವೀಕರಿಸಿ ನಮ್ಮನ್ನು ಉದ್ಧರಿಸಬೇಕು" ಎಂದು ಮಹಾರಾಜರು ಪ್ರಾರ್ಥಿಸಿದರು.

"ಮೂಗಿಗೆ ತಕ್ಕಷ್ಟೇ ಮೂಗುತಿ ಇರಬೇಕು ಮಹಾರಾಜರೆ. ಇದೆಯೆಂದ ಮಾತ್ರಕ್ಕೆ ಮೂರು ಆನೆ ತೂಕದ ಚಿನ್ನವನ್ನು ಮೂಗಿಗೆ ಕಟ್ಟಲು ಬರುವುದಿಲ್ಲ. ಬ್ರಾಹ್ಮಣರಾದ ನಾವು ಹೆಚ್ಚು ಹಣವನ್ನು ಬಯಸಬಾರದು. ಹಣ ಹೆಚ್ಚು ಇದೆಯೆಂದು ಅಯೋಗ್ಯರಿಗೆ ಅಸಮರ್ಥರಿಗೆ ನೀಡಲು ಬರುವುದಿಲ್ಲ. ನಮ್ಮಲ್ಲಿ ಹೆಚ್ಚು ಸೇರುವ ಹಣ ಸಂತೋಷಕ್ಕಿಂತ ಹೆಚ್ಚು ದುಃಖವನ್ನೇ ನೀಡುತ್ತದೆ. ಯೋಗ್ಯತೆ ಮೀರಿ ವೈಭವ ಜೀವನ ನಿರ್ವಹಿಸುವುದು ಸಮಾಜದ ಒಂದು ಮುಖ್ಯ ಪಾಪ ಕಾರ್ಯ. ಮೂಲೆಯ ಹಳ್ಳಿಯೊಂದರಲ್ಲಿ ಜೀವನ ನಿರ್ವಹಿಸುವ ನಮ್ಮಂಥವರಿಗೆ ಆನೆ ಕುದುರೆ ರಥಾದಿಗಳಿಂದ ಆಗಬೇಕಾದುದಾದರೂ ಏನು? ಅವು ರಾಜ್ಯ ರಕ್ಷಣೆಗೆ ಬೇಕಾದ ಸಾಧನಗಳು. ಬೇರೆಯವರಿಗೆ ಬೇಕಾದ ವಸ್ತುಗಳನ್ನು ತನ್ನಲ್ಲಿ ಅನಾವಶ್ಯಕ ವಾಗಿ ಇಟ್ಟುಕೊಳ್ಳುವುದೂ ಒಂದು ಪಾಪಕಾರ್ಯ. ಆದ್ದರಿಂದ ಅವುಗಳನ್ನು ವಾಪಸ್ ಒಯ್ದು ನನ್ನನ್ನು ನನ್ನ ಸಾಧನೆಗೆ ಬಿಡಿ" ಎಂದು ಭಾಗಣ್ಣ ವಿನಂತಿಸಿದ.

ತಂದ ಬಹುಮಾನ ಕಾಣಿಕೆಗಳನ್ನು ಸ್ವೀಕರಿಸದಿರುವುದಕ್ಕೆ ಮಹಾರಾಜರಿಗೆ ಖೇದವೆನಿಸಿತು.

ಯಾತ್ರೆಗೆ ಹೊರಡುತ್ತಿರುವುದರಿಂದ ಪ್ರಯಾಣಕ್ಕೆ ಅನುಕೂಲವಾಗಲು ಕುದುರೆಗಳನ್ನಾದರೂ ಸ್ವೀಕರಿಸಬೇಕೆಂಬ ಮಹಾರಾಜರು ಮಾಡಿದ ಒತ್ತಾಯದಿಂದ ತಪ್ಪಿಸಿಕೊಳ್ಳಲು ಭಾಗಣ್ಣನಿಗೆ ಸಾಧ್ಯವಾಗಲಿಲ್ಲ.

ಯಾತ್ರೆಯಲ್ಲಿ ಸಿಕ್ಕುವ ಗ್ರಂಥಗಳನ್ನು ಹೊತ್ತು ತರಲು ಸಾಧ್ಯವಾಗುತ್ತದೆ ಜೊತೆಗೆ ಪ್ರಯಾಣ ವೇಗವಾಗಿ ಸಾಗುತ್ತದೆ ಎಂಬ ಕಾರಣಕ್ಕಾಗಿ ತನಗೂ ತನ್ನ ಇಬ್ಬರು ತಮ್ಮಂದಿರಿಗೂ ಕುದುರೆಗಳನ್ನು ಸ್ವೀಕರಿಸಲು ಒಪ್ಪಿಕೊಂಡ.

ರಂಗಣ್ಣ ಇನ್ನೂ ಹುಡುಗನಾಗಿರುವುದರಿಂದ ಅವನಿಗೆ ಕುದುರೆ ನೀಡುವುದು ಬೇಡವೆಂಬ ಭಾಗಣ್ಣನ ವಿನಂತಿಯನ್ನು ನಿರಾಕರಿಸಲು ಮಹಾರಾಜರಿಗೂ ಸಾಧ್ಯವಾಗಲಿಲ್ಲ.

***

ಭಾಗಣ್ಣ ಮಹಾರಾಜರಿಗೆ ತಿಳಿಸಿದಂತೆ ಮರುದಿನವೇ ಕಾಶಿಯಾತ್ರೆಗೆ ಪ್ರಾರಂಭಿಸಿದ. ಜೊತೆಯಲ್ಲಿ ಸೀನಣ್ಣ ಹಾಗೂ ದಾಸಣ್ಣನವರು ಬರಬಹುದೆಂದೂ ಉತ್ತನೂರಿನಲ್ಲಿ ರಂಗಣ್ಣ ಇದ್ದು ಶ್ರೀ ವೆಂಕಟೇಶನ ಪೂಜಾದಿ ಕಾರ್ಯಗಳನ್ನು ನಿರ್ವಹಿಸಿಕೊಂಡು ಹೋಗತಕ್ಕದ್ದೆಂದೂ ನಿರ್ಧರಿಸಲಾಯಿತು. ಇಬ್ಬರು ತಮ್ಮಂದಿರು ಅಣ್ಣನನ್ನು ಯಾತ್ರೆಯಲ್ಲಿ ಅನುಸರಿಸಿದರು.

ಕುದುರೆಯ ಮೇಲೆ ಪ್ರಯಾಣ. ತಂಗಿದ ತಾಣಗಳಲ್ಲಿ ತನ್ನ ಜ್ಯೋತಿಷ್ಯ ಶಾಸ್ತ್ರದ ಕಡತಗಳನ್ನು ಭಾಗಣ್ಣ ತೆಗೆದನೆಂದರೆ ಅದು ಹೇಗೋ ಜನರಿಗೆ ಗೊತ್ತಾಗಿ ಹೋಗುತ್ತಿತ್ತು. ತಂಡ ತಂಡ ಜನ ಅವರನ್ನು ಮುತ್ತಿ ತಮ್ಮ ಭವಿಷ್ಯದ ಬಗ್ಗೆ ತಿಳಿದುಕೊಳ್ಳುತ್ತಿದ್ದರು. ದಕ್ಷಿಣೆ ಕುಪ್ಪೆಕುಪ್ಪೆಯಾಗಿ ಸುರಿಯುತ್ತಿತ್ತು. ಸಂಗ್ರಹ ವಾಗಿರುವ ಹಣವನ್ನು ವೆಚ್ಚಿಸಿ ಯಾತ್ರೆ ಮಾಡಿ ಬರೋಣವೆಂದು ಹೊರಟ ಭಾಗಣ್ಣನಿಗೆ ಅಲ್ಲಲ್ಲಿಯೂ ಹಣ ಸಂಗ್ರಹವಾಗತೊಡಗಿತು.

ಪ್ರತಿ ಯಾತ್ರಾ ಕೇಂದ್ರದಲ್ಲಿಯೂ ಭಾಗಣ್ಣನಿಂದ ವಿಶೇಷಪೂಜಾದಿಗಳು ನಡೆಯುತ್ತಿದ್ದವು. ನೆರೆದಿದ್ದ ಜನರಿಗೆಲ್ಲಾ ಆತ ಕೈ ತುಂಬಾ ದಕ್ಷಿಣೆ ನೀಡುತ್ತಿದ್ದ.

ಅಣ್ಣನ ರೀತಿ ಕಂಡು ತಮ್ಮಂದಿರಿಗೆ ಆಶ್ಚರ್ಯ. ಬೇಡವೆಂದು ವೆಚ್ಚಿಸಿದರೆ ಇನ್ನೂ ಹೆಚ್ಚು ಸಂಗ್ರಹವಾಗುತ್ತಿದ್ದ ಹಣದ ರೀತಿ ಕಂಡು ಸೀನಣ್ಣ ದಾಸಣ್ಣರಿಗೆ ಅದೊಂದು ಹೊಳೆಯಲಾರದ ರಹಸ್ಯ.

ಒಮ್ಮೆ ಅಣ್ಣನನ್ನು ಈ ಬಗ್ಗೆ ಪ್ರಶ್ನಿಸಿದರು. "ಅಣ್ಣಾ, ಹಣ ಬರುವಾಗ ಮುಖ ಮುದುಡಿಕೊಳ್ಳುತ್ತೀರಿ. ಖರ್ಚು ಮಾಡುವಾಗ ಅದು ಹರ್ಷದಿಂದ ಅರಳುತ್ತದೆ. ಹೀಗಿರುವಾಗ ನೀವು ಇಳಿದ ಜಾಗದಲ್ಲೆಲ್ಲಾ ಜ್ಯೋತಿಷ್ಯಶಾಸ್ತ್ರದ ಗ್ರಂಥಗಳನ್ನು ಏಕೆ ಹೊರಗೆ ತೆಗೆಯುತ್ತೀರಿ?ಅನಾವಶ್ಯಕವಾಗಿ ವೃತ್ತಿ ಮುಂದುವರಿಸುತ್ತೀರೇಕೆ?"

ತಮ್ಮಂದಿರ ಪ್ರಶ್ನೆಗೆ ಭಾಗಣ್ಣ ನಿಧಾನವಾಗಿ ಉತ್ತರಿಸಿದ.

"ಹೆಚ್ಚು ಹಣ ನನಗೆ ಬೇಡ. ಆದ್ದರಿಂದ ಅದನ್ನು ಧಾರಾಳವಾಗಿ ವೆಚ್ಚಿಸುತ್ತಿದ್ದೇನೆ. ಈ ಹಣದ ಸ್ವಭಾವವೇ ಒಂದು ವಿಚಿತ್ರ. ಬೇಕು ಬೇಕು ಎಂದು ಪರಿತಪಿಸುವವರಿಗೆ ಅದು ದೂರ ದೂರ ಹೋಗುತ್ತದೆ. ಕೆಲವರು ಹಣಕ್ಕಾಗಿ ಹಗಲಿರಳೂ ಶ್ರಮಿಸುತ್ತಾರೆ. ಬೆವರಿಳಿಸಿ ದುಡಿಯುತ್ತಾರೆ. ಆದರೆ ಅವರ ಬೆವರು ಆರುವ ಮೊದಲೇ ಗಳಿಸಿದ ಹಣ ಖರ್ಚಾಗಿರುತ್ತದೆ. ಕೆಲವರಿಗೆ ಹೆಚ್ಚು ಶ್ರಮ ವಿಲ್ಲದೆ ಹಣ ಸೇರುತ್ತದೆ. ಒಮ್ಮೆ ಸೇರಿದ ಧನ ಹೆಚ್ಚು ಹೆಚ್ಚುತ್ತಲೇ ಹೋಗುತ್ತದೆ. ಆದ್ದರಿಂದ ದುಡಿಮೆಗೂ ಹಣಕ್ಕೂ ಅದೆಷ್ಟರ ಮಟ್ಟಿಗೆ ಸಂಬಂಧ ಎಂಬ ರಹಸ್ಯ ನನಗಿನ್ನೂ ಹೊಳೆಯುತ್ತಿಲ್ಲ. ಆದರೆ ದುಡಿಮೆ ಮಾತ್ರ ದೇವನು ಮಾನವನಿಗೆ ವಿಧಿಸಿದ ಒಂದು ಹೊಣೆ. ಅದು ಬೌದ್ಧಿಕವಾಗಿರಬಹುದು ಇಲ್ಲವೇ ಶಾರೀರಕವಾಗಿ ಇರಬಹುದು. ದುಡಿಯವುದಷ್ಟೇ ಮಾನವನ ಕೆಲಸ. ಅದಕ್ಕೆ ಫಲವನ್ನು ಅವನು ನಿರೀಕ್ಷಿಸಬಾರದು. ಫಲಾಪೇಕ್ಷೆಯಿಲ್ಲದೆ ದುಡಿಯುವುದು ಒಂದು ಶ್ರೇಷ್ಠ ಯಜ್ಞ. ದೊರೆತದ್ದನ್ನು ಭೋಗಿಸುವುದು ಒಂದು ಕರ್ಮ. ಭಗವಂತನು ನನಗೆ ಅದೇಕೋ ಈ ಜ್ಯೋತಿಷ್ಯಶಾಸ್ತ್ರದಲ್ಲಿ ಆಸಕ್ತಿ ಹುಟ್ಟಿಸಿದ. ಅದರಲ್ಲಿಯೇ ಮುಂದುವರೆಯಲು ಅವನ ಸಂಕಲ್ಪವಿರಬೇಕು. ಆದ್ದರಿಂದ ನಾನು ನುಡಿದದ್ದು ಸತ್ಯವಾಗುತ್ತಿದೆ. ಮುಂದೆ ಕುಳಿತಿರುವವರ ಮುಂದಿನ ಭವಿಷ್ಯ ಕಣ್ಣ ಮುಂದೆ ನಿಂತಂತಾಗುತ್ತದೆ. ದೇವರು ಕೊಟ್ಟ ಈ ಶಕ್ತಿಯನ್ನು ಜನರಿಗಾಗಿ ವಿನಿಯೋಗಿಸುತ್ತೇನೆ. ಅವರಿಗೆ ಸೂಕ್ತ ದರ್ಶನ ನೀಡುತ್ತೇನೆ. ಜನಾರ್ಧನನನ್ನು ಕಾಣಲು ನಾವು ಯಾತ್ರೆ ಮಾಡುತ್ತಿದ್ದೇವೆ. ಜನರಲ್ಲಿಯೂ ಜನಾರ್ಧನನಿದ್ದಾನಷ್ಟೆ? ಅವರ ಸೇವೆಯೆಂದು ನನ್ನ ವೃತ್ತಿ ಪ್ರಾರಂಭಿಸುತ್ತೇನೆ. ಸೇವೆಯೆಂದು ನಾನು ವೃತ್ತಿನಿರತನಾದಾಗ ಧನ ತಾನೇ ತಾನಾಗಿ ಸೇರುತ್ತಿದೆ. ಧನ ನೀಡಿರೆಂದು ನಾನು ಯಾರನ್ನೂ ಕೇಳಿಲ್ಲ. ಹಾಗಿದ್ದರೂ ಸಂಗ್ರಹವಾಗುತ್ತಿರುವ ಧನಕ್ಕೆ ನಾನೇನು ಮಾಡಲಿ?"

ಭಾಗಣ್ಣನ ವಿವರಣೆ ಸೀನಣ್ಣನಿಗೆ ಸಮಾಧಾನ ತಂದಿತಾದರೂ ಮತ್ತೊಂದು ಸಂಶಯ ಅವನಲ್ಲಿ ಸ್ಫುರಿಸಿತು. ಅದನ್ನು ಕೇಳಿಯೇ ಬಿಟ್ಟ.

"ಭವಿಷ್ಯ ಹೇಳುವುದು ಜನರಲ್ಲಿ ಅಜ್ಞಾನವನ್ನು ಹರಡಿದಂತಲ್ಲವೆ? ಸಮಾಜದಲ್ಲಿ ಮೂಢನಂಬಿಕೆಗಳನ್ನು ಹರಡಿದವರೆಂಬ ಅಪಖ್ಯಾತಿ ಮುಂದೆ ನಿಮಗೆ ಘಟಿಸುವುದಿಲ್ಲವೆ? ಮುಂದಿನ ಸಮಾಜ ನಿಮ್ಮನ್ನು ಮೂಢನಂಬಿಕೆಗಳ ವಾಹಕ ಎಂದು ಕರೆಯುವುದಿಲ್ಲವಷ್ಟೆ?"

ತಮ್ಮನ ಪ್ರಶ್ನೆಗೆ ಭಾಗಣ್ಣ ನಿಧಾನವಾಗಿ ಬಿಡಿಸಿ ಬಿಡಿಸಿ ಹೇಳಿದ.

"ಇಂದಿನ ಸಮಾಜ ಹೇಗಿದೆ ಎಂಬುದನ್ನು ತಿಳಿಯದ ಮುಂದಿನ ಸಮಾಜ ಇದನ್ನು ಆಕ್ಷೇಪಿಸಬಹುದು. ಸಾಮಾಜಿಕ ಮೌಲ್ಯಗಳು ಕೆಲವೊಮ್ಮೆ ಬದಲಾಗುತ್ತವೆ. ಅವುಗಳ ಅರಿವಿಲ್ಲದೆ ತಾವು ಕಂಡದ್ದಷ್ಟೇ ಸತ್ಯವೆಂದು, ತಮ್ಮ ಕಣ್ಣಿನ ಅಳತೆಗೆ ಕಾಣುವಷ್ಟು ಪ್ರದೇಶ ಮಾತ್ರ ಭೂಮಿಯೆಂದೂ ತಿಳಿಯುವುದು ಅವರಿಗಿರುವ ಮೂಢನಂಬಿಕೆ. ಅಂಥ ಮೂಢರಿಗಾಗಿ ನಾವು ತಲೆ ಕೆಡಿಸಿಕೊಳ್ಳಬೇಕಿಲ್ಲ. ಯಾವುದೇ ಒಬ್ಬ ವ್ಯಕ್ತಿಯನ್ನು ಅಥವಾ ಒಂದು ಘಟನೆಯನ್ನು ವಿಮರ್ಶಿಸುವಾಗ ಆ ಪ್ರದೇಶ, ಆಯಾಕಾಲ, ಜನಜೀವನ, ಸನ್ನಿವೇಶಗಳ ಮೇಲೆ ಅಳೆಯಬೇಕಾಗುತ್ತದೆ. ಸನ್ನಿವೇಶಕ್ಕೊಂದು ಉದಾಹರಣೆ ಕೊಡುವುದಾದರೆ ಯುದ್ಧದಲ್ಲಿ ಎದುರಾದವನನ್ನು ಇರಿಯುವುದು ಸೈನಿಕ ಧರ್ಮ. ಅದನ್ನು ಅವನು ಸಾಧಿಸಿದಾಗ ವೀರನೆಂದು ಪ್ರಶಂಸಿಸುತ್ತೇವೆ. ಯುದ್ಧಭೂಮಿಯಲ್ಲಿ ಅಲ್ಲದೆ ಬೇರೆಡೆ ಅದನ್ನು ಮಾಡಿದರೆ ಕೊಲೆ ಎಂದು ಪರಿಗಣಿಸಬೇಕಾಗುತ್ತದೆ. ಇರಿಯುವ ಕ್ರಿಯೆ ಒಂದೇ ಆದರೂ ಸನ್ನಿವೇಶ ಬೇರೆಯಾದ್ದರಿಂದ ಒಂದೆಡೆ ಸನ್ಮಾನಾರ್ಹವಾದದ್ದು ಇನ್ನೊಂದೆಡೆ ಶಿಕ್ಷಾರ್ಹವೆನಿಸುತ್ತದೆ. ಇದು ಸನ್ನಿವೇಶಕ್ಕನುಗುಣವಾಗಿ ಮೌಲ್ಯದ ಬದಲಾವಣೆಗೆ ಒಂದು ಉದಾಹರಣೆಯಾದರೆ ಕಾಲಕ್ಕನುಗುಣವಾಗಿಯೂ ಕೆಲವು ಬದಲಾಗುತ್ತವೆ. ಹೆಣ್ಣು ಸಂತಾನ ಹೆಚ್ಚಾದಾಗ ಬಹು ಪತ್ನಿತ್ವ ಜಾರಿಯಲ್ಲಿ ಬಂದಿತು. ಬರುಬರುತ್ತಾ ಸಂಖ್ಯೆಯಲ್ಲಿ ಸಮತೆ ಉಂಟಾದಾಗ ಏಕಪತ್ನಿ ವ್ರತ ಜಾರಿಗೆ ಬಂದಿತು. ಹಿಂದೆ ಬಹು ಪತ್ನಿತ್ವಕ್ಕೆ ಮನ್ನಣೆಯಿದ್ದರೆ ಈಗ ಅದು ಸಮಾಜ ವಂಚನೆ ಎಂದೆನಿಸುತ್ತದೆ. ಹಾಗೆಯೇ ಹಿಂದೆ ಹುಲಿ ಹೊಡೆದವರನ್ನು ಇಡೀ ರಾಜ್ಯವೆ ಗೌರವಿಸಿ ಸನ್ಮಾನಿಸುತ್ತಿತ್ತು. ಈಗ ಆಧುನಿಕ ಶಸ್ತ್ರ ವಿಜ್ಞಾನ ಬೆಳೆದಿದೆ. ಕೊಳವಿಯಲ್ಲಿ ಮದ್ದು ತುಂಬಿ ನಳಿಕೆಯನ್ನು ಮೀಂಟಿದರೆ ದೂರದಲ್ಲಿದ್ದ ಹುಲಿ ಸಾಯುವುದರಿಂದ ಮಾನವ ಸಾಹಸಕ್ಕೆ ಅವಕಾಶವೇ ಇಲ್ಲ. ಹುಲಿ ಹೊಡೆಯುವ ಕಾರ್ಯಕ್ಕೆ ಈಗ ಅಷ್ಟೇನೂ ಮನ್ನಣೆಯಿಲ್ಲ. ಮುಂದೆ ಈ ರೀತಿ ಪ್ರಾಣಿಗಳನ್ನು ಕೊಲ್ಲುತ್ತಾ ಹೋಗುವುದರಿಂದ ಪ್ರಕೃತಿಯ ಅಸಮತೆಗೆ ಕಾರಣವಾದೀತೆಂದು ಶಿಕ್ಷಿಸುವ ಕಾಲವೂ ಬಂದೀತು. ಒಂದು ಪ್ರದೇಶದಲ್ಲಿ ಬೆಳೆದ ಆಚಾರ ಇನ್ನೊಂದು ಪ್ರದೇಶಕ್ಕೆ ವಿರುದ್ಧವಾಗುವುದೂ ಉಂಟು."

ಸೀನಣ್ಣ ಅಣ್ಣನ ಮಾತನ್ನು ತಡೆದು ಮಧ್ಯದಲ್ಲಿಯೇ ಪ್ರಶ್ನಿಸಿದ.

"ಅದು ಸರಿಯಣ್ಣಾ. ನೀವು ಭವಿಷ್ಯದ ಬಗ್ಗೆ ನಿಖರವಾಗಿ ಸಾರಿದಾಗ ಅದು ಅವರನ್ನು ಕ್ರಿಯಾಹೀನರನ್ನಾಗಿ ಮಾಡಬಹುದು. ಅಥವಾ ಸುಳ್ಳಾಯಿತೆಂದು ಅವರು ಭಾವಿಸಿದರೆ ಮೂಢತೆ ಹರಡಿದ ಅಪರಾಧವಾಗುವುದಿಲ್ಲವೆ?"

"ಅದನ್ನು ವಿವರಿಸುತ್ತಿರುವಾಗಲೇ ನೀನು ಅಡ್ಡ ಬಂದೆ. 'ಸಾಮಾಜಿಕ ಮೌಲ್ಯಗಳು' ಎಂಬ ಪ್ರಶ್ನೆಗೆ ಉತ್ತರಿಸುತ್ತಿದ್ದೇನೆ. ಇಂದಿನ ಜನ ಜೀವನ ಹೇಗಿದೆ? ಎಲ್ಲೆಲ್ಲಿಯೂ ಸಣ್ಣಪುಟ್ಟ ಸಂಸ್ಥಾನಗಳು. ಅವರವರಲ್ಲಿ ಆಗಾಗ ಯುದ್ಧಗಳು ಬದುಕಿನಲ್ಲಿ ಭರವಸೆಯಿಲ್ಲ. ದುಡಿದದ್ದು ದಕ್ಕುತ್ತದೆ ಎಂಬ ನಂಬಿಕೆಯಿಲ್ಲ. ದಕ್ಕಿಸಿಕೊಳ್ಳುವುದಕ್ಕೆ ಮಾಡುವ ಎಲ್ಲಾ ಕ್ರಿಯೆಗಳೂ ಸರಿ ಎಂಬ ಭಾವನೆ ಹಬ್ಬುತ್ತಿದೆ. ಇವೆಲ್ಲವನ್ನು ನೋಡುತ್ತಾ ಅನ್ಯಾಯಕ್ಕೆ ಇಳಿಯುವಷ್ಟು ಮನಸ್ಸು ಗಟ್ಟಿಯಾಗಿಲ್ಲದವನು ತಾನೊಬ್ಬ ಅಸಮರ್ಥ ಎಂದು ಪರಿತಪಿಸುತ್ತಿದ್ದಾನೆ. ಭವಿಷ್ಯದ ಬಗ್ಗೆ ಭಯಗೊಂಡಿದ್ದಾನೆ. ನನಗೆ ಸಿಕ್ಕ ಜ್ಯೋತಿಷ್ಯ ಗ್ರಂಥಗಳಲ್ಲಿ ಜೀವನದಲ್ಲಿ ನಂಬಿಕೆ ಹುಟ್ಟಿಸುವ ಕರ್ಮಗಳ ಬಗ್ಗೆ ಸಾಕಷ್ಟು ಮಾರ್ಗಸೂಚಿಗಳಿವೆ. ಅವನ್ನೇ ಜನರಲ್ಲಿ ವಿವರಿಸುತ್ತಿದ್ದೇನೆ."

"'ಇವರು ಹೇಳುತ್ತಿದ್ದುದು ಸುಳ್ಳು' ಎಂದು ಮುಂದಿನ ಜನಾಂಗ ಆಪಾದಿಸಿದರೆ...?" ಸೀನಣ್ಣ ಮಾತಿನ ಮಧ್ಯ ಅಡ್ಡ ಪ್ರಶ್ನೆ ಹಾಕಿದ.

ಭಾಗಣ್ಣ ತಮ್ಮನ ಆತುರ ಗಮನಿಸಿ ಹೆಚ್ಚು ವಿವರಣೆಗೆ ಇಳಿಯದೆ ನೇರವಾಗಿ ಹಾಗೂ ಶೀಘ್ರದಲ್ಲಿ ಉತ್ತರಿಸಲು ಪ್ರಯತ್ನಿಸಿದ.

"ಇಂಥ ಗ್ರಂಥಗಳಲ್ಲಿ ಬಿಚ್ಚಿಟ್ಟಿರುವುದಕ್ಕಿಂತ ಮುಚ್ಚಿಟ್ಟಿರುವುದೇ ಅಧಿಕ. ಅವು ಗುಂಭವಾಗಿಯೇ ಕೆಲವು ವಿಷಯಗಳನ್ನು ಹೇಳುತ್ತವೆ. ಅವನ್ನು ಗ್ರಹಿಸಿಕೊಂಡು ಹೇಳುವವನು ಚತುರನಿರುತ್ತಾನೆಂಬ ನಂಬಿಕೆ ನಮ್ಮ ಶಾಸ್ತ್ರಕಾರರಿಗೆ. ಅಂಥ ಚತುರನ ಕೈಗೆ ಈ ಗ್ರಂಥಗಳು ಸಿಕ್ಕು ಈ ಅಮೂಲ್ಯ ವಿದ್ಯೆಯಿಂದ ಲೋಕಕಲ್ಯಾಣವಾಗಲೆಂದು ನಮ್ಮ ಶಾಸ್ತ್ರಕಾರರು ಅಪೇಕ್ಷಿಸಿದ್ದಾರೆ. ಲೋಕದ ಹಿತಚಿಂತನೆ ಇಲ್ಲದವನು ಅಥವಾ ವಿಶಾಲ ದೃಕ್ಪಥ ಹೊಂದಿಲ್ಲದವನಿಗೆ ಇಂಥ ಗ್ರಂಥಗಳು ಸಿಕ್ಕಬಾರದೆಂದೂ ಅವರು ಅಪೇಕ್ಷಿಸಿರಬೇಕು. ತಪಸ್ಸು, ಪರಹಿತಾಕಾಂಕ್ಷೆ, ಲೋಕಕಲ್ಯಾಣ ದೃಷ್ಟಿ ಇರುವವರಿಗೆ ಈ ವಿದ್ಯೆ ಒಲಿಯುತ್ತದೆ. ಅವನ್ನು ಬಿಟ್ಟು ಸ್ವಾರ್ಥಸಾಧನೆಗೆ ನಿಂತಾಗ ಈ ವಿದ್ಯೆ ಮಸಕು ಮಸಕಾಗಿ ಬುರುಡೆ ಶಾಸ್ತ್ರವಾಗಿ ಬಿಡುತ್ತದೆ. ಯಾವ

ಜನ್ಮದ ಪುಣ್ಯವೋ ನನಗೆ ಇವು ಸಿಕ್ಕಿವೆ. ಇವುಗಳಿಂದ ಜನರಿಗೆ ಉಪಯೋಗ ವಾಗುತ್ತಿದೆ. ಅನೇಕ ಯಂತ್ರಗಳು ಮಂತ್ರಗಳು ತಮ್ಮ ಕಾರ್ಯವನ್ನು ತಾವು ಮಾಡಿಯೇ ಮಾಡುತ್ತವೆ. ಅವು ತಮ್ಮ ಕೆಲಸ ಮಾಡಲು ಸಾಧಕನ ಸಿದ್ಧಿಯೂ ಬೇಕಾಗುತ್ತದೆ. ಅಷ್ಟೆಲ್ಲಾ ಏಕೆ ; ಮುಂದಿನ ಜನಾಂಗ ಈ ವೃತ್ತಿಯ ಬಗ್ಗೆ ಏನು ಯೋಚಿಸುತ್ತದೆ ಎಂಬ ಚಿಂತೆ ಬೇಡ ನಿನಗೆ. ಇಂದಿನ ಜನರು ಇದನ್ನು ನಂಬಿ ಜೀವನದಲ್ಲಿ ಸ್ಫೂರ್ತಿ ಪಡೆಯುತ್ತಿದ್ದಾರೆ. ಮುಂದೆ ಮುಂದೆ ಸುಳ್ಳು ಹೇಳುವವರೇ ಅಧಿಕಗೊಳ್ಳುವುದರಿಂದ ಇವೆಲ್ಲಾ ಮೂಢನಂಬಿಕೆ ಎಂದು ಗ್ರಹಿಸುವವರ ಬಗ್ಗೆ ನನಗೆ ಅನುಕಂಪವಿದೆ. ಅವರ ನಂಬಿಕೆಗಳನ್ನು ಅದಕ್ಕೂ ಮುಂದಿನವರು ಮೂಢತನ ಎಂದು ನಕ್ಕಾರು. ನಂಬಿಕೆಗಳು ಕೆಲವು ಆಚಾರಗಳು ಕಾಲಕ್ಕನುಗುಣವಾಗಿ ಬದಲಾಗುವುದೂ ಸಹಜ !" ಭಾಗಣ್ಣ ವಿವರಿಸಿದ.

ಭಾಗಣ್ಣನೊಂದಿಗೆ ಯಾತ್ರೆಯೆಂದರೆ ತಮ್ಮಂದಿರಿಬ್ಬರಿಗೆ ಜ್ಞಾನಾರ್ಜನೆಯ ಅಪೂರ್ವ ಅವಕಾಶವಾಗಿ ಬಿಟ್ಟಿತ್ತು. ತಮಗೆ ಸಿಕ್ಕ ಈ ಭಾಗ್ಯದ ಬಗ್ಗೆ ಅಲ್ಲಲ್ಲಿಯ ಕ್ಷೇತ್ರ ಮೂರ್ತಿಗಳಿಗೆ ವಿಶೇಷವಾಗಿ ಪೊಡಮಡುತ್ತಿದ್ದರು. ಕಾಶಿಯಲ್ಲಿ ವಿಶ್ವೇಶ್ವರನ ದರ್ಶನ ಗಯೆಯಲ್ಲಿ ಪಿಂಡ ಪ್ರದಾನ ಎಲ್ಲವೂ ಸಾಂಗವಾಗಿ ನೆರವೇರಿದವು.

ತಮ್ಮಂದಿರೇನೊ ತೃಪ್ತಿಯಿಂದ ಯಾತ್ರೆ ಮಾಡಿದರು. ಭಾಗಣ್ಣನಿಗೆ ಮಾತ್ರ ಆ ಮಹಾಯಾತ್ರೆಯಲ್ಲಿಯೂ ಏನೋ ಅತೃಪ್ತಿ. ಯಾವುದರ ಬಗ್ಗೆಯೋ ಹಬೆ ಹಬೆ. ಯಾರನ್ನೊ ಅರಸುವ ಅಪೇಕ್ಷೆ. ಏನನ್ನೋ ಪಡೆಯುವ ತವಕ.. ಅದು ಸಿಕ್ಕುತ್ತಿಲ್ಲವೆಂಬ ಕಳವಳ.

ಅಣ್ಣನಲ್ಲಿ ಉಂಟಾಗಿರುವ ಈ ಮನಃಕ್ಷೋಭೆಯನ್ನು ತಮ್ಮಂದಿರಿಬ್ಬರು ಗಮನಿಸದೆ ಇರಲಿಲ್ಲ.

ಏನು ಅಣ್ಣನ ಅಪೇಕ್ಷೆ? ಹೋದಲ್ಲೆಲ್ಲಾ ಜನರು ನೆರೆದು ಮನ್ನಣೆ ನೀಡುತ್ತಿದ್ದಾರೆ. ಬೇಡ ಬೇಡವೆಂದರೂ ಹಣ ಸಂಗ್ರಹವಾಗುತ್ತಿದೆ. ಯಾತ್ರೆ ವೈಭವ ದಿಂದ ನಡೆಯುತ್ತಿದೆ. ಹೀಗಿದ್ದರೂ ಅಣ್ಣ ಅರಸುತ್ತಿರುವುದೇನು?

ಕಾಶಿಯಾತ್ರೆಯಿಂದ ಹಿಂದಿರುಗುತ್ತಾ ಅವರು ಆದವಾನಿ ನಗರಕ್ಕೆ ಬಂದಿದ್ದರು. ಅಲ್ಲಿಯ ವ್ಯಾಸರಾಯರ ಪ್ರತಿಷ್ಠಿತ ಶ್ರೀ ಮಂಗರಾಯನ ಗುಡಿಯಲ್ಲಿ ಅಣ್ಣ ತಮ್ಮಂದಿರು ಮಲಗಿದ್ದರು.

ತಮ್ಮಂದಿರು ಮಲಗಿದ್ದಾರೆಂದು ತಿಳಿದಿದ್ದ ಭಾಗಣ್ಣ ಮೆಲ್ಲನೆ ಎದ್ದು ಮಾರುತಿಯ ಮುಂದೆ ಕುಳಿತ. ಕೈಮುಗಿದ. ಕಣ್ಣಿನಲ್ಲಿ ನೀರು ಧಾರೆಧಾರೆಯಾಗಿ ಇಳಿಯ ತೊಡಗಿತು.

ಕಡೆಕಡೆಗೆ ಅಣ್ಣ ಹುಚ್ಚನಂತೆ ಮಂಗರಾಯನ ಗುಡಿಯ ಹೊಸ್ತಿಲಿಗೆ ತಲ ಹೊಡೆದುಕೊಳ್ಳುತ್ತಿರುವುದನ್ನು ನೋಡಿ ತಮ್ಮಂದಿರಿಬ್ಬರು ಹೆದರಿ ಅಣ್ಣನನ್ನು ಅಲುಗಾಡಿಸಿ ಪ್ರಜ್ಞಾವಸ್ಥೆಗೆ ತಂದರು.

ನಿಧಾನವಾಗಿ ಕಣ್ಣುತೆರೆದ ಭಾಗಣ್ಣ ತಮ್ಮಂದಿರಿಬ್ಬರು ತನ್ನನ್ನು ತಡೆದುದಕ್ಕೆ ಸ್ವಲ್ಪ ಮುನಿಸಿಕೊಂಡ.

"ಅಡ್ಡ ಏಕೆ ಬಂದಿರಿ ನೀವು? ಜಗದಾದಿಗುರು ಈ ಮಾರುತಿ. ಜಗದ್ವಂದ್ಯ ಗುರು ಶ್ರೀ ವ್ಯಾಸರಾಯರು ಈತನನ್ನು ಇಲ್ಲಿ ನಿಲ್ಲಿಸಿ, ಸುಜೀವಿಗಳನ್ನು ಶೀಘ್ರ ಅನುಗ್ರಹಿಸು ವಂತೆ ಪ್ರಾರ್ಥಿಸಿದ್ದಾರೆ. ಈತನಲ್ಲಿ ನಾನು ಪ್ರಾರ್ಥಿಸುತ್ತಿದ್ದೆ. ಮುಗುಳ್ನಗೆಯಿಂದ ಆಲಿಸುತ್ತಾ ಅನುಗ್ರಹಿಸಬೇಕೆಂದು ಯೋಚಿಸುತ್ತಿದ್ದಂತಿತ್ತು. ಶೀಘ್ರ ಅನುಗ್ರಹಿಸ ದಿದ್ದರೆ ನಾನು ಉಳಿಯಲಾರೆ ಎಂದು ಹೇಳುತ್ತಿದ್ದೆ. ಅಷ್ಟರಲ್ಲಿ ನೀವು ಅಡ್ಡ ಬಂದು ಬಿಟ್ಟಿರಿ" ಎಂದು ಭಾಗಣ್ಣ ಹೇಳಿದ.

"ಆತ ಎಲ್ಲಾ ಅನುಗ್ರಹಿಸಿದ್ದಾನೆ. ಬೇಕಾದಷ್ಟು ಕೀರ್ತಿ, ಸಂಪತ್ತು ನೀಡಿದ್ದಾನೆ. ಇನ್ನೂ ನೀಡುತ್ತಾನೆ. ಆತನಲ್ಲಿ ಇಷ್ಟು ಕಳಕಳಿಯಿಂದ ಕೇಳಿಕೊಳ್ಳುವುದಾದರೂ ಏನು? ಎಲ್ಲವನ್ನೂ ನೀಡುತ್ತಿರುವಾಗ ಮತ್ತೆ ಆತನನ್ನು ಇಷ್ಟು ಗೋಳಾಡಿಸುವು ದಾದರೂ ಏಕೆ" ಸೀನಣ್ಣ ಪ್ರಶ್ನಿಸಿದ.

"ನೀನು ಯಶಸ್ಸನ್ನು ಭೌತಿಕ ದೃಷ್ಟಿಯಿಂದಷ್ಟೇ ಅಳೆಯುತ್ತಿದ್ದಿ. ಅದನ್ನು ಪಡೆಯುವುದಕ್ಕೆ ನಾನಾ ಮಾರ್ಗಗಳಿವೆ; ಅನೇಕ ವ್ರತಾನುಷ್ಠಾನಗಳಿವೆ. ಆದರೆ ಅವೆಲ್ಲವನ್ನೂ ನೀಡುವುದಷ್ಟೇ ಅಲ್ಲ; ಅವೆಲ್ಲವನ್ನು ಮೀರಿದ - ದೊಡ್ಡ - ನಿಜವಾದ ಭಾಗ್ಯವನ್ನು ನೀಡಬಲ್ಲ ಏಕೈಕ ಗುರು ಈತನೊಬ್ಬನೆ. ಈತನೇ ಅನುಗ್ರಹಿಸಿ ನನ್ನ ಉದ್ಧಾರಕನನ್ನು ತೋರಬೇಕು. ಅದಕ್ಕಾಗಿ ಪ್ರಾರ್ಥಿಸುತ್ತಿದ್ದೇನೆ" ಭಾಗಣ್ಣ ವಿವರಿಸಿದ.

ತಮ್ಮಂದಿರಿಗೆ ಅರ್ಥವಾಗಲಿಲ್ಲ.

"ಅಣ್ಣಾ, ಯಾತ್ರೆಯುದ್ದಕ್ಕೂ ನೀವು ಏನನ್ನೋ ಅರಸುತ್ತಿದ್ದಿರಿ. ಈಗೀಗಲಂತೂ

ನೀವು ತುಂಬಾ ಉನ್ಮಾದ ಸ್ಥಿತಿಗೆ ತಲುಪಿದಂತೆ ಕಾಣುತ್ತಿದೆ. ಯಾವುದಕ್ಕಾಗಿ ನಿಮ್ಮ ಈ ಪರಿತಾಪ?"ಸೀನಣ್ಣ ಪ್ರಶ್ನಿಸಿದ.

ಕಾಶಿಯಾತ್ರೆಯ ನೆವದಲ್ಲಿ ಎಷ್ಟೋ ಕ್ಷೇತ್ರಗಳನ್ನು ನೋಡಿದೆವು. ಸಾವಿರ ಸಾವಿರ ಭಕ್ತರ ದರ್ಶನವಾಯಿತು. ಆದರೆ ನನಗೆ ಬೇಕಾದ ಗುರು ಮಾತ್ರ ಎಲ್ಲಿಯೂ ಸಿಕ್ಕಲಿಲ್ಲ. ಯಾತ್ರೆ ಮುಗಿಯುತ್ತಾ ಬಂದಿದ್ದು ಉತ್ತನೂರು ಹತ್ತಿರವಾಗುತ್ತಾ ಬಂದಿದೆ. ಗುರಿ ಸಾಧನೆಯಾಗಲಿಲ್ಲವಲ್ಲಾ ಎಂಬ ಚಿಂತೆ ಇತ್ತೀಚಿಗೆ ಹೆಚ್ಚಿರುವುದೇನೋ ಸತ್ಯ. ಆದರೆ ನನ್ನ ಒಳಗಿನ ಈ ಬೇಗುದಿಯನ್ನು ಯಾರೂ ತಿಳಿಯಬಾರದೆಂದು ಅಪೇಕ್ಷಿಸಿದ್ದೆ. ಅದಕ್ಕಾಗಿ ನಿಮ್ಮ ಮುಂದೆ ನಗುನಗುತ್ತಾ ಕಾಣಿಸಿಕೊಳ್ಳುತ್ತಿದ್ದೆ. ನೀವು ಗಟ್ಟಿಗರು. ಮನಸ್ಸಿನ ಆಳದಲ್ಲಿರುವ ತಳಮಳವನ್ನು ತಿಳಿದು ಬಿಟ್ಟಿರಿ. ಈಗ ಹೇಳುತ್ತೇನೆ ಕೇಳಿ. ಈ ಯಾತ್ರೆಯ ಉದ್ದೇಶಗಳಲ್ಲಿ ಅದೂ ಒಂದು ಮುಖ್ಯ ಕಾರಣ. ನನ್ನ ಉದ್ಧಾರಕ ಗುರು ಈಗಾಗಲೇ ಎಲ್ಲಿಯೋ ಇದ್ದಾರೆ. ಅವರು ದರ್ಶನ ನೀಡಿ ಉದ್ಧರಿಸುತ್ತಾರೇನೋ ಎಂಬ ಅಪೇಕ್ಷೆ. ಅಪೇಕ್ಷೆ ನೆರವೇರಲಿಲ್ಲ. ಆದ್ದರಿಂದ ಈ ಮಂಗರಾಯನಲ್ಲಿ ನನ್ನ ಕೋರಿಕೆಯನ್ನು ಬಲವಾಗಿ ಇಡುತ್ತಿದ್ದೇನೆ."

"ಅಲ್ಲಣ್ಣಾ, ಈಗಾಗಲೇ ನಿಮಗೆ ಬೇಕಾದಷ್ಟು ವಿದ್ಯೆ ಸಿದ್ಧಿಸಿದೆ. ಅಮೂಲ್ಯ ಗ್ರಂಥಗಳನ್ನೆಲ್ಲಾ ಶೋಧಿಸಿದ್ದೀರಿ. ಇನ್ನೇತಕ್ಕೆ ಬೇಕು ಗುರು? ಇವುಗಳನ್ನು ತೋರಿ ಕೊಟ್ಟವರೆಲ್ಲಾ ಗುರುಗಳಲ್ಲವೆ? ನಿಮಗೆ ಅಕ್ಷರ ಜ್ಞಾನ ಮಾಡಿ ಕೊಟ್ಟ ಸಂಕಾಪುರದ ಅಯ್ಯನವರು, ಗಾಯತ್ರಿ ಮಂತ್ರ ಉಪದೇಶಿಸಿದ ಶ್ಯಾನಭೋಗ ಗುಂಡಪ್ಪನವರು, ನಾನಾ ಕರ್ಮಾಂಗಗಳನ್ನು ವಿವರಿಸಿ ತೋರಿಸಿದ ಅನೇಕ ಆಚಾರ್ಯರುಗಳು ಗುರುಗಳಲ್ಲವೆ?"

ದಾಸಣ್ಣ ಪ್ರಶ್ನಿಸಿದ. ಅವನು ಪ್ರಶ್ನಿಸುವ ರೀತಿಯಲ್ಲಿ ಸಹಜ ಮುಗ್ಧ ಭಾವವಿತ್ತು.

ಭಾಗಣ್ಣ ವಿವರಿಸಿದ.

"ಜೀವಿಗೆ ಜಗತ್ತಿನಲ್ಲಿ ತಾಯಿಯೇ ಮೊದಲ ಗುರು. ಆಕೆಯೇ ಅನೇಕ ವಿಷಯಗಳನ್ನು ಮಗುವಾಗಿದ್ದಾಗಲೇ ಹೇಳಿಕೊಡುತ್ತಾಳೆ. ತಂದೆ ಎರಡನೇ ಗುರು. ಒಂದಕ್ಷರ ಕಲಿಸಿಕೊಟ್ಟವರೂ ಆನಂತರ ಗುರುಗಳೆ. ಆದರೆ ಅವೆಲ್ಲಾ ಭೌತಿಕ ಪ್ರಗತಿಗೆ ನೆರವಾದವುಗಳು. ಆದರೆ ನಮ್ಮ ಶರೀರದ ಒಳಗೆ ಇದ್ದು, ಜನ್ಮ ಜನ್ಮಗಳಲ್ಲಿಯೂ ನಮ್ಮನ್ನು ನಡೆಸಿಕೊಂಡು ಬರುತ್ತಿರುವ ಬಿಂಬ ಮೂರ್ತಿಯನ್ನು ತೋರಿಸುವ ಪರಮ ಉದ್ಧಾರಕ ಗುರು ಮಾತ್ರ ಅನೇಕ ಜನ್ಮಗಳ ಸಾಧನೆಯ

ನಂತರ ಸಿಕ್ಕುತ್ತಾರೆ. ಅಂಥ ಗುರುವನ್ನು ಈ ಜನ್ಮದಲ್ಲಿ ಕರುಣಿಸು ಎಂದು ಪ್ರಾರ್ಥಿಸುವುದು ಮಾತ್ರ ನಮ್ಮ ಕರ್ತವ್ಯ. ಅನುಗ್ರಹಿಸದಿದ್ದರೂ ಪ್ರಾರ್ಥನೆ ವ್ಯರ್ಥವಾಗುವುದಿಲ್ಲ. ಗಮ್ಯದ ಹತ್ತಿರ ಹತ್ತಿರ ನಾವು ಸಾಗುತ್ತೇವೆ. ಅದಕ್ಕಾಗಿ ಜಗದಾದಿ ಗುರುವನ್ನು ಪ್ರಾರ್ಥಿಸುತ್ತಿದ್ದೆ!"

ಅಣ್ಣ ತಮ್ಮಂದಿರು ಮಾತನಾಡುತ್ತಲೇ ಇದ್ದರು. ಅಷ್ಟರಲ್ಲಿಯೇ ದೂರದಲ್ಲಿ ಕೋಳಿಯೊಂದು ಕೂಗಿದ್ದು ಕೇಳಿಸಿತು.

ಮಾತಿನ ಭರದಲ್ಲಿ ವೇಳೆ ಕಳೆದದ್ದೇ ಗೊತ್ತಾಗಿರಲಿಲ್ಲ. ಕೂಡಲೇ, ಅಣ್ಣ ತಮ್ಮಂದಿರು ದೇವಸ್ಥಾನದ ಆವರಣದಲ್ಲಿ ಕಟ್ಟಿದ್ದ ಕುದುರೆಗಳನ್ನು ಮೇಯಲು ಬಿಟ್ಟು ಹತ್ತಿರದಲ್ಲಿದ್ದ ಕೊಳವೊಂದಕ್ಕೆ ಸ್ನಾನಕ್ಕೆಂದು ಹೊರಟರು.

ಕುದುರೆಗಳಿಗೆ ವಿಶೇಷ ರೀತಿಯ ಶಿಕ್ಷಣ ದೊರಕಿದ್ದಿತು. ತಮ್ಮ ಯಜಮಾನರುಗಳು ಸ್ನಾನಕ್ಕೆಂದು ಹೊರಡುವ ಮೊದಲು ಅವನ್ನು ಬಿಚ್ಚಿದಾಗ ಸುತ್ತ ಮುತ್ತ ಮೇಯಲು ಅವೇ ಸ್ವಂತ ಹೋಗುತ್ತಿದ್ದವು. ಸೂರ್ಯೋದಯದ ವೇಳೆಗೆ ತಮ್ಮನ್ನು ಕಟ್ಟಿದ ಜಾಗಕ್ಕೆ ಅವೇ ಹಿಂದಿರುಗುತ್ತಿದ್ದವು.

ಸ್ನಾನ ಸಂಧ್ಯಾವಂದನಾದಿಗಳನ್ನು ನಿರ್ವಹಿಸಿ ಮಂಗರಾಯನ ಗುಡಿಗೆ ಓಡಿರುಗುತ್ತಿದ್ದ ಭಾಗಣ್ಣನಿಗೆ ಅಲ್ಲಿ ತಮ್ಮ ಕುದುರೆಗಳಿಲ್ಲದೆ ಬೇರೆ ಮೂರು ನಾಲ್ಕು ಕುದುರೆಗಳು ನಿಂತಿರುವುದನ್ನು ಕಂಡು ಆಶ್ಚರ್ಯವಾಯಿತು. ಸುಂದರವಾಗಿ ಅಲಂಕರಿಸಿದ್ದ ಆ ಕುದುರೆಗಳು ಮಹಾರಾಜರದೇ ಇರಬೇಕೆಂದು ಅಣ್ಣ ತಮ್ಮಂದಿರು ಊಹಿಸುತ್ತಿದ್ದಂತೆಯೇ, ಗುಡಿಯೊಳಗಿಂದ ಸುಶ್ರಾವ್ಯ ಕಂಠದೊಂದಿಗೆ ಯಾರೋ ಪುರುಷರೊಬ್ಬರು ಹಾಡುತ್ತಿದ್ದುದು ಕೇಳಿಸಿತು.

ಯಾವುದೇ ರಾಜ್ಯ ಪ್ರವೇಶಿಸುವ ಮೊದಲು ಅಲ್ಲಿಯ ವಿದ್ಯಮಾನಗಳನ್ನು ತಿಳಿದಿರುತ್ತಿದ್ದ ಭಾಗಣ್ಣನಿಗೆ ಆದವಾನಿಯ ನವಾಬರಾಗಿದ್ದ ಬಸಾಲತ್‌ಜಂಗ್ ಬಹದ್ದೂರ್ ಅವರು ಹಿಂದೂ ಧರ್ಮದ ದ್ವೇಷಿಗಳಲ್ಲವೆಂದೂ ಹತ್ತಿರದಲ್ಲಿಯೇ ಇರುವ ಮಂತ್ರಾಲಯ ಕ್ಷೇತ್ರಕ್ಕೆ ಯಥೇಚ್ಛವಾಗಿ ಹಣ ಕಳಿಸುತ್ತಿರುವರೆಂದೂ ಕೇಳಿ ತಿಳಿದುಕೊಂಡಿದ್ದ. ಸ್ವಧರ್ಮನಿಷ್ಠೆಯೊಂದಿಗೆ ಪರಧರ್ಮ ಸಹಿಷ್ಣುತೆ ಇರುವ ಈ ನವಾಬರ ಆಳ್ವಿಕೆಯ ಬಗ್ಗೆ ಪೂನಾದ ಪೇಶ್ವೆಯವರೇ ಉತ್ತಮ ಅಭಿಪ್ರಾಯ ಹೊಂದಿದ್ದಾರೆಂದು ಆತನಿಗೆ ಗೊತ್ತಿತ್ತು.

ಅದೇನೇ ಇದ್ದರೂ ಸೂರ್ಯೋದಯದ ಮೊದಲೇ ಮಂಗರಾಯನ ಗುಡಿಗೆ ಬಂದು ದರ್ಶನ ಪಡೆಯುವ ಅಭ್ಯಾಸ ಅವರಿಗಿರಲಾರದು. ಕುದುರೆಗಳೊ ರಾಜ

ವೈಭವವನ್ನು ಪ್ರತಿನಿಧಿಸುತ್ತಿವೆ. ಹಾಗಿದ್ದರೆ ರಾಜ್ಯದಲ್ಲಿ ನವಾಬರ ನಂತರ ಅಷ್ಟೇ ಪ್ರಧಾನ ಸ್ಥಾನದಲ್ಲಿ ವಿರಾಜಿಸುತ್ತಿರುವ ಮತ್ತಾರೋ ದೊಡ್ಡ ಅಧಿಕಾರಿಯೇ ಇರಬೇಕೆಂದು ಭಾಗಣ್ಣ ತರ್ಕಿಸಿದ.

ಗುಡಿಯ ಮಹಾದ್ವಾರದ ಬಳಿ ಸೈನಿಕರು ಬಿಚ್ಚು ಗತ್ತಿಯ ಪಹರ ನಡೆಸುತ್ತಿದ್ದರಾದರೂ ಭಾಗಣ್ಣ ಹಾಗೂ ಅವರ ತಮ್ಮಂದಿರು ಗುಡಿಯೊಳಗೆ ಹೋಗುವುದನ್ನು ಅವರು ಅಡ್ಡಿಪಡಿಸಲಿಲ್ಲ.

ಆಗ ತಾನೇ ಸಂಧ್ಯಾವಂದನಾದಿಗಳನ್ನು ಮುಗಿಸಿ ದ್ವಾದಶ ನಾಮ ಮುದ್ರೆಗಳಿಂದ ಸುಶೋಭಿಸುತ್ತಿದ್ದ ಈ ಸೋದರತ್ರಯರನ್ನು ನೋಡಿ ಸೈನಿಕರೇ ಅವರಿಗೆ ವಂದಿಸಿದರು.

ನಾಗರೀಕರ ಭಕ್ತಿಯ ಆಚರಣೆಗಳಿಗೆ, ಧಾರ್ಮಿಕ ಶ್ರದ್ಧೆಗಳಿಗೆ ಅಧಿಕಾರಶಾಹಿಯ ಅಡ್ಡಿ ಇಲ್ಲದಿರುವ ಈ ಸರಳ ರೀತಿಗಳನ್ನು ಕಂಡು ದಾಸಣ್ಣ ಹಾಗೂ ಸೀನಣ್ಣರು ಆಶ್ಚರ್ಯಪಟ್ಟರು.

ಅವರು ಗುಡಿಯನ್ನು ಪ್ರವೇಶಿಸುತ್ತಿದ್ದಂತೆ ಗಂಡು ಧ್ವನಿಯಲ್ಲಿ ಸುಶ್ರಾವ್ಯ ಉಗಾಭೋಗವೊಂದು ಕೇಳಿಬಂದಿತು.

**ತತ್ವಾಭಿಮಾನಿಗಳಿರಾ, ಉತ್ತರ ಪಾಲಿಪುದು।**
**ಎತ್ತಿ ಕರವ ಮುಗಿಯುವೆ ವಿನಯದಲ್ಲಿ।**
**ಆತ್ಮದೊಳಗೆ ನಿಮ್ಮ ವ್ಯಾಪಾರ-ಘನವಯ್ಯಾ........**
**........ಉತ್ತಮ ಶ್ಲೋಕ ಸಿರಿ ವಿಜಯ ವಿಠಲನ**
**ಸ್ತುತಿಸಿ ಆತನ ಚರಣ ನೋಳ್ಪವಂತೆ ಮಾಡಿ**

ಭಾಗಣ್ಣ ಈ ಉಗಾಭೋಗ ಕೇಳಿ ಅವಕ್ಕಾಗಿ ಹೋದ.

ತನ್ನ ತಾಯಿಯಿದ್ದಾಗ ತನಗಿನ್ನೂ ಸಣ್ಣ ವಯಸ್ಸು ಆಗ. ತನಗೆ ಹುಚ್ಚು ಹಿಡಿದಿದೆಯೆಂದು ತಾಯಿಯೇ ಆದಿಯಾಗಿ ಹಲವರು ಪರಿಗಣಿಸುತ್ತಿದ್ದ ಕಾಲ ನೆನಪಾಯಿತು.

ಆಗ ತನಗಾದ ಮನಸ್ಸಿನ ವಿವಿಧ ಪರಿಗಳ ಅನುಭವ, ಕಾಣಿಸಿಕೊಳ್ಳುತ್ತಿದ್ದ ವಿವಿಧ ದೇವತೆಗಳು ಅವನ ಸ್ಮರಣೆಗೆ ಬಂದರು. ತನಗೆ ಮಾತ್ರ ಈ ಅನುಭವ ಆಗಿರಬಹುದೇನೋ. ಅತಿಯಾದ ತನ್ನ ಭ್ರಾಮಕತೆ ಅತಿರಂಜಿತ ಕಲ್ಪನೆಗಳಿಗೆ ಕಾರಣವಾಗಿರಬಹುದೇನೊ।, ನಿಜಕ್ಕೂ ಇದೊಂದು ಹುಚ್ಚಿನ ಹಂತವೇನೋ ಎಂದು ಆಗ ತನಗೇ ಸಂಶಯ ಬಂದದ್ದೂ ಉಂಟು.

ಈಗ ತತ್ವಾಭಿಮಾನಿ ದೇವತೆಗಳನ್ನು ಪ್ರಾರ್ಥಿಸುವ ಈ ಉಗಾಭೋಗ ಕೇಳಿದಾಗ ತನಗಾದ ಆ ಅನುಭವ ಇದನ್ನು ಹಾಡುತ್ತಿರುವವರಿಗೂ ಆಗಿರಬೇಕೆಂದು ಅವನಿಗೆ ಹೊಳೆಯಿತು.

ಪ್ರಾರ್ಥನೆ ಮಾಡುತ್ತಿರುವವರ ಮುಖವನ್ನೊಮ್ಮೆ ನೋಡಿದ. ಹಾಡು ಕೇಳುತ್ತಾ ಗುಡಿಯೊಳಗೆ ಹೋದನಾಗಲಿ, ಹಾಡಿನ ಅರ್ಥ ಗಂಭೀರತೆಗೋ, ಕಂಠದ ಸುಶ್ರಾವ್ಯತೆಗೋ ಅವರನ್ನು ಪರೀಕ್ಷಿಸಿ ನೋಡಿರಲಿಲ್ಲ.

ಹಾಡು ನಿಲ್ಲಿಸಿ ನಮಸ್ಕರಿಸುತ್ತಿದ್ದ ವ್ಯಕ್ತಿಯನ್ನು ಭಾಗಣ್ಣ ನೋಡಿದ.

ಎತ್ತರವಾದ ಆಳು. ದಷ್ಟಪುಷ್ಟವಾದ ಶರೀರ; ಮೈ ಮೇಲೆ ಬೆಲೆಬಾಳುವ ಉತ್ತರೀಯ ಕೊರಳಲ್ಲಿ ನವರತ್ನಖಚಿತ ಮಾಲೆ. ಕಿವಿಯಲ್ಲಿ ಮಾಣಿಕ್ಯ ಶೋಭಿತ ಜೋಲಾಡುವ ಓಲೆಗಳು. ಕೈಬೆರಳುಗಳಿಗೆ ವಜ್ರದ ಉಂಗುರಗಳು ಇವುಗಳು ವ್ಯಕ್ತಿಯ ಶ್ರೀಮಂತಿಕೆಯನ್ನು ತೋರುತ್ತಿದ್ದರೆ ಹಣೆಯ ಎರಡೂ ಅಂಚುಗಳಲ್ಲಿ ಶೋಭಿಸುತ್ತಿದ್ದ ಶಂಖ ಚಕ್ರಗಳ ಚಿಹ್ನೆ, ಲಲಾಟದಲ್ಲಿ ವಿರಾಜಿಸುತ್ತಿದ್ದ ಊರ್ಧ್ವ ಪುಂಡ್ರ ಇವುಗಳು ವ್ಯಕ್ತಿಗಿರುವ ಧಾರ್ಮಿಕ ಶ್ರದ್ಧೆಯನ್ನು ತೋರುತ್ತಿದ್ದವು.

ಹೊರಗೆ ಕಾವಲಿದ್ದ ರಾಜಭಟರು ವ್ಯಕ್ತಿಗಿರುವ ಉನ್ನತ ಅಧಿಕಾರದ ದ್ಯೋತಕವಾಗಿದ್ದರು.

ಯಾರು ಈ ವ್ಯಕ್ತಿ? ದರ್ಪವನ್ನು ಸೂಸುವ ತುಂಬು ಮೀಸೆ ಇದ್ದರೂ ಕಣ್ಣಿನಲ್ಲಿ ಅಪೂರ್ವಕಾಂತಿಯಿದ್ದ ಈ ವ್ಯಕ್ತಿ ದೊಡ್ಡ ಸಾಧಕನೇ ಇರಬೇಕೆಂದು ಭಾಗಣ್ಣ ತರ್ಕಿಸಿದ.

ಇವರು ಬಂದಿದ್ದನ್ನು ಗಮನಿಸದೆ ತನ್ನ ಧ್ಯಾನದಲ್ಲಿ ತಾನು ಲೀನನಾಗಿದ್ದ ಆ ವ್ಯಕ್ತಿ ಮಾರುತಿ ರಾಯನ ಸ್ತುತಿಯನ್ನು ಪ್ರಾರಂಭಿಸಿದರು.

"ಭೀಮ ಪರಿಪೂರ್ಣ ಕಾಯ, ಸೋಮ ಕುಲಾಬ್ಧಿ ಸೋಮ, " ಹಾಡು ಹೇಳುತ್ತಿದ್ದಾಗ ವ್ಯಕ್ತಿಯ ಕಣ್ಣಿನಿಂದ ಆನಂದಾಶ್ರು ಪ್ರವಹಿಸುತ್ತಿತ್ತು.

ಆ ಸ್ತುತಿ ಮುಗಿಸಿದ ಮೇಲೆ

"ಬಂದು ನಿಲ್ಲೋ, ಕಣ್ಣ ಮುಂದೆ" ಎಂದು ದೇವರನ್ನು ಕಳಕಳಿಯಿಂದ ಪ್ರಾರ್ಥಿಸುವ ಹಾಡನ್ನು ಹಾಡಿ ಕಡೆಗೆ ಧ್ಯಾನವನು ಮಾಡೋ ಒಳಗಿನ ಮೂರುತಿಯ" ಎಂದು ಉಪಾಸನಾ ರೀತಿ ವಿವರಿಸುವ ಪದ ಹಾಡಲ್ಪಟ್ಟಿತು.

ಭಾಗಣ್ಣನಿಗೆ ಉಪಾಸನಾರೀತಿ ವಿವರಿಸುವ ಈ ಪದ ಕೇಳಿದೊಡನೆಯೆ ಎಲ್ಲಿಲ್ಲದ ಆನಂದವಾಗಿ ಹೋಯಿತು. ಬಹಳ ದಿನಗಳಿಂದ ತಿಳಿಯ ಬೇಕೆಂದು ಹಂಬಲಿಸುತ್ತಿದ್ದ ಅನೇಕ ವಿಷಯಗಳಿಗೆ ಅದರಲ್ಲಿ ಆತನಿಗೆ ವಿಷಯ ಸಿಕ್ಕಿತ್ತು

ಕೂಡಲೇ ಭಾಗಣ್ಣ ತನ್ನನ್ನು ತಾನು ಮರೆತ. ಎದುರಿಗೆ ದೊಡ್ಡವರು ಪೂಜೆ ಮಾಡುತ್ತಿದ್ದಾರೆ ಎಂಬ ಅರಿವು ಆತನಿಂದ ದೂರವಾಗಿ ಹೋಯಿತು. ಕೂಡಲೇ ಆ ವ್ಯಕ್ತಿಯ ಬಳಿ ಹಾರಿ "ಸಿಕ್ಕಿತು, ಸಿಕ್ಕುಬಿಟ್ಟಿರಿ ನನ್ನ ಉದ್ಧಾರ ಮಾಡಿ ಗುರುವರ್ಯಾ" ಎಂದು ಅವರ ಕಾಲುಗಳನ್ನು ಹಿಡಿದು ಶಿರಸಾಷ್ಟಾಂಗ ಹಾಕಿ ಬಿಟ್ಟ.

ಆ ವ್ಯಕ್ತಿ ತಮ್ಮ ಧ್ಯಾನಕ್ಕೆ ಚ್ಯುತಿಯಾದರೂ ಬಂದ ವ್ಯಕ್ತಿಯ ಮಾನಸಿಕ ತಳಮಳವನ್ನು ಗ್ರಹಿಸಿದರೇನೊ !

ಭಾಗಣ್ಣನನ್ನು ಮೆಲ್ಲಗೆ ಹಿಡಿದು ಮೇಲಕ್ಕೆತ್ತುತ್ತಾ "ಏಳಿ, ನಿಮ್ಮ ಧೋರಣೆ ನನಗೆ ಅರ್ಥವಾಗುತ್ತಿಲ್ಲ. ನಾನು ಯಾವುದನ್ನು ಬಯಸುತ್ತಿರುವೆನೊ, ತಾವೂ ಅದನ್ನೇ, ಅರಸುತ್ತಿರುವಂತೆ ಇದೆ. ನನ್ನ ಊಹೆ ಸತ್ಯವಿರುವುದಾದರೆ ಈ ದಿನ ನಿಜಕ್ಕೂ ನಾನು ಪುಣ್ಯಶಾಲಿ. ತಮ್ಮಂಥ ಶ್ರೇಷ್ಠ ಭಕ್ತರ ದರ್ಶನವನ್ನು ಶ್ರೀಮಂಗರಾಯ ನನಗೆ ದೊರಕಿಸಿ ನನ್ನ ಉದ್ಧಾರಕ್ಕೆ ಆಶೀರ್ವದಿಸಿದ್ದಾನೆಂದು ಭಾವಿಸುತ್ತೇನೆ." ಎಂದು ಕೈ ಮುಗಿದರವರು.

ಭಾಗಣ್ಣ ಅವರಲ್ಲಿ ಪ್ರಾರ್ಥಿಸಿದ.

"ಉಪಾಸನಾ ರೀತಿಗಳನ್ನು ಇಷ್ಟು ಆಳವಾಗಿ ವಿವರಿಸಬಲ್ಲ ನೀವು ಮಹಾನ್ ಸಾಧಕರೇ ಇದ್ದೀರಿ. ನಿಮ್ಮಂಥ ಶ್ರೇಷ್ಠ ಜೀವಿಗಳಿಗಲ್ಲದೆ ಬೇರೆಯವರಿಗೆ ಇಂಥ ಪದಗಳನ್ನು ರಚಿಸುವ ಶಕ್ತಿ ಬರಲಾರದು. ಅನುಭವಿಗಳು ಮಾತ್ರ ಇವುಗಳನ್ನು ವಿವರಿಸಬಲ್ಲರು. ನಡೆಯುವಾಗ ಬರುವ ವಿಘ್ನಗಳನ್ನು ಮಾರ್ಗ ಕ್ರಮಿಸಿದವರು ಮಾತ್ರ ತಿಳಿಯಬಲ್ಲರು. ನೀವು ದೊಡ್ಡ ಸಾಧಕರು. ನೀವೇ ನನ್ನನ್ನು ಉದ್ಧರಿಸಬೇಕು."

ಭಾಗಣ್ಣ 'ಉದ್ಧರಿಸಿ' ಎಂದು ಗುಡಿಯಲ್ಲಿ ಪ್ರಾರ್ಥಿಸುತ್ತಿದ್ದ ವ್ಯಕ್ತಿಯನ್ನು ಕೇಳಿದರೆ, ಆ ವ್ಯಕ್ತಿ ಭಾಗಣ್ಣನನ್ನು ಉದ್ಧರಿಸಿ ಎಂದು ಪ್ರಾರ್ಥಿಸುತ್ತಿದ್ದಾರೆ. ಇಬ್ಬರೂ ಒಬ್ಬರಿಗೊಬ್ಬರು ನಮಸ್ಕರಿಸುತ್ತಿದ್ದಾರೆ.

ಇವರಿಬ್ಬರ ಪರಿನೋಡಿ ಆಜಾನುಬಾಹುವಾಗಿ ನಿಂತಿರುವ ಆದವಾನಿಯ ಶ್ರೀ ಮಂಗರಾಯ ನಗುತ್ತಿರುವಂತೆ ಸೀನಣ್ಣ ದಾಸಣ್ಣರಿಗೆ ಕಂಡಿರಬೇಕು.

ಇಬ್ಬರ ಕಣ್ಣಿನಲ್ಲಿಯೂ ಆನಂದಾಶ್ರು. ಇಬ್ಬರೂ ಪರಸ್ಪರ ದೈನ್ಯತೆಯಿಂದ ಪ್ರಾರ್ಥಿಸುತ್ತಿದ್ದಾರೆ. ಆಡುತ್ತಿರುವ ಶಬ್ದಗಳಿಗಿಂತಲೂ ಶಬ್ದಗಳು ಹೇಳಲಾರದ ಅನೇಕ ಭಾವನೆಗಳನ್ನು ಅವರ ಮುಖಗಳು ಹೊರಸೂಸುತ್ತಿವೆ.

ಕಡೆಗೆ ಸೀನಣ್ಣನೇ ಮಾತಿಗೆ ಪ್ರಾರಂಭಿಸಿ ಸನ್ನಿವೇಶವನ್ನು ಹಗುರಗೊಳಿಸಿದ.

"ಭಕ್ತ ಶ್ರೇಷ್ಠರೇ, ನಿಮ್ಮ ಮುಂದೆ ನಿಂತಿರುವ ಇವರು ನಮ್ಮ ಅಣ್ಣ. ಇಲ್ಲಿರುವ ನಾವು ಮೂರು ಜನ ಅಣ್ಣತಮ್ಮಂದಿರು. ನೆರೆಯ ರಾಜ್ಯವಾದ ಗದ್ವಾಲ ಸಂಸ್ಥಾನದ ಸಾಮಾನ್ಯ ಪ್ರಜೆಗಳು ಕಾಶಿ ಯಾತ್ರೆ ಮುಗಿಸಿಕೊಂಡು ಮಾರ್ಗ ಮಧ್ಯೆ ಇಲ್ಲಿಗೆ ಬಂದಿದ್ದೇವೆ. ನಿನ್ನೆ ರಾತ್ರಿ ಇಲ್ಲಿಗೆ ಬರುವ ವೇಳೆ ತುಂಬಾ ಹೊತ್ತಾಗಿತ್ತು. ಎಲ್ಲಿಗೇ ಹೋಗಲಿ, ಸಾಮಾನ್ಯವಾಗಿ ಶ್ರೀ ಮಾರುತಿ ರಾಯನ ಗುಡಿಯಲ್ಲಿ ಇಳಿದು ಕೊಳ್ಳುವ ಆಚಾರ ನಮ್ಮದು. ಇಲ್ಲಿರುವ ಪ್ರಾಣದೇವರು ಶ್ರೀ ವ್ಯಾಸರಾಯರಿಂದ ಪ್ರತಿಷ್ಠಿತಗೊಂಡ ದಿವ್ಯ ಮೂರುತಿ ಎಂದು ತಿಳಿದಿದ್ದರಿಂದ ರಾತ್ರಿ ಬಹಳ ಹೊತ್ತಾಗಿದ್ದರೂ ಈ ಗುಡ್ಡದ ಕೆಳಗೆ ಬಂದು ಇಲ್ಲಿ ತಂಗಿದೆವು. ಎಷ್ಟೇ ದೊಡ್ಡ ಯಾತ್ರೆ ಮಾಡಿ ಬಂದಿದ್ದರೂ ಇತ್ತೀಚೆಗೆ ನಮ್ಮಣ್ಣ ಅಷ್ಟಾಗಿ ಗೆಲುವಿನಲ್ಲಿರಲಿಲ್ಲ. ಸ್ವರೂಪಸ್ವಾಮಿಯ ದರ್ಶನ ಮಾಡಿಸಿ ಉದ್ಧರಿಸುವ ಗುರುವನ್ನು ತೋರಿಸು ಎಂದು ನಿನ್ನೆ ರಾತ್ರಿಯಂತೂ ನಮ್ಮಣ್ಣ ಬಹಳ ಹೊತ್ತು ಪ್ರಾರ್ಥಿಸುತ್ತಿದ್ದ. ಪ್ರಾರ್ಥನೆ ಮುಗಿಸಿ ವೇಳೆಯಾದ್ದರಿಂದ ಸ್ನಾನ ಸಂಧ್ಯಾವಂದನಾದಿಗಳಿಗೆ ಪಕ್ಕದ 'ರಾಮಜಲಿ'ಕೊಳಕ್ಕೆ ಹೋದೆವು. ಬರುವಷ್ಟರಲ್ಲಿ ತಾವು ಗುಡಿಯಲ್ಲಿ ಹಾಡುತ್ತಿದ್ದಿರಿ. ನಿಮ್ಮ ಒಂದೊಂದು ಹಾಡನ್ನು ಕೇಳುತ್ತಿದ್ದಂತೆ ನಮ್ಮಣ್ಣನ ಮುಖದಲ್ಲಾಗುತ್ತಿದ್ದ ಪರಿವರ್ತನೆಗಳನ್ನು ಕಂಡು ನಮಗೂ ಆಶ್ಚರ್ಯವಾಯಿತು. ಈಗಂತೂ ನಮ್ಮಣ್ಣನನ್ನು ಉದ್ಧರಿಸುವ ಗುರು ತಾವೇ ಇರಬೇಕೆಂದು ನಮಗೆ ನಂಬಿಕೆಯಾಗುತ್ತಿದೆ."

ಸೀನಣ್ಣನ ಮಾತು ಕೇಳಿದ ಆ ವ್ಯಕ್ತಿ ಸೋದರತ್ರಯರನ್ನೂ ಒಮ್ಮೆ ಪರೀಕ್ಷಿಸಿ ನೋಡಿ

"ನಾನು ಈ ರಾಜ್ಯದ ದಿವಾನ. ತಿಮ್ಮಣ್ಣಯ್ಯ ಎಂದು ನನ್ನ ಹೆಸರು. ಶ್ರೀಗುರು ರಾಘವೇಂದ್ರರು ಸಶರೀರರಾಗಿ ಇದ್ದಾಗ ಈ ರಾಜ್ಯಕ್ಕೆ ವೆಂಕಣ್ಣ ಪಂತ ಎಂಬುವರನ್ನು ದಿವಾನರಾಗುವಂತೆ ಮಾಡಿದ್ದರೆಂದು ಕೇಳಿದ್ದೇನೆ. ಈಗಂತೂ ಬೃಂದಾವನದಲ್ಲಿ ಕುಳಿತೇ ನನ್ನನ್ನು ಅನುಗ್ರಹಿಸಿದ್ದಾರೆ. ಅವರ ಕೃಪೆಯಿಂದ ನಾನು ಈ ಉನ್ನತ ಸ್ಥಾನದಲ್ಲಿದ್ದೇನೆ. ಆದರೂ ನಿಮ್ಮಣ್ಣನಿಗೆ ಆಗಿರುವಂತೆ ನನಗೂ ಮಾನಸಿಕ ತಳಮಳ ವಿಪರೀತ ಹೆಚ್ಚಿ ಬಿಟ್ಟಿದೆ. ಬಿಂಬ ದರ್ಶನ ಮಾಡಿಸುವ ಗುರುವಿಗಾಗಿ

ನಾನೂ ಕಾಯುತ್ತಿದ್ದೇನೆ. ಈಗ ನಾನು ಹೇಳಿದ ಪದಗಳು ಸಮ್ಮರಾಜ್ಯ ನಿವಾಸಿಯೇ ಆದರೂ, ಹೆಚ್ಚಾಗಿ ಯಾತ್ರೆಯಲ್ಲಿಯೇ ಇರುವ ಶ್ರೀ ವಿಜಯದಾಸರು ಎಂಬ ತಪ್ಪೋ ಮೂರ್ತಿಗಳದು. ಅವರು ಹಲವಾರು ಸಲ ನನಗೆ ದರ್ಶನ ನೀಡಿರುವರಾದರೂ ಬಿಂಬ ದರ್ಶನ ಮಾಡಿಸುವ ಕೃಪೆಯನ್ನಂತೂ ಇನ್ನೂ ಮಾಡಿಲ್ಲ. ಆ ಬಗ್ಗೆ ಕೇಳಿದಾಗ ಮುಗುಳ್ನಕ್ಕು ಸುಮ್ಮನಾಗುತ್ತಾರೆ. ಬಹಳವಾಗಿ ಪ್ರಾರ್ಥಿಸಿದಾಗ 'ಹತ್ತಿರ ಬಂದಿದ್ದೀಯೆ ಸ್ವಲ್ಪಕಾಲ ತಡಿ' ಎಂದು ಹೇಳಿ ನುಣುಚಿಕೊಳ್ಳುತ್ತಿದ್ದಾರೆ. ಅವರು ಈ ಸಲ ಬಂದಾಗ ಈ ದಿವಾನಗಿರಿಯನ್ನು ಬಿಟ್ಟು ಅವರ ಹಿಂದೆಯೇ ಹೋಗಬೇಕೆಂದು ನಿಶ್ಚಯಿಸಿಬಿಟ್ಟಿದ್ದೇನೆ. ಇತ್ತೀಚಿಗೆ ಅವರ ದರ್ಶನವಾಗಿಲ್ಲ. ಅವರು ಈ ರಾಜ್ಯದ ಯಾವ ಮೂಲೆಗೆ ಬಂದರೂ ಕೂಡಲೇ ನನಗೆ ತಿಳಿಸುವಂತೆ ದಿವಾನಖಾನೆಯಿಂದ ಪರಿಪತ್ರ ಹೊರಡಿಸಿದ್ದೇನೆ ಆದರೆ ನನ್ನ ದೌರ್ಭಾಗ್ಯ. ಇನ್ನೂ ಕಾಲ ಕೂಡಿ ಬಂದಿಲ್ಲ" ಎಂದು ವಿವರಿಸಿದರು.

ದೊಡ್ಡ ರಾಜ್ಯದ ದಿವಾನರಾಗಿದ್ದಾರೆ. ಬೇಕಾದಷ್ಟು ಐಶ್ವರ್ಯವಿದೆ ಹಾಗಿದ್ದರೂ ಅದೆಲ್ಲವನ್ನೂ ತ್ಯಜಿಸುವ ನಿರ್ಧಾರ ಮಾಡಿರುವ ಕಾರಣ- ಬಿಂಬ ದರ್ಶನ. ಅದನ್ನು ಮಾಡಿಸುವ ಗುರು ಕರುಣ. ಅದಕ್ಕಾಗಿ ಇಷ್ಟೆಲ್ಲಾ ಸಾಧನೆ. ಯಾವ ಮಹದ್ ಭಾಗ್ಯಕ್ಕಾಗಿ ಅವರು ದಿವಾನಗಿರಿಯನ್ನು ತ್ಯಜಿಸಲು ಸಿದ್ಧ ರಾಗಿದ್ದಾರೋ, ಅಂಥ ಭಾಗ್ಯಕ್ಕಾಗಿ ತಮ್ಮ ಅಣ್ಣ ಪರಿತಪಿಸುವುದು ನ್ಯಾಯವೇ ಆಗಿರಬೇಕು ಎಂದು ತಮ್ಮಂದಿರಿಗೆ ಈಗ ಹೊಳೆದಿರಬೇಕು.

"ನನ್ನ ಗೃಹದಲ್ಲಿಯೇ ಇರಿ. ನಿಮ್ಮ ಸಾಧನೆಯನ್ನು ಮುಂದುವರಿಸಿ. ನಿಮ್ಮಣ್ಣನಂಥ ದೊಡ್ಡವರು ಇರುವ ಕಾರಣಕ್ಕಾಗಿಯಾದರೂ ಆದವಾನಿಗೆ ಶ್ರೀ ವಿಜಯದಾಸರು ದಯ ಮಾಡಿಸಿಯಾರು. ನಿಮ್ಮಣ್ಣನ ಪುಣ್ಯದಿಂದಲಾದರೂ ನನಗೆ ಅವರ ಕೃಪೆಯಾದೀತು. ಆದ್ದರಿಂದಲೇ ಪರಮ ಕರುಣಾಳುವಾದ ನಮ್ಮ ಶ್ರೀಮಂಗರಾಯ ನಿಮ್ಮೀರ್ವರನ್ನು ಇಲ್ಲಿ ಸೇರಿಸಿದ್ದಾನೆ. ಇನ್ನು ಮುಂದೆ ಈ ನಗರದಲ್ಲಿಯೇ ಕೂಡಿ ಇರೋಣ. ನಮ್ಮಿಬ್ಬರ ಗುರಿ ಒಂದೆ. ಧ್ಯೇಯವೊಂದೆ. ಉದ್ಧರಿಸಬೇಕಾದ ಗುರುವೂ ಒಬ್ಬರೇ ಇರಬೇಕು. ಮುಂದಿನ ಜವಾಬ್ದಾರಿಯನ್ನು ಶ್ರೀ ಗುರು ರಾಘವೇಂದ್ರರಿಗೂ ಅವರ ಪರಂಪರೆಯವರಿಗೂ ಒಪ್ಪಿಸಿ ಸಾಧನೆಯನ್ನು ಮುಂದುವರಿಸೋಣ" ಎಂದರು ತಿಮ್ಮಣ್ಣಯ್ಯನವರು.

ಸತ್ಸಂಗ ದೊರೆಯಿತು ಮಂಗರಾಯ ಸನ್ನಿಧಿಯಲ್ಲಿ. ಮಂಗಳ ಮಹಿಮ ಶ್ರೀ ವೆಂಕಟಕೃಷ್ಣನ ಕೃಪೆ ದೊರೆಯುವ ಲಕ್ಷಣಗಳು ಕಾಣಿಸುತ್ತಿವೆ.

"ತಿಮ್ಮಣ್ಣಯ್ಯನವರೆ, ತಮ್ಮ ಮನೆಯಲ್ಲಿ ನಾವೆಲ್ಲ ಇರಬೇಕೆಂಬ ಅಪೇಕ್ಷೆ ನಿಮ್ಮ ದೊಡ್ಡತನದ ನಿದರ್ಶನವೇನೋ ಹೌದು. ಆದರೆ ನನ್ನ ಸ್ವಭಾವಕ್ಕೆ ಅದು ವಿರುದ್ಧವಾದದ್ದು. ದುಡಿಯದೆ ತಿನ್ನುವ ಪ್ರವೃತ್ತಿ ನನ್ನದಲ್ಲ. ನೀವು ನಾವೂ ನಿರೀಕ್ಷಿಸಬೇಕಾಗಿರುವ ಶ್ರೀ ವಿಜಯದಾಸರ ಅಪೇಕ್ಷೆಯೂ ಅದೇ ಆಗಿರಬೇಕು. ಭಗವಂತ ನನಗೊಂದು ವೃತ್ತಿಯನ್ನು ತೋರಿದ್ದಾನೆ. ಅದರಲ್ಲಿ ಆತ ಅನ್ನ ನೀಡುತ್ತಿದ್ದಾನೆ. ಆತನ ಇಚ್ಛೆ ಇರುವವರೆಗೂ ನಾನು ನುಡಿದದ್ದು ಸತ್ಯವಾಗುತ್ತದೆ. ಭವಿಷ್ಯ ಹೇಳುತ್ತಾ ಜನರನ್ನು ಸನ್ಮಾರ್ಗದಲ್ಲಿ ನಡೆಸಲು ನನ್ನನ್ನು ಉಪಕರಣವನ್ನಾಗಿ ಆತ ಮಾಡಿಕೊಂಡಿರಬೇಕು. ನಿಮ್ಮ ಸೂಚನೆಯಂತೆ ನಾವು ಮೂವರು ಕೆಲವು ಕಾಲ ಈ ರಾಜಧಾನಿಯಲ್ಲಿಯೇ ಇರುತ್ತೇವೆ. ಅದಕ್ಕೆ ಅನುವು ಮಾಡಿಕೊಟ್ಟರೆ ಸಾಕು. ಹೆಚ್ಚು ಕಾಲ ಶ್ರೀ ವಿಜಯರಾಯರು ದರ್ಶನ ಕೊಡದಿದ್ದರೆ ಅವರನ್ನು ಹುಡುಕಿಕೊಂಡು ನಾನೇ ಹೋಗುತ್ತೇನೆ." ಎಂದ ಭಾಗಣ್ಣ.

ಹೊರಗಿದ್ದ ಕುದುರೆಗಳು ಕೆನೆದವು. ಅವು ಭಾಗಣ್ಣ ಮತ್ತು ಸಹೋದರರದೇ ಆಗಿರಬೇಕು. ತಮ್ಮಂತೆ ಇರುವ ಇತರ ಕುದುರೆಗಳನ್ನು ಕಂಡು ಅವು ಹರ್ಷದಿಂದ ಹಾಗೆ ಕೆನೆದವೋ ಏನೋ! ಒಂದೇ ಸ್ವಭಾವ, ಒಂದೇ ಜಾತಿ.

ಈ ನಾಲ್ವರದೂ ಒಂದೇ ಗುರಿ. ಒಂದೇ ಅಪೇಕ್ಷೆ ಕಡೆಗೆ ಎಲ್ಲರೂ ಕಲೆತು ಆ ದಿನ ತಿಮ್ಮಣ್ಣಯ್ಯನವರ ಮನೆಗೆ ಹೋದರು.

***

ದೀಪ ಕತ್ತಲಲ್ಲಿತ್ತು ಎಂದು ಹೇಳಿದರೆ ಅದಕ್ಕಿಂತ ಬೆಪ್ಪುತನದ ಮಾತು ಮತ್ತೊಂದೆಲ್ಲಿ? ದೀಪ ಇರುವುದೇ ಆದರೆ ಕತ್ತಲೆಲ್ಲಿ ಉಳಿಯಬೇಕು? ಕತ್ತಲಿದ್ದ ಮೇಲೆ ಅಲ್ಲಿ ದೀಪವಿಲ್ಲವೆಂದು ಅರ್ಥ, ದೀಪವಿದ್ದ ಮೇಲೆ ಕತ್ತಲೆ ಹೋಯಿತೆಂದೇ ಅರ್ಥ.

ಹಾಗೆಯೇ ಭಾಗಣ್ಣ ಇದ್ದನೆಂದರೆ ಅಲ್ಲಿ ಜನಸಮುದಾಯ ಇದ್ದೇ ಇರುತ್ತದೆಂದು ಅರ್ಥ. ಜನರನ್ನು ಬಿಟ್ಟು ಭಾಗಣ್ಣನಿಲ್ಲ. ಭಾಗಣ್ಣನಿದ್ದಲ್ಲಿ ಭವಿಷ್ಯ ತಿಳಿಯುವ ತವಕದ ಜನ ಗುಂಪುಗುಂಪು ಬರತೊಡಗಿತು.

ಬಂದವರು ಸಂತೋಷದಿಂದ ಮರಳುತ್ತಿದ್ದರು. ಭಾಗಣ್ಣ ವಾಸಿಸಿದ ಮನೆ ಆದವಾನಿಯಲ್ಲಿಯೂ ನಿತ್ಯ ಸಮಾರಾಧನೆಯ ಮನೆ.

ರಾಜಕೀಯ ಸಂಗತಿಗಳು, ಆಡಳಿತ ನಾನಾ ಕ್ಲೇಷೆಗಳ ಮಧ್ಯ ದಿವಾನ ತಿಮ್ಮಣ್ಣಯ್ಯನವರಿಗೆ ಸಮಾಧಾನ ದೊರೆಯುತ್ತಿದ್ದ ಏಕೈಕ ತಾಣವೆಂದರೆ ಭಾಗಣ್ಣನ ಮನೆ ಮಾತ್ರ,

ಅವರೆಲ್ಲರೂ ಕೂಡಿ ನಿತ್ಯ ಭಜನೆ ಮಾಡುತ್ತಿದ್ದ ಜಾಗ ಶ್ರೀ ಮಂಗರಾಯನ ಸನ್ನಿಧಾನ.

ದಿನಗಳು ಉರುಳುತ್ತಿದ್ದವು. ಗುರುದರ್ಶನಕ್ಕಾಗಿ ಕಾತರಿಸುತ್ತಿದ್ದ ಭಾಗಣ್ಣನಿಗೆ ನಿತ್ಯ ಒಂದು ಯುಗದಂತೆ ಭಾಸವಾಗುತ್ತಿತ್ತು.

ಒಮ್ಮೆ ಶ್ರೀ ಮಂಗರಾಯನ ಗುಡಿಯಲ್ಲಿ ಭಾಗಣ್ಣ ತಿಮ್ಮಣ್ಣಯ್ಯನವರಿಗೆ ಹೇಳಿದ.

"ಅಮಾತ್ಯರೇ ಈ ಆದವಾನಿ ನಗರಕ್ಕೆ ರಾಜ್ಯರಾಜ್ಯಗಳಿಂದ ಜನರು ಬರುತ್ತಾರೆ. ದೊಡ್ಡ ಸಂಸ್ಥಾನದ ರಾಜಧಾನಿಯಾದ್ದರಿಂದ ಬಂದು ಹೋಗುವವರ ಸಂಖ್ಯೆಯೂ ಜಾಸ್ತಿ. ಬಂದವರಲ್ಲಿ ಅನೇಕರು ನನ್ನ ಭೇಟಿಯಾಗುತ್ತಾರೆ. ಅವರೆಲ್ಲರ ಸಂದರ್ಶನ ದಿಂದ ಉದ್ಯೋಗದ ಒತ್ತಡ ಹೆಚ್ಚಾಗಿ ಪೂಜಾದಿಗಳನ್ನು ನಿರ್ವಹಿಸುವುದಕ್ಕೆ ವೇಳೆ ಕಡಿಮೆಯಾಗುತ್ತಿದೆ. ಏಕಾಂತ ಚಿಂತನೆಗೆ ಅಡ್ಡಿಯಾಗುತ್ತಿದೆ. ಯಾವುದನ್ನು ಕಡಿಮೆ ಮಾಡಿಕೊಳ್ಳಬೇಕೆಂದು ನಾನು ಬಯಸುತ್ತಿರುವೆನೋ, ಅದೇ ಉದ್ಯೋಗ ನನ್ನನ್ನು ಹೆಚ್ಚು ಹೆಚ್ಚು ತೊಡರಿಸಿಕೊಳ್ಳುತ್ತಿದೆ. ತೀರ್ಥಯಾತ್ರೆಯ ನೆವದಲ್ಲಿ ಇಲ್ಲಿಗೆ ಬಂದೆ. ನಿಮ್ಮ ಸ್ನೇಹ ಕೃಪೆಯಿಂದ ಇಲ್ಲಿಯ ವಾಸವೂ ಪುಣ್ಯಕ್ಷೇತ್ರದ ಅನುಭವವನ್ನು ನೀಡಿತು. ಗುರುದರ್ಶನ ನಿರೀಕ್ಷೆಯಲ್ಲಿ ಇಲ್ಲಿ ಇಷ್ಟು ದಿನ ಕಳೆದೆ. ನೀವು ನಾನು ದರ್ಶನಕ್ಕಾಗಿ ಹಂಬಲಿಸುತ್ತಿರುವ ಶ್ರೀ ವಿಜಯರಾಯರು ಇಲ್ಲಿಗೆ ಭೆಟ್ಟಿ ನೀಡುವ ಲಕ್ಷಣಗಳೇ ಕಾಣುತ್ತಿಲ್ಲ. ಶ್ರೀ ವೆಂಕಟೇಶನ ವಿಶೇಷ ಕೃಪಾಪಾತ್ರರಾದ ದಾಸಾರ್ಯರು ಉತ್ತನೂರಿನ ವೆಂಕಟೇಶನ ದರ್ಶನಕ್ಕಾಗಿ ಅಲ್ಲಿಗೇ ಬಂದು ನನ್ನನ್ನು ಉದ್ಧರಿಸ ಬಹುದು. ಸದ್ಯಕ್ಕೆ ಉತ್ತನೂರಿಗೆ ಮರಳಬೇಕೆಂದು ನಿಶ್ಚಯಿಸಿದ್ದೇನೆ. ನನ್ನ ಕಡೆಯ ತಮ್ಮ ರಂಗಣ್ಣ ಈಗ ಒಬ್ಬನೇ ಅಲ್ಲಿದ್ದಾನೆ. ಅವನ ವಿದ್ಯಾಭ್ಯಾಸಕ್ಕೆ ಪಂಡಿತ ರೊಬ್ಬರನ್ನು ಕರೆಸಿ ನಮ್ಮ ಮನೆಯಲ್ಲಿ ಬಿಟ್ಟು ಬಂದಿದ್ದೇನೆ. ಅವರಿಗೆ ತೊಂದರೆ ಯಾಗಿರಲಿಕ್ಕೂ ಸಾಕು. ದಯವಿಟ್ಟು ನನ್ನ ಊರಿಗೆ ಮರಳುವುದಕ್ಕೆ ಅಪ್ಪಣೆ ಕೊಡಬೇಕು."

ಭಾಗಣ್ಣನ ನಿರ್ಧಾರ ಕೇಳಿ ತಿಮ್ಮಣ್ಣಯ್ಯನವರು ಕಸಿವಿಸಿಗೊಂಡು ನುಡಿದರು.

"ಭಾಗಣ್ಣನವರೇ ಹೆಚ್ಚಿನ ಜನಸಂದಣಿಯ ಮಧ್ಯ ಆಧ್ಯಾತ್ಮ ಸಾಧನೆ ಕಷ್ಟವೆಂದು ನಾನೂ ಒಪ್ಪಿಕೊಳ್ಳುತ್ತೇನೆ. ಹಾಗಿದ್ದರೂ ಭಗವಂತ ನಮ್ಮಿಬ್ಬರ ಸ್ವಭಾವಕ್ಕೆ ವಿರುದ್ಧವಾಗಿ ವೃತ್ತಿ ಕಲ್ಪಿಸಿಕೊಟ್ಟಿದಾನೆ. ನಾವು ಜನರಿಂದ ದೂರಹೋಗ ಬೇಕೆಂದು ಬಯಸಿದಷ್ಟೂ ಅವರು ಹೆಚ್ಚು ಹೆಚ್ಚು ನಮ್ಮನ್ನು ಸುತ್ತುವರಿಯುತ್ತಿದ್ದಾರೆ.

ಹಿಂದೊಮ್ಮೆ ನಾನು ಈ ಉದ್ಯೋಗ ಬಿಟ್ಟು ತೀರ್ಥಯಾತ್ರೆ ಮಾಡುತ್ತಾ ತಮ್ಮೊಂದಿಗಿರುತ್ತೇನೆಂದು ಶ್ರೀ ವಿಜಯರಾಯರಲ್ಲಿ ವಿನಂತಿಸಿದಾಗ ಅವರೇ ಅದನ್ನು ನಿವಾರಿಸಿದ್ದರು. ಯಾವಾಗಲೂ ನೂರಾರು ಜನರನ್ನು ಕಟ್ಟಿಕೊಂಡು ಯಾತ್ರೆ ಮಾಡುವ ಆ ಮಹಾಮಹಿಮರು ನನ್ನೊಬ್ಬನನ್ನು ಮಾತ್ರ ಕರೆದೊಯ್ಯಲು ನಿರಾಕರಿಸಿರುವರೆಂದರೆ ನಾನು ನನ್ನ ವೃತ್ತಿಯಲ್ಲಿಯೇ ಸಾಧನೆ ಮುಂದುವರಿಸ ಬೇಕೆಂಧು ಅವರ ಅಪೇಕ್ಷೆ ಇರಬೇಕು. ನನ್ನನ್ನು ಇಲ್ಲಿ ಉಳಿಸಿಹೋಗಿರುವ ಆ ತಪಸ್ವಿಗಳು ಪುನಃ ಇಲ್ಲಿಗೆ ಬಂದೇ ಬರುತ್ತಾರೆಂಬ ವಿಶ್ವಾಸ ನನಗಿದೆ. ಸ್ವಲ್ಪಕಾಲ ಕಾದು ನೋಡೋಣ. ನನ್ನ ಸಾಧನೆಯಿಂದಲ್ಲದಿದ್ದರೂ ನಿಮ್ಮ ಪುಣ್ಯದಿಂದಲಾದರೂ ನನಗೆ ಅವರ ದರ್ಶನ ಶೀಘ್ರ ದೊರಕೀತು. ನನ್ನನ್ನು ಏಕಾಂಗಿಯಾಗಿ ಬಿಟ್ಟು ಹೋಗಬೇಡಿ" ದೈನ್ಯದಿಂದ ವಿನಂತಿಸಿದ ತಿಮ್ಮಣ್ಣಯ್ಯನವರ ಪ್ರಾರ್ಥನೆಗೆ ಏನು ಉತ್ತರ ಕೊಡಬೇಕೆಂದು ಭಾಗಣ್ಣನಿಗೆ ಹೊಳೆಯಲಿಲ್ಲ.

ಇನ್ನೊಮ್ಮೆ ತನ್ನ ನಿರ್ಧಾರದ ಬಗ್ಗೆ ಒತ್ತಿ ಹೇಳಿದರಾಯಿತೆಂದು ಭಾಗಣ್ಣ ಸುಮ್ಮನಾದ.

ಆಮೇಲೆ ಕೆಲವು ದಿನಗಳ ಕಾಲ ಕಾರ್ಯಭಾರದಿಂದ ತಿಮ್ಮಣ್ಣಯ್ಯ ಭಾಗಣ್ಣನವರ ಭೆಟ್ಟಿಯಾಗಲಿಲ್ಲ. ಕಾರ್ಯಗೌರವದಿಂದ ತಿಮ್ಮಣ್ಣಯ್ಯನವರು ಪುಣೆಗೆ ಹೊರಟದ್ದೂ ಒಂದು ಕಾರಣವಾಯಿತು.

ಭಾಗಣ್ಣನಿಗೆ ಉದ್ಯೋಗ ಜಂಜಾಟ ಹೆಚ್ಚಾಗಿ ಹೋಯಿತು. ಬೆಳಗಿನ ಆಹ್ನೀಕಾದಿಗಳನ್ನು ಮುಗಿಸಿ ಉದ್ಯೋಗ ಕಟ್ಟೆಗೆ ಬರುವ ವೇಳೆಯೊಳಗೆ ಹತ್ತಾರು ಜನರು ನೆರೆದು ಬಿಟ್ಟಿರುತ್ತಿದ್ದರು.

ಬಂದ ಜನರು ಭವಿಷ್ಯ ಕೇಳಿ ತೃಪ್ತಿಯಿಂದ ಹಣ ಸುರಿದು ಹೋಗುತ್ತಿದ್ದರು. ಹಣದ ಚೀಲ ಪ್ರತಿನಿತ್ಯ ತುಂಬುತ್ತಿತ್ತು.

ಜನ ಬರುವುದು ಭವಿಷ್ಯ ಕೇಳುವುದು, ನಂತರ ಹಣ ಕೊಟ್ಟು ಹೋಗುವುದು ಅದೊಂದು ಅಂಗಡಿಯೋಪಾದಿಯಲ್ಲಿ ಸನ್ನಿವೇಶ ನಿರ್ಮಾಣವಾಗಿ ಹೋಯಿತು.

ಕ್ಷಯ ನಾಮ ಸಂವತ್ಸರದ ಒಂದು ದಿನ .......

ಬೆಸಗೊಳ್ಳುವ ಜನಗಳ ಮಧ್ಯ ತುಸು ಗಾಂಭೀರ್ಯದಿಂದ ಭಾಗಣ್ಣ ಕುಳಿತ್ತಿದ್ದಾನೆ. ಸುತ್ತಲೂ ಭವಿಷ್ಯದ ಗ್ರಂಥಗಳು ರಾಶಿ ರಾಶಿಯಾಗಿ ಬಿದ್ದಿವೆ. ಬಂದವರ ಕೈ ನೋಡಿ, ಕವಡೆಗಳನ್ನು ಹಾಕಿ, ಗ್ರಂಥಗಳನ್ನು ಪರಿಶೀಲಿಸಿ ಎದುರಿಗಿದ್ದ

ವ್ಯಕ್ತಿಯನ್ನು ಸ್ಪರ್ಶಿಸಿ, ಕಣ್ಣು ಮುಚ್ಚಿ ಯೋಚಿಸಿ ಆಮೇಲೆ ಭವಿಷ್ಯ ನುಡಿಯುತ್ತಿದ್ದ ಭಾಗಣ್ಣನ ದಿನಚರಿ ಎಂದಿನಂತೆ ನಡೆಯುತ್ತಿತ್ತು.

ಕಣ್ಣು ಮುಚ್ಚಿದ್ದ ಭಾಗಣ್ಣ. ಇದ್ದಕ್ಕಿದ್ದಂತೆ ಆತನ ಹುಬ್ಬುಗಳು ಗಂಟು ಕಟ್ಟಿದವು. ಮುಖದಲ್ಲಿ ಭೀತಿಯ ಛಾಯೆ ಮೂಡಿತು. ಧಿಗ್ಗೆಂದು ಕಣ್ಣು ತೆರೆದು ಎದುರಿಗೆ ಭವಿಷ್ಯ ತಿಳಿಯಲು ಕುಳಿತಿದ್ದ ವ್ಯಕ್ತಿಯನ್ನು ನೋಡಿದ. ಅವನ ಮುಖ ಮುಗ್ಧಭಾವ ಸೂಸುತ್ತಿತ್ತು.

ಕಳವಳಗೊಂಡ ಭಾಗಣ್ಣ. ಯಾವ ವ್ಯಕ್ತಿಯನ್ನು ಸ್ಪರ್ಶಿಸಿ ಕುಳಿತು ಕಣ್ಣು ಮುಚ್ಚಿ ಧ್ಯಾನ ಮಾಡಿದರೆ ಆ ವ್ಯಕ್ತಿಯ ಭೂತಕಾಲದ ಘಟನೆಗಳು, ಭವಿಷ್ಯದ ಸಂಗತಿಗಳು ಕಣ್ಣ ಮುಂದೆ ಕಟ್ಟಿದಂತಾಗುತ್ತಿತ್ತು. ಈದಿನ - ಈಗ - ಆ ಶಕ್ತಿ ಇಲ್ಲ ದಂತಾಗಿದೆ. ಏನೊಂದೂ ಕಾಣಿಸಲೊಲ್ಲದು! ಯಾವುದೂ ಹೊಳೆಯುತ್ತಿಲ್ಲ!

ಚಡಪಡಿಸಿಬಿಟ್ಟ ಭಾಗಣ್ಣ. ಹಿಂದೊಮ್ಮೆ ಉತ್ತನೂರಿಗೆ ಹೊಸತಾಗಿ ಬಂದಾಗ ಪ್ರಥಮ ಭೇಟಿಯಲ್ಲಿಯೇ ಭೀಮಣ್ಣನ ಮನೆಯ ಸ್ಥಿತಿ ಕಣ್ಣ ಮುಂದೆ ನಿಂತಂತಾಗಿ ಅವರ ಸ್ಥಿತಿಗೆ ಪರಿಹಾರ ಸೂಚಿಸಿದ್ದ!

ಆಗ ಅವನ ಪ್ರಯತ್ನವೇನೂ ಇಲ್ಲ. ಕಣ್ಣಿಗೆ ಕಟ್ಟಿದಂತಾಗಿತ್ತು. ಅದನ್ನಷ್ಟೇ ಅವನು ಹೇಳಿದ್ದ. ಆ ನಂತರ ಶಾಸ್ತ್ರ ಗ್ರಂಥಗಳನ್ನೇ ಅವಲಂಬಿಸಿ, ಗ್ರಂಥಗಳಲ್ಲಿ ಸೂಚಿಸಿದಂತೆ ತನ್ನ ತಪಸಿನ ಶಕ್ತಿಯನ್ನೂ ಸಮನ್ವಯಿಸಿ ಭವಿಷ್ಯ ನುಡಿಯ ತೊಡಗಿದ. ನುಡಿದಂತೆ ನಡೆಯುತ್ತಿತ್ತು. ಮುಂದೆ ನಡೆಯುವುದು ಕಣ್ಣ ಮುಂದೆ ಕಟ್ಟಿದಂತಾಗುತ್ತಿತ್ತು.

ಇಂದು ಏನಾಯಿತು ಆ ಶಕ್ತಿ? ಏಕೆ ಏನೊಂದೂ ಕಾಣಿಸಲೊಲ್ಲದು?

ಚಡಪಡಿಸತೊಡಗಿದ ಭಾಗಣ್ಣ.

ಸಣ್ಣ ವಯಸ್ಸಿಗೇ ಸಿದ್ಧಿಸಿದ ವಿದ್ಯೆಯ ಶಕ್ತಿ ಇಂದು ಬಿಟ್ಟು ಹೋಯಿತೆ? ಎದುರಿಗೆ ಕುಳಿತಿರುವವನ ಭವಿಷ್ಯದ ಮಾತಿರಲಿ, ಮುಂದೆ ತನ್ನ ಭವಿಷ್ಯದ ಗತಿಯೇನು?

ಏನಾಯಿತು ತನಗೆ! ಎಲ್ಲಿ ಹೋಯಿತು ತನ್ನ ಶಕ್ತಿ?

ಕೂಡಲೇ ಜ್ಯೋತಿಷ್ಯಶಾಸ್ತ್ರದ ಇನ್ನೊಂದು ರೀತಿಯ ವಿವರಣೆಯಂತೆ ಪಕ್ಕದಲ್ಲಿದ್ದ ಕವಡೆಗಳನ್ನು ತೆಗೆದುಕೊಂಡು ಚೆನ್ನಾಗಿ ಕುಲುಕಿ ನೆಲದ ಮೇಲೆ ಕಣ್ಣು ಮುಚ್ಚಿ ಉರುಳಿಸಿದ.

ಕವಡೆಗಳು ಅಂಗತ್ತಾದರೂ ಬೀಳಬೇಕು. ಇಲ್ಲವೇ ಬೋರಲಾದರೂ ಬೀಳ ಬೇಕು. ಅದರ ಮೇಲೆ ಲೆಕ್ಕಾಚಾರವಾಗಬೇಕು.

ಕಣ್ಣು - ತೆಗೆದು ನೋಡಿದ.

ಉರುಳಿಸಿದ ಕವಡೆಗಳು ಅಂಗತ್ತೂ ಆಗಿಲ್ಲ. ಬೋರಲೂ ಬಿದ್ದಿಲ್ಲ.

ಎಲ್ಲವೂ ಗೋಡೆಯಂತೆ ನಿಂತಿವೆ! ಲೋಕ ವಿಚಿತ್ರ ರೀತಿಯದು. ಪ್ರಕೃತಿಗೇ ವಿರುದ್ಧವಾದ ರೀತಿ.

ಭಾಗಣ್ಣ ಯೋಚಿಸಿದ.

ತನ್ನ ಶಕ್ತಿಯ ಲೋಪವಾಗಿದ್ದರೆ ಕಣ್ಣು ಮುಚ್ಚಿದಾಗ ಭವಿಷ್ಯದ ಘಟನೆಗಳು ಕಾಣದೆ ಹೋಗಬಹುದು. ಆದರೆ ಕವಡೆಗಳು ಗುರುತ್ವಾಕರ್ಷಣ ಶಕ್ತಿಗೆ ವಿರುದ್ಧ ವಾಗಿ ಗೋಡೆಯಂತೆ ನಿಂತಿವೆಯೇಕೆ? ಭೂಮಿಯ ಶಕ್ತಿ ಏನಾಯಿತು? ಉರುಳುವ ಪ್ರಕೃತಿಯ ಸಹಜ ಗುಣಕ್ಕೆ ಏಕೆ ಲೋಪ?

ಭಾಗಣ್ಣನಿಗೆ ಆಗ ಹೊಳೆಯ ತೊಡಗಿತು.

ಇದು ತನ್ನ ಶಕ್ತಿಯ ಲೋಪವಲ್ಲ. ಭೂಮಿಯೇ ಪ್ರಕೃತಿ ವಿರುದ್ಧ ಶಕ್ತಿಗೆ ಸಹಕರಿಸುವಂತೆ ಮಾಡುವ ಯಾವುದೋ ದೊಡ್ಡ ಶಕ್ತಿ ಇಲ್ಲಿಗೆ ಬಂದಿರಬೇಕು.

ಸಣ್ಣ ದೀಪವಿದ್ದಾಗ ಕತ್ತಲು ಮರೆಯಾಗುತ್ತದೆ. ಆದರೆ ಅದಕ್ಕಿಂತ ಸಾವಿರಾರು ಪಟ್ಟು ಅಧಿಕ ಬೆಳಕು ನೀಡುವ ದೀಪ ಹಚ್ಚಿದಾಗ ಮೊದಲಿದ್ದ ಸಣ್ಣ ದೀಪ ಸರಿಯಾಗಿ ಕಾಣದಾಗುತ್ತದೆ. ಅದರ ಜಾಜ್ವಲ ಪ್ರಕಾಶದ ಮುಂದೆ ಇದು ಗೌಣವಾಗುತ್ತದೆ. ಹಾಗೆ ತನ್ನ ಸಾಧನಾ ಶಕ್ತಿಗಿಂತ ಬಹಳಷ್ಟು ಹೆಚ್ಚಿನ ಶಕ್ತಿ ಇಲ್ಲಿಗೆ ಬಂದು ಅದನ್ನು ಅಡ್ಡಿಪಡಿಸುತ್ತಿರಬೇಕು.

ಯಾವುದಾಶಕ್ತಿ ?

ತನಗೆ ಒಲಿದಿರುವುದು ಸಾತ್ವಿಕ ಶಕ್ತಿ. ಅದನ್ನು ಮರೆಮಾಡುವ ಮಹಾಪ್ರಭೆ ದಿವ್ಯಶಕ್ತಿಯೇ ಆಗಿರಬೇಕು. ಕೆಟ್ಟ ಶಕ್ತಿಗಳಾವುವೂ ತನ್ನ ಶಕ್ತಿಯನ್ನು ಅಡ್ಡಿಪಡಿಸಲಾರವು.

ಹಾಗಾದರೆ ಮಹಾಪ್ರಭೆ ಸದೃಶ್ಯವಾದ ಆ ದಿವ್ಯ ಶಕ್ತಿ ಯಾವುದು?

ಜಾಣನಾದ ಭಾಗಣ್ಣ ಕೂಡಲೇ ಎದ್ದುಬಿಟ್ಟ.

ವಿನೀತನಾಗಿ ಕೈ ಮುಗಿಯುತ್ತಾ ಸುತ್ತೆಲ್ಲಾ ನೋಡಿದ.

ನೆರೆದಿದ್ದ ಜನಗಳ ಮಧ್ಯೆ ದಿವಾನ್ ತಿಮ್ಮಣ್ಣಯ್ಯನವರು ಶಾಲು ಹೊದೆದು ಮುಖ ಅರ್ಧ ಮಾಡಿ ಕುಳಿತಿದ್ದಾರೆ.

ಅವರೇ ಇದ್ದಾಗ ಭವಿಷ್ಯ ಹೇಳುವ ತನ್ನ ಶಕ್ತಿಗೆ ಎಂದೂ ಚ್ಯುತಿಯಾಗಿರಲಿಲ್ಲ.

ಅವರು ಹಾಗೆ ಹೇಳದೆ ಬರುವವರಲ್ಲ. ದೊಡ್ಡ ಸಂಸ್ಥಾನದ ಪ್ರಧಾನಿಗಳೊಬ್ಬರು ಹೊರಗೆ ಬರುವುದಕ್ಕೆ ಅನೇಕ ರೀತಿ ರಿವಾಜುಗಳಿವೆ. ಅವನ್ನೆಲ್ಲಾ ಉಲ್ಲಂಘಿಸಿ ವೇಷ ಮರೆಮಾಡಿ ತಿಮ್ಮಣ್ಣಯ್ಯನವರು ಬಂದಿರಬೇಕಾದರೆ, ಅವರನ್ನೇ ನಿಯಂತ್ರಿಸುವ ಮತ್ತೊಬ್ಬ ದೊಡ್ಡ ವ್ಯಕ್ತಿ ಅಲ್ಲಿರಲೇಬೇಕು.

ಯಾರು ಅವರು? ತಿಮ್ಮಣ್ಣಯ್ಯನವರ ಅಕ್ಕಪಕ್ಕ ನೋಡಿದ.

ತಿಮ್ಮಣ್ಣಯ್ಯನವರ ಬಲಭಾಗದಲ್ಲಿ ಒಬ್ಬ ವ್ಯಕ್ತಿ ನಗುತ್ತಾ ಕುಳಿತಿರುವುದನ್ನು ಭಾಗಣ್ಣ ನೋಡಿದ.

"ಅಂಗಡಿ ಕಟ್ಟಿ ಬಿಟ್ಟೆಯೇನಪ್ಪಾ ಏಕೆ ನಿಲ್ಲಿಸಿ ಬಿಟ್ಟೆ?" ಆ ವ್ಯಕ್ತಿ ನಗುತ್ತಾ ಕೇಳಿದಾಗ ಬೆರಗಾಗಿ ಹೋದ ಭಾಗಣ್ಣ.

ತನ್ನ ಶಕ್ತಿ ಕೆಲಸ ಮಾಡದೆ ಹೋದುದು ತನಗೊಬ್ಬನಿಗೆ ಮಾತ್ರ ಗೊತ್ತಾಗಿರುವಾಗ -ಹಾಗೆಂದು ತಾನು ತಿಳಿದಿರುವಾಗ- ಅದನ್ನೇ ಪ್ರಶ್ನಿಸುತ್ತಿರುವ ಆ ವ್ಯಕ್ತಿ- ದಿವ್ಯಶಕ್ತಿ- ಯಾರು?

ನೋಡಿದ ಭಾಗಣ್ಣ.

ನಗು ನಗುತ್ತಿರುವ ಮೊಗ, ಪಸರಿಸಿದ ದ್ವಾದಶ ನಾಮಮುದ್ರೆಗಳು, ನೊಸಲ ಲೊಪ್ಪುವ ಗಂಧಾಕ್ಷತೆ, ಮೇಲೆ ಸಣ್ಣ ಅಂಗಾರ. ಕಿವಿಯಲ್ಲಿ ಹಸನಾದ ಎಳೆ ತುಳಸಿ, ಕೊರಳಲ್ಲಿ ಶೋಭಿಸುತ್ತಿರುವ ತುಳಸಿ ಮಾಲೆ.

ಅಬ್ಬಾ ಏನು ಆ ರೂಪ? ಆ ಕಣ್ಣುಗಳಲ್ಲಿ ಅದೆಂಥ ಆಕರ್ಷಕ ಚೆಲುವು! ಏನು ಆ ತೇಜೋಮಯ ರೂಪ!

ಮುಗಿದಿದ್ದ ಭಾಗಣ್ಣನ ಕೈಗಳು ಕಂಪಿಸತೊಡಗಿದವು. ಮೈಯೆಲ್ಲಾ ರೋಮಾಂಚನಗೊಂಡಿತ್ತು. ಆನಂದ ಆಶ್ಚರ್ಯಗಳಿಂದ ಧ್ವನಿ ಏಳದಾಗಿತ್ತು. ಮುಗಿದಿದ್ದ ಕೈಗಳನ್ನು ಬಿಚ್ಚದಲೆ ಹೆಜ್ಜೆ ಹೆಜ್ಜೆ ಹಾಕುತ್ತಾ ಭಾಗಣ್ಣ ಆ ದಿವ್ಯಶಕ್ತಿಯ ಬಳಿ ಅರಿವಿಲ್ಲದೆ ಹೋಗಿ ಪಾದದ ಬಳಿ ಧೊಪ್ಪೆಂದು ಹೊರಳಿ ಬಿದ್ದ.

ದಿವಾನ್ ತಿಮ್ಮಣ್ಣಯ್ಯನವರು ಭಾಗಣ್ಣನನ್ನು ಹಿಡಿದು ಮೇಲಕ್ಕೆಬ್ಬಿಸಿ ಬೆನ್ನು ಸವರುತ್ತಾ ವಿವರಿಸಿದರು.

"ನೀವೂ ನಾನೂ ಕಾಯುತ್ತಿದ್ದ ಈ ಶತಮಾನದ ಮಹಾತಪಸ್ವಿ. ನಮ್ಮೆಲ್ಲರ ಆರ್ತತೆಯನ್ನು ಅರಿತು ಅವತರಿಸಿರುವ ಶ್ರೀ ವಿಜಯದಾಸ ಗುರುವರ್ಯರು ಇವರೇ ಭಾಗಣ್ಣ. ನೀವು ವೃತ್ತಿಯಲ್ಲಿ ನಿರತರಾಗಿದ್ದಾಗಲೇ ನೋಡಬೇಕೆಂದು ಅಪೇಕ್ಷಿಸಿದ್ದರಿಂದ ಇವರ ಆಜ್ಞೆಯಂತೆ ನಾನು ನಿಮಗೆ ತಿಳಿಸದಂತೆ ಬರಬೇಕಾಯಿತು."

ತಿಮ್ಮಣ್ಣಯ್ಯನವರು ಹೇಳುತ್ತಿರುವಾಗಲೇ ಭಾಗಣ್ಣನ ಭಾವನೆಗಳು ಉಕ್ಕಿ ಬಿಟ್ಟವು. ಮತ್ತೊಮ್ಮೆ ಅವರ ಪಾದಗಳ ಬಳಿ ಬಿದ್ದು ಗಟ್ಟಿಯಾಗಿ ಅವುಗಳನ್ನು ಹಿಡಿದು ಬಿಟ್ಟ.

"ಅನುಗ್ರಹಿಸಿ ಬಿಟ್ಟಿರಿ ದಾಸವರ್ಯಾ. ನಿಮ್ಮನ್ನು ಅರಸುತ್ತಾ ನಾನು ಎಲ್ಲಿಗಾದರೂ ಬರಲು ಸಿದ್ಧನಿದ್ದೆ. ನಿಮ್ಮ ದರ್ಶನಕ್ಕಾಗಿ ಯಾವ ತ್ಯಾಗಕ್ಕಾದರೂ ನಾನು ಅಣಿಯಾಗಿದ್ದೆ. ಕಾಶಿಯಾತ್ರೆಯ ಪುಣ್ಯ ಈ ದಿನ ಸಿದ್ಧಿಸಿತು. ನನ್ನ ಜನ್ಮ ಜನ್ಮಗಳ ಪುಣ್ಯದ ಪ್ರಭಾವ ನಿಮ್ಮ ಸೀಮಾತೀತವಾದ ಕಾರುಣ್ಯ, ನಾನಿದ್ದಲ್ಲೇ ಬಂದು ದರ್ಶನ ನೀಡಿದಿರಿ. ನಿಮ್ಮ ದರ್ಶನದಿಂದ ನಾನು ಉದ್ಧಾರನಾಗಿ ಹೋದೆ."

ಭಾಗಣ್ಣನ ಕಣ್ಣುಗಳಿಂದ ಧಾರೆ ಧಾರೆಯಾಗಿ ನೀರು ಹರಿಯತೊಡಗಿತ್ತು. ಭಾವೋದ್ವೇಗ ಸ್ವಲ್ಪ ಕಡಿಮೆಯಾಗಲೆಂದೋ ಅಥವಾ ತಮ್ಮ ಪಾದಗಳನ್ನು ನೇರವಾಗಿ ಸ್ಪರ್ಶಿಸುತ್ತಾ ಇರುವ ಯೋಗ್ಯತೆ ಭಾಗಣ್ಣನಿಗೆ ಇದೆಯೆಂದೋ, ವಿಜಯದಾಸರು ಮುಗುಳ್ನಗುತ್ತಾ ಹಾಗೆ ನಿಂತೇ ಇದ್ದರು.

ತಿಮ್ಮಣ್ಣಯ್ಯನವರಿಗೆ ಎಲ್ಲಿಲ್ಲದ ಆಶ್ಚರ್ಯ. ಭಾಗಣ್ಣನ ಮನ ಪರಿಪಾಕ ಅವರಿಗೆ ಗೊತ್ತಿತ್ತು. ಇಂಥ ಸಮಯ ದೊರಕಿದರೆ ಭಾಗಣ್ಣ ಎಷ್ಟು ಹರ್ಷಿಸ ಬಹುದೆಂದು ಅವರು ಊಹಿಸಿದ್ದರು.

ಆದರೆ ವಿಜಯದಾಸರು ಹಾಗೆ ಬಹಳ ಹೊತ್ತು ನಿಂತುಕೊಂಡದ್ದೇ ಅವರ ಆಶ್ಚರ್ಯಕ್ಕೆ ಕಾರಣ. ಪಾದಗಳನ್ನು ಗಟ್ಟಿಯಾಗಿ ಹಿಡಿದು ಭಾಗಣ್ಣ ಪ್ರಾರ್ಥಿಸುತ್ತಿದ್ದರೆ ಬಹಳ ದಿನಗಳಿಂದ ಹುಡುಕುತ್ತಿದ್ದ ಅಮೂಲ್ಯ ವಸ್ತುವೊಂದು ಕೈಗೆ ಸಿಕ್ಕಾಗ ಹೊಂದಬಹುದಾದ ತೃಪ್ತಿಯ ಭಾವ ಅವರ ಮುಖದಲ್ಲಿ ವಿರಾಜಿಸುತ್ತಿದ್ದುದನ್ನು ತಿಮ್ಮಣ್ಣಯ್ಯನವರು ಗಮನಿಸಿದರು.

ಸ್ವಲ್ಪ ಹೊತ್ತಿನ ಮೇಲೆ ವಿಜಯದಾಸರೇ ಭಾಗಣ್ಣನ ಎರಡು ರಟ್ಟೆಗಳನ್ನು ಹಿಡಿದು ಮೇಲಕ್ಕೆತ್ತಿ

"ಏಳು ಭಾಗಣ್ಣಾ. ನನ್ನ ಗುರು ಶ್ರೀ ಪುರಂದರದಾಸರು ನನಗೆ ಒಪ್ಪಿಸಿರುವ ಮಹಾಕಾರ್ಯದ ನಿರ್ವಹಣೆಗೆ ನಿನ್ನ ಜೊತೆಯೂ ಅವಶ್ಯವಿತ್ತು. ನಿನ್ನಂಥವನಿಂದ ಲೋಕ ಬೆಳಕು ಪಡೆಯುತ್ತದೆ. ನಿನ್ನಿಂದ ಬೆಳಕು ಪಡೆದವರು ಜಾಜ್ವಲಮಾನರಾಗಿ ಪ್ರಕಾಶಿಸುತ್ತಾರೆ. ಸಾಧನಾಜೀವಿಗೆ ಗುರು ಸಿಕ್ಕುವುದು ಎಷ್ಟು ಭಾಗ್ಯವೋ ಗುರುವಿಗೆ ಉತ್ತಮ ಶಿಷ್ಯ ಸಿಕ್ಕುವುದು ಅಷ್ಟೇ ಭಾಗ್ಯ. ಏಳು ಭಾಗಣ್ಣಾ" ಎಂದು ಎಬ್ಬಿಸಿ ಮೈತಡುವುತ್ತಾ ಒಂದೆಡೆ ಕರೆದುಕೊಂಡು ಹೋಗಿ ಕೂಡಿಸಿದರು.

ತಿಮ್ಮಣ್ಣಯ್ಯನವರು ಬಿಂಬದರ್ಶನಕ್ಕೆ ಪ್ರಾರ್ಥಿಸಿದಾಗಲೆಲ್ಲಾ ಸ್ವಲ್ಪ ಕಾಲಕಾಯಿರೆಂದು ಹೇಳುತ್ತಿದ್ದರೆಂಬ ವಿಷಯ ಭಾಗಣ್ಣನಿಗೆ ಗೊತ್ತಿತ್ತು. ಆದರೆ ತನ್ನನ್ನು ಶಿಷ್ಯನನ್ನಾಗಿ ಸ್ವೀಕರಿಸಲು ಒಪ್ಪಿದ್ದು ತನ್ನ ಪೂರ್ವಜನ್ಮದ ಪುಣ್ಯ ಎಂದು ಅವನಿಗೆ ಅನಿಸದೆ ಇರಲಿಲ್ಲ.

"ದಾಸಾರ್ಯಾ, ಕಾಶೀಯಾತ್ರೆಯ ಉದ್ದಕ್ಕೂ ನಿಮ್ಮ ಕೀರ್ತಿ ಕೇಳಿಬರುತ್ತಿತ್ತು. ನಿಮ್ಮ ಪದ ಪದ್ಯ ಸುಳಾದಿಗಳು ಅಲ್ಲೆಲ್ಲಾ ಪ್ರಚಾರದಲ್ಲಿವೆ. ನಿಮ್ಮ ಅಂಕಿತವಾದ 'ವಿಜಯ ವಿಠಲ' ಶಬ್ದ ಕಿವಿಗೆ ಬಿದ್ದೊಡನೆಯೇ ನನಗೆ ಅದೇಕೋ ಅನಿರ್ವಚನೀಯ ಆನಂದವಾಗುತ್ತಿತ್ತು. ಆ ಸರ್ವೋತ್ತಮನಾದ ವಿಜಯ ವಿಠಲ ನನ್ನಲ್ಲಿ ಯಾವ ರೂಪದಲ್ಲಿದ್ದಾನೆ, ವಿಜಯವಿಠಲ ಪದ ನನಗೆ ಅದೇಕೆ ಅಷ್ಟು ಆನಂದ ನೀಡುತ್ತಿತ್ತು? ನಿಮ್ಮ ದರ್ಶನವಾಗುವವರೆಗೂ ನನ್ನ ಮನಸ್ಸು ಶಾಂತಿಯನ್ನು ಪಡೆಯಲಿಲ್ಲ ವೇಕೆ?" ಭಾಗಣ್ಣ ಪ್ರಶ್ನೆಗಳ ವರ್ಷವನ್ನು ಸುರಿಸಿಬಿಟ್ಟ.

ವಿಜಯದಾಸರು ಅದಕ್ಕೆ ಪ್ರತಿಯಾಗಿ ಉತ್ತರಗಳನ್ನು ನೀಡದೆ ತಾವೂ ಪ್ರಶ್ನೆಗಳನ್ನೇ ಮುಂದೆ ಇಟ್ಟರು.

"ಯಾರಾದರೂ ನಿನ್ನ ಮುಂದೆ ಕುಳಿತು ಪ್ರಶ್ನೆಗಳನ್ನು ಕೇಳಿದರೆ ಅವರ ಪೂರ್ವಾಪರವೆಲ್ಲಾ ನಿನಗೆ ತಿಳಿಯುತ್ತಿತ್ತು. ಆದರೆ ನಿನ್ನದು ಮಾತ್ರ ನಿನಗೆ ತಿಳಿಯಲಿಲ್ಲ ವೇಕೇ -

"ಯಾರಾದರೂ ಕಳೆದುಹೋದ ವಸ್ತುವನ್ನು ಪತ್ತೆಹಚ್ಚಲು ನಿನ್ನ ಬಳಿ ಬಂದರೆ ಅವರ ವಸ್ತುಗಳು ಇಂಥಲ್ಲೇ ಇವೆಯೆಂದು ಹೇಳುವಷ್ಟು ಶಾಸ್ತ್ರಜ್ಞಾನ ನಿನಗೆ ಸಿದ್ಧಿಸಿದೆ. ಆದರೆ ನೀನು ಕಳೆದುಕೊಂಡ ಮಾನಸಿಕ ಸ್ಥಿತ್ಯತ್ವ ಯಾವಾಗ ಎಲ್ಲಿ ದೊರಕುತ್ತದೆಯೆಂದು ಮಾತ್ರ ನಿನಗೆ ತಿಳಿಯಲಿಲ್ಲ - ಏನು ಕಾರಣ? -

"ನೀನು ಉಪಾಸನೆಗೆ ಕುಳಿತಾಗ ದೇವಾನುದೇವತೆಗಳು ದರ್ಶನ ನೀಡುತ್ತಿದ್ದರು. ಅವರೆಲ್ಲರ ಚಾಲಕ ಶಕ್ತಿಯಾದ ಮೂಲ ಮೂರ್ತಿ ಮಾತ್ರ ಏಕೆ ಕಾಣಿಸಲಿಲ್ಲ?

ಇಂಥ ಪ್ರಶ್ನೆಗಳಿಗೆಲ್ಲಾ ಉತ್ತರ ಹೊಳೆಯದೆ ತಬ್ಬಿಬ್ಬುಗೊಂಡು ಕುಳಿತ್ತಿಯಲ್ಲವೆ?" ನಗುನಗುತ್ತಾ ವಿಜಯರಾಯರು ಪ್ರತಿಪ್ರಶ್ನಿಸಿದರು.

ಭಾಗಣ್ಣ ಬೆರಗಾಗಿ ಹೋದ. ತಾನು ಕೇಳಬೇಕಾದ ಪ್ರಶ್ನೆಗಳನ್ನು ಮುಂದಾಗಿಯೇ ನುಡಿಯುತ್ತಿರುವ ವಿಜಯದಾಸರ ಶಕ್ತಿಕಂಡು ಅವಾಕ್ಕಾಗಿ ಬಿಟ್ಟ.

ಬೇರೆಯವರ ಭವಿಷ್ಯ ತನಗೆ ಕಾಣುತ್ತಿತ್ತು. ಅವರ ಮನಸ್ಸಿನ ತುಮುಲವನ್ನು ತಾನು ಊಹಿಸುತ್ತಿದ್ದ. ಆದರೆ ಬೇರೆಯವರ ಬುದ್ಧಿಯೊಳಗೆ, ಹೃದಯದೊಳಗೆ ಹೋಗಿ ಅಲ್ಲಿಯ ಸ್ಥಿತ್ಯಂತರಗಳನ್ನು ನುಡಿಯುವ ದಾಸಾರ್ಯರ ಅತೀಂದ್ರಿಯ ಶಕ್ತಿ ಕಂಡು ಅವನು ಬೆರಗಾಗಿದ್ದು ನ್ಯಾಯವೆ.

"ಪ್ರಶ್ನೆಗಳಿಗೆ ಉತ್ತರಗಳನ್ನು ನಾನು ನೀಡಬೇಕಾಗಿಲ್ಲ. ಮುಂದೆ ನಿನಗೇ ತಿಳಿಯುತ್ತದೆ" ಎಂದು ವಿಜಯದಾಸರು ಹೇಳಿ,

"ಬಿಂಬದರ್ಶನ ಬಯಸುತ್ತಿರುವ ನಿನಗೆ ಈಗ ಕಾಲಪಕ್ವವಾಗಿದೆ. ನನ್ನ ವಿಜಯವಿಠಲ ನಿನ್ನಲ್ಲಿ ಅನುಗ್ರಹಿಸಿದ್ದಾನೆ. ಗಾಯತ್ರೀ ಮಂತ್ರಸಿದ್ಧನಾದ ನಿನಗೆ ಉಪಾಸನಾರೀತಿಗಳನ್ನು ತಿಳಿಯುವುದಕ್ಕೆ ಹೆಚ್ಚು ಕಷ್ಟವೂ ಆಗುವುದಿಲ್ಲ. ಸಣ್ಣ ವಯಸ್ಸು ನಿನ್ನದು. ಇಷ್ಟು ಚಿಕ್ಕವಯಸ್ಸಿನಲ್ಲಿಯೇ ಈ ಸಿದ್ಧಿ ಸಿಕ್ಕುವುದಕ್ಕೆ ನಿನ್ನ ಜೀವದ ಯೋಗ್ಯತೆಯೇ ಕಾರಣ. ಇನ್ನು ಮುಂದೆ ನಾನು ಹೇಳಿಕೊಟ್ಟ ಹಾಗೆ ಪೂಜಾದಿಗಳನ್ನು ನಿರ್ವಹಿಸು. ವೃಕ್ಷದಲ್ಲಿಯೇ ಪಕ್ವಗೊಂಡ ಫಲ ಸಿಹಿಭರಿತವಾಗಿ ಲೋಕಕ್ಕೆ ಸಿಕ್ಕುವ ಕಾಲ ಹತ್ತಿರಬಂದಿದೆ" ಎಂದು ಹೇಳಿ ಭಾಗಣ್ಣನನ್ನು ತಾವು ಇಳಿದು ಕೊಂಡ ಜಾಗಕ್ಕೆ ಕರೆದೊಯ್ದರು ವಿಜಯಾರ್ಯರು.

***

ಭಾಗಣ್ಣ ಪದ್ಮಾಸನಾಯುಕ್ತನಾಗಿ ಕುಳಿತಿದ್ದಾನೆ. ಕಣ್ಣುಗಳು ಅರ್ಧ ಮುಚ್ಚಿವೆ. ವಿಜಯದಾಸರ ವರದ ಹಸ್ತ ಆತನ ಮಸ್ತಕದ ಮೇಲಿದೆ.

ಹಸ್ತವಲ್ಲವದು, ಸಮಸ್ತ ಶಕ್ತಿಯೇ ಏಕತ್ರಗೊಂಡು ತನ್ನ ಚಿತ್‌ಶಕ್ತಿಯನ್ನು ಒಳಗೆ ಒಳಗೆ ಕಳಿಸುತ್ತಿರುವಂತೆ ಭಾಸವಾಗುತ್ತಿದೆ ಭಾಗಣ್ಣನಿಗೆ. ಸಾಮಾನ್ಯವಾಗಿ ಐದಾರು ಅಡಿ ಎತ್ತರವಿರುತ್ತದೆ ಮಾನವ ಶರೀರ. ಲೋಕದ ರೀತ್ಯಾ ತನ್ನ ಎತ್ತರ ಇನ್ನೂ ಕಡಿಮೆ. ಈ ಶರೀರದೊಳಗೆ ಎಷ್ಟೊಂದು ಶಕ್ತಿಗಳು! ಅದೆಂಥ ಪ್ರಕಾಶ!

ಸ್ವಲ್ಪ ಬೆಳಕು ಹೆಚ್ಚಾದರೆ ಕುಕ್ಕುತ್ತವೆ ಕಣ್ಣುಗಳು. ಆದರೆ ಶರೀರದೊಳಗೆ ಅದೆಂಥ ಪ್ರಕಾಶ ಮಾನವಾದ ಜ್ಯೋತಿಯ ಬೆಳಗು!

ಹೊರಗಿನ ಬೆಳಕನ್ನೇ ಭವ್ಯವೆಂದು ಮಾನವ ನಂಬುತ್ತಿದ್ದಾನೆ. ಒಳ ಬೆಳಕಿನ ಪರಿ ತಿಳಿಯುವುದರತ್ತ ಅವನ ಪ್ರಯತ್ನ ಸಾಗಿಲ್ಲ.

ಭಾಗಣ್ಣನಿಗೆ ಆ ದೇದೀಪ್ಯಮಾನವಾದ ಬೆಳಕಿನಲ್ಲಿ ಸಾಗುವುದಕ್ಕೆ ಶಕ್ತಿ ಸಾಲುತ್ತಿಲ್ಲ. ಕತ್ತಲು ಮನುಷ್ಯನನ್ನು ಮುಂದೆ ಸಾಗದಂತೆ ಮಾಡುತ್ತದೆ. ಅತೀ ಬೆಳಕು ಭರಿಸುವುದಕ್ಕೆ ಶಕ್ತಿ ಬರುವತನಕ ನಡೆಯನ್ನು ಸ್ಥಗಿತಗೊಳಿಸುತ್ತದೆ.

"ಗುರುಗಳೇ ಏನು ಈ ಪ್ರಕಾಶ?" ಶರೀರದೊಳಗೇ ಕೂಗಿದ ಭಾಗಣ್ಣ.

"ಮುಂದೆ ಬಾ" ಶಕ್ತಿರೂಪವಾಗಿ ವಿಜಯದಾಸರು ಭಾಗಣ್ಣನನ್ನು ಕೈಹಿಡಿದು ಮುಂದೆ ಕರೆದೊಯ್ದರು.

ಅಬ್ಬಾ ಎಷ್ಟು ದೂರ? ಇಡೀ ಬ್ರಹ್ಮಾಂಡವೇ ಶರೀರದೊಳಗೆ ಕಾಣುತ್ತಿದೆ. ಯೋಜನಯೋಜನ ದೂರ. ದೂರ ಎನಿಸಿದರೂ ಸರಿಯುವುದಕ್ಕೆ ಶ್ರಮವಿಲ್ಲ. ಮಮತಾಮೂರ್ತಿ ಶಕ್ತಿಯಾಗಿ ಕರೆದೊಯ್ಯುತ್ತಿದ್ದಾರೆ.

ಎಲ್ಲೆಲ್ಲಿಯೂ ಯಾರ್ಯಾರೋ ಕಾಣಿಸುತ್ತಿದ್ದಾರೆ. "ಗುರುಗಳೇ ಇವರೆಲ್ಲಾ ಯಾರು? ಏಕೆ ನನ್ನನ್ನು ಸುತ್ತುವರೆದಿದ್ದಾರೆ?"

"ತತ್ವಾಭಿಮಾನಿ ದೇವತೆಗಳು, ವರ್ಣಾಭಿಮಾನಿ ದೇವತೆಗಳು ನಿನ್ನನ್ನು ಆಶೀರ್ವದಿಸುತ್ತಿದ್ದಾರಪ್ಪಾ. ಬಹಿರಚಲನೆಯಿಲ್ಲ ನಿನಗೀಗ. ಅಂತರ್‌ಶಕ್ತಿ ಅಧಿಕ ಗೊಂಡಿದೆ. ಉದ್ದೀಪನಗೊಂಡ ನಿನ್ನ ಚಿತ್‌ಶಕ್ತಿಯಿಂದ ಏನೆಲ್ಲವನ್ನೂ ಕಾಣುವ ಸಾಮರ್ಥ್ಯ ನಿನಗೀಗ ಸಿದ್ಧಿಸಿದೆ. ನೋಡು, ದೂರದೂರ ನೋಡು"

ಸ್ಯೂಂಯ್ಯ ಎಂದು ಗಾಳಿ ಬೀಸಿತು. ಆ ಗಾಳಿಯಲ್ಲಿಯೂ ಒಂದು ನಾದ "ಸೋ...ಹಂ...ಸ್ವಾ...ಹಾ"

"ಏನು ಗುರುಗಳೇ ಈ ನಾದ?"

ಗುರುಗಳೇ ಕೈ ಮುಗಿದು ಹೇಳಿದರು "ಪ್ರಾಣದೇವರು ಉಚ್ವಾಸ ನಿಶ್ವಾಸಗಳಲ್ಲಿ ಭಗವಂತನನ್ನು ಜಪಿಸುತ್ತಿದ್ದಾರೆ ನೋಡು."

ಗಾಳಿ ಆಕಾರ ಪಡೆಯಿತು. ವಾಯುದೇವರ ರೂಪದರ್ಶನ ಭಾಗಣ್ಣನಿಗೆ.

ಆಶೀರ್ವದಿಸಿದರು ವಾಯುದೇವರು. ಅವರು ಆಶೀರ್ವದಿಸಿ ಕೃಪೆ ಮಾಡಿದ ಮೇಲೆ ಅವರೇ ಪ್ರಾರ್ಥಿಸಿದರು.

ವೇದವ್ಯಾಸರು ಶ್ರೀ ಕೃಷ್ಣನಾಗಿ ಅವತಾರವೆತ್ತಿದಾಗ ತಮ್ಮ ಮಗನಾಗಿ ನಿನ್ನನ್ನು ಪಡೆದರು. 'ಚಾರುದೇಷ್ಣ' ಎಂಬ ಹೆಸರಿನಿಂದ ಆಗಲೂ ಪರಮಾತ್ಮನ ಸೇವೆ ಮಾಡಿದೆ."

"ಎಂಥ ಅನುಗ್ರಹ ಪರಮಾತ್ಮನದು! ಕೃಷ್ಣಾವತಾರದಲ್ಲಿ ನನ್ನನ್ನು ಮಗನನ್ನಾಗಿ ಮಾಡಿಕೊಂಡನೆ?"

"ಹೌದು ಭಾಗಣ್ಣಾ, ವಾಯು ದೇವರು ಆಗ ಭೀಮಸೇನರಾಗಿ ಅವತಾರ ವೆತ್ತಿದ್ದರು. ಅವರಿಬ್ಬರ ಅವತಾರ ಕಾರ್ಯಕ್ಕೆ ನೆರವಾಗಿ ನೀನು ಸೇವೆ ಸಲ್ಲಿಸಿದೆ. ದುಷ್ಟ ದಮನ, ಶಿಷ್ಟ ರಕ್ಷಣಾ ಕಾರ್ಯಕ್ಕೆ ಅವರು ನಿನ್ನನ್ನು ಜೊತೆಗೂಡಿಸಿ ಕೊಂಡು ಸಾಗಿದರು. ಈಗ ಅದೇ ಭೀಮಸೇನದೇವರು ಮಧ್ವಾಚಾರ್ಯರಾಗಿ ಕಲಿಯುಗದಲ್ಲಿ ಅವತಾರವೆತ್ತಿ ದ್ವೈತಸಿದ್ಧಾಂತದ ದರ್ಶನ ಮಾಡಿಸಿದ್ದಾರೆ. ಶ್ರೀ ಕೃಷ್ಣದ್ವೈಪಾಯನರ ಮೂಲ ಉದ್ದೇಶವನ್ನು ಜಗತ್ತಿಗೆ ಸರಿಯಾಗಿ ತಿಳಿಸಿದವರು ಶ್ರೀ ಮಧ್ವಾಚಾರ್ಯರು. ಹಿಂದಿನ ಅವರ ಅವತಾರಗಳಲ್ಲಿ ಅವರೊಂದಿಗೆ ಶ್ರಮಿಸಿದಂತೆ ಈ ಜನ್ಮದಲ್ಲಿಯೂ ಅವರ ತತ್ವದರ್ಶನವನ್ನು ಜಗತ್ತಿಗೆ ಸಾರುವುದಕ್ಕಾಗಿ ಹುಟ್ಟಿ ಬಂದ ಅವತಾರ ಪುರುಷನಪ್ಪಾ ನೀನು. ನಿನ್ನಿಂದ ಲೋಕಕಲ್ಯಾಣ ಕಾರ್ಯವಾಗ ಬೇಕಾಗಿದೆ. ನಿನ್ನ ಕೃಪೆಯಾದರೆ ಮಾತ್ರ ಶ್ರೀ ಮದಾಚಾರ್ಯರ ನಿಜ ತತ್ವಗಳು ಜೀವಿಗಳಿಗೆ ಹೊಳೆಯುತ್ತವೆ. ನಿನ್ನಿಂದ ಭಗವನ್ಮಂದಿರಕ್ಕೆ ಪ್ರವೇಶ ಪಡೆದ ಸರ್ವ ದೇವತೆಗಳು ನೀನು ಅನುಗ್ರಹಿಸಿದರೆ ಅವರೂ ಅನುಗ್ರಹಿಸುತ್ತಾರೆ."

ಭಾಗಣ್ಣ ಆಶ್ಚರ್ಯದಿಂದ ಕೇಳುತ್ತಿದ್ದ.

"ಈ ಜನ್ಮದಲ್ಲಿಯ ನಿನ್ನ ಸಂಗತಿಗಳನ್ನು ಒಮ್ಮೆ ಜ್ಞಾಪಿಸಿಕೋ ಭಾಗಣ್ಣಾ, ಗಾಯತ್ರಿ ಮಂತ್ರಸಾಧನೆಯಲ್ಲಿ ನೀನು ನಿರತನಾಗಿದ್ದಾಗ ನಿನ್ನ ಹೊಟ್ಟೆಯ ಸುತ್ತ ನಾಗರ ಹಾವೊಂದು ಬಂದು ಸುತ್ತಿಕೊಳ್ಳುತ್ತಿತ್ತು. ಗಣೇಶ ಅವತಾರದಲ್ಲಿ ನಾಗರ ಹಾವನ್ನು ಹೊಟ್ಟೆಗೆ ಸುತ್ತಿಕೊಂಡು ಚಲಿಸಿದ ಮಹಾಮಹಿಮನಲ್ಲವೇ ನೀನು? ಅದಕ್ಕಾಗಿ ಹಾವು ನಿನ್ನ ಬಳಿ ಬರುತ್ತಿತ್ತು. ಅದು ಒಮ್ಮೆ ಮಾತ್ರ ಜನರ ಕಣ್ಣಿಗೆ ಕಾಣಿಸಿಕೊಂಡು ದೊಡ್ಡ ಹಗರಣವೇ ಆಯಿತು. ಮದುವೆ ಎಂಬ ಶಬ್ದ ಕಿವಿಗೆ ಬಿದ್ದೊಡನೆ ನೀನು ಹೌಹಾರಿ ಚೀರುತ್ತಿದ್ದೆ. ಅದಕ್ಕೆ ನಿನ್ನ ಗಣೇಶ ಅವತಾರವೇ ಕಾರಣ. ಗಣೇಶ ಅವತಾರದಲ್ಲಿ ಬ್ರಹ್ಮಚಾರಿಯಾಗಿಯೇ ನೀನು ಸಾಧನೆ ಮಾಡುತ್ತಿರುವೆ. ಆದ್ದರಿಂದ ಈ ಅವತಾರದಲ್ಲಿ ನೀನು ಬ್ರಹ್ಮಚಾರಿಯಾಗಿಯೇ ಇರಬೇಕೆಂದು ಶ್ರೀಹರಿ ಸಂಕಲ್ಪವಿದೆ. ಅದೇ ಕಾರಣಕ್ಕೆ ಮದುವೆಯೆಂದರೆ ನೀನು

ಬೆದರುತ್ತಿದ್ದೆ. ವಯಸ್ಸು ಬಂದರೂ ಮದುವೆಯ ಅಪೇಕ್ಷೆಯಿಲ್ಲ ನಿನಗೆ. ಸಿದ್ಧಿ ವೃದ್ಧಿಗಳು ನಿನ್ನ ಹೆಂಡಂದಿರೆಂದು ಮೂಲ ಅವತಾರದ ನಿನ್ನ ರೂಪವನ್ನು ಕೆಲವರು ತಪ್ಪಾಗಿ ಭ್ರಮಿಸಿದ್ದಾರೆ. ಆದರೆ ನಿನ್ನ ಕೃಪೆ ಆದವರಿಗೆ ಸಿದ್ಧಿವೃದ್ಧಿಗಳು ಸಾಧ್ಯ ವಾಗುತ್ತವೆಂಬುದೇನೋ ಸತ್ಯ. ನಿನ್ನನ್ನು ಕೆಲವರು ಸರ್ವಶ್ರೇಷ್ಠನೆಂದು ಹೊಗಳು ವವರೂ ಉಂಟು. ಬಾಗಿಲೇ ಮನೆಯೆಂಬ ಕಲ್ಪನೆ ಇರುವವರ ಬಗ್ಗೆ ಹೆಚ್ಚು ಮಾತು ಬೇಡ. ಎಲ್ಲಾ ವಾಮೋಪಾಸಕರು ನಿನ್ನನ್ನು ಆರಾಧಿಸುತ್ತಾರೆ. ನಿನ್ನ ಮೂಲ ಅವತಾರ ಬಹು ಜಿಜ್ಞಾಸಾಮಯ. ನಿನ್ನ ಭಾವನೆಗಳನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಲು ನಿನ್ನ ಈಗಿನ ಅವತಾರವೇ ಜಗತ್ತಿಗೆ ನೆರವಾಗಬೇಕಾಗಿದೆ. ಅದನ್ನು ಸಾರುವುದಕ್ಕಾಗಿ ನೀನು ಈಗ ಅವತಾರ ಎತ್ತಿರುವೆ."

ಭಾಗಣ್ಣ ಕೈ ಮುಗಿದು ಕೇಳಿದ "ಹುಟ್ಟಿದ ಕಾರ್ಯದ ಉದ್ದೇಶವೇನೋ ತಿಳಿಯಿತು. ಆದರೆ ಗುರಿ ತಲುಪುವ ದಾರಿ ಯಾವುದು ಗುರುವರ್ಯಾ?"

"ನಾನು ಹಿಡಿದ ಮಾರ್ಗದಲ್ಲಿಯೇ ನೀನೂ ಸಾಗಿ ಬಾ. ಶ್ರೀ ಪುರಂದರ ದಾಸರು ತೋರಿದ ಮಾರ್ಗದಲ್ಲಿಯೇ ನಾನು ನಡೆಯುತ್ತಿದ್ದೇನೆ. ಕನ್ನಡ ಹರಿದಾಸ ಸಾಹಿತ್ಯ ನಿನ್ನಿಂದ ವರ್ಧಿಸಬೇಕಾಗಿದೆ. ಸರಿತತ್ವಗಳು ತಿಳಿಯದೆ ಪರಿತಪಿಸುತ್ತಿರುವ ಜೀವಿಗಳಿಗೆ ನಿನ್ನ ಸಾಹಿತ್ಯ ದಾರಿ ದೀಪವಾಗಬೇಕಾಗಿದೆ. ಅತಿ ಕ್ಲಿಷ್ಟವಾದ ಸಂಗತಿ ಗಳನ್ನು ಇಷ್ಟವಾಗುವ ಹಗುರ ರೀತಿಯಲ್ಲಿ ಪದಪದ್ಯಸುಳಾದಿಗಳ ಮೂಲಕ ಜಗತ್ತಿಗೆ ವಿವರಿಸು. ಗೀರ್ವಾಣ ಭಾಷೆಯ ಸೊಗಸು ವರ್ಧಿಷ್ಣುತೆ ಕನ್ನಡದಲ್ಲಿ ಕಾಣಿಸುವ ಕಾರ್ಯ ನಿನ್ನಿಂದಾಗಲಿ. ಕನ್ನಡ ಭಾಷೆ ನಿನ್ನಿಂದ ಶ್ರೀಮಂತವಾಗಲಿ" ವಿಜಯದಾಸರು ಆಶೀರ್ವದಿಸಿದರು.

"ಪುರಂದರದಾಸರು, ಕನಕದಾಸರು ಮೊದಲಾದ ದಾಸಶ್ರೇಷ್ಠರು ಈಗಾಗಲೇ ಈ ಕಾರ್ಯ ಮಾಡಿಬಿಟ್ಟಿದ್ದಾರೆ. ಅವರು ಬಿಟ್ಟಿದ್ದನ್ನು ಮಾಡಲು ನೀವಿದ್ದೀರಿ. ಜೊತೆಗೆ ನನಗೇನು ಕೆಲಸ ಗುರುವರ್ಯಾ?"

"ಹುಚ್ಚಾ, ಅಲ್ಲಿಯೇ ನೀನು ಎಡವುತ್ತಿರುವುದು. ಇದುವರೆಗೆ ಅವತಾರವೆತ್ತಿದ ಹರಿದಾಸರುಗಳು ರಚಿಸಿದ ಸಾಹಿತ್ಯ ಹಾಗೇ ಉಳಿದಿವೆಯೆಂದು ಭಾವಿಸಿದ್ದೀಯಾ? ಕಾಲರಾಯ ಬಹು ಕಠೋರ. ಜೊತೆಗೆ ಕಲಿರಾಯನ ಸಹಾಯ ಬೇರೆ. ಯುಗ ಧರ್ಮಕ್ಕನುಗುಣವಾಗಿ ಮರೆವೂ ಜನರಿಗೆ ಜಾಸ್ತಿ. ಹಿಂದೆ ಒಮ್ಮೆ ಕೇಳಿದ ಮಾತ್ರಕ್ಕೇ ಜನರಿಗೆ ನೆನಪಿನಲ್ಲಿ ಉಳಿಯುತ್ತಿತ್ತು. ಈಗ ಆ ಶಕ್ತಿ ಜನರಲ್ಲಿ ಕಡಿಮೆಯಾಗಿದೆ. ಅದಕ್ಕಾಗಿ ಅದನ್ನು ನೆನಪಿನಲ್ಲಿ ಉಳಿಯುವಂತೆ ಸರಳಮಾರ್ಗವನ್ನು ಅನುಸರಿ

ಸೋಣ. ಸಾಹಿತ್ಯ ಸಂಗೀತ ಸಮನ್ವಯಿಸಿ ಜಗತ್‌ಸತ್ಯ ಸಿದ್ಧಾಂತವನ್ನು ಜನರಿಗೆ ವಿವರಿಸೋಣ".

"ಅಂಥ ದೊಡ್ಡವರು ರಚಿಸಿದ ಸಾಹಿತ್ಯವೇ ಕಾಲ ಮರೆಯಾಗಿರುವಾಗ ನಮ್ಮ ಕಾರ್ಯ ಶಾಶ್ವತವಾಗಿ ಉಳಿಯುತ್ತದೆಯೇ?" ಭಾಗಣ್ಣ ಮೆಲ್ಲಗೆ ಸಂಶಯದಿಂದ ಕೇಳಿದ.

"ಅದರ ಗೊಡವೆ ನಿನಗೆ ಬೇಕಿಲ್ಲ. ಹಿಂದಿನ ಹರಿದಾಸರುಗಳು ರಚಿಸಿದ ಸಾಹಿತ್ಯ ಈಗ ಸಾಕಷ್ಟು ಉಳಿದಿಲ್ಲ. ಮುಂದೆ ಮುಂದೆ ಇನ್ನೂ ಕಣ್‌ಮರೆಯಾಗುತ್ತದೆ. ಆದರೆ ಅವರು ಹಾಕಿದ ಮಾರ್ಗ, ತೋರಿದ ಪಥ ಶಾಶ್ವತವಾಗಿ ಉಳಿಯುತ್ತದೆ. ಕಾಲಕಾಲಕ್ಕೆ ದೇವತೆಗಳು ಅವತರಿಸಿ ಅದನ್ನು ಕಾಲಕ್ಕನುಗುಣವಾಗಿ ಹೇಳುತ್ತಾರೆ. ಹೇಳುವ ಮಾರ್ಗಗಳು ಭಿನ್ನವಾದರೂ ಸಾರುವ ತತ್ವಮಾತ್ರ ಒಂದೆ. ಜಗತ್ತನ್ನು ಮೇಲೆತ್ತಲು ಅಂದರೆ ಕೆಳಸ್ತರದವರನ್ನು ಮೇಲ್ಮಟ್ಟಕ್ಕೆ ತರಲು ನಾವು ಕಾರ್ಯ ನಿರತರಾಗಬೇಕಾಗಿದೆ. ಎಲ್ಲರೂ ಮೇಲ್ಮಟ್ಟಕ್ಕೆ ಬರುತ್ತಾರೆಂದು ನಾನು ಹೇಳುವುದಿಲ್ಲ. ಮೇಲಕ್ಕೆ ಬರಬೇಕೆಂಬ ಅಪೇಕ್ಷೆ ಇರುವವರಿಗೆ, ಅಂಥ ಮನಸ್ಸು ಹುಟ್ಟುವವರಿಗೆ ದೀಪವಿಲ್ಲದೆ ಕತ್ತಲಾಗಬಾರದು. ಅದಕ್ಕಾಗಿ ನಿನ್ನ ಅವತಾರ ಕಾರ್ಯವನ್ನು ಇಂದಿನಿಂದಲೇ ಪ್ರಾರಂಭಿಸು."

"ಆಗಲಿ ಗುರುವರ್ಯಾ, ನಿಮ್ಮ ನೆರವು ಮಾರ್ಗದರ್ಶನದಲ್ಲಿ ನಾನು ಸಾಗುತ್ತೇನೆ. ಈಗ ಕೈ ಹಿಡಿದಿರುವಂತೆ ಮುಂದೆ ಎಂದೆಂದೂ ನನ್ನ ಕೈ ಹಿಡಿದು ನಡೆಸಿ" ನಮಸ್ಕರಿಸಿದ ಭಾಗಣ್ಣ.

"ಈಗ ಕೈ ಬಿಟ್ಟರಲ್ಲವೇ ಮುಂದೆ ಹಿಡಿಯಬೇಕಾದ ಪ್ರಶ್ನೆ. ಎಂದೆಂದೂ ಬಿಡದ ಜನ್ಮಜನ್ಮಗಳ ಬಾಂಧವ್ಯ ನಮ್ಮದು. ಕಕ್ಷಾತಾರತಮ್ಯದಲ್ಲಿ ಹದಿನೈದನೇ ಸ್ಥಾನದಲ್ಲಿ ನಾನಿದ್ದರೆ ಹದಿನೆಂಟನೇ ಸ್ಥಾನದಲ್ಲಿ ನೀನಿದ್ದಿ. ನಾನು ಮುಂದೆ ಸಾಗಿದಂತೆಲ್ಲಾ ನೀನು ನನ್ನ ಹಿಂದೆ ಇದ್ದೇ ಇರುತ್ತಿ. ಇದು ಈ ಸೃಷ್ಟಿಯ ನಿಯಮ. ಪರಮಾತ್ಮನ ಇಚ್ಛೆ".

ವಿಜಯದಾಸರು ನುಡಿಯುತ್ತಿದ್ದಂತೆ ಭಾಗಣ್ಣ ನಮಸ್ಕರಿಸಿದ.

"ನಾನು ಹೇಳಿದ ಮಾತುಗಳಾವುವೂ ನನ್ನವಲ್ಲ. ನಿನ್ನ ಹೃದಯದಲ್ಲಿ ವಿರಾಜಿಸುತ್ತಿರುವ ಭಗವಂತನನ್ನು ಮತ್ತೊಮ್ಮೆ ನೋಡು. ಆತನ ಆಜ್ಞೆಯನ್ನು ವಿವರಿಸಿದ್ದೇನೆ. ಆತನ ಅಪ್ಪಣೆಯನ್ನು ಪಡೆ."

ತಿರುಗಿ ನೋಡಿದ ಭಾಗಣ್ಣ. ಬೆಳಕಿನ ಮಹಾ ಪ್ರಕಾಶ ಒಂದು ನಿರ್ದಿಷ್ಟ ರೂಪ ಪಡೆಯುತ್ತಿದೆ. ನನ್ನ ಬೆನ್ನ ಬಿದ್ದವರನ್ನು ಯಾವಾಗಲೂ ಮುದಗೊಳಿಸುತ್ತೇನೆ ಎಂಬ ಭರವಸೆಯ ಸಂಕೇತವೋ ಎನ್ನುವಂತೆ ಕೈಯಲ್ಲಿ ಕೊಳಲು, ಬೆನ್ನ ಹಿಂದೆ ಗೋವು. ಅದರ ಪಾಲನೆಯ ಜವಾಬ್ದಾರಿ ನನ್ನದು ಎಂಬ ಆಶ್ವಾಸನೆಯ ರೂಪವಾಗಿ ನಿಂತಿರುವ ಗೋಪಾಲ ರೂಪ.

ವಿಜಯರಾಯರು ಹೇಳಿದರು

"ಈತನೇ ಗೋಪಾಲವಿಠಲ. ಇದೇ ನಿನ್ನ ಅಂಕಿತ ನಾಮ. ಈ ಅಂಕಿತದಿಂದಲೇ ನೀನು ಕೃತಿಗಳನ್ನು ರಚಿಸು. ಈತನೇ ಪ್ರೇರೇಪಿಸುತ್ತಾನೆ. ಈತನೇ ಹೇಳಿಸುತ್ತಾನೆ. ಈತನೇ ಅದನ್ನು ಸ್ವೀಕರಿಸಿ ನಿನ್ನನ್ನು ಉದ್ಧರಿಸುತ್ತಾನೆ. ನೀನು ಅನುಗ್ರಹಿಸಿದವ ರನ್ನು ಈ ಗೋಪಾಲವಿಠಲ ಅನುಗ್ರಹಿಸುತ್ತಾನೆ. ನಿನ್ನನ್ನು ಸ್ಮರಿಸಿದವರು, ನಿನ್ನ ಸಾಹಿತ್ಯವನ್ನು ಅಧ್ಯಯನ ಮಾಡಿದವರು, ಅದರಂತೆ ಅನುಸರಿಸಿದವರು, ಶ್ರೀ ಗೋಪಾಲ ವಿಠಲನ ಕೃಪೆಗೆ ಪಾತ್ರರಾಗುತ್ತಾರೆ. 'ಗೋಪಾಲದಾಸರು' ಎಂಬ ಹೆಸರಿನಿಂದ ನೀನು ಖ್ಯಾತನಾಗುತ್ತಿ."

ವಿಜಯದಾಸರು ಹೇಳುತ್ತಿರುವಂತೆ ಗೋಪಾಲವಿಠಲ ಮೂರುತಿ ಭಾಗಣ್ಣನನ್ನು ಆಶೀರ್ವದಿಸಿತು.

ಶ್ರೀ ಪ್ರಾಣದೇವರು ಶುಭವಾಗಲಿ ಎಂದು ತಲೆನೇವರಿಸಿದರು.

ದೇವಾನು ದೇವತೆಗಳು ಜಯಜಯಾ ಎಂದು ಘೋಷಿಸಿದರು.

***

ಮೆಲ್ಲಗೆ ಕಣ್ಣು ತೆಗೆದ ಭಾಗಣ್ಣ.

ಅಲ್ಲಲ್ಲ - ಗೋಪಾಲದಾಸರು ಈಗ.

ವಿಶ್ವನಾಮಕ ಪರಮಾತ್ಮನನ್ನು ಹೃದಯಾಕಾಶದಲ್ಲಿ ಕಂಡು ಆಶೀರ್ವಾದ ಪಡೆದ ಸಿದ್ಧ ಮೂರುತಿ.

'ಗೋಪಾಲವಿಠಲ'ನ ಅಂಕಿತ ಪಡೆದ ಪವಿತ್ರ ಮೂರುತಿ.

ಲೋಕೋದ್ಧಾರಕ್ಕಾಗಿ ಅವತಾರವೆತ್ತಿರುವ ಶ್ರೀ ವಿಜಯದಾಸರಿಂದ ಪುನೀತ ರಾದ ದಿವ್ಯಖ್ಯಾತಿ ಅವರದೀಗ.

ಮಸ್ತಕದ ಮೇಲಿದ್ದ ವರದಹಸ್ತವನ್ನು ವಿಜಯದಾಸರು ಮೆಲ್ಲಗೆ ತೆರೆದರು.

ಗೋಪಾಲದಾಸರು ಗುರುಗಳ ಪಾದಗಳಿಗೆ ನಮಸ್ಕರಿಸಿದರು.

ಗೋಪಾಲದಾಸರು ಕೇಳುವುದೇನೂ ಉಳಿದಿರಲಿಲ್ಲ. ಹೇಳಬೇಕಾದ್ದನ್ನೆಲ್ಲಾ ವಿಜಯದಾಸರು ಆಗಲೇ ತಿಳಿಸಿಯಾಗಿತ್ತು..

ಅವರಿಬ್ಬರ ಸಂಭಾಷಣೆ ಅವರಿಬ್ಬರಿಗೆ ಮಾತ್ರ ಗೊತ್ತು. ಗೋಪಾಲ ವಿಠಲನ ಸನ್ನಿಧಾನದಲ್ಲಿ ಆತನ ಇನ್ನೊಂದು ರೂಪವಾದ ವಿಜಯವಿಠಲನನ್ನು ಮುಂದಿಟ್ಟು ಕೊಂಡು ಎಲ್ಲವನ್ನು ವಿಜಯದಾಸರು ತಿಳಿಸಿಬಿಟ್ಟಿದ್ದರು.

ಗೋಪಾಲದಾಸರ ಕೈಗಳನ್ನು ವಿಜಯದಾಸರು ಹಿಡಿದು ಆಹ್ನೀಕ ಜಾಗದಿಂದ ಹೊರಗೆ ಬಂದಾಗ ದಿವಾನ ತಿಮ್ಮಣ್ಣಯ್ಯನವರು ಕೈಮುಗಿದು ನಿಂತಿದ್ದರು. ಸೀನಣ್ಣದಾಸಣ್ಣರು ತಿಮ್ಮಣ್ಣಯ್ಯನವರ ಹಿಂದೆ ವಿನೀತಭಾವದಿಂದ ತಮ್ಮ ಅಣ್ಣನಿಗಾಗಿ ಕಾದಿದ್ದರು.

"ದೊಡ್ಡ ಜೀವ. ಬಿಂಬದರ್ಶನಕ್ಕಾಗಿ ಹಾತೊರೆಯುತ್ತಿದೆ. ಗುರುಗಳ ಅನುಗ್ರಹ ಯಾವಾಗ?" ಗೋಪಾಲದಾಸರು ತಿಮ್ಮಣ್ಣಯ್ಯನವರ ಬಗ್ಗೆ ವಿಜಯದಾಸರಲ್ಲಿ ಮುಗುಳ್ನಗುತ್ತಾ ಪ್ರಶ್ನಿಸಿದರು.

"ನಿನಗೂ ಗೊತ್ತು ಭಾಗಣ್ಣಾ. ನೀನು ಯಾವಾಗ ಹೇಳಿದರೆ ಆಗ ಇವರಿಗೂ ಸ್ವರೂಪಸ್ವಾಮಿಯ ದರ್ಶನ ಮಾಡಿಸೋಣ."

ಕೂಡಲೇ ಗೋಪಾಲದಾಸರು ಕಣ್ಣುಗಳನ್ನು ಮುಚ್ಚಿ ತಿಮ್ಮಣ್ಣಯ್ಯನವರ ಭವಿಷ್ಯದ ಬಗ್ಗೆ ಚಿಂತಿಸಲು ಹೋದರು.

ಕೂಡಲೇ ವಿಜಯದಾಸರು ಅವರನ್ನು ತಡೆದು ನಗುತ್ತಾ ನುಡಿದರು.

"ಭಾಗಣ್ಣಾ ನಿನ್ನ ವೃತ್ತಿಯ ಪ್ರಭಾವದಿಂದ ಹೊರಗೆ ಬಂದಿಲ್ಲವಲ್ಲಪ್ಪಾ. ಅವರ ಭವಿಷ್ಯ ತಿಳಿಯುವುದಕ್ಕಾಗಿ ನೀನು ಇಷ್ಟೆಲ್ಲಾ ಶ್ರಮಿಸುವುದೇಕೆ? ಬದಲಾಗಿ ನಿನ್ನ ಗೋಪಾಲವಿಠಲನಲ್ಲಿ ಅವರ ಬಗ್ಗೆ ಶುಭವನ್ನೇ ಪ್ರಾರ್ಥಿಸು. ಅದು ಅವರ ಭವಿಷ್ಯವನ್ನೇ ಬದಲಾಯಿಸುತ್ತದೆ. ನೀನು ಅಂದುಕೊಂಡಿದ್ದು ಆಗುವ ಶ್ರೇಷ್ಠ ಹಂತಕ್ಕೆ ನೀನು ಬಂದಿದ್ದೀಯೆ. ಇನ್ನೂ ಹಳೆಯ ಕಣಿ ಹೇಳುವ ರೀತಿಯಲ್ಲೇ ಏಕೆ ಪ್ರಯತ್ನಿಸುತ್ತಿ?"

ಗುರುಗಳ ಪ್ರಶ್ನೆ ಗೋಪಾಲದಾಸರನ್ನು ಎಚ್ಚರಿಸಿತು. ವೃತ್ತಿಗತವಾಗಿ ಬಂದ ತಮ್ಮ ಅಭ್ಯಾಸವನ್ನು ಇನ್ನೂ ಬಿಡದಿರುವುದಕ್ಕೆ ಅವರಿಗೇ ನಗು ಬಂದಿತು.

"ನಮ್ಮೂರ ಗಾಣಿಗರ ಎತ್ತುಗಳನ್ನು ಒಮ್ಮೆ ಬಂಡಿಗೆ ಕಟ್ಟಿದ್ದರು ಗುರುಗಳೇ. ಅವಕ್ಕೆ ಗಾಣ ಸುತ್ತಿ ಸುತ್ತಿ ಅಭ್ಯಾಸವೇ ವಿನಹ ಮುಂದೆ ಹೋಗಲು ಗೊತ್ತೇ ಇಲ್ಲ. ಅವುಗಳನ್ನು ಬಂಡಿಗೆ ಕಟ್ಟಿದಾಗಲೂ ಒಂದು ವರ್ತುಲದಲ್ಲೇ ಸುತ್ತತೊಡಗಿದವು. ಬಂಡಿಗೆ ಕಟ್ಟುವ ಎತ್ತುಗಳನ್ನು ಗಾಣಕ್ಕೆ ಕಟ್ಟಿದಾಗ ಒಂದೆರಡು ಹೆಜ್ಜೆಗಳನ್ನು ಹಾಕಿದ ಅವು, ತಮ್ಮನ್ನು ಕಟ್ಟಿಬಿಟ್ಟಿದ್ದಾರೆಂದು ಭ್ರಮಿಸಿ ಗಾಣ ಸುತ್ತು ಹಾಕಲು ಪ್ರಯತ್ನಿಸಲೇ ಇಲ್ಲ. ಅಭ್ಯಾಸ ಬಲ, ವೃತ್ತಿಯ ಗುಣ ಅಷ್ಟು ಬೇಗ ಹೋಗಲು ಹೇಗೆ ಸಾಧ್ಯ? ಗಾಣದ ಎತ್ತಿನಂಥ ಸ್ವಭಾವ ನನ್ನದು" ಗೋಪಾಲದಾಸರು ನಗುತ್ತಾ ನುಡಿದಾಗ ವಿಜಯದಾಸರೂ ಒಮ್ಮೆ ಘೊಳ್ಳೆಂದು ನಕ್ಕರು.

"ಅಣ್ಣನವರು ಇಷ್ಟು ಮನಪೂರ್ತಿಯಾಗಿ ನಗುವುದನ್ನು ನಾವು ನೋಡಿಯೇ ಇರಲಿಲ್ಲ. ನಿಮ್ಮ ಕೃಪೆಯಿಂದ ನಮ್ಮಣ್ಣನ ಜೀವನದಲ್ಲಿ ಹರ್ಷ ಅರಳಿತು" ಎಂದ ದಾಸಣ್ಣ.

"ನಿಮ್ಮಣ್ಣನವರ ಹರ್ಷ ಅರಳುವ ಮಾತು ಇರಲಿ, ನಿಮ್ಮಣ್ಣನವರನ್ನು ನಂಬಿದವರ ಜೀವನವೂ ಹರ್ಷಭರಿತವಾಗುತ್ತದೆ. ಶೀಘ್ರ ಅನುಗ್ರಹಿಸುವ ಪರಮ ಕರುಣಾಳು ನಿಮ್ಮಣ್ಣ" ವಿಜಯದಾಸರು ಗೋಪಾಲದಾಸರ ಬೆನ್ನು ಚಪ್ಪರಿಸುತ್ತಾ ನುಡಿದರು.

"ನನ್ನ ಶಕ್ತಿಯೆಲ್ಲಾ ನಿಮ್ಮದು. ನನ್ನ ಸಾಧನೆಯೆಲ್ಲಾ ನಿಮ್ಮಿಂದ. ನಿಮ್ಮಿಂದಲೇ ನನ್ನ ಉದ್ಧಾರ" ಗೋಪಾಲ ದಾಸರು ಗುರುಗಳ ಕಾಲು ಮುಟ್ಟಿ ಭಾವ ತನ್ಮಯ ದಿಂದ ನುಡಿದರು.

"ತಿಮ್ಮಣ್ಣಯ್ಯಾ, ಈ ಭಾಗಣ್ಣನಿಗೆ ಬೇರೆಯವರಿಂದ ನಮಸ್ಕರಿಸಿಕೊಂಡು ಅಭ್ಯಾಸವಿತ್ತೇ ಆಗಲಿ, ಬೇರೆಯವರಿಗೆ ನಮಸ್ಕರಿಸುವ ಅವಕಾಶ ಸಿಕ್ಕಿರಲಿಲ್ಲ ವೆಂದು ಕಾಣುತ್ತದೆ. ಈಗ ನನ್ನ ಕಾಲುಗಳು ಅವರಿಗೆ ಸಿಕ್ಕುಬಿಟ್ಟವು. ಅವನ್ನು ಹಿಡಿಯುವುದಕ್ಕೆ ಅಪ್ಪಣೆಯೂ ಸಿಕ್ಕುಬಿಟ್ಟಿದೆ. ಇನ್ನು ನನ್ನ ಕಾಲುಗಳ ಅವಸ್ಥೆ ಏನೋ ಎಂತೋ -" ನಗೆ ಚಟಾಕಿ ಹಾರಿಸಿದರು ವಿಜಯರಾಯರು.

"ಭಗವಂತನ ವಕ್ಷಸ್ಥಳವನ್ನು ಮುಟ್ಟಿ ಬಂದ ಗಟ್ಟಿ ಪಾದಗಳಲ್ಲವೆ?" ಗೋಪಾಲದಾಸರು ಇನ್ನೂ ನುಡಿಯುತ್ತಿದ್ದಂತೆ ವಿಜಯದಾಸರು ಮಾತಿಗೆ ಕೂಡಲೇ ಅಡ್ಡಿಬಂದರು.

"ಭಾಗಣ್ಣಾ, ನಿನ್ನ ಗುರುಭಕ್ತಿಯಲ್ಲಿ ಲೋಕನಿಯಮಗಳನ್ನು ಉಲ್ಲಂಘಿಸುತ್ತಿದ್ದಿ.

ಮೂಲರೂಪಗಳನ್ನು ಸಶರೀರರಾಗಿದ್ದಾಗ ಎಂದೂ ಹೇಳಬಾರದು. ಇಲ್ಲಿರುವವ ರೇನೋ ದೊಡ್ಡ ಜೀವಿಗಳು. ಶೀಘ್ರವೇ ಇವರಿಗೂ ಬಿಂಬದರ್ಶನ ಪಡೆಯುವ ಭಾಗ್ಯ ಬರಲಿದೆ. ಆದ್ದರಿಂದ ಲೋಕನಿಯಮಗಳನ್ನು ಉಲ್ಲಂಘಿಸಿದಂತಾಗುವುದಿಲ್ಲ.-

"ಇನ್ನು ಮುಂದೆ ಎಚ್ಚರವಾಗಿರು. ನಿನಗೋ, ಯಾರನ್ನು ನೋಡಿದರೂ ಮುಂದಿನ ಮೂರು ಜನ್ಮಗಳ ಆಗು ಹೋಗುಗಳು ಗೊತ್ತಾಗಿ ಬಿಡುತ್ತದೆ. ಅವನ್ನೆಲ್ಲಾ ಹೇಳುತ್ತಾ ಹೋಗಿಬಿಟ್ಟರೆ ಸೃಷ್ಟಿಯ ಸ್ವಾರಸ್ಯವಾದರೂ ಎಲ್ಲಿ ಉಳಿಯುತ್ತದೆ? ಈ ಸೃಷ್ಟಿ ಜೀವಿಗಳ ಸಾಧನ ಭೂಮಿಯಾದರೂ ಪರಮಾತ್ಮನ ಲೀಲಾಭೂಮಿಯೂ ಹೌದು. ರಹಸ್ಯ ಇದ್ದಾಗಲೇ ಶೋಧನೆಯ ಆಕಾಂಕ್ಷೆ ಹೆಚ್ಚುತ್ತದೆ. ಅನ್ವೇಷಣೆಯ ಲಾವಣ್ಯ ಮೊರೆಯುತ್ತದೆ. ಆದ್ದರಿಂದ ಇನ್ನು ಮುಂದೆ ಬಹಳ ಎಚ್ಚರವಾಗಿರು. ಶಾಸ್ತ್ರಗಳ ಆಧಾರದಿಂದ ಕಣಿ ಹೇಳಿದಂತೆ ಇನ್ನು ಮುಂದೆ ಕಂಡ ಕಂಡವರಿಗೆಲ್ಲಾ ನಿನ್ನ ಒಳಗಣ್ಣಿನಿಂದ ನೋಡಿ ಭವಿಷ್ಯ ಹೇಳಬೇಡ. ಆ ವೃತ್ತಿಯನ್ನು ಕ್ರಮೇಣ ಬಿಟ್ಟುಬಿಡು. ವ್ಯಕ್ತಿಗಳಿಗೆ ಮುಂದಾಗುವುದನ್ನು ಹೇಳುವುದಕ್ಕಿಂತ ಅವರಿಗೆ ಶುಭವನ್ನೇ ನೀಡುವ ಶ್ರೇಷ್ಠ ಹಂತಕ್ಕೆ ನೀನು ಬಂದಿದ್ದಿ. ಅದನ್ನೇ ಹೆಚ್ಚು ರೂಢಿಸಿಕೋ. ವಿಜಯವಿಠಲನು ನಿನ್ನನ್ನು ಕರುಣಿಸಿದ್ದಾನೆ. ಶುಭವಾಗಲಿ ನಿನಗೆ" ಆಶೀರ್ವದಿಸಿದರು ವಿಜಯದಾಸರು.

"ಆದಕ್ಕೆಂದೇ ಹಾರೈಸುತ್ತಿದ್ದೇನೆ, ತಿಮ್ಮಣ್ಣಯ್ಯನವರ ಭವಿಷ್ಯ ಶುಭವಾಗಲಿ" ಗೋಪಾಲದಾಸರು ನುಡಿದಾಗ ವಿಜಯದಾಸರಿಗೆ ನಗು ಉಕ್ಕಿ ಉಕ್ಕಿ ಬರ ತೊಡಗಿತು. ಕೂಡಲೇ ಅವರನ್ನು ಸ್ವಲ್ಪ ಮರೆಗೆ ಕರೆದುಕೊಂಡು ಹೋಗಿ ಶಿಷ್ಯನಿಗೆ ಹೇಳಿದರು.

"ಭಾಗಣ್ಣ ನಿನ್ನ ಮೂಲ ರೂಪವನ್ನು ಶ್ರೀ ಮದ್ವಾಚಾರ್ಯರು ಏನೆಂದು ಪ್ರಶಂಸಿದ್ದಾರೆ ಗೊತ್ತ ? 'ಶೀಘ್ರ ಫಲದಾಯಕ' ಎಂದು ಅವರು ನಿನ್ನನ್ನು ಪ್ರಶಂಸಿದ್ದಾರೆ. ಆ ಸ್ವಭಾವ ಎಲ್ಲಿ ಹೋಗುತ್ತದೆ ಹೇಳು ? ಕೂಡಲೆ ತಿಮ್ಮಣ್ಣಯ್ಯ ನವರ ಬಗ್ಗೆ ಶುಭ ಕೋರಿಬಿಟ್ಟೆ. ಆಗಲಿ ನಿನ್ನ ಅಪೇಕ್ಷೆಯನ್ನು ವಿಜಯ ವಿಠ್ಠಲನೇ ನಡೆಸಿಕೊಡಲು ಸಿದ್ಧನಾಗಿರುವಾಗ ನಾನು ಏನು ಮಹಾ ? ಅತಿ ಶೀಘ್ರದಲ್ಲಿಯೇ ಅವರಿಗೆ ಬಿಂಬ ದರ್ಶನ ಮಾಡಿಸಿ ಅಂಕಿತ ನೀಡುತ್ತೇನೆ. ಈ ತಿಮ್ಮಯ್ಯಣ್ಣನೂ ಹರಿದಾಸ ಸಾಹಿತ್ಯ ಆಗಸದ ಶ್ರೇಷ್ಠ ನಕ್ಷತ್ರವಾಗಿ ರಾರಾಜಿಸುತ್ತಾನೆ."

"ವೇಣುಗೋಪಾಲ ವಿಠಲ" ಎಂಬ ಅಂಕಿತದಿಂದ ಅವರ ಸಾಧನೆ ಮುಂದು ವರೆಯುತ್ತದೆ" ಮುಂದಿನದನ್ನು ಗೋಪಾಲದಾಸರು ನುಡಿದೇ ಬಿಟ್ಟರು.

"ಹೌದು ಹೌದು. ಭವಿಷ್ಯ ಹೇಳಿಬಿಟ್ಟೆ ನನ್ನ ಸ್ವಭಾವ ಎಲ್ಲಿ ಹೋಗುತ್ತದೆ? ನೀನು ಹೇಳಿದ ಭವಿಷ್ಯ ಸುಳ್ಳಾಗುವುದುಂಟೆ ?" ನಗುನಗುತ್ತಾ ನುಡಿದರು ವಿಜಯರಾಯರು.

"ನನ್ನ ಜೀವನದ ಧ್ಯೇಯ ಧೋರಣೆಗಳನ್ನೇನೋ ನಿರ್ದೇಶಿಸಿದಿರಿ. ಆದರೆ ಸದ್ಯಕ್ಕೆ ಏನು ಮಾಡಬೇಕೆಂದು ಹೇಳಲಿಲ್ಲ " ಗೋಪಾಲದಾಸರು ವಿನೀತರಾಗಿ ಪ್ರಶ್ನಿಸಿದರು.

"ನಿನ್ನ ವಾಸಸ್ಥಳವಾದ ಉತ್ತನೂರಿಗೆ ಹೋಗು. ಅಲ್ಲಿರುವ ನಿನ್ನ ಆರಾಧ್ಯ ಮೂರ್ತಿಗೆ ಕಾಶಿಯಾತ್ರೆಯ ಫಲವನ್ನು ಸಮರ್ಪಿಸು. ಇದುವರೆಗೂ ವೆಂಕಟಕೃಷ್ಣ" ಎಂಬ ಅಂಕಿತದಲ್ಲಿ ಸಾಹಿತ್ಯ ರಚಿಸುತ್ತಿದ್ದೆಯಲ್ಲವೆ ? ವೆಂಕಟನಿಗೆ ನಮಸ್ಕರಿಸಿ ಆತನ ಇನ್ನೊಂದು ರೂಪವಾದ ಕೃಷ್ಣ ದರ್ಶನಕ್ಕೆ ಶೀಘ್ರ ಹೊರಡು. ಉಡುಪಿ ಯಾತ್ರೆ ಪ್ರಾರಂಭಿಸು." ವಿಜಯದಾಸರು ನಿರ್ದೇಶಿಸಿದರು.

"ಅಪ್ಪಣೆ ಗುರುವರ್ಯಾ, ಉತ್ತನೂರಿನಲ್ಲಿ ನಾಲ್ಕಾರು ದಿನವಿದ್ದು ಆ ಪ್ರದೇಶದಲ್ಲಿ ಉಡುಪಿ ಯಾತ್ರೆ ಮಾಡಬೇಕೆಂದು ಅಪೇಕ್ಷೆಯಿದ್ದರೂ ಅವಕಾಶ ಸಿಕ್ಕದ ಜನಗಳನ್ನು ಕರೆದುಕೊಂಡು ಶೀಘ್ರವೇ ಯಾತ್ರೆ ಪ್ರಾರಂಭಿಸುತ್ತೇನೆ. ಆದರೆ ಯಾತ್ರೆಯ ಮಧ್ಯೆ ಏನೋ ಅಡ್ಡಿ ಇದ್ದಂತಿದೆಯಲ್ಲಾ ? ತಾವೂ ಜೊತೆಯಲ್ಲಿ ಬಂದಿದ್ದರೆ ಚೆನ್ನಾಗಿತ್ತು." ಕೇಳಿ ವಿಜಯದಾಸರು ನಕ್ಕು ಬಿಟ್ಟರು.

"ಬಹಳ ಜಾಣ ಭಾಗಣ್ಣ ನೀನು. ಮಾರ್ಗಮಧ್ಯ ಬರುವ ಮುಂಡಗದ್ದೆ ಗ್ರಾಮದ ಭೀಮನ ಬಗ್ಗೆ ಈಗಲೇ ಯೋಚಿಸಿಬಿಟ್ಟೆ. ನಾನು ಯಾವಾಗಲೂ ನಿನ್ನ ಜೊತೆಯಲ್ಲಿರುವುದು ಹೇಗೆ ಸಾಧ್ಯ ? ನಾನು ಈ ಬಾಹ್ಯ ಶರೀರದೊಂದಿಗೆ ಯಾವಾಗಲೂ ಜೊತೆ ಇರಬೇಕೆಂಬುದು ಸಲ್ಲದ ಅಪೇಕ್ಷೆ. ನಾನು ನನ್ನ ಪದ ಪದ್ಯ ಸುಳಾದಿಗಳಲ್ಲಿ ಹೆಚ್ಚು ಸನ್ನಿಹಿತವಾಗಿರುತ್ತೇನೆ. ಈ ವಿಷಯವನ್ನು ಜಗತ್ತಿಗೆ ತೋರಿಸುವುದಕ್ಕಾಗಿ ಈ ನಿನ್ನ ದರ್ಶನ ಕೃತ್ಯ ಈ ಯಾತ್ರೆಯಲ್ಲಿ ನಡೆದು ಹೋಗಲಿ. ಕನ್ನಡ ಹರಿದಾಸ ಸಾಹಿತ್ಯದಲ್ಲಿ ಜೀವನದರ್ಶನವಿದೆ. ಜೀವಿಗಳಿಗೆ ಮಾರ್ಗದರ್ಶನ ವಿದೆ. ಇವನ್ನು ಶ್ರದ್ಧೆಯಿಂದ ಪಠಿಸಿದರೆ ಹರಿಗುರುಗಳ ಕರುಣೆಯಾಗುತ್ತದೆ. ಕನ್ನಡ ಸಾರಸ್ವತಶ್ರೀ ಕೃಪೆದೋರುತ್ತಾಳೆ. ಪರಮಾತ್ಮ ಅನುಗ್ರಹಿಸುತ್ತಾನೆ. ಈ ಹಿರಿಯ ಉದ್ದೇಶಗಳಿಂದ ಈ ಸಾಹಿತ್ಯ ಪ್ರಕಾರ ನಿರ್ಮಾಣವಾಯಿತು. ಕನ್ನಡ ಹರಿದಾಸ ಸಾಹಿತ್ಯ ಭೂಮಿ ಶ್ರೀ ನರಹರಿ ತೀರ್ಥರಿಂದ ಬಿತ್ತನೆಗೆ ಅನುಗೊಳಿಸಲ್ಪಟ್ಟಿತು.

ಹಲವು ಆದ್ಯರು ಶ್ರಮಿಸಿದ ಈ ಭೂಮಿಯಲ್ಲಿ ಶ್ರೀ ಶ್ರೀಪಾದರಾಜರಿಂದ ಬಿತ್ತನೆಯಾಗಿ ಶ್ರೀ ವ್ಯಾಸರಾಯರಿಂದ ಫಲ ಭರಿತ ತೋಟವಾಗಿ ವಿರಾಜಿಸಿತು. ಅನಂತರ ಶ್ರೀ ವಾದಿರಾಜರು, ಶ್ರೀ ವಿಜಯೇಂದ್ರ ತೀರ್ಥರಷ್ಟೇ ಅಲ್ಲ, ಶ್ರೀ ಪುರಂದರದಾಸರು ಶ್ರೀ ಕನಕದಾಸರಂಥ ಶ್ರೇಷ್ಠ ಗೃಹಸ್ಥರೂ ಈ ತೋಟದ ಬೆಳೆಯನ್ನು ಹೆಚ್ಚಿಸಿ ಲೋಕಕ್ಕೆ ವಿನಿಮಯಿಸಿದ್ದಾರೆ. ಆದರೆ ಮಹಿಳೆಯರು ಈ ಕ್ಷೇತ್ರದಲ್ಲಿ ಹೆಚ್ಚು ಶ್ರಮಿಸಿಲ್ಲ ಎಂಬ ಆಪಾದನೆಯೇನೋ ಇದೆ. ರಚನೆಯೊಂದೇ ಸಾಹಿತ್ಯ ಸೇವೆಯಲ್ಲ. ಅದನ್ನು ಉಳಿಸಿಕೊಳ್ಳುವುದೂ ಸಾಹಿತ್ಯದೇವಿಯ ಉಪಾಸನೆಯೆ. ಆ ದೃಷ್ಟಿಯಿಂದ ನೋಡಿದಾಗ ನಮ್ಮ ಮಹಿಳೆಯರು ಯಾವ ಪುರುಷರಿಗಿಂತಲೂ ಕಡಿಮೆ ಸೇವೆ ಸಲ್ಲಿಸಿಲ್ಲ. ಆದರೆ ಸಾಹಿತ್ಯ ನಿರ್ಮಾಣ ಕಾರ್ಯದಲ್ಲಿ ಅವರ ಪಾತ್ರ ಕಡಿಮೆಯೆಂದು ಆಕ್ಷೇಪಿಸುವವರಿಗೆ ಈಗಿನ ಸಾಮಾಜಿಕ ಪರಿಸ್ಥಿತಿಯ ಅರಿವಿಲ್ಲ ಎಂದು ಹೇಳಬೇಕಾಗುತ್ತದೆ. ಹರಿದಾಸ ಸಾಹಿತ್ಯ ಮನೆಗಳಲ್ಲಿ ಕುಳಿತು ಲಿಖಿಸಿ ಪುನಃ ಮಲಗಿಕೊಳ್ಳುವ ರೀತಿಯದಾಗಿಲ್ಲ. ಅದನ್ನು ಹೊರಗೆಲ್ಲಾ ಹಾಡಬೇಕು. ಜನರಿಗೆ ವಿವರಿಸಬೇಕು. ಈ ರೀತಿಯ ಪದ್ಧತಿಯಲ್ಲಿ ಇಂದಿನ ಸಮಾಜ, ರಾಜಕೀಯ ಆಡಳಿತ ಎಷ್ಟರ ಮಟ್ಟಿಗೆ ಉತ್ತೇಜನಕಾರಿಯಾಗಿದೆ ? ಆದರೂ ಕನ್ನಡ ಮಹಿಳೆಯರು ಅವಕಾಶ ಸಿಕ್ಕಾಗ ತಮ್ಮ ಪ್ರತಿಭೆಯನ್ನು ಬಿಂಬಿಸದೇ ಬಿಟ್ಟಿಲ್ಲ. ಶ್ರೀ ಮಧ್ವಾಚಾರ್ಯರ ಕಾಲದಲ್ಲಿಯೇ ತಾಯಿ ಕಲ್ಯಾಣಮ್ಮ ಸಂಸ್ಕೃತ ಟೀಕೆಗಳನ್ನು ರಚಿಸಿದ್ದನ್ನು ಈ ಸಮಾಜ ಸ್ವಾಗತಿಸಿದೆ. ಈಗ ಹರಿಹರದ ಹತ್ತಿರ ಇರುವ ಒಬ್ಬ ಹರಿದಾಸಳು ಈ ದಿಸೆಯಲ್ಲಿ ತನ್ನ ಪ್ರಯತ್ನ ಸಾಗಿಸಿದ್ದಾಳೆ. ನೀನು ಹೋಗಿ ಆಕೆಯನ್ನು ಆಶೀರ್ವದಿಸಿ ಉತ್ತೇಜಿಸು. ನಿನ್ನ ಉಡುಪಿ ಯಾತ್ರೆಯಲ್ಲಿ ಈ ತತ್ವ ದರ್ಶನವೂ ಆಗಬೇಕು'' ಎಂದು ವಿಜಯ ದಾಸರು ಹೇಳಿ,

ಉಡುಪಿ ಯಾತ್ರೆ ಕಾಲದಲ್ಲಿ ಮಂಡಗದ್ದೆ ದಾಟುತ್ತಿದ್ದಂತೆಯೇ ಈ ಉಗಾಭೋಗವನ್ನು ಪಠಿಸು. ಅದು ನಿಮ್ಮೆಲ್ಲರನ್ನು ರಕ್ಷಿಸುತ್ತದೆ'' ಎಂದು ಆಶೀರ್ವದಿಸಿದರು.

"ಒಂದು ಕೈಯಲ್ಲಿ ಖಡ್ಗ, ಒಂದು ಕೈಯಲ್ಲಿ ಹಲಗೆ......''

ಗುರುಗಳು ಲಿಖಿಸಿಕೊಟ್ಟ ಈ ಪದವನ್ನು ಓದಿ ಗುರುಗಳಿಗೆ ಮತ್ತೊಮ್ಮೆ ಶಿರಸಾಷ್ಟಾಂಗ ನಮಸ್ಕಾರ ಹಾಕಿ ಬಿಟ್ಟರು.

"ಧನ್ಯನಾದೆ ಗುರುಗಳೇ, ನೀವು ರಚಿಸಿದ ಪ್ರತಿ ಪದ್ಯವೂ ನನಗೆ ಆಜ್ಞೆಯೇ. ಪ್ರತಿ ಶಬ್ದವೂ ನನಗೆ ಮಂತ್ರವೇ. ಮಂತ್ರಶಕ್ತಿ ಯುಕ್ತವಾದ ಕನ್ನಡ ಪದವನ್ನು ನನ್ನ

ಮೂಲಕ ಜಗತ್ತಿಗೆ ನೀಡಿ ಶಿಷ್ಯನ ಘನತೆಯನ್ನು ಹೆಚ್ಚಿಸಿ ಬಿಟ್ಟಿರಿ. ನಿಮ್ಮ ಕರುಣೆಯೇ ಕರುಣೆ" ಎಂದು ಗೋಪಾಲದಾಸರು ನುಡಿದರು.

"ನಾನೇನೋ ಪದ ಬರೆದು ಕೊಟ್ಟೆ. ನಿನ್ನ ಗುರುಭಕ್ತಿ ಹರಿಭಕ್ತಿ ಅದಕ್ಕೆ ಶಕ್ತಿಯನ್ನು ನೀಡುತ್ತದೆ. ಶುಭವಾಗಲಿ ನಿನಗೆ" ಎಂದು ಗುರುಗಳು ಆಶೀರ್ವದಿಸಿ ಶಿಷ್ಯನನ್ನು ಬೀಳ್ಕೊಟ್ಟರು.

***

ಗೋಪಾಲದಾಸರು ಉತ್ತನೂರಿನಲ್ಲಿ ಹೆಚ್ಚು ಕಾಲ ಕಳೆಯಲಿಲ್ಲ. ಗುರುಗಳ ಆಜ್ಞೆಯಂತೆ ಉಡುಪಿ ಯಾತ್ರೆಗೆ ವಿಶೇಷ ವ್ಯವಸ್ಥೆ ನಡೆಸಿದರು. ಅಪೇಕ್ಷೆ ಇದ್ದವರೆಲ್ಲಾ ತಮ್ಮೊಂದಿಗೆ ಪ್ರಯಾಣಿಸಬಹುದೆಂದು ಜನರಿಗೆ ಹೇಳಿಕಳಿಸಿದರು.

ತಂಡತಂಡ ಜನ ಗೋಪಾಲದಾಸರೊಂದಿಗೆ ಯಾತ್ರೆಗೆ ಹೊರಟರು.

ಕಾಶಿಯಾತ್ರೆಯಲ್ಲಿ ಅನುಸರಿಸಿದಂತೆ ಸೀನಣ್ಣ ದಾಸಣ್ಣರು ಈ ಸಲವೂ ಯಾತ್ರೆಗೆ ಜೊತೆಗೂಡಿದರು. ಯಾತ್ರಾರ್ಥಿಗಳಿಗೆಲ್ಲಾ ಅಡುಗೆ ಮಾಡಿ ಉಣಲಿಕ್ಕುವ ಕರ್ತವ್ಯವನ್ನು ಅವರಿಗೆ ವಹಿಸಲಾಗಿದ್ದಿತು. ಸರ್ವವೆಚ್ಚವನ್ನು ಗೋಪಾಲದಾಸರೇ ವಹಿಸಿಕೊಂಡಿದ್ದರು.

ಯಾತ್ರಿಕರೆಲ್ಲಾ ಹರಿಗಣಗಳಂತಿದ್ದರೆ, ಗಣಗಳಿಗೆ ಪತಿಯಂತೆ ಗೋಪಾಲದಾಸರ ನೇತೃತ್ವವಿದ್ದ ಈ ತಂಡ ವೈಭವದಿಂದ ಯಾತ್ರೆ ಆರಂಭಿಸಿತು.

ದಾರಿಯುದ್ದಕ್ಕೂ ಗೋಪಾಲದಾಸರು ಹಾಡುತ್ತಾ ಕುಣಿಯುತ್ತಾ ಸಾಗುತ್ತಿದ್ದರೆ ಸಹಯಾತ್ರಿಕರು ಭಜನೆಯಲ್ಲಿ ಜೊತೆಗೂಡಿ ಅವರನ್ನು ಅನುಸರಿಸುತ್ತಿದ್ದರು. ಕುದುರೆಗಳ ಮೇಲೆ ಯಾತ್ರಿಕರ ಸಾಮಾನುಗಳನ್ನು ಇಡಲಾಗಿದ್ದಿತು. ಎಲ್ಲಿಯಾದರೂ ನೀರಿನ ತಾಣ ಸಿಕ್ಕಲ್ಲಿ ಸೀನಣ್ಣ ದಾಸಣ್ಣರು ಕುದುರೆಗಳ ಮೇಲಿಟ್ಟಿದ್ದ ಸಾಮಾನು ಗಳನ್ನು ಇಳಿಸಿ ಅಡುಗೆ ಮಾಡುವುದರಲ್ಲಿ ನಿರತರಾಗುತ್ತಿದ್ದರು. ಆ ಸಮಯದಲ್ಲಿ ಗೋಪಾಲದಾಸರಿಂದ ಪುರಾಣ ಪ್ರವಚನ ನಡೆಯುತ್ತಿತ್ತು.

ಉಚ್ಚಂಗಿದುರ್ಗ ಪಾಳೆಯವನ್ನು ದಾಟಿ ಚಿತ್ರದುರ್ಗ ಸಂಸ್ಥಾನದ ಪ್ರದೇಶವನ್ನು ಪ್ರವೇಶಿಸುತ್ತಿದ್ದಂತೆ ದಾಸಣ್ಣ, ಸೀನಣ್ಣರು ಕುದುರೆಗಳನ್ನು ಬೇಗ ಬೇಗ ಹೆಜ್ಜೆ ಹಾಕುವಂತೆ ಮಾಡತೊಡಗಿದರು.

ಹರಿಹರ ಕ್ಷೇತ್ರವನ್ನು ತಲುಪಿ ತುಂಗಭದ್ರಾ ದಂಡೆಯಲ್ಲಿ ಅಡುಗೆಗೆ ವ್ಯವಸ್ಥೆ ಮಾಡುವ ಆತುರ ಸೀನಣ್ಣ ದಾಸಣ್ಣರಿಗಿದ್ದರೆ ಗೋಪಾಲದಾಸರು ಅದೇಕೋ

ಮಲೆಬೆನ್ನೂರಿನ ಹತ್ತಿರ ಬಹಳ ಹೊತ್ತು ಭಜನೆಯೊಂದಿಗೆ ಕುಣಿಯುತ್ತಾ ನಿಂತುಬಿಟ್ಟರು.

"ಅಣ್ಣಾ, ಬಿಸಿಲೇರುತ್ತಿದೆ. ಹರಿಹರ ಕ್ಷೇತ್ರಕ್ಕೆ ತಲುಪುವುದು ಸೂಕ್ತವಲ್ಲವೆ?" ಸೀನಣ್ಣ ತನ್ನಣ್ಣನಿಗೆ ಮತ್ತೊಮ್ಮೆ ಜ್ಞಾಪಿಸಿದ.

ಗೋಪಾಲದಾಸರು ತಮ್ಮನಿಗೆ ಹೇಳಿದರು

"ಯಾತ್ರೆಯೆಂದರೆ ಬೇಗಬೇಗ ಧಾವಿಸುವ ಕ್ರಮವಲ್ಲವಪ್ಪಾ. ಸರ್ವೋತ್ತಮ ಶ್ರೀ ಕೃಷ್ಣ ದರ್ಶನದ ಪೂರ್ತಿಭಾಗ್ಯವನ್ನು ಪಡೆಯಬೇಕಾದರೆ ಆತನ ಭಕ್ತರ ದರ್ಶನವೂ ಆಗಬೇಕು. ಅವನನ್ನು ಆ ರೂಪದಲ್ಲಿಯೇ ಮೊದಲು ನೋಡಿದ್ದ ಮಹಾಮಾತೆಯ ದರ್ಶನ ಮೊದಲು ಆಗಬೇಕಾಗಿದೆ" ಎಂದು ಅವರು ಇನ್ನೂ ಹೇಳುತ್ತಿದ್ದಂತೆಯೇ "ಹೆಳವನಕಟ್ಟೆ ರಂಗಾ, ಗೋಪಾಲಾ, ಕರುಣಿಸೋ ಪರಮಾತ್ಮ" ಎಂದು ಹಾಡುತ್ತಿರುವ ಹೆಣ್ಣಿನ ಕೋಮಲ ಕಂಠವೊಂದು ಕೇಳಿಬಂದಿತು.

"ಏನಣ್ಣಾ, ಈ ನಿರ್ಜನ ಪ್ರದೇಶದಲ್ಲಿ ಹಾಡುತ್ತಿರುವ ಪುಣ್ಯ ಮಹಿಳೆ ಯಾರು? ಏಕೆ ಈ ಅಡವಿಯಲ್ಲಿದ್ದಾಳೆ?" ದಾಸಣ್ಣ ಪ್ರಶ್ನಿಸಿದ.

"ಇದೂ ಒಂದು ಪವಿತ್ರ ಕ್ಷೇತ್ರ. ಸೂರ್ಯನ ಸಾರಥಿಯಾದ ಅರುಣನು ತಪಸ್ಸು ಮಾಡಿ ಪರಮಾತ್ಮನ ಕೃಪೆಗಳಿಸಿದ್ದ ಕ್ಷೇತ್ರವಿದು. ಈ ಭೂಮಿಯ ಪಾವಿತ್ರ್ಯತೆಯನ್ನು ಸಾರಲು ಗೋಪಾಲವಿಠಲನು ಇಲ್ಲಿ ರಂಗನಾಥನಾಗಿ ವಿರಾಜಿಸುತ್ತಿದ್ದಾನೆ. ಆತನನ್ನು ಭಜಿಸುತ್ತಾ ಜೀವನದ ಬಹುಭಾಗವನ್ನು ವ್ಯಯಿಸುತ್ತಿರುವ ಅಂತರಂಗದ ಭಕ್ತೆ ಗಿರಿಯಮ್ಮ ಎನ್ನುವಾಕೆ ಈ ಹಾಡನ್ನು ಹಾಡುತ್ತಿದ್ದಾಳೆ. ಈಕೆಯ ಭಕ್ತಿಗೆ ಮೆಚ್ಚಿ ಶ್ರೀ ಸುಮತೀಂದ್ರ ಸ್ವಾಮಿಗಳೇ ತುಂಬು ಮನದಿಂದ ಹರಸಿದ್ದಾರೆ. ರಂಗನಾಥ ಕರುಣಿಸಿದ್ದಾನೆ. ಈ ದಿನದ ಅಡುಗೆ ಇಲ್ಲಿಯೇ ಆಗಲಿ. ನೈವೇದ್ಯವನ್ನು ಇಂಥವರಿಗೆ ನೀಡಿದರೆ ಪರಮಾತ್ಮ ಹೆಚ್ಚು ಸಂತೋಷಿಸುತ್ತಾನೆ"

ಎಂದು ತಿಳಿಸಿದ ಗೋಪಾಲದಾಸರು ಹಾಡಿನ ಧ್ವನಿ ಕೇಳಿಬಂದ ಜಾಗಕ್ಕೆ ಯಾತ್ರಿಕರನ್ನು ಕರೆದೊಯ್ದರು.

ಅದೊಂದು ಪುಟ್ಟಗುಡ್ಡ, ಕಲ್ಲು ಬಂಡೆಗಳಿಂದ ಆವೃತವಾದ ಪ್ರದೇಶ. ಆದರೂ ನೀರಿನ ತಾಣವಿದೆ. ಪುಟ್ಟಗುಡಿಯಿದೆ. ಆ ಗುಡಿಯ ಮುಂದೆ ಗಿರಿಯಮ್ಮ ಹಾಡುತ್ತಾ ರಂಗೋಲಿ ಹಾಕುತ್ತಿದ್ದಾಳೆ.

ಜನರು ಬಂದದ್ದು ಆಕೆಯ ಗಮನಕ್ಕೇ ಬರಲಿಲ್ಲ. ತನ್ನ ಕೆಲಸ ತನಗೆ. ಹಾಡುತ್ತಾ ರಂಗೋಲಿ ಹಾಕುವುದರಲ್ಲಿ ಸಂಪೂರ್ಣ ತನ್ಮಯತೆ.

ಬಣ್ಣಬಣ್ಣದ ರಂಗೋಲಿ ತುಂಬಿದ್ದ ನಾಲ್ಕಾರು ಬಟ್ಟಲುಗಳು ಅಲ್ಲಿಯೇ ಇವೆ.

ಆಕೆ ಹಾಕುತ್ತಿದ್ದ ರಂಗೋಲಿಯನ್ನು ಎಲ್ಲರೂ ಬಗ್ಗಿನೋಡಿದರು.

ಗೋಪಾಲಕೃಷ್ಣನ ಮೋಹಕರೂಪವನ್ನು ರಂಗೋಲಿಯಲ್ಲಿ ಸುಂದರವಾಗಿ ಬಿಡಿಸಿದ್ದಾಳೆ.

ಕಸ್ತೂರಿನಾಮ ಇಟ್ಟು, ಕೌಸ್ತುಬ ಹಾರ ಧರಿಸಿ ಪುಟ್ಟ ಕೈಗಳಲ್ಲಿ ಶ್ರೇಷ್ಠ ವೇಣುವನ್ನು ಹಿಡಿದು ತುಟಿಯ ಬಳಿ ಒಯ್ದು ಈಗ ಊದಲಿರುವನೋ ಎನ್ನುವಂತಿದ್ದ ಸುಂದರ ರಂಗೋಲಿ ಚಿತ್ರವನ್ನು ನೋಡಿ ಜನರು ಅವಾಕ್ಕಾಗಿ ಹೋದರು.

ಗೋಪಾಲದಾಸರು ಮಾತ್ರ ಅದನ್ನು ನೋಡಿ ಪಕ್ಕದಲ್ಲಿದ್ದ ಬಟ್ಟಲಿನಿಂದ ಸ್ವಲ್ಪ ರಂಗೋಲಿಯನ್ನು ತೆಗೆದುಕೊಂಡು ಯಾವುದೋ ಒಂದು ಜಾಗದಲ್ಲಿ ಒಂದು ಪುಟ್ಟ ಗೆರೆಯನ್ನು ಎಳೆದರು.

ಸಾಕು; ಮೊದಲೇ ಸುಂದರ ಚಿತ್ರ. ಅದಕ್ಕೆ ಗೋಪಾಲದಾಸರ ಕೈ ಚಳಕ. ಚಿನ್ನಕ್ಕೆ ಸುವಾಸನೆ ನೀಡಿದಂತಾಯಿತು.

ಪಕ್ಕದಲ್ಲಿ ಹೋಗಿ ರಂಗೋಲಿಯನ್ನು ತಿದ್ದಿದರೂ ಆಕೆ ಕತ್ತೆತ್ತಿ ನೋಡಲಿಲ್ಲ. ರಂಗೋಲಿಯಿಂದ ಕಣ್ಣು ಕಿತ್ತಲಿಲ್ಲ. ರಂಗೋಲಿ ಚಿತ್ರಕ್ಕೆ ಜೀವಕಳೆ ಬಂದಂತಾಗಿತ್ತು. ಗೋಪಾಲದಾಸರು ಹಾಕಿದ ಒಂದು ಪುಟ್ಟ ರೇಖೆಯಿಂದಾಗಿ ಅದಕ್ಕೆ ಪ್ರಾಣಪ್ರತಿಷ್ಠೆ ಮಾಡಿದಂತಾಗಿತ್ತು.

ಅದನ್ನು ಆಕೆ ನೋಡುನೋಡುತ್ತಾ ಭಾವತನ್ಮಯಗೊಂಡು ಬಿಟ್ಟಳು.

"ಸ್ವಲ್ಪ ಸ್ವಲ್ಪ ಕಾಣಿಸಿಕೊಳ್ಳುತ್ತಿದ್ದಿ, ಕೂಡಲೇ ಕಣ್ ಮರೆಯಾಗುತ್ತಿದ್ದಿ. ಈ ದಿನ ಪೂರ್ತಿ ದರ್ಶನ ನೀಡಿದೆಯಾ ಪರಮಾತ್ಮಾ" ಎಂದು ಹರ್ಷದಿಂದ ಗಟ್ಟಿಯಾಗಿ ಘೋಷಿಸುತ್ತಾ 'ಕಂಡನೀಗ ರಂಗನಾಥನು' ಎಂದು ಹಾಡುತ್ತಾ ಕುಣಿಯತೊಡಗಿದಳು.

ಗೋಪಾಲದಾಸರೂ ನರ್ತಿಸತೊಡಗಿದರು.

ರಂಗನಾಥನ ಮುರುಳಿಗಾನಕ್ಕೆ ತಕ್ಕ ರೀತಿಯ ತಾಳ. ಗೋಪಾಲದಾಸರ ಕಾಲುಗೆಜ್ಜೆಗಳು ಘಲ್‌ಘಲ್ ನಿನಾದ ಹೊರಡಿಸಿದ್ದವು.

ಆ ಗೆಜ್ಜೆಯ ನಿನಾದಕ್ಕನುಗುಣವಾಗಿ ಚಿತ್ರದ ರಂಗನಾಥ ಕುಣಿದು ಬಿಟ್ಟಿದ್ದ.

ಕಣ್ತೆತ್ತಿ ನೋಡಿದಳು ಗಿರಿಯಮ್ಮ.

ಗೋಪಾಲದಾಸರು ಮೈಮರೆತಿದ್ದರು. ಅವರು ಕುಣಿಯುತ್ತಲೇ ಇದ್ದರು.

ಅವರ ಮುಖದಲ್ಲಿ ವಿರಾಜಿಸುತ್ತಿದ್ದ ಭಕ್ತಿಯ ತೇಜಸ್ಸನ್ನು ಕಂಡು ಗಿರಿಯಮ್ಮ ಅವಾಕ್ಕಾಗಿ ಹೋದಳು.

ಆಕೆ ಪರಮ ಭಕ್ತೆಯೆಂದು, ಭಗವಂತನ ಧ್ಯಾನದಲ್ಲಿ ಮೈಮರೆತು ಬಿಡುವ ಅವಧೂತ ಹಂತಕ್ಕೇರಿದ ಮಹಾಮಹಿಳೆಯೆಂದೂ ಪ್ರದೇಶದ ಜನರೆಲ್ಲಾ ಆಕೆಯಲ್ಲಿ ಭಕ್ತಿಯಿಂದ ನಡೆದುಕೊಳ್ಳುತ್ತಿದ್ದರು. ಆಕೆಯ ಅನುಗ್ರಹದಿಂದ ಅನೇಕರು ಲೌಕಿಕವಾಗಿ ಉದ್ಧಾರವಾಗಿದ್ದರು. ಪಕ್ಕದ ಪುಂಗನೂರಿನ ರಾಜಕುಮಾರನಿಗೆ ದೃಷ್ಟಿ ಲಾಭವಾಗಿದ್ದಿತು. ಆ ಪ್ರದೇಶದಲ್ಲಿ ಮಳೆ ಇಲ್ಲದೆ ತೀವ್ರ ಅಭಾವವುಂಟಾಗಿದ್ದಾಗ ರಂಗನಾಥನನ್ನು ಪ್ರಾರ್ಥಿಸಿ ಮಳೆತರಿಸಿದ ಪುಣ್ಯಮಹಿಳೆ ಆಕೆ. ಆಹಾರವೆಂದು ಭ್ರಮಿಸಿ ಹೊನ್ನುಂಗರವನ್ನು ಗುಬ್ಬಿಯೊಂದು ಹೊತ್ತುಕೊಂಡು ಹೋಗಿದ್ದಾಗ ಆಕೆ ಹಾಡಿ ಅದೇ ಗುಬ್ಬಿಯಿಂದ ವಾಪಸ್ ತರಿಸಿಕೊಂಡಿದ್ದ ಸಿದ್ಧೆ ಈಕೆ.

ಆಕೆ ಗೋಪಾಲದಾಸರ ನೃತ್ಯವನ್ನು ನೋಡಿ ತನ್ಮಯಗೊಂಡುಬಿಟ್ಟಳು.

ಹಾಗೇ ಕೆಳಗೆ ನೋಡಿದಳು.

ರಂಗೋಲಿಯಲ್ಲಿದ್ದ ರಂಗನಾಥ ಮತ್ತೆ ಕುಣಿಯುತ್ತಿರುವಂತೆ ಕಂಡಿತು.

ರಂಗನಾಥನು ಇದುವರೆಗೂ ತನಗೆ ಇಷ್ಟು ಸ್ಪಷ್ಟ ದರ್ಶನ ನೀಡಿರಲಿಲ್ಲ. ಈಗ ಆತನನ್ನು ತನ್ನ ಕಣ್ಣ ಮುಂದೆ ಕುಣಿಯುವಂತೆ ಮಾಡಿದ ಈ ದಾಸಾರ್ಯರ ದಿವ್ಯಶಕ್ತಿಯನ್ನು ಕಂಡು ಅರಿವಿಲ್ಲದಂತೆಯೇ ಆಕೆಯ ಕರಗಳು ಜೋಡಿಸಲ್ಪಟ್ಟವು.

ಗೋಪಾಲದಾಸರ ನೃತ್ಯಸೇವೆ ಮುಗಿದ ನಂತರ ಗೋಪಾಲವಿಠಲ ಎಂದೆನ್ನುತ್ತಾ ಕಣ್ಣುಗಳನ್ನು ತೆರೆದರು.

ಕೂಡಲೇ ಗಿರಿಯಮ್ಮ ಅವರ ಪಾದಗಳಿಗೆ ನಮಸ್ಕರಿಸಿ,

"ದಾಸಶ್ರೇಷ್ಠಾ, ನಿಮ್ಮಿಂದ ಪರಮಾತ್ಮನ ದರ್ಶನವಾಯಿತು. ನನ್ನ ರಂಗನಾಥನನ್ನು ನನ್ನ ಕಣ್ಣಮುಂದೆ ನಿಲ್ಲಿಸಿ ಬಿಟ್ಟರಿ. ನನ್ನಿಂದ ಅನೇಕ ಪವಾಡ ಸದೃಶ ಘಟನೆಗಳು ನಿರ್ವಹಿಸಿದರೂ ತನ್ನ ಸ್ಪಷ್ಟ ರೂಪವನ್ನು ಇದುವರೆಗೂ

ತೋರಿಸಿರಲಿಲ್ಲ. ನಾನು ಈ ಪ್ರದೇಶಕ್ಕೆ ಬಂದೊಡನೆ ಕೆಲವೊಮ್ಮೆ ರಂಗನಾಥ ಪುಟ್ಟಬಾಲಕನಾಗಿ ಕುಣಿಯುತ್ತಾ ಕಾಣಿಸಿಕೊಳ್ಳುತ್ತಾನೆ. ಹತ್ತಿರ ಹೋದರೆ ಕೂಡಲೇ ಮರೆಯಾಗುತ್ತಾನೆ. ಪಕ್ಕದ ಮಲೆಬೆನ್ನೂರಿನ ನನ್ನ ಮನೆಯಿಂದ ಹಾಲು ಮೊಸರುಗಳನ್ನು ತರುತ್ತಿದ್ದರೆ ಕೈಯಲ್ಲಿಂದ ಇದ್ದಕ್ಕಿದ್ದಂತೆ ಮಾಯವಾಗುತ್ತಿತ್ತು. ಗುಡಿಯಲ್ಲಿ ಹೋಗಿ ನೋಡಿದಾಗ ಅಲ್ಲಿ ಇರುತ್ತಿದ್ದವು. ಈ ಪ್ರದೇಶ ಬಿಟ್ಟು ಮನೆಗೆ ಮರಳಿದ ಮೇಲೆ ಆತನ ರೂಪ ಸ್ವಲ್ಪವೂ ಕಾಣಿಸುವುದಿಲ್ಲ. ಎಷ್ಟು ಸ್ಮರಿಸಿ ಕೊಂಡರೂ ದರ್ಶನ ನೀಡುವುದಿಲ್ಲ. ಗುಡಿಗೆ ನಾನು ಬರುತ್ತಿರುವುದನ್ನು ದೂರದಿಂದ ನೋಡಿಯೇ ಓಡಿಹೋಗಿ ಗುಡಿಯಲ್ಲಿ ಶಿಲೆಯಾಗಿ ಬಿಡುತ್ತಾನೆ. ಈ ದಿನವೂ ಹಾಗೆಯೇ ಮಾಡಿದ. ಆತನ ನಿವಾಸದ ಮುಂದೆ ರಂಗೋಲಿ ಹಾಕುತ್ತಿದ್ದೆ. ನೀವು ಬಂದು ರಂಗೋಲಿಯಲ್ಲಿಯೇ ಆತನ ರೂಪ ಕಾಣಿಸಿಬಿಟ್ಟರಿ. ರಂಗೋಲಿಯಲ್ಲಿಂದ ಗುಡಿಯೊಳಗೆ ಹೋದ. ಗುಡಿಯಲ್ಲಿಂದ ನಿಮ್ಮ ಹೃದಯದೊಳಗೆ ಪ್ರವೇಶಿಸಿದ. ಏನು ಆತನ ಲೀಲೆ? ಅ ದಿವ್ಯ ಮಂಗಳರೂಪವನ್ನು ಎಲ್ಲೆಲ್ಲಿಯೂ ಕಾಣುವಂತೆ ನನ್ನನ್ನು ಅನುಗ್ರಹಿಸಬೇಕು ವಿಪ್ರೋತ್ತಮಾ"

ಗಿರಿಯಮ್ಮನ ಮಾತು ಕೇಳಿ ಗೋಪಾಲದಾಸರು ಮುಗುಳ್ನಗುತ್ತಾ ನುಡಿದರು.

"ನೀನು ದೊಡ್ಡ ಜೀವಿಯಮ್ಮಾ, ತಾಯಿ ಯಶೋದೆಗೆ ಶ್ರೀ ಕೃಷ್ಣ ತನ್ನ ಬಾಲಲೀಲೆಗಳಿಂದ ಆನಂದ ನೀಡಿದಂತೆ ಈಗ ರಂಗನಾಥನಾಗಿ ನಿನಗೆ ನಾನಾ ಲೀಲೆಗಳನ್ನು ತೋರುತ್ತಿದ್ದಾನೆ. ಅದನ್ನು ಪ್ರತಿನಿತ್ಯವೂ ನೋಡುವ ಪುಣ್ಯಶಾಲಿ ತಾಯಿ ನೀನು. ನಿನ್ನ ಭಾಗ್ಯವೇ ಭಾಗ್ಯ. ಬಾಹ್ಯ ಚಕ್ಷುಗಳಿಗೆ ದರ್ಶನ ನೀಡುತ್ತಿರುವ ಆತ, ಸಾಧನೆ ಮುಂದುವರೆದಂತೆ ಹೃದಯಾಂತರಂಗದಲ್ಲಿ ಕಾಣಿಸಿಕೊಳ್ಳುತ್ತಾನೆ. ಆಮೇಲೆ ಆತನನ್ನು ಎಲ್ಲೆಲ್ಲಿಯೂ ನೋಡುವ ಭಾಗ್ಯ ತಾನೇ ತಾನಾಗಿ ಸಿದ್ಧಿಸುತ್ತದೆ. ವ್ಯಾಪ್ತೋಪಾಸನೆಯ ಹಂತ ತಲುಪುವವರೆಗೆ ಸಾಧನೆ ಮುಂದುವರೆಸು. ಈ ಜನ್ಮದಲ್ಲಿ ಸಾಧ್ಯವಾಗದಿದ್ದರೂ ಸಾಧಿಸಿದ್ದು ವ್ಯರ್ಥವಾಗುವುದಿಲ್ಲ. ಮುಂದಿನ ಜನ್ಮದಲ್ಲಿ ಅದು ತಾನೇ ಮುಂದುವರಿಸಿಕೊಂಡು ಹೋಗುತ್ತದೆ" ಎಂದು ನುಡಿದು "ಕನ್ನಡದಲ್ಲಿ ಪದ ಪದ್ಯಗಳನ್ನು ಕಟ್ಟಿ ನಿತ್ಯ ಸಾಹಿತ್ಯ ಭಾರತೀದೇವಿಯ ಉಪಾಸನೆಯನ್ನು ಮಾಡುತ್ತಿದ್ದಿ. ಮುಂದೆ ಮುಂದೆ ಆ ಭಾರತೀದೇವಿಯ ಕೃಪೆಯಿಂದ ಶ್ರೀಭಾರತೀ ರಮಣಾಂತರ್ಗತ ಪರಮಾತ್ಮನ ಪರಮಾನುಗ್ರಹ ಸಂಪಾದಿಸುತ್ತಿ. ನಿನ್ನಂಥ ಸ್ತ್ರೀರತ್ನವನ್ನು ಪಡೆದ ನಾಡು ಪುಣ್ಯಭೂಮಿ ಎನಿಸಿಕೊಳ್ಳುತ್ತದೆ" ಎಂದು ಹರಸಿದರು.

ಗಿರಿಯಮ್ಮನಿಗೆ ದಾಸರ ಮಾತುಗಳು ತೃಪ್ತಿ ತರಲಿಲ್ಲ. ಉಪಾಸನೆಯ ಶ್ರೇಷ್ಠ ಹಂತವನ್ನು ತಲುಪಿರುವ ಗೋಪಾಲದಾಸರಿಂದ ಸೂಕ್ತ ಮಾರ್ಗದರ್ಶನ ಪಡೆಯ ಬೇಕೆಂದು ಆಕೆ ಅಪೇಕ್ಷಿಸಿದಳು.

ಅಷ್ಟರಲ್ಲಿ ದಾಸಣ್ಣ ಸೀನಣ್ಣರು ಬಂದು ಅಡುಗೆ ಸಿದ್ಧವಾಗಿರುವುದಾಗಿಯೂ ಬ್ರಾಹ್ಮಣರು ಈಗಾಗಲೇ ಹಸಿದಿದ್ದಾರೆಂದು ಜ್ಞಾಪಿಸಿದರು.

ಗೋಪಾಲದಾಸರ ಕರೆಯನ್ನು ನಿರಾಕರಿಸಲಾಗಲಿಲ್ಲ ಗಿರಿಯಮ್ಮನಿಗೆ. "ನನ್ನ ಜಾಗದಲ್ಲಿ ಬಂದು ನನ್ನ ಆತಿಥ್ಯ ಸ್ವೀಕರಿಸದೆ ನನ್ನನ್ನೇ ಅತಿಥಿ ಮಾಡುತ್ತಿದ್ದೀರಲ್ಲಾ" ಎಂದು ನಗುತ್ತಾ ಪ್ರಶ್ನಿಸಿದಳು.

"ನನ್ನ ಜಾಗ ನಿನ್ನ ಜಾಗ ಎನ್ನುವ ಪ್ರಶ್ನೆಯೇ ಬರುವುದಿಲ್ಲ ತಾಯಿ, ಇದು ರಂಗನಾಥನ ಜಾಗ. ಈ ದಿನ ನೀನು ಇಲ್ಲಿ ಪ್ರಸಾದ ಸ್ವೀಕರಿಸು. ನನ್ನ ಗೋಪಾಲ ವಿಠಲ ಸಂತೋಷಿಸುತ್ತಾನೆ" ಎಂದು ಗೋಪಾಲದಾಸರು ನುಡಿದರು.

"ದಾಸರೇ ಶ್ರೀ ರಂಗನಾಥ ನಾನು ನೆನೆಸಿದಲ್ಲೆಲ್ಲಾ ಕಾಣಿಸುವಂತೆ ಅನುಗ್ರಹಿಸು ವುದಾದರೆ ಮಾತ್ರ ನಾನು ನಿಮ್ಮ ಅತಿಥಿಯಾಗುತ್ತೇನೆ" ಎಂದು ಗಿರಿಯಮ್ಮ ಹಠ ಹಿಡಿದಳು.

ಪರಮಾತ್ಮನ ಒಂದು ಪ್ರತೀಕವನ್ನು ತಯಾರಿಸಿ ನಿನಗೆ ಕೊಡುತ್ತೇನೆ. ಅದನ್ನು ನೋಡಿದಾಗಲೆಲ್ಲಾ ರಂಗನಾಥ ನಿನಗೆ ದರ್ಶನ ನೀಡುತ್ತಾನೆ" ಎಂದು ಗೋಪಾಲದಾಸರು ಭರವಸೆ ಕೊಟ್ಟ ಮೇಲೆ ಆಕೆ ತೃಪ್ತಿಯಿಂದ ನಲಿದಾಡಿಬಿಟ್ಟಳು.

ರಂಗೋಲಿಯಲ್ಲಿ ಒಂದು ಸಣ್ಣ ಗೆರೆ ಎಳೆದ ಮಾತ್ರಕ್ಕೇ ಪರಮಾತ್ಮನ ವಿಶೇಷ ಸನ್ನಿಧಾನವುಂಟಾಯಿತು. ಅಂಥವರು ಪ್ರತೀಕ ತಯಾರಿಸಿ ಕೊಡುವ ಆಶ್ವಾಸನೆ ನೀಡಿದ ಮೇಲೆ ಆಕೆಗೆ ಹೆಚ್ಚಿನ ಅಪೇಕ್ಷೆಯೇನೂ ಉಳಿಯಲಿಲ್ಲ. ಆದರೂ ಅಂಥ ದೊಡ್ಡವರು ತಮ್ಮ ಮನೆಗೆ ಬರದೆ ಹಾಗೆಯೇ ಪ್ರಯಾಣ ಮುಂದುವರಿಸುವುದು ಆಕೆಗೆ ಸರಿಕಾಣಲಿಲ್ಲ. "ನೀವು ನೀಡುವ ರಂಗನಾಥನ ಪ್ರತೀಕಕ್ಕೆ ನೀವೇ ಮೊದಲು ಪೂಜೆ ಮಾಡಿಕೊಡಬೇಕು. ನಾಳೆ ನನ್ನ ಮನೆಯಲ್ಲಿಯೇ ಬ್ರಾಹ್ಮಣ ಸಂತರ್ಪಣೆ ಯಾಗಬೇಕು" ಎಂದು ಗಿರಿಯಮ್ಮ ಪ್ರಾರ್ಥಿಸಿದಳು.

ಕೂಡಲೇ ಗೋಪಾಲದಾಸರು ನಗುತ್ತಾ ನುಡಿದರು. "ಅಗ್ಗದಲ್ಲಿ ಈ ದಾಸರು ಸಿಕ್ಕುಬಿಟ್ಟರು ಎಂದು ಹಿಗ್ಗಬೇಡ ತಾಯಿ. ಸೂಕ್ತ ದಕ್ಷಿಣೆ ನೀಡಿದರೆ ಮಾತ್ರ ನಾಳೆ ನಿಮ್ಮ ಮನೆಯಲ್ಲಿ ಊಟ."

ನೀವು ಏನು ಕೇಳಿದರೂ ನೀಡುತ್ತೇನೆ. ನಿಮ್ಮಿಂದ ಪರಮಾತ್ಮನನ್ನು ಸರಿಯಾಗಿ ಕಾಣಲು ಸಾಧ್ಯವಾಯಿತು. ನನ್ನ ಜೀವತ್ಯಾಗ ಕೇಳಿದರೂ ಕೊಡಲು ಸಿದ್ಧಳಿದ್ದೇನೆ. ದಾಸವರ್ಯಾ ಕೇಳಿ ಏನು ನಿಮ್ಮ ಅಪೇಕ್ಷೆ?" ಗಿರಿಯಮ್ಮ ದೈನ್ಯದಿಂದ ಕೇಳಿ ಕೊಂಡಳು.

"ಕನ್ನಡದಲ್ಲಿ ಕಾವ್ಯ ರಚಿಸಿ ಪರಮಾತ್ಮನನ್ನು ಸ್ತುತಿಸುತ್ತಿರುವ ನಿನ್ನ ಈ ಮಾರ್ಗ ವನ್ನು ಮಾತ್ರ ಮುಂದೆ ಬಿಡಬಾರದು. ಮುಂದಿನ ಮಹಿಳೆಯರಿಗೆ ಭಕ್ತಿ ಹುಟ್ಟಿಸುವ ರೀತಿಯಲ್ಲಿ ನಿನ್ನ ಕಾವ್ಯ ನಿರ್ಮಾಣ ಕಾರ್ಯ ಮುಂದುವರಿಸುತ್ತಿರಬೇಕು."

"ಅಪ್ಪಣೆ ವಿಪ್ರೋತ್ತಮಾ, ಸಾಮಾನ್ಯ ಗೃಹಿಣಿಯಾಗಿರುವ ನನಗೆ ತತ್ವ ಪ್ರಮೇಯಗಳ ಪರಿ ಗೊತ್ತಿಲ್ಲ. ಉಪಾಸನಾ ರೀತಿಗಳನ್ನು ಅರಿತಿಲ್ಲ. ಆದರೂ ನನ್ನ ಯೋಗ್ಯತೆಗೆ ತಕ್ಕಷ್ಟು ಭಕ್ತಿ ಸಾಹಿತ್ಯಕ್ಕೆ ನಿಮ್ಮ ಪರವಾಗಿ ಕಾಣಿಕೆ ಅರ್ಪಿಸುತ್ತೇನೆ" ಎಂದು ಹೇಳಿ ಗೋಪಾಲದಾಸರಿಗೆ ನಮಸ್ಕರಿಸಿದಳು ಗಿರಿಯಮ್ಮ.

***

ಗಿರಿಯಮ್ಮನ ಆತಿಥ್ಯವನ್ನು ಸ್ವೀಕರಿಸಿ ಮುಂದೆ ಪ್ರಯಾಣಿಸಿದ ಗೋಪಾಲ ದಾಸರ ಯಾತ್ರಾ ತಂಡ ಶಿವಮೊಗ್ಗೆಯನ್ನು ದಾಟಿ ಕ್ರಮೇಣವಾಗಿ ಮುಂಡಗದ್ದೆ ಎನ್ನುವ ಗ್ರಾಮದ ಬಳಿ ಬರುತ್ತಿದ್ದಂತೆ ಗೋಪಾಲದಾಸರು ತಮ್ಮಂದಿರನ್ನು ಮೆಲ್ಲಗೆ ಕರೆದು ಹೇಳಿದರು.

"ಈಗ ಒಬ್ಬ ಪುಣ್ಯಾತ್ಮ ನಮ್ಮೆಲ್ಲರನ್ನು ಊಟಕ್ಕೆ ಆಹ್ವಾನಿಸಲು ಬರುತ್ತಾನೆ. ಅತಿ ವಿನೀತತ್ವ ತೋರಿ ತಾನೊಬ್ಬ ಭಾರೀ ದೈವಭಕ್ತನೆಂದು ಜನರು ಭ್ರಮಿಸುವಂತೆ ಮಾಡುವಲ್ಲಿ ಅವನು ಬಹಳ ನಿಸ್ಸೀಮ. ಉಡುಪಿ ಕೊಲ್ಲೂರು, ಕೋಟೇಶ್ವರ, ಕುಂಭಾಶಿ, ಆನೆಗುಡ್ಡೆ ಮೊದಲಾದ ಪವಿತ್ರ ಕ್ಷೇತ್ರಗಳ ದರ್ಶನಕ್ಕೆಂದು ಬರುವ ಭಕ್ತ ರನ್ನು ಕೊಳ್ಳೆ ಹೊಡೆಯುವುದೇ ಅವನ ಮುಖ್ಯ ಕೆಲಸ. ದೂರದೂರದಿಂದ ಯಾತ್ರೆಗೆ ಬರುವ ಜನ ಹೆಚ್ಚು ಹಣ ತಂದಿರುತ್ತಾರೆಂದು ಅವನಿಗೆ ಚೆನ್ನಾಗಿ ಗೊತ್ತು. ಎತ್ತರದ ಮರಗಳ ಮೇಲೆ ಕುಳಿತಿರುವ ಅವನ ಬಂಟರು ವಿವಿಧ ಸಂಜ್ಞೆಗಳ ಮೂಲಕ ಈಗಾಗಲೇ ನಮ್ಮ ಬರುವಿಕೆಯನ್ನು ಅವನಿಗೆ ತಿಳಿಸಿದ್ದಾರೆ. ಯಾರ ಯಾರ ಬಳಿ ಎಷ್ಟೆಷ್ಟು ಹಣವಿದೆಯೆಂದು ತಿಳಿಯಲು ಸಂತರ್ಪಣೆಯ ನೆವದಿಂದ ಆಹ್ವಾನಿಸಿ ನಮ್ಮ ಬಲಾಬಲ ತಿಳಿದುಕೊಳ್ಳುತ್ತಾನೆ. ಅಲ್ಲಿಂದ ಅವರು ಮುಂದೆ ಹೋದಾಗ ಯಾರ ಬಳಿ ಹೆಚ್ಚು ಹಣವಿದೆಯೋ ಮೊದಲು ಅವರ ತಲೆ ಒಡಿಸುತ್ತಾನೆ.

ಮಿಕ್ಕವರೆಲ್ಲಾ ಶರಣಾಗಿ ತಮ್ಮಲ್ಲಿರುವುದನ್ನೆಲ್ಲಾ ಕೊಟ್ಟು ಬಿಡುತ್ತಾರೆಂದು ಅವನಿಗೆ ಚೆನ್ನಾಗಿ ಗೊತ್ತು. ಆದ್ದರಿಂದ ಹೆಚ್ಚು ಬೆಲೆಬಾಳುವ ವಸ್ತುಗಳು ಹಾಗೂ ಹಣ ನನ್ನಲ್ಲಿಯೇ ಇದೆಯೆಂದು ಅವನು ಭ್ರಮಿಸುವಂತೆ ಮಾಡಬೇಕು. ಅವನ ಜಾಗ ದಲ್ಲಿದ್ದಾಗ ಅವನ ಮುಂದೆಯೇ ಮೇಲಿಂದ ಮೇಲೆ ನನಗೆ ಹಣ ಎಣಿಸಿಕೊಡು. ಅವನು ಮರೆಯಾದಾಗ ಅವನ್ನು ಹಿಂದಿರುಗಿಸುತ್ತೇನೆ. ಅವನು ಬಂದಾಗ ಪುನಃ ನನಗೆ ಕೊಡುತ್ತಿರು" ಎಂದು ಗೋಪಾಲದಾಸರು ಸೂಚನೆ ಕೊಟ್ಟರು.

ಅಣ್ಣನ ಮಾತು ಕೇಳಿ ಸೀನಣ್ಣ ದಾಸಣ್ಣರು ಹೆದರಿಬಿಟ್ಟರು. "ಅಂಥ ಕೊಲೆಗಡುಕ ನಿರುವ ದಾರಿಯನ್ನು ಬಿಟ್ಟು ಬೇರೆ ಮಾರ್ಗದ ಮೂಲಕ ನಮ್ಮ ಪ್ರಯಾಣ ಮುಂದುವರಿಸಬಹುದಲ್ಲಣ್ಣಾ, ಅಕಸ್ಮಾತ್ ಅವನ ಬಂಟರು ಸರ್ರೆಂದು ಬಂದು ನಿಮ್ಮ ತಲೆಯನ್ನು ಒಡೆದು ಬಿಟ್ಟರೆ...?" ಸೀನಣ್ಣನ ಸಂಶಯ ನೋಡಿ ಗೋಪಾಲದಾಸರು ಒಮ್ಮೆ ಗಟ್ಟಿಯಾಗಿ ನಕ್ಕು ಆಮೇಲೆ ನಿಧಾನವಾಗಿ ಹೇಳಿದರು. "ದುಷ್ಟರಿಗೆ ಹೆದರಿ ನಮ್ಮ ಮಾರ್ಗವನ್ನೇ ಬದಲಾಯಿಸಿಕೊಳ್ಳುವುದು ಜವಾಬ್ದಾರಿ ಅರಿತ ನಾಗರೀಕನ ಲಕ್ಷಣವಲ್ಲವಪ್ಪಾ, ಅವರಿಗಾಗಿ ನಮ್ಮ ಮಾರ್ಗ ಬದಲಾಯಿಸಿ ಕೊಳ್ಳುವುದಕ್ಕಿಂತ ನಮ್ಮ ಮಾರ್ಗಕ್ಕೆ ಅವರನ್ನು ಬರುವಂತೆ ಮಾಡಬೇಕು. ಬಡವರನ್ನು ದೂರ ಇರಿಸಿ, ಅವರಿಗಿಂತ ಬಹಳ ಮೇಲ್ತರಗತಿಯಲ್ಲಿ ಬದುಕ ಬಯಸುವುದು ಸಮಾಜದ ಆರ್ಥಿಕ ಅವ್ಯವಸ್ಥೆಗೆ ಕಾರಣವಾಗುವುದಿಲ್ಲವೆ ? ಹಾಗೆಯೇ ದುಷ್ಟರನ್ನು ಅವರಷ್ಟಕ್ಕೆ ಬಿಟ್ಟುಬಿಡುವುದು ಸ್ವಾಸ್ಥ್ಯ ಸಮಾಜ ನಿರ್ಮಾಣಕ್ಕೆ ಅಡ್ಡಿಪಡಿಸಿದಂತೆ. ಅವರಿಗೆ ಭಕ್ತಿ ಮಾರ್ಗ ತೋರುವುದೂ ಈ ಯಾತ್ರೆಯ ನನ್ನ ಉದ್ದೇಶಗಳಲ್ಲೊಂದು."

ಗೋಪಾಲದಾಸರ ವಿವರಣೆ ಕೇಳಿ ಸೀನಣ್ಣನಿಗೆ ಸಮಾಧಾನವಾಗಲಿಲ್ಲ.

"ಅಲ್ಲಣ್ಣಾ, ಧಿಡೀರೆಂದು ಬಂದು ತಲೆ ಒಡೆದ ಮೇಲೆ ಅವರನ್ನು ಸನ್ಮಾರ್ಗಕ್ಕೆ ತರುವ ಮಾತಾದರೂ ಎಲ್ಲಿ ಉಳಿಯುತ್ತದೆ ?" ಪ್ರಶ್ನಿಸಿದ ಸೀನಣ್ಣ.

"ಆ ಭಯ ನಿನಗೆ ಬೇಕಾಗಿಲ್ಲ ಸೀನೂ, ಯಾರ ದರ್ಶನಕ್ಕಾಗಿ ನಾವು ಈ ಯಾತ್ರೆ ಕೈಗೊಂಡಿದ್ದೇವೆ? ಸರ್ವೋತ್ತಮ ಶ್ರೀ ಕೃಷ್ಣನ ದರ್ಶನಕ್ಕೆ ತಾನೆ? ಯಾತ್ರೆಗೆ ಹೊರಡುವ ಮೊದಲು ಯಾರ ಆಶೀರ್ವಾದ ಪಡೆದಿದ್ದೇವೆ? ಶ್ರೀ ಕೃಷ್ಣನ ಪರಮಾನುಗ್ರಹಕ್ಕೆ ಪಾತ್ರರಾದ ನಮ್ಮ ಗುರುಗಳು ನಮ್ಮನ್ನು ಆಶೀರ್ವದಿಸಿ ಕಳಿಸಿಲ್ಲವೆ? ನಮ್ಮ ಗುರು ಶ್ರೀ ವಿಜಯದಾಸರನ್ನು ಸ್ಮರಣೆ ಮಾಡಿ ಸತ್ಕಾರ್ಯಕ್ಕೆ

ಹೊರಟಿರುವವರಿಗೆ ವಿಘ್ನಗಳು ಎಲ್ಲಿಯಾದರೂ ಬರುವುದುಂಟೆ? ಬಂದರೂ ನಿಲ್ಲುವುದುಂಟೆ? ಇದೆಲ್ಲವನ್ನೂ ಮುಂದಾಗಿಯೇ ಅವರು ಕಂಡು ಶ್ರೀ ಹರಿಸ್ತುತಿಯನ್ನು ಬರೆದುಕೊಟ್ಟಿಲ್ಲವೆ? ವಿಜಯದಾಸರ ಪದಗಳೆಂದರೆ ಕೇವಲ ಶಬ್ದಗಳ ಜೋಡಣೆಯಲ್ಲಪ್ಪಾ, ಅವು ಮಂತ್ರಾಕ್ಷರಗಳು. ಮಂತ್ರ ಪ್ರತಿಪಾದ್ಯನಾದ ಪರಮಾತ್ಮನೇ ನಮ್ಮ ಜೊತೆಗಿದ್ದಂತೆ, ನೋಡುತ್ತಿರು ಮುಂದಾಗುವ ಸ್ವಾರಸ್ಯ ಘಟನೆಗಳನ್ನು" ಗೋಪಾಲದಾಸರು ಹೇಳುತ್ತಿದ್ದಂತೆಯೇ ಯಾರೋ ನಾಲ್ಕೈದು ಜನರು ಎದುರು ಬಂದು ಗೋಪಾಲದಾಸರಿಗೆ ನಮಸ್ಕಾರ ಹಾಕಿದರು.

"ಸದ್‌ಬುದ್ಧಿಪ್ರಾಪ್ತಿರಸ್ತು" ಗೋಪಾಲದಾಸರು ಆಶೀರ್ವದಿಸಿದರು.

ಸದ್‌ಬುದ್ಧಿಯಿಂದ ಬಂದಿಲ್ಲದ ಅವರಿಗೆ ದಾಸರ ಆಶೀರ್ವಾದ ಸರಿಕಾಣಲಿಲ್ಲ. ಮನಸ್ಸು ಏನೋ ಒಂದು ರೀತಿ ಅಳುಕಿತು. "ಇಷ್ಟಾರ್ಥ ಸಿದ್ಧಿರಸ್ತು" ಎಂದು ಆಶೀರ್ವದಿಸಿ ಯಾತ್ರಿಕ ಶ್ರೇಷ್ಠಾ" ಅವರ ಮುಖಂಡ ವಿನಂತಿಸಿದ.

ಗೋಪಾಲದಾಸರು-ಆ ಮುಖಂಡನು ಕಾಲಲ್ಲಿ ತೊಟ್ಟಿದ್ದ ಕೆರದಿಂದ ಜರತಾರಿ ರುಮಾಲು ಧರಿಸಿದ್ದ ಶಿರದವರೆಗೆ ಒಮ್ಮೆ ಪರೀಕ್ಷಿಸಿ ನೋಡಿದರು.

ದಷ್ಟಪುಷ್ಟವಾದ ಶರೀರ. ಕೋರೆಮೀಸೆ, ಕಿವಿಯಲ್ಲಿ ಮಿರಿಮಿರಿ ಮಿಂಚುವ ಓಲೆಗಳು, ಥಳಥಳಿಸುತ್ತಿದ್ದ ಬೆರಳಿನ ಉಂಗುರಗಳು ಮುಖಂಡನ ಶ್ರೀಮಂತಿಕೆಯನ್ನು ಸಾರುತ್ತಿದ್ದವು. ಆದರೂ ಮುಖದಲ್ಲಿ ಎಂಥ ವಿನೀತ ಭಾವ!

ಶುದ್ಧ ಚಿನ್ನಕ್ಕಿಂತ ನಕಲಿ ಚಿನ್ನಕ್ಕೆ ಮೆರಗು ಹೆಚ್ಚು!

ಅತಿ ವಿನಯದಿಂದ ಆ ಮುಖಂಡ ಗೋಪಾಲದಾಸರಲ್ಲಿ ವಿನಂತಿಸಿದ.

"ನನ್ನ ಹೆಸರು ಭೀಮಣ್ಣ. ಈ ಮಾರ್ಗದಲ್ಲಿ ಹೋಗುವ ಯಾತ್ರಿಕರಿಗೆ ಸೌಲಭ್ಯ ಕಲ್ಪಿಸುವುದು ನಮ್ಮ ಮನೆತನದ ಸಂಪ್ರದಾಯ. ಈ ದಿನ ತಾವೆಲ್ಲರೂ ನಮ್ಮ ಆತಿಥ್ಯ ಸ್ವೀಕರಿಸಿ ನಮ್ಮನ್ನು ಉದ್ಧರಿಸಬೇಕು."

ಆತನ ವಿನಯ ವರ್ತನೆಯನ್ನು ನೋಡಿ ಯಾತ್ರಿಕರೆಲ್ಲಾ ಸಂತೋಷಿಸಿದರು. 'ಎಷ್ಟು ಶ್ರೀಮಂತನಾದರೂ ಎಂಥ ನಮ್ರಭಾವ! ಯಾತ್ರಿಕರೆಂದರೆ ಎಷ್ಟು ಭಕ್ತಿ! ಒಲಿಯಬೇಕು ಇಂಥವರಿಗೆ ಸಂಪತ್ತು' ಎಂದು ಯಾತ್ರಿಕರು ಮಾತನಾಡಿಕೊಳ್ಳುತ್ತಿದ್ದರು.

"ಯಾತ್ರಿಕರಿಗೆ ಸೌಲಭ್ಯ ಕಲ್ಪಿಸುವುದು ನಿಮ್ಮ ಸಂಪ್ರದಾಯವಾದರೆ ಯಾರೊಬ್ಬರಿಗೂ ಹೆಚ್ಚು ಶ್ರಮಕೊಡದೆ ಯಾತ್ರೆ ಮಾಡುವುದು ನಮ್ಮ ಸಂಪ್ರದಾಯ. ಆದರೂ ನಿಮ್ಮಂಥವರಿಗೆ ಸದ್‌ಬುದ್ಧಿ ಬರುವುದಕ್ಕಾಗಿ ಈ ದಿನ ನಮ್ಮ ಆಚಾರ ಬಿಟ್ಟುಕೊಡುತ್ತೇವೆ. ನಿಮ್ಮಲ್ಲಿಯೇ ನಮ್ಮ ಊಟದ ವ್ಯವಸ್ಥೆ ಮಾಡಿ. ನನ್ನ ತಮ್ಮಂದಿರೇ ಅಡುಗೆ ಮಾಡುತ್ತಾರೆ. ಅವರಿಗೆ ಬೇಕಾದ್ದನ್ನು ಒದಗಿಸಿ" ಎಂದು ಗೋಪಾಲದಾಸರು ನುಡಿದಾಗ ಹೆಚ್ಚಾಗಿ ಬೇರೆಯವರ ಆತಿಥ್ಯಕ್ಕೆ ಒಪ್ಪಿಕೊಳ್ಳದವರು ಈ ದಿನ ಕೂಡಲೇ ಒಪ್ಪಿಕೊಂಡಿದ್ದನ್ನು ನೋಡಿ ಸಹ ಯಾತ್ರಿಕರಿಗೆ ಆಶ್ಚರ್ಯದೊಂದಿಗೆ ಆನಂದವೂ ಆಯಿತು. ಮಂಡಗದ್ದೆಯಲ್ಲಿ ಆ ದಿನ ಯಾತ್ರಿಕರಿಗೆ ಭಾರೀ ಭೋಜನ. ಕೈತುಂಬಾ ದಕ್ಷಿಣೆ. ಭೀಮಣ್ಣನ ಉಪಚಾರವೋ ಉಪಚಾರ.

ಆತನ ಔದಾರ್ಯ ಕಂಡು ಬ್ರಾಹ್ಮಣರು ಹೊಗಳಿದ್ದೇ ಹೊಗಳಿದ್ದು. ಅಷ್ಟು ಹಣ ದಕ್ಷಿಣೆ ಕೊಟ್ಟರೆ ಅದನ್ನು ಅವರೆಲ್ಲಿಟ್ಟು ಕೊಳ್ಳುತ್ತಾರೆ? ಅವರವರ ಭದ್ರ ಸ್ಥಳಗಳಲ್ಲಿ ಬಚ್ಚಿಟ್ಟುಕೊಳ್ಳುತ್ತಾರೆ. ಪ್ರತಿಯೊಬ್ಬರ ಗುಪ್ತ ಜಾಗಗಳನ್ನು ತಿಳಿದು ಕೊಳ್ಳುವುದೇ ಭೀಮಣ್ಣನ ಉದ್ದೇಶವಾಗಿತ್ತೆಂದು ಅವರಿಗೆ ಹೇಗೆ ತಿಳಿಯಬೇಕು?

ಅಣ್ಣನ ಸೂಚನೆಯಂತೆ ಸೀನಣ್ಣ ದಾಸಣ್ಣರು ತಮ್ಮಲ್ಲಿದ್ದ ಧನವನ್ನು ಬಂದ ದಕ್ಷಿಣೆ ಹಣವನ್ನು ಹತ್ತುಪಟ್ಟು ಕಾಣುವಂತೆ ಮಾಡಿ ಅಣ್ಣನಿಗೆ ನೀಡಿದರು.

ಒಂದು ಊಟಕ್ಕೆ ತಮ್ಮ ತಪಸ್ಸಿನ ಶಕ್ತಿಯನ್ನು ಧಾರೆ ಎರೆಯುವ ಸಾವಿರಾರು ಬ್ರಾಹ್ಮಣರು, ಒಂದು ಸುಖೀ ಭೋಜನಕ್ಕೆ ಯಾವ ತ್ಯಾಗಕ್ಕೂ ಸಿದ್ಧವಾಗುವ ಈ ವರ್ಗದವರ ಹುಚ್ಚುತನವನ್ನು ಕಂಡು ಕೋರೆ ಮೀಸೆಯೊಳಗಿನಿಂದಲೇ ಮುಸಿ ಮುಸಿ ನಕ್ಕ ಭೀಮಣ್ಣ.

ಹಣವನ್ನು ಭದ್ರವಾಗಿಟ್ಟುಕೊಳ್ಳುವಂತೆ ಭೀಮಣ್ಣನೇ ಗೋಪಾಲದಾಸರಿಗೆ ಸೂಚನೆಕೊಟ್ಟಾಗ ಅವರು ಮುಗುಳ್ನಗುತ್ತಾ ಮುಂದೆ ಪ್ರಯಾಣಿಸಿದರು.

ಪಶ್ಚಿಮಾದ್ರಿಯ ಹಸಿರು ಘಟ್ಟವನ್ನು ಇಳಿಯುತ್ತಿದ್ದಂತೆ ಗೋಪಾಲದಾಸರು ತಮ್ಮ ಗುರುಗಳು ಬರೆದುಕೊಟ್ಟ 'ಒಂದು ಕೈಯಲ್ಲಿ ಖಡ್ಗ, ಒಂದು ಕೈಯಲ್ಲಿ ಹಲಗೆ' ಪದವನ್ನು ಗಟ್ಟಿಗಟ್ಟಿಯಾಗಿ ಹೇಳತೊಡಗಿದರು.

ಘಟ್ಟದ ಅರ್ಧಭಾಗ ಇಳಿದಿದ್ದರು ಯಾತ್ರಿಕರು.

ಅಷ್ಟರಲ್ಲಿಯೇ ಹತ್ತಾರು ಜನ ಡಕಾಯಿತರು ಮಾರಕಾಸ್ತ್ರಗಳೊಂದಿಗೆ ಯಾತ್ರಿಕರನ್ನು ಅಡ್ಡಗಟ್ಟಿದರು.

"ನಿಮ್ಮಲ್ಲಿರುವ ಧನ, ಬೆಲೆಬಾಳುವ ವಸ್ತುಗಳನ್ನೆಲ್ಲಾ ಇಲ್ಲಿ ಕೊಟ್ಟು ಮುಂದೆ ಹೋಗಿ, ಇಲ್ಲದಿದ್ದಲ್ಲಿ ನಿಮ್ಮೆಲ್ಲರನ್ನು ಇಲ್ಲಿ ಕೊಂದು ಬಿಡುತ್ತೇವೆ. ಕೊಲೆ ಕೊಳ್ಳೆ ಎರಡೂ ಆಗಬಾರದೆಂದು ಅಪೇಕ್ಷಿಸುವಿರಾದರೆ ಒಂದಕ್ಕೆ ಒಪ್ಪಿಕೊಳ್ಳಿ" ಎಂದು ಡಕಾಯಿತರು ಘರ್ಜಿಸಿದಾಗ ಯಾತ್ರಿಕರು ಥರ ಥರ ನಡುಗಿ ಹೋದರು. ಗೋಪಾಲದಾಸರು ಸ್ವಲ್ಪವೂ ಬೆದರಲಿಲ್ಲ. ತಮ್ಮ ಸಹ ಯಾತ್ರಿಕರಿಗೆ ಅವರು ಗಟ್ಟಿಯಾಗಿ ಸೂಚನೆ ಕೊಟ್ಟರು.

"ನಾನು ಇದುವರೆಗೂ ಹೇಳುತ್ತಿದ್ದ ದೇವತಾಸ್ತುತಿಯನ್ನು ನೀವೂ ಗಟ್ಟಿಯಾಗಿ ಹೇಳಿ. ನನ್ನ ಗುರುಗಳಾದ ವಿಜಯದಾಸರಿಂದ ಅನುಗ್ರಹೀತವಾದ ಉಗಾಭೋಗವಿದು. ಅದೇ ನಮ್ಮನ್ನು ಕಾಯುತ್ತದೆ." ಎಲ್ಲರೂ ಆ ಪದವನ್ನು ಗಟ್ಟಿ ಗಟ್ಟಿಯಾಗಿ ಹೇಳತೊಡಗಿದರು.

ತಮ್ಮಲ್ಲಿರುವ ಧನವನ್ನು ಕೊಡದೆ ಅಥವಾ ಎದುರಿಸುವ ವ್ಯವಸ್ಥೆಯನ್ನೂ ಮಾಡಿಕೊಳ್ಳದೆ ಕೇವಲ ಹಾಡು ಹೇಳುತ್ತಾ ನಿಂತ ಯಾತ್ರಿಕರ ಚರ್ಯೆಯನ್ನು ಕಂಡು ದರೋಡೆಕೋರರು ಸ್ವಲ್ಪ ಕಕ್ಕಾಬಿಕ್ಕಿಯಾದರು.

ಓಡಿ ಹೋಗಲು ಪ್ರಯತ್ನಿಸುವುದು, ಗಟ್ಟಿಯಾಗಿ ಚೀರುವುದು, ಭೀತರಾಗಿ ಗರ ಬಡಿದವರಂತೆ ನಿಂತು ಬಿಡುವುದು ಇಲ್ಲವೇ ತಮ್ಮ ಸಾಮಾನುಗಳನ್ನು ಒಪ್ಪಿಸುವುದು ಇಂಥ ಸನ್ನಿವೇಶಗಳನ್ನಷ್ಟೇ ಎದುರಿಸಿದ್ದ ಆ ದರೋಡೆಕೋರರಿಗೆ ಪದವನ್ನು ಗಟ್ಟಿಯಾಗಿ ಹೇಳುತ್ತಾ ನಿಂತ ಈ ಯಾತ್ರಿಕರ ಚರ್ಯೆ ಕಂಡು ಆಶ್ಚರ್ಯವಾಗಿ ಹೋಯಿತು.

"ಸೇವಕರೇ ನೋಡುತ್ತೀರೇನು ? ಅವರ ಬಳಿ ಯಾವ ಆಯುಧಗಳೂ ಇಲ್ಲ. ಅದನ್ನು ಮಂಡಗದ್ದೆಯಲ್ಲಿಯೇ ಪರೀಕ್ಷಿಸಿದ್ದೇವೆ. ಹೆದರಬೇಡಿ ನೀವು. ಸದೆಬಡಿಯಿರಿ ಇವರನ್ನು." ಕೂಗಿ ಸೂಚನೆ ಕೊಟ್ಟ ಅವರ ನಾಯಕ.

ತಮ್ಮ ನಾಯಕನ ಧ್ವನಿಯಿಂದ ಡಕಾಯಿತರಿಗೆ ಧೈರ್ಯ ಬಂದಿತು. ಅವರು ಮುನ್ನುಗ್ಗಲು ಪ್ರಯತ್ನಿಸಿದರು.

ಒಂದು ಕೈಯಲ್ಲಿ ಖಡ್ಗ ಹಿಡಿದು ಇನ್ನೊಂದು ಕೈಯಲ್ಲಿ ಪ್ರತಿರೋಧಿಸುವ ಢಾಲುವಿನಂತಹ ಹಲಗೆ ಹಿಡಿದು ತಮ್ಮನ್ನು ಹೊಡೆಯಲು ಸಿದ್ಧರಾಗಿರುವ

ನೂರಾರು ಜನರು ಯಾತ್ರಿಕರ ರಕ್ಷಣೆಗೆ ನಿಂತಿರುವಂತೆ ಅವರಿಗೆಲ್ಲಾ ಆಮೇಲೆ ಕಂಡಿತು. ಮುಂದುವರೆಯದಾದರು ಅವರು. ಹೆದರಿಸ ಬಂದವರು ಹೆದರ ತೊಡಗಿದರು. ಯಾರನ್ನು ನೋಡಿದರೆ ಜನ ಗಡಗಡ ನಡುಗುತ್ತಿದ್ದರೋ ಈಗ ಅವರೇ ಗಡಗಡ ನಡುಗುತ್ತಿದ್ದಾರೆ.

ತನ್ನ ಸೇವಕರು ಹೌಹಾರಿದ್ದನ್ನು ಕಂಡು ನಾಯಕನಿಗೆ ವಿಪರೀತ ಸಿಟ್ಟು.

"ಹೇಡಿಗಳೇ ಕೈಯಲ್ಲಿ ತಾಳ ತಂಬೂರಿಗಳ ಹೊರತು ಮತ್ತೇನು ಇಲ್ಲದ ಈ ದಾಸಯ್ಯಗಳ ಪದಕ್ಕೇನು ಹೆದರುತ್ತೀರಿ ? ಮುನ್ನುಗ್ಗಿ. ಮೊದಲು ಈ ದಾಸಯ್ಯನ ತಲೆ ಒಡೆಯೋಣ " ಎಂದು ಕೂಗುತ್ತಾ ಮುನ್ನುಗ್ಗಿದ ಆ ನಾಯಕ.

"ಭೀಮಾ, ನಿನ್ನಲ್ಲಿರುವುದನ್ನೆಲ್ಲಾ ನನಗೆ ದಕ್ಷಿಣೆ ಕೊಟ್ಟುಬಿಟ್ಟೆಯಲ್ಲಪ್ಪಾ ! ಹಾಗೆಯೇ ನಿನ್ನ ಪೌರುಷವನ್ನೆಲ್ಲಾ ನನ್ನ ಜೋಳಿಗೆಯಲ್ಲಿ ಹಾಕಿ ಬಿಟ್ಟಿದ್ದೇನೆ. ಸಾಕು ನಿಲ್ಲಿಸು ನಿನ್ನ ಬೊಬ್ಬಾಟ" ಗೋಪಾಲದಾಸರು ನುಡಿದಾಗ ಮುಖಕ್ಕೆ ಬಟ್ಟೆ ಸುತ್ತಿಕೊಂಡಿದ್ದ ಅವರ ನಾಯಕನಿಗೆ ಆಶ್ಚರ್ಯವಾಯಿತು.

ತಾನು ಭೀಮ ಎನ್ನುವುದು ಇವರಿಗೆ ಹೇಗೆ ಗೊತ್ತಾಯಿತು ?

ತನ್ನ ಗುರುತು ಪತ್ತೆ ಹಚ್ಚಿದವರನ್ನು ಉಳಿಸುವುದು ತನಗೆ ಅಪಾಯಕರ ಎಂದು ಭಾವಿಸಿದ ಅವನು ಕೂಡಲೇ ತನ್ನ ಕೊಡಲಿಯನ್ನೆತ್ತಿ ಗೋಪಾಲದಾಸರೆಡೆಗೆ ಬೀಸಿದ.

ಬೀಸಿದ ಕೊಡಲಿ ಗೋಪಾಲದಾಸರಿಗೆ ತಗುಲಿ ಎದುರು ಪುಟಿಯಿತು. ವಜ್ರಕ್ಕಿಂತ ಕಠಿಣವಾಗಿತ್ತು ಅವರ ಶರೀರ. ಕಲ್ಲಿಗೆ ತಗಲಿ ತನ್ನ ಚೂಪನ್ನು ಕಳೆದು ಕೊಂಡ ಕೊಡಲಿ ಮೊಂಡಾಯಿತಾದರೂ ಎದುರು ಪುಟಿದಿದ್ದಕ್ಕೆ ಕೊಡಲಿಯ ಹಿಂಭಾಗ ಭೀಮಣ್ಣನ ಹಣೆಗೆ ತಗುಲಿ ರಕ್ತ ಚಿಮ್ಮಿತು.

ಗೋಪಾಲದಾಸರೇನೂ ಎದುರಿಸಿರಲಿಲ್ಲ. ಅವರಷ್ಟಕ್ಕೆ ಅವರು ಹಾಡುತ್ತಲೇ ಇದ್ದರು.

ತಮ್ಮ ನಾಯಕನ ರಕ್ತವನ್ನು ನೋಡಿ ಡಕಾಯಿತರಲ್ಲಿ ಆವೇಶ ಉಕ್ಕಿತು. ಅವರೆಲ್ಲರೂ ಗೋಪಾಲದಾಸರ ಮೇಲೆ ಏಕಕಾಲಕ್ಕೆ ಎರಗಿದರು.

ಠಣ್ ಠಣ್ ಎಂಬ ಶಬ್ದ

ಗೋಪಾಲದಾಸರ ಮೇಲೆ ಬಿದ್ದ ಕೊಡಲಿ ಕತ್ತಿ ಏಟುಗಳು ಎದುರು ಪುಟಿದು ಬೀಸಿದವರನ್ನೇ ಘಾಸಿಗೊಳಿಸಿದವು. ಆವೇಶದಿಂದ ಬೀಸಿದ ರಭಸಕ್ಕೆ ಅವರ ಕೈಗಳೇ ಹಿಡಿದುಕೊಂಡವು. ಕೆಲವರಿಗೆ ಗಾಳಿಯಲ್ಲಿ ಬೀಸಿದ ಅನುಭವ.

ದಿಙ್ಮೂಢರಾಗಿ ಹೋದರು. ತಮಗಾದ ವಿಚಿತ್ರ ಅನುಭವದಿಂದ ಅವರು ಶಿಲಾಮೂರ್ತಿಯಂತೆ ನಿಂತುಬಿಟ್ಟರು.

ಗೋಪಾಲ ದಾಸರು ಒಮ್ಮೆ ನಕ್ಕು ಮುಂದೆ ಸಾಗಿದರು. ಯಾತ್ರಿಕರು ಅವರನ್ನು ಅನುಸರಿಸಿದರು.

ಡಕಾಯಿತರು ಮಾತ್ರ ಶಿಲೆಗಳಂತೆ ನಿಂತೇ ಇದ್ದರು !

ಯಾತ್ರಿಕರು ಸ್ವಲ್ಪ ಮುಂದೆ ಹೋದ ಮೇಲೆ ಡಕಾಯಿತರಿಗೆ ಪ್ರಜ್ಞೆ ಬಂದಂತಾಯಿತು. ಆಗಿರುವುದೆಲ್ಲಾ ತಮ್ಮ ಭ್ರಮೆಯೆಂದೂ, ಅವರನ್ನು ಮುಂದಕ್ಕೆ ಬಿಡಬಾರದೆಂದೂ ಭೀಮಣ್ಣ ತನ್ನ ತಂಡದವರಿಗೆ ಧೈರ್ಯ ಹೇಳಿ ಮತ್ತೊಮ್ಮೆ ಅವರನ್ನು ಹಿಂಬಾಲಿಸಿದ.

ಭರ್ಜಿ ಹಿಡಿದು ಗೋಪಾಲದಾಸರನ್ನು ಚುಚ್ಚಿ ಬಿಡಲು ಭೀಮಣ್ಣ ಮುಂದೆ ಜಿಗಿದ. ಜಿಗಿದ ರಭಸಕ್ಕೆ ಅವನ ಕಾಲುಗಳೇ ಹಿಡಿದುಕೊಂಡವು. ಕೈಗಳು ಮೊದಲೇ ಸ್ವಲ್ಪ ಸ್ವಾಧೀನ ತಪ್ಪಿದ್ದವು. ಡಕಾಯಿತ ತಂಡದವರಿಗೆಲ್ಲಾ ಇದೇ ಅನುಭವ. ಅವರು ಹಾರಿ ಬಂದ ರಭಸಕ್ಕೆ ಕೈಕಾಲುಗಳು ಪೂರ್ತಿ ಸ್ವಾಧೀನ ಕಳೆದುಕೊಂಡವು.

ಮುಂದೆ ಪ್ರಯಾಣಿಸಿದರು ಯಾತ್ರಿಕರು. ಭೀಮಣ್ಣನಿಗೆ ಈಗ ಕೈಕಾಲುಗಳು ಸ್ವಾಧೀನದಲ್ಲಿರಲಿಲ್ಲ. ಅವನ ಅನುಯಾಯಿಗಳು ಅವನಿಗಿಂತಲೂ ನಿಸ್ಸಾಹಯಕ ರಾಗಿದ್ದರು.

ಗೋಪಾಲದಾಸರು ನಿಧಾನವಾಗಿ ಸಾಗುತ್ತಿದ್ದಾರೆ. ಅವರನ್ನು ಬೆಂಬತ್ತುವುದು ಇರಲಿ, ಅವರೇ ಕಾಣುತ್ತಿಲ್ಲ ಈಗ. ಕೈಯಲ್ಲಿ ಖಡ್ಗ ಹಲಗೆ ಹಿಡಿದ ಸಾವಿರಾರು ಸೈನಿಕರು ಕಾಣಿಸುತ್ತಿದ್ದಾರೆ.

ಭೀಮಣ್ಣನಿಗೆ ಆಶ್ಚರ್ಯವಾಗಿ ಹೋಯಿತು. ತಾನು ಈ ದಿನ ಎದುರಿಸಿದ ವ್ಯಕ್ತಿ ಸಾಮಾನ್ಯ ಯಾತ್ರಿಕನಾಗಿರದೆ ದೊಡ್ಡ ಸಾಧಕನೇ ಇರಬೇಕೆಂದು ಅವನ ಮಂದ ಬುದ್ಧಿಗೂ ಹೊಳೆಯದೇ ಹೋಗಲಿಲ್ಲ.

ಬರುಬರುತ್ತಾ ಯಾತ್ರಿಕ ತಂಡ ಕಣ್ಮರೆಯಾಯಿತು. ಮುಂದಕ್ಕೆ ಹೋಗುವು ದಿರಲಿ ಹಿಂದಕ್ಕೆ ಹೋಗುವುದಕ್ಕೂ ಆಗುತ್ತಿಲ್ಲ ಡಕಾಯಿತರಿಗೀಗ.

ತಮ್ಮ ಅಸಾಹಯಕತೆಯ ಅರಿವು ಮೂಡಿತು ಅವರಿಗೆ. ತಮಗಾಗಿರುವ ಈ ದುರವಸ್ಥೆ ತೊಲಗಬೇಕಾದರೆ ಅವರೇ ಅನುಗ್ರಹಿಸಬೇಕು ಎಂದು ಭೀಮಣ್ಣನಿಗೆ

ಹೊಳೆಯದೇ ಹೋಗಲಿಲ್ಲ. ಆದರೆ ಮುಂದಕ್ಕೆ ಹೋಗಿರುವ ಅವರನ್ನು ಭೇಟಿಯಾಗುವುದಾದರೂ ಹೇಗೆ ? ಕ್ಷಮೆ ಕೇಳುವುದಾದರೂ ಎಲ್ಲಿ ?

ಅಲ್ಲಿಯೇ ರೋದಿಸುತ್ತಾ ಹೊರಳಾಡಿದರವರು. ಒಂದು ಕೈಯಲ್ಲಿ ಖಡ್ಗ, ಒಂದು ಕೈಯಲ್ಲಿ ಹಲಗೆ. ಗೋಪಾಲದಾಸರ ಹಾಡು ಸ್ವಲ್ಪ ಸ್ವಲ್ಪ ನೆನಪಾಯಿತು ಭೀಮಣ್ಣನಿಗೆ. ಆ ಪದವನ್ನು ಬಂದಷ್ಟೇ ಆದರೂ ತಾವು ಹೇಳಿಕೊಂಡರೆ ಅವರಲ್ಲಿ ಹೋಗುವ ಶಕ್ತಿಯಾದರೂ ಬಂದೀತೆಂದು ಭೀಮಣ್ಣನಿಗೆ ಭಾಸವಾಯಿತು. ಪದವನ್ನು ಸ್ವಲ್ಪ ಹೇಳಿದ. ಏನೋ ರೋಮಾಂಚಕ ಅನುಭವ. ಎಲ್ಲರೂ ಮತ್ತೊಮ್ಮೆ ಗಟ್ಟಿಯಾಗಿ ಹೇಳಿದರು. ಮಲಗಿದ್ದಲ್ಲಿಂದಲೇ ಮುಂದಕ್ಕೆ ಉರುಳುವುದು ಅವರಿಗೆ ಸಾಧ್ಯವಾಯಿತು. ಎಲ್ಲರೂ ಗಟ್ಟಿಗಟ್ಟಿಯಾಗಿ ಹೇಳಿದರು.

ಒಂದು ಕೈಯಲ್ಲಿ ಖಡ್ಗ, ಒಂದು ಕೈಯಲ್ಲಿ ಹಲಗೆ, ಸಾಮಾನ್ಯ ಶಬ್ದಗಳಿರುವ ಈ ಪದಕ್ಕೆ ಎಷ್ಟೊಂದು ಶಕ್ತಿ ಇದೆ ?

ಇದೇ ಪದವನ್ನು ಮೊದಲು ಕೇಳಿದಾಗ ತಮಗೇಕೆ ಇದರ ಶಕ್ತಿಯ ಅರಿವಾಗಲಿಲ್ಲ ?

ತಾವು ಮಾಡಿದ ತಪ್ಪಿನ ಅರಿವು ಅವರಿಗೀಗ ಉಂಟಾಗಿದೆ. ಪಶ್ಚಾತ್ತಾಪದಿಂದ ಮನಸ್ಸು ಮಾರ್ದವಗೊಂಡಿದೆ. ಪಕ್ವಗೊಂಡ ಮನಸ್ಸು ಪದದ ಅಮೃತವನ್ನು ಗ್ರಹಿಸಿರಬೇಕು. ಬಂದಷ್ಟೇ ಪದವನ್ನು ಹೇಳುತ್ತಾ ಅವರು ಉರುಳುರುಳುತ್ತಲೇ ಮುಂದೆ ಸಾಗಿದರು. ಬೆಟ್ಟದ ಕಲ್ಲು ಬಂಡೆಗಳು ಚುಚ್ಚಿ ಶರೀರವೆಲ್ಲಾ ರಕ್ತಮಯ. ಅದಾವುದರ ಪ್ರಜ್ಞೆಯಿಲ್ಲ ಅವರಿಗೆ. ಉರುಳುತ್ತಲೇ ಇದ್ದರವರು.

ಗೋಪಾಲದಾಸರೇ ಹಿಂದಿರುಗಿ ತಮ್ಮತ್ತ ಧಾವಿಸಿ ಬರುತ್ತಿರುವುದನ್ನು ಕಂಡು ಅವರಿಗೆ ಜೀವ ಬಂದಂತಾಯಿತು.

ಅವರೆಲ್ಲರಿಗೂ ಗೋಪಾಲದಾಸರ ಪಾದದ ಬಳಿ ಬಂದು ನಿಂತಾಗ ಒಂದು ರೀತಿಯ ಸಮಾಧಾನ. ಅವರ ಪಾದಸ್ಪರ್ಶದಲ್ಲಿ ಸಂಜೀವಿನಿ ಶಕ್ತಿಯ ಅರಿವು.

ಗೋಪಾಲದಾಸರು ಅವರಿಗೆ ಹೇಳಿದರು,

"ನನ್ನ ಗುರುಗಳ ಪದವನ್ನು ನೀವು ಹೇಳುತ್ತಿದ್ದೀರಿ. ಎಲ್ಲಿ ನನ್ನ ಗುರುಗಳ ಸ್ತುತಿಯಾಗುತ್ತದೆಯೋ, ಎಲ್ಲಿ ನನ್ನ ಗುರುಗಳ ಸಾಹಿತ್ಯ ಪಠಣೆಯಾಗುತ್ತದೆಯೋ ಅಲ್ಲಿ ನಾನು ಬಂದೇ ಬರುತ್ತೇನೆ. ನೀವು ಆ ಪದವನ್ನು ಹಾಡುತ್ತಾ ಅಲ್ಲಿಯೇ

ಮಲಗಿದ್ದರೂ ನಾನು ಬಂದೇ ಬರುತ್ತಿದ್ದೆ. ಸುಮ್ಮನೇ ಶ್ರಮ ಪಟ್ಟುಕೊಂಡಿರಿ" ಎಂದು ಹೇಳಿ ಅವರೆಲ್ಲರನ್ನೂ ನೇವರಿಸಿ ಎಬ್ಬಿಸಿ ಕೂಡಿಸಿದರು.

ಸೀನಣ್ಣ ದಾಸಣ್ಣರಿಗೆ ಆಶ್ಚರ್ಯ. ಯಾರು ತಮ್ಮನ್ನು ಕೊಲ್ಲಲು ಬಂದಿದ್ದರೋ, ಅವರು ಉರುಳುತ್ತಿರುವುದನ್ನು ದೂರದಿಂದಲೇ ಕಂಡು ಕರುಣೆಯಿಂದ ಹಿಂದಕ್ಕೆ ಧಾವಿಸಿದ ತಮ್ಮ ಅಣ್ಣನ ವರ್ತನೆ ಹಾಗೂ ಗುರುಭಕ್ತಿಯನ್ನು ಕಂಡು ಅವರು ಭಾವತನ್ಮಯಗೊಂಡರು.

ಗೋಪಾಲದಾಸರು ಭೀಮಣ್ಣನಿಗೆ ಹೇಳಿದರು.

"ಹೀಗೆ ಎಷ್ಟೋ ಯಾತ್ರಿಕರಿಗೆ ನೀನು ತೊಂದರೆ ಕೊಟ್ಟೆಯಲ್ಲವೇ ? ಅದರ ಫಲ ನೀನು ಇನ್ನೂ ಹೆಚ್ಚು ಉಣ್ಣಬೇಕಾಗಿತ್ತು. ಆದರೆ ಮೋಸದ ಉದ್ದೇಶ ದಿಂದಲಾದರೂ ಅನೇಕ ಯಾತ್ರಿಕರಿಗೆ ಉಣಲಿಕ್ಕೆ ಪುಣ್ಯ ಕಟ್ಟಿಕೊಂಡಿದ್ದಿ. ಅನೇಕರ ಬಳಿ ಏನೂ ಹಣವಿಲ್ಲದಿದ್ದರಿಂದ ಅವರಿಗೆ ನೀಡಿದ ಊಟ ನಿನಗೆ ಭೌತಿಕ ಲಾಭವನ್ನೇನೂ ನೀಡಿಲ್ಲ. ಆದರೆ ಆ ಪುಣ್ಯ ಪ್ರಭಾವದಿಂದ ನನ್ನ ಗುರುಗಳ ಪದ ಪಠಿಸುವ ಸದ್‌ಬುದ್ಧಿ ನಿನಗೆ ಪ್ರಾಪ್ತಿಯಾಯಿತು.

ಯಾತ್ರಿಕರಿಗೆ ನೀಡುವ ಪ್ರತಿ ಸಹಾಯವೂ ಅನಂತ ಫಲವನ್ನು ನೀಡುತ್ತದೆ. ಆದರೆ ಕಲಿಪ್ರಭಾವ. ಯಾತ್ರಿಕರಿಗೆ ತೊಂದರೆ ಕೊಡುವ ಜನಗಳೇ ಹೆಚ್ಚು. ನಿನ್ನ ಪೂರ್ವ ಜನ್ಮದಲ್ಲಿ ಮಾಡಿದ ಪುಣ್ಯ, ನೀನು ಮಾಡಿದ ಅನ್ನದಾನದ ಫಲವೇ ನಿನ್ನನ್ನು ಈಗ ರಕ್ಷಿಸುತ್ತಿವೆ. ಮೋಸದ ಉದ್ದೇಶವಿಟ್ಟುಕೊಂಡು ಮಾಡಿದ ಅನ್ನದಾನದ ಫಲವೇ ಇಷ್ಟೊಂದು ಕಾಯುತ್ತಿರುವಾಗ ಸದ್‌ಭಾವನಾಯುಕ್ತ, ಶ್ರೇಷ್ಠ ಅನುಸಂಧಾನದಿಂದ ಮಾಡುವ ಅನ್ನದಾನದ ಮಹಿಮೆಯನ್ನು ಯಾರು ತಾನೇ ಬಣ್ಣಿಸಿಯಾರು ?" ಎಂದು ಹೇಳುತ್ತಾ ಪಕ್ಕದಲ್ಲಿದ್ದ ಯಾವುದೋ ಬಳ್ಳಿಯ ತೊಪ್ಪಲನ್ನು ಅರೆದು ಅವರ ಗಾಯಗಳಿಗೆ ಹಚ್ಚಿದರು.

ಉರಿ ಶಾಂತವಾಯಿತು. ಗೋಪಾಲ ದಾಸರ ಕರುಣೆಗೆ ಅವರು ಮಾರು ಹೋದರು.

"ಇನ್ನು ಮುಂದೆ ಇಂಥ ಕಾರ್ಯವನ್ನು ನಾವೆಂದೂ ಮಾಡುವುದಿಲ್ಲ. ಆದರೆ ಈ ಕಾರ್ಯದ ಹೊರತು ಬೇರೆ ಉದ್ಯೋಗವೇ ನಮಗೆ ಬರುವುದಿಲ್ಲ. ಮುಂದೆ ನಾವೇನು ಮಾಡಬೇಕು? ಮಾರ್ಗ ತೋರಿ ಕಾಪಾಡಬೇಕು." ಎಂದು ಭೀಮಣ್ಣ ತನ್ನವರೆಲ್ಲರ ಪರವಾಗಿ ಪ್ರಾರ್ಥಿಸಿದ.

"ಯಾತ್ರೆ ಮಾಡುವುದು ಎಷ್ಟು ಪುಣ್ಯಕರವೋ, ಯಾತ್ರಿಕರಿಗೆ ಸೌಲಭ್ಯ ಕಲ್ಪಿಸುವುದೂ ಪುಣ್ಯಾರ್ಜನೆಯ ಮಾರ್ಗವೆ. ಇದಕ್ಕೂ ಮೊದಲು ನೀವು ಯಾತ್ರಾರ್ಥಿಗಳನ್ನು ಹೇಗೆ ಎದುರುಗೊಂಡು ಸ್ವಾಗತಿಸಿ, ಸಕಲ ಸೌಲಭ್ಯಗಳನ್ನು ನೀಡುತ್ತಿದ್ದಿರೋ ಮುಂದೆಯೂ ಹಾಗೆ ಮಾಡಿ. ಆದರೆ ಅನಂತರದ ಪಾಪ ಕಾರ್ಯ ಮುಂದುವರೆಸಬೇಡಿ." ಎಂದು ಗೋಪಾಲದಾಸರು ನುಡಿದರು.

"ಹತ್ತಾರು ತಂಡಕ್ಕೆ ಅನ್ನ ನೀಡಿದರೂ ಒಂದೆರಡು ತಂಡಗಳಲ್ಲಿ ಸಾಕಷ್ಟು ಕೊಳ್ಳೆ ಸಿಕ್ಕುತ್ತಿತ್ತು. ಆ ಹಣದಿಂದ ನಮ್ಮ ಜೀವನ ಹಾಗೂ ವೃತ್ತಿ ಮುಂದುವರೆಯುತ್ತಿತ್ತು. ಮುಂದೆ ಹೇಗೆ ಮಾಡಬೇಕೋ ನೀವೆ ತಿಳಿಸಿ ಕಾಪಾಡಬೇಕು" ವಿನಂತಿಸಿದ ಭೀಮಣ್ಣ.

ಅವರ ಕೋರಿಕೆಯಲ್ಲಿ ನ್ಯಾಯವಿತ್ತು. ಕೆಟ್ಟವರೆಲ್ಲಾ ಒಳ್ಳೆಯವರಾಗ ಬೇಕೆಂಬುದು ಸ್ವಾಸ್ಥ್ಯ ಸಮಾಜದ ಸಲ್ಲಕ್ಷಣವೇ. ಆದರೆ ಅವರಿಗೆ ಪುನರ್ವಸತಿ ಕಲ್ಪಿಸದೇ ಜೀವನಕ್ಕೆ ಮಾರ್ಗ ಸೂಚಿಸದೆ ಉಪನ್ಯಾಸದಿಂದಾಗುವ ಕಾರ್ಯವೇ ಇದು?

ಗೋಪಾಲದಾಸರು ಹೇಳಿದರು. "ಹಣವೇ ಮುಖ್ಯವಲ್ಲ. ದಾನ, ಧರ್ಮ ಮಾಡಬೇಕೆಂಬ ಸದ್ಭಾವನೆ ಮುಖ್ಯ. ಅಂಥವರನ್ನು ಪರಮಾತ್ಮ ಶೀಘ್ರ ಅನುಗ್ರಹಿಸು ತ್ತಾನೆ. ಆತನ ಅನುಗ್ರಹವಾದರೆ ಎಲ್ಲೆಲ್ಲಿಯೂ ಸಂಪತ್ತೆ. ಮಾಡುವುದೆಲ್ಲಾ ಪುಣ್ಯಕಾರ್ಯವೇ. ಮುಟ್ಟಿದಲ್ಲೆಲ್ಲಾ ಚಿನ್ನವೆ" ಎಂದು ಹೇಳಿ ಅಲ್ಲಿಯೇ ಇದ್ದ ದೊಡ್ಡ ಬಂಡೆಯನ್ನು ಉರುಳಿಸುವಂತೆ ಭೀಮಣ್ಣನಿಗೆ ಸೂಚಿಸಿದರು.

ದಾಸರ ಸ್ಪರ್ಶದಿಂದ ಭೀಮಣ್ಣನಿಗೆ ಬಲ ಬಂದಿತ್ತು. ಅವರು ಏನು ಹೇಳಿದರೂ ಮಾಡಲು ಸಿದ್ಧನಾಗಿದ್ದ.

ಎಲ್ಲರೂ ಕಲೆತು ಬಂಡೆಯನ್ನು ಉರುಳಿಸಿದರು. ಅದರ ಕೆಳಗೆ ಯಾವ ಕಾಲ ದಲ್ಲಿಯೋ ಹೂತಿಟ್ಟಿದ್ದ ಸುವರ್ಣ ಆಭರಣಗಳು! ಚಿನ್ನದ ಗಟ್ಟಿಗಳು!

ಕಣ್ಣು ಕುಕ್ಕಿದವು ಭೀಮಣ್ಣನ ತಂಡಕ್ಕೆ.

"ಇವನ್ನು ಹಂಚಿಕೊಂಡು ಮುಂದೆ ಉತ್ತಮ ಬದುಕನ್ನು ನಡೆಸಿ, ದುಡಿಯುವುದಕ್ಕೆ ಈ ಧನ ಮೂಲ ಬಂಡವಾಳವಾಗಲಿ. ದುಡಿಮೆಯ ಭಾಗವನ್ನು ಸಮಾಜಕ್ಕೆ ಹಂಚಿ. ಅದರಿಂದ ಇನ್ನೂ ಊರ್ಜಿತಕ್ಕೆ ಬರುತ್ತೀರಿ." ಎಂದು ಹೇಳಿ ಗೋಪಾಲದಾಸರು ಆಶೀರ್ವದಿಸಿದರು.

ಅವರ ದರ್ಶನದಿಂದ ಜ್ಞಾನ, ಅವರ ಸ್ಪರ್ಶದಿಂದ ಉತ್ತಮ ಜೀವನ, ಅವರು ತೋರಿದ ಜಾಗದಲ್ಲಿ ಚಿನ್ನ, ಅವರ ಸ್ಮರಣೆಯೇ ತಮ್ಮ ಮುಂದಿನ ಜೀವನಸಾಧನ ಎಂದೆಲ್ಲಾ ಡಕಾಯಿತರು ಸಂಕಲ್ಪಿಸಿದರು.

'ಜೈ ಗೋಪಾಲ ವಿಠಲ' ಎಂದೆನ್ನುತ್ತಾ ಯಾತ್ರಿಕರು ಪ್ರಯಾಣ ಮುಂದುವರಿಸಿದರು.

'ಜೈ ಗೋಪಾಲದಾಸ ಗುರುವರ್ಯ' ನಮಸ್ಕರಿಸುತ್ತಾ ಅವರು ಹಿಂದಿರುಗಿದರು.

ಅಂದಿನಿಂದಲೇ ಅವರ ಜೀವನ ಇಂದಿರಾರಮಣ ಪ್ರಿಯಮಾರ್ಗದಲ್ಲಿಯೇ ನಡೆಯಿತೆಂದು ಬೇರೆ ಹೇಳಬೇಕಾಗಿಲ್ಲ.

***

ದಾಸರು ಪರಿವಾರದೊಂದಿಗೆ ಉಡುಪಿಯನ್ನು ತಲುಪಿದಾಗ ಸಂಜೆಯಾಗಿತ್ತು. ಸೂರ್ಯನು ಕಣ್ಮರೆಯಾಗುತ್ತಾ ತನ್ನ ದೈನಂದಿನ ಕಾರ್ಯನಿರ್ವಹಣೆಗೆ ಶಕ್ತಿಯನ್ನಿತ್ತ ದೇವದೇವೋತ್ತಮನಿಗೆ ನಮಸ್ಕರಿಸಿ ಮರುದಿನ ತನ್ನ ಕಾರ್ಯ ನಿರ್ವಹಣೆಗೆ ಅಪ್ಪಣೆ ಕೇಳುತ್ತಿರುವನೋ ಎನ್ನುವಂತೆ ಕನಕನ ಕಿಂಡಿಯ ಮೂಲಕ ತನ್ನ ಪ್ರಭಾ ಕಿರಣಗಳನ್ನು ಶ್ರೀಕೃಷ್ಣ ವಿಗ್ರಹದ ಪಾದ ಕಮಲಗಳಲ್ಲಿ ಸಮರ್ಪಿಸುತ್ತಿದ್ದ.

ಉಡುಪಿಯಲ್ಲಿರುವ ಶ್ರೀ ರಾಘವೇಂದ್ರ ಸ್ವಾಮಿ ಮಠದ ಹಿಂಭಾಗದ ಆಗಸದಿಂದ ಹೊರಟ ಸೂರ್ಯನ ಕಿರಣ ಕನಕನ ಕಿಂಡಿಯ ಮೂಲಕ ಚಂದ್ರಶಾಲೆ, ಅಲಂಕಾರ ಮಂಟಪ, ನವದ್ವಾರದ ಮೂಲಕ ಶ್ರೀಕೃಷ್ಣ ವಿಗ್ರಹದ ಪಾದಕಮಲ ಗಳಲ್ಲಿ ಹರಡುತ್ತಿದ್ದ ರೀತಿ ನಿಜಕ್ಕೂ ರೋಮಾಂಚಕಾರಿ. ಸೂರ್ಯದೇವ ತನ್ನ ಸೇವೆಯನ್ನು 'ಶ್ರೀಕೃಷ್ಣಾರ್ಪಣ' ಎಂದು ಸಮರ್ಪಿಸುತ್ತಿರುವುದನ್ನು ಶ್ರೀ ದಾಸರು ಕಂಡುಕೊಂಡರು.

ಕನಕನ ಕಿಂಡಿಯ ಮೂಲಕ ಶ್ರೀಕೃಷ್ಣನ ದರ್ಶನ ಪಡೆದ ದಾಸರು, ನಂತರ ಚಂದ್ರಮೌಳೀಶ್ವರ ಅನಂತೇಶ್ವರನ ದರ್ಶನ ಪಡೆದು ಮಧ್ವ ಸರೋವರದಲ್ಲಿ ಸ್ನಾನ ಮಾಡಿ ಸಂಜೆ ಆಹ್ನೀಕಗಳನ್ನು ತೀರಿಸಿಕೊಂಡು ಕೃಷ್ಣ ಮಂದಿರಕ್ಕೆ ಪ್ರವೇಶಿಸಿದಾಗ ಪರ್ಯಾಯ ಪೀಠಾಧಿಪತಿಗಳು ವಿವಿಧ ಮಂಗಳಾರತಿಗಳನ್ನು ಪ್ರಾರಂಭಿಸಿದ್ದರು.

ನೋಡಿದರು ದಾಸರು,

ಭುವನಮೋಹನ ಮೂರ್ತಿಯನ್ನು. ಒಂದು ಕೈಯಲ್ಲಿ ಕಡಗೋಲು, ಇನ್ನೊಂದು ಕೈಯಲ್ಲಿ ವೇಣು ಧರಿಸಿ ಅಲೌಕಿಕ ತೇಜಸ್ಸಿನಿಂದ ವಿರಾಜಿಸುತ್ತಿದ್ದ ಮೂರ್ತಿ

ಯನ್ನು ನೋಡುತ್ತಿದ್ದಂತೆ ಅವರಿಗೆ ಶ್ರೀ ಕೃಷ್ಣನ ಪ್ರತ್ಯಕ್ಷ ರೂಪವೇ ಕಾಣಿಸಿದಂತಾಯಿತು. ಮಂಗಳಾರತಿ ಮಾಡುತ್ತಿದ್ದ ಸ್ವಾಮಿಗಳಲ್ಲಿ ಶ್ರೀ ಮಧ್ವಾಚಾರ್ಯರೇ ಅಂತರ್ಗತರಾಗಿ ಕಾರ್ಯ ನಿರ್ವಹಿಸುತ್ತಿರುವುದನ್ನು ಅವರು ತಮ್ಮ ಅಂತಃಚಕ್ಷುಗಳಿಂದ ನೋಡಿದರು.

ರತುನ ಮುಕುಟ, ಹಣೆಯಲ್ಲಿ ಕಸ್ತೂರಿ, ಕಮಲದ ಕಣ್ಣುಗಳು, ವೃತ್ತವದನ, ತಳತ್ಥಳಿಪ ಕಪೋಲ, ಉತ್ತಮದ ಕಂಬುಕಂಠ, ಮಕರ ಕುಂಡಲ, ಉದರದಲ್ಲಿ ಶ್ರೀವತ್ಸ, ತುಲಸಿಮಾಲೆ, ಶೃಂಗರಿಸಿದ ಭುಜ ಕೀರುತಿ, ತಿತ್ತಿರಮವೂರಿ ಕೊಳಲೂದುತ್ತಾ ನಿಂತಿರುವ ಆ ದೇವದೇವೋತ್ತಮನ ದರ್ಶನ ಪಡೆದ ದಾಸರು, "ನಮೋ ನಮೋ ನಿರ್ದೋಷಾ ನಿಜಾನಂದ, ನಮೋ ನಮೋ ಪ್ರಾಕೃತ ಗಂಧ ವಿದೂರನೇ, ನಮೋ ನಮೋ ನಿತ್ಯ ನಿರಂಜನ ಪೂರ್ಣ, ನಮೋ ನಮೋ ವಿಷ್ಣು ಸಾಕಾರ ಚೆಲುವ, ನಮೋ ನಮೋ ಉಡುಪಿ ಸಿರಿಕೃಷ್ಣ ಗೋಪಾಲ ವಿಠಲ" ಎಂದು ಕುಣಿಯುತ್ತಾ ಹಾಡ ತೊಡಗಿದರು. ಯಾತ್ರಿಕರು ಅವರ ಜೊತೆಗೂಡಿ ಕುಣಿಯುತ್ತಿದ್ದರು.

ಪೂಜೆಯೆಲ್ಲಾ ಮುಗಿದ ಮೇಲೆ ಪರ್ಯಾಯ ಪೀಠಾಧಿಪತಿಗಳು ಗೋಪಾಲ ದಾಸರನ್ನು ಕರೆಸಿ ಕುಶಲ ಸಮಾಚಾರಗಳನ್ನು ವಿಚಾರಿಸಿ, ಎಲ್ಲಾ ಯಾತ್ರಿಕರಿಗೂ ಸಕಲ ಸೌಲಭ್ಯಗಳನ್ನು ಒದಗಿಸಿದರು.

ಅನ್ನ ಬ್ರಹ್ಮನ ದೇಗುಲದಲ್ಲಿ ಯಾವುದಕ್ಕೆ ಕೊರತೆ ? ಪರ್ಯಾಯ ಪೀಠಾಧಿಪತಿಗಳೇ ವಿಶೇಷ ಆಸಕ್ತಿ ವಹಿಸಿದ ಮೇಲೆ ಯಾತ್ರಿಕರಿಗೆ ಎಲ್ಲಿಯ ಲೋಪ? ಲೋಪಗಳನ್ನು ಗಣಿಸುವವರಾದರೂ ಯಾರು ?

ನೂರು ನೂರು ಜನರಿಗೆ ಪ್ರತಿನಿತ್ಯ ಊಟ. ಅಡುಗೆಯೋ, ಅಮೃತ ಮಿಶ್ರಿಸಿದ ಭಾವನೆ.

ಗೋಪಾಲದಾಸರು ಒಮ್ಮೆ ಅಡುಗೆ ಮಾಡುವ ಪಾಕ ಶಾಲೆಗೆ ಹೋಗಿ ನೋಡಿದರು. ಅಬ್ಬಬ್ಬಾ !

ಭಾರಿ ಭಾರಿ ಒಲೆಗಳ ಮೇಲೆ ಇಟ್ಟ ದೊಡ್ಡ ದೊಡ್ಡ ಪಾತ್ರೆಗಳು, ಅಡುಗೆ ಮಾಡುವವರು ನಿಮಿತ್ತ ಮಾತ್ರ !

ಗೋಪಾಲದಾಸರು ದೃಷ್ಟಿಯಿಟ್ಟು ನೋಡಿದರು.

ಅಡುಗೆ ತಯಾರಿಸುತ್ತಿದ್ದುದು ಈ ಲೌಕಿಕ ಅಡುಗೆಯವರಲ್ಲ. ಆಜಾನುಬಾಹು ಮಾರುತಿ, ಗದಾಪಾಣಿ ಭೀಮಸೇನ ದೇವರೇ ನಿಂತು ಅಡುಗೆ ತಯಾರಿಸುತ್ತಿದ್ದಾರೆ.

ಆಂಜನೇಯ ಸ್ವಾಮಿ ರೂಪದಲ್ಲಿ ಸೌಟು ಹಿಡಿದಿದ್ದಾರೆ. ಮಧ್ವಾಚಾರ್ಯರಾಗಿ ನೈವೇದ್ಯ ತಯಾರಿಸುತ್ತಿದ್ದಾರೆ.

ಆದ್ದರಿಂದಲೇ ಈ ಕ್ಷೇತ್ರದ ಅಡುಗೆಯ ರುಚಿ ಮತ್ತೆಲ್ಲಿಯೂ ಬರಲಾರದು ಎಂದು ಗೋಪಾಲದಾಸರು ಕೈ ಮುಗಿಯುತ್ತಾ ಅಲ್ಲಿಯೇ ಕೊಂಡಾಡಿದರು.

ಪ್ರತಿನಿತ್ಯ ಮಧ್ವ ಸರೋವರದ ಸ್ನಾನ, ಚಲುವ ಕೃಷ್ಣನ ದರ್ಶನ, ಜೀವನ ಪಾವನ ಎಂದು ಅಲ್ಲಿಯೇ ಕೆಲವು ದಿನಗಳ ಕಾಲವಿದ್ದು ಊರಿಗೆ ಮರಳಿದರು ಗೋಪಾಲ ದಾಸರು.

ಉತ್ತನೂರು ಸೇರುವ ಮೊದಲು ಮಂತ್ರಾಲಯ ಕ್ಷೇತ್ರಕ್ಕೆ ಬಂದರು. ಶ್ರೀಕೃಷ್ಣ ಹಾಗೂ ಶ್ರೀ ಮಧ್ವಾಚಾರ್ಯರ ಪರಮಾನುಗ್ರಹ ಗಳಿಸಿರುವ ಶ್ರೀ ರಾಘವೇಂದ್ರ ಸ್ವಾಮಿಗಳ ದರ್ಶನ ಪಡೆದರು.

ನಮಿಸಿದವರ ಕಾಮಧೇನು, ಭಜಿಸಿದವರ ಕಲ್ಪವೃಕ್ಷವೆಂದು ಲೋಕ ವಿಖ್ಯಾತ ರಾದ ಶ್ರೀರಾಘವೇಂದ್ರರು ಗೋಪಾಲದಾಸರಿಗೆ ಬೃಂದಾವನದಲ್ಲಿ ಸಂಪೂರ್ಣ ದರ್ಶನ ನೀಡಿದರು.

ಒಬ್ಬ ಯತಿಶ್ರೇಷ್ಠರು ಸಶರೀರರಾಗಿ ಕುಳಿತ ಬೃಂದಾವನವಷ್ಟೇ ಅವರಿಗೆ ಕಾಣಲಿಲ್ಲ. ಆ ಬೃಂದಾವನದಲ್ಲಿ ನರಹರಿ, ಕೃಷ್ಣ, ರಾಮ, ಸಿರಿ ವೇದವ್ಯಾಸ ಎರಡೆರಡು ನಾಲ್ಕು ಹರಿಮೂರ್ತಿಗಳು ಪರಿವಾರ ಸಹಿತರಾಗಿ ನಿಂತಿರುವುದನ್ನು ನೋಡಿದರು.

ಶ್ರೀಮಧ್ವಾಚಾರ್ಯರೇ ಆದಿಯಾಗಿ ತಾರತಮ್ಯಾನುಸಾರ ಪರಿ ಪರಿ ಯತಿಗಳು- ವಾಸವಾಗಿರುವುದನ್ನು ಕಂಡು ಗೋಪಾಲದಾಸರಿಗೆ ಪರಮಾನಂದವಾಗಿ ಹೋಯಿತು.

ಸೀನಣ್ಣ ದಾಸಣ್ಣರನ್ನು ಕರೆದು ದಾಸರು ಹೇಳಿದರು.

"ಈ ಕ್ಷೇತ್ರದ ಮಹಿಮೆ ಇಷ್ಟೇ ಎಂದು ಹೇಳಲು ನನ್ನಿಂದ ಸಾಧ್ಯವಿಲ್ಲವಪ್ಪಾ, ಮುಂದೆ ಮುಂದೆ ನಡೆಯುವ ಅನುಗ್ರಹಿತ ಘಟನೆಗಳನ್ನು ಲೆಕ್ಕಿಸಿ ಲಿಖಿಸಲು ಯಾವ ಲೆಕ್ಕಣಿಕೆಗೂ ಸಾಧ್ಯವಿಲ್ಲ. ದಿನದಿನಕಿಲ್ಲಿ ನೂತನ ಪೂಜೆಗಳಾಗುವುವು. ದಿನ ದಿನಕೆ ನೂತನ ವಾರ್ತೆಗಳಾಗುವುವು. ಪ್ರತಿದಿನ ವಿಪ್ರಭೋಜನ, ಜಗನ್ನಾಥ ತಾನೇ ಇಲ್ಲಿ ನಿಂತು ನಮ್ಮ ಗುರುರಾಯರ ಕೀರ್ತಿಯನ್ನು ಹೆಚ್ಚಿಸುವನು. ಇದು ಮಂತ್ರಸಿದ್ಧ ಕ್ಷೇತ್ರವೆಂದೆನಿಸುವುದು" ಭವಿಷ್ಯದ ಘಟನೆ ನುಡಿಯುವುದರಲ್ಲಿ ಬಾಲ್ಯತನ ದಲ್ಲಿಯೇ ಪ್ರಸಿದ್ಧರಾಗಿದ್ದ ಗೋಪಾಲದಾಸರು ನುಡಿದರು.

ಅಲ್ಲಿಂದ ಅವರೆಲ್ಲರೂ ಉತ್ತನೂರಿಗೆ ಹೋಗಿ ಯಾತ್ರೆಯ ಸಮಾರಾಧನೆಯನ್ನು ಭವ್ಯವಾಗಿ ಆಚರಿಸಿದರು.

ಶಿಷ್ಯನು ನಡೆಸಿದ ಸಮಾರಾಧನೆಗೆ ವಿಜಯದಾಸರು ಸ್ವಯಂ ಆಗಮಿಸಿ ಆಶೀರ್ವದಿಸಿದರು.

ಗುರುಗಳ ದರ್ಶನದಿಂದ ಆನಂದತುಂದಿಲರಾದ ಗೋಪಾಲದಾಸರು ಅವರಿಗೆ ನಮಸ್ಕರಿಸಿ

"ಗುರುಗಳೇ ನಿಮ್ಮ ಆಜ್ಞೆಯಂತೆ ಉಡುಪಿ ಯಾತ್ರೆ ಮಾಡಿದ್ದಾಯಿತು. ಶ್ರೀ ಕೃಷ್ಣನ ದರ್ಶನದಿಂದ ಕೃತಾರ್ಥನಾದೆ. ಹಿಂದೆ ಕಾಶೀ ಯಾತ್ರೆ ಮಾಡಿರುವೆನಾದರೂ ನಿಮ್ಮೊಂದಿಗೆ ಮತ್ತೊಮ್ಮೆ ಕಾಶೀ ಯಾತ್ರೆ ಮಾಡುವ ಮನಸ್ಸಾಗಿದೆ. ಕಣಿ ಹೇಳುವ ವೃತ್ತಿ ನಾನು ಇಲ್ಲಿದ್ದರೆ ಅದು ನನ್ನನ್ನು ಬಿಡುವುದಿಲ್ಲ. ಕಾರಣ ನನ್ನನ್ನು ತಮ್ಮೊಂದಿಗೆ ಯಾತ್ರೆಗೆ ಕರೆದೊಯ್ಯಬೇಕು" ಎಂದು ಪ್ರಾರ್ಥಿಸಿದರು.

ಆ ಸಮಯದಲ್ಲಿ ಯಾರೂ ಇಲ್ಲದ್ದನ್ನು ನೋಡಿಕೊಂಡು ವಿಜಯದಾಸರು ಶಿಷ್ಯನಿಗೆ ಹೇಳಿದರು.

"ಋಷಿಗಣಕ್ಕೆ ಸೇರಿದವನು ನಾನು. ದೇವವರ್ಗಕ್ಕೆ ಸೇರಿದವನು ನೀನು. ನಾನು ಮಾಡಿದಂತೆ ಯಾತ್ರೆಗೆ ಹೊರಡುವುದನ್ನೇ ಪ್ರಧಾನವಾಗಿಟ್ಟುಕೊಳ್ಳಬೇಡ. ನಿನ್ನ ಬಗ್ಗೆ ನನ್ನ ಗುರುಗಳಾದ ಪುರಂದರದಾಸರ ಅಪೇಕ್ಷೆಯೇ ಬೇರೆಯಿದೆ. ಹರಿಗುರುಗಳು ನಿನ್ನಿಂದ ಇನ್ನೂ ಹೆಚ್ಚಿನದನ್ನು ಅಪೇಕ್ಷಿಸಿದ್ದಾರೆ. ಇದುವರೆಗೂ ಯಾವ ಹರಿದಾಸರೂ ಮಾಡಿರದಂಥ ಶ್ರೇಷ್ಠ ಕಾರ್ಯ ನಿನ್ನಿಂದಾಗಬೇಕಪ್ಪ. ಈಗ ಅವತಾರವೆತ್ತಿರುವ ಅನೇಕ ಸುಜೀವಿಗಳು ನಿನ್ನಿಂದ ಜಾಗೃತರಾಗಬೇಕಾಗಿದೆ. ಕಕ್ಷಾತಾರತಮ್ಯದಲ್ಲಿ ನನ್ನ ಸಮಾನರಾಗಿರುವ ಅಗ್ನಿ ಅಂಶದವರೊಬ್ಬರು ಈ ಸ್ಥಳದ ಹತ್ತಿರದಲ್ಲಿಯೇ ಅವತರಿಸಿದ್ದಾರೆ. ಸದ್ಯಕ್ಕೆ ಅವರ ಅಪರೋಕ್ಷ ತಿರೋಹಿತವಾಗಿ ಬೂದಿಮುಚ್ಚಿದ ಕೆಂಡದಂತಿದ್ದಾರೆ. ನಿನ್ನ ವೃತ್ತಿಯ ನೆಪದಲ್ಲಿ ಆ ಬೂದಿಯನ್ನು ಹಾರಿಸಿ ಕನ್ನಡ ಹರಿದಾಸ ಸಾಹಿತ್ಯ ಕ್ಷೇತ್ರಕ್ಕೆ ಮತ್ತೊಬ್ಬ ಮಹಾಮಹಿಮರನ್ನು ನೀಡುವ ಕಾರ್ಯ ಈಗ ಆಗಬೇಕಾಗಿದೆ. ಕಾರಣ ನೀನು ಕೆಲಕಾಲ ಇಲ್ಲಿಯೇ ವಾಸಿಸು. ವಿಜಯವಿಠಲನೇ ಮುಂದಿನದೆಲ್ಲವನ್ನೂ ನಡೆಸುತ್ತಾನೆ."

ಗುರುಗಳ ಮಾತನ್ನು ಕೇಳಿದೊಡನೆಯೇ ತಮ್ಮ ಕರ್ತವ್ಯವೇನೆಂದು ತಿಳಿಯಲು ಗೋಪಾಲದಾಸರು ಕಣ್ಣುಮುಚ್ಚಿ ಅಂತರ್‌ಮುಖಿಗಳಾಗಲು ಪ್ರಯತ್ನಿಸಿದರು. ಅದನ್ನು ತಿಳಿದ ವಿಜಯದಾಸರು ಶಿಷ್ಯನನ್ನು ಬೆನ್ನು ತಟ್ಟಿ ಎಚ್ಚರಿಸುತ್ತಾ ಹೇಳಿದರು.

"ಶ್ರೀ ಹರಿಯ ದಯದಿಂದ ಎಲ್ಲವನ್ನೂ ಕಾಣುವ ಶಕ್ತಿ ನಿನಗೆ ಬಂದಿದೆ. ಬೇರೆಯವರ ಭವಿಷ್ಯತ್ತನ್ನು ನಿಖರವಾಗಿ ಹೇಳುವ ಜ್ಞಾನ ಹುಡುಗತನದಲ್ಲಿಯೇ ನಿನಗೆ ಸಿದ್ಧಿಸಿದೆ. ಆ ವಿದ್ಯೆಯಿಂದ ನಿನ್ನ ಜೀವನ ಸಂಪತ್ ಭರಿತವಾಯಿತೆಂಬುದೂ ನಿಜ. ಆದರೆ ನಿನ್ನ ವೃತ್ತಿಯ ನೆವದಿಂದ ಬೇರೆ ಶ್ರೇಷ್ಠ ವ್ಯಕ್ತಿಯೊಬ್ಬರ ಅಜ್ಞಾನದ ಆವರಣ ತೊಲಗಬೇಕಾಗಿದೆ. ಆದ್ದರಿಂದ ಈ ವೃತ್ತಿ ಸ್ವಲ್ಪ ಕಾಲ ಮುಂದುವರಿಸು. ಈ ವೃತ್ತಿ ನಿನಗಿನ್ನು ಸಾಕು ಎನ್ನುವ ಕಾಲಕ್ಕೆ ಒಂದು ಪವಾಡ ನಡೆಯುತ್ತದೆ. ಆಗ ವೃತ್ತಿ ನಿಲ್ಲಿಸುವಂತೆ ನಾನೇ ಹೇಳುತ್ತೇನೆ. ಅಲ್ಲಿಯವರೆಗೂ ಶ್ರೀಹರಿಯ ಇಚ್ಛೆಯಂತೆ ಭವಿಷ್ಯ ಹೇಳುವ ವೃತ್ತಿ ಮುಂದುವರಿಸು" ಎಂದು ಆಜ್ಞಾಪಿಸಿದರು.

ಗೋಪಾಲದಾಸರಿಗೆ ಮನಸ್ಸಿರಲಿಲ್ಲ. ಆದರೆ ಗುರುಗಳ ಆಜ್ಞೆಯನ್ನು ಮೀರುವ ಸ್ವಭಾವ ಅವರದಲ್ಲ. ಅದು ಏಕೆ ಹಾಗೆ ಎಂದು ಪ್ರಶ್ನಿಸುವುದನ್ನು ಅವರು ಕನಸಿನಲ್ಲಿಯೂ ಯೋಚಿಸಲಾರರು.

ತಮಗೆ ಬೇಕಾದ್ದನ್ನು ನೀಡುವ, ತಿಳಿಯಬೇಕಾದ್ದನ್ನು ತಿಳಿಸುವ, ಸಮಯಕ್ಕೆ ಸರಿಯಾಗಿ ಸರಿಕ್ರಮದಲ್ಲಿ ನಡೆಸುವ ಗುರು ಸಿಕ್ಕಿರುವಾಗ ತಮಗೆ ಏತಕ್ಕೆ ಆ ಚಿಂತೆ ಎಂದು ದೃಢವಾದ ನಂಬಿಕೆ ಅವರಿಗೆ.

ಗುರುಗಳ ಸೂಚನೆಯಂತೆ ಉತ್ತನೂರಿನಲ್ಲಿಯೇ ನೆಲೆಸಿ ಸಾಹಿತ್ಯ ನಿರ್ಮಾಣ ಕಾರ್ಯದಲ್ಲಿ ನಿರುತರಾದರು. ಪದ ಪದ್ಯ ಸುಳಾದಿಗಳು ಪ್ರತಿನಿತ್ಯ ರಚನೆಗೊಂಡವು.

ಸಂಜೆಯ ಹೊತ್ತು ಪುರಾಣ ಪ್ರವಚನ ಹರಿದಾಸಸಾಹಿತ್ಯದ ವಿಶ್ಲೇಷಣಾ ಕಾರ್ಯಕ್ರಮಗಳನ್ನು ಇಟ್ಟುಕೊಂಡರೂ, ರಾತ್ರಿ ಭಜನೆಯಂತೂ ಪ್ರತಿನಿತ್ಯ ನಡೆಯುತ್ತಿತ್ತು. ಗೋಪಾಲದಾಸರಿಂದ ರಚಿಸಲ್ಪಟ್ಟು ಹಾಡಲ್ಪಡುತ್ತಿದ್ದ ಸಾಹಿತ್ಯ ಸುತ್ತೆಲ್ಲಾ ಜನಪ್ರಿಯತೆ ಪಡೆದು ಮನೆ ಮನೆಯ ಹೆಂಗಸರೆಲ್ಲಾ ಅವನ್ನು ಹಾಡತೊಡಗಿದರು.

ಗೋಪಾಲದಾಸರು ಮಾತ್ರ ತಮಗೆ ಗುರುಗಳು ಗುಟ್ಟಾಗಿ ತಿಳಿಸಿ ಹೋದ ವ್ಯಕ್ತಿಯೊಬ್ಬರ ಭವಿಷ್ಯದ ದರ್ಶನಕ್ಕಾಗಿ ಜಾತಕಪಕ್ಷಿಯಂತೆ ಕಾದಿದ್ದರು.

ಒಂದು ಸಂಜೆ ದಾಸರು ಯಾವುದೋ ಗ್ರಂಥವೊಂದನ್ನು ಪರಿಶೀಲಿಸುತ್ತಾ ಶ್ರೀ ವೆಂಕಟೇಶನ ಗುಡಿಯಲ್ಲಿ ಕುಳಿತಿದ್ದರು.

'ಢಣ್' ಎಂಬ ಗಂಟೆಯ ಶಬ್ದ ಕೇಳಿ ಬಂದಿತು. ಕತ್ತೆತ್ತಿ ನೋಡಿದರು ಗೋಪಾಲದಾಸರು.

ಜರತಾರಿ ಅಂಚಿರುವ ಧೋತರ, ಮೇಲೊಂದು ತಕ್ಕ ಉತ್ತರೀಯ, ಮುಖದಲ್ಲಿ ಗಂಧಾಕ್ಷತೆ, ಕಿವಿಯಲ್ಲಿ ವಜ್ರದ ಓಲೆ, ಕೊರಳಲ್ಲಿ ಚಿನ್ನದ ಸರಪಳಿಯಿಂದ ಪೋಣಿಸಲ್ಪಟ್ಟ ತುಳಸೀಮಾಲೆಗಳು ಬಂದ ವ್ಯಕ್ತಿಯ ಶ್ರೀಮಂತಿಕೆಯನ್ನು ಸಾರುತ್ತಿದ್ದರೆ, ತಲೆಯ ಹಿಂಭಾಗದಲ್ಲಿದ್ದ ಶಿಖೆ, ದಟ್ಟವಾಗಿದ್ದರೂ ಬಿಳಿ ಬಣ್ಣಕ್ಕೆ ತಿರುಗಿದ್ದ ಹುಬ್ಬುಗಳು ಅವರಿಗೆ ವಯಸ್ಸಾಗಿರುವುದನ್ನು ಹೇಳುತ್ತಿದ್ದವು.

ಬಂದವರು ಮತ್ತೊಮ್ಮೆ ಗಂಟೆ ಬಾರಿಸಿ ದೇವರಿಗೆ ನಮಸ್ಕರಿಸಿದರು.

ಗೋಪಾಲದಾಸರು ಬೇಕೆಂದೇ ಮಾತನಾಡಿಸಲಿಲ್ಲ. ಬಂದವರು ದಾಸರ ಕಡೆ ಕದ್ದು ಕದ್ದು ನೋಡುತ್ತಿದ್ದರು.

ದೇವರ ದರ್ಶನ ಪಡೆಯಲಷ್ಟೇ ಅವರು ಬಂದಿದ್ದರೆ ಆ ಕೆಲಸ ಮುಗಿದಿತ್ತು.

ಆದರೆ ಬಂದವರು ಹಾಗೆ ನಿಂತೇ ಇದ್ದರು. ಮತ್ತೊಮ್ಮೆ ಗಂಟೆ 'ಢಣ್' ಎಂಬ ಶಬ್ದ ಮೊಳಗಿಸಿತು.

ಗೋಪಾಲದಾಸರು ಬಂದವರ ಕಡೆ ದೃಷ್ಟಿ ಹರಿಸಿದೊಡನೆ ಅವರು ದೇವರ ಕಡೆ ಮುಖ ಮಾಡಿ ನಿಲ್ಲುತ್ತಿದ್ದರು. ಗ್ರಂಥದ ಕಡೆಗೆ ದಾಸರು ಕಣ್ಣು ತಿರುಗಿಸಿದಾಗ ಅವರು ದಾಸರ ಕಡೆ ಕದ್ದು ಕದ್ದು ನೋಡುತ್ತಿದ್ದರು.

ದಾಸರನ್ನು ಮಾತನಾಡಿಸಬೇಕೆಂಬುದೇನೋ ಅವರ ಅಪೇಕ್ಷೆ. ಆದರೆ ಅದಾವ ಕಾರಣಕ್ಕೋ ಮಾತನಾಡಿಸಲು ಹಿಂದೇಟು. ಬಂದವರ ಈ ಸಂದಿಗ್ಧಾವಸ್ಥೆಯನ್ನು ಗೋಪಾಲದಾಸರು ಅರಿಯದೆ ಇರಲಿಲ್ಲ. ಬೇಕೆಂದೇ ಸ್ವಲ್ಪ ಕಾಲ ತಡೆದರು. ಆದರೆ ಅವರು ದಾಸರನ್ನೇನೂ ಮಾತನಾಡಿಸಲಿಲ್ಲ. ಗುಡಿಯಿಂದ ಹೋಗಲೂ ಇಲ್ಲ. ಗಂಟೆ ಬಾರಿಸುವುದು, ಕೈ ಮುಗಿದು ನಿಲ್ಲುವುದು.

ದಾಸರೇ ಕಡೆಗೆ ಅವರನ್ನು ನಗುತ್ತಾ ಮಾತನಾಡಿಸಿದರು. "ಬನ್ನಿ, ವೆಂಕಟನರಸಿಂಹಚಾರ್ಯರೇ, ನೀವು ಎಷ್ಟು ಸಲ ಗಂಟೆ ಬಾರಿಸಿದರೂ ಅಷ್ಟೇ! ಶ್ರೀ ವೆಂಕಟೇಶ ತನ್ನ ಇಚ್ಛೆಯನ್ನು ತಾನೇ ಬಿಚ್ಚಿ ಹೇಳುವುದಿಲ್ಲ. ವಿಷಯ ಮುಚ್ಚಿರುವ ಗ್ರಂಥ ನನ್ನ ಕೈಯಲ್ಲಿಟ್ಟಿದ್ದಾನೆ ಆತ. ನಾನು ಮಾಡುವ ಕೆಲಸದಲ್ಲಿ ಹಸ್ತಕ್ಷೇಪ ಮಾಡುವವನಲ್ಲ ಆತ. ಆಚಾರ್ಯರು ವೆಂಕಪ್ಪನನ್ನು ಬಹಳ ಗೋಳಾಡಿಸುತ್ತಿರುವಂತಿದೆ" ಎಂದಾಗ ಆಚಾರ್ಯರು ದಾಸರ ಕಡೆಗೆ ತಿರುಗಿ ಹೇಳಿದರು.

"ಪ್ರತ್ಯೇಕ ಇಚ್ಛೆಯೇನೂ ಇಲ್ಲ. ದರ್ಶನದ ಆನಂದದಲ್ಲಿ ಗಂಟೆ ನಿನಾದ ಸ್ವಲ್ಪ ಹೆಚ್ಚಾಗಿರಬೇಕಷ್ಟೇ !" ಸಾವರಿಸಿಕೊಂಡು ನುಡಿದರು.

"ಪ್ರತ್ಯೇಕ ಇಚ್ಛೆಯಿಂದಲ್ಲದೆ ಇಷ್ಟು ದೂರ ಬರುತ್ತಿದ್ದರೇ ಆಚಾರ್ಯರು? ಮನಸಿನ ಅಚ್ಛೆಯವನು ಇಚ್ಛಿತ ವಿದ್ಯೆಯನ್ನು ಪಡೆಯುತ್ತಿಲ್ಲವೇ. ಬೇಕೆಂದು ತಿಳಿಯಲು ಮೆಚ್ಚಿನ ಮಡದಿ ಹೆಚ್ಚು ಒತ್ತಾಯಿಸಿದ್ದರಿಂದಲೇ ಆಚಾರ್ಯರು ಇತ್ತ ಚಿತ್ತೈಸಬೇಕಾಯಿತು. ಬನ್ನಿ ಬನ್ನಿ" ಎಂದು ನಗುತ್ತಾ ನುಡಿದು ತಾವೇ ಎದ್ದು ಶಾಲಿನಿಂದ ಒರೆಸಿ ಆಚಾರ್ಯರು ಕೂಡಬೇಕಾದ ಜಾಗವನ್ನು ತೋರಿದರು.

ಆಚಾರ್ಯರ ಗಾಂಭೀರ್ಯವೇನೂ ಕಡಿಮೆಯಾಗಿರಲಿಲ್ಲ. ಆದರೂ ತಾವು ಬಂದ ಕಾರಣ ಹಾಗೂ ಹಿನ್ನೆಲೆಯನ್ನು ಸ್ಪಷ್ಟವಾಗಿ ಹೇಳುತ್ತಿರುವ ಗೋಪಾಲದಾಸರ ಜ್ಯೋತಿಷ್ಯಶಾಸ್ತ್ರ ಪರಿಣಿತತ್ವ ಕಂಡು ಅವರು ನಿಬ್ಬೆರಗಾದರು. ದಾಸರು ತೋರಿದ ಜಾಗದಲ್ಲಿ ಕುಳಿತುಕೊಳ್ಳುತ್ತಾ ಅವರು ಹೇಳಿದರು.

"ಪ್ರತ್ಯೇಕ ಇಚ್ಛೆಯೇನೂ ಇಲ್ಲ. ತುಳಸಿ ಸಂಗ್ರಹಕ್ಕಾಗಿ ಹೀಗೇ ಬಂದಿದ್ದೆ. ಹಾಗೆಯೇ ಶ್ರೀ ವೆಂಕಟೇಶನ ದರ್ಶನ, ಮಾಡಿಕೊಂಡು ಹೋಗೋಣವೆಂದು ಗುಡಿಯೊಳಗೆ ಬಂದೆ."

"ಹೌದ್ಹೌದು, ತುಳಸಿ ಕಾರಣಕ್ಕಾಗಿಯೇ ಈ ದಾರಿಯಲ್ಲಿ ಬಂದಿದ್ದೀರಿ. ಮನೆಯಲ್ಲಿ ನಿತ್ಯ ತುಳಸಿ ಪೂಜೆ ಮಾಡುವವರು ಒತ್ತಾಯಿಸಿದ್ದರಿಂದಲೇ ಗುಡಿಗೂ ಬರಬೇಕಾಯಿತು."

ಆಚಾರ್ಯರು ಬೆರಗಾಗಿ ಹೋದರು. ಅವರ ಮಡದಿ ಒತ್ತಾಯ ಮಾಡಿ ಗೋಪಾಲದಾಸರ ಬಳಿಗೆ ಅವರನ್ನು ಕಳಿಸಿದ್ದಳು.

ಇನ್ನೂ ಮೂವತ್ತು ವರ್ಷಗಳನ್ನೂ ಸರಿಯಾಗಿ ದಾಟಿಲ್ಲದ ಪುಟ್ಟ ವಯಸ್ಸಿನ ದಾಸರ ಬಳಿ ಸುಮಾರು ಏಳು ದಶಕಗಳನ್ನು ದಾಟಿರುವ ಜ್ಞಾನವೃದ್ಧ, ಪಂಡಿತಶ್ರೇಷ್ಠರಾದ ತಾವು ಹೋಗುವುದು ಘನತೆಗೆ ಚ್ಯುತಿಯೆಂದೇ ಅವರು ಹಿಂದೇಟು ಹಾಕುತ್ತಿದ್ದರು. ಮನೆಯಲ್ಲಿ ಹೆಂಡತಿ ಹಾಗೂ ಸೊಸೆಯ ಒತ್ತಾಯಕ್ಕೆ ಮಣಿದು, ಪರೀಕ್ಷಿಸಿ ನೋಡಿ ಬಿಡೋಣವೆಂದು ಅದು ಹೇಗೋ ಗುಡಿಗೆ ಬಂದಿದ್ದರು. ಹಾಗಿದ್ದರೂ ತಾವಾಗಿಯೇ ದಾಸರನ್ನು ಮಾತನಾಡಿಸಿ ಮನಸ್ಸಿನ ಅಪೇಕ್ಷೆಯನ್ನು ಹೇಳುವುದಕ್ಕೆ ಒಂದು ರೀತಿಯ ಬಿಗುಮಾನ.

ವಿದ್ಯೆಯ ಆಧಿಕ್ಯ ವಯಸ್ಸಿನ ಹೆಚ್ಚುಗಾರಿಕೆ, ಜೊತೆಗೆ ಈ ಪುಟ್ಟ ವ್ಯಕ್ತಿ ಪ್ರದೇಶದಲ್ಲಿ ತಮಗಿಂತ ಹೆಚ್ಚು ಜನಪ್ರಿಯತೆ ಗಳಿಸಿದ್ದಾರೆ. ಎಲ್ಲೆಲ್ಲಿಯೂ ಗೋಪಾಲದಾಸರ ಗುಣಗಾನವೆ. ಉಪನಯನ ಕಾರ್ಯಕ್ರಮಗಳನ್ನು ನಿರ್ವಹಿಸು ವುದು, ಸಾಕ್ಷಾತ್ ಮಹಾರಾಜರೇ ಬರುವುದು, ನೂರಾರು ಜನ ದೂರ ದೂರ ಪ್ರದೇಶಗಳಿಂದ ಬರುವುದು ಅವರಿಗೆ ಸಹನೆಯಾಗಿರಲಿಲ್ಲ. ಚಿಕ್ಕವಯಸ್ಸಿನಿಂದ ಶಾಸ್ತ್ರಾಧ್ಯಯನ ಮಾಡಿ, ಜೀವನದುದ್ದಕ್ಕೂ ಅಗ್ನಿಕಾರ್ಯ ನಡೆಸುತ್ತಾ ಕ್ರಮಬದ್ಧ ವಾದ ಜೀವನ ನಡೆಸಿರುವ ತಮಗಿಂತಲೂ ಈ ಹುಡುಗನದೇನು ಹೆಚ್ಚುಗಾರಿಕೆ? ಉತ್ತರಾದಿ ಮಠದ ಶ್ರೀ ಸತ್ಯಪ್ರಿಯತೀರ್ಥ ಶ್ರೀಪಾದಂಗಳೇ ತಮ್ಮನ್ನು ಕರೆಸಿ ಸನ್ಮಾನಿಸಿ ಆಶೀರ್ವದಿಸಿರುವಾಗ - ಅಂಥ ದೊಡ್ಡವರಾದ ತಾವು ಈ ದಾಸರ ಬಳಿ ಬಂದು ತಮ್ಮ ಅಸಹಾಯಕತೆಯನ್ನು ತೋರುವುದೇ ಎಂಬ ಹಿರಿಮೆಯ ಪೀಡೆ ಅವರಿಗೆ.

ಗೋಪಾಲದಾಸರೇ ಮಾತು ಕೆದಕಿದರು.

"ಹೌದ್ಹೌದು ಆಚಾರ್ಯರೆ, ನನಗಾಗಿ ನೀವೆಲ್ಲಿ ಬಂದಿದ್ದೀರಿ? ನಿಮ್ಮ ಚಿರಂಜೀವಿಗಾಗಿ ಇಲ್ಲಿಗೆ ಬಂದಿದ್ದೀರಿ. ಇಲ್ಲಿಗೆ ಬರದಿದ್ದರೆ ನಿಮ್ಮ ಮನೆಯಲ್ಲಿ ಶಾಂತಿ ಇರುತ್ತಿತ್ತೆಲ್ಲಿ? ಸೊಸೆ ಮಡದಿ ಏಕಪ್ರಕಾರವಾಗಿ ಇಲ್ಲಿಗೆ ಹೋಗಿ ಎಂದು ಒತ್ತಾಯಿಸದಿದ್ದರೆ ಆಚಾರ್ಯರು ಇಲ್ಲಿಯವರೆಗೂ ಚಿತ್ತೈಸುತ್ತಿದ್ದರೆ? ಮಡದಿಯ ಅಪೇಕ್ಷೆಗೆ ತಲೆ ಕೊಡದೆ ಕೂಡಲು ಯಾವ ಗಂಡಸಿಗೆ ಸಾಧ್ಯ ಹೇಳಿ?"

ಮಗನ ಭವಿಷ್ಯ ತಿಳಿಯಬೇಕೆಂದು ಹೆಂಡತಿ ಸೊಸೆಯರ ಒತ್ತಾಯದಿಂದಲೇ ತಾವು ಇಲ್ಲಿಗೆ ಬಂದದ್ದು. ಅದನ್ನು ಪ್ರತ್ಯಕ್ಷವಾಗಿ ನೋಡಿದವರಂತೆ ಖಡಾ ಖಂಡಿತವಾಗಿ ಹೇಳುತ್ತಿರುವ ದಾಸರ ವೃತ್ತಿ ಪರಿಣತತ್ವ ಅವರನ್ನು ದಿಗ್‌ಭ್ರಮೆ ಗೊಳಿಸಿತು.

"ಏನೋ ಹುಡುಗ, ಬ್ರಾಹ್ಮಣ ಬಾಲಕ, ಅವನನ್ನು ಬರಿಗೈಯಿಂದ ಹೋಗಿ ನೋಡಬೇಡಿ ಎಂದು ಅಕ್ಕನವರೇ ಒಂಭತ್ತು ಉತ್ತತ್ತಿಗಳನ್ನು ಕಳಿಸಿದ್ದಾರಲ್ಲಾ. ಅವನ್ನು ಕೊಡಬಾರದೆ ಆಚಾರ್ಯರೆ? ಹಸಿದಿದ್ದೇನೆ. ಶ್ರೀ ವೆಂಕಟೇಶನಿಗೆ ಅರ್ಪಿಸಿ ಹುಡುಗ ತಿಂದು ಸಂತೋಷ ಪಡುತ್ತಾನೆ." ದಾಸರು ನುಡಿದಾಗ ಆಚಾರ್ಯರು ದಂಗಾಗಿ ಹೋದರು. ತಾವು ಹೊದ್ದಿದ್ದ ಶಾಲಿನ ಅಂಚಿಗೆ ಅವರ ಮಡದಿ ಉತ್ತತ್ತಿಗಳನ್ನು ಕಟ್ಟಿ ಕಳಿಸಿದ್ದಳು. ಬಿಚ್ಚಿ ಕೊಡುತ್ತಾ ಆಚಾರ್ಯರು ಎಣಿಸಿ ನೋಡಿದರು. ಹೌದು, ಒಟ್ಟು ಇದ್ದ ಉತ್ತತ್ತಿ ಒಂಭತ್ತೇ!

ಆಚಾರ್ಯರ ಗಾಂಭೀರ್ಯ ಇಳಿದು ಹೋಯಿತು. ತಮ್ಮ ಮನೆಯಲ್ಲಿ ಕಟ್ಟಿದ ಗಂಟಿನಲ್ಲಿರುವ ಉತ್ತತ್ತಿಗಳ ಸಂಖ್ಯೆಯನ್ನು ಇಷ್ಟು ನಿರ್ದಿಷ್ಟವಾಗಿ ಹೇಳುವ ಈ ದಾಸರಲ್ಲಿ ಯಾವುದೋ ಸಿದ್ಧಿಯಂತೂ ಇದೆ ಎಂದು ಅವರು ನಿರ್ಣಯಿಸಿದರು. ಕೂಡಲೇ ದಾಸರಲ್ಲಿ ಅವರು ದೈನ್ಯದಿಂದ ಪ್ರಾರ್ಥಿಸಿದರು.

"ಹೌದು ದಾಸರೇ ನನ್ನ ಮಗ ವೆಂಕಟರಾಮ ಶುದ್ಧ ಶುಂಠಿಯಾಗಿ ಬಿಟ್ಟಿದ್ದಾನೆ. ಅವನಿಗೆ ಬದುಕಿನಲ್ಲಿ ಆಸಕ್ತಿ ಹುಟ್ಟಲಿಯೆಂದು ವಿವಾಹ ಮಾಡಿದೆವು. ಮನೆಗೆ ಮಡದಿ ಬಂದಳೇ ವಿನಹ ಅವನಿಗೆ ಬುದ್ಧಿ ಬರಲಿಲ್ಲ. ಮುಂದೇನು ಅವನ ಗತಿ? ನಿಮ್ಮ ಗ್ರಂಥದಲ್ಲಿ ಅವಕ್ಕೇನಾದರೂ ಉತ್ತರ ಸಿಕ್ಕೀತೆ? ಸ್ವಲ್ಪ ನೋಡಿ ಹೇಳಿ."

ತನ್ನಲ್ಲಿರುವ ಗ್ರಂಥದ ಬಗ್ಗೆ ನಂಬಿಕೆಯೇ ವಿನಹ ತನ್ನ ಬಗ್ಗೆ ಅವರಿಗೆ ವಿಶ್ವಾಸವಿಲ್ಲ ಎಂಬ ಅಂಶವನ್ನು ಗೋಪಾಲದಾಸರು ಗಮನಿಸಿದರೂ ಅದನ್ನು ಅಷ್ಟಾಗಿ ಹಚ್ಚಿಕೊಳ್ಳಲಿಲ್ಲ. ಆಚಾರ್ಯರು ಕೇಳಿದ ಅವರ ಚಿರಂಜೀವಿಯ ಬಗ್ಗೆ ಗೋಪಾಲದಾಸರು ಅಷ್ಟರಲ್ಲಿಯೇ ತನ್ಮಯಗೊಂಡು ಬಿಟ್ಟಿದ್ದರು.

"ನಿಮ್ಮ ಚಿರಂಜೀವಿ ಶ್ರೀ ವೆಂಕಟ ರಾಮಾಚಾರ್ಯರು ಬಹಳ ದೊಡ್ಡ ಜೀವಿ ಆಚಾರ್ಯರೆ. ಅಗ್ನಿ ಅವರು. ಬೂದಿ ಮುಚ್ಚಿದೆಯಷ್ಟೆ. ವಾಯುವಿನ ಕೃಪೆ ಆಗಿ ಗಾಳಿ ಹಾರಿಬಿಟ್ಟರೆ ಬೂದಿ ಹೊರ ಬೀಳುತ್ತದೆ. ಆ ಮೇಲಿನ ಪ್ರಕಾಶ ತತ್ವ ಜಗತ್ತಿನ ಕತ್ತಲೆ ಹರಿಸುವ ದಿವ್ಯ ಜ್ಯೋತಿಯಾಗಿ ರಾರಾಜಿಸುತ್ತದೆ."

ದಾಸರ ಮಾತು ಕೇಳಿ ಆಚಾರ್ಯರಿಗೆ ಅದೇನೋ ಸಮಾಧಾನ. ಯಾವ ಕೆಲಸಕ್ಕೂ ಬಾರದ ಶುದ್ಧ ಹುಂಬನೆಂದು ತಾವು ತಿಳಿದಿದ್ದ ತಮ್ಮ ಮಗನ ಬಗ್ಗೆ ದಾಸರ ಪ್ರಶಂಸೆ ಪಿತೃ ಹೃದಯವನ್ನು ಹರ್ಷಗೊಳಿಸಿತ್ತು.

"ಈಗಾಗಲೇ ವಯಸ್ಸಾಗಿ ಬಿಟ್ಟಿದೆ. ಓದು ಕಲಿಯುವ ಕಾಲವಲ್ಲವೀಗ. ಗಿಡವಾಗಿ ಬಗ್ಗದಿದ್ದುದು ಮರವಾದ ಮೇಲೆ ಮಣಿಯುತ್ತದೆಯೇ?" ಆಚಾರ್ಯರು ಮೆಲ್ಲಗೆ ತಮ್ಮ ಸಂಶಯವನ್ನು ವ್ಯಕ್ತಪಡಿಸಿದರು.

"ಕಾಲ ಬರಬೇಕಿತ್ತು ಆಚಾರ್ಯರೆ, ವಿಘ್ನೇಶ್ವರನ ದೃಷ್ಟಿ ಬಿದ್ದಿರಲಿಲ್ಲ. ಜ್ಞಾನದ ಬಾಗಿಲು ಮುಚ್ಚಿತ್ತು. ಕದ ತೆರೆಯುವ ಕಾಲ ಬಂದಿದೆ. ಬಾಗಿಲು ತೆಗೆದ ಮೇಲೆ ಒಂದು ಕೋಣೆಯಲ್ಲಿಟ್ಟಿದ್ದುದನ್ನು ಇನ್ನೊಂದು ಕೋಣೆಗೆ ಸಾಗಿಸುವುದಕ್ಕೇನು ಕಷ್ಟ? ಜ್ಞಾನ ಭಂಡಾರವಾಗಿರುವ ತಾವು ತಮ್ಮ ವಿದ್ವತ್ತನ್ನು ಇನ್ನು ಮುಂದೆ

ಇವರಲ್ಲಿ ಧಾರಾಳವಾಗಿ ತುಂಬಬಹುದು. ಕದ ತೆಗೆದ ಪೆಟ್ಟಿಗೆ ಅವರ 'ಧೀ' ಶಕ್ತಿಯೀಗ. ನೀವು ನಿಮ್ಮ ಸಂಗ್ರಹವನ್ನು ಅವರಲ್ಲಿ ಧಾರಾಳವಾಗಿ ಇಡಬಹುದು. ನಾಳೆಯಿಂದಲೇ ಮಗನಿಗೆ ಪಾಠ ಪ್ರಾರಂಭಿಸಿ. ನೀವು ಯಾವ ವಿಷಯವನ್ನಾದರೂ ಒಮ್ಮೆ ಹೇಳಿದರೆ ಸಾಕು. ಕೂಡಲೇ ಅದನ್ನು ಗ್ರಹಿಸಿ ಜ್ಞಾನ ಶ್ರೇಷ್ಠರಾಗುತ್ತಾರವರು. ವಿದ್ವಾನ್ ವೆಂಕಟ ನರಸಿಂಹಾಚಾರ್ಯರ ಪುತ್ರ - ಭಾವೀ ವಿದ್ಯಾರತ್ನ ವೆಂಕಟ ರಾಮಾಚಾರ್ಯರಿಗೆ ನಮ್ಮೆಲ್ಲರ ಆರಾಧ್ಯದೇವನಾದ ಪ್ರಭು ವೆಂಕಟೇಶ ಕರುಣಿಸಿ ದ್ದಾನೆ. ನನ್ನ ಆರಾಧ್ಯ ಮೂರುತಿ ಗೋಪಾಲಕೃಷ್ಣ ಅವರಿಂದ ಮುಂದೆ ಸ್ಥಾಪನೆ ಗೊಂಡು ಆ ಕ್ಷೇತ್ರ ಶೀಘ್ರಾನುಗ್ರಹಿಸುವ ಜಾಗ್ರತ ಸನ್ನಿಧಾನವೆನಿಸುತ್ತದೆ. ಈ ದಿನದಿಂದಲೇ ಪಾಠ ಪ್ರಾರಂಭಿಸಿ" ಎಂದು ಗೋಪಾಲದಾಸರು ಹೇಳಿ ಶ್ರೀ ವೆಂಕಟೇಶ ನಿಗೆ ವಿಶೇಷ ಮಂಗಳಾರತಿ ಮಾಡಿದರು. ಆರತಿ ಸ್ವೀಕರಿಸಿದ ಆಚಾರ್ಯರು ದೇವರಿಗೆ ನಮಸ್ಕರಿಸಿ ತಮ್ಮ ಐಜಿ ಗ್ರಾಮಕ್ಕೆ ಹಿಂದಿರುಗಿದರು.

ಆಚಾರ್ಯರು ಬಂದು ಹೋದ ಮರುದಿನವೇ ವಿಜಯದಾಸರು ತಮ್ಮ ಶಿಷ್ಯ ಗೋಪಾಲದಾಸರ ಬಳಿ ಆಗಮಿಸಿ

"ಗೆದ್ದೆಯಪ್ಪಾ ಭಾಗಣ್ಣಾ, ಕನ್ನಡ ಹರಿದಾಸ ಸಾಹಿತ್ಯಕ್ಕೆ-ತತ್ವವಾದ ಲೋಕಕ್ಕೆ ದೊಡ್ಡ ಕಾಣಿಕೆಯನ್ನೇ ಕೊಟ್ಟೆ. ನಿನ್ನಿಂದ ಮಾರ್ಗದರ್ಶನ ಪಡೆದ ಆಚಾರ್ಯರು ತಮ್ಮ ಮಗನಿಗೆ ಇನ್ನು ಮೇಲೆ ವಿದ್ಯಾಭ್ಯಾಸ ಪ್ರಾರಂಭಿಸುತ್ತಾರೆ. ಎಲ್ಲವನ್ನು ಶೀಘ್ರವೇ ಕಲಿತು, ಮುಂದೆ ಮಹಾಜ್ಞಾನಿಯಾಗಿ ನೆನಸಿದವರನ್ನೆಲ್ಲಾ ಉದ್ಧರಿಸುವ ಯತಿಗಳಾಗಿ ಅವರು ರಾರಾಜಿಸುತ್ತಾರೆ" ಎಂದು ಪ್ರಶಂಶಿಸಿದರು.

ಸುತ್ತ ಯಾರೂ ಇರಲಿಲ್ಲ. ಗುರು ಶಿಷ್ಯರಿಬ್ಬರೇ ಇದ್ದುದರಿಂದ ಗೋಪಾಲ ದಾಸರು ಗುರುಗಳ ಮಾತನ್ನು ತಾವೂ ಮುಂದುವರಿಸಿ ಹೇಳಿಬಿಟ್ಟರು.

"ಈ ಸುಜೀವಿಗೆ ತಿರೋಹಿತವಾಗಿದ್ದ ಅಪರೋಕ್ಷ ಜ್ಞಾನವನ್ನು ಪಡೆಯುವ ಪೌರೋಹಿತ್ಯ ಕಾರ್ಯಕ್ಕೆ ನನ್ನನ್ನು ತಾವು ನೇಮಿಸಿದಿರಿ. ಇವರು ಮುಂದೆ ದೊಡ್ಡ ಜ್ಞಾನಿಗಳಾಗುತ್ತಾರೆ. ದ್ವೈತ ಸಿದ್ಧಾಂತದ ಗಹನ ಪ್ರಮೇಯಗಳನ್ನು ಸುಲಭದಲ್ಲಿ ವಿವರಿಸುವ ಮೇಧಾವಿಗಳಾಗಿ ರಾರಾಜಿಸುತ್ತಾರೆ. ಕನ್ನಡದಲ್ಲಿ ಪದಪದ್ಯಸುಳಾದಿ ಗಳನ್ನು ರಚಿಸುತ್ತಾ, ಸಂಸ್ಕೃತ ಸಾಹಿತ್ಯಕ್ಕೂ ದೊಡ್ಡ ಕೊಡುಗೆ ನೀಡುವ ಉದ್ಧಾರಕ ಮೂರ್ತಿಗಳಾಗುತ್ತಾರೆ. ವ್ಯಾಸ ತತ್ವಜ್ಞರೆಂಬ ಹೆಸರಿನಿಂದ ಪರಿವ್ರಾಜಕ ಲೋಕಕ್ಕೆ ಚಂದ್ರನಂತೆ ರಾರಾಜಿಸುವ ಇವರು 'ವಾಸುದೇವ ವಿಠಲ' ಎಂಬ ಅಂಕಿತದಿಂದ ಕನ್ನಡ ಸಾರಸ್ವತ ಲೋಕದ ಧ್ರುವ ನಕ್ಷತ್ರವಾಗಿ ರಾರಾಜಿಸುತ್ತಾರೆ. ಅದೆಲ್ಲವೂ ನಿಮ್ಮ

ದೂರದರ್ಶಿತ್ವದ ಪ್ರಭಾವ. ನಿಮ್ಮ ಅವತಾರ ಕಾರ್ಯದ ಮುಖ್ಯ ಉದ್ದೇಶವೇ ಅದು. ಜಗತ್‌ಸತ್ಯ ಸಿದ್ಧಾಂತ ತತ್ವದ ಶ್ರೇಷ್ಠತೆಯ ಬಾವುಟವನ್ನು ಬಾನೆತ್ತರಕ್ಕೆ ಹಾರಿಸುವ ವೀರಾ ಸೇನಾನಿಗಳ ಪಡೆ ಕಟ್ಟುವ ಕಾರ್ಯಕ್ಕಾಗಿ ನೀವು ಅವತರಿಸಿದ್ದೀರಿ. ಅದು ಮುಂದೆ ಸತತವಾಗಿ ಸಾಗಲು ಸಂಜೀವಿನಿ ಚಿಕಿತ್ಸೆಯನ್ನು ನೀಡುತ್ತಿದ್ದೀರಿ. ಅಂಥ ಶಕ್ತಿಗಳಲ್ಲಿ ಈ ರಾಮಾಚಾರ್ಯರೂ ಒಬ್ಬರಾಗಿ ವಿರಾಜಿಸುತ್ತಾರೆ. ಈ ದೊಡ್ಡ ಕಾರ್ಯದಲ್ಲಿ ನನ್ನನ್ನು ವಿನಿಯೋಗಿಸಿಕೊಂಡು ಶಿಷ್ಯನನ್ನು ಉದ್ಧರಿಸುತ್ತಿದ್ದೀರಿ" ಗೋಪಾಲದಾಸರು ಭಾವ ತನ್ಮಯದಿಂದ ನುಡಿದರು.

ಕೂಡಲೇ ವಿಜಯದಾಸರು "ಸಾಕಪ್ಪ, ಭಾಗಣ್ಣ, ಗುರುಸ್ತುತಿ ಸಿಕ್ಕುವ ಯಾವ ಅವಕಾಶವನ್ನೂ ನೀನು ಬಿಡುವುದಿಲ್ಲ. ಇದು ಶ್ರೀ ಹರಿಯ ಇಚ್ಛೆ. ನಮ್ಮ ಗುರುಗಳಾದ ಪುರಂದರದಾಸರ ನಂತರ ಹರಿದಾಸ ಸಾಹಿತ್ಯ ಗುಪ್ತ ಸರಸ್ವತಿಯಾಗಿ ಮೆಲ್ಲಗೆ ಪ್ರವಹಿಸುತ್ತಿತ್ತು. ನಮ್ಮ ಕಾಲದಲ್ಲಿ ಅದು ಮತ್ತೊಮ್ಮೆ ಹೊರಗೆ ಪ್ರಚಂಡವಾಹಿನಿಯಾಗಿ ಪ್ರವಹಿಸುವಂತೆ ಹರಿಗುರುಗಳು ನಿರ್ಧರಿಸಿದ್ದಾರೆ. ಅದಕ್ಕೆ ಶ್ರೀ ವೆಂಕಟರಾಮಚಾರ್ಯರೂ ಒಬ್ಬ ನಿಮಿತ್ತ ವ್ಯಕ್ತಿ. ನಾನೂ ಒಬ್ಬ ನಿಮಿತ್ತ ಮಾತ್ರ. ಈ ಪುಣ್ಯಕಾರ್ಯದಲ್ಲಿ ನೀನೂ ನನ್ನ ಜೊತೆಯಲ್ಲಿದ್ದಿ. ನಮ್ಮೆಲ್ಲರ ಧ್ಯೇಯ ಗುರಿಗಳು ಒಂದೆ. ವ್ಯಕ್ತಿಯ ಶೀಲವನ್ನು ಶುದ್ಧಗೊಳಿಸಿ ಸತ್‌ಸಾಧನೆಯ ಮೇಲ್ಮಟ್ಟಕ್ಕೆ ಕರೆದೊಯ್ಯುವ ಕಾರ್ಯ ಕನ್ನಡ ಹರಿದಾಸ ಸಾಹಿತ್ಯದಿಂದ ಆಗಬೇಕಾಗಿದೆ. ಅದಕ್ಕಾಗಿ ಶ್ರಮಿಸೋಣ. ಅದೇ ಲೋಕನಾಥನ ಪೂಜೆ" ಎಂದು ನುಡಿದರು.

"ನೀವು ಒಪ್ಪಿಸಿದ ಕಾರ್ಯವನ್ನೇನೋ ಮಾಡಿದ್ದಾಯಿತು. ನಿಮ್ಮೊಂದಿಗೆ ಕಾಶೀಯಾತ್ರೆ ಮಾಡುವ ನನ್ನ ಕೋರಿಕೆಯನ್ನು ಈಗಲಾದರೂ ಮಾನ್ಯ ಮಾಡುವಿರಾ ಗುರುವರ್ಯ" ಗೋಪಾಲದಾಸರು ಪ್ರಶ್ನಿಸಿದರು. "ಇನ್ನೂ ಸ್ವಲ್ಪ ಕಾಲ ತಡೆ ಭಾಗಣ್ಣ. ಈ ರಾಮಾಚಾರ್ಯರಿಗೆ ಜ್ಞಾನ ವೃದ್ಧಿಸಲು ನೀನೂ ಸ್ವಲ್ಪ ಶ್ರಮವಹಿಸು. ಪ್ರತಿನಿತ್ಯ ನೀನು ನೀಡುವ ತತ್ವಪ್ರವಚನಕ್ಕೆ ಈ ಆಚಾರ್ಯರೂ ಬರಲಿ. ಇವರ ಜ್ಞಾನವರ್ಧನೆಯೊಂದಿಗೆ ಅವರ ತಂದೆಗೂ ಸ್ವಲ್ಪ ಸರಿದೃಷ್ಟಿ ದೊರೆಯಲಿ" ಎಂದು ವಿಜಯದಾಸರು ನುಡಿದರು.

ಕನ್ನಡ ಭಾಷೆ ಶಬ್ದದಾರಿದ್ರ್ಯದ ಭಾಷೆ. ಪ್ರಮೇಯ ಸಂಗತಿಗಳನ್ನು ವಿವರಿಸಲು ಆ ಭಾಷೆಯಲ್ಲಿ ಸಾಕಷ್ಟು ಶಬ್ದ ಸಂಪತ್ತಿಲ್ಲ. ಹೀಗಾಗಿ ಕನ್ನಡ ಹರಿದಾಸ ಸಾಹಿತ್ಯ ಪಠನೆಯಿಂದ ಹರಿಗುರುಗಳು ಕರುಣಿಸುವುದಿಲ್ಲ ಎಂಬ ನಂಬಿಕೆಯಲ್ಲಿರುವ

ವೆಂಕಟನರಸಿಂಹಾಚಾರ್ಯರಿಗೆ ಹೇಗೆ ಹೇಳಬೇಕೋ ನನಗೆ ಗೊತ್ತಾಗುತ್ತಿಲ್ಲ. ನನಗಿರುವ ಕಣಿ ಶಾಸ್ತ್ರ ಪರಿಣಿತತ್ವದ ಬಗ್ಗೆ ಅವರಿಗೆ ನಂಬಿಕೆಯಿದೆಯಾಗಲಿ ನಿಮ್ಮ ಕರುಣಾಶೀರ್ವಾದದ ಮಹಿಮೆ ಏನೆಂದು ಅವರಿಗೆ ಗೊತ್ತಾಗುವುದಾದರೂ ಹೇಗೆ?" ಗೋಪಾಲದಾಸರು ಪ್ರಶ್ನಿಸಿದರು.

"ಅದಕ್ಕೆ ಒಂದು ಘಟನೆಯೂ ನಡೆಯುತ್ತದೆ. ಕಾಲಕ್ಕಾಗಿ ಕಾಯಬೇಕು ಭಾಗಣ್ಣಾ. ಮುಂದಿನ ಮೂರು ತಿಂಗಳಲ್ಲಿ ತಿರುಪತಿಯ ಬ್ರಹ್ಮೋತ್ಸವಕ್ಕೆ ಎಲ್ಲರೂ ಹೋಗಿ ಬರೋಣ. ಅಲ್ಲಿಯವರೆಗೂ ನಿನ್ನ ಪುರಾಣ ಪ್ರವಚನ, ಸಾಹಿತ್ಯ ನಿರ್ಮಾಣ ಕಾರ್ಯ ಮುಂದುವರಿಸು. ವೆಂಕಟರಾಮಾಚಾರ್ಯರನ್ನು ನಿನ್ನ ಪ್ರವಚನಕ್ಕೆ ಕರೆಸಿಕೋ" ವಿಜಯದಾಸರು ತಿಳಿಸಿ ತಮ್ಮ ಊರಾದ ಚೀಕಲಪರವಿಗೆ ಪಯಣಿಸಿದರು.

***

ತೆರೆ ಅಡ್ಡ ಬಿದ್ದಿತ್ತು. ಅದನ್ನು ಸರಿಸಿದ ಮೇಲೆ ನೋಡುವುದಕ್ಕೇನು ಅಡ್ಡಿ? ಮುಸುಕಿದ ಪರೆ ಹೊಸಕಿ ಹಾಕಿದ ಮೇಲೆ ಮತ್ತೆಲ್ಲಿದೆ ತೊಂದರೆ? ವೆಂಕಟರಾಮಾ ಚಾರ್ಯರಿಗೆ ಈಗ ಎಲ್ಲಿಲ್ಲದ ಜ್ಞಾನಕಾಂಕ್ಷೆ. ಎಷ್ಟು ಹೊತ್ತು ಓದಿದರೂ ತೃಪ್ತಿಯಿಲ್ಲ. ಏನೆಲ್ಲಾ ಕೇಳಿದರೂ ಸಮಾಧಾನವಿಲ್ಲ.

ತಮ್ಮ ಏಕ ಮಾತ್ರ ಪುತ್ರ ಅಜ್ಞಾನಿಯಾಗಿದ್ದಾನೆಂದು ಪರಿತಪಿಸುತ್ತಿದ್ದ ವೆಂಕಟನರಸಿಂಹಾಚಾರ್ಯರಿಗೆ ಜೀವನದಲ್ಲಿ ಹಿಂದೆಂದೂ ಇಲ್ಲದ ತೃಪ್ತಿ. ಹತ್ತಾರು ವಿದ್ಯಾರ್ಥಿಗಳನ್ನು ಮನೆಯಲ್ಲಿಯೇ ಇಟ್ಟುಕೊಂಡು ವಿದ್ಯಾದಾನ ಮಾಡುತ್ತಿದ್ದ ಅವರಿಗೆ ತಮ್ಮ ಮಗನ ಶೀಘ್ರಗ್ರಾಹಿತ್ವ ಕಂಡು ಅಷ್ಟೇ ಅಚ್ಚರಿ.

ತಂದೆ ಮಹಾಪಂಡಿತರು. ಶ್ರೀಮಧ್ವಾಚಾರ್ಯರ ಸರ್ವಮೂಲ ಗ್ರಂಥಗಳನ್ನು ಪಾಠ ಮಾಡುವುದೆಂದರೆ ಅವರಿಗೆ ಎಲ್ಲಿಲ್ಲದ ಆನಂದ. ಭಾಗವತ ಪಾರಾಯಣಕ್ಕೆ ಕುಳಿತರೆ ಪುಂಖಾನುಪುಂಖವಾಗಿ ಹೊರಬರುತ್ತದೆ ಅವರ ವಾಕ್‌ಸರಣಿ. ತಂದೆ ಹೇಳುತ್ತಿದ್ದುದನ್ನೆಲ್ಲಾ ಒಮ್ಮೆ ಕೇಳಿದ ಮಾತ್ರಕ್ಕೆ ಪೂರ್ಣಗ್ರಹಿಸಿ ಬಿಡುತ್ತಿದ್ದ ವೆಂಕಟರಾಮಾಚಾರ್ಯರಿಗೆ ತಣಿಯದ ಜ್ಞಾನದಾಹ. ತಂದೆಯ ಪಾಠಗಳನ್ನು ಮುಗಿಸಿಕೊಂಡು ಪ್ರತಿನಿತ್ಯ ಸಂಜೆ ಉತ್ತನೂರಿಗೆ ಹೋಗಿ ಗೋಪಾಲದಾಸರು ಮಾಡುತ್ತಿದ್ದ ಪುರಾಣ ಪ್ರವಚನದಲ್ಲಿ ಭಾಗವಹಿಸುವುದು ಅವರ ನಿತ್ಯಚರಿಯ ಒಂದು ಕ್ರಮ.

ನರಸಿಂಹಾಚಾರ್ಯರಿಗೆ ಮಗನ ಈ ಕ್ರಮ ಸರಿ ಕಾಣಲಿಲ್ಲ. ತಾವು ಹೇಳದ ಯಾವ ವಿಷಯವನ್ನು ಆ ಗೋಪಾಲದಾಸರು ಹೇಳುತ್ತಾರೆ ಎಂದು ಅವರ ಪ್ರಶ್ನೆ.

ಭವಿಷ್ಯ ನುಡಿಯುವ ಅಥವಾ ಕಣಿ ಹೇಳುವ ವಿದ್ಯೆಯಲ್ಲಿ ಗೋಪಾಲದಾಸರಿಗೆ ಸ್ವಲ್ಪ ಸಿದ್ಧಿ ಸಿಕ್ಕಿರಬಹುದು. ಅಷ್ಟು ಮಾತ್ರಕ್ಕೆ ಅವರಿಗೆ ತತ್ವಜ್ಞಾನವಿದೆಯೆಂದು ಹೇಗೆ ನಂಬುವುದು?

ಅವರಿಂದ ಭವಿಷ್ಯ ಕೇಳಿ ಶ್ರೀ ವೆಂಕಟೇಶನಿಗೆ ಮಂಗಳಾರತಿ ಮಾಡಿಸಿ ಬಂದ ದಿನದಿಂದ ಮಗನ ಜೀವನ ಕ್ರಮ ಬದಲಾಯಿತೆಂಬುದೇನೋ ಸತ್ಯ. ಆದರೆ ಮಗನಿಗೆ ಒಳ್ಳೆ ದೆಸೆ ಬರುವ ಕಾಲಕ್ಕೆ ತಾವು ಹೋಗಿ ಕೇಳಿರಬೇಕು. ಅದನ್ನಷ್ಟೇ ಅವರು ಹೇಳಿದ್ದಾರೆ. ಅಷ್ಟಕ್ಕೇ ಅವರು ತಮಗಿಂತ ಹೆಚ್ಚಿನ ಪಂಡಿತರು ಹೇಗಾಗುತ್ತಾರೆ? ತನಗಿಂತ ಹೆಚ್ಚಿನ ವಿದ್ಯೆ ಬೋಧಿಸಲು ಅವರಲ್ಲಿ ಏನಿದೆ? ಅಂಥ ಸಂಸ್ಕೃತ ಜ್ಞಾನವಿದ್ದರೆ ಕನ್ನಡದಲ್ಲಿ ಏಕೆ ಪದಗಳನ್ನು ಕಟ್ಟಿ ಕುಣಿಯುತ್ತಾರೆ? ಪಂಡಿತರು ಕುಣಿಯುವುದೆಂದರೇನು? ದೇವರ ಮುಂದೆಯೇ ಆಗಲಿ; ದೇವರಿಗಾಗಿಯೇ ಇರಲಿ ಗಾಂಭೀರ್ಯ ಬಿಟ್ಟು ಕುಣಿಯುವುದಂತೂ ಸಲ್ಲದು."

ತಂದೆಯ ಈ ಯೋಚನಾಧೋರಣೆ ವೆಂಕಟರಾಮಾಚಾರ್ಯರಿಗೆ ಸರಿ ಬರುತ್ತಿರಲಿಲ್ಲ.

ಅವರು ಒಮ್ಮೆ ತಮ್ಮ ತಂದೆಗೆ ಹೇಳಿದರು.

"ನೀವೇ ಒಮ್ಮೆ ಬಂದು ಗೋಪಾಲದಾಸರ ಪುರಾಣ ಕೇಳಿ ನೋಡಪ್ಪಾ. ಎಂಥ ಜಟಿಲ ಪ್ರಮೇಯವನ್ನಾದರೂ ಅವರು ಅತಿ ಸರಳ ಉದಾಹರಣೆಗಳಿಂದ ಮನ ದಟ್ಟಾಗಿಸಿಬಿಡುತ್ತಾರೆ. ಅವರ ವಾಕ್ ಸರಣಿಯಲ್ಲಿ ಶಬ್ದಗಳ ಆಡಂಬರವಿಲ್ಲ. ಆದರೆ ವಿಷಯದ ವಿವರಣೆ ಇರುತ್ತದೆ. ಯಾವ ವಿಷಯವನ್ನಾದರೂ ಸುತ್ತು ಸುತ್ತು ಹಾಕಿ ಹೇಳುವುದಿಲ್ಲ. ಮುಖ್ಯ ವಿಷಯವನ್ನು ಒತ್ತಿ ಒತ್ತಿ ಹೇಳಿ ಅವರು ವಿಷಯ ಮನದಟ್ಟಾಗಿಸುತ್ತಾರೆ."

"ಒಳ್ಳೇ ವಾಚಾಳಿಯಿರಬೇಕು. ಕೇಳುವವರಿಗೆ ಆಕರ್ಷಣೆಯಾಗಿರುವಂತೆ ಹೇಳಲು ಬರುತ್ತದೇನೋ ! ಪುರಾಣ ಪ್ರವಚನವೆಂದರೆ ಮನರಂಜನೆ ಪೂರ್ತಿಗಾಗಿ ಹೇಳುವುದಲ್ಲವೋ - ಗುರು ಪ್ರಭಂಜನ ಸಮ್ಮತ ರೀತಿಯಲ್ಲಿ ಹೇಳಬೇಕು. ಅದು ಪುರಾಣ ವಾಚನ. ಆಗ ಅದು ದೇವ ಸಮ್ಮತ" ತಂದೆ ಹೇಳಿದರು.

"ಅವರು ಏನು ಹೇಳುತ್ತಾರೆ. ಹೇಗೆ ಹೇಳುತ್ತಾರೆ ಎಂದು ಒಮ್ಮೆ ಬಂದು ಕೇಳಬಾರದೇನಪ್ಪಾ! ಆಮೇಲೆ ನೀವು ತಿಳಿಸುವ ಅಭಿಪ್ರಾಯಕ್ಕೆ ನಾನು ತಲೆ

ಬಾಗುತ್ತೇನೆ'' ಎಂದು ಮಗನು ಹೇಳಿದಾಗ 'ನೋಡಿಯೇ ಬಿಡೋಣ' ಎಂದು ನಿಶ್ಚಯಿಸಿದರು ನರಸಿಂಹಚಾರ್ಯರು.

ತಮ್ಮಂಥ ಪಂಡಿತರು ಮೂವತ್ತು ವರ್ಷಗಳಿನ್ನೂ ಆಗಿರದ ಹುಡುಗನೊಬ್ಬನು ಹೇಳುವ ಪುರಾಣಕ್ಕೆ ಹೋಗುವುದೆಂದರೇನು! ಅದು ತಮ್ಮ ಪಾಂಡಿತ್ಯಕ್ಕೇ ಅವಮಾನ ಎಂದು ಅವರ ಮನ ಸ್ವಲ್ಪ ಹಿಂದೇಟು ಹಾಕಿತಾದರೂ ಗುಪ್ತವಾಗಿ ಹೋಗಿ ಅವರ ಪ್ರವಚನ ಕೇಳಿಯೇ ಬಿಡಬೇಕೆಂದು ನಿರ್ಧರಿಸಿದರು.

ತಾವು ಬರುವ ವಿಷಯವನ್ನು ಯಾರಿಗೂ ತಿಳಿಸಬಾರದೆಂದು ಮಗನಿಗೆ ಕಟ್ಟಪ್ಪಣೆ ಮಾಡಿದರು.

ಮರುದಿನ ಸಂಜೆ ಗೋಪಾಲದಾಸರು ಹೇಳುತ್ತಿದ್ದ ಪುರಾಣ ಪ್ರವಚನ ಸ್ಥಳಕ್ಕೆ ವೆಂಕಟನರಸಿಂಹಾಚಾರ್ಯರು ಬೇಕೆಂದೇ ಸ್ವಲ್ಪ ತಡವಾಗಿ ಹೋದರು. ಜನ ನೆರೆದಿದ್ದರು. ರಾಮಾಚಾರ್ಯರು ಬಾಗಿಲ ಹತ್ತಿರವೇ ಕುಳಿತು ತಂದೆಯ ಬರುವನ್ನು ನಿರೀಕ್ಷಿಸುತ್ತಿದ್ದರು. ಗೋಪಾಲದಾಸರ ಪ್ರವಚನ ಎಡೆಬಿಡದೆ ಸಾಗಿತ್ತು. ಪುರಾಣ ಗ್ರಂಥವನ್ನು ತೆಗೆದಿದ್ದರೇ ಆಗಲಿ ಅದನ್ನು ಅವರು ನೋಡುತ್ತಿರಲಿಲ್ಲ.

ನರಸಿಂಹಾಚಾರ್ಯರು ಮೆಲ್ಲಗೆ ಬಂದು ಪುರಾಣ ಸ್ಥಳವನ್ನು ಇಣಿಕಿ ನೋಡಿದರು.

ಗೋಪಾಲದಾಸರು ಜನಗಳನ್ನು ಉದ್ದೇಶಿಸಿ ಹೇಳುತ್ತಿದ್ದಂತೆ ಕಾಣಲಿಲ್ಲ. ಅವರ ಮುಂದೆ ದೊಡ್ಡ ಕೋತಿಯೊಂದು ಕಾಣಿಸಿತು. ಗೋಪಾಲದಾಸರು ಹೇಳುತ್ತಿದ್ದಂತೆ ಕೋತಿ ತಲೆ ಅಲ್ಲಾಡಿಸುತ್ತಿತ್ತು. ಕೋತಿ ತಲೆ ಆಡಿಸಿದಂತೆಲ್ಲಾ ದಾಸರ ವ್ಯಾಖ್ಯಾನ ಮುಂದೆ ಸಾಗಿತ್ತು.

ಕೋತಿಯನ್ನು ನೋಡಿದರು ನರಸಿಂಹಾಚಾರ್ಯರು. ಅದಕ್ಕೂ ದ್ವಾದಶನಾಮ ಮುದ್ರೆಗಳು ! ಎಷ್ಟೊಂದು ಶ್ರದ್ಧೆಯಿಂದ ಕುಳಿತಿದೆ. 'ಕೋತಿಗೆ ಎಂಥ ಶಿಕ್ಷಣ ನೀಡಿದ್ದಾನೆ ಆ ಹುಡುಗ' ಎಂದೆನಿಸದೆ ಹೋಗಲಿಲ್ಲ ಆಚಾರ್ಯರಿಗೆ. ಮಗನನ್ನು ಕೈ ಸನ್ನೆ ಮಾಡಿ ಕರೆದರು. ಕಡೆಯಲ್ಲಿ ಕುಳಿತಿದ್ದ ರಾಮಾಚಾರ್ಯರು ತಂದೆಯ ಸಂಜ್ಞೆಯನ್ನು ಗಮನಿಸಿ ಹೊರಕ್ಕೆ ಬಂದಾಗ

"ಇದೇನೋ ಕೋತಿಯನ್ನು ಕೂಡಿಸಿಕೊಂಡು ನಿಮ್ಮ ಭಾಗಣ್ಣ ಪಾಠ ನಡೆಸಿದ್ದಾನೆ. ತನ್ನ ಪ್ರವಚನಕ್ಕೆ ಜನ ಹೆಚ್ಚು ಸೇರಲು ಆಕರ್ಷಣೆಗಾಗಿ ಈ ಆಟ ಹೂಡಿದಂತೆ ಕಾಣಿಸುತ್ತಿದೆಯಲ್ಲೋ'' ಎಂದು ಮಗನನ್ನು ಪ್ರಶ್ನಿಸಿದರು.

ರಾಮಾಚಾರ್ಯರು ತಂದೆ ತೋರಿಸಿದ ಕಡೆ ನೋಡಲು ಅಲ್ಲಿ ಅವರಿಗೆ ಏನೂ ಕಾಣಿಸಲಿಲ್ಲ.

ವೆಂಕಟನರಸಿಂಹಾಚಾರ್ಯರು ಕೋತಿ ಕಾಣುತ್ತಿದ್ದ ಜಾಗದೆಡೆಗೆ ಬೆರಳು ತೋರುತ್ತಾ ಇದ್ದಂತೆ ಅವರ ಕೈ ನಡುಗತೊಡಗಿತು.

ಕೋತಿ ಬೃಹದಾಕಾರವಾಗಿ ಬೆಳೆಯುತ್ತಿತ್ತು. ಕಾಮರೂಪಿಯಾದ ಆಂಜನೇಯನೇ ಬೆಳೆಯುತ್ತಾ ಬೆಳೆಯುತ್ತಾ ಕಡೆಗೆ ವಾಯುವಿನಲ್ಲಿ ಕಣ್ಮರೆಯಾದ.

ತಮ್ಮ ಮಗನಿಗೆ ಕಾಣಿಸದೆ, ಅಲ್ಲಿ ಕೂತಿದ್ದ ಜನರಿಗೆ ಏನೂ ತಿಳಿಯದೆ, ತಮಗೆ ಮಾತ್ರ ಕಾಣಿಸಿಕೊಂಡ ಆ ದಿವ್ಯ ಮೂರುತಿ ಜ್ಞಾನದ ಖಣಿಯಾದ ಶ್ರೀ ವೀರಾಂಜನೇಯನೆ ಎಂದು ತಿಳಿಯಲು ಆಚಾರ್ಯರಿಗೆ ಹೆಚ್ಚು ವೇಳೆಯಾಗಲಿಲ್ಲ.

ಗೋಪಾಲದಾಸರ ಪ್ರವಚನ ಜಾಗದಲ್ಲಿ ಶ್ರೀವಾಯುದೇವರೇ ಕುಳಿತಿರ ಬೇಕಾದರೆ ಅಲ್ಲಿ ಕುಳಿತಿರುವವರು ಭಗವಂತನ ದರ್ಶನಕ್ಕೆ ಹತ್ತಿರವಾಗುತ್ತಿದ್ದಾರೆ ಎಂದು ಆಚಾರ್ಯರಿಗೆ ಹೊಳೆದು ಹೋಯಿತು. ಅವರಿಗಾದ ಆನಂದವನ್ನು ಸಂಯಮಿಸಲು ಅವರಿಗೆ ಆಗಲಿಲ್ಲ.

"ಭಳಿರೇ ಗೋಪಾಲದಾಸ ಗುರುವರ್ಯ, ಕೇವಲ ಜನರಂಜನೆಯಲ್ಲ ನಿಮ್ಮ ವ್ಯಾಖ್ಯಾನ. ಪ್ರಭಂಜನ ಸಮ್ಮತ ನಿಮ್ಮ ಪ್ರವಚನ. ಕೇವಲ ಉಲ್ಲಾಸಗೊಳಿಸುವುದಲ್ಲ ನಿಮ್ಮ ಗಾಯನ. ಜ್ಞಾನ ಭಕ್ತಿ ವೈರಾಗ್ಯಗಳನ್ನು ವಿಕಾಸಗೊಳಿಸುವುದು ನಿಮ್ಮ ಸಾಧನ."

ಗೋಪಾಲದಾಸರು ಕುಳಿತಿದ್ದ ಜಾಗದೆಡೆಗೆ ಕೈ ಮುಗಿದುಕೊಂಡು ಕಂಪಿಸುತ್ತಾ ಬಂದು ಅಲ್ಲಿದ್ದ ಗ್ರಂಥರಾಶಿಯ ಮುಂದೆ ಅಡ್ಡ ಬಿದ್ದು ಬಿಟ್ಟರು ಆಚಾರ್ಯರು.

ಗೋಪಾಲದಾಸರು ಅವರನ್ನು ಹಿಡಿದೆತ್ತಿ ಸಮಾಧಾನಪಡಿಸಿದ ಮೇಲೆ ತಾವು ಕಂಡ ದೃಶ್ಯವನ್ನು ಆಚಾರ್ಯರು ಬಿಡಿಸಿ ಬಿಡಿಸಿ ಹೇಳಿ ಪುನಃ ಪುನಃ ನಮಸ್ಕರಿಸಿದರು.

"ಇದರಲ್ಲಿ ನನ್ನ ಹೆಚ್ಚುಗಾರಿಕೆಯೇನೂ ಇಲ್ಲ ಆಚಾರ್ಯರೆ, ನೀವು ದೊಡ್ಡ ಸಾಧಕರಿದ್ದೀರಿ. ತತ್ವಶಾಸ್ತ್ರದಲ್ಲಿ ಸಿದ್ಧರಿದ್ದೀರಿ. ಶ್ರೀ ಮಧ್ವಾಚಾರ್ಯರ ಗ್ರಂಥಗಳನ್ನು ಅವನ್ನು ವಿವರಿಸುವ ಟೀಕಾಟಿಪ್ಪಣಿಗಳನ್ನು ಜೀವನದುದ್ದಕ್ಕೂ ಅಧ್ಯಯನ ಮಾಡಿದ್ದೀರಿ. ಆದ್ದರಿಂದಲೇ ಶ್ರೀ ಮಧ್ವಾಚಾರ್ಯರು ಶ್ರೀ ಆಂಜನೇಯನ ರೂಪ ದಲ್ಲಿ ನಿಮಗೆ ದರ್ಶನ ನೀಡಿದ್ದಾರೆ. ಅವರ ದರ್ಶನ ಪಡೆದ ನೀವೇ ಪುಣ್ಯಶಾಲಿಗಳು"

ಎಂದು ಗೋಪಾಲದಾಸರು ಅವರಿಗೆ ನಮಸ್ಕರಿಸ ಹೋದರು. ಅದನ್ನು ಕೂಡಲೇ ನರಸಿಂಹಾಚಾರ್ಯರು ನಿವಾರಿಸಿ "ನೀವು ಸಣ್ಣ ವಯಸ್ಸಿನವರೆಂದೂ, ಶಾಸ್ತ್ರ ಗ್ರಂಥಗಳನ್ನು ಕ್ರಮವಾಗಿ ಅಧ್ಯಯನ ಮಾಡಿಲ್ಲವೆಂದೂ ತಾತ್ಸಾರ ಭಾವನೆ ಹೊಂದಿದ್ದೆ ದಾಸರೇ, ಎಷ್ಟೇ ಅಧ್ಯಯನ ಮಾಡಿದ್ದರೂ ನೀವಿರುವ ಜಾಗಕ್ಕೆ ಬರುವವರೆಗೂ ಶ್ರೀ ಪ್ರಾಣದೇವರು ನನಗೆ ದರ್ಶನ ನೀಡಲಿಲ್ಲ. ನಿಮ್ಮಲ್ಲಿ ದೃಢವಾದ ಹರಿಗುರು ಭಕ್ತಿಯಿದೆ. ಭಕ್ತಿಯೇ ನಿಜ ದರ್ಶನಕ್ಕೆ ಕಾರಣ. ಭಕ್ತಿ ದೃಢವಾಗಲು ಜ್ಞಾನವೊಂದು ಆಧಾರ ಸಾಧನ. ಜ್ಞಾನಕ್ಕೊಂದೇ ಒಲಿಯುವ ವನಲ್ಲ ಪರಮಾತ್ಮ. ಭಕ್ತಿಗೆ ಮಾತ್ರ ಆತ ವಶವಾಗುವವನು ಎಂದು ಆಂಜನೇಯನ ರೂಪದಲ್ಲಿ ಪರಮಾತ್ಮ ನನಗೆ ಹೇಳಿದಂತಾಗಿದೆ. ದಾಸರೇ ನೀವು ಅಪರೋಕ್ಷ ಜ್ಞಾನಿಗಳು. ನಿಮ್ಮ ಧ್ವನಿಯಿದ್ದಲ್ಲಿ ವಾಯುದೇವರು ಇರುತ್ತಾರೆ. ನಿಮ್ಮ ಸಾಹಿತ್ಯದಲ್ಲಿ ಪರಮಾತ್ಮ ಹೆಚ್ಚು ಸನ್ನಿಹಿತನಾಗಿರುತ್ತಾನೆ. ನೀವು ನುಡಿಯುವ ಶಬ್ದಗಳು ಕೇವಲ ಅಕ್ಷರ ಜೋಡಣೆಯಲ್ಲ. ಪ್ರಾಸಾದಿಕಾ ವಾಣಿಗಳು" ಎಂದು ಹೇಳುತ್ತಾ ಆಚಾರ್ಯರು ಗೋಪಾಲದಾಸರ ಮುಂದೆ ಶಿರಸಾಷ್ಟಾಂಗ ಹಾಕಿ ಬಿಟ್ಟರು.

"ನಿಮ್ಮ ನಮಸ್ಕಾರ ಗೋಪಾಲವಿಠಲನಿಗೆ ಸೇರಿದೆ. ನಿಮ್ಮಂಥ ತತ್ವನಿಷ್ಠ ರನ್ನು, ಮುಂದೆ ಮಹಾಜ್ಞಾನಿಯಾಗಲಿರುವ ನಿಮ್ಮ ಪುತ್ರ ವೆಂಕಟರಾಮಾಚಾರ್ಯ ರನ್ನೂ ನನಗೆ ದೊರಕಿಸಿಕೊಟ್ಟ ಗೋಪಾಲ ವಿಠಲ ನನ್ನ ಮೇಲೆ ಪರಮಾನುಗ್ರಹ ಮಾಡಿದ್ದಾನೆ. ಆತನ ಲೀಲೆಯೇ ಲೀಲೆ. ಆತನ ಕರುಣೆಯೇ ಕರುಣೆ" ಎಂದು ಹೇಳುತ್ತಾ ಗೋಪಾಲದಾಸರು ಕುಣಿಯತೊಡಗಿದರು. ಭಗವಂತ ಗುಣಗಾನಯುಕ್ತ ಅವರ ಕುಣಿತಕ್ಕೆ ತನ್ಮಯರಾಗಿ ಆಚಾರ್ಯರೂ ಕುಣಿಯತೊಡಗಿದರು. ನೆರೆದಿದ್ದ ಜನರೂ ಜೊತೆಗೂಡಿದರು. ಎಲ್ಲರಿಂದಲೂ ಕುಣಿತ. ಎಲ್ಲರಲ್ಲಿಯೂ ತನ್ಮಯತೆ. ವಾತಾವರಣವೆಲ್ಲಾ ಭಕ್ತಿಪೂರಿತ.

ಅಲ್ಲಿ ಶಿಲಾರೂಪದಲ್ಲಿದ್ದ ಉತ್ತನೂರಿನ ಶ್ರೀ ವೆಂಕಟೇಶ ಈ ಸಮೂಹದ ಭಕ್ತಿ ಭರಿತ ಭಜನೆಗೆ ತಲೆದೂಗಿರಬೇಕು. ಆದ್ದರಿಂದಲೇ ಆತನ ವಿಶೇಷಾನು ಗ್ರಹಕ್ಕೆ ಪಾತ್ರನಾದ ವಾಯುದೇವರು ಮಂದಮಾರುತ ರೂಪದಲ್ಲಿ ಸುತ್ತೆಲ್ಲಾ ಪಸರಿಸಿದರು.

***

ಸಾಧಾರಣ ಬಿರುಗಾಳಿಯಲ್ಲ. ಪ್ರಚಂಡ ಪ್ರಭಂಜನ. ಬೆಟ್ಟ ಗುಡ್ಡಗಳನ್ನೇ ಹಾರಿಸಿಕೊಂಡು ಹೋಗುವಂಥ ಸುಂಟರಗಾಳಿ ತಮ್ಮ ತಲೆಯೊಳಗೆ ಬೀಸುತ್ತಿರುವಂಥ ಭಯಾನಕ ಅನುಭವ ಸೀನಣ್ಣ ದಾಸಣ್ಣರಿಗೆ.

ಹೀಗೇತಕ್ಕೆ ಮಾಡುತ್ತಿದ್ದಾನೆ ತಮ್ಮ ಅಣ್ಣ? ತಮ್ಮನ್ನು ನಡು ನೀರಿನಲ್ಲಿ ಕೈ ಬಿಡುವ ಸನ್ನಾಹವೇ ..........

ತಮ್ಮಂದಿರಿಬ್ಬರಿಗೆ ವಿವಾಹ ಮಾಡಬೇಕೆಂಬ ಅಪೇಕ್ಷೆಯನ್ನು ಗೋಪಾಲದಾಸರು ವಿಜಯದಾಸರಿಗೆ ಹೇಳುತ್ತಿದ್ದುದನ್ನು ಕೇಳಿಯೇ ಸೀನಣ್ಣ, ದಾಸಣ್ಣರು ಹೌಹಾರಿಬಿಟ್ಟಿದ್ದರು.

ಕಡೆಯ ತಮ್ಮ ರಂಗಣ್ಣ ಸಾಕಷ್ಟು ವಿದ್ಯಾಭ್ಯಾಸ ನಡೆಸಿದ್ದರೂ ವ್ಯವಸಾಯ ಕ್ಷೇತ್ರದಲ್ಲಿ ನಿರತನಾಗಿದ್ದ. ತಮ್ಮೊಂದಿಗೆ ಯಾತ್ರೆಗೆ ಬರದಿರುವಂತೆ ಅದೇ ಕಾರಣ ಸೂಚಿಸಿ ರಂಗಣ್ಣನನ್ನು ಬಿಟ್ಟು ಹೋಗುತ್ತಿದ್ದ ವಿಷಯ ಅವರಿಗೆ ಗೊತ್ತಿತ್ತು.

ಅಣ್ಣನ ಸಹವಾಸದಲ್ಲಿ ಮಾತ್ರ ಮಡಿಲಿನ ಪ್ರಶಾಂತತೆ ಅವರಿಗೆ ಸಿಕ್ಕಿತ್ತು. ಯಾತ್ರೆಯ ಕಾಲದಲ್ಲಿ ವಿವಿಧ ಕ್ಷೇತ್ರಗಳ ಭೆಟ್ಟಿಯಿಂದ ಧನ್ಯತಾಭಾವ ಅವರಲ್ಲಿ ಮೂಡುತ್ತಿತ್ತು. ಅಣ್ಣನು ಹಾಡುತ್ತಾ ದಾರಿ ಕ್ರಮಿಸುತ್ತಿದ್ದರೆ ಸುಖದ ಸಮುದ್ರದಲ್ಲಿ ಕರೆದೊಯ್ಯುತ್ತಿದ್ದ ಅನುಭವ ಅವರಿಗೆ. ಅಣ್ಣನೇ ಅವರಿಗೆ ತಾಯಿ, ತಂದೆ ಗುರು, ಕತ್ತಲಲ್ಲಿ ಸಿಕ್ಕ ಬೆಳಕು ಅಣ್ಣ. ಬದುಕಿನ ಉಸಿರು ಭಾಗಣ್ಣ. ತನಗೆ ಮದುವೆ ಬೇಡವೆಂದು ಬಿಟ್ಟ ಅಣ್ಣ ತಮಗೆ ಮಾತ್ರ ವಿವಾಹ ಮಾಡುವ ಯೋಚನೆ ನಡೆಸಿರುವುದನ್ನು ಕಂಡು ಅವರು ಪೂರ್ತಿ ಹೆದರಿಬಿಟ್ಟಿದ್ದರು.

ಗೋಪಾಲದಾಸರು ವಿಜಯದಾಸರು ಇಬ್ಬರೇ ಸ್ವಲ್ಪ ದೂರ ಅಡ್ಡಾಡಿಕೊಂಡು ಬರಲು ಹೋಗಿದ್ದ ಸಮಯದಲ್ಲಿ - ಸೀನಣ್ಣ ದಾಸಣ್ಣನೊಂದಿಗೆ ಈ ವಿಷಯ ಪ್ರಸ್ತಾಪಿಸಿದ.

"ನೋಡಿದೆಯಾ ದಾಸೂ, ಜನ್ಮದ ಎಷ್ಟೋ ಕಾಲದ ಸಾಧನೆಯ ನಂತರ ಉತ್ತಮ ಗುರು ಸಿಕ್ಕುತ್ತಾನೆಂದು ಅನುಭವಿಗಳು ಹೇಳುತ್ತಾರೆ. ಎಷ್ಟೋ ಜನ್ಮಗಳ ಸಾಧನೆಯ ನಂತರ ಸ್ವರೂಪಸ್ವಾಮಿ ದರ್ಶನ ಮಾಡುವ ನೀತ ಗುರು ದೊರಕುತ್ತಾರೆಂದು ಶಾಸ್ತ್ರಗಳು ಹೇಳುತ್ತಿವೆ. ನಮ್ಮ ಎಷ್ಟು ಜನ್ಮಗಳ ಪುಣ್ಯದ ಫಲವೋ ಭಾಗಣ್ಣನ ತಮ್ಮಂದಿರಾಗಿ ನಾವು ಹುಟ್ಟಿದ್ದೇವೆ. ಆತ ಗುರುವಾಗಿಯೂ ಅನುಗ್ರಹಿಸು

ತ್ತಿದ್ದಾನೆ. ನಾವು ಪಡೆದ ಈ ಭಾಗ್ಯ ಶಾಶ್ವತವಾಗಿ ಉಳಿಯುವ ಲಕ್ಷಣಗಳು ಕಾಣುತ್ತಿಲ್ಲ. ನಾವು ವಿವಾಹವಾಗಿ ಬಿಟ್ಟರೆ ಅಣ್ಣನಿಂದ ದೂರ ವಾದಂತೆಯೆ. ಎಷ್ಟೋ ಜನರ ಭವಿಷ್ಯ ಹೇಳುವ ನಮ್ಮಣ್ಣ ತನ್ನ ಭವಿಷ್ಯ ಮಾತ್ರ ನೋಡಿಕೊಳ್ಳಲಿಲ್ಲ. ಹಾಗೆ ಈಗ ಭಾಗಣ್ಣ ತನ್ನ ಭವಿಷ್ಯ ನೋಡಿಕೊಂಡರೆ ಏನು ಕಂಡೀತು?''

"ಏನು ಕಾಣುತ್ತಿತ್ತು?'' ದಾಸಣ್ಣನ ಪ್ರಶ್ನೆ

ತಮ್ಮಂದಿರ ಮದುವೆ ಮಾಡಿದ ಮರುದಿನವೇ -

"ಭ್ರಾತೃವಿಯೋಗ ಎಂದು ಕಾಣುತ್ತಿತ್ತು. . ಅದೇ ನಿರ್ಧಾರ ನನ್ನದು''

"ಮದುವೆ ಮಾಡಿದ ಮರುದಿನವೆಂದು ನೀನು ಹೇಳಿದೆ. ಅದು ನಿನ್ನ ವಿಷಯದಲ್ಲಿ ಸರಿ ಇರಬಹುದು. ನನ್ನ ವಿಷಯದಲ್ಲಿ ಅದು ಸ್ವಲ್ಪ ಭಿನ್ನ. ಮದುವೆಯ ದಿನವೇ ತಮ್ಮನು ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ ಎಂದು ಅವರಿಗೆ ಸ್ವಭವಿಷ್ಯದಲ್ಲಿ ಕಾಣುತ್ತಿತ್ತು. ಏನು ಮಾಡುವುದು ಆತ ತನ್ನ ಭವಿಷ್ಯ ನೋಡಿಕೊಳ್ಳಲು ಎಂದೂ ಪ್ರಯತ್ನಿಸಿಲ್ಲ'' ದುಃಖದಿಂದ ದಾಸಣ್ಣ ನುಡಿದ.

ಅಣ್ಣತಮ್ಮಂದಿರಿಬ್ಬರು ಮಾತನಾಡಿಕೊಳ್ಳುತ್ತಿರುವಾಗಲೇ ಗುರುಶಿಷ್ಯರಿಬ್ಬರು ಮನೆಗೆ ಬಂದು ಅವರ ಮಾತುಗಳನ್ನು ಕೇಳಿಸಿಕೊಂಡಿದ್ದರು.

"ಏನು ಸೀನಣ್ಣಾ, ನೀವಿಬ್ಬರೂ ಮದುವೆ ಬೇಡವೆಂದು ಏಕೆ ಯೋಚಿಸುತ್ತಿದ್ದೀರಿ? ನನ್ನನ್ನು ಅನುಸರಿಸಿ ಬರುವುದಕ್ಕೆ ವಿವಾಹವೇನೂ ಅಡ್ಡಿಯಾಗುವುದಿಲ್ಲ. ನಾನು ಮದುವೆ ಮಾಡಿಕೊಳ್ಳುವುದಿಲ್ಲವೆಂಬುದು ಈಗಾಗಲೇ ನಿರ್ಧಾರವಾಗಿರುವ ವಿಷಯ. ಅದಕ್ಕೆ ಜನ್ಮಾಂತರಗಳ ಕಾರಣವಿದೆ. ಆ ವಿಷಯ ಗ್ರಹಿಸಿ ನನ್ನ ಗುರುಗಳು ಅನುಮತಿಸಿದ್ದಾರೆ. ಆದರೆ ನೀವೇಕೆ ಮದುವೆಯಾಗಬಾರದು? ವಂಶವಾಹಿನಿ ಮುಂದುವರಿಯುತ್ತಿರುವುದನ್ನು ನೋಡಿ ಸ್ವರ್ಗದಲ್ಲಿರುವ ನಮ್ಮ ಹಿರಿಯರು ಹರ್ಷಿಸಬೇಡವೇ? ನಿಮಗೆ ಮದುವೆ ಮಾಡುವುದು ನನ್ನ ಕರ್ತವ್ಯ. ಕರ್ತವ್ಯ ನಿರ್ವಹಿಸಿದ ಕೃತಾರ್ಥತೆ ನನಗೆ ಸಿಕ್ಕ ಬೇಡವೆ? ನೀವು ವಿವಾಹ ಮಾಡಿಕೊಂಡು ಸುಖವಾಗಿರಿ. ನಿಮ್ಮ ಸಾಧನೆಯ ಜೊತೆಗೆ ನಾನು ಯಾವಾಗಲೂ ಇರುತ್ತೇನೆ. ಮುಂದಿನ ತಿಂಗಳು ನಿಮ್ಮ ವಿವಾಹ ನಿರ್ವಹಿಸಲು ಯೋಚಿಸುತ್ತಿದ್ದೇನೆ. ಕನ್ಯೆಗಳನ್ನು ನೋಡಿಕೊಂಡು ಬರಲು ರಾಯಚೂರು ಗಂಗಾವತಿ ಕಡೆ ಹೋಗಬೇಕೆಂದು ಯೋಚಿಸುತ್ತಿದ್ದೇನೆ.''

ಗೋಪಾಲದಾಸರ ಮಾತು ಕೇಳಿ ತಮ್ಮಂದಿರಿಬ್ಬರೂ ವಿಜಯದಾಸರ ಕಾಲುಗಳನ್ನು ಗಟ್ಟಿಯಾಗಿ ಹಿಡಿದುಬಿಟ್ಟರು.

"ನೀವು ಹೇಳಿದರೆ ಮಾತ್ರ ನಮ್ಮಣ್ಣ ತನ್ನ ನಿರ್ಣಯ ಬದಲಿಸುತ್ತಾನೆ. ಆತನೇನೋ ಮದುವೆಯಾಗಿಲ್ಲ. ಅದಕ್ಕೆ ಆತನ ಮೂಲ ಅವತಾರವೇ ಕಾರಣ ವಿರಬೇಕೆಂದು ನಾವು ಗ್ರಹಿಸಿದ್ದೇವೆ. ನಮಗೆ ನಮ್ಮ ಮೂಲರೂಪವೇನೋ ಗೊತ್ತಿಲ್ಲ. ಮೂಲ ಸ್ವರೂಪವನ್ನು ಅರಿಯುವುದಕ್ಕೆ ಇನ್ನೂ ಜನ್ಮಗಳ ಸಾಧನೆ ಅವಶ್ಯವಿರಬಹುದು. ಅದು ಏನೇ ಇರಲಿ. ನಮಗಂತೂ ಮದುವೆ ಮಾಡಿಕೊಳ್ಳುವ ಅಪೇಕ್ಷೆಯಿಲ್ಲ. ಒತ್ತಾಯದಿಂದ ಮದುವೆ ಮಾಡಿದರೆ ನಾವಂತೂ ಬದುಕಿ ಉಳಿಯುವುದಿಲ್ಲ. ಹಿಂದೆ ಗದ್ವಾಲ ಸಂಸ್ಥಾನದಲ್ಲಿ ನಮ್ಮಣ್ಣ ನಮ್ಮನ್ನು ಕೆಲಸಕ್ಕೆ ಸೇರಿಸಿದ್ದ. ಅಲ್ಲಿ ನಾನಾ ಪರಿಪಾಟ ಪಟ್ಟು ಆತನ ಕೃಪೆಯಿಂದಲೇ ಊರಿಗೆ ಮರಳಿದೆವು. ಆಗ ತಾಯಿಯ ಮುಂದೆ ನಮ್ಮಿಬ್ಬರನ್ನು ತನ್ನ ಮಾರ್ಗದಲ್ಲಿಯೇ ಕರೆದೊಯ್ಯುತ್ತೇನೆಂದು ಮಾತು ಕೊಟ್ಟಿದ್ದ. ಅದರಿಂದ ನಾವಿಬ್ಬರೂ ಸಂಪೂರ್ಣ ಭರವಸೆ ತಾಳಿದ್ದೆವು. ತಾಯಿಗೆ ಕೊಟ್ಟ ಮಾತಿನಂತೆ ನಮ್ಮನ್ನು ತನ್ನ ಮಾರ್ಗ ದಲ್ಲಿಯೇ ಕರೆದೊಯ್ಯಲಿ. ತಾನು ಬ್ರಹ್ಮಚಾರಿಯಾಗಿ ಸಾಧನೆ ಮುಂದುವರಿಸಿದಂತೆ ನಮಗೂ ಅದೇ ಆಶ್ರಮದಲ್ಲಿ ಮುಂದುವರಿಸಿಕೊಂಡು ಹೋಗಲಿ."

ಇವರಿಬ್ಬರ ನಿರ್ಧಾರ ಕೇಳಿದ ವಿಜಯದಾಸರು ಸ್ವಲ್ಪ ಹೊತ್ತು ಕಣ್ಣು ಮುಚ್ಚಿ ಯೋಚಿಸಿ ನಿಧಾನವಾಗಿ ಹೇಳಿದರು.

"ಇವರ ನಿರ್ಣಯವೇ ಸರಿ ಇದೆ ಭಾಗಣ್ಣ. ಶ್ರೀಹರಿ ಗುರುಗಳು ಇವರಿಂದ ದೊಡ್ಡ ಸೇವೆಯನ್ನು ಅಪೇಕ್ಷಿಸಿದ್ದಾರೆ. ಹರಿದಾಸ ಸಾಹಿತ್ಯ ಈಗಾಗಲೇ ಸಾಕಷ್ಟು ಕಣ್ಮರೆಯಾಗಿದೆ. ಅಳಿದುಳಿದ ಪದಪದ್ಯಗಳನ್ನು ಇವರು ಸಂಗ್ರಹಿಸಿ ಲಿಖಿಸಿಡಲಿ. ಅದೂ ಶಾಶ್ವತವಾಗಿ ಉಳಿಯುತ್ತದೆಂದೇನೂ ನಾನು ಭಾವಿಸಿಲ್ಲ. ಆದರೆ ಹಿರಿಯರ ಸಾಹಿತ್ಯವನ್ನು ಸಂಗ್ರಹಿಸಿಡುವ ಕಾರ್ಯವೂ ಹರಿದಾಸ ಸಾಹಿತ್ಯ ನಿರ್ಮಿಸಿದಷ್ಟೇ ಪುಣ್ಯ ಕಾರ್ಯ. ನಿನ್ನೊಂದಿಗೆ ಇವರೂ ಜೊತೆಯಾಗಿರಲಿ. ಸೂಕ್ತ ಕಾಲದಲ್ಲಿ ಇವರಿಗೂ ಬಿಂಬದರ್ಶನ ಮಾಡಿಸಿ ಅಂಕಿತ ನೀಡು. ಸಾಹಿತ್ಯ ನಿರ್ಮಾಣ ಕಾರ್ಯ ಇವರಿಂದಲೂ ಆಗಬೇಕಾಗಿದೆ. ಇದೇ ಶ್ರೀ ಹರಿಯ ಸಂಕಲ್ಪ. ಅದು ಏಕೆ ಏನು ಎಂದು ಪ್ರಶ್ನಿಸುವಂತಿಲ್ಲ. ಮಾನವನ ದೃಷ್ಟಿ ವೈಶಾಲ್ಯ ಎಷ್ಟೇ ವಿಸ್ತೀರ್ಣವಿದ್ದರೂ ಅದಕ್ಕೊಂದು ಪರಿಮಿತಿಯಿದೆ. ಪರಮಾತ್ಮನ ಸಂಕಲ್ಪವನ್ನು ಅರಿಯಬಹುದೇ ವಿನಹ ಅದರ ಕಾರಣ ಅರಿಯುವ ಹವ್ಯಾಸಕ್ಕೆ ಹೋಗಬಾರದು. ಇವರೂ

ನಿನ್ನಂತೆಯೇ ಬ್ರಹ್ಮಚಾರಿಗಳಾಗಿ ಸಾಧನೆ ಮುಂದುವರಿಸಲಿ. ವಂಶವಾಹಿನಿ ಮುಂದುವರಿಯಬೇಕೆಂಬ ನಿನ್ನ ಅಪೇಕ್ಷೆಯೂ ಧರ್ಮಸಮ್ಮತ. ಅದಕ್ಕನುಗುಣವಾಗಿ ರಂಗಣ್ಣ ಈಗಾಗಲೇ ರೂಪಗೊಂಡಿದ್ದಾನೆ. ಅವನಿಗೆ ಮದುವೆ ಮಾಡುವ ವ್ಯವಸ್ಥೆ ಮಾಡು. ಅವನೂ ದೊಡ್ಡ ಜೀವಿಯೆ. ಆದರೆ ಅವನು ಸಂಸಾರದಲ್ಲಿದ್ದು ಸಾಧನೆ ಮುಂದುವರಿಸಬೇಕೆಂಬುದು ಶ್ರೀ ಹರಿಯ ಇಚ್ಛೆ. ಶೀಘ್ರವೇ ಅವನ ಮದುವೆಗೆ ವ್ಯವಸ್ಥೆ ಮಾಡು."

ಗುರುಗಳ ಅಪೇಕ್ಷೆಯೆಂದರೆ ಅದು ಗೋಪಾಲದಾಸರಿಗೆ ಆಜ್ಞೆಯಿದ್ದಂತೆ. ಅವರ ನುಡಿ ಬರೆದಿಟ್ಟ ಶಾಸನದಂತೆ! ಸೀನಣ್ಣ, ದಾಸಣ್ಣನ ಅಪೇಕ್ಷೆ ಗೊತ್ತಿದ್ದರೂ ಹಿರಿಯಣ್ಣನಾಗಿ ಮದುವೆಗೆ ಒತ್ತಾಯಿಸುವುದು ಕರ್ತವ್ಯವಾಗಿತ್ತು. ಈಗ ಗುರುಗಳೇ ಅವರ ಅಪೇಕ್ಷೆಯನ್ನು ಒಪ್ಪಿರುವುದರಿಂದ ಅವರಿಬ್ಬರ ವಿವಾಹ ಯೋಚನೆಯನ್ನು ಕೈ ಬಿಟ್ಟು ಕಡೆಯ ತಮ್ಮ ರಂಗಣ್ಣನಿಗೆ ಮದುವೆ ಮಾಡಿಸಲು ಸಂಕಲ್ಪಿಸಿದ.'

'ಶೀಘ್ರದಲ್ಲಿಯೇ ತಿರುಪತಿಯಲ್ಲಿ ಬ್ರಹ್ಮೋತ್ಸವ ಬರಲಿದೆ. ನಮ್ಮೊಂದಿಗೆ ಯಾತ್ರೆ ಹೊರಡಲು ಬಹಳ ಜನ ಕಾದಿದ್ದಾರೆ. ನೀವು ಮೂವರು ಈ ಸಲ ನನ್ನೊಂದಿಗೆ ಯಾತ್ರೆಗೆ ಬನ್ನಿ. ಮುಂದಿನ ವರ್ಷ ಕಾಶೀಯಾತ್ರೆಗೆ ಹೋಗೋಣ" ಎಂದು ವಿಜಯದಾಸರು ನುಡಿದಾಗ 'ಧನ್ಯರಾದೆವು' ಎಂದು ಮೂವರು ವಿಜಯದಾಸರಿಗೆ ನಮಸ್ಕರಿಸಿದರು.

***

ವಿಜಯದಾಸರ ಆಶೀರ್ವಾದ, ಗೋಪಾಲದಾಸರ ಸಂಕಲ್ಪವಾದ ಮೇಲೆ ಯಾವ ಶುಭ ಕಾರ್ಯಕ್ಕೆ ತಡೆಯಾದೀತು?

ರಂಗಣ್ಣನ ವಿವಾಹ ವೈಭವದಿಂದ ನೆರವೇರಿತು. ತಿರುಪತಿಯ ಬ್ರಹ್ಮೋತ್ಸವ ದಲ್ಲಿ ಎಲ್ಲರೂ ಭಾಗವಹಿಸಿ ಕೃತಾರ್ಥರಾದರು.

ತಿರುಪತಿಯಿಂದ ಹಿಂದಿರುಗುವಾಗ ಅವರೆಲ್ಲರೂ ಮಂತ್ರಾಲಯ ಕ್ಷೇತ್ರಕ್ಕೆ ಆಗಮಿಸಿ ಶ್ರೀರಾಯರ ದರ್ಶನವನ್ನು ಪಡೆದು ಮಹದಾನಂದಪಟ್ಟರು.

ಅವರು ಬೃಂದಾವನವನ್ನಷ್ಟೇ ಅಲ್ಲಿ ನೋಡಲಿಲ್ಲ

ನಮಿಸಿದವರ ಕಾಮಧೇನು, ಭಜಿಸಿದವರ ಕಲ್ಪವೃಕ್ಷವೆಂದು ಲೋಕವಿಖ್ಯಾತ ರಾದ ಶ್ರೀ ರಾಘವೇಂದ್ರರು ಬೃಂದಾವನದಲ್ಲಿ ವಿರಾಜಮಾನರಾಗಿರುವುದನ್ನು ಅವರು ಕಣ್ಣಾರೆ ಕಂಡರು.

"ಧೀರ ವೇಣುಗೋಪಾಲ" ಅಂಕಿತದಲ್ಲಿ ಕನ್ನಡ ಹರಿದಾಸ ಸಾಹಿತ್ಯವನ್ನು ವರ್ಧಿಸಿದ್ದ ಶ್ರೀ ರಾಘವೇಂದ್ರರು ಈ ಹರಿ ದಾಸದ್ವಯರು ಒಟ್ಟಾಗಿ ಆಗಮಿಸಿದ್ದನ್ನು ಬೃಂದಾವನದಿಂದಲೇ ನೋಡಿ ಆನಂದಿಸಿ ಆಶೀರ್ವದಿಸಿದರು. ಬೃಂದಾವನದಲ್ಲಿ ಕುಳಿತು. ಅಂಧಕರಿಗೆ ಚಕ್ಷು, ವಂಧ್ಯರಿಗೆ ಸುತರು, ಬಂದ ಬಂದವರಿಗೆ ಅಭೀಷ್ಟಗಳನ್ನೀಯುತ್ತಾ 'ಒಂದಾರು ನೂರು' ಸಂವತ್ಸರ ಮೆರೆವ ಕೃಪಾಸಿಂಧುವಿನ ದರ್ಶನ ಪಡೆದ ಗೋಪಾಲದಾಸರು ಬೃಂದಾವನದ ಮುಂದೆ ಕುಣಿದಾಡಿಬಿಟ್ಟರು.

ಮುಂದೆ ಮುಂದೆ ಮಂತ್ರಾಲಯ ಕ್ಷೇತ್ರದಲ್ಲಿ ನಡೆಯಲಿರುವ ವೈಭವಗಳೆಲ್ಲಾ ಅವರ ಕಣ್ಣಮುಂದೆ ಕಾಣಿಸಿದವು.

ಲೌಕಿಕದ ಅಪೇಕ್ಷೆಗಳು ಹಲವಾರು. ಅವಕ್ಕಾಗಿ ಬರುವ ಜನ ಸಹಸ್ರ ಸಹಸ್ರ. ಅವುಗಳನ್ನು ನೀಡುತ್ತಾ ತದ್‌ಮೂಲಕ ದೈವೀಶಕ್ತಿಯ ಅರಿವುಂಟು ಮಾಡಿ, ಜನರನ್ನು ಸನ್ಮಾರ್ಗದಲ್ಲಿ ಕರೆದೊಯ್ಯಲು ಸಂಕಲ್ಪ ಮಾಡಿಕೊಂಡು ಸಶರೀರರಾಗಿಯೇ ಬೃಂದಾವನ ಪ್ರವೇಶ ಮಾಡಿದ ಶ್ರೀ ರಾಘವೇಂದ್ರ ಗುರುಸಾರ್ವಭೌಮರ ಪ್ರತ್ಯಕ್ಷ ದರ್ಶನದಿಂದ ಆನಂದಗೊಂಡ ಗೋಪಾಲದಾಸರು ಅಲ್ಲಿ ಕೆಲವು ದಿನಗಳ ಕಾಲ ಸೇವೆ ಸಲ್ಲಿಸಿ ವಿಜಯರಾಯರ ಅಪ್ಪಣೆ ಪಡೆದು ಉತ್ತನೂರಿಗೆ ಹಿಂದಿರುಗಿದರು.

* * *

ರಾಯರ ದರ್ಶನವಾಗಿತ್ತು. ಭೂವೈಕುಂಠವಾಗಿ ರಾರಾಜಿಸುತ್ತಿರುವ ತಿರುಮಲ್ಲ - ಈಶನು ಅನುಗ್ರಹಿಸಿದ್ದ

ಈ ಮಹದಾನಂದದಲ್ಲಿ ಗೋಪಾಲದಾಸರ ಸಾಹಿತ್ಯ ನಿರ್ಮಾಣ ಕಾರ್ಯ ಎಡೆಬಿಡದೆ ನಡೆದಿತ್ತು. ಪ್ರತಿದಿನ ರಾತ್ರಿ ಭಜನೆಗೆ ಬರುವ ಜನ ಈ ಸಾಹಿತ್ಯವನ್ನು ಸವಿಯುತ್ತಿದ್ದರು.

ಒಂದು ದಿನ ಶ್ರೀ ವೆಂಕಟೇಶನ ಸನ್ನಿಧಾನದಲ್ಲಿ ಗೋಪಾಲದಾಸರು ನರ್ತನ ಸೇವೆ ಮುಗಿಸಿ ಆನಂದದಿಂದ ಕುಳಿತಿದ್ದರು. ಅದೇ ಸಂದರ್ಭಕ್ಕಾಗಿ ಕಾಯುತ್ತಿದ್ದ ಸೀನಣ್ಣ ದಾಸಣ್ಣರು ಅಣ್ಣನೊಂದಿಗೆ ಮೆಲ್ಲಗೆ ಮಾತು ಪ್ರಾರಂಭಿಸಿದರು.

"ಭಾಗಣ್ಣಾ" ಇಬ್ಬರೂ ಒಂದೇ ಸಲ ಸಂಬೋಧಿಸಿದ್ದರು.

ಗೋಪಾಲದಾಸರು ಕತ್ತೆತ್ತಿ ನೋಡಿದರು. 'ಯಾವುದೋ ಧಾರ್ಮಿಕ ಜಿಜ್ಞಾಸೆ ತಮ್ಮಂದಿರಲ್ಲಿ ಉದಯಿಸಿರಬೇಕು. ಅದನ್ನು ಪ್ರಶ್ನಿಸಲು ಪ್ರಯತ್ನಿಸುತ್ತಿದ್ದಾರೆಂದು ಗೋಪಾಲದಾಸರು 'ಗ್ರಹಿಸಿದರು.

"ವಿಜಯದಾಸರು ಕನ್ನಡ ಹರಿದಾಸ ಸಾಹಿತ್ಯ ವರ್ಧನೆಗಾಗಿ ಅವತರಿಸಿದವರು ಎಂಬುದೇನೋ ನಿಜ. ಪುರಂದರದಾಸರು ತಮ್ಮ ಸಾಹಿತ್ಯದಲ್ಲಿ ವಿಶ್ವದ ಬಹಳಷ್ಟು ಸಂಗತಿಗಳನ್ನು ವಿಸ್ತೃತವಾಗಿ ಹರಡಿದ್ದಾರೆ. ಅವರ ಶಿಷ್ಯರಾದ ವಿಜಯದಾಸರು ಅವರ ಹಾದಿಯಲ್ಲಿಯೇ ಸಾಗದೆ ತತ್ವ ಸಿದ್ಧಾಂತ ಪ್ರಮೇಯಗಳ ವಿವರಣೆಗೇ ಹೆಚ್ಚು ಆದ್ಯತೆ ಕೊಟ್ಟಂತೆ ಕಾಣುತ್ತಿದೆ. ಅವುಗಳನ್ನು ಸರಳವಾಗಿ ವಿವರಿಸುವ ಸುಳಾದಿಗಳತ್ತ ಶ್ರೀವಿಜಯದಾಸರ ಆಸಕ್ತಿ ಜಾಸ್ತಿ, ಹಾಗೇಕೆ?" ದಾಸಣ್ಣ ಪ್ರಶ್ನಿಸಿದ.

"ನೀವೂ ಅವರ ಹಾದಿಯಲ್ಲಿಯೇ ಸಾಗಿದ್ದೀರಿ. ನೀವು ಹಾಡಿದ ಕೆಲವು ಪದ ಸುಳಾದಿಗಳಂತೂ ಪಂಡಿತರಿಗೇ ಹೆಚ್ಚು ಶ್ರಮಿಸದೆ ಗೊತ್ತಾಗುವುದಿಲ್ಲ. ಬೌದ್ಧಿಕವಾಗಿ ಅತ್ಯಂತ ಕೆಳಮಟ್ಟದಲ್ಲಿರುವವರಿಗೆ ತತ್ವವಾದ ಸುಲಭವಾಗಿ ಅರ್ಥವಾಗುವಂತೆ ಮಾಡಬೇಕೆಂಬ ಸಾಹಿತ್ಯ ಧ್ಯೇಯದಿಂದ ಇವು ದೂರ ಹೋಗಿವೆ ಎಂದೆನಿಸುವುದಿಲ್ಲವೆ? ಸಮಾಜದ ಎಲ್ಲಾ ಜನರಿಗೂ ಬೇಕಾದ ವಿಷಯಗಳನ್ನು ಬಿಟ್ಟು, ಯಾವುದೋ ಒಂದು ವರ್ಗದ ಜನರಿಗೆ ಮಾತ್ರ ಹಿಡಿಸುವಂಥ ಸಾಹಿತ್ಯ ರಚನೆಗೆ ನೀವೇಕೆ ನಿಂತಿದ್ದೀರಿ? ಇದರಿಂದ 'ಸಂಕುಚಿತ ದೃಷ್ಟಿ' ಎಂಬ ಆಪಾದನೆ ನಿಮಗೆ ಬರುವುದಿಲ್ಲವೆ? ಇದೇ ಸರಿ ಸಂದರ್ಭವೆಂದು ತಿಳಿದ ಸೀನಣ್ಣ ತನ್ನ ಸಂಶಯವನ್ನೂ ಹೇಳಿಬಿಟ್ಟ.

ಗೋಪಾಲದಾಸರು ತಮ್ಮಂದಿರ ಪ್ರಶ್ನೆ ಕೇಳಿ ಒಮ್ಮೆ ಮುಗುಳ್ನಕ್ಕು ಪ್ರತಿ ಪ್ರಶ್ನೆಯನ್ನು ಅವರೇ ಹಾಕಿದರು.

"ತತ್ವ ಸಿದ್ಧಾಂತ ಪ್ರಮೇಯಗಳ ವಿವರಣೆಯೆಂದರೆ ಏನೆಂದು ಭಾವಿಸಿದ್ದೀರಿ?"

"ಶ್ರೀಮನ್ ಮಧ್ವಾಚಾರ್ಯರು ಬೋಧಿಸಿದ ದ್ವೈತ ಸಿದ್ಧಾಂತದ ವಿವರಣೆಯಲ್ಲವೆ?" ಸೀನಣ್ಣ ಕೇಳಿದ.

"ಹೌದು, ಶ್ರೀ ಮಧ್ವಾಚಾರ್ಯರು ಬೋಧಿಸಿದ್ದು ಯಾರಿಗೆ?"

"ಮಾಧ್ವರಿಗೆ" ಆಗ ತಾನೇ ಅಲ್ಲಿಗೆ ಬಂದು ಕುಳಿತ ರಂಗಣ್ಣ ತನ್ನ ಅಭಿಪ್ರಾಯ ತಿಳಿಸಿಬಿಟ್ಟ.

"ಮಾಧ್ವರು ಎಂದರೆ ಯಾರು" ಗೋಪಾಲದಾಸರ ಪ್ರಶ್ನೆ.

"ಶ್ರೀ ಮಧ್ವಾಚಾರ್ಯರ ಸಿದ್ಧಾಂತಗಳನ್ನು ಒಪ್ಪಿದವರು. ಅದರ ಸತ್ವತೆ ಹಾಗೂ ದೃಢತೆಯನ್ನು ಮನಗಂಡವರು" ರಂಗಣ್ಣ ತನಗೆ ಹೊಳೆದುದನ್ನು ತಿಳಿಸಿದ.

"ಅವರ ಸಿದ್ಧಾಂತದ ಶ್ರೇಷ್ಠತೆ ಮನಗಂಡವರಲ್ಲವೇ ಮಾಧ್ವರು? ಅವರಿಗೆ ಮತ್ತೇಕೆ ಹೇಳಬೇಕು? ತಾಯಿಗಿಂತ ಮೊದಲು ಮಗು ಹುಟ್ಟಿತ್ತು ಎಂದು ಹೇಳಿದಂತಾಗುತ್ತದೆ. ಶ್ರೀಮದಾಚಾರ್ಯರು ಜಗತ್ತಿಗೆಲ್ಲಾ ಬೋಧಿಸಿದರು. ಅದರ ಸತ್ಯತೆಯನ್ನು ಮನಗಂಡವರು ಅನುಸರಿಸಿ ಮಾಧ್ವರೆನಿಸಿದರು. ಮಾಧ್ವರೆನಿಸಿದವರ ಸಂತತಿ ಮುಂದುವರಿದು ಅವರೂ ಮಾಧ್ವರಾಗಿಯೇ ಪರಿಗಣಿಸಲ್ಪಟ್ಟರು. ತತ್ವ ಸಿದ್ಧಾಂತಗಳ ಪ್ರಾಥಮಿಕ ಪಾಠಗಳನ್ನೆ ಅರಿಯದವರು ಮಾಧ್ವರೆಂದು ಹೇಳಿಕೊಂಡು ಮುಂದುವರೆದರೆ ಅದಕ್ಕೆ ಯಾರು ಹೊಣೆ? ಎಮ್ಮೆಗೆ ವಾತವ್ಯಾಧಿ ಹಿಡಿಸಿದಾಗ ಶರೀರದ ಮೇಲೆ ಕೆಲವು ಕಡೆ ಬರೆಗಳನ್ನು ಹಾಕುತ್ತಾರೆ. ಅವುಗಳನ್ನು ನಾಮ ಮುದ್ರೆಗಳೆಂದು ಭಾವಿಸಿ 'ಮಾಧ್ವ' ಎಂದು ಕರೆಯಬಹುದೆ? ತತ್ವ ಸಿದ್ಧಾಂತಗಳನ್ನು ತಿಳಿಯಲು ಸ್ವಲ್ಪವೂ ಪ್ರಯತ್ನಿಸದೆ ಸುಮ್ಮನೆ ನಾಮ ಮುದ್ರೆಗಳನ್ನು ಹಾಕಿದರೆ ಅವರನ್ನೆಲ್ಲಾ ಮಾಧ್ವರೆನ್ನಲಾದೀತೆ? ಮಧ್ವ ಸಿದ್ಧಾಂತ ಎನ್ನುವುದು ಒಂದು ಕುಲವಲ್ಲ. ಒಂದು ತತ್ವದರ್ಶನ. ಶ್ರೀಮನ್ ಮಧ್ವಾಚಾರ್ಯರು ಇಡೀ ಜಗತ್ತಿಗೇ ಅದನ್ನು ತೋರಿದರು. ಧರ್ಮದ ಘನೀಭೂತವೆ ವೇದಗಳು, ಉಪನಿಷತ್ತುಗಳು. ವೇದವ್ಯಾಸರು ಕ್ರೋಢೀಕರಿಸಿ ಕೊಟ್ಟ ಈ ವೇದಗಳ ನಿಜ ಭಾವವನ್ನು ಅರಿತು ಅದನ್ನು ತೆರೆದು ತೋರಿದವರು ಶ್ರೀ ಮಧ್ವಾಚಾಯರು. ಅವರು ಇಡೀ ಜಗತ್ತಿಗೇ ಅದನ್ನು ತೋರಿದರು. ಭಗವಾನ್ ವೇದವ್ಯಾಸರ ಸತ್ಯದೃಷ್ಟಿಯನ್ನು ಬಿಡಿಸಿ ಹೇಳಿದರೆ ಅದನ್ನು ಮಾಧ್ವರಿಗೆ ಮಾತ್ರ ಎಂದೇಕೆ ಭಾವಿಸಬೇಕು? ಜಗತ್ತಿನ ಎಲ್ಲಾ ಜನರೂ ಇದನ್ನು ತಿಳಿಯಬೇಕೆಂದೇ ನಮ್ಮ ಅಪೇಕ್ಷೆ. ಇದರಿಂದ ಜಗತ್ತಿನ ಕಲ್ಯಾಣವಿದೆ. ಈ ತತ್ವದಂತೆ ನಡೆದ ವ್ಯಕ್ತಿಯ ಉನ್ನತಿ. ವ್ಯಕ್ತಿಗಳಿಂದಲೇ ಸಮಾಜ. ಸಮಾಜ ಕಲ್ಯಾಣ, "ಸಮಾಜದ ಸರ್ವಾಂಗೀಣ ಅಭಿವೃದ್ಧಿ" ಎನ್ನುವುದೇನೋ ಸುಂದರ ಶಬ್ದಗಳೇ! ಆದರೆ ಅದು ಹೇಗಾಗಬೇಕು? ವ್ಯಕ್ತಿಗಳು ಶುದ್ಧ ಜೀವನ ಸಂಕಲ್ಪಿತರಾದರೆ ಶುದ್ಧ ಸಮಾಜ ನಿರ್ಮಾಣವಾಗುವುದಿಲ್ಲವೆ? ಸಮಸ್ಯೆಯ ಮೂಲಕ್ಕೆ ಹೋಗಿ, ವ್ಯಕ್ತಿಗಳು ಸುಶೀಲ ಸಂವರ್ಧನೆಗೆ ನಡೆಸುವ ಪ್ರಯತ್ನ ಈ ಸಿದ್ಧಾಂತ. ಇದನ್ನು ವಿವರಿಸುವುದು ಶ್ರೀ ಪುರಂದರದಾಸರ ಕಾಲಕ್ಕಿಂತ ಈಗ ಹೆಚ್ಚು ಅವಶ್ಯವಿದೆ. ಆ ಕಾಲದಲ್ಲಿ ರಾಜಕೀಯ ಸುಭದ್ರತೆ ಇತ್ತು. ಜನಜೀವನದಲ್ಲಿ ಪ್ರಶಾಂತತೆ ಇತ್ತು. ತತ್ವ ಸಿದ್ಧಾಂತಗಳನ್ನು ತಿಳಿಯಲು ವಿಪುಲ ಅವಕಾಶಗಳಿದ್ದವು. ಗುರು ಸಾರ್ವಭೌಮ ಶ್ರೀ ವ್ಯಾಸರಾಯರು ಅವರ ವಿದ್ಯಾಗುರುಗಳಾದ ಶ್ರೀ ಶ್ರೀಪಾದರಾಜರು ಸ್ಥಾಪಿಸಿದ ವಿದ್ಯಾನಿಲಯಗಳು ಭರದಿಂದ ಕಾರ್ಯಪ್ರವೃತ್ತವಾಗಿದ್ದವು. ಹಾಗಿದ್ದರೂ ಶ್ರೀಪುರಂದರದಾಸರು ಸಿದ್ಧಾಂತ ಪ್ರಮೇಯಗಳ ವಿವರಣೆಗೆ ಒತ್ತು ಕೊಡದೆ ಬಿಡಲಿಲ್ಲ. ಈಗಂತೂ

ರಾಜಕೀಯ ಭದ್ರತೆ ಇಲ್ಲ. ಬ್ರಿಟಿಷರು ಫ್ರೆಂಚರು ಭಾರತದಲ್ಲಿ ಪ್ರವೇಶಿಸುತ್ತಿದ್ದಾರೆ. ಎಲ್ಲೆಲ್ಲಿಯೂ ಸಣ್ಣ ಪುಟ್ಟ ಸಂಸ್ಥಾನಗಳು. ಪರಸ್ಪರರಲ್ಲಿ ಕಚ್ಚಾಟ. ಬದುಕಿನಲ್ಲಿ ಭರವಸೆಯಿಲ್ಲ. ಸಿಕ್ಕಿದ್ದೇ ಲಾಭ. ಹೊಡೆದದ್ದೇ ದಕ್ಕುವುದು ಎನ್ನುವ ವಾತಾವರಣ. ಪರಮಾತ್ಮನೊಬ್ಬನಿದ್ದಾನೆ. ಆತ ಸತ್ಯ ಸಂಕಲ್ಪ. ಆತನ ಕೃಪೆ ಗಳಿಸಿರಿ. ಈಗಷ್ಟೇ ಅಲ್ಲ ಮುಂದೆ ಯಾವಾಗಲೂ ಕಾಯುವ ದೊರೆ ಎನ್ನುವ ಸತ್ಯ ಜನರಿಗೆ ಮನದಟ್ಟಾಗ ಬೇಕು. ಆಗ ಸಾಧಕನಿಗೆ ಸ್ಫೂರ್ತಿ ಸಿಕ್ಕುತ್ತದೆ. ತನ್ನ ಸಾಧನೆಯ ಫಲ ಈ ಶರೀರ ಹೋದ ಮೇಲೆಯೂ ಉಳಿಯುತ್ತದೆ ಎನ್ನುವ ವಿಷಯ ಅರಿವಾಗಬೇಕು. ಪಾಪ ಪುಣ್ಯಗಳೆಂಬ ವಿಂಗಡಣೆಯಲ್ಲಿ ಇಡೀ ಸಮಾಜಸ್ವಾಸ್ಥ್ಯದ ಬುನಾದಿಯಿದೆ. ಆ ಸಿದ್ಧಾಂತವನ್ನು ವಿವರಿಸುವ ಸಾಹಿತ್ಯ ಕೆಲವು ಜನರಿಗೆ ಮಾತ್ರ ಮೀಸಲು ಎನ್ನುವ ದೃಷ್ಟಿಯೇ ಸಂಕುಚಿತ ದೃಷ್ಟಿ. ನಾವು ಕಂಡ ಸತ್ಯ ಅಥವಾ ಅನುಭವಿಸಿದ ಅಲೌಕಿಕ ಆನಂದವನ್ನು ಪದಪದ್ಯಗಳಲ್ಲಿ ವಿವರಿಸಿದ್ದೇವೆ. ಕೆಲವರಿಗೆ ಅದು ಹಿಡಿಸುವುದಿಲ್ಲ ವೆಂದರೆ ಅದು ಪದಾರ್ಥದ ಲೋಪವಲ್ಲ. ರುಚಿ ಗ್ರಾಹ್ಯದ ನಾಲಿಗೆಯ ಲೋಪ. ನೋಡುವ ದೃಷ್ಟಿಯ ದೋಷ. ನಾವು ಕೆಲವರಿಗೆ ಮಾತ್ರವೆಂದು ಈ ಸಾಹಿತ್ಯ ನಿರ್ಮಿಸುತ್ತಿಲ್ಲ. ಸರ್ವರೂ ಗ್ರಹಿಸಿ ಉದ್ಧಾರವಾಗಲೆಂಬುದೇ ಹರಿದಾಸ ಸಾಹಿತ್ಯ ರಚನೆಯ ಉದ್ದೇಶ. ಇನ್ನು ಸುಳಾದಿ ಮಾಧ್ಯಮವನ್ನೇ ನಮ್ಮ ಗುರು ವಿಜಯದಾಸರು ಆರಿಸಿಕೊಳ್ಳುವುದಕ್ಕೆ ಕಾರಣವಿಲ್ಲದೆ ಇಲ್ಲ. ತತ್ವ ಸಿದ್ಧಾಂತಗಳನ್ನು ವಿಶಾಲವಾಗಿ ವಿವರಿಸಲು ವಿಸ್ತೃತ ವ್ಯವಸ್ಥೆ ಸುಳಾದಿ ಛಂದಸ್ಸಿನಲ್ಲಿದೆ. ಅಷ್ಟೇಕೆ; ಉಗಾಭೋಗ, ಪದ, ಸುವ್ವಾಲೆ ಎಲ್ಲಾ ಮಾದರಿಗಳಲ್ಲೂ ನಾವು ವಿವರಿಸುತ್ತಿಲ್ಲವೆ?"

"ಹೌದು. ಆದರೆ ಕೆಲವು ಬಹಳ ಕ್ಲಿಷ್ಟವಾಗಿವೆಯಲ್ಲಾ" ರಂಗಣ್ಣ ಪ್ರಶ್ನಿಸಿದ.

"ಹೌದು, ಅವುಗಳ ಅರ್ಥ ಗ್ರಹಿಸಲು ಸ್ವಲ್ಪ ಶ್ರಮಿಸಬೇಕು. ಶ್ರಮದಿಂದ ಸಿಕ್ಕ ಸಂಪತ್ತು ಹೆಚ್ಚು ಮೌಲ್ಯ ಹೊಂದಿರುತ್ತದೆ. ಕಷ್ಟದಿಂದ ಗಳಿಸಿದ್ದನ್ನು ಇಷ್ಟ ಬಂದಂತೆ ಹೇಗೆ ಖರ್ಚು ಮಾಡುವುದಿಲ್ಲವೋ ಶ್ರಮವಹಿಸಿ ಗ್ರಹಿಸಿದ ಅರ್ಥ ಶಾಶ್ವತವಾಗಿ ಬುದ್ಧಿಲೋಕದಲ್ಲಿ ಉಳಿಯುತ್ತದೆ. ಹಾಗೆಂದು ಎಲ್ಲಾ ಪದಪದ್ಯ ಸುಳಾದಿಗಳು ಕ್ಲಿಷ್ಟವಾಗಿಲ್ಲವಲ್ಲಾ? ಎಲ್ಲಾ ತರಗತಿಗಳಿಗೂ ಒಂದೇ ಪಾಠ ಹೇಳಲಿಕ್ಕಾದೀತೆ?" ಗೋಪಾಲದಾಸರು ವಿವರಿಸುತ್ತಿರುವಾಗಲೇ

"ಪುರಂದರದಾಸರು ಎಲ್ಲಾ ವಿಷಯಗಳನ್ನು ಹೇಳಿಲ್ಲವೆ?" ಸೀನಣ್ಣ ಮತ್ತೆ ಪ್ರಶ್ನಿಸಿದ.

"ಎಲ್ಲಾ ವಿಷಯಗಳನ್ನು ಹೇಳಿದ್ದಾರೆ. ಆದರೆ ಕಾಲ ಗರ್ಭದಲ್ಲಿ ಅನೇಕವು ಮರೆಯಾಗಿವೆ. ಯಾವ ವಿಷಯಗಳು ಹೆಚ್ಚು ಮರೆಯಾಗಿವೆಯೋ ಅವಕ್ಕೆ ಹೆಚ್ಚು ಪ್ರಾಶಸ್ತ್ಯ ಕೊಡಲು ನನ್ನ ಗುರುಗಳು ಸಂಕಲ್ಪಿಸಿದ್ದಾರೆ. ಅವರ ದಾರಿಯಲ್ಲಿಯೇ ನಾನು ಸಾಗುತ್ತಿದ್ದೇನೆ."

"ನಿಮ್ಮದೂ ಕಾಲಗರ್ಭದಲ್ಲಿ ಮರೆಯಾಗುವುದಿಲ್ಲವೆ?"

"ಖಂಡಿತಾ ಆಗುತ್ತವೆ. ಆದರೆ ಸೂರ್ಯ ಚಂದ್ರರು ನಿತ್ಯ ಉದಯಿಸಿ ನಿತ್ಯ ಕಣ್‌ಮರೆಯಾದಂತೆ ಸಾಹಿತ್ಯ ಪ್ರಕಾರಗಳು ಬದಲಾಗಬಹುದು. ಆದರೆ ಸಾಹಿತ್ಯದ ಗುರಿ ಬದಲಾಗುವುದಿಲ್ಲ. ಇಂದಿನ ಸಾಹಿತ್ಯದ ರೀತಿ - ಮುಂದೆ 'ಹಳೆಯ ಪದ್ಧತಿ' ಎಂಬ ಭಾವನೆ ಬಲಿಯಬಹುದು. 'ನಿನ್ನೆ'ಯನ್ನು ಕಳಿಸಿಯೇ 'ಇಂದು' ಬಂದಿದೆ. ಇಂದನ್ನು ಕಳಿಸಲು 'ನಾಳೆ' ಕಾಯುತ್ತಿದೆ. ಅದು ಕಾಲಧರ್ಮ. ಆದರೆ 'ಇಂದು' 'ನಿನ್ನೆ'ಯ ಅನುಭವವನ್ನು ಜೊತೆಗೂಡಿಸಿಕೊಂಡು ಬಂದಿದೆಯೆನ್ನುವುದನ್ನು ಮರೆತವರು ಮುಠ್ಠಾಳರಾಗುತ್ತಾರೆ. ನಾವು ರಚಿಸಿದ್ದೆಲ್ಲಾ ಉಳಿಯುತ್ತದೆ ಎಂದೇನೂ ನಾವು ನಂಬಿಲ್ಲ. ಆದರೆ ನಮ್ಮ ರಚನೆಯ ಸಾರವನ್ನು ಮುಂದಿನವರು ಪಡೆದು ಅದರ ತಳಹದಿಯ ಮೇಲೆ ಅವರೂ ಭವನಗಳನ್ನು ಕಟ್ಟಬೇಕು. ದಿನಗಳು ಬದಲಾಗಬಹುದು. ಸೂರ್ಯಚಂದ್ರರು ಬದಲಾಗುವುದಿಲ್ಲ. ಕಟ್ಟಡಗಳ ಮಾದರಿ ಬದಲಾಗ ಬಹುದು. ಆದರೆ ಕಟ್ಟಡ ನಿರ್ಮಿಸುವ ಭೂಮಿ ಬದಲಾಗುವುದಿಲ್ಲ. ಸಾಹಿತ್ಯ ಪ್ರಕಾರಗಳು ಬದಲಾಗಬಹುದು. ಸಾಹಿತ್ಯದ ಉದ್ದೇಶ ಬದಲಾಗುವುದಿಲ್ಲ. ಮುಂದಿನವರಿಗೆ ಅವಶ್ಯವಾದುದನ್ನು ಈಗ ಉಳಿಸಿಡುವುದೇ ನಮ್ಮ ಕರ್ತವ್ಯ. ಅದಕ್ಕಾಗಿ ಶ್ರಮಿಸೋಣ. ಅದೇ ಶ್ರೀಹರಿಯ ಇಚ್ಛೆ" ಗೋಪಾಲದಾಸರು ಬಿಡಿಸಿ ಬಿಡಿಸಿ ಹೇಳುತ್ತಿದ್ದರು.

ಅಷ್ಟರಲ್ಲಿಯೇ ಶೀನಣ್ಣ ತಾನು ಯಾವ ಕೋರಿಕೆ ಮಂಡಿಸಲು ಇಷ್ಟೆಲ್ಲಾ ಮಾತಿನ ಪ್ರಸ್ತಾಪ ತೆಗೆದಿದ್ದನೋ ಅದನ್ನು ನೇರವಾಗಿ ಹೇಳಿಬಿಟ್ಟ.

"ಅಣ್ಣಾ ಅದೇ ಕಾರ್ಯಕ್ಕೆ ನಮಗೂ ಅಪ್ಪಣೆ ಕೊಡಿ. ನೀವು 'ಅಂಕಿತ' ನೀಡಿ ಸಾಹಿತ್ಯ ರಚನೆಗೆ ನಮಗೂ ಮಾರ್ಗ ತೋರಿಸಿ. ನೀವು ತೋರಿದ ಮಾರ್ಗದಲ್ಲಿ ನಾವೂ ನಡೆದು ಆತ್ಮೋದ್ಧಾರ ಹಾಗೂ ಸಮಾಜೋದ್ಧಾರ ಕಾರ್ಯಗಳನ್ನು ಸವ್ಯಸಾಚಿಯಾಗಿ ಸಾಧಿಸುತ್ತೇವೆ. ನಮಗೆ 'ಅಂಕಿತ' ನೀಡಿ ಆಶೀರ್ವದಿಸಬೇಕು."

ತಮ್ಮನ ಪ್ರಾರ್ಥನೆಯಲ್ಲಿ ಅಡಗಿರುವ ಕಳಕಳಿ ಗೋಪಾಲದಾಸರಿಗೆ ತಿಳಿಯದೆ ಹೋಗಲಿಲ್ಲ.

ಅವರು ಹೇಳಿದರು.

"ಗುರುಗಳಾದ ವಿಜಯದಾಸರು ಈಗಾಗಲೇ, ದಿವಾನ್ ತಿಮ್ಮಣ್ಣಯ್ಯನವರಿಗೆ 'ವೇಣುಗೋಪಾಲ ವಿಠಲ' ಎಂಬ ಅಂಕಿತ ನೀಡಿದ್ದಾರೆ. ತಮ್ಮ ಆ ಶಿಷ್ಯನಿಂದ ಬ್ಯಾಗವಟ್ಟಿಯ ನರಸಿಂಹಾಚಾರ್ಯರಿಗೆ ಅಂಕಿತ ದೊರಕಿಸಿದ್ದಾರೆ. ಕಲ್ಲೂರು ಸುಬ್ಬಣ್ಣಾಚಾರ್ಯರಿಗೂ ತಿಮ್ಮಣ್ಣಯ್ಯನವರಿಂದ ಅಂಕಿತ ಸಿಕ್ಕಿದೆ. ಈ ಹರಿದಾಸ ಪಂಥ ಸತತವಾಗಿ ಮುಂದುವರಿದುಕೊಂಡು ಹೋಗುತ್ತದೆ ಎಂದು ಅವರು ಆಶೀರ್ವದಿಸಿದ್ದಾರೆ. ಹರಿದಾಸರ ದೊಡ್ಡ ಪಡೆಯೇ ನಿರ್ಮಾಣವಾಗುತ್ತಿದೆ. ಸಂಖ್ಯೆ ಬೆಳೆಸುವಲ್ಲಿ ಅವರಿಗೆ ಆಸಕ್ತಿಯಿಲ್ಲ. ಸತ್ವ ಬೆಳೆಸುವಲ್ಲಿ ಅವರಿಗೆ ತೃಪ್ತಿಯಿದೆ. ಸಾಕಷ್ಟು ಅಧ್ಯಯನ ಮಾಡಿದ ಮೇಲೆ ನಿಮಗೂ ಅಂಕಿತ ನೀಡುವಂತೆ ಅವರೇ ನಿರ್ದೇಶಿಸಿದ್ದಾರೆ. ಗದ್ವಾಲಕ್ಕೆ ಹೋಗಿ ಸುಬ್ಬಣ್ಣಯ್ಯನವರಿಗೂ, ದೀಕ್ಷೆ ನೀಡುವಂತೆ ಅವರ ಆದೇಶವಾಗಿದೆ. ಯಾರಿಗೆ ಸ್ವಾರ್ಥವಿಲ್ಲವೋ, ಸಮಾಜವನ್ನು ಮೇಲೆತ್ತಲು ಯಾರು ಕೃತ ಸಂಕಲ್ಪರಾಗಿದ್ದಾರೋ, ಅಂಥ ಸುಜೀವಿಗಳನ್ನೆಲ್ಲಾ ಉದ್ಧರಿಸಲು ಅವತರಿಸಿದ್ದಾರೆ ನಮ್ಮ ವಿಜಯದಾಸರು. ಹರಿದಾಸ ದೀಕ್ಷೆ ಎಂಬುದೇನೂ ಸುಲಭ ದಲ್ಲಿ ಸಿಕ್ಕುವ ಪರಿ ಅಲ್ಲ. ಜನ್ಮ ಜನ್ಮಗಳ ಸಾಧನೆಯ ನಂತರ ಅಂಥ ಅಪೇಕ್ಷೆ ಉದಯಿಸುತ್ತದೆ. ಅದನ್ನು ಒರೆ ಹಚ್ಚಿ ನೋಡಿ ಹರಿದಾಸ ದೀಕ್ಷೆ ನೀಡಲಾಗುತ್ತದೆ. ನೀವು ನಮ್ಮ ಗುರುಗಳ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದೀರಿ. ನಿಮ್ಮಿಂದ ಹರಿದಾಸ ಸಾಹಿತ್ಯ ವರ್ಧಿಸುತ್ತದೆ. ಇನ್ನು ಕೆಲವೇ ದಿನಗಳಲ್ಲಿ ನಿಮಗೆ ಅಂಕಿತ ನೀಡುತ್ತೇನೆ" ಎಂದು ಗೋಪಾಲದಾಸರು ಭರವಸೆ ನೀಡಿದಾಗ ತಮ್ಮಂದಿರು ಆನಂದದಿಂದ ಕುಣಿದಾಡಿಬಿಟ್ಟರು.

ಕೆಲವು ದಿನಗಳ ಸಾಧನೆಯ ನಂತರ ಗೋಪಾಲದಾಸರು ಇಬ್ಬರಿಗೂ ಬಿಂಬ ದರ್ಶನ ಮಾಡಿಸಿದರು. ರಂಗಣ್ಣನಿಗೆ ಕೆಲವು ಕಾಲಾನಂತರ ಅಂಕಿತ ನೀಡುವುದಾಗಿ ಭರವಸೆ ಕೊಟ್ಟರು.

ಇಬ್ಬರು ತಮ್ಮಂದಿರಿಗೆ ಅವರು ನೀಡಿದ ಅಂಕಿತ - :

ಗುರು ಗೋಪಾಲ ವಿಠಲ

ವರದ ಗೋಪಾಲ ವಿಠಲ

***

ವಿಜಯದಾಸರ ನೇತೃತ್ವದಲ್ಲಿ ನಾಲ್ಕೂ ಜನ ಅಣ್ಣ ತಮ್ಮಂದಿರು ಕಾಶಿ ಯಾತ್ರೆಗೆ ಹೊರಟರು. ಕಡೆಯ ತಮ್ಮ ರಂಗಣ್ಣನನ್ನು ಈ ಸಲ ಕರೆದೊಯ್ದಿದ್ದಕ್ಕೆ ವಿಶೇಷ ಕಾರಣವಿದ್ದಿತು. ಆತನಿಗೆ ಸೂಕ್ತ ಶಿಕ್ಷಣ ನೀಡಬೇಕೆಂಬ ಹಿರಿಯ ಉದ್ದೇಶವೇ ಅದಕ್ಕೆ ಕಾರಣ.

ಸಂದರ್ಶಿಸಿದ ಪ್ರತಿ ಕ್ಷೇತ್ರದ ಮಹಿಮೆಯನ್ನು ವಿಜಯದಾಸರೋ, ಗೋಪಾಲದಾಸರೋ ಸಹ ಯಾತ್ರೀಕರಿಗೆ ವಿವರಿಸುತ್ತಿದ್ದರು.

ಈ ಯಾತ್ರೆಯಲ್ಲಿ ರಂಗಣ್ಣನಿಗೆ ಒಂದು ವಿಷಯ ಮಾತ್ರ ಬೇಗ ಅರ್ಥವಾಗಲಿಲ್ಲ.

ಗೋಪಾಲದಾಸರು ಜೀವನದಲ್ಲಿ ಅನುಸರಿಸಿಕೊಂಡು ಬಂದ ವೈಭವದ ಕ್ರಮ ರಂಗಣ್ಣನಿಗೆ ವಿಶೇಷವಾಗಿ ಕಂಡಿರಲಿಲ್ಲ. ಯಾವಾಗಲೂ ಜರಿಪೇಟವೇ ಬೇಕು ಗೋಪಾಲದಾಸರಿಗೆ. ಎಣ್ಣೆ ಸ್ನಾನವೆಂದರೆ ಬಹು ಪ್ರೀತಿ ಅವರಿಗೆ. ಮೈಗೆಲ್ಲಾ ಗಂಧ ಲೇಪಿಸಿಕೊಂಡು ಸುವಾಸನೆ ಬೀರುವ ತೈಲವನ್ನು ತಲೆಗೆ ಹಚ್ಚಿ ಪ್ರತಿನಿತ್ಯ ಸುಖೀ ಭೋಜನೆ ಮಾಡುವ ತಮ್ಮ ಅಣ್ಣನ ಕ್ರಮದಲ್ಲಿ ಹೆಚ್ಚುಗಾರಿಕೆಯಿದೆಯೆಂದೇನೂ ರಂಗಣ್ಣನಿಗೆ ಮೊದಲು ಅನಿಸಿರಲಿಲ್ಲ.

ಕಾಶೀಯಾತ್ರೆಯ ಕಾಲದಲ್ಲಿ ಅಣ್ಣನ ಜೀವನಕ್ರಮದಲ್ಲಿಯ ಈ ವೈಶಿಷ್ಟ್ಯವನ್ನು ರಂಗಣ್ಣ ಗಮನಿಸಿದ.

ದಿನಕ್ಕೆ ಎರಡು ಮೂರು ಗಾವುದ ದೂರ ಕ್ರಮಿಸಿದರೂ ವಿಜಯದಾಸರು ನಡೆದೇ ಪ್ರಯಾಣಿಸುತ್ತಿದ್ದರು. ಗೋಪಾಲದಾಸರು ಕುದುರೆಯ ಮೇಲೆ ಭರ್ಜರಿಯಾಗಿ ಕುಳಿತುಕೊಂಡೇ ಪ್ರಯಾಣ ಮಾಡುತ್ತಿದ್ದರು. ಇದರ ಕಾರಣ ರಂಗಣ್ಣನಿಗೆ ಹೊಳೆಯಲಿಲ್ಲ.

ಗುರುಗಳ ಬಗ್ಗೆ ಗೋಪಾಲದಾಸರಿಗಿದ್ದ ಭಕ್ತಿ ಎಷ್ಟು ಆಳವಾದುದೆಂದು ರಂಗಣ್ಣನಿಗೆ ಗೊತ್ತಿದ್ದಿತು. ವಿಜಯದಾಸರು ನಿದ್ರಿಸುವವರೆಗೂ ಗೋಪಾಲದಾಸರು ಕಾಲು ಒತ್ತುತ್ತಾ ಕುಳಿತಿರುತ್ತಿದ್ದರು. ವಿಜಯದಾಸರು ಉಂಡ ಎಲೆಯನ್ನು ತೆಗೆಯುವ ಕಾರ್ಯ ಯಾವಾಗಲೂ ಗೋಪಾಲದಾಸರದ್ದೆ. ಗುರುಗಳ ಆಹ್ನೀಕ ಕ್ರಮಗಳಿಗೆ ಸಾಮಗ್ರಿಗಳನ್ನು ಒದಗಿಸುವುದೂ ಅವರಿಗೇ ಸೇರಿತ್ತು. ಇಷ್ಟೆಲ್ಲಾ ಇದ್ದರೂ ವಿಜಯದಾಸರ ಜೀವನ ಕ್ರಮದಂತೆ ಕೆಲವು ವಿಷಯಗಳಲ್ಲಿ ಗೋಪಾಲದಾಸರು ಭಿನ್ನವಾಗಿ ವರ್ತಿಸುತ್ತಿದ್ದರು.

ಲೌಕಿಕ ಸೌಲಭ್ಯಗಳ ಬಗ್ಗೆ ವಿಜಯದಾಸರು ತೋರುತ್ತಿದ್ದ ನಿರಾಸಕ್ತಿ ಗೋಪಾಲದಾಸರಿಗೆ ಇರಲಿಲ್ಲ. ಗುರುಗಳು ನಡೆಯುವ ಪ್ರತಿ ಹೆಜ್ಜೆಯನ್ನು ಅನುಸರಿಸುವ ಭಾಗಣ್ಣ ನಿತ್ಯ ಜೀವನ ಕ್ರಮದಲ್ಲಿ ಗುರುಗಳ ಕ್ರಮವನ್ನು ಏಕೆ ಅನುಸರಿಸುತ್ತಿಲ್ಲ? ಗುರುಗಳಲ್ಲಿರುವ ವೈರಾಗ್ಯ ಶಿಷ್ಯನಲ್ಲಿ ಏಕೆ ಬರಲಿಲ್ಲ?

ಪ್ರತಿ ವಿಷಯವನ್ನು ವಿವರಿಸಿ ಶಿಷ್ಯನನ್ನು ಆಧ್ಯಾತ್ಮದ ಮೇಲ್ಮಟ್ಟಕ್ಕೆ ಕರೆದೊಯ್ಯುತ್ತಿದ್ದ ವಿಜಯದಾಸರು ಈ ಒಂದು ವಿಷಯದಲ್ಲಿ ಮಾತ್ರ ಶಿಷ್ಯನಿಗೆ ಏಕೆ ಹೇಳಲೊಲ್ಲರು?

ವೃದ್ಧರಾದ ಗುರುಗಳು ಕಾಲು ನಡುಗೆಯಲ್ಲಿ ಹೋಗುತ್ತಿದ್ದಂತೆ ಸಣ್ಣ ವಯಸ್ಸಿನ ಶಿಷ್ಯ ಕುದುರೆ ಸವಾರಿಯಲ್ಲಿ ಪ್ರಯಾಣಿಸುವುದೆ?

ವಿಜಯದಾಸರು ಒಮ್ಮೆ ಇದ್ದಕ್ಕಿದ್ದಂತೆ ನೀರು ಎಂದು ಕೇಳಿ ಕುಳಿತುಬಿಟ್ಟರು. ಗುರುಗಳ ಕೋರಿಕೆ ತಿಳಿದದ್ದೇ ತಡ; ಗೋಪಾಲದಾಸರು ಕೂಡಲೇ ಕುದುರೆಯಿಂದ ಇಳಿದುಬಿಟ್ಟರು. ಸೂರ್ಯ ನಡು ನೆತ್ತಿಗೇರಿದ್ದ. ಬಿಸಿಲಿನ ಕಾವು ನೆಲವನ್ನು ಕಾದ ಹಂಚಿನಂತೆ ಮಾಡಿತ್ತು. ಆದರೂ ಗೋಪಾಲದಾಸರು ನೀರು ಅರಸಿಕೊಂಡು ಬರಿಗಾಲಿನಿಂದ ಹೊರಟರು. ಎಲ್ಲೆಲ್ಲಿಯೋ ಅಡ್ಡಾಡಿ ಅವರು ನೀರು ತಂದು ಕೊಟ್ಟಾಗ ಅವರ ಕಾಲುಗಳಲ್ಲಿ ಬೊಬ್ಬೆ ಎದ್ದಿದ್ದನ್ನು ರಂಗಣ್ಣ ಗಮನಿಸಿದ.

ಗುರುಗಳ ಸೇವೆಗಾಗಿ ಎಷ್ಟೇ ಕಷ್ಟವನ್ನಾದರೂ ಭರಿಸಲು ಸಿದ್ಧನಿರುವ ತಮ್ಮ ಅಣ್ಣ-ಪ್ರಯಾಣದಲ್ಲಿ ಗುರಗಳು ನಡೆದು ಹೋಗುವಾಗ ತಾವು ಕುದುರೆಯಲ್ಲಿ ಪ್ರಯಾಣಿಸುವುದೇಕೆ?

ತಮ್ಮಣ್ಣ ದೂರದಲ್ಲಿದ್ದ ಸಮಯವನ್ನು ನೋಡಿ ರಂಗಣ್ಣ ವಿಜಯದಾಸರಲ್ಲಿ ಈ ಬಗ್ಗೆ ಪ್ರಶ್ನಿಸಿಯೇ ಬಿಟ್ಟ.

ವಿಜಯದಾಸರು ಹೇಳಿದರು

"ನಿಮ್ಮಣ್ಣ ದೊಡ್ಡ ಸಾಧನಾ ಜೀವಿಯಪ್ಪಾ. ಪುಣ್ಯಮೂರ್ತಿ ಅವನು. ದೇವತಾ ಗಣಕ್ಕೆ ಸೇರಿದವನು. ಅವನಲ್ಲಿರುವ ಪರಮಾತ್ಮ ವೈಭವ ಬಯಸಿದ್ದಾನೆ. ದೇವಗಣಕ್ಕೆ ಅನುಗುಣವಾಗಿ ಅವನು ಜೀವನ ನಿರ್ವಹಿಸಬೇಕು. ಆದರೆ ಅದು ತನಗೆ ಎಂದು ಮಾತ್ರ ಅವನೆಂದೂ ಭಾವಿಸಿಲ್ಲ. ಈಗ ಮೆಲ್ಲಗೆ ಹೋಗಿ ನಿಮ್ಮಣ್ಣ ಏನು ಮಾಡುತ್ತಿದ್ದಾನೆಂದು ಪರೀಕ್ಷಿಸಿ ನೋಡಿ ಬಾ" ಎಂದು ಹೇಳಿ ರಂಗಣ್ಣನ ತಲೆಯ ಮೇಲೆ ಕೈಯಾಡಿಸಿ ಕಳಿಸಿಕೊಟ್ಟರು.

ಅಣ್ಣ ಕಾಲ ಕೆಳಗೆ ಮೆತ್ತೆ ಇಟ್ಟುಕೊಂಡು ಆರಾಮವಾಗಿ ಕಾಲು ಚಾಚಿ ತಾಂಬೂಲ ಮೆಲ್ಲುತ್ತಾ ಕುಳಿತಿದ್ದಾನೆ. ತಾಂಬೂಲಕ್ಕೆ ಹಾಕಿದ ವಿವಿಧ ಸುವಾಸನಾ ವಸ್ತುಗಳು ಪಕ್ಕದಲ್ಲಿಯೇ ಇವೆ.

ಸ್ವಲ್ಪ ಹೊತ್ತು ಪರೀಕ್ಷಿಸಿ ನೋಡುತ್ತಿದ್ದ ರಂಗಣ್ಣ ಕ್ರಮೇಣವಾಗಿ ಕೈ ಮುಗಿದುಬಿಟ್ಟ.

ಅಲ್ಲಿ ರಂಗಣ್ಣ ನೋಡಿದ್ದೂ ಏನು?

ಗೋಪಾಲದಾಸರಲ್ಲಿರುವ ಪರಮಾತ್ಮನ ಒಂದು ರೂಪ ಈ ತಾಂಬೂಲ ವನ್ನು ಪಡೆಯುತ್ತಿತ್ತು! ಗೋಪಾಲದಾಸರು ಅದನ್ನು ಭಕ್ತಿಯಿಂದ ಸಮರ್ಪಿ ಸುತ್ತಿದ್ದರು. ಮೊದಲ ನೋಟಕ್ಕೆ ತಾಂಬೂಲ ಮೆಲ್ಲುತ್ತಿದ್ದಂತೆ ಕಾಣಿಸಿದರೂ ಆ ತಾಂಬೂಲವನ್ನು ಅವರು ಗೋಪಾಲವಿಠಲನಿಗೆ ಸಮರ್ಪಿಸುತ್ತಿದ್ದರು.

ಅಣ್ಣನಿಗೆ ದೂರದಲ್ಲಿಂದಲೇ ಶಿರ ಸಾಷ್ಟಾಂಗ ನಮಸ್ಕಾರ ಹಾಕಿ ವಿಜಯ ದಾಸರು ಮೊದಲೇ ಸೂಚಿಸಿದಂತೆ ಅವರಿಗೆ ತಿಳಿಸಿದೆ ಹಿಂದಿರುಗಿಬಿಟ್ಟ.

ಆಧ್ಯಾತ್ಮ ಕ್ಷೇತ್ರದಲ್ಲಿ ದೊಡ್ಡವರ ಜೀವನಕ್ರಮ ಕೆಲವೊಮ್ಮೆ ಲೋಕವಿಚಿತ್ರ ವಾಗಿ ಕಾಣುತ್ತವೆ. ಆದರೆ ಅವರ ಅನುಸಂಧಾನಮಟ್ಟ, ಮಟ್ಟಕ್ಕನುಗುಣವಾದ ಶಿಷ್ಟ ಕ್ರಮ ಗ್ರಹಿಸಲು ಎಲ್ಲರಿಂದ ಹೇಗೆ ಸಾಧ್ಯ? ತನಗೇನೋ ವಿಜಯದಾಸರು ಅನುಗ್ರಹಿಸಿ ಕಳಿಸಿದ್ದರಿಂದ ಅದನ್ನು ತಿಳಿಯುವುದಕ್ಕೆ ಸಾಧ್ಯವಾಯಿತು. ಅಣ್ಣನು ದೇವಗಣದವನೆಂದು ವಿಜಯದಾಸರು ಹೇಳಿದ್ದಾರೆ. ದೇವಗಣಕ್ಕನುಗುಣವಾಗಿ ಅಣ್ಣ ನಡೆದುಕೊಳ್ಳಬೇಕು. ಕುದುರೆಯಲ್ಲಿ ಪ್ರಯಾಣಿಸಬೇಕು. ವೈಭವ ಜೀವನ ನಡೆಸಬೇಕು. ಅದು ಅವರ ಜೀವನಕ್ರಮ.

ಆದರೆ ವಿಜಯದಾಸರು ಏಕೆ ಹಾಗೆ ಜೀವನ ನಿರ್ವಹಿಸುತ್ತಿಲ್ಲ? ಅದನ್ನು ಕೇಳಿಯೇ ಬಿಟ್ಟ ರಂಗಣ್ಣ.

"ನನ್ನದು ಋಷಿವರ್ಗದ ಜೀವನವಪ್ಪಾ, ಅದಕ್ಕನುಗುಣವಾಗಿ ಪರಮಾತ್ಮ ಸೇವೆ ಸ್ವೀಕರಿಸುತ್ತಾನೆ. ನಿಮ್ಮಣ್ಣನ ಜೀವನ ಕ್ರಮ ನನಗೆ ಒಪ್ಪಿಗೆಯಾಗಿದೆ. ಅದು ಅವನ ಮೂಲ ಸ್ವರೂಪಕ್ಕನುಗುಣವಾದ ಕಾರ್ಯ. ನನ್ನ ಮೂಲ ಸ್ವರೂಪ ನಿಮ್ಮಣ್ಣನಿಗೆ ಗೊತ್ತು. ಆದ್ದರಿಂದ ನನ್ನನ್ನು ತನ್ನ ರೀತಿಯಲ್ಲಿ ಜೀವನ ನಿರ್ವಹಿಸ ಬೇಕೆಂದು ಅವನು ಅಪೇಕ್ಷಿಸುವುದಿಲ್ಲ. ಅವನ ರೀತಿ ಅವನಿಗೆ. ನನ್ನ ರೀತಿ ನನಗೆ.

ಇವೆಲ್ಲಾ ದೈವೀ ರಹಸ್ಯಗಳು. ಇಷ್ಟು ವಿಷಯ ತಿಳಿದುಕೊಂಡರೆ ಸಾಕು. ಇದಕ್ಕಿಂತ ಹೆಚ್ಚಿಗೆ ತಿಳಿಯಲು ಈಗಲೇ ಆತುರ ತೋರಬೇಡ" ವಿಜಯದಾಸರು ಹೇಳಿದಾಗ ರಂಗಣ್ಣ ಅವರ ಕಾಲುಗಳಿಗೆ ನಮಸ್ಕರಿಸಿಬಿಟ್ಟ. ಅಣ್ಣನ ಭವ್ಯ ಜೀವನದ ದಿವ್ಯ ಸಂಗತಿಗಳು ಅವನಿಗೆ ಹೊಳೆದಿತ್ತು. ಅಂಥ ತನ್ನಣ್ಣನೇ ಪರಮ ಭಕ್ತಿಯಿಂದ ಸೇವೆ ಸಲ್ಲಿಸುತ್ತಿರುವ ವಿಜಯದಾಸರ ಮಹಾನ್ ಚೇತನದ ಕಲ್ಪನೆ. ಸ್ವಲ್ಪ ಸ್ವಲ್ಪ ಹೊಳೆದು ಅಂಥವರ ದರ್ಶನ ಪಡೆಯುತ್ತಿರುವ ತಾನೇ ಧನ್ಯ ಎಂದು ಹೊಳೆದಾಗ ಅವನ ಕಣ್ಣಲ್ಲಿ ಆನಂದಾಶ್ರು ಮಿಂಚಿತ್ತು.

ಕಾಶೀಯಾತ್ರೆಯ ಉದ್ದಕ್ಕೂ ರಂಗಣ್ಣನಿಗೆ ನಿತ್ಯನೂತನ ಅನುಭವಗಳು.

ಪ್ರತಿನಿತ್ಯ ಪಾಠ ಪ್ರವಚನ. ರಾತ್ರಿ ವೇಳೆಯಲ್ಲಿ ತಾರತಮ್ಯೋಕ್ತ ಭಜನೆ. ಅಲ್ಲಲ್ಲಿ ಕ್ಷೇತ್ರಮೂರ್ತಿಗಳ ದರ್ಶನ, ಸಂದರ್ಶಿಸಿದ ಗ್ರಾಮಗಳಲ್ಲಿ ನೆರೆದ ಜನಕ್ಕೆ ಗುರುಗಳು ನೀಡುತ್ತಿದ್ದ ಹಿತವಚನ - ಇವೆಲ್ಲ ಜೀವನಕ್ಕೆ ಮಾರ್ಗದರ್ಶನ. ಇವುಗಳಿಂದ ದೊಡ್ಡವರು ಕ್ಷೇತ್ರಯಾತ್ರೆ ಏಕೆ ಮಾಡುತ್ತಾರೆಂಬ ವಿಷಯ ರಂಗಣ್ಣನಿಗೆ ಮನದಟ್ಟಾಯಿತು.

***

ಉತ್ತನೂರಿಗೆ ಬಂದ ಗೋಪಾಲದಾಸರು ತಮ್ಮಿಂದ ಮಾರ್ಗದರ್ಶನ ಪಡೆದಿದ್ದ ವೆಂಕಟರಾಮಾಚಾರ್ಯರು ಶಿಷ್ಯರ ಅನುಕೂಲಕ್ಕಾಗಿ ವೇಣಿಸೋಮಪುರಕ್ಕೆ ಮನೆ ಬದಲಾಯಿಸಿದ್ದಾರೆಂದೂ, ಅಲ್ಲಿ ಪ್ರತಿನಿತ್ಯ ನೂರಾರು ಜನರಿಗೆ ಪಾಠ ಹೇಳುತ್ತಿರುವರೆಂದೂ ಕೇಳಿ ಮಹದಾನಂದ ಪಟ್ಟರು. ಅವರು ತಮ್ಮಂದಿರನ್ನು ಕರೆದುಕೊಂಡು ವೇಣಿಸೋಮಪುರಕ್ಕೆ ಬಂದರು.

ತಮ್ಮ ಸ್ವಂತ ಖರ್ಚಿನಿಂದ ನೂರಾರು ವಿದ್ಯಾರ್ಥಿಗಳಿಗೆ ಅನ್ನದಾನ ಮಾಡುತ್ತಾ ವಿದ್ಯಾಭಿಕ್ಷೆಯನ್ನು ನೀಡುತ್ತಿರುವ ರಾಮಾಚಾರ್ಯರ ಕರುಣಾಶೀಲತ್ವ ಕಂಡು ಅವರಿಗೆ ಬಹಳ ತೃಪ್ತಿ ಎನಿಸಿತು.

ಅಲ್ಲಿ ರಾಮಾಚಾರ್ಯರು ಶಿಷ್ಯರಿಗೆ ಹೇಳುತ್ತಿದ್ದ ಪಾಠಕ್ರಮಗಳನ್ನು ನೋಡಿ ಗೋಪಾಲದಾಸರು ತುಂಬಾ ಆನಂದ ಪಟ್ಟರು.

ಮಧ್ವ ಸಿದ್ಧಾಂತದ ಮಹತ್ತತೆ ಬಹಳ ಜನರಿಗೆ ಅರ್ಥವಾಗುತ್ತಿಲ್ಲ. ಅದರ ಪ್ರಮೇಯಗಳು ಹಲವು ತಪ್ಪು ಕಲ್ಪನೆಗಳಿಗೆ ಎಡೆಕೊಟ್ಟಿವೆ. ಅದನ್ನು ಪರಿಹರಿಸಲು

ಪಂಡಿತರ ದೊಡ್ಡ ಪಡೆಯನ್ನೇ ಕಟ್ಟಬೇಕಾಗಿದೆ. ಈ ಜ್ಞಾನಸಿಪಾಯಿಗಳಿಂದ ಜಿಜ್ಞಾಸಾಮಯ ಸುಜೀವಿಗಳಿಗೆ ವಿವರಣೆಯ ರಕ್ಷಣೆ ಸಿಕ್ಕಬೇಕಾಗಿದೆ. ಅಂಥ ಪಡೆ ಕಟ್ಟುವ ಕಾರ್ಯ ರಾಮಾಚಾರ್ಯರಿಂದ ಆಗುತ್ತಿರುವುದನ್ನು ಕಂಡು ಗೋಪಾಲದಾಸರು ಮುಕ್ತಮನದಿಂದ ಪ್ರಶಂಸಿಸಿದರು.

ಗೋಪಾಲದಾಸರು ರಾಮಾಚಾರ್ಯರೊಂದಿಗೆ ಪ್ರಮೇಯ ಭಾಗವೊಂದರ ಬಗ್ಗೆ ಜಿಜ್ಞಾಸೆ ನಡೆಸಿದ್ದರು . ಮಾತು ಮಾತು ಆಡುತ್ತಾ ಇರುವಾಗಲೇ ಸೂರ್ಯ ಅಸ್ತಂಗಿಸಿದ್ದನ್ನು ಕಂಡು ರಾಮಾಚಾರ್ಯರು ಸಂಧ್ಯಾವಂದನಕ್ಕೆ ಹೊತ್ತಾಯಿತೆಂದು ಚಡಪಡಿಸಿ ಎದ್ದರು. ಸಂಧ್ಯಾವಂದನ ಕ್ರಮದಲ್ಲಿ ಬಾಲ್ಯದಲ್ಲಿಯೇ ಸಿದ್ಧಿ ಪಡೆದ ಗೋಪಾಲದಾಸರು ಕುಳಿತಿರುವಾಗಲೇ ರಾಮಾಚಾರ್ಯರು ಸಂಧ್ಯಾವಂದನಕ್ಕೆಂದು ಎದ್ದಿದ್ದರು.

ಗೋಪಾಲದಾಸರು ಹೇಳಿದರು.

"ಸಂಧ್ಯಾವಂದನಕ್ಕೆ ನೀವು ಎದ್ದುದೇನೋ ಸರಿ. ಆದರೆ ಅದರ ಕ್ರಮದಲ್ಲಿ ಬರುವ ಪ್ರಾಯಶ್ಚಿತಾರ್ಘ್ಯ ನೀವು ನೀಡಬೇಕಾಗಿಲ್ಲ ಆಚಾರ್ಯರೆ. ಈಗಿನ್ನೂ ಹೊತ್ತಾಗಿಲ್ಲ" ಎಂದು ಗೋಪಾಲದಾಸರು ನುಡಿದಾಗ ಆಚಾರ್ಯರಿಗೆ ಆಶ್ಚರ್ಯವಾಗಿ ಹೋಯಿತು.

ಗೋವುಗಳೆಲ್ಲಾ ಹಟ್ಟಿಗೆ ಹಿಂದಿರುಗಿವೆ. ಕತ್ತಲೆಯಾಗಿರುವುದರಿಂದ ಹಲವು ಮನೆಗಳಲ್ಲಿ ದೀಪಗಳು ಬೆಳಗುತ್ತಿವೆ. ಸಂಧ್ಯಾವಂದನೆಯ ಕ್ರಮದಲ್ಲಿ ವೇಳೆ ಮೀರಿದಾಗ ಒಂದು ಅರ್ಘ್ಯ ಹೆಚ್ಚಿಗೆ ನೀಡುವ ಆಚಾರ ಅನೂಚಾನವಾಗಿ ಬಂದಿದೆ. ಅದನ್ನು ಈ ದಿನ ಬೇಡವೆಂದು ಗೋಪಾಲದಾಸರು ಹೇಳುತ್ತಿರುವುದೇಕೆಂದು ಆಚಾರ್ಯರಿಗೆ ಅರ್ಥವಾಗಲಿಲ್ಲ.

ರಾಮಾಚಾರ್ಯರಲ್ಲಿ ಹುಟ್ಟಿದ ಈ ಸಂಶಯವನ್ನು ಅರಿತ ಗೋಪಾಲದಾಸರು ನಗುತ್ತಾ ಹೇಳಿದರು. "ಹೊರಗೆ ಹೋಗಿ ನೋಡಿಕೊಂಡು ಬನ್ನಿ ಆಚಾರ್ಯರೆ"

ರಾಮಾಚಾರ್ಯರು ಹೊರಗೆ ಹೊರಡಲು ಅನುವಾದರು. ಕತ್ತಲಿದ್ದುದರಿಂದ ಕಾಲಿಗೆ ಪಾತ್ರೆಯೊಂದು ತಗುಲಿ ಉರುಳಿ ಬಿತ್ತು. ಅದನ್ನು ಕಂಡು ಇನ್ನೂ ಕತ್ತಲಾಗಿಲ್ಲ. ಸೂರ್ಯಾಸ್ತವಾಗಿಲ್ಲ ಎನ್ನುವ ಗೋಪಾಲದಾಸರ ಮಾತು ಯಾವ ಕ್ರಮ ಎಂದು ಆಚಾರ್ಯರಿಗೆ ಅನಿಸದೆ ಹೋಗಲಿಲ್ಲ. ಆದರೂ ದಾಸರ ಬಗ್ಗೆ ಅವರಿಗಿರುವ ಪೂಜ್ಯತೆಯಿಂದಾಗಿ ಹೊರಗೆ ಹೋಗಿ ನೋಡಿದರು.

ಪಶ್ಚಿಮದಲ್ಲಿ ಸೂರ್ಯ ಪ್ರಕಾಶಮಾನವಾಗಿ ವಿರಾಜಿಸುತ್ತಿದ್ದಾನೆ. ಸುತ್ತ ಕತ್ತಲಾವರಿಸಿದ್ದರೂ ಇವರಿಗೆ ಮಾತ್ರ ಸೂರ್ಯದರ್ಶನವಾಯಿತು.

ರಾತ್ರಿ ವೇಳೆಯೂ ಸೂರ್ಯದರ್ಶನ ಮಾಡಿಸಿದ ಗೋಪಾಲದಾಸರ ಶಕ್ತಿ ಕಂಡು ಆಚಾರ್ಯರು ಮಾರು ಹೋಗಿಬಿಟ್ಟರು.

"ನನ್ನ ತಂದೆಗೆ ಆ ದಿನ ಮಾರುತಿಯ ದರ್ಶನ ಮಾಡಿಸಿದಿರಿ. ಈ ದಿನ ಸೂರ್ಯಾಂತರ್ಗತ ಸವಿತ್ರ ನಾಮಕ ಪರಮಾತ್ಮನನ್ನು ನನಗೆ ನೋಡುವ ಭಾಗ್ಯ ನೀಡಿದಿರಿ. ನಿಮ್ಮ ಮಹಿಮೆಯೇ ಮಹಿಮೆ" ಎಂದು ರಾಮಾಚಾರ್ಯರು ಭಾವ ತನ್ಮಯಗೊಂಡು ನುಡಿದರು.

"ನನ್ನ ಮಹಿಮೆ ಎಲ್ಲಿ ಬಂದಿತು ಆಚಾರ್ಯರೆ. ಎಲ್ಲಾ ತತ್ವಶಾಸ್ತ್ರದ ಹಿರಿಮೆ. ಅಧ್ಯಯನ ಮಾಡಿದ್ದನ್ನು ಮನನ ಮಾಡುತ್ತಿದ್ದೆವು. ಅದೂ ಆಚಾರ್ಯರ ಸೇವೆ, ಪರಮಾತ್ಮನ ಪ್ರೀತಿ ಕಾರ್ಯವಲ್ಲವೆ? ಆದ್ದರಿಂದಲೇ ಸೂರ್ಯಾಂತರ್ಗತ ಪರಮಾತ್ಮ ನಿಮಗಾಗಿ ಕಾದಿದ್ದ. ಹೋಗಿ, ಇನ್ನು ಸಂಧ್ಯಾವಂದನೆ ಮಾಡಿ ಎಂದು ನಗುತ್ತಾ ದಾಸರು ಹೇಳಿದಾಗ ಎಷ್ಟೇ ಪಾಂಡಿತ್ಯವಿದ್ದರೂ ಎಷ್ಟೇ ಶಾಸ್ತ್ರಾಧ್ಯಯನ ಮಾಡಿದ್ದರೂ ಅದರ ಅಂತಃಸತ್ವವನ್ನು ಗ್ರಹಿಸುವುದಕ್ಕೆ ಗೋಪಾಲದಾಸರಂಥ ಅಪರೋಕ್ಷ ಜ್ಞಾನಿಗಳ ಕೃಪೆಯೇ ಬೇಕು ಎಂದು ಆಚಾರ್ಯರು ಭಾವಿಸಿ ಅಂಥ ಭಾಗ್ಯವನ್ನು ನೀಡಿದ ಪರಮಾತ್ಮನಿಗೆ ಮನದಲ್ಲಿಯೇ ನಮಸ್ಕರಿಸಿದರು.

***

ರಾತ್ರಿಯಾಗಿದ್ದರೂ ಹೊರಗೆ ಹೋದಾಗ ಸೂರ್ಯ ದರ್ಶನ ಪಡೆದಿದ್ದರು ಆಚಾರ್ಯರು. ಮನೆಯೊಳಗಿನಿಂದಲೇ ಆ ಸೂರ್ಯನನ್ನು ನೋಡಿದವರು ಗೋಪಾಲದಾಸರು.

ಆದರೂ ಪರಮಾತ್ಮನ ಪೂರ್ತಿ ಲೀಲೆಯನ್ನು ಅರಿತವರಾರು?

ಗೋಪಾಲದಾಸರೂ ಒಮ್ಮೆ ಆತನ ಲೀಲಾಪರಿ ಅರಿಯದೆ ಬೆಪ್ಪಾಗಿ ಹೋದರು.

ವೇಣಿಸೋಮಪುರದಿಂದ ಅವರು ಹಿಂದಿರುಗುತ್ತಿದ್ದಾಗ ಅವರ ಹಿಂದೆ ದೊಡ್ಡ ಕುದುರೆಯನ್ನೇರಿದ್ದ ಆಜಾನುಬಾಹು ರಾವುತನೊಬ್ಬ ತಮ್ಮನ್ನು ಬೆನ್ನಟ್ಟಿ ಬರುತ್ತಿರುವಂತೆ ಭಾಸವಾಯಿತು.

ಕುದುರೆ ಸಾಮಾನ್ಯ ರೀತಿಯದಲ್ಲ. ಅದಕ್ಕೆ ನೀಲಿಬಣ್ಣ. ಅದರ ಮೇಲೆ ಕುಳಿತ ರಾವುತನೋ - ಆಜಾನುಬಾಹು ರೂಪಿ. ಸಾಲು ಬೆರಳುಂಗುರ. ಆ ಕೈಯಲ್ಲಿ ಖಡ್ಗ ಹಿಡಿದು ತಮ್ಮನ್ನು ಬೆನ್ನಟ್ಟಿ ಬರುತ್ತಿರುವಂತೆ ಭಾಸವಾಯಿತು ಕುದುರೆ ಸುಮ್ಮನೆ ಬರುತ್ತಿದೆಯೆ ? ಓಲಾಡುತ್ತಾ ವೇಗದಲ್ಲಿ ಬರುತ್ತಿದೆ. ಬೆದರಿಬಿಟ್ಟರು ಗೋಪಾಲ ದಾಸರು. ಅವರಿಗೆ ಆ ಕ್ಷಣದಲ್ಲಿ ಏನನಿಸಿತೋ ಏನೋ ! ಆ ರಾವುತನಿಂದ ತಪ್ಪಿಸಿ ಕೊಳ್ಳಲು ಕೂಡಲೇ ಓಟ ಪ್ರಾರಂಭಿಸಿದರು. ಕುದುರೆ ಸವಾರ ಅವರನ್ನು ಬಿಡಲೊಲ್ಲ. ಅವರು ಸಿಕ್ಕಲೊಲ್ಲರು !

ಓಡಿ ಓಡಿ ಬಸವಳಿದು ಬಿಟ್ಟರು ದಾಸರು. ಬಿಡದೆ ಬೆನ್ನಟ್ಟಿದ ಸವಾರ ತನ್ನನ್ನು ಏಕೆ ಬೆನ್ನಟ್ಟಿ ಬರುತ್ತಿದ್ದಾನೆ ಆ ವಿಚಿತ್ರಪುರುಷ? ಸೋತು ಸುಸ್ತಾಗಿ ಹೋದ ದಾಸರು ಏನಾದರಾಗಲಿ ಎಂದು ಸವಾರನನ್ನು ಎದುರಿಸಿ ನಿಂತರು.

ಕುದುರೆಯ ಮೇಲೆ ಬಂದ ಸವಾರ ದಾಸರನ್ನು ಏನೂ ಮಾಡಲಿಲ್ಲ. ಅವರ ಹತ್ತಿರ ಬಂದ 'ಆಲೆನಾಹಿ' ಎಂದು ಕೇಳಿದ.

ಅದು ಮರಾಠಿ ಭಾಷೆಯಲ್ಲಿ 'ಏಕೆ ಬರಲಿಲ್ಲ ?' ಎಂಬ ಅರ್ಥ ಬರುತ್ತದೆಂದು ದಾಸರಿಗೆ ಗೊತ್ತಾಯಿತು.

ಆದರೆ ಎಲ್ಲಿಗೆ?

ಕೇಳಬೇಕೆಂದರೆ ದಾಸರಿಗೆ ಮಾತೇ ಹೊರಡಲಿಲ್ಲ. ನಾಲಿಗೆ ಏಳಲೊಲ್ಲದು.

ಸವಾರನನ್ನು ಪರೀಕ್ಷಿಸಿ ನೋಡಿದರು.

ತುಲಸೀ ಮಾಲೆ, ಹಣೆಯಲ್ಲಿ ಕಸ್ತೂರಿತಿಲಕ. ಅಲೌಕಿಕ ರೂಪವದು.

ದಾಸರು ತಮಗರಿಯದಂತೆಯೇ ಕೈ ಮುಗಿದರು, ಅಷ್ಟೇ ! ರಾವುತ ಕುದುರೆ ಹಿಂದಿರುಗಿಸಿದ. ಓಲಾಡಿ ಓಲಾಡಿ ಕುದುರೆ ಮಾಯವಾಯಿತು.

ಆತ ಮರೆಯಾದ ಮೇಲೆ ದಾಸರು ಯೋಚಿಸಿದರು. ಎದುರಿಗೆ ಹುಲಿ ಬಂದರೂ ಹೆದರುವ ಸ್ವಭಾವವಲ್ಲ. ಉಡುಪಿ ಯಾತ್ರೆಯ ಕಾಲಕ್ಕೆ ಮಂಡಗದ್ದೆ ಭೀಮಣ್ಣನ ನೇತೃತ್ವದಲ್ಲಿ ದರೋಡೆಕೋರರು ಭಯಾನಕ ಶಸ್ತ್ರಗಳೊಂದಿಗೆ ಧಾಳಿ ಮಾಡಿದಾಗ ಸ್ವಲ್ಪವೂ ಮನ ವಿಚಲಿತವಾಗಲಿಲ್ಲ. ಅಂಥ ದೃಢ ಮನ ಇಂದು ಏನಾಯಿತು?

ಬಂದ ರಾವುತ ತಮ್ಮ ಮೇಲೆ ಧಾಳಿ ಮಾಡುವ ಕಾರಣವಾದರೂ ಏನು? ಅಷ್ಟು ಸಣ್ಣ ವಿಷಯವನ್ನು ತಾವು ಯೋಚಿಸದೆ ಓಡಿ ಬಂದಿದ್ದೇಕೆ ?

ಗೋಪಾಲದಾಸರಿಗೆ ಹೊಳೆದು ಹೋಯಿತು.

ತಮ್ಮ ಶಕ್ತಿಯೆಲ್ಲಾ ಹೃದಯದಲ್ಲಿ ನಿಂತು ನಡೆಸುವ ಪರಮಾತ್ಮನದೇ ಶಕ್ತಿ. ಆತನ ಶಕ್ತಿಗೆ ಸಮನಾದುದು ಆತನ ಶಕ್ತಿಯೆ. ಅದಕ್ಕೆ ಇನ್ನೊಂದು ಉಪಮೆಯಿಲ್ಲ. ತನ್ನ ಇದುವರೆಗಿನ ಮನಸಿನ ಸ್ಥಿರತೆಯನ್ನು ಕದಡಿದ ಶಕ್ತಿ ಆತನಲ್ಲಲ್ಲದೆ ಬೇರೆಲ್ಲಿ ಇರಲು ಸಾಧ್ಯ.

'ಆಲೆನಾಹಿ' ಎಂದು ಮರಾಠಿಯಲ್ಲಿ ಕೇಳಿದ್ದೇಕೆ? ಹೌದು. ತಾವು ಇದುವರೆಗೂ ಪಂಡರಾಪುರಕ್ಕೆ ಹೋಗಿಲ್ಲ. ಪಂಡರಾಪುರದಲ್ಲಿ ಜನ ಆಡುವ ಮರಾಠಿ ಭಾಷೆಯಲ್ಲಿ ಪರಮಾತ್ಮ ತನ್ನನ್ನು ಎಚ್ಚರಿಸುವುದರ ಮೂಲಕ ಆ ಕ್ಷೇತ್ರಕ್ಕೆ ಆಹ್ವಾನಿಸಿದ್ದಾನೆ. ಅಲ್ಲಿಗೆ ಇದುವರೆಗೂ ಹೋಗದೇ ಇದ್ದುದೇ ತಮಗೆ ಅಜ್ಞಾನ ಆವರಿಸಲು ಕಾರಣ. ವಿಷಯ ಹೊಳೆದು ಹೋಯಿತು ಗೋಪಾಲದಾಸರಿಗೆ.

ಆನಂತರ ತಮ್ಮಂದಿರನ್ನು ಕರೆದು ದಾಸರು ಹೇಳಿದರು "ಘಂಡರಿರಾಯ ಕರೆದಿದ್ದಾನೆ. ನಾಳೆಯೇ ಪಂಡರಾಪುರಕ್ಕೆ ಪ್ರಯಾಣ."

ಅಣ್ಣನ ಮಾತಿಗೆ ಎದುರು ಹೇಳುವವರೇ ತಮ್ಮಂದಿರು?

ರಂಗಣ್ಣನನ್ನು ಉತ್ತನೂರಿನಲ್ಲಿ ಬಿಟ್ಟು ಮರುದಿನವೇ ಮೂರು ಜನ ಪಂಡರಾ ಪುರಕ್ಕೆ ಪ್ರಯಾಣಿಸಿದರು.

***

"ಶ್ರೀನಿವಾಸಾ, ಎಲ್ಲಿಗೆ ಹೋದರೂ ವೈಭವದ ಊಟವೇ ದೊರೆಯುತ್ತದೆ. ಅದಕ್ಕೆ ಕಾರಣ ನನ್ನ ಮೂಲ ಸ್ವರೂಪವೆಂದು ಗುರುಗಳಾದ ವಿಜಯದಾಸರು ಹೇಳಿದುದಾಗಿ ತಿಳಿಸಿದ್ದೆಯಲ್ಲಾ! ಈ ದಿನ ನೋಡು, ಮುಂದೆ ಬರುವ ಗ್ರಾಮದಲ್ಲಿ ಭಾರೀ ಶ್ರೀಮಂತ ಬ್ರಾಹ್ಮಣರೊಬ್ಬರಿಂದ ಭೋಜನಕ್ಕೆ ಆಹ್ವಾನ ಬರುತ್ತದೆ. ಆದರೆ ಈ ದಿನ ಅವರಲ್ಲಿ ಊಟ ಮಾಡುವುದಕ್ಕೆ ಗೋಪಾಲವಿಠಲನ ಸಮ್ಮತಿಯಿಲ್ಲ. ಊಟದ ವೇಳೆ. ಶ್ರೀಮಂತ ಭೋಜನ. ಆದರೇನು, ಅಲ್ಲಿಯ ಭೋಜನ ಬಿಟ್ಟು ಮುಂದೆ ಒಂದು ಹರದಾರಿ ಹೋದ ಮೇಲೆ ಹೊಲದಲ್ಲಿ ಊಟ ಮಾಡುವ ಯೋಗ ನಮ್ಮದು. ಸ್ವಯಂ ಪಾಕ ಅನಿವಾರ್ಯ. ಅದೇ ಶ್ರೀರಾಯರ ಇಚ್ಛೆ. ನಮ್ಮಲ್ಲಿ ಅಂತರ್ಯಾಮಿಯಾಗಿರುವ ಶ್ರೀಗುರು ರಾಘವೇಂದ್ರರು ಆ ಭೋಜನವನ್ನೇ ಬಯಸಿದ್ದಾರೆ. ದೇವಾನುದೇವತೆಗಳು ಆ ಊಟವೇ ಬೇಕೆಂದು ಬಯಸಿದಾಗ ನಾವೇನು ಮಾಡಲಾದೀತು" ಎಂದು ಗೋಪಾಲದಾಸರು ನಗುತ್ತಾ ನುಡಿದರು.

"ಹೌದ್ಹೌದು. ಶ್ರೀಮನ್ ಮಂತ್ರಾಲಯ ಪ್ರಭುವರ್ಯರು ಭಕ್ತರ ಸೇವೆಯನ್ನು ಸ್ವೀಕರಿಸಿ ಶೀಘ್ರ ಅನುಗ್ರಹಿಸುವ ಪರಮ ದಯಾಳುಗಳಲ್ಲವೆ ? ಯೋಗ್ಯತೆ ಮೀರಿ ಸೇವೆ ಮಾಡಿರಿ ಎಂದು ರಾಯರು ಹೇಳುವುದಿಲ್ಲ. ಪಾಪ; ಕರಿಬಸಣ್ಣ ನಿಷ್ಕಪಟಿ. ಏನೋ ಕೇಳಿಬಿಟ್ಟ. ಹರಿಕೆ ಹಾಕಿಕೊಂಡು ಬಿಟ್ಟ. ಫಲ ಪಡೆದ ಮೇಲೆ ಯೋಚನೆ ಗಿಟ್ಟುಕೊಂಡಿತು. ಅದಕ್ಕೂ ಶ್ರೀ ರಾಯರೇ ಪರಿಹಾರ ಸೂಚಿಸಿದ್ದಾರೆ. ನಡೆಯಲಿ ರಾಯರ ಇಚ್ಛೆ" ಎಂದು ನಗುತ್ತಾ ನಡೆಯುತ್ತಿದ್ದಂತೆ ದಾಸಣ್ಣನಿಗೆ ಈ ಮಾತಿನ ರಹಸ್ಯ ಹೊಳೆಯಲಿಲ್ಲ. ಕಣ್ಣು ಮುಚ್ಚಿ ಅಂತರಮುಖಿಯಾಗಿ ಈ ವಿಷಯ ತಿಳಿಯ ಬೇಕೆಂದು ಪ್ರಯತ್ನಿಸುತ್ತಿದ್ದಂತೆಯೇ ಕುದುರೆಗಳನ್ನೇರಿದ ನಾಲ್ಕಾರು ಜನ ಅಲ್ಲಿಗೆ ಬಂದು ಅವರಿಗೆ ವಿನಂತಿಸಿದರು.

"ಸುತ್ತ ಹದಿನೆಂಟು ಹಳ್ಳಿಗಳ ಒಡೆಯರು ನಮ್ಮ ದೇಶಾಯರು. ಈ ಪ್ರದೇಶ ದಲ್ಲಿ ಯಾವ ಪ್ರತಿಷ್ಠಿತರು ಬಂದರೂ ನಮ್ಮ ಒಡೆಯರ ಮನೆಯಲ್ಲಿಯೇ ಆತಿಥ್ಯ. ಅವರಲ್ಲಿ ವಿಶ್ರಮಿಸಿಕೊಂಡು ಮುಂದೆ ಪ್ರಯಾಣಿಸುವುದು ಈ ಪ್ರದೇಶದ ಆಚಾರ. ತಾವೂ ಈ ದಿನ ನಮ್ಮ ಒಡೆಯರ ಮನೆಗೆ ಬಂದು ಆತಿಥ್ಯ ಸ್ವೀಕರಿಸಬೇಕು."

"ಯಾವ ಪ್ರತಿಷ್ಠಿತರು ಬಂದರೂ ನಿಮ್ಮ ಒಡೆಯರ ಮನೆಯಲ್ಲಿ ಆತಿಥ್ಯ ಪಡೆಯುತ್ತಾರೆಯೆ?" ಬಂದವರನ್ನುದ್ದೇಶಿಸಿ ಗೋಪಾಲದಾಸರು ಪ್ರಶ್ನಿಸಿದರು.

"ಹೌದು ಹೌದು" ಅವರು ಹೆಮ್ಮೆಯಿಂದ ನುಡಿದರು.

"ಹಾಗಾದರೆ ನಮಗೇನು ಅಲ್ಲಿ ಕೆಲಸ? ಅದು ಪ್ರತಿಷ್ಠಿತರಿಗೆ ಸೇರಿದ ಜಾಗ. ನಮಗೆ ಕಷ್ಟಾರ್ಜಿತ ಬೇಕು" ಎಂದು ದಾಸರು ನುಡಿದಾಗ ಬಂದವರಿಗೆ ಆಶ್ಚರ್ಯ ವಾಗಿ ಹೋಯಿತು.

"ನಮ್ಮ ದೇಶಾಯರು ಕೊಡುವ ಕೈತುಂಬಾ ದಕ್ಷಿಣೆಗಾಗಿಯೇ ಈ ಪ್ರದೇಶಕ್ಕೆ ನಾನಾ ಬ್ರಾಹ್ಮಣರು ಬರುತ್ತಾರೆ. ಹೀಗಿರುವಾಗ ನೀವು ಏನೇನೋ ಹೇಳುತ್ತೀರಲ್ಲಾ" ಬಂದವರು ಗೋಪಾಲದಾಸರನ್ನು ಪ್ರಶ್ನಿಸಿದರು.

"ದಕ್ಷಿಣೆಯನ್ನು ಹಗುರವಾಗಿ ಸ್ವೀಕರಿಸುವ ಬ್ರಾಹ್ಮಣರು ಹೆಚ್ಚಿದ್ದರಿಂದಲೇ ಈ ಪ್ರದೇಶಕ್ಕೆ ಇಂದು ಬರಗಾಲ ಬಂದಿದೆ. ದಕ್ಷಿಣೆ ಊಟಕ್ಕಾಗಿಯೇ ತಿರುಗುವ ಜನರು ತಮ್ಮನ್ನು ಸಣ್ಣವರನ್ನಾಗಿಸಿಕೊಳ್ಳುತ್ತಾರೆ. ಪ್ರದೇಶವನ್ನು ಕಷ್ಟದಲ್ಲಿ ಸಿಲುಕಿಸುತ್ತಾರೆ"

ಗೋಪಾಲದಾಸರ ಮಾತು ಕೇಳಿ ಕರೆಯ ಬಂದವರಿಗೆ ಆಶ್ಚರ್ಯವಾಯಿತು.

ಸುಮಾರು ಮೂರು ವರ್ಷಗಳಿಂದ ಪ್ರದೇಶದಲ್ಲಿ ಮಳೆಯಾಗದೆ ತೀವ್ರ ಬರಗಾಲ ಪೀಡಿಸುತ್ತಿದ್ದುದು ಸತ್ಯ. ಇಂಥ ಸಮಯದಲ್ಲಿ ಊಟಕ್ಕೆ ಕರೆಯುವವರೇ ಇಲ್ಲ. ಮುಂದೆ ಬರುವ ಹಳ್ಳಿಗಳಲ್ಲಿ ಇನ್ನೂ ಭೀಕರ ಬಡತನ ಪೀಡಿಸುತ್ತಿದೆ. ಇದು ಗೊತ್ತಾಗಿದ್ದರೂ ಭೂರಿ ಭೋಜನ ನಿರಾಕರಿಸಿ ಮುಂದೆ ಹೋಗ ಬಯಸುವ ಗೋಪಾಲದಾಸರ ವರ್ತನೆ ಪೂರ್ತಿ ಅವ್ಯವಹಾರ ಎಂದೆನಿಸದೆ ಇರಲಿಲ್ಲ ಅವರಿಗೆ.

"ಮುಂದಿನ ಹಳ್ಳಿಗಳಲ್ಲಿ ನಿಮಗೆ ಊಟ ಸಿಗಲಿಕ್ಕಿಲ್ಲ. ಯೋಚಿಸಿ ನೋಡಿ ಮುಂದುವರೆಯಿರಿ" ಎಂಬ ಎಚ್ಚರಿಕೆಯ ಮಾತನ್ನು ಅವರು ಹೇಳಿದಾಗ ಗೋಪಾಲದಾಸರು ಅವರಿಗೆ ಹೇಳಿದರು.

"ಇದು ಸಂಹಾರ ಕಾಲವಲ್ಲಪ್ಪಾ, ಪಾಲನೆಯ ಕಾಲ. ಪಾಲಿಸುವ ಪ್ರಭುವನ್ನು ಮರೆತವರು ಬಳಲಬೇಕಷ್ಟೆ" ಎಂದು ನುಡಿಯುತ್ತಾ ಗೋಪಾಲದಾಸರು ಮುಂದೆ ಸಾಗಿಬಿಟ್ಟರು.

ಕರೆಯ ಬಂದವರಿಗೆ ದಾಸರ ವಿಚಿತ್ರ ವರ್ತನೆ ಅರ್ಥವಾಗಲಿಲ್ಲ. ವಿಷಯವನ್ನು ದೇಶಾಯರಿಗೆ ಒಪ್ಪಿಸಿದರಾಯಿತೆಂದು ನಿರ್ಧರಿಸಿ ಅವರು ಹಿಂದಿರುಗಿದರು.

"ಅಲ್ಲಣ್ಣಾ, ಈ ಪ್ರದೇಶದಲ್ಲಿ ತೀವ್ರ ಬರಗಾಲವಿದೆ. ಜನರು ಅನ್ನಕ್ಕಾಗಿ ಹಾಹಾಕಾರ ಪಡುತ್ತಿದ್ದಾರೆ. ಹೀಗಿರುವಾಗ ಈ ದೇಶಾಯರು ನಡೆಸುತ್ತಿರುವ ಅನ್ನದಾನ ಯಜ್ಞವನ್ನು ನಿರಾಕರಿಸಿ ಹೋಗುವುದು ಧರ್ಮ ದೃಷ್ಟಿಯಿಂದಲೂ ತಪ್ಪಾಗುವುದಿಲ್ಲವೆ?" ದಾಸಣ್ಣ ಪ್ರಶ್ನಿಸಿದ.

"ಎಲ್ಲಿದೆಯೋ ಬರಗಾಲ? ಉಳ್ಳವರ ಜ್ಞಾನಕ್ಕೆ ಬಂದಿದೆ ಬರಗಾಲ. ಎಲ್ಲವೂ ತನ್ನಲ್ಲಿಯೋ ಉಳಿಸಿಕೊಳ್ಳಬೇಕೆಂಬ ಲುಬ್ಧ ಜನರಿಂದ ಲಭ್ಯವಾಗಿದೆ ಈ ಬರಗಾಲ. ಹಣ ಕೊಟ್ಟರೆ ಧಾನ್ಯ ಸಿಕ್ಕುವುದಿಲ್ಲವೆ? ಮನೆಮನೆಗಳಲ್ಲಿಯ ಪಾತ್ರೆ ಪಡಗಗಳನ್ನು ಅಡವಿಟ್ಟು ಜನರು ಆಹಾರಧಾನ್ಯ ಕೊಳ್ಳುತ್ತಿಲ್ಲವೆ? ಅವರಿಗೆ ಧಾನ್ಯ ಎಲ್ಲಿ ಸಿಕ್ಕುತ್ತಿದೆ? ಧಾನ್ಯವಿದೆ. ಆದರೆ ವಿನಿಮಯದಲ್ಲಿ ಲೋಪವಿದೆ. ಅಕ್ರಮ ವಾಗಿ ಸಂಗ್ರಹ ಮಾಡಿ ಇಡುವ ಜನಗಳನ್ನು ನಿಯಂತ್ರಿಸುವಲ್ಲಿ ಆಡಳಿತದವರು ತಪ್ಪು ಮಾಡಿರಬೇಕು. ಅದು ಲೌಕಿಕ ಕಾರಣವಾದರೆ ಅದಕ್ಕೆ ಆಧ್ಯಾತ್ಮಿಕ ಕಾರಣಗಳೂ ಇಲ್ಲದಿಲ್ಲ. ಪರಮಾತ್ಮನಲ್ಲಿ ನಂಬಿಕೆಯಿಲ್ಲದೆ ನಾಳೆಗೆ ಉಳಿಸಿಕೊಳ್ಳಬೇಕು ಎಂಬ ಹಂಬಲದ ಜನರಿಂದ ಈ ಕಂಗಾಲ ಸ್ಥಿತಿ ಉಂಟಾಗಿದೆ" ಎಂದು ಗೋಪಾಲದಾಸರು ಹೇಳುತ್ತಾ ಮುಂದೆ ಸಾಗುತ್ತಿದ್ದರು.

ಅಷ್ಟರಲ್ಲಿ ಒಬ್ಬ ಮನುಷ್ಯ ಕೈ ಮುಗಿಯುತ್ತಾ ಬಂದು ಶಿರಸಾಷ್ಟಾಂಗ ಹಾಕಿದ. ಅವನ ಧ್ವನಿ ಕಂಪಿಸುತ್ತಿತ್ತು. "ಹೌದು; ನೀವೆ; ಇದೇ ರೀತಿ ! ಇದೇ ಮೂರು ಜನ. ಹೀಗೆಯೇ ಕುದುರೆಯ ಮೇಲೆ ಕುಳಿತಿದ್ದಿರಿ !" - ಅವನು ಹೇಳುತ್ತಿದ್ದಂತೆ ಕಣ್ಣಿನಲ್ಲಿ ಆನಂದದ ನೀರು ಉಕ್ಕಿಉಕ್ಕಿ ಹರಿಯುತ್ತಿತ್ತು.

"ಹೌದಪ್ಪಾ, ರಾಯರು ನಿನಗೆ ಸ್ವಪ್ನದಲ್ಲಿ ಹೇಳಿದಂತೆ ನನಗೂ ಹೃದಯದಲ್ಲಿ ಪ್ರೇರೇಪಿಸಿದ್ದಾರೆ. ಲಕ್ಷ ಜನರ ಸಂತರ್ಪಣೆಯ ಅವಕಾಶವನ್ನು ರಾಯರ ಕರುಣೆ ಯಿಂದ ಏಕ ಕಾಲಕ್ಕೆ ಪಡೆದು ಬಿಟ್ಟ ಪುಣ್ಯಾತ್ಮನಯ್ಯಾ ನೀನು" ಎಂದು ಹೇಳುತ್ತಾ ಗೋಪಾಲದಾಸರು ಕುದುರೆಯಿಂದ ಇಳಿದು ಅವನನ್ನು ಅಪ್ಪಿಕೊಂಡು ಬಿಟ್ಟರು.

ದಾಸಣ್ಣನಿಗೆ ವಿಷಯ ಪೂರ್ತಿ ಹೊಳೆದಿರಲಿಲ್ಲ. "ನನ್ನ ತಮ್ಮನಿಗೆ ವಿಷಯ ಪೂರ್ತಿ ತಿಳಿದಿಲ್ಲ. ನೀನು ತೆಗೆದಿಟ್ಟಿರುವ ಜೋಳದ ಹಿಟ್ಟು, ನವಣೆ ಅಕ್ಕಿಯನ್ನು ನನಗೆ ಕೊಡಪ್ಪಾ, ರೊಟ್ಟಿ ಅನ್ನ ಮಾಡಿಕೊಳ್ಳುತ್ತೇವೆ. ಅಷ್ಟರಲ್ಲಿ ಶ್ರೀ ರಾಘವೇಂದ್ರ ಸ್ವಾಮಿಗಳ ಕರುಣೆಯನ್ನು ಕುರಿತು ನಿನಗಾಗಿರುವ ಅನುಭವವನ್ನು ಇವನಿಗೆ ಬಿಡಿಸಿ ಹೇಳು" ಗೋಪಾಲದಾಸರು ಹೇಳಿ ಅವನಲ್ಲಿದ್ದ ಆಹಾರ ಸಾಮಗ್ರಿಗಳ ಗಂಟನ್ನು ಇಸಿದುಕೊಂಡರು. ಹತ್ತಿರದಲ್ಲಿಯೇ ಇದ್ದ ಬಾವಿಯ ಬಳಿ ಅವರು ಬಂದಾಗ ಆತನ ಹೆಂಡತಿ ಅವರನ್ನು ಕೈಮುಗಿದು ಸ್ವಾಗತಿಸಿದಳು.

ಇವರಿಗಾಗಿಯೇ ಚೆನ್ನಾಗಿ ತೊಳೆದು ಬೆಳಗಿದ ಪಾತ್ರೆಗಳು ಹಾಗೂ ರೊಟ್ಟಿ ಸುಡುವ ಹಂಚನ್ನು ಇಸಿದುಕೊಂಡು ಗೋಪಾಲದಾಸರು ಸ್ನಾನ ಮಾಡಿ ಅಡುಗೆಗೆ ಕುಳಿತರು.

ದಾಸರನ್ನು ಕರೆದಿದ್ದ ಮನುಷ್ಯ ದಾಸಣ್ಣನಿಗೆ ಕೈಮುಗಿದು ತನಗಾದ ಶ್ರೀರಾಯರ ಕರುಣೆಯ ಬಗ್ಗೆ ಬಿಡಿಸಿ ಹೇಳತೊಡಗಿದ.

"ನನ್ನ ಹೆಸರು ಕರಿಬಸಣ್ಣ ಎಂದು. ಈ ಪಕ್ಕದ ಹಳ್ಳಿಯೇ ನಮ್ಮ ಸ್ವಂತ ಊರು. ಕಳೆದ ವರ್ಷ ಘೋರವ್ಯಾಧಿಯೊಂದು ನನ್ನನ್ನು ಪೀಡಿಸತೊಡಗಿತು. ಎಲ್ಲಾ ವೈದ್ಯ ಚಿಕಿತ್ಸೆಗಳೂ ಮುಗಿದವು. ಸಾವು ನಿಶ್ಚಯವೆಂದು ವೈದ್ಯರು ಹೇಳಿಬಿಟ್ಟರು. ಆಗ ನನ್ನ ಹೆಂಡತಿಯ ಕಡೆಯ ಅಪೇಕ್ಷೆಯಂತೆ ಮಂತ್ರಾಲಯ ಕ್ಷೇತ್ರಕ್ಕೆ ಹೋಗಿ ಶ್ರೀ ರಾಯರ ಸೇವೆ ಪ್ರಾರಂಭಿಸಿದೆ. ಶ್ರೀ ರಾಘವೇಂದ್ರ ಸ್ವಾಮಿಗಳು ಬ್ರಾಹ್ಮಣಯತಿಗಳು ಎಂದು ನಮ್ಮಂಥ ಕ್ಷುದ್ರರು ಕೆಲವೊಮ್ಮೆ ತಪ್ಪು ಕಲ್ಪನೆ ಮಾಡಿಕೊಳ್ಳಬಹುದು. ಶ್ರೀ ರಾಯರು ನಮ್ಮನ್ನು ಅನುಗ್ರಹಿಸಲಿಕ್ಕಿಲ್ಲ ಎಂದು ಮೊದಲು ನಾನು ಭಾವಿಸಿದ್ದೆ.

ಪರಮ ಕರುಣಾಳುಗಳು ನಮ್ಮ ರಾಯರು. ಸೇವೆ ಪ್ರಾರಂಭಿಸಿದ ಕೆಲವೇ ದಿನಗಳಲ್ಲಿ ರೋಗ ಗುಣವಾಗುತ್ತಾ ಬಂದಿತು. ಆಗ ನನ್ನ ನಂಬಿಕೆ ಬಲಿಯಿತು. ಬ್ರಾಹ್ಮಣ ಭೋಜನವೆಂದರೆ ರಾಯರಿಗೆ ಪ್ರೀತಿ ಕಾರ್ಯ ಎಂದು ನನಗೆ ಗೊತ್ತಾಗಿ ಕಾಯಿಲೆ ಗುಣವಾದರೆ ಲಕ್ಷ ಜನ ಬ್ರಾಹ್ಮಣರಿಗೆ ಸಂತರ್ಪಣೆ ಮಾಡಿಸುವುದಾಗಿ ಹರಕೆ ಹೊತ್ತೆ. ಕಾಯಿಲೆಯೇನೋ ಗುಣವಾಯಿತು. ಆದರೆ ಹರಕೆ ಮಾತ್ರ ತೀರಿಸಲು ಸಾಧ್ಯವಾಗಿಲ್ಲ. ರೋಗ ಮುಕ್ತನಾಗುವ ಒಂದೇ ಲಕ್ಷದಲ್ಲಿ ಲಕ್ಷ ಸಂಖ್ಯೆಯ ಅಗಾಧತೆ ಅರಿಯದೆ ಹೋದೆ. ಆದರೆ ಅಷ್ಟರಲ್ಲಿ ಅಂಥ ಹರಿಕೆ ಇಟ್ಟುಕೊಂಡು ಬಿಟ್ಟಿದ್ದೆ. ಲಕ್ಷ ಜನರು ಎಂದರೆ ಸಾಧಾರಣವೆ? ಅದಕ್ಕೆ ಬೇಕಾದ ದವಸ ಧಾನ್ಯಗಳೆಷ್ಟು? ಸಾಮಾನು ಸರಂಜಾಮುಗಳೇನು? ಅಷ್ಟಕ್ಕೂ ಲಕ್ಷ ಜನ ಬ್ರಾಹ್ಮಣರು ಸಿಕ್ಕುವುದೆಲ್ಲಿ? ಅಷ್ಟು ಜನರಿಗೆ ವ್ಯವಸ್ಥೆ ಮಾಡುವ ಯೋಗ್ಯತೆ ನನಗಿದೆಯೆ? ಇವೆಲ್ಲಾ ಯೋಚನೆ ರೋಗ ಗುಣವಾದ ಮೇಲೆ ಪ್ರಾರಂಭವಾಯಿತು. ಇಂಥ ಹರಿಕೆಯನ್ನು ನನ್ನಿಂದ ಪಡೆದ ರಾಯರೇ ಇದನ್ನು ತೀರಿಸಬೇಕು ಎಂದು ಪ್ರಾರ್ಥಿಸುತ್ತಾ ನಮ್ಮ ಬಸವಣ್ಣನ ಗುಡಿ ಯಲ್ಲಿ ರಾಯರ ಚಿತ್ರ ಇಟ್ಟು ಸೇವೆ ಮಾಡಿದೆ. ಇಲ್ಲಿಯೂ ನಮ್ಮ ರಾಯರು ಇದ್ದಾರೆ. ನನ್ನ ಕೋರಿಕೆ ತಿಳಿದ ರಾಯರು ಈಗ ಮೂರು ದಿನಗಳ ಹಿಂದೆ ಸ್ವಪ್ನದಲ್ಲಿ ದರ್ಶನ ನೀಡಿ ನೀವು ಮೂವರು ಕುದುರೆ ಮೇಲೆ ಬರುವುದನ್ನು ತೋರಿಸುತ್ತಾ ಇವರಿಗೆ ಊಟದ ವ್ಯವಸ್ಥೆ ಮಾಡು. ನಿನ್ನ ಹರಿಕೆ ಸಂದಾಯವಾಗುತ್ತದೆ ಎಂದು ಆಜ್ಞಾಪಿಸಿ ದರು. ಪ್ರದೇಶದಲ್ಲಿ ಬರಗಾಲವಿದೆ. ನಮಗಂತೂ ತೀವ್ರ ಬಡತನ. ಮನೆಯಲ್ಲಿದ್ದ ಅಲ್ಪಸ್ವಲ್ಪ ಕಾಳನ್ನೆಲ್ಲಾ ಜೋಡಿಸಿ ಅಡುಗೆಗೆ ವ್ಯವಸ್ಥೆ ಮಾಡಿ ಇಲ್ಲಿ ಕುಳಿತಿದ್ದೆವು. ಸ್ವಾರಸ್ಯವೆಂದರೆ ನೀವು ಮೂವರು ಈ ದಿನ ಕಂಡ ಜಾಗದಲ್ಲಿಯೇ ಸ್ವಪ್ನದಲ್ಲಿ ನನಗೆ ಕಾಣಿಸಿಕೊಂಡಿರಿ. ಮೂವರ ಕುದುರೆಗಳು ಅಷ್ಟೇ ಅಂತರದಲ್ಲಿದ್ದವು. ನಿಮ್ಮ ಬಟ್ಟೆಗಳ ಬಣ್ಣವೂ ಇವೇ ರೀತಿ ಇದ್ದವು. ಅಂದ ಹಾಗೆ - ನೀವು ಸೊಂಟಕ್ಕೆ ಸುತ್ತಿರುವ ಬಟ್ಟೆಯ ಒಳಭಾಗ ಪಿಸಿದು ಸ್ವಲ್ಪ ಹರಿದಿತ್ತು. ಅದೊಂದರ ವಿನಹ ಮಿಕ್ಕದ್ದೆಲ್ಲಾ ನಾನು ಸ್ವಪ್ನದಲ್ಲಿ ಕಂಡಂತಿಯೆ." ಎಂದು ಕರಿಬಸಣ್ಣ ಹೇಳುತ್ತಿದ್ದಂತಿಯೇ ದಾಸಣ್ಣ ತನ್ನ ಸೊಂಟದ ಬಟ್ಟೆಯನ್ನು ಬಿಚ್ಚಿ ನೋಡಿದ.

ಹೌದು; ನಿನ್ನೆ ಸ್ವಲ್ಪ ಗಟ್ಟಿಯಾಗಿ ಹಿಂಡಿದ್ದರಿಂದ ಅದು ಪಿಸಿದು ಸ್ವಲ್ಪ ಹರಿದಿತ್ತು.

ದಾಸಣ್ಣನಿಗೆ ಆಶ್ಚರ್ಯವಾಗಿ ಹೋಯಿತು. ಪ್ರತಿ ಘಟನೆಯೂ ಪರಮಾತ್ಮನ ಅಧೀನವೆ. ಎಲ್ಲವೂ ಆತನ ಸಂಕಲ್ಪದಂತೆಯೇ ನಡೆಯುತ್ತದೆ. ದೊಡ್ಡ ಜ್ಞಾನಿಗಳಿಗೆ ಮಾತ್ರ ಈ ವಿಷಯ ಹೊಳೆಯುತ್ತದೆ. ಅಂಥವರಲ್ಲಿ ಪ್ರಾರ್ಥಿಸಿದಾಗ ಅವರು

ಪರಮಾತ್ಮನಲ್ಲಿ ನಿವೇದಿಸಿ ಶುಭ ಘಟನೆಗಳು ನಡೆಯುವಂತೆ ಮಾಡುತ್ತಾರೆ. ಅಂಥ ಕರುಣಾಳುಗಳು ನಮ್ಮ ರಾಯರು' ಎಂಬ ಸಂಗತಿ ಹೊಳೆದಾಗ ದಾಸಣ್ಣನಿಗೆ ಆನಂದ ತಡೆಯಲಾಗಲಿಲ್ಲ.

"ರಾಜಾಧಿರಾಜ ಗುರು ಸಾರ್ವಭೌಮ ಗೋವಿಂದಾ ಗೋವಿಂದ" ಎಂದು ಗಟ್ಟಿಯಾಗಿ ಘೋಷಿಸಿ ಬಿಟ್ಟ. ಕರಿಬಸಣ್ಣ ಮತ್ತು ಆತನ ಹೆಂಡತಿಯೂ ಅದಕ್ಕೆ ಧ್ವನಿಗೂಡಿಸಿದರು.

ಶ್ರೀರಾಯರು ತಮಗಿಂತ ಹಿರಿಯ ಗುರುಗಳ ಆಶೀರ್ವಾದ ಬಲ, ಪರಮಾತ್ಮನು ಅವರ ಮೇಲೆ ಇಟ್ಟಿರುವ ವಿಶೇಷ ಅನುಗ್ರಹ ಇವುಗಳಿಂದ ಅವರು ಮಾಡುತ್ತಿರುವ ಲೋಕೋದ್ಧಾರ ಕಾರ್ಯಗಳನ್ನು ಕುರಿತು ಯೋಚಿಸುತ್ತಿರುವಂತೆಯೇ ಗೋಪಾಲ ದಾಸರು ಆ ಜಾಗಕ್ಕೆ ಬಂದರು.

ನಮ್ಮ ಮೂವರಿಗೆ ಅಡುಗೆಯನ್ನು ನಾನು ಮಾಡುತ್ತಿದ್ದೇನೆ. ನೀವು ಕೊಟ್ಟಿರುವ ಸಾಮಗ್ರಿಗಳು ಹೆಚ್ಚಾಗಿ ನಿಮ್ಮಿಬ್ಬರಿಗೂ ಆಗುತ್ತದೆ. ನೀವು ಬೇರೆ ಅಡುಗೆ ಮಾಡಿ ಕೊಳ್ಳಿ. ನಮ್ಮಲ್ಲಿರುವ ಪಾತ್ರೆಗಳನ್ನು ಇಸಿದುಕೊಂಡು ಬೇಗ ಅಡುಗೆ ಮಾಡಿ ಕೊಳ್ಳಿ. ಎಂದು ನುಡಿದರು.

"ನಮಗೇಕೆ ಪ್ರತ್ಯೇಕ ಅಡುಗೆ? ನೀವು ಮಾಡಿ ಕೊಂಡಿದ್ದರಲ್ಲೇ ಸ್ವಲ್ಪ ನೀಡಿ ಬಿಟ್ಟರೆ ಸಾಕು" ಕರಿಬಸಣ್ಣ ವಿನಂತಿಸಿದ.

ಗೋಪಾಲದಾಸರು ಅವನಿಗೆ ನಿಧಾನವಾಗಿ ಹೇಳಿದರು

"ಸಮಾಜದ ಕೆಲವು ಕೆಲವು ವರ್ಗಗಳು ಕೆಲಕೆಲವು ನಿಯಮಗಳನ್ನು ಹಾಕಿ ಕೊಂಡಿವೆ. ಅವುಗಳನ್ನು ಸುಮ್ಮಸುಮ್ಮನೆ ಏಕೆ ಉಲ್ಲಂಘಿಸಬೇಕು? ಉದಾಹರಣೆಗೆ ನಿಮ್ಮ ಹಿರಿಯರು ಬ್ರಾಹ್ಮಣರು ಮಾಡಿದ ಅಡುಗೆಯನ್ನು ಉಣ್ಣುತ್ತಿರಲಿಲ್ಲ. ಅದರಿಂದ ಅವರಿಗೆ ಏನೋ ಸಮಾಧಾನ. ಧರ್ಮಪಾಲನೆಗಾಗಿ ಕೆಲವು ನಿಯಮ ಗಳನ್ನು ಅನುಸರಿಸಿದ್ದೇವೆಂಬ ತೃಪ್ತಿ. ಬೇರೆಯವರಿಗೆ ತೊಂದರೆಯಾಗದ ಇಂಥ ನಿಯಮಗಳನ್ನ ಪಾಲಿಸಿಕೊಂಡು ಹೋಗುವುದರಿಂದ ಯಾರಿಗೇನು ಅಡ್ಡಿ ? ಸಮಾಜದ ಸ್ವಾಸ್ಥ್ಯಕ್ಕೆ ಇದರಿಂದೇನು ಚ್ಯುತಿ? ಅಡುಗೆ ಬೇರೆ ಮಾಡಿಕೊಂಡ ಮಾತ್ರಕ್ಕೆ ಪರಸ್ಪರ ದ್ವೇಷಿಸಬೇಕೆಂದು ಈ ಆಚಾರಗಳು ಹೇಳುತ್ತಿವೆಯೇ ? ಒಟ್ಟು ಅಡುಗೆ ಮಾಡುವುದರಿಂದ ಮನ ಪರಸ್ಪರ ಬೆಸೆಯುತ್ತದೆ ಎನ್ನುವುದಾದರೆ ಒಂದೇ ಗಂಗಾಳ ದಲ್ಲಿ ಎಲ್ಲರೂ ಒಟ್ಟಾಗಿ ಊಟ ಮಾಡುವುದರಿಂದ ಇನ್ನೂ ಹೆಚ್ಚು ಹೆಚ್ಚು ಬೆಸೆಯು

ತ್ತದೆ ಎಂದು ಹೇಳ ಬೇಕಾಗುತ್ತದೆ. ಒಂದೇ ಕೈಯಿಂದ ಎಲ್ಲರ ಬಾಯಿಗಳಿಗೆ ಇಡುವುದರಿಂದ ಇನ್ನೂ ಹೆಚ್ಚು ಬೆಸೆಯುತ್ತದೆಂದಾಯಿತು. ಈ ರೀತಿಯ ಚಿಂತನೆ ಈ ಕಾಲಕ್ಕಂತೂ ಹೊಂದುವುದಿಲ್ಲ. ನಿನ್ನ ಗಂಗಾಳದಲ್ಲಿ ನೀನು ಉಂಡರೆ ಅದರಲ್ಲಿ ಕೈ ಹಾಕಬೇಕೆಂಬ ಹಠ ನನಗೇಕೆ ಬರಬೇಕು? ನಿನ್ನ ಗಂಗಾಳದಲ್ಲಿ ನನ್ನನ್ನು ಕೈ ಹಾಕ ಬೇಡ ವೆಂದರೆ ನಿನ್ನನ್ನು "ಸಂಕುಚಿತ" ಎಂದು ಹೀಗಳೆಯ ಬೇಕೆ? ನಿನ್ನ ಶುದ್ಧತೆ ಪಾವಿತ್ರ್ಯತೆ ಗಾಗಿ ನೀನು ಹಾಕಿಕೊಂಡ ನಿಯಮಗಳನ್ನು ಬಿಟ್ಟು ಹೊರಗೆ ಬರಬೇಕೆಂಬುದು ಪ್ರಗತಿ ಪರಚಿಂತನೆಎಂದೆನಿಸುವುದಿಲ್ಲ. ಹಿಂದಿನಆಚಾರಗಳನ್ನೆಲ್ಲಾ ಉಲ್ಲಂಘಿಸುವುದೇ ಅಭಿವೃದ್ಧಿಯ ದ್ಯೋತಕವಲ್ಲ. ಪ್ರತಿಯೊಬ್ಬರ ನಂಬಿಕೆಗಳಿಗೆ ಅಡ್ಡಿ ಬಾರದಂತೆ ಅವರವರ ಧರ್ಮದಂತೆ ಅವರವರು ನಡೆದುಕೊಳ್ಳಬೇಕು. ಧರ್ಮ ಎಂಬ ಶಬ್ದಕ್ಕೆ ಬಹಳ ದೊಡ್ಡ ಅರ್ಥವಿದೆ. ಪರರ ಹಿತ ಚಿಂತನೆ ಎಂಬ ತತ್ತ್ವವೂ ಧರ್ಮ ಎನ್ನುವ ಸಂಗ್ರಹ ನಾಮಪದದಲ್ಲಿ ಇದ್ದೇ ಇದೆ. ಹಿತ ಚಿಂತನೆ ಎನ್ನುವುದು ಒಂದೇ ತಟ್ಟೆಯಲ್ಲಿ ಊಟ ಮಾಡುವುದರಿಂದ ಬರುತ್ತದೆಂದು ನಾನು ನಂಬಿಲ್ಲ. ಪರಸ್ಪರ ಸಮಾನವಾಗಿ ಹಂಚಿಕೊಂಡು ಉಣ್ಣುವುದರಲ್ಲಿ ಅಂಥ ಚಿಂತನೆಯಿದೆ. ಅದೇ ಧರ್ಮ. ನಿನ್ನಲ್ಲಿರುವ ಸಾಮಗ್ರಿಗಳನ್ನು ತಂದು ಹಸಿದಿರುವ ನಮಗೆ ಉಣಲಿಕ್ಕಿದೆ. ನಾಳಿನ ಗತಿಯೇನು ಎಂದು ನೀನು ಚಿಂತಿಸಲಿಲ್ಲ. ಸ್ವಾರ್ಥವನ್ನು ಬಿಟ್ಟ ಈ ಶ್ರೇಷ್ಠ ಗುಣ ಅನೇಕ ಬ್ರಾಹ್ಮಣರಲ್ಲಿಲ್ಲ. ನೀನು ನಮ್ಮ ಊಟಕ್ಕೆ ತೋರಿದ ಆದರ ಪ್ರೀತಿಗಳು ಹಿಂದಿನ ಗ್ರಾಮದ ಶ್ರೀಮಂತ ದೇಶಾಯರಲ್ಲಿಲ್ಲ. ಆದ್ದರಿಂದಲೇ ಶ್ರೀರಾಯರು ಆ ದೇಶಾಯರ ಕರೆಯನ್ನು ನಿರಾಕರಿಸಿ ನಿನ್ನಲ್ಲಿ ಬರುವಂತೆ ನನಗೆ ಪ್ರೇರೇಪಿಸಿದ್ದಾರೆ. ನೀನು ಆ ದೇಶಾಯರಿಗಿಂತ ಶ್ರೇಷ್ಠನೆ. ಜೀವದ ಯೋಗ್ಯತೆ ಅವರಿಗಿಂತ ದೊಡ್ಡದೇ ಇರಬೇಕು. ಆದರೆ ಜೀವದ ಯೋಗ್ಯತೆ ತಿಳಿಯಲು ಎಲ್ಲರಿಂದಲೂ ಸಾಧ್ಯವಿಲ್ಲವಲ್ಲಾ? ಆದ್ದರಿಂದ ನಮ್ಮ ಸಮಾಜದಲ್ಲಿ ಕೆಲವು ನಿಯಮಗಳನ್ನು, ಕೆಲವು ಸಾಮಾನ್ಯ ಮಾಪಕಗಳನ್ನು ಸೃಜಿಸಿ ಕೊಳ್ಳಲಾಗಿದೆ. ಅವುಗಳಂತೆ ನಡೆಯುವುದರಿಂದ ಬೇರೆಯವರಿಗೆ ತೊಂದರೆಯಾಗ ದಿದ್ದರೆ ಸಾಕು. ನಿನ್ನ ಅಡುಗೆಯನ್ನು ನೀನು ಮಾಡಿಕೋ. ನಮ್ಮದನ್ನು ನಾವು ಮಾಡಿಕೊಳ್ಳುತ್ತೇವೆ. ಅಡುಗೆ ಬೇರೆಯಾದರೂ ಅದರಲ್ಲಿಯ ಪ್ರೀತಿಗೆ ಭಿನ್ನವಿಲ್ಲ. ನಮ್ಮ ಗೋಪಾಲವಿಠಲ ನಿನ್ನ ಭಕ್ತಿಗೆ ಮೆಚ್ಚಿದ್ದಾನೆ. ದೇಶಾಯರ ಭೂರಿಭೋಜನಕ್ಕೆ ಒಪ್ಪಿಕೊಳ್ಳಲೊಲ್ಲದ ಪರಮಾತ್ಮ ನಿನ್ನ ಭಕ್ತಿಯ ಭಕ್ರಿ ಊಟವನ್ನು ಸ್ವೀಕರಿಸಿದ್ದಾನೆ. ಆದ್ದರಿಂದಲೇ ಶ್ರೀರಾಯರು ನಮ್ಮನ್ನು ಇಲ್ಲಿಗೆ ಕಳಿಸಿದ್ದಾರೆ. ನಿನ್ನ ಜೋಳದ ಹಿಟ್ಟು ನವಣೆಯ ಅನ್ನ ದೇಶಾಯರ ಮೃಷ್ಟಾನ್ನಕ್ಕಿಂತ ಹೆಚ್ಚಿನದು. ಪರಮಾತ್ಮ ಅನುಗ್ರಹಿಸಿದ್ದಾನೆ. ರಾಯರೇ ಅನುಗ್ರಹಿಸಿ ಇಲ್ಲಿಗೆ ಕಳಿಸಿದ್ದಾರಾದ್ದರಿಂದ ನಿನಗಿನ್ನು

ಬಡತನದ ಭಯವಿಲ್ಲ. ಬರಗಾಲದ ಭೀತಿಯಿಲ್ಲ. ನೀನು ಈಗ ಮಾಡಿದ ದಾನದ ಫಲದಿಂದ ನಿಮ್ಮ ಮುಂದಿನ ಮೂರು ತಲೆಮಾರುಗಳವರಿಗೆ ಬಡತನದ ಭಯವೇ ಇರುವುದಿಲ್ಲ. ಒಂದು ಭಕ್ತಿ ಪೂರ್ಣ ಊಟಕ್ಕೆ ಇಷ್ಟು ಭಾಗ್ಯ ಬರುವುದಾದರೆ ಭಕ್ತಿ ಪೂರ್ಣವಾಗಿ ಮಾಡುವ ಅನ್ನ ಸಮಾರಾಧನೆಯ ಮಹಿಮೆ ಇಷ್ಟೆಂದು ಬಣ್ಣಿಸಲು ಸಾಧ್ಯವಿಲ್ಲ. ಈ ಕ್ರಮವನ್ನು ನಿಮ್ಮ ಮುಂದಿನವರು ನಡೆಸಿಕೊಂಡು ಹೋದರೆ ಶ್ರೀಮಂತಿಕೆ ತಲೆ ತಲೆ ಮಾರುಗಳ ಕಾಲ ಮುಂದುವರೆದುಕೊಂಡು ಹೋಗುತ್ತದೆ." ಎಂದು ಗೋಪಾಲದಾಸರು ವಿವರಿಸಿ ಅವರನ್ನು ಅಡಿಗೆ ಮಾಡಿಕೊಳ್ಳಲು ಅವಸರಿಸಿದರು.

ಶೀಘ್ರದಲ್ಲಿಯೇ ಎರಡೂ ಕಡೆಗೆ ಅಡುಗೆ ಸಿದ್ಧವಾಯಿತು. ದಾನ ಮಾಡುವುದು ಎಂದರೆ ದಕ್ಷಿಣೆ ಸಹಿತ ಇದ್ದರೆ ಮಾತ್ರ ಪೂರ್ಣಪುಣ್ಯ. ಈ ವಿಷಯ ಗೊತ್ತಿದ್ದ ಕರಿಬಸಪ್ಪ ದಕ್ಷಿಣೆ ಕೊಡಲು ಹಣವಿಲ್ಲದ್ದರಿಂದ ಮನೆಯಿಂದ ತಂದಿದ್ದ ಮೂರು ಅಡಿಕೆ ನೀಡಿ ಪರಮಾತ್ಮನಿಗೆ ಸಮರ್ಪಣೆ ಎಂದು ಕೈ ಮುಗಿದ.

ಬೇರೆ ಬೇರೆಯಾಗಿಯೇ ಊಟಕ್ಕೆ ಕುಳಿತರು.

ತನ್ನ ಭೋಜನ ನಿರಾಕರಿಸಿ ಮುಂದೆ ಸಾಗಿದ ಈ ಮೂವರ ವರ್ತನೆ ಬಗ್ಗೆ ಕೇಳಿದ ದೇಶಾಯಿಯವರು ಅವರನ್ನು ನೋಡಿಯೇ ಬಿಡಬೇಕೆಂದು ಹುಡುಕಿಕೊಂಡು ಬಂದರು.

ಮೂವರು ಊಟಕ್ಕೆ ಕುಳಿತಿದ್ದನ್ನು ಅವರು ಮರೆಯಲ್ಲಿ ನಿಂತು ನೋಡುತ್ತಿದ್ದಂತೆ ಲಕ್ಷಲಕ್ಷ ಬ್ರಾಹ್ಮಣರು ಊಟ ಮಾಡುತ್ತಿರುವಂತೆ ದೇಶಾಯರ ಕಣ್ಣಿಗೆ ಕಾಣಿಸಿತು. ಗೋಪಾಲದಾಸರು ತೆಗೆದುಕೊಳ್ಳುತ್ತಿದ್ದ ತುತ್ತುಗಳನ್ನು ಸ್ವೀಕರಿಸಲು ಅವರ ಶರೀರದಲ್ಲಿಯ ದೇವಾನುದೇವತೆಗಳು, ಅವರ ಅಂತರ್ಯಾಮಿ ಪರಮಾತ್ಮ ಬಾಯಿ ತೆಗೆದು ಸ್ವೀಕರಿಸುತ್ತಿದ್ದುದನ್ನು ಕಂಡು ದೇಶಾಯರು ಅವಕ್ಕಾಗಿ ಹೋದರು. ಊಟಕ್ಕೆ ಕುಳಿತ ಗೋಪಾಲದಾಸರು ಸಾಮಾನ್ಯರಲ್ಲವೆಂದು ಅವನಿಗೆ ಹೊಳೆದು ಹೋಯಿತು. ಅರಿವಿಲ್ಲದೆಯೇ ಕರಗಳು ಜೋಡಿಸಲ್ಪಟ್ಟವು.

ಭೋಜನವಾದ ಮೇಲೆ ದೂರದ ಮರೆಯಲ್ಲಿ ನಿಂತಿದ್ದ ದೇಶಾಯರನ್ನು ಗೋಪಾಲದಾಸರೇ ಕರೆದರು.

"ನಮ್ಮನ್ನು ಊಟಕ್ಕೆ ಕರೆಯಲು ನಿನ್ನ ಆಳನ್ನು ಕಳಿಸಿದ್ದೆ. ನಿನಗೆ ಅಂಥ ಮುಖ್ಯ ಕೆಲಸವೇನೂ ಇರಲಿಲ್ಲ. ಇದರಿಂದ ನಿನ್ನಲ್ಲಿರುವ ಅಹಂಕಾರ ವ್ಯಕ್ತವಾಯಿತಾಗಲಿ ಭಕ್ತಿ ಶೂನ್ಯವಾಗಿತ್ತು. ಆದರೂ ಅನ್ನದಾನದ ಪುಣ್ಯ ಪೂರ್ತಿ ವ್ಯರ್ಥವಾಗುವುದಿಲ್ಲ. ಆದ್ದರಿಂದಲೇ ದೇವಾನುದೇವತೆಗಳು ನಿನಗೆ ದರ್ಶನ ನೀಡಿದರು. ನಿನ್ನಲ್ಲಿ ಭಕ್ತಿಯೂ

ಸೇರಿದ್ದರೆ ನಿನ್ನ ಊಟವನ್ನು ಅವರೇ ಸ್ವೀಕರಿಸುತ್ತಿದ್ದರು. ಪುಣ್ಯಜೀವಿ ನೀನು. ನೀಡುವ ಭಾಗ್ಯ ಎಲ್ಲರಿಗೂ ಸಿಕ್ಕುವುದಿಲ್ಲ. ಆ ಭಾಗ್ಯ ಸಿಕ್ಕಾಗ ಅಹಂಕಾರಕ್ಕೆ ಅವಕಾಶ ಕೊಟ್ಟರೆ ಫಲದ ಮೌಲ್ಯ ಬಹಳ ಕಡಿಮೆಯಾಗಿ ಹೋಗುತ್ತದೆ. ಇನ್ನು ಮುಂದೆಯಾದರೂ ಸತ್‌ಕಾರ್ಯಕ್ಕೆ ಸತ್‌ಪ್ರವರ್ತನೆಯಿರಲಿ. ಸನ್ಮಾರ್ಗವಿರಲಿ. ಸರ್ವೋತ್ತಮನ ಅನುಗ್ರಹ ನಿನಗಾಗಲಿ" ಎಂದು ಹಿತವಚನ ನೀಡಿ ಗೋಪಾಲದಾಸರು ಆಶೀರ್ವದಿಸಿದರು.

ಲಕ್ಷಜನ ಸಂತರ್ಪಣೆ ಎನ್ನುವ ಈ ಪುಟ್ಟ ಘಟನೆಯ ಮೂಲಕ ಮಹದ್ ಸಂಗತಿಯನ್ನು ಜಗತ್ತಿಗೆ ತೋರಿದ ಶ್ರೀರಾಘವೇಂದ್ರ ಗುರು ಸಾರ್ವಭೌಮರ ತತ್ವಪ್ರಿಯತೆ ನೆನೆದು ಎಲ್ಲರೂ ಮತ್ತೊಮ್ಮೆ "ರಾಜಾಧಿರಾಜ ಗುರು ಸಾರ್ವಭೌಮ ಗೋವಿಂದಾ ಗೋವಿಂದ' ಎಂದು ಘೋಷಿಸಿದರು. ಹರಿಗುರುಗಳ ದಿವ್ಯ ನಾಮದ ಘೋಷಣೆ ಸುತ್ತೆಲ್ಲಾ ಪಸರಿಸುತ್ತಿದ್ದಂತೆ ಗೋಪಾಲದಾಸರು ಆ ಶಬ್ದಗಳನ್ನು ಮನದಲ್ಲಿ ಗಟ್ಟಿಯಾಗಿ ನೆಟ್ಟು ದೇವರನ್ನು ನೆನೆಯುತ್ತಾ ಮುಂದೆ ಪ್ರಯಾಣಿಸಿದರು.

***

ಗೋಪಾಲದಾಸರ ಪೂಜೆಯೆಂದರೆ ಒಮ್ಮೊಮ್ಮೆ ಬಹಳ ಕಾಲವಾಗಿ ಬಿಡುತ್ತಿತ್ತು. ಕೆಲವೊಮ್ಮೆ ಶೀಘ್ರ ಮುಗಿಸಿ ಮುಂದುವರೆಯುತ್ತಿದ್ದರು. ಮಾರ್ಗಮಧ್ಯದಲ್ಲಿ ಹಾಡು ತೆಗೆದರೆಂದರೆ ಕುದುರೆಯಿಂದ ಇಳಿದು ಕುಣಿಯುತ್ತಾ ಕುಣಿಯುತ್ತಾ ಕಾಲ ಕಳೆಯುತ್ತಿದ್ದುದನ್ನೇ ಮರೆತು ಬಿಡುತ್ತಿದ್ದರು. ಪುನಃ ಕುದುರೆ ಏರಿ ಅವರು ಯಾವಾಗ ಪ್ರಯಾಣ ಮುಂದುವರಿಸುತ್ತಾರೆಂದು ತಮ್ಮಂದಿರಿಗೆ ಊಹಿಸಲು ಸಾಧ್ಯವಾಗುತ್ತಿರಲಿಲ್ಲ.

ಒಂದು ದಿನ ಗೋಪಾಲದಾಸರು ಮಾರ್ಗ ಮಧ್ಯದಲ್ಲಿ ಕಂಡು ಬಂದ ಶ್ರೀ ಆಂಜನೇಯನ ಗುಡಿಯಲ್ಲಿ ಕುಣಿಯ ತೊಡಗಿದರು. ತಾಸು ಎರಡು ತಾಸು ಕಳೆದರೂ ಅವರ ಭಜನೆ ನಿಲ್ಲಲಿಲ್ಲ.

ಬಹಳ ಹೊತ್ತಿನ ಮೇಲೆ ಕಣ್ಣು ತೆರೆದ ಗೋಪಾಲದಾಸರು ಮಧ್ಯಾಹ್ನ ಕಾಲ ಮೀರುತ್ತಿದ್ದುದನ್ನು ಗಮನಿಸಿ ತಮ್ಮಂದಿರೆಡೆಗೆ ನೋಡಿದರು. ಊಟದ ವೇಳೆಯಾಗಿ ಹೋಗಿತ್ತು. ತಮ್ಮಂದಿರು ಬಹಳ ಹಸಿದಿರಬೇಕೆಂದೆನಿಸಿತು.

"ಈ ದಿನ ಇಲ್ಲಿ ಅಡುಗೆ ವ್ಯವಸ್ಥೆಗೂ ನಿಮಗೆ ಹೇಳಲಿಲ್ಲ. ಹತ್ತಿರದಲ್ಲಿ ಯಾವ ಹಳ್ಳಿಯೂ ಇಲ್ಲ. ಈ ದಿನ ಉಪವಾಸವಾಗುತ್ತದೇನೋ ಎಂದು ಕಳವಳಗೊಂಡಿದ್ದೀರಾ?" ತಮ್ಮಂದಿರನ್ನು ಕೇಳಿದರು ಗೋಪಾಲದಾಸರು.

"ಅಣ್ಣಾ ನೀವು ಹಾಡುತ್ತಿದ್ದರೆ ಹೊತ್ತೇ ಗೊತ್ತಾಗುವುದಿಲ್ಲ ಇನ್ನು ಹಸಿವೆಯ ಮಾತು ಎಲ್ಲಿಂದ ಬರುತ್ತದೆ? ಈಗ ಬೇಕಾದರೆ ಇಲ್ಲಿಯೇ ಯಾವುದಾದರೂ ಬಾವಿಯ ನೀರು ತಂದು ಅಡುಗೆ ಮಾಡು ಎಂದರೆ ಮಾಡುತ್ತೇನೆ" ದಾಸಣ್ಣ ನುಡಿದ.

"ಬೇಡ ದಾಸೂ, ಶ್ರೀ ಆಂಜನೇಯನೇ ವಿಶೇಷ ಸನ್ನಿಹಿತನಾಗಿ ನೇವೈದ್ಯ ಮಾಡಿದ ರಾಮ ದೇವರ ಪ್ರಸಾದ ಈದಿನ ನಮಗೆ ದೊರೆಯಲಿದೆ. ಹೊತ್ತಾಗಲಿ ಎಂದೇ ಶ್ರೀ ಪ್ರಾಣದೇವರು ನಮ್ಮನ್ನು ಇಲ್ಲಿ ನಿಲ್ಲಿಸಿಕೊಂಡಿದ್ದಾರೆ. ಮುಂದೆ ಬರಲಿರುವ ರಾಯಚೂರಿನಲ್ಲಿ ಶ್ರೀ ರಾಮದೇವರ ಪ್ರಸಾದ ಸಿದ್ಧವಾಗುತ್ತಲಿದೆ. ಬೇಗನೆ ಪ್ರಯಾಣಿಸೋಣ ಬನ್ನಿ" ಎಂದು ಗೋಪಾಲದಾಸರು ನುಡಿದು ಪ್ರಯಾಣಕ್ಕೆ ಕುದುರೆಗಳನ್ನು ಅಣಿಗೊಳಿಸಿದರು

"ಶ್ರೀ ರಾಮದೇವರ ಪ್ರಸಾದವೆಂದರೆ ಮಠಾಧಿಪತಿಗಳ ವ್ಯವಸ್ಥೆಯಿಂದೇ ಅರ್ಥ. ಈಗಾಗಲೇ ಸಂಜೆಯಾಗುತ್ತಾ ಬಂದಿದೆ ಈ ಅವೇಳೆಯಲ್ಲಿ ರಾಮದೇವರ ಪೂಜಾದರ್ಶನ ಹಾಗೂ ಪ್ರಸಾದ ದೊರೆಯಲು ಹೇಗೆ ಸಾಧ್ಯ" ದಾಸಣ್ಣ ಯೋಚಿಸಿದ.

ವಿಷಯ ಬೇಗ ಹೊಳೆಯಲಿಲ್ಲ. ಕಣ್ಣು ಮುಚ್ಚಿ ಅಂತರ್‌ಮುಖಿಯಾಗಿ ವಿಷಯವನ್ನು ಚಿಂತಿಸಿದ.

ಸಂಗತಿಯನ್ನು ಸ್ವಯಂ ಶೋಧನೆಯಿಂದ ತಮ್ಮನು ಕಂಡುಕೊಳ್ಳಲಿ ಎಂದು ಗೋಪಾಲದಾಸರು ಸುಮ್ಮನೆ ನಿಂತಿದ್ದರು. ಸೀನಣ್ಣನೂ ಅಣ್ಣನೊಂದಿಗೆ ಕೈಕಟ್ಟಿ ನಿಂತುಕೊಂಡು ಸೋದರನ ಅಂತರ ದೃಷ್ಟಿಯ ಪಕ್ವತೆ ಗ್ರಹಿಸಲು ಕೌತುಕನಾಗಿದ್ದ.

ಸ್ವಲ್ಪ ಹೊತ್ತಿನ ಮೇಲೆ ಕಣ್ಣು ತೆಗೆದ ದಾಸಣ್ಣ ಅಣ್ಣನಿಗೆ ನಮಸ್ಕರಿಸಿ ನುಡಿದ

"ಅಡುಗೆಯವರೊಬ್ಬರ ಅಜಾಗ್ರತೆಯಿಂದ ವಿಷಮಿಶ್ರಿತವಾದ ಆಹಾರವನ್ನು ಪರಮಾತ್ಮನಿಗೆ ನೈವೇದ್ಯ ಮಾಡಿಬಿಟ್ಟರು. ಆನಂತರ ಅದರಲ್ಲಿ ವಿಷ ಸೇರಿರುವ ವಿಷಯ ತಿಳಿದಾಗ ಸ್ವಲ್ಪವೂ ಕಕ್ಕಾಬಿಕ್ಕಿಯಾಗಲಿಲ್ಲ ಅವರು. ದೇವರ ಮಹಾ ನೇವ್ಯೇದ್ಯವನ್ನು ಸರಿಯಾಗಿ ಪರೀಕ್ಷಿಸದೆ ಬಿಟ್ಟದ್ದು ನಮ್ಮ ಅಪರಾಧ. ಅದನ್ನು ಸ್ವಾಮಿಗೆ ಸಮರ್ಪಿಸಿಯಾಗಿದೆ. ಆದ್ದರಿಂದ ನಮಗೆ ಅದೇ ಅಮೃತ ಎಂದೆನ್ನುತ್ತಾ ಅದನ್ನೇ ಭುಜಿಸಿದ ಮಹಾನುಭಾವರವರು. ಆ ದಿನ ನಡೆದ ಅಚಾತುರ್ಯಕ್ಕೆ ಅದನ್ನೇ ಪ್ರಾರಬ್ಧವಾಗಿ ಸ್ವೀಕರಿಸಿ ಜೀವನಪರ್ಯಂತವೂ ಸೂರ್ಯಾಸ್ತವಾದ ಮೇಲೆಯೇ ನೇವೇದ್ಯ ಮಾಡಿ ಭುಜಿಸುವ ಪರಿಪಾಠವಿಟ್ಟುಕೊಂಡ ಮುನಿಪುಂಗವರು.

ಅವರು ರಾಮದೇವರಿಗೆ ಸಮರ್ಪಿಸಿದ ನೇವೇದ್ಯ ಈ ದಿನ ಸಿಕ್ಕುತ್ತದಲ್ಲವೆ?" ದಾಸಣ್ಣ ಅಣ್ಣಂದಿರಿಗೆ ವಿವರಿಸಿದ.

"ಹೇಳು ಹಾಗಾದರೆ, ಯಾರು ಆ ಮುನಿಪುಂಗವರು" ಸೀನಣ್ಣ ಪ್ರಶ್ನಿಸಿದ.

"ಇನ್ನಾರು? ಉತ್ತರಾದಿ ಮಠದಲ್ಲಿ ವಿರಾಜಮಾನರಾಗಿದ್ದ ಸತ್ಯಪ್ರಿಯ ತೀರ್ಥರ ವರಕುಮಾರಕರಾದ ಶ್ರೀ ಸತ್ಯಬೋಧ ತೀರ್ಥ ಶ್ರೀಪಾದಂಗಳವರಲ್ಲವೆ? ರಾತ್ರಿ ವೇಳೆ ನೈವೇದ್ಯ ಮಾಡಿದರೂ ಸವಿತೃನಾಮಕ ಪರಮಾತ್ಮ ಆಗಲೂ ಇದ್ದು ಪ್ರಸಾದ ಸ್ವೀಕರಿಸಿ ಹೋಗುವಂತೆ ಮಾಡುವ ತಪೋಶಕ್ತಿ ಅವರಲ್ಲಿ ಅಲ್ಲದೆ ಮತ್ತಾರಲ್ಲಿ ಇರಲು ಸಾಧ್ಯ?" ನುಡಿದ ದಾಸಣ್ಣ.

ತಮ್ಮನ ವಿವರಣೆ ಕೇಳಿ ಗೋಪಾಲದಾಸರು ಹರ್ಷಭರಿತರಾದರು. ಮುಂದಾಗುವುದನ್ನು ಇಂದೇ ಗ್ರಹಿಸುವ ನಿನ್ನ ಜ್ಞಾನಶಕ್ತಿ ಎಷ್ಟು ವರ್ಧಿಸಿದೆಯೆಂದು ತಿಳಿಯಲು ನಾನು ಬೇಕೆಂದೇ ವಿಷಯ ವಿವರಿಸಲಿಲ್ಲ. ನನ್ನ ಪರೀಕ್ಷೆಯಲ್ಲಿ ನೀನು ಉತ್ತೀರ್ಣನಾಗಿದ್ದಿ. ಈ ನಿನ್ನ ಶಕ್ತಿ ಶ್ರೀ ಸ್ವಾಮಿಗಳಿಗೆ ಈ ದಿನ ಸಮರ್ಪಣೆಯಾಗಲಿ" ಎಂದು ಗೋಪಾಲದಾಸರು ನುಡಿದಾಗ

"ಅಷ್ಟೇ ಅಲ್ಲಣ್ಣಾ, ನಮ್ಮ ಪರಮಗುರುಗಳಾದ ವಿಜಯದಾಸರು, ಅವರ ಶಿಷ್ಯರಾದ ನೀವು, ನಿಮ್ಮಿಂದ ಅಂಕಿತ ಪಡೆದ ನಾವು-ಎಲ್ಲರೂ ಒಂದೇ ಮಾರ್ಗದಲ್ಲಿ ಸಾಗುವ ಪ್ರಯಾಣಿಕರು ಎನ್ನುವುದನ್ನು ಶ್ರೀಮಠದಲ್ಲಿಯ ಜನರು ಗ್ರಹಿಸಬೇಕಾಗಿದೆ. ಹಿಂದೆಲ್ಲಾ ನಾನು ಈ ರೀತಿ ಭವಿಷ್ಯದ ಬಗ್ಗೆ ತಿಳಿಯಲು ಪ್ರಯತ್ನಿಸಿದರೆ ನೀವು ನಿವಾರಿಸುತ್ತಿದ್ದಿರಿ. ಅದು ಸಲ್ಲದೆಂದು ಹೇಳುತ್ತಿದ್ದಿರಿ. ನಿಮಗೂ ನಿಮ್ಮ ಗುರುಗಳಾದ ವಿಜಯದಾಸರು ಅದೇ ರೀತಿ ಆಜ್ಞಾಪಿಸಿರುವುದಾಗಿ ಹೇಳಿದ್ದಿರಿ. ಹಾಗಿದ್ದರೂ ನೀವು ಈ ದಿನ ನನ್ನ ಸ್ವಚಿಂತನೆಗೆ ಅವಕಾಶ ಕೊಟ್ಟಿದ್ದೇಕೆಂದು ಈಗ ತಿಳಿಯುತ್ತಿದೆ. ಕನ್ನಡದಲ್ಲಿ ಹಾಡಿ ಕುಣಿಯುವ ಜನಗಳಿಗೆ ಪರಮಾತ್ಮ ಅನುಗ್ರಹಿಸುವುದಿಲ್ಲವೆಂದು ಮಠದ ಕೆಲವು ಪಂಡಿತರು ಈಗಲೂ ಭಾವಿಸಿದ್ದಾರೆ. ಭಾಷೆ ಯಾವುದಾದರೇನು? ಭಕ್ತಿ ಮುಖ್ಯ ಎಂಬ ಸಂಗತಿ ಅವರಿಗೆ ಮನದಟ್ಟಾಗಿಸಲು ನೀವು ಕೃತನಿಶ್ಚಯರಾಗಿದ್ದೀರಿ. ಆದ್ದರಿಂದಲೇ ಈ ದಿನ ನನ್ನನ್ನು ಇಷ್ಟು ಮುಂದುವರೆಯಲು ಬಿಟ್ಟಿರಿ. ಈ ರೀತಿ ಸ್ವಭವಿಷ್ಯ ಚಿಂತನೆಯಿಂದ ಪುಣ್ಯಹ್ರಾಸವಾಗುತ್ತದೆಂದು. ಗೊತ್ತಿದ್ದರೂ ಭಕ್ತಿಯ ಶಕ್ತಿ ತೋರಲು ಈ ದಿನ ನನಗೆ ಅವಕಾಶ ಕೊಟ್ಟಿರಿ. ಇದರಿಂದ ನನ್ನ ಉದ್ಧಾರವಾಯಿತು. ಕನ್ನಡ ಹರಿದಾಸರ ಶಕ್ತಿಯೂ ಜಗತ್ತಿಗೆ ತಿಳಿಸುವತ್ತ ನಿಮ್ಮ ಪ್ರಯತ್ನ ಸಾಗಿದೆ. ಬಹುದೂರದರ್ಶಿತ್ವ ನಿಮ್ಮದು. ವಿಶಾಲ

ಅಂತಃಕರುಣ ನಿಮ್ಮದು. ನಿಮ್ಮನ್ನು ಅಣ್ಣನನ್ನಾಗಿ, ಗುರುಗಳನ್ನಾಗಿ ಪಡೆದ ನಾನು ಪರಮ ಪುಣ್ಯಶಾಲಿ" ಎಂದು ದಾಸಣ್ಣ ನುಡಿಯುತ್ತಾ ಅಣ್ಣನಿಗೆ ಮತ್ತೊಮ್ಮೆ ನಮಸ್ಕರಿಸಿದ.

ಮೂವರೂ ರಾಯಚೂರು ಸೇರಿದಾಗ ರಾತ್ರಿಯಾಗುತ್ತಾ ಬಂದಿತ್ತು.

ಪೂಜಾ ವ್ಯವಸ್ಥೆಗಳೆಲ್ಲಾ ಮುಗಿದಿದ್ದರೂ ಸತ್ಯಬೋಧ ತೀರ್ಥ ಶ್ರೀಪಾದಂಗಳವರು ಆ ದಿನ ಇನ್ನೂ ಪೂಜೆಗೆ ಏಳದಿರುವುದನ್ನು ಕಂಡು ಮಠದ ಪಂಡಿತ ವರ್ಗಕ್ಕೆ ಆಶ್ಚರ್ಯ. ಯಾರೋ ದೊಡ್ಡ ಪಂಡಿತರೊಬ್ಬರು ಈ ದಿನ ಶ್ರೀ ಮಠಕ್ಕೆ ಬರಲಿರಬೇಕೆಂದೂ ಭಾರಿ ಭಕ್ತರಿಗಲ್ಲದೆ ಶ್ರೀಗಳವರು ಹಾಗೆ ಬೇರೆಯವರಿಗೆ ಕಾಯುವ ಸ್ವಭಾವದವರಲ್ಲವೆಂದೂ ಪಂಡಿತರು ತರ್ಕಿಸಿದರು.

ಅವರ ತರ್ಕ ಸರಿಯಾಗಿಯೇ ಇತ್ತು.

ಗೋಪಾಲದಾಸರು ಇಬ್ಬರು ತಮ್ಮಂದಿರೊಂದಿಗೆ ಪಂಡರಾಪುರ ಯಾತ್ರಾ ಮಾರ್ಗವಾಗಿ ಈ ದಿನ ಇಲ್ಲಿಗೆ ಬರುತ್ತಾರೆಂದು ಮಹಾಜ್ಞಾನಿಗಳಾದ ಸ್ವಾಮಿಗಳಿಗೆ ಬೇರೆಯವರು ಹೇಳಬೇಕೆ? ಅವರ ಪರಮ ಪ್ರೀತಿಗಳಿಸಿದ ವಿಜಯದಾಸರ ಶಿಷ್ಯರು ಬರುತ್ತಾರೆಂದರೆ ಸ್ವಾಮಿಗಳಿಗೆ ಅದೆಷ್ಟು ಆನಂದವಾಗಿರಲಿಕ್ಕಿಲ್ಲ?

ಮೂವರು ಕುದುರೆಗಳಿಂದ ಇಳಿಯುತ್ತಿದ್ದಂತೆ "ಬಾ, ಬಾ, ಭಾಗಣ್ಣಾ, ದಾರಿಯ ಮಧ್ಯ ಬೆಳೆದಿದ್ದ ಶ್ರೀ ತುಳಸಿ ಹಾಗೂ ನಾನಾ ಪುಷ್ಪಗಳನ್ನು ನೀನು ತರುತ್ತೀಯೆಂದು ನಮ್ಮ ರಾಮದೇವರು ಕಾದಿದ್ದಾರೆ. ಬೇಗ ಬಾ, ಅವುಗಳನ್ನು ಶೀಘ್ರವೇ ಕೊಡು" ಎಂದಾಗ ಸ್ವಾಮಿಗಳ ದೂರ ಸಂಗತಿ ಗ್ರಾಹ್ಯ ಶಕ್ತಿಯನ್ನು ಕಂಡು ದಾಸಣ್ಣನಿಗೆ ಆಶ್ಚರ್ಯವಾಗದೆ ಇರಲಿಲ್ಲ.

ತಾವು ಆಯ್ದು ತಂದಿದ್ದ ತುಳಸಿ ಹಾಗೂ ಫಲಗಳನ್ನು ಸ್ವಾಮಿಗಳಿಗೆ ನೀಡಿ ಮೂವರೂ ನಮಸ್ಕರಿಸಿದರು.

ರಾಜ ಮಹಾರಾಜರು ಬರುತ್ತೇವೆಂದರೂ ಅವರಿಗಾಗಿ ಕಾಯದೆ, ಕಾರ್ಯ ಮುಂದುವರಿಸುವ ತಮ್ಮ ಸ್ವಾಮಿಗಳು ಈ ಮೂರು ಜನ ಸಾಮಾನ್ಯ ಬ್ರಾಹ್ಮಣರಿಗಾಗಿ ಕಾದಿದ್ದ ವಿಷಯ ತಿಳಿದ ಮಠದ ಪಂಡಿತರಿಗೆ ಇದರಿಂದ ಸ್ವಲ್ಪ ಬೇಸರವೂ ಆಗಿತ್ತು.

ಸೂಕ್ಷ್ಮಗ್ರಾಹಿಗಳಾದ ಸ್ವಾಮಿಗಳಿಗೆ ಪಂಡಿತರ ಈ ಶಾಠ್ಯಗುಣ ಹಿಡಿಸಲಿಲ್ಲವಾದರೂ ಅವರಿಗೆ ತಿಳಿಹೇಳಲು ಇದೇ ಸರಿ ಸಮಯ ಎಂದು ಅವರು ಮುಗುಳ್ನಕ್ಕು ಪೂಜೆಗೆ ಕುಳಿತರು.

ಸ್ವಾಮಿಗಳ ನಿರ್ದೇಶನದಂತೆ ಆ ಮೂರು ಜನರನ್ನು ತೀರಾ ಮುಂದೆ ಕೂಡಿಸಲಾಗಿತ್ತು. ಶ್ರೀಮದಾಚಾರ್ಯಕರಾರ್ಚಿತ ದಿವ್ಯ ಮಂಗಳ ಮೂರ್ತಿಗಳ ಮಹಾನ್ ದರ್ಶನ ಅತಿ ಹತ್ತಿರದಿಂದ ಅವರಿಗಾಗುವಂತೆ ಅನುಗ್ರಹಿಸಿದ ಸ್ವಾಮಿಗಳವರ ರೀತಿ ಪಂಡಿತರಿಗೆ ಅರ್ಥವಾಗಲಿಲ್ಲ.

ಮಹಾಪೂಜೆಯಾದ ಮೇಲೆ ತೀರ್ಥ ನೀಡುವಾಗ ಅಗ್ರಪ್ರಾಶಸ್ತ್ಯವನ್ನು ಸ್ವಾಮಿಗಳು ಅವರಿಗೇ ನೀಡಿದಾಗ ಪಂಡಿತರು ಕಕ್ಕಾಬಿಕ್ಕಿಯಾಗಿ ಹೋದರು.

ಪಂಡಿತರಲ್ಲಿ ಉಂಟಾಗಿರುವ ಈ ಮಾನಸಿಕ ಕ್ಷೋಭೆಯನ್ನು ತಿಳಿದಿದ್ದ ಸ್ವಾಮಿಗಳು ತೀರ್ಥ ಪ್ರಸಾದವಾದ ಮೇಲೆ ಪಂಡಿತರನ್ನು ಮರೆಯಲ್ಲಿ ಕರೆದು "ಈ ಭಾಗಣ್ಣ ಹಾಗೂ ಆತನ ತಮ್ಮಂದಿರು ಸಾಧಾರಣದವರೆಂದು ಭಾವಿಸಿದ್ದೀರಾ? ಈ ಮೂವರು ಅಪರೋಕ್ಷ ಜ್ಞಾನಿಗಳು. ಕನ್ನಡ ಹರಿದಾಸ ಸಾಹಿತ್ಯ ಶಿರೋಮಣಿಗಳು. ಇವರ ಸೇವೆಯಿಂದ ತತ್ವವಾದದ ಪ್ರಭೆ ಸುತ್ತೆಲ್ಲಾ ಪಸರಿಸಲಿದೆ. ಆ ಕಾರಣಕ್ಕಾಗಿಯೇ ಶ್ರೀ ರಾಮ ದೇವರು ಇವರ ಮೇಲೆ ಪರಮಾನುಗ್ರಹ ಬೀರಿದ್ದಾನೆ. ಜಗದೊಡೆಯನೇ ಒಪ್ಪಿದ ಮೇಲೆ ಮಠದ ಒಡೆಯರಾದ ನಾವು ಅನುಸರಿಸದೆ ಬಿಡಲಿಕ್ಕಾದೀತೆ?" ಎಂದು ನುಡಿದ ಸ್ವಾಮಿಗಳ ವಿವರಣೆ ಪಂಡಿತರಿಗೆ ಹಿಡಿಸಲಿಲ್ಲ.

ಭಾಗಣ್ಣನನ್ನು ಅಪರೋಕ್ಷ ಜ್ಞಾನಿ ಗೋಪಾಲದಾಸರೆಂದು ಜನರು ಕೊಂಡಾಡುತ್ತಿರುವ ವಿಷಯ ಪಂಡಿತರಿಗೆ ತಿಳಿದಿತ್ತಾದರೂ ಜನಗಳ ನಂಬಿಕೆಗೆ ಸರಿಯಾದ ಆಧಾರವಿಲ್ಲವೆಂಬುದು ಅವರ ತರ್ಕ.

ಗೋಪಾಲದಾಸರ ರೇಷ್ಮೆ ವಸ್ತ್ರಗಳ ಅಲಂಕಾರ, ಸುಗಂಧ ದ್ರವ್ಯಗಳ ಉಪಯೋಗ, ವೈಭವದ ಜೀವನ ರೀತಿ ಕೇಳಿದ್ದ ಪಂಡಿತರಿಗೆ ಇಂಥ ಭೋಗಪ್ರಿಯ ಅಲಂಕಾರಮೂರ್ತಿಗೆ ಅಪರೋಕ್ಷ ಜ್ಞಾನ ಸಿದ್ಧಿಸುವುದೆಂದರೇನು ಎಂದು ಅವರ ಪ್ರಶ್ನೆ.

ಸ್ವಾಮಿಗಳು ಪಂಡಿತರ ಮುಂದೆ ಗೋಪಾಲದಾಸರು ಮತ್ತು ಅವರ ತಮ್ಮಂದಿರನ್ನು ಕರೆದು ಫಲ ಮಂತ್ರಾಕ್ಷತೆ ನೀಡುತ್ತಾ ಕೈ ತುಂಬಾ ಸಂಭಾವನೆ ಕೊಟ್ಟಾಗಲಂತೂ ಪಂಡಿತರಿಗೆ ಸಹನೆ ಮೀರಿ ಹೋಯಿತು.

ಅವರ ಮನಸ್ಸಿನಲ್ಲಿ ಎದ್ದಿರುವ ನಾನಾ ಸಮಸ್ಯೆಗಳಿಗೆ ಗೋಪಾಲದಾಸರಿಂದಲೇ ಉತ್ತರ ನೀಡಿಸಬೇಕೆಂದು ಸಂಕಲ್ಪಿಸಿದ ಸ್ವಾಮಿಗಳು-

"ಭಾಗಣ್ಣಾ ವಿಜಯದಾಸರಂಥ ಮಹಾನ್ ಶ್ರೇಷ್ಠರಿಂದ ಹರಿದಾಸ ದೀಕ್ಷೆ ಪಡೆದ ನೀವು ದಾಸ ತತ್ವಕ್ಕೆ ವಿರುದ್ಧವಾಗಿ ವರ್ತಿಸುತ್ತಿದ್ದೀರಲ್ಲಾ, ಇದರಿಂದ ವಿಜಯದಾಸರಿಗೆ ಅಪಕೀರ್ತಿ ಬರುವುದಿಲ್ಲವೆ?" ಸ್ವಾಮಿಗಳು ಪ್ರಶ್ನಿಸಿದರು.

ಈ ಪ್ರಶ್ನೆಯಿಂದ ಗೋಪಾಲದಾಸರು ಕಂಪಿಸಿ ಹೋದರು. ವಿಜಯದಾಸರಿಗೆ ಅಪಕೀರ್ತಿ ಬರುವುದಾದರೆ ತಾವು ಬದುಕಿದ್ದೂ ಸಾರ್ಥಕವೇನು? ಅವರ ಬಗ್ಗೆ ಯಾರಾದರೂ ಸ್ವಲ್ಪ ಸಣ್ಣ ಮಾತು ಆಡಿದ್ದು ಕೇಳಿಸಿದರೂ ಉಪವಾಸ ವ್ರತ ಮಾಡುವ ತಮ್ಮಿಂದ ಗುರುಗಳಿಗೆ ಅಪಕೀರ್ತಿ ಉಂಟಾಗುವುದಾದರೆ ತಾವು ಉಳಿಯುವುದಾದರೂ ಏತಕ್ಕೆ?

ಸ್ವಾಮಿಗಳ ಪ್ರಶ್ನೆಯಿಂದ ಕಂಪಿಸಿಹೋಗಿದ್ದ ಗೋಪಾಲದಾಸರನ್ನು ಸ್ವಾಮಿಗಳೇ ನಗುತ್ತಾ ಸಮಾಧಾನ ಪಡಿಸಿ "ನಿನ್ನ ಗುರುಭಕ್ತಿಯ ಬಗ್ಗೆ ಎರಡೆಣಿಸ ಲಿಲ್ಲ ಭಾಗಣ್ಣಾ, ನಿನ್ನ ವೈಭವಜೀವನ ಹರಿದಾಸ ತತ್ವಕ್ಕೆ ವಿರುದ್ಧವಲ್ಲವೆ? ವಿಜಯದಾಸರು ನಡೆಯುವ ರೀತಿಗೂ ನಿಮಗೂ ಬಹಳ ವ್ಯತ್ಯಾಸವಿದೆಯಲ್ಲಾ ಅದರ ಕಾರಣ ತಿಳಿಯಲು ಪ್ರಶ್ನಿಸಬೇಕಾಯಿತಷ್ಟೇ"

"ನಮ್ಮ ಗುರುಗಳು ಜ್ಞಾನ ಭಕ್ತಿವೈರಾಗ್ಯ ಶ್ರೇಷ್ಠರು. ಅವರು ಒಪ್ಪಿದ ರೀತಿ ಯಲ್ಲಿಯೇ ನಾನು ನಡೆಯುತ್ತಿದ್ದೇನೆ" ಭಾಗಣ್ಣ ವಿವರಿಸಿದ.

"ಸ್ವಾಮಿಗಳು ನೀಡಿದ ಅಪಾರ ದಕ್ಷಿಣೆಯನ್ನು ಅತಿ ಆಸೆಯಿಂದ ಇಸಿದು ಕೊಂಡೆ. ನಿನ್ನ ಲೋಭ ಕಂಡು ನಮಗೆಲ್ಲಾ ಅಸಹ್ಯವಾಗಿದೆ" ಪಂಡಿತರೊಬ್ಬರು ಮಾತಿನ ಮಧ್ಯದಲ್ಲಿಯೇ ಪ್ರವೇಶಿಸಿ ನುಡಿದು ಬಿಟ್ಟರು.

"ನಿನ್ನ ವೈಭವವೇನು? ಅಟ್ಟಹಾಸವೇನು? ಹಣದ ಬಗ್ಗೆ ಅದೆಷ್ಟೊಂದು ಆಸೆ? ತ್ಯಾಗವಿಲ್ಲ, ವೈರಾಗ್ಯವಿಲ್ಲ. ಜ್ಞಾನದ ಮಾತು ನಮಗೇಕೆ, ಸ್ವಾಮಿಗಳೇ ತಿಳಿದು ಕೊಂಡಿದ್ದಾರೆ" ಮತ್ತೊಬ್ಬ ಪಂಡಿತ ನುಡಿದು ಸ್ವಾಮಿಗಳ ಕಡೆ ನೋಡುತ್ತಾ ಮುಸಿಮುಸಿ ನಕ್ಕ.

ಗೋಪಾಲದಾಸರು ಸ್ವಾಮಿಗಳ ಕಡೆ ನೋಡಿದರು. "ಅವರ ಪ್ರಶ್ನೆಗೆ ನೀನು ಉತ್ತರಿಸಲೇ ಬೇಕು ಭಾಗಣ್ಣಾ" ಸ್ವಾಮಿಗಳು ನಗುತ್ತಾ ಆಜ್ಞಾಪಿಸಿದರು. ಅವರ ಮನದಿಂಗಿತವನ್ನು ಅರಿತ ಗೋಪಾಲದಾಸರು ಪಂಡಿತರ ಪ್ರಶ್ನೆಗಳಿಗೆ ಉತ್ತರಿಸಲು ನಿರ್ಧರಿಸಿದರು. "ಧನದ ಆಸೆಯನ್ನು ನಾನು ಬಿಟ್ಟಿಲ್ಲ ಎಂದಲ್ಲವೇ ನಿಮ್ಮ ಆಕ್ಷೇಪಣೆ?"

"ಹೌದು, ಹೌದು" ಒಟ್ಟಾಗಿ ಪಂಡಿತರು ನುಡಿದರು.

"ಧನದ ಆಸೆ ದನಗಳಿಗೆ ಇರುವುದಿಲ್ಲ. ನಾಣ್ಯ ಒಗೆದರೆ ನಾಯಿ ಮೂಸಿನೋಡಿ ಮುಂದೆ ಹೋಗಿ ಬಿಡುತ್ತದೆ. ಹಾಗಾದರೆ ಅವನ್ನು ವೈರಾಗ್ಯ ನಿಧಿಗಳೆಂದು ಕರೆಯ ಬಹುದೇ?" ಗೋಪಾಲದಾಸರು ನಗುತ್ತಾ ಪ್ರತಿ ಪ್ರಶ್ನಿಸಿದರು.

"ಸಂಚಾರವನ್ನು ಹೆಚ್ಚಾಗಿ ಮಾಡದೆ ಉತ್ತನೂರಿನ ಸ್ವಂತ ಮನೆಯಲ್ಲಿ ಸುಖವಾಗಿ ವಾಸ ಮಾಡಿಕೊಂಡಿದ್ದೀರಿ. ಇಷ್ಟೊಂದು ಮನೆಯ ಮೇಲೆ ವ್ಯಾಮೋಹ ಇಟ್ಟುಕೊಳ್ಳುವುದು ಸರಿಯೆ?" ಪ್ರಶ್ನಿಸಿದರೊಬ್ಬರು.

"ಮನೆ ಬಿಟ್ಟರೆ ವೈರಾಗ್ಯವೆ? ಗೂಗೆಗಳಿಗೆ ಮನೆಯೇ ಇರುವುದಿಲ್ಲ. ಅವಕ್ಕೆ ಜ್ಞಾನಿಗಳೆಂದು ಕರೆಯಬಹುದೆ?" ಗೋಪಾಲದಾಸರ ಈ ಪ್ರಶ್ನೆಯಿಂದ ಪಂಡಿತರು ಸ್ವಲ್ಪ ಕಕ್ಕಾ ಬಿಕ್ಕಿಯಾದರು.

ನಿತ್ಯ ಎಣ್ಣೆ ಸ್ನಾನ. ಸುಗಂಧಲೇಪನ, ಕುದುರೆ ಸವಾರಿ ಎಷ್ಟೊಂದು ತನುವಿನ ಮೇಲೆ ಶ್ರದ್ಧೆ! ಶರೀರದ ವೈಭವಕ್ಕೆ ಇಷ್ಟೊಂದು ಕಳಕಳಿ ಇರುವವರಿಗೆ ವೈರಾಗಿಗಳು ಎಂದು ಹೇಳಬೇಕೆ?" ಅವರಲ್ಲಿ ಚೇತರಿಸಿಕೊಂಡ ಪಂಡಿತರೊಬ್ಬರು ಪ್ರಶ್ನಿಸಿದರು.

ತನುಮನದ ಅಭಿಮಾನ ತೊರೆದು ಎಂಜಲು ಎಲೆಗೆ ನಾಯಿ ತಿಪ್ಪೆಯಲ್ಲಿ ಹಾರು ತ್ತದೆ. ಕೋಣ ಕೆಸರಿನಲ್ಲಿ ಉರುಳಾಡುತ್ತದೆ. ತನುಮನದಭಿಮಾನ ಬಿಟ್ಟ ಅವನ್ನು ವೈರಾಗ್ಯನಿಧಿಯೆಂದು ಕರೆಯೋಣವೆ?" ಗೋಪಾಲದಾಸರ ಪ್ರಶ್ನಾರ್ಥಕ ಉತ್ತರ ಪಂಡಿತರ ಬಾಯಿಯನ್ನು ಮುಚ್ಚಿಸಿತು. ತಮ್ಮ ಹಾಸ್ಯ ಪೂರ್ಣ ಉತ್ತರವನ್ನು ಗಂಭೀರವಾಗಿ ಸ್ವೀಕರಿಸಿ ತೇಜೋಭಂಗವಾದಂತೆ ಪರಿತಪಿಸುತ್ತಿದ್ದ ಪಂಡಿತರಿಗೆ ಗೋಪಾಲದಾಸರೇ ಉತ್ತರಿಸಿದರು. "ಧನವ ಕಟ್ಟಿದ ಚೀಲ ತಾನೇ ಧನವನ್ನು ಬಳಸುವುದಿಲ್ಲ. ಧಾನ್ಯ ತುಂಬಿದ ಚೀಲ ತಾನೇ ಉಣ್ಣುವುದಿಲ್ಲ. ಪುನುಗು ಬೆಕ್ಕು ಕಸ್ತೂರಿಯನ್ನು ತಾನೇ ಪಡೆಯುವುದಿಲ್ಲ. ಪರಮಾತ್ಮ ಅವಕ್ಕೆ ನೀಡಿದ್ದಾನೆ. ಇಟ್ಟು ಕೊಂಡಿವೆ. ಅವು ತಮಗೆ ಎಂದು ಅವು ಭಾವಿಸಿಲ್ಲ. ಭಗವಂತನು ನೀಡಿದ್ದನ್ನು ತ್ಯಾಜ್ಯವಾಗಿ ಪರಿಗಣಿಸದೆ ಅದಕ್ಕೆ ಕಾರಣನಾದ ಭಗವಂತನ ಲೀಲೆಗಳನ್ನು ಸ್ಮರಿಸುತ್ತಾ ಇರುವುದೇ ವೈರಾಗ್ಯ" ಎಂದು ನುಡಿದಾಗ ವೈರಾಗ್ಯದ ನಿಜ ವ್ಯಾಖ್ಯಾನ ಗ್ರಹಿಸಿ ಪಂಡಿತರು ಬೆಪ್ಪಾಗಿ ಕುಳಿತರು.

"ನೀವು ಮೂರು ಜನರು ನಮ್ಮ ವಿಜಯದಾಸರು ಸೂಚಿಸಿದ ಮಾರ್ಗದಲ್ಲಿ ನಡೆಯುತ್ತಿದ್ದೀರಿ. ಸ್ವರೂಪ ಯೋಗ್ಯತೆ ಅರಿತು ಅವರು ನಿರ್ದೇಶನ ನೀಡುತ್ತಾ ರೆಂದೂ ನಾವು ಬಲ್ಲೆವು. ನೀವು ಮೂರು ಜನ ಒಂದೇ ಮಾರ್ಗದಲ್ಲಿ ನಡೆಯುತ್ತಿ

ದ್ವೀರೆಂದು ತಿಳಿಯುವುದಕ್ಕಾಗಿ. ಮೂರು ಜನ ಬೇರೆ ಬೇರೆ ಜಾಗದಲ್ಲಿ ಕುಳಿತು ಕೊಂಡು ಒಂದು ಕಾವ್ಯ ಮಾಡಿರಿ. ಅದರಲ್ಲಿ ಏಕತೆಯಿದ್ದರೆ ನೀವು ವಿಜಯದಾಸರ ನಿಜ ಅನುಯಾಯಿಗಳೆಂದು ನಾವು ಭಾವಿಸುತ್ತೇವೆ" ಸ್ವಾಮಿಗಳು ನುಡಿದಾಗ ಪಂಡಿತರು ಸ್ವಲ್ಪ ಚೇತರಿಸಿಕೊಂಡರು. ತಮ್ಮ ಪರೀಕ್ಷೆಯಲ್ಲೇನೋ ಭಾಗಣ್ಣ ಗೆದ್ದಿದ್ದಾನೆ. ಆದರೆ ಸ್ವಾಮಿಗಳು ಈಗ ಸರಿಯಾದ ಸವಾಲು ಹಾಕಿದ್ದಾರೆ. ಇದರಲ್ಲಿ ಗೆಲ್ಲುವುದು ಸಾಧ್ಯವಿಲ್ಲ. ಬೇರೆ ಬೇರೆ ಜಾಗದಲ್ಲಿ ಕುಳಿತು ಒಂದೇ ಭಾವ, ಒಂದೇ ಸಂಗತಿ ಒಂದೇ ತತ್ವದ ವಿಷಯ ಬರೆದು, ಅವುಗಳಲ್ಲಿ ಪರಸ್ಪರ ಸಂಬಂಧವಿರಬೇಕಾದರೆ ಅಂಥ ಕಾವ್ಯ ರಚಿಸಲು ಅಪರೋಕ್ಷ ಜ್ಞಾನಿಗಳಿಂದ ಮಾತ್ರ ಸಾಧ್ಯ. ದೂರಮನಸ್ಪರ್ಶ, ಏಕಚಿಂತನೆಯ ಹಂತ ಅಪರೋಕ್ಷಿಗಳಿಗಲ್ಲದೆ ಬೇರೆಯವರಿಗೆ ಹೇಗೆ ಸಾಧ್ಯ? ಈಗ ಗೆಲ್ಲಲಿ ನೋಡೋಣ"

ಪಂಡಿತರು ಬರೆಯುವ ಸಲಕರಣೆಗಳನ್ನು ಮೂರು ಜನರಿಗೆ ಕೊಟ್ಟು ದೂರ ದೂರ ಜಾಗದಲ್ಲಿ ಬೇರೆಬೇರೆಯಾಗಿ ಕೂಡಿಸಿದರು.

ಸ್ವಲ್ಪ ಹೊತ್ತಿನಲ್ಲಿಯೇ ಅವರು ಮೂರೂ ಜನ ಬಂದು ಸ್ವಾಮಿಗಳಿಗೆ ತಮ್ಮ ಕೃತಿಗಳನ್ನು ಸಮರ್ಪಿಸಿದರು. ಬೇರೆ ಬೇರೆ ಕೂಡಿಸುವ ಮುನ್ನ ಯಾವ ವಿಷಯದ ಬಗ್ಗೆ ಬರೆಯಬೇಕೆಂದು ಪರಸ್ಪರ ಯೋಚಿಸಲು ಅವಕಾಶವೇ ಇರಲಿಲ್ಲ.

ಮೂರು ಜನ ಒಂದೇ ವಿಷಯದ ಮೇಲೆ ಕಾವ್ಯ ಬರೆದಿದ್ದರು. ಮೊದಲು ಬರುವ ಪಲ್ಲವಿ ಕಡೆಯಲ್ಲಿ ಬರುವ 'ಜತೆ'ಯನ್ನು ಗೋಪಾಲದಾಸರು ರಚಿಸಿದ್ದರೆ - ಮಧ್ಯದ ನುಡಿಗಳನ್ನು ತಮ್ಮಂದಿರು ಬರೆದಿದ್ದರು. ಕಾವ್ಯದಲ್ಲಿ ಪರಸ್ಪರ ಹೊಂದಾಣಿಕೆಯಿತ್ತು ಒಂದನ್ನು ಬಿಟ್ಟರೆ ಇನ್ನೊಂದಕ್ಕೆ ಪೂರ್ಣತೆಯಿರಲಿಲ್ಲ.

"ಮಾರಮದಘನ್ನ' ಗುರುಸ್ತುತಿಯ ಈ ಕಾವ್ಯದ ಏಕತೆ ಕಂಡು ಪಂಡಿತರಿಗೆ ತಮ್ಮ ತಪ್ಪಿನ ಅರಿವಾಯಿತು. ಈ ಮೂರೂ ಜನರು ಅಪರೋಕ್ಷ ಜ್ಞಾನ ಪಡೆದ ಭಕ್ತಶ್ರೇಷ್ಠರು ಎಂದು ಅವರಿಗೆಲ್ಲಾ ಮನ ಪೂರ್ಣವಾಗಿ ತಿಳಿದಾಗ ಅವರೆಲ್ಲಾ ಈ ಸೋದರರಿಗೆ ನಮಸ್ಕರಿಸಿದರು.

ಪಂಡಿತರಿಗಿದ್ದ ಸಂಶಯ ಪರಿಹಾರವಾಗಿದ್ದಕ್ಕೆ ಸ್ವಾಮಿಗಳಿಗೂ ಸಮಾಧಾನ ವಾಯಿತು.

"ನಿನ್ನ ತಮ್ಮನ ಸಾಧನೆಯನ್ನು ಬೆಳಗ್ಗೆ ಪರೀಕ್ಷಿಸಿ ನಮ್ಮ ಮೂಲಕ ಶ್ರೀರಾಮ ನಿಗೆ ಸಮರ್ಪಿಸಬೇಕೆಂಬ ನಿಮ್ಮ ಸಂಕಲ್ಪ ನೆರವೇರಿತಲ್ಲವೆ?" ಸತ್ಯಬೋಧ ಸ್ವಾಮಿಗಳ ಪ್ರಶ್ನೆ.

ಪ್ರಶ್ನಿಸಿದವರಿಗೆ ಮತ್ತು ಸಂಬಂಧಪಟ್ಟ ಮೂರು ಜನರಿಗೆ ಮಾತ್ರ ವಿಷಯ ಗೊತ್ತಾಯಿತು.

ಈ ಶ್ರೇಷ್ಠ ಚತುಷ್ಟಯರ ಮಹತ್ ಜ್ಞಾನಕ್ಕೆ ಅಲ್ಲಿದ್ದವರೆಲ್ಲಾ ಪೊಡಮಟ್ಟರು.

ಸೋದರತ್ರಯರು ಸ್ವಾಮಿಗಳಿಗೆ ಶಿರಸಾಷ್ಟಾಂಗವಾಗಿ ನಮಸ್ಕರಿಸಿದಾಗ ಸ್ವಾಮಿಗಳು ತುಂಬು ಮನದಿಂದ ಹರಸಿ ಮಂತ್ರಾಕ್ಷತೆ ನೀಡಿ ಶುಭಪ್ರಯಾಣಕ್ಕೆ ಆಶೀರ್ವದಿಸಿದರು.

***

ಗುರುಗಳ ಆಶೀರ್ವಾದ ಸಿಕ್ಕ ಮೇಲೆ ಶ್ರೀಹರಿ ಕರುಣಿಸದೆ ಬಿಟ್ಟಾನೆಯೆ? ಗೋಪಾಲದಾಸರು ಶೀಘ್ರವಾಗಿ ಪಯಣಿಸಿ ಪಂಡರಾಪುರ ಸೇರಿ ಸ್ವಾಮಿಯ ದರ್ಶನವನ್ನು ಮನಸಾರೆ ಪಡೆದರು.

ದೇವಸ್ಥಾನದ ವಿಶಾಲ ಪ್ರಾಂಗಣದಲ್ಲಿ ಗೋಪಾಲದಾಸರು ಪ್ರಾರಂಭಿಸಿದ ನೃತ್ಯ ಸೇವೆಗೆ ಅಲ್ಲಿ ಮಾರು ಹೋಗದ ಜನರೇ ಇಲ್ಲ. ಗುಂಪು ಗುಂಪು ಜನ ಎಲ್ಲರೂ ಗೋಪಾಲದಾಸರೊಂದಿಗೆ ಕುಣಿಯುವವರೆ.

ನೃತ್ಯ ಪ್ರಿಯ ಭಜನಾಲೋಲನಾದ ಪಂಡರಾಪುರದ ನಾದಬ್ರಹ್ಮ ಗೋಪಾಲ ದಾಸರ ಸೇವೆಯನ್ನು ಪೂರ್ಣವಾಗಿ ಸ್ವೀಕರಿಸಿರಬೇಕು.

ತಾನೇ ಬಂದು, ದರ್ಶನ ನೀಡಿ ಕರೆಸಿಕೊಂಡವನಲ್ಲವೇ ಪಾಂಡುರಂಗ?

'ಪರಮ ಪುರುಷ, ಪಾಪನಾಶ, ಪತಿತ ಪಾವನ ಪರತ್ಪಾರಾಧಕ, ಪರಂಜ್ಯೋತಿ, ಪರಮ ಮಂಗಳ ಪರಮ ಕರುಣಿ ಪಾಹಿ ಪಂಡರಿರಾಯ"

ನಿತ್ಯ ಸ್ತುತಿಸುತ್ತಾ ಗೋಪಾಲದಾಸರು ಅಲ್ಲಿ ಕೆಲವು ದಿನಗಳಿದ್ದು, ಅಲ್ಲಿಂದ ಕೊಲ್ಲಾಪುರಕ್ಕೆ ಹೋಗಿ ಮಹಾಲಕ್ಷ್ಮಿಯ ದರ್ಶನ ಪಡೆದು ಉತ್ತನೂರಿಗೆ ಹಿಂದಿರುಗಿದರು.

***

ಉತ್ತನೂರಿನಲ್ಲಿ ಮೂರು ಜನ ಸೋದರರಿಗೆ ವೈಭವದ ಸ್ವಾಗತ ದೊರೆಯಿತು. ಎಲ್ಲರು ಶ್ರೀವೆಂಕಟೇಶನ ಗುಡಿಯಲ್ಲಿ ಸ್ವಲ್ಪ ಕಾಲ ತಂಗಿದ್ದು ಅಲ್ಲಿ ಮಂಗಳಾರಾತಿ ಮುಗಿಸಿಕೊಂಡು ಮನೆಗೆ ಹೋದರು.

ಗೋಪಾಲದಾಸರ ಬರುವಿಕೆಗಾಗಿ ಸುತ್ತಮುತ್ತಲ ಗ್ರಾಮಗಳ ಜನ ಕಾತುರ ದಿಂದ ಕಾದಿದ್ದರು. ತಮ್ಮ ತಮ್ಮ ಜೀವನ ಸಮಸ್ಯೆಗಳ ಬಗ್ಗೆ ಕಣಿ ಕೇಳುವ ಬಯಕೆ ಅವರಿಗೆ. ಈ ವೃತ್ತಿಯಿಂದ ಏಕಾಂತತೆಗೆ ಅಡ್ಡಿಯಾಗುತ್ತಿದೆಯೆಂದು ಗೋಪಾಲ ದಾಸರು ಚಡಪಡಿಸುತ್ತಿದ್ದರು. ಆದರೆ ಆರ್ತರಾಗಿ ಬಂದ ಜನಗಳನ್ನು ನಿರಾಶೆಗೊಳಿಸಿ ಕಳಿಸುವುದು ಅವರಿಗೆ ಆಗುತ್ತಿರಲಿಲ್ಲ. ಅಷ್ಟಕ್ಕೂ ವಿಜಯದಾಸರು ಕೆಲವು ಕಾಲ ಈ ವೃತ್ತಿ ಮುಂದುವರಿಸಲು ಸೂಚಿಸಿದ್ದರು. ವೆಂಕಟ ನರಸಿಂಹಾಚಾರ್ಯರು ಈ ವೃತ್ತಿ ಯಲ್ಲಿ ತಾವಿಲ್ಲದಿದ್ದರೆ ಬರುತ್ತಿದ್ದರೆ? ಇಂಥ ಉದ್ದೇಶಕ್ಕಾಗಿಯೇ ವಿಜಯದಾಸರು ವೃತ್ತಿ ಮುಂದುವರಿಸಲು ಅಪ್ಪಣೆ ಕೊಟ್ಟಿರಬೇಕು. ಅವರೇ ಹೇಳಿದ್ದರು ಈ ವೃತ್ತಿ ಇನ್ನು ಬೇಡ ಎನ್ನುವ ಕಾಲ ಬರುತ್ತದೆಂದು. ಎಂದೋ ಆ ಕಾಲ?

ಕಣಿ ಕೇಳುವ ಬಯಕೆಯಿಂದ ಬಂದು ನೆರೆದಿದ್ದ ಜನಗಳ ಮಧ್ಯೆ ಗೋಪಾಲ ದಾಸರು ಕುಳಿತು ಪರಸ್ಪರ ಕುಶಲ ಸಮಾಚಾರಗಳನ್ನು ವಿನಿಮಯಿಸುತ್ತಿದ್ದರು. ಅಷ್ಟರಲ್ಲಿ ಜನಗಳ ಮಧ್ಯೆ ತೂರಿಕೊಂಡು ಬಂದ ಒಬ್ಬ ಮಹಿಳೆ ಗೋಪಾಲದಾಸರ ಕಾಲುಗಳನ್ನು ಗಟ್ಟಿಯಾಗಿ ಹಿಡಿದುಕೊಂಡುಬಿಟ್ಟಳು.

ಆಕೆ ತುರುಬಿನ ತುಂಬ ಮುಡಿದಿದ್ದ ಹೂವುಗಳು ಬಾಡಿದ್ದವು. ಅವಸರದಿಂದ ಬಂದಿದ್ದಕ್ಕೋ ಜನಗಳ ಮಧ್ಯೆ ನುಗ್ಗಿದ್ದರಿಂದಲೋ, ಹಣೆಯ ಮೇಲಿನ ಕುಂಕುಮ ಅರ್ಧಂಬರ್ಧ ಮಾಸಿತ್ತು.

ಮುತ್ತೈದೆಯ ಲಕ್ಷಣಕ್ಕೆ ಅದು ಅಮಂಗಳವಾಗಿ ಕಂಡಿದ್ದರಿಂದ ಸರ್ವರಿಗೂ ಶುಭವನ್ನೇ ಹಾರೈಸುವ ಗೋಪಾಲದಾಸರು "ಪಾಂಡುರಂಗನು ನಿನ್ನ ಮುತ್ತೈದೆತನ ವನ್ನು ಕಾಪಾಡಲಿ, ದೀರ್ಘ ಸುಮಂಗಲೀಭವ" ಎಂದು ಆಶೀರ್ವದಿಸಿದರು.

ಆಕೆಯನ್ನು ಅನುಸರಿಸಿ ಬಂದ ಜನಗಳ ಗುಂಪು ದಾಸರ ಆಶೀರ್ವಾದ ಕೇಳಿ ತಬ್ಬಿಬ್ಬುಗೊಂಡರು.

ಆಕೆಯ ಗಂಡ ತೀರಿಕೊಂಡು ತಾಸೆರಡು ತಾಸು ಆಗಿತ್ತು. ಅಷ್ಟರಲ್ಲಿಯೇ ಗೋಪಾಲದಾಸರು ಉತ್ತನೂರಿಗೆ ಬಂದ ಸಮಾಚಾರ ಕೇಳಿದ ಆ ಮಹಿಳೆ ಹೆಣವನ್ನು ಅಲ್ಲಿಯೇ ಬಿಟ್ಟು ದಾಸರ ಬಳಿ ಧಾವಿಸಿ ಬಂದಿದ್ದಳು.

ಅದೇನೋ ಆಸೆ ಆಕೆಗೆ.

ಹಿಂದೊಮ್ಮೆ ತನ್ನ ಗಂಡನಿಗೆ ತೀವ್ರ ಕಾಯಿಲೆಯಾದಾಗ ಇದೇ ಗೋಪಾಲ ದಾಸರು ಧನ್ವಂತರಿ ರೂಪವನ್ನು ಚಿಂತಿಸಿ ಒಂದು ಚಿತ್ರ ಬರೆದು ಕೊಟ್ಟಿದ್ದರು.

ಅದನ್ನು ಪೂಜಿಸಿದ ಮೇಲೆ ಆ ಕಾಯಿಲೆ ಗುಣವಾಗಿತ್ತು. ಇತ್ತೀಚಿಗೆ ಆ ಚಿತ್ರ ಹುಳುಗಳ ಕಡಿತದಿಂದ ಛಿದ್ರಛಿದ್ರವಾಗಿದ್ದು ಅದೇ ಆಕೆಗೆ ಒಂದು ರೀತಿಯ ವಾಗತ್ಯವೆನಿಸಿತ್ತು.

ಈಗಲೂ ಗೋಪಾಲದಾಸರು ಏನಾದರೂ ಮಾಡಿಯಾರು ಎಂಬ ನಂಬಿಕೆ ಆ ಮುಗ್ಧೆಯದು.

ಅದಕ್ಕೆ ಸರಿಯಾಗಿ ಗೋಪಾಲದಾಸರು ಜನರೊಂದಿಗೆ ಲೌಕಿಕ ಸಂಗತಿಗಳನ್ನು ಮಾತನಾಡುತ್ತಾ ಕುಳಿತ್ತಿದ್ದಾಗ ಆಕೆ ಬಂದು ನಮಸ್ಕರಿಸಿದ್ದರಿಂದ ಲೋಕ ಸಹಜ ವಾಗಿಯೇ ಅವರು ಆಶೀರ್ವದಿಸಿದ್ದರು.

ಆದರೆ ಇಂದು ಅಂಥ ಆಶೀರ್ವಾದ ವಿಪರೀತ ಅರ್ಥಕ್ಕೆಟ್ಟುಕೊಂಡಿತ್ತು.

ಸತ್ತವನ ಮಡದಿ ಮೊದಲ ಹತ್ತು ದಿನ ಸುಮಂಗಲೆಯಾಗಿಯೇ ಇರುತ್ತಾಳೆಂಬುದು. ಜನರ ನಂಬಿಕೆ ಹಾಗೂ ಆಚಾರ. ಆದರೆ ಗೋಪಾಲದಾಸರು ಪಾಂಡುರಂಗನು ಮುತ್ತೈದೆತನವನ್ನು ಕಾಪಾಡಲಿ ಎಂದು ಹೇಳಿಬಿಟ್ಟಿದ್ದರು. ಪರಮಾತ್ಮನ ನಾಮಸ್ಮರಣೆಯೊಂದಿಗೆ 'ದೀರ್ಘಸುಮಂಗಲೀಭವ' ಎಂದು ಆಶೀರ್ವದಿಸಿದ್ದರು.

ಉಂಟಾಗಿರುವ ವಿಪರೀತ ಸನ್ನಿವೇಶವನ್ನು ತಿಳಿದ ಮೇಲೆ ಗೋಪಾಲದಾಸರಿಗೆ ಬಹಳ ಕಳವಳವಾಗಿ ಹೋಯಿತು.

ಪಾಂಡುರಂಗನ ಹೆಸರನ್ನು ಇಟ್ಟು ತಾವು ಮಾಡಿದ ಆಶೀರ್ವಾದ ವಿಫಲ ವಾದರೆ ಪಾಂಡುರಂಗನಿಗೇ ಅಪಕೀರ್ತಿ.

ಸತ್ತವನ ಮಡದಿ ದೀರ್ಘಸುಮಂಗಲಿಯಾಗುವುದು ಹೇಗೆ?

ತಮ್ಮಿಂದಾದ ಈ ಅಚಾತುರ್ಯಕ್ಕೆ ಗೋಪಾಲದಾಸರು ಕಸಿವಿಸಿಗೊಂಡರು. ಮುಂದೇನು ಮಾಡಬೇಕೆಂದು ಅವರಿಗೆ ತೋಚಲಿಲ್ಲ. ಪಾಂಡುರಂಗನ ಮಹಿಮೆಯ ಬಗ್ಗೆ ತಮ್ಮಿಂದ ಅಪಚಾರವಾಗುತ್ತಿದೆಯಲ್ಲಾ ಎಂಬ ಕಳವಳ ಪ್ರಾರಂಭವಾಯಿತು.

ಮನದ ಬೇಗುದಿಯನ್ನು ಒಳಗೇ ಅದುಮಿಕೊಂಡ ದಾಸರು ಪರಮಾತ್ಮನನ್ನು ಸ್ಮರಿಸುತ್ತಾ ಆಕೆಗೆ ಹೇಳಿದರು.

"ನೀನು ಮನೆಗೆ ಹೋಗು ತಾಯಿ, ನಮ್ಮ ಗೋಪಾಲ ವಿಠಲ ಅದೇಕೋ ಹಾಗೆ ನುಡಿಸಿಬಿಟ್ಟ. ನನ್ನ ಅರಿವಿಲ್ಲದೆ ನನ್ನಿಂದ ಈ ರೀತಿ ನುಡಿಸಿದ ಶ್ರೀ ಹರಿ ಸರಿ ದಾರಿಯನ್ನು ಆತನೇ ತೋರಿಸುತ್ತಾನೆ. ನೀನು ಮನೆಗೆ ಹೋಗಮ್ಮಾ, ನಾನು

ಸ್ನಾನ ಮುಗಿಸಿಕೊಂಡು ಶ್ರೀವೆಂಕಟೇಶನ ಗುಡಿಗೆ ಹೋಗಿ ಅಲ್ಲಿಗೆ ಬರುತ್ತೇನೆ" ಎಂದು ಹೇಳಿದಾಗ ಬಂದ ಮಹಿಳೆ ಇರಲಿ, ನೆರೆದಿದ್ದ ಜನರೂ ಆಶ್ಚರ್ಯಗೊಂಡು ಬಿಟ್ಟರು.

ವ್ಯಕ್ತಿ ಸತ್ತ ವಿಷಯ ಕೇಳಿದ ಮೇಲೆಯೂ ಮತ್ತೆ ಬಂದು ನೋಡುವ ಭರವಸೆ ಕೊಟ್ಟ ದಾಸರ ಧೋರಣೆ ಜನರನ್ನು ಆಶ್ಚರ್ಯಗೊಳಿಸಿತು.

ಜನರೆಲ್ಲಾ ಅಲ್ಲಿಗೆ ಹೋಗುವಂತೆ ಹೇಳಿದ ಗೋಪಾಲದಾಸರು ಅವರೆಲ್ಲಾ ಹೋದ ಮೇಲೆ ಬೇಗನೆ ಸ್ನಾನ ಮುಗಿಸಿಕೊಂಡು ಶ್ರೀವೆಂಕಟೇಶನ ಗುಡಿಗೆ ಧಾವಿಸಿ ಹೋದರು.

"ಎಂಥ ಸಂದಿಗ್ಧ ಸನ್ನಿವೇಶ ನಿರ್ಮಾಣವಾಗಿ ಹೋಯಿತು. ನಿನ್ನ ಹೆಸರು ಹೇಳಿ ಎಂಥ ಅಪಚಾರ ಮಾಡಿ ಬಿಟ್ಟೆ ಪ್ರಭೋ, ಮುಂದೆಂದೂ ಇಂಥ ತಪ್ಪು ಮಾಡುವುದಿಲ್ಲ. ಈ ಸಲ ನುಡಿದದ್ದು ನಡೆಯುವಂತೆ ಮಾಡು. ಸತ್ತವರನ್ನು ಬದುಕಿಸುವ ಮಹತ್ ಶಕ್ತಿ ಈ ಕಾಲದಲ್ಲಿ ನನ್ನ ಗುರುಗಳಾದ ವಿಜಯದಾಸರೊಬ್ಬರಿಗೆ ಇದೆ. ಅವರೂ ಈ ಸಮಯದಲ್ಲಿ ಇಲ್ಲಿಲ್ಲ. ಈ ಕಷ್ಟದಿಂದ ನೀನೇ ಕಾಪಾಡಬೇಕು ಗೋಪಾಲ ವಿಠಲಾ" ಶ್ರೀ ವೆಂಕಟೇಶನನ್ನು ಪ್ರಾರ್ಥಿಸುತ್ತಾ ಸ್ವಾಮಿಗೆ ಶಿರಸಾಷ್ಟಾಂಗ ನಮಸ್ಕಾರ ಹಾಕಿ ಮಲಗಿ ಬಿಟ್ಟರು.

ಅವರ ಕಣ್ಣಿನಲ್ಲಿಯ ನೀರು ಧಾರೆಧಾರೆಯಾಗಿ ಇಳಿದು ಅಲ್ಲಿಯ ಭೂಮಿಯನ್ನು ಸ್ವಲ್ಪ ಒದ್ದೆ ಮಾಡಿತು. ಭೂತಾಯಿಗೆ ಅಂತಃಕರುಣೆ ಬಂದಿತೋ ಆಕೆಯ ಸಾಕ್ಷಿಯಿಂದ ಪರಮಾತ್ಮನೇ ಒಲಿದನೋ ಅಂತೂ ನಮಸ್ಕರಿಸುತ್ತಾ ಮಲಗಿದ್ದ ಗೋಪಾಲದಾಸರನ್ನು ಯಾರೋ ಬೆನ್ನು ತಟ್ಟಿ ಎಬ್ಬಿಸಿದಂತಾಯಿತು.

ಗೋಪಾಲದಾಸರು ಎದ್ದು ಕಣ್ಣು ತೆರೆದು ನೋಡಿದರು.

ಗುರುಗಳಾದ ವಿಜಯದಾಸರೇ ಸಾಕ್ಷಾತ್ತಾಗಿ ನಿಂತಿದ್ದಾರೆ.

ಗೋಪಾಲದಾಸರಿಗೆ ಹೋದ ಜೀವ ಮತ್ತೆ ಬಂದಂತಾಯಿತು.

ಎದ್ದು ಗಟ್ಟಿಯಾಗಿ ಗುರುಗಳ ಕಾಲನ್ನು ಗಟ್ಟಿಯಾಗಿ ಹಿಡಿದುಬಿಟ್ಟರು.

"ಏಳು ಭಾಗಣ್ಣಾ, ನೀನು ಜನಜಂಗುಳಿಯ ಮಧ್ಯೆ ಲೌಕಿಕ ವೃತ್ತಿಯಲ್ಲಿ ನಿರತನಾಗಿದ್ದಾಗ ಇಂಥ ಅಚಾತುರ್ಯ ಘಟಿಸಿತಲ್ಲವೆ? ಹಿಂದೆ ನೀನು ಈ ವೃತ್ತಿಯನ್ನು ಬಿಡುತ್ತೇನೆಂದಾಗ ಬೇಡವೆಂದು ನಾನೇ ನಿವಾರಿಸಿದ್ದೆ. ಇದುವರೆಗೂ ನೀನು ನುಡಿದ ಭವಿಷ್ಯ ಸುಳ್ಳಾಗಲಿಲ್ಲ. ಈಗ ಸುಳ್ಳಾಗುವಂಥ ಭವಿಷ್ಯವನ್ನು ಭಗವಂತ ನುಡಿಸಿಬಿಟ್ಟ.

ಹಾಗೆಂದಾಗ ಈ ವೃತ್ತಿ ಸಾಕಿನ್ನು ಎಂದು ಆತ ಸೂಚನೆ ಕೊಟ್ಟಂತೆ. ಈಗಾಗಲೆ, ಸಾಕಷ್ಟು ಹಣ ನಿನ್ನಲ್ಲಿ ಸಂಗ್ರಹವಾಗಿದೆ. ಭೂತಾಯಿಗೆ ಜಲಾಭಿಷೇಕ ಮಾಡುತ್ತಿರುವಂತೆ ನೀನು ರೋದಿಸುತ್ತಿರುವಾಗಲೇ ನನ್ನ ವಿಜಯ ವಿಠಲ ನನ್ನನ್ನು ಇಲ್ಲಿಗೆ ಬರಮಾಡಿಕೊಂಡ. ಈ ವೃತ್ತಿಯಿಂದ ಸಂಗ್ರಹವಾದ ಹಣವನ್ನು ಬೇರೆ ತೆಗೆದಿಟ್ಟು ಮುಂದೆ ಈ ಭೂತಾಯಿಯಲ್ಲಿಯೇ ಇಟ್ಟು ಬಿಡುತ್ತೇನೆಂದು ಸಂಕಲ್ಪಿಸಿಕೊ, ಈ ವೃತ್ತಿ ಸಾಕಿನ್ನು, ನಿನ್ನ ಭವಿಷ್ಯ ಹೇಳುವ ವೃತ್ತಿಯಿಂದ ಈ ತಲೆಮಾರಿನ ಕೆಲವರಿಗೆ ಸಹಾಯವಾಗುತ್ತದೇನೋ ನಿಜ. ಆದರೆ ಅದಕ್ಕಿಂತ ದೊಡ್ಡ ಕಾರ್ಯಕ್ಕೆ ನೀನು ಹುಟ್ಟಿದವನು. ಮುಂದೆ ಶತಶತಮಾನಗಳ ಕಾಲ ಜನರ ಭವಿಷ್ಯವನ್ನೆ ಭವ್ಯಗೊಳಿಸುವ ಸಾಹಿತ್ಯ ನಿರ್ಮಾಣದಲ್ಲಿ ನಿನ್ನ ಕಾಲ ವಿನಿಯೋಗವಾಗಲಿ," ಎಂದು ವಿಜಯದಾಸರು ಹೇಳುತ್ತಿದ್ದಂತೆ,

"ಗೆದ್ದೆ ಗುರುವರ್ಯಾ. ದಿವಾನ ಪದವಿಯಲ್ಲಿಯೇ ಮುಂದುವರಿಯುವಂತೆ ವೇಣುಗೋಪಾಲ ದಾಸರಿಗೆ ನಿರ್ದೇಶಿಸಿರುವ ತಾವು ನನ್ನನ್ನು ಈ ವೃತ್ತಿ ಬಿಡುವಂತೆ ಹೇಳುತ್ತಿರುವುದು ನನ್ನ ಮೇಲಿನ ಅನುಗ್ರಹವೇ ಹೊರತು ಬೇರೆಯಲ್ಲ. ನಿಮ್ಮ ಕರುಣೆಯ ರಕ್ಷಾ ಕವಚ ನನಗಿರುವಾಗ ಬೇರೆ ವೃತ್ತಿಯ ಜಂಜಾಟ ನನಗೆ ಬೇಡ ಏನೋ ಶ್ರೀ ಹರಿ ಕರುಣಿಸಿದ ವೃತ್ತಿ. ತಾನೇ ತಾನಾಗಿ ಸಿದ್ಧಿಸಿದ ವಿದ್ಯೆ. ಆತನ ಇಚ್ಛೆ ಇದ್ದುದರಿಂದ ಹಾಗೂ ನಿಮ್ಮ ಸೂಚನೆಯಂತೆ ಈ ವೃತ್ತಿ ಮುಂದುವರಿಸಿದೆ. ಈಗ ನಿಮ್ಮ ಮೂಲಕ ಪರಮಾತ್ಮ ಈ ಆಜ್ಞೆ ನೀಡಿದ್ದಾನೆ. ನೀವು ಕೃಪೆ ಇಟ್ಟು ಇಂಥ ಆಜ್ಞೆ ಮಾಡಿದ್ದೀರಿ. ನನ್ನನ್ನು ಈ ಜಂಜಾಟದಿಂದ ಬಿಡಿಸಿದಂತೆ ಆ ಮಹಿಳೆಯ ಪತಿಯನ್ನು ಮೃತ್ಯುವಿನಿಂದ ಬಿಡಿಸಿ ಕಾಪಾಡಿ" ಎಂದು ಗೋಪಾಲದಾಸರು ಗುರುಗಳಲ್ಲಿ ಪ್ರಾರ್ಥಿಸಿದರು.

ಅವರಿಬ್ಬರೂ ಸೇರಿ ಶ್ರೀ ವೆಂಕಟೇಶನಿಗೆ ಮಂಗಳಾರತಿ ಮಾಡಿ ನಮಸ್ಕರಿಸಿ, ಶವವಿದ್ದ ಜಾಗಕ್ಕೆ ಬಂದರು.

ಶವದ ಮುಂದೆ ವಿಜಯದಾಸರು ಹಾಡತೊಡಗಿದರು. ಗೋಪಾಲದಾಸರು ನೃತ್ಯ ಪ್ರಾರಂಭಿಸಿದರು. ಅವರ ತಮ್ಮಂದಿರು ತಾಳ ತಟ್ಟುತ್ತಿದ್ದರು.

ನೆರೆದಿದ್ದ ನೂರಾರು ಜನ ಈ ಭಜನಾ ಕಾರ್ಯಕ್ರಮದಲ್ಲಿ ಭಾಗವಹಿಸಿ. ಗೋವಿಂದ ನಾಮವನ್ನು ಘೋಷಿಸುತ್ತಿದ್ದಂತೆಯೇ

ಸ್ನಾನ ಮಾಡಿಸಿ ಸಿದಿಗೆಯ ಮೇಲೆ ಮಲಗಿಸಿದ್ದ ಶವ ಮೆಲ್ಲಗೆ ಎದ್ದು ಕೂತಿತು.

ಗೋಪಾಲದಾಸರ ಹರಕೆ, ವಿಜಯದಾಸರ ಅಪೇಕ್ಷೆ.

ಹೆಣವಾಗಿದ್ದವ ರೋಗ ಗುಣವಾದವನಂತೆ ಎದ್ದು ಅವರಿಬ್ಬರಿಗೂ ನಮಸ್ಕರಿಸಿದ.

ಸತ್ತವನು ಮತ್ತೆ ಬದುಕಿದ ಎಂದು ಜನರು ಹರ್ಷದಿಂದ ಘೋಷಿಸಿದರು.

"ಇಲ್ಲ ಮಬ್ಬು ಆವರಿಸಿ ಮಲಗಿದ್ದ. ನಮ್ಮೆಲ್ಲರ ಗಲಾಟೆಗೆ ಎಚ್ಚರವಾಯಿತು. ಈಗ ಎದ್ದು ಕೂತಿದ್ದಾನೆ" ಎಂದು ವಿಜಯದಾಸರು ನೆರೆದಿದ್ದ ಜನರಿಗೆ ಹೇಳಿದರು.

'ಹೌದು. ನಿಮ್ಮಂಥ ಶ್ರೇಷ್ಠ ಹರಿದಾಸರು ಗದ್ದಲ ಮಾಡಿದ್ದರಿಂದಲೇ ಶ್ರೀ ವೆಂಕಟೇಶ ಕರುಣಿಸಿದ. ಹರಿದಾಸರನ್ನು ನಂಬಿದವರಿಗೆ ಅಥವಾ ನೀವು ಅನುಗ್ರಹಿಸಿ ಒಲಿದವರಿಗೆ ಮೃತ್ಯುವಾದರೂ ಪಾರಾಗುತ್ತದೆ. ಎನ್ನುವುದನ್ನು ಶ್ರೀ ವೆಂಕಟೇಶ ಈ ಮೂಲಕ ಸಾರಿದ್ದಾನೆ' ಎಂದು ಜನತೆ ಜಯಘೋಷ ಹಾಕಿತು.

ಸತ್ತವನು ಮತ್ತೆ ಬದುಕುವುದು ಸಾಧ್ಯವೆ?

ಸಾಧ್ಯ ಎನ್ನುವುದನ್ನು ಅಲ್ಲಿದ್ದ ಜನರು ಕಣ್ಣಾರೆ ನೋಡಿದರು.

ಅಲ್ಲಿಲ್ಲದ ಜನರು?

ಮುಂದಿನ ಇತಿಹಾಸ ಈ ಘಟನೆಯನ್ನು ಹೇಗೆ ಚಿತ್ರಿಸೀತು?

ಹೇಗಾದರೂ ಚಿತ್ರಿಸಲಿ. ಅತಿ ರಂಜಿತ, ಉತ್ಪ್ರೇಕ್ಷೆ ಎಂದು ಏನೇನೆಲ್ಲಾ ತಮ್ಮ ತಮ್ಮ ಅನುಭವಕ್ಕನುಗುಣವಾಗಿ ಕಲ್ಪಿಸಿಕೊಳ್ಳಲಿ, ಆದರೆ ಹರಿದಾಸರ ಅನುಗ್ರಹ ಗಳಿಸಿದರೆ, ಗೋಪಾಲದಾಸರು ವಿಜಯದಾಸರಂಥ ಹಿರಿಯ ಚೇತನರು ತೋರಿದ ಮಾರ್ಗದಲ್ಲಿ ನಡೆದರೆ ಮೃತ್ಯುವಿನಂಥ ಸಂಕಷ್ಟದಿಂದಲೂ ಪಾರಾಗಲು ಸಾಧ್ಯ ಎಂದು ಅನುಸರಿಸಿ ಅರಿತುಕೊಂಡರೆ ಸಾಕು. ಅಂಥ ವಿಷಯ ಪ್ರತಿಪಾದನೆಗೆ ಈ ಘಟನೆ ಸೂಚ್ಯವಾಗಿ ನೆನಪಿಸಿಕೊಂಡರೆ ಸಾಕು ಎಂದು ಅಲ್ಲಿ ನೆರೆದಿದ್ದ ಜನರು ಪರಮಾತ್ಮನಲ್ಲಿ ಪ್ರಾರ್ಥಿಸಿದರು.

'ತಥಾಸ್ತು' ಎಂದಿರಬೇಕು- ಉತ್ತನೂರಿನ ವೆಂಕಟೇಶ. ಗೋಪಾಲದಾಸರ ಅಂತರ್ಯಾಮಿ ಶ್ರೀ ಗೋಪಾಲವಿಠಲ.

***

ಗುರುಗಳಾದ ವಿಜಯದಾಸರ ಆಜ್ಞೆಯಂತೆ ಗೋಪಾಲದಾಸರು ತಮ್ಮಂದಿರೊಂದಿಗೆ ಕೆಲವು ಕಾಲ ವೇಣಿಸೋಮಪುರದಲ್ಲಿದ್ದರು.

ವೆಂಕಟರಾಮಾಚಾರ್ಯರ ದೈವಭಕ್ತಿ, ತತ್ವನಿಷ್ಟೆ, ಶಿಷ್ಯರ ಮೇಲಿಟ್ಟಿದ್ದ ವಾತ್ಸಲ್ಯ, ಪಾಠ ಹೇಳುವ ರೀತಿ ಮೊದಲಾದವುಗಳು ಗೋಪಾಲದಾಸರಿಗೆ ಬಹಳ ವಾಗಿ ಹಿಡಿಸಿಬಿಟ್ಟಿತು.

ವಿಜಯದಾಸರ ಕರೆ ಬಂದಿದ್ದರಿಂದ ಮೂರು ಜನ ಸಹೋದರರು ಪುನಃ ಯಾತ್ರೆ ಕೈಗೊಂಡರು.

ಗುರುಗಳೊಂದಿಗೆ ಯಾತ್ರೆಯೆಂದರೆ ಗೋಪಾಲದಾಸರಿಗೆ ಪ್ರತಿನಿತ್ಯ ಪ್ರತಿ ಕ್ಷೇತ್ರ ಮೂರ್ತಿಗಳ ದರ್ಶನವಾದಂತೆ. ಅವರ ಪದ್ಯ ಸುಳಾದಿಗಳು ಇವರಿಗೆ ಜ್ಞಾನ ದೀಪ ಗಳಾಗಿ ಕಾಣಿಸುತ್ತಿದ್ದವು.

ಶಿಷ್ಯ ಗೋಪಾಲದಾಸರಿಂದ ಹಾಡಿಸುವುದೆಂದರೆ ವಿಜಯದಾಸರಿಗೂ ಅಷ್ಟೇ ಆನಂದ.

ಅವುಗಳನ್ನು ಬರೆದಿಟ್ಟುಕೊಳ್ಳುವುದು ಸೀನಣ್ಣ ದಾಸಣ್ಣರಿಗೆ ಪೂಜಾಕಾರ್ಯ ದಷ್ಟೇ ತೃಪ್ತಿತರುವ ಮತ್ತೊಂದು ಕಾರ್ಯ.

ಈ ಗುರು ಶಿಷ್ಯ ಪ್ರಶಿಷ್ಯರ ಯಾತ್ರೆಯೆಂದರೆ ಅವರಿದ್ದಲ್ಲಿ ಸರ್ವಕ್ಷೇತ್ರಗಳೂ ಸನ್ನಿಹಿತವಾಗಿರುವಂತೆ ಸಹ ಯಾತ್ರೀಕರು ಭಾವಿಸಿ ಆನಂದಿಸುತ್ತಿದ್ದರು.

ಯಾತ್ರೆಯ ಮಾರ್ಗದಲ್ಲಿ ಯಾವ ಊರಿಗೆ ಹೋದರೂ ಆ ಊರಿನಲ್ಲಿ ಭಜನೆ ಮಾಡುತ್ತಾ, ಯಾಯಾವಾರಕ್ಕೆ ಹೋಗುತ್ತಿದ್ದರು.

ಜೋಳಿಗೆ ಎಷ್ಟು ತುಂಬುತ್ತಿತ್ತೊ ಎಷ್ಟಿಲ್ಲವೋ ಆದರೆ ಮಾತ್ರ ಪ್ರತಿ ಊರಿನಲ್ಲಿಯೂ ಸಂತರ್ಪಣೆ ನಡೆಯುತ್ತಿತ್ತು. ಈ ಭಕ್ತ ಸಮೂಹದ ಸಂದರ್ಶನ ದಿಂದ ದೊಡ್ಡ ಮಠಾಧಿಪತಿಗಳು ಬಂದು ಹೋದ ಅನುಭವ ಆ ಪ್ರದೇಶದ ಜನರಿಗೆ ಉಂಟಾಗುತ್ತಿತ್ತು.

ದೀರ್ಘ ಯಾತ್ರೆಯನ್ನು ಶೀಘ್ರವಾಗಿ ಮುಗಿಸಿಕೊಂಡ ಈ ಭಕ್ತ ಶ್ರೇಷ್ಠರು ವಿಜಯದಾಸರ ಸ್ವಂತ ಊರಾದ ಚೀಕಲಪರವಿಗೆ ಹಿಂದಿರುಗುವ ಮುನ್ನ ಮಾನ್ವಿ ಯಲ್ಲಿಯೂ ತಮ್ಮ ಎಂದಿನ ಕ್ರಮ ಕೈಗೊಂಡರು.

ಮಾನ್ವಿಯಲ್ಲಿ ಸಮಾರಾಧನೆಯ ವ್ಯವಸ್ಥೆಯನ್ನು ಭವ್ಯವಾಗಿ ಏರ್ಪಡಿಸ ಲಾಯಿತು.

ಯಾರೂ ಹತ್ತಿರದಲ್ಲಿಲ್ಲದ ಸಮಯ ನೋಡಿ ವಿಜಯದಾಸರು ಗೋಪಾಲ ದಾಸರಿಗೆ ಮೆಲ್ಲಗೆ ಹೇಳಿದರು

ಕನ್ನಡ ಹರಿದಾಸ ಸಾಹಿತ್ಯದ ಏಳ್ಗೆಗೆ ಶ್ರೀ ನರಹರಿ ತೀರ್ಥರೇ ಆದಿಯಾಗಿ ಶ್ರೀ ಶ್ರೀಪಾದರಾಜರು, ವ್ಯಾಸರಾಯರು ವಾದಿರಾಜರಂಥ ದೊಡ್ಡದೊಡ್ಡ ಯತಿಗಳೇ ಶ್ರಮಿಸಿದ್ದರೂ ಇನ್ನೂ ಈ ಭಾಷೆಯ ಬಗ್ಗೆ ನಮ್ಮ ಮತ ಪರಿಸರಗಳಲ್ಲಿ ಉತ್ತಮ ಭಾವನೆ ಮೂಡಿಲ್ಲ. ಪಂಡಿತರುಗಳಿಗೆ ಈ ಭಾಷಾ ಸೇವೆಯ ಬಗ್ಗೆ ಕೀಳು ಭಾವನೆ ತೊಲಗಿಲ್ಲ. ಹರಿಸೇವೆಯೆಂದರೆ ಮಂತ್ರಗಳನ್ನು ಗಟ್ಟಿಗಟ್ಟಿಯಾಗಿ ರಾಗಯುಕ್ತವಾಗಿ ಹೇಳಿದರೆ ಮಾತ್ರ ಸರಿಯೆನ್ನುವ ನಂಬಿಕೆಯಿಂದ ಹೊರಗೆ ಬಂದಿಲ್ಲ. ಜನಗಳ ಮುಂದೆ 'ಅಹಂಕಾರಿ' ಎನ್ನುವ ರೀತಿಯಲ್ಲಿ ವರ್ತಿಸಿದರೆ ಮಾತ್ರ ತಮ್ಮನ್ನು ಪಂಡಿತರೆಂದು ಜನರು ತಿಳಿಯುತ್ತಾರೆಂಬ ನಂಬಿಕೆ ಹಲವರಿಗೆ. ದೇವರ ಮುಂದೆ ಕುಣಿಯುವುದಕ್ಕೆ ಅವರ ಮನ ಒಪ್ಪದು. ಗೆಜ್ಜೆ ಕಟ್ಟಿ ಕುಣಿಯುವುದೆಂದರೆ ಅವರಿಗೆ ಅಸಹ್ಯ. ಅಂಥವರ ಬಗ್ಗೆ ಹೇಯ ಭಾವ" ವಿಜಯದಾಸರು ಹೇಳುತ್ತಿದ್ದಂತೆ ಗೋಪಾಲದಾಸರು ಗಟ್ಟಿಯಾಗಿ ನಕ್ಕು ಬಿಟ್ಟರು.

"ಗುರುಗಳೇ ಈ ಸ್ವಭಾವದ ವ್ಯಕ್ತಿಯ ಮೇಲೆ ತಮ್ಮ ಕೃಪಾದೃಷ್ಟಿ ಹರಿಸಿ ಬಿಟ್ಟಿರಿ. ಅದಕ್ಕಾಗಿ ಈ ಉಪೋದ್ಘಾತ ಪ್ರಾರಂಭಿಸುತ್ತಿದ್ದೀರಿ. ನಡೆಯಲಿ ಗೋಪಾಲ ವಿಠಲನ ಚಿತ್ರವಿಚಿತ್ರ ಲೀಲೆ. ಅಂಥವರನ್ನು ಸರಿಪಡಿಸುವ ಮಹಾಮಹಿಮರಾದ ನೀವು ಅವತರಿಸಿರುವಾಗಲೇ ಇಂಥ ಕಾರ್ಯಗಳಾಗಬೇಕು. ಹೂಂ; ನಡೆಯಿರಿ ಅಲ್ಲಿಗೇ ಹೋಗೋಣ."

ಗೋಪಾಲದಾಸರ ಮಾತು ಕೇಳಿ ಕೂಡಲೇ, ವಿಜಯದಾಸರು ಮುನಿಸಿ ಕೊಂಡಂತೆ "ಆಗಲೇ ನೋಡಿಬಿಟ್ಟೆಯಾ ಭಾಗಣ್ಣಾ, ವ್ಯಕ್ತಿಗಳ ಚೇತನ ಬೇಗ ಕಂಡು ಹಿಡಿಯುವ ನಿನ್ನ ಹಿಂದಿನ ವೃತ್ತಿಗತ ಸ್ವಭಾವವನ್ನು ಇನ್ನೂ ಬಿಟ್ಟಿಲ್ಲವಲ್ಲಾ"

"ನಾನೇನೂ ನೋಡಲಿಲ್ಲ ಗುರುಗಳೇ, ನಿಮ್ಮ ದಿವ್ಯ ಪ್ರಭೆಯಲ್ಲಿ ಅದು ತಾನೇ ತಾನಾಗಿ ಸ್ವಲ್ಪ ಕಾಣಿಸಿತು. ಜ್ಯೋತಿ ಪಕ್ಕದಲ್ಲಿರುವಾಗ ಕತ್ತಲು ಎಲ್ಲಿ ಉಳಿಯುತ್ತದೆ?, ಜ್ಯೋತಿ ಇದ್ದೂ ಕಾಣಿಸಲಿಲ್ಲವೆಂದಾದರೆ ಅದು ಕಣ್ಣಿನ ಲೋಪವೆ. ಮಹಾಪ್ರಕಾಶವೂ ಒಮ್ಮೊಮ್ಮೆ ಕಣ್ಣಿಗೆ ಕತ್ತಲೆ ತರುತ್ತದೆ. ನಿಮ್ಮ ಅನುಗ್ರಹ ಬಲದಿಂದ ಅಲ್ಪ ಸ್ವಲ್ಪ ಕಾಣಿಸುತ್ತಿದೆಯಾದರೂ ನಿಮ್ಮ ಮಹಾಪ್ರಭೆಯ ಮುಂದೆ ಹೆಚ್ಚು ತಿಳಿಯಲು ಸಾಧ್ಯವಾಗುತ್ತಿಲ್ಲ. ನೀವು ಅಪ್ಪಣೆ ಕೊಟ್ಟರೆ ಮಾತ್ರ ಆ ವ್ಯಕ್ತಿಯ ಮೂಲ ಚೇತನ

ಹಾಗೂ ಅವನ ಭವಿಷ್ಯ ತಿಳಿಯಲು ಅಂತರ್ ಮುಖಿಯಾಗಿ ಪ್ರಯತ್ನಿಸುತ್ತೇನೆ" ಗೋಪಾಲದಾಸರು ನುಡಿಯುತ್ತಿದ್ದಂತೆ ಅದನ್ನು ತಡೆದು ವಿಜಯದಾಸರು ಹೇಳಿದರು.

"ಹಾಗೇನೂ ಮಾಡಬೇಡ ಭಾಗಣ್ಣಾ, ಶ್ರೀ ರಾಘವೇಂದ್ರ ಸ್ವಾಮಿಗಳ ಪರಮಾನುಗ್ರಹ ಪಡೆದ ಮಹಾ ಪುಣ್ಯಶಾಲಿ ಅವರು. ಪುಟ್ಟ ವಯಸ್ಸು. ಗಟ್ಟಿ ಪಾಂಡಿತ್ಯ. ಶ್ರೇಷ್ಠ ಗುರುಗಳಿಂದ ಶಿಕ್ಷಣ. ಕಾಲ ಬರಲಿ, ಎಲ್ಲವೂ ಸರಿ ಹೋಗುತ್ತದೆ. ಅಲ್ಲಿಯವರೆಗೆ ಆತನ ಭವಿಷ್ಯದ ಬಗ್ಗೆ ನೀನು ಯೋಚಿಸಬಾರದು. ನಿನ್ನಿಂದ ಹಾಗೂ ಆ ಬಾಲಕನಿಂದ ಕನ್ನಡ ಹರಿದಾಸ ಸಾಹಿತ್ಯವರ್ಧನೆಯ ಕೆಲಸ ವಿಜಯ ವಿಠಲ ಹೇಗೆ ನಡೆಸುತ್ತಾನೆಂದು ಭಾಗವಹಿಸಿಯೇ ಆನಂದಗೊಳ್ಳೋಣ" ಎಂದು ಹೇಳುತ್ತಿದ್ದಂತೆಯೇ ಸೀನಣ್ಣ ಹಾಗೂ ದಾಸಣ್ಣರು ಅಲ್ಲಿಗೆ ಬಂದರು.

"ಸೀನೂ ತೀರ್ಥ ಪ್ರಸಾದ ಸ್ವೀಕಾರಕ್ಕೆ ಜನರನ್ನು ಆಹ್ವಾನಿಸಲು ನೀವೇ ಹೋಗುತ್ತಿರುವಿರಾದರೂ ಈ ಊರಿನಲ್ಲಿ ಒಂದು ಮನೆಗೆ ಮಾತ್ರ ನಾವಿಬ್ಬರು ನಿಮ್ಮೊಂದಿಗೆ ಬರುತ್ತೇವೆ" ಎಂದು ಗೋಪಾಲದಾಸರು ನುಡಿದರು.

"ಏನಣ್ಣಾ, ಇದಕ್ಕೆಲ್ಲಾ ನೀವೇಕೆ ಬರಬೇಕು? ಅವರದೇನು ಹೆಚ್ಚುಗಾರಿಕೆ? ನಮ್ಮ ಸಮಾರಾಧನೆಯೇನೂ ವೈಯಕ್ತಿಕ ಸಮಾರಂಭವಲ್ಲವಲ್ಲಾ? ಇಂಥವುಗಳಲ್ಲಿ ಭಾಗವಹಿಸುವುದಕ್ಕೆ ಪ್ರತಿಷ್ಠೆಯ ಮಾತು ಎಲ್ಲಿ ಬರುತ್ತದೆ? ಸಮಾರಾಧನೆ ಇರುವ ವಿಷಯ ಜನರಿಗೆ ತಿಳಿಯದೆ ಹೋಗಬಾರದೆಂದು ಅವರಿಗೆ ತಿಳಿಸಲು ಮಾತ್ರ ನಾವು ಹೋಗುತ್ತಿದ್ದೇವೆ. ಬರುವುದು ಬಿಡುವುದು ಅವರವರ ಪ್ರೇರಣೆ ಹಾಗೂ ಸಾಧನೆ. ಹೀಗಿರುವಾಗ ಒಬ್ಬ ವ್ಯಕ್ತಿಗೆ ಮಾತ್ರ ಸ್ವತಃ ನೀವಿಬ್ಬರೂ ಜೊತೆಯಲ್ಲಿ ಆಹ್ವಾನಿಸಲಿಕ್ಕೆ ಬರುವುದರಲ್ಲಿ ಯಾವುದೋ ದೊಡ್ಡ ಘಟನೆಗೆ ನಾಂದಿಯೇ ಇರಬೇಕು. ಏನೆಂದು ಕೇಳಬಹುದೆ?" ದಾಸಣ್ಣ ಪ್ರಶ್ನಿಸಿದ.

ವಿಜಯದಾಸರು ದಾಸಣ್ಣನ ಪ್ರಶ್ನೆಗೆ ತಲೆದೂಗಿದರು.

"ನೀನು ಪರವಾ ಇಲ್ಲ ದಾಸಣ್ಣಾ, ನಿಮ್ಮಣ್ಣನಂತೆ ಪ್ರತಿಯೊಬ್ಬರ ವಿಷಯ ತಿಳಿಯಲು ಅಂತರಮುಖಿಯಾಗುವ ಅಭ್ಯಾಸ ಬೆಳೆಸಿಕೊಂಡಿಲ್ಲ. ಅಂಥವುಗಳಿಂದ ತಪಸ್ಸಿನ ಶಕ್ತಿ ಹ್ರಾಸವಾಗುತ್ತದೆಂಬ ಎಚ್ಚರಿಕೆ ನಿನಗಿರುವುದು ನನಗೆ ತೃಪ್ತಿ ತಂದಿದೆ ನಿಮ್ಮಣ್ಣನಿಗೂ ಆ ವಿಷಯ ಒತ್ತಿ ಹೇಳಬಾರದೆ?" ವಿಜಯದಾಸರು ನಗುತ್ತಾ ನುಡಿದಾಗ ಸೀನಣ್ಣ ಹೇಳಿದ.

"ನಮ್ಮಣ್ಣ ಹಾಗೂ ನಿಮ್ಮ ವಿಷಯಗಳಲ್ಲಿ ನಮ್ಮ ಮಾತು ಏಕೆ ಗುರುಗಳೆ? ಪುಣ್ಯದ ರಾಶಿ ನೀವು. ತಪೋಶಕ್ತಿಯ ಬೆಟ್ಟ ನೀವು. ಅದರಲ್ಲಿ ಒಂದು ಸಣ್ಣ ಕಲ್ಲಿನಷ್ಟು ಇದ್ದರೇನು, ಹೋದರೇನು? ನಮ್ಮದು ಹಾಗಲ್ಲ. ಇರುವುದೇ ಸ್ವಲ್ಪ ಅದನ್ನು ಸರಿಯಾಗಿ ಉಳಿಸಿಕೊಳ್ಳದಿದ್ದರೆ ನಿಮ್ಮ ದರ್ಶನ ಹಾಗೂ ಸೇವಾಭಾಗ್ಯ ನಮಗೆಲ್ಲಿ ದೊರೆಯುತ್ತದೆ?"

"ಬಹಳ ಜಾಣರಪ್ಪಾ ನೀವು, ಮಾತಿನಲ್ಲಿ ಸಿಕ್ಕಿ ಹಾಕಿಕೊಳ್ಳುವವರಲ್ಲ ನಮ್ಮಿಂದಲೇ ವಿಷಯ ತಿಳಿಯಲು ಬಯಸಿದ್ದೀರಿ. ಕೇಳಿ ಹೇಳುತ್ತೇನೆ ಈಗ ನಾವೆಲ್ಲರೂ ಕೂಡಿ ಆಹ್ವಾನಿಸಲು ಹೋಗುವ ವ್ಯಕ್ತಿ ಶ್ರೀನಿವಾಸಾಚಾರ್ಯ ಎಂಬ ಮಹಾಪಂಡಿತ, ಮಂತ್ರಾಲಯ ಕ್ಷೇತ್ರದಲ್ಲಿದ್ದು ಶ್ರೀವರದೇಂದ್ರ ಗುರು ಸಾರ್ವ ಭೌಮರಿಂದಲೇ ತತ್ವಜ್ಞಾನ ಶಿಕ್ಷಣ ಪಡೆದ ಪುಣ್ಯಶಾಲಿ. ಇತ್ತೀಚೆಗೆ ಈ ಊರಿಗೆ ಹಿಂದಿರುಗಿದ್ದಾರೆ. ಕರಸಿಕೊಂಡೇ ಹೋಗಬೇಕೆಂಬ ಆತ್ಮಗೌರವ ಅತಿಯಾಗಿ ಇದ್ದರೆ ಅದೇನೂ ಅಂಥ ದೊಡ್ಡ ಅಪರಾಧವಲ್ಲ. ಸಣ್ಣ ವಯಸ್ಸು. ಸ್ವಲ್ಪ ಅಹಂ ಸ್ವಭಾವ ಆದರೂ ಗಳಿಸಿರುವ ಪಾಂಡಿತ್ಯಕ್ಕೆ ಬೆಲೆ ಕೊಡಬೇಡವೆ? ಆದ್ದರಿಂದ ನಾವೂ ನಿಮ್ಮೊಂದಿಗೆ ಈ ದಿನ ಅಲ್ಲಿಗೆ ಬರುತ್ತೇವೆ" ವಿಜಯದಾಸರು ನುಡಿದರು.

"ಪಾಂಡಿತ್ಯವಿದ್ದ ಮಾತ್ರಕ್ಕೆ ಅಹಂಕಾರ ಏಕೆ ಇರಬೇಕು? ಅಂಥ ಅಹಂಕಾರ ಇರುವವರ ಮನೆಗೆ ತಮ್ಮಂಥ ಹಿರಿಯರು ಏಕೆ ಬರಬೇಕು?" ಸೀನಣ್ಣ ಪ್ರಶ್ನಿಸಿದ.

ವಿಜಯದಾಸರು ಬಿಡಿಸಿ ಹೇಳಿದರು. "ಆ ಮನೆ ಸಾಧಾರಣ ಮನೆಯಲ್ಲಪ್ಪಾ, ನನ್ನ ಶಿಷ್ಯ ವೇಣುಗೋಪಾಲ ವಿಠಲದಾಸರು ಅಂದರೆ ದಿವಾನ್ ತಿಮ್ಮಣ್ಣಯ್ಯ ನವರಿಂದ ಅಂಕಿತ ಪಡೆದು ಹರಿದಾಸ ಸಾಹಿತ್ಯವರ್ಧನೆಗೆ ಶ್ರಮಿಸಿದ ನರಸಿಂಹ ದಾಸರ ಮನೆಯದು. ಅವರ ಚಿರಂಜೀವಿಯೇ ಈ ಶ್ರೀನಿವಾಸಾಚಾರ್ಯ. ತಂದೆ ಮಾಡಿದ ಸೇವೆಯನ್ನು ಪರಿಗಣಿಸಿಯಾದರೂ ಅಲ್ಲಿಗೆ ನಾವು ಹೋಗಲೇಬೇಕು."

"ಅಂಥ ಶ್ರೇಷ್ಠ ಹರಿದಾಸರ ಪುತ್ರನಿಗೆ ಅಹಂಕಾರವೆ? ಪ್ರತಿನಿತ್ಯ ಕನ್ನಡ ಪದಗಳನ್ನು ಹಾಡಿ ಕುಣಿಯುವ ಮನೆಯಲ್ಲಿ ಕನ್ನಡದ ಬಗ್ಗೆ ಅಲಕ್ಷವೆ? ದಾಸ ಸಾಹಿತ್ಯದ ಬಗ್ಗೆ ಹಗುರ ಭಾವನೆಯೆ?" ಸೀನಣ್ಣ ಪ್ರಶ್ನಿಸಿದ.

ಅದೆಲ್ಲಾ ಶ್ರೀ ಹರಿ ಇಚ್ಛೆ. ವಿಜಯ ವಿಠಲನ ಲೀಲೆ. ಒಬ್ಬೊಬ್ಬ ಸುಜೀವಿಗೆ ಸರಿಜ್ಞಾನ ಉದಯಿಸಲು ಒಂದೊಂದು ಘಟನೆಯನ್ನು ಸೃಷ್ಟಿಸುವ. ಆತನ ನಾಟಕ ವನ್ನು ನೋಡುವುದಷ್ಟೇ ನಮ್ಮ ಕರ್ತವ್ಯ. ನಡೆಯಿರಿ ಹೋಗೋಣ. ಇನ್ನೂ ಬಹಳ ಕೆಲಸಗಳಿವೆ" ವಿಜಯದಾಸರು ನುಡಿಯುತ್ತಾ ಎದ್ದರು.

ಅವರೆಲ್ಲರೂ ಶ್ರೀನಿವಾಸಾಚಾರ್ಯರ ಮನೆಗೆ ಬಂದಾಗ ಆಚಾರ್ಯರು ಏನನ್ನೋ ಬರೆಯುತ್ತಾ ಕುಳಿತಿದ್ದರು.

ಈ ನಾಲ್ಕು ಜನ ಶ್ರೇಷ್ಠ ಹರಿದಾಸರು ಮನೆಗೆ ಬಂದಾಗಲೂ ಅವರು ಎದ್ದು ಸ್ವಾಗತಿಸಲಿಲ್ಲ. ಇವರ ಬಗ್ಗೆ ಬಹಳ ಹಗುರ ಭಾವನೆ ತಾಳಿರುವರೆಂದು ಅವರ ಮುಖವೇ ಹೇಳುತಿತ್ತು.

"ತೀರ್ಥಯಾತ್ರೆಯನ್ನು ಮುಗಿಸಿಕೊಂಡು ಬಂದಿದ್ದೇವೆ. ಅದರಂಗವಾಗಿ ನಾಳೆ ಇಲ್ಲಿ ಸಮಾರಾಧನೆ ನಿರ್ವಹಿಸಲ್ಪಡಲಿದೆ. ತಮ್ಮಂಥ ಪಂಡಿತರು ಅದರಲ್ಲಿ ಭಾಗವಹಿಸಿ ಪಂಕ್ತಿಯ ಶ್ರೇಷ್ಠತೆಯನ್ನು ಹೆಚ್ಚಿಸಬೇಕು. ತೀರ್ಥಪ್ರಸಾದ ಸ್ವೀಕರಿಸಿ ನಮ್ಮನ್ನು ಆನಂದ ಪಡಿಸಬೇಕು.

ವಿಜಯದಾಸರು ವಿನೀತರಾಗಿ ಆಹ್ವಾನಿಸಿದಾಗಲೂ ಆಚಾರ್ಯರು ಅವರನ್ನು ಕುಳಿತುಕೊಳ್ಳಿ ಎಂದು ಹೇಳಲಿಲ್ಲ. ತಾವು ಕುಳಿತವರು ಕದಲಲಿಲ್ಲ. ತಮ್ಮ ಗುರು ಗಳಿಗೆ ಕುಳಿತುಕೊಳ್ಳಿ ಎಂದು ಹೇಳದ ಆಚಾರ್ಯರ ಅಹಂಕಾರ ಕಂಡು ಗೋಪಾಲದಾಸರಿಗೆ ಕಸಿವಿಸಿಯಾಗತೊಡಗಿತು.

ಆಚಾರ್ಯರು ಹೇಳಿದರು.

"ನೋಡಿ ಹೇಗೆ ಬೇಕೋ ಹಾಗೆ, ಎಷ್ಟೊತ್ತಿಗೆ ಬೇಕಾದರೆ ಅಷ್ಟೊತ್ತಿಗೆ ಊಟ ಮಾಡುವ ಸ್ವಭಾವ ನಮ್ಮದಲ್ಲ. ಶಿಸ್ತು ಬದ್ಧ ಜೀವನ ನಮ್ಮದು. ಹಾಗಿದ್ದರೆ ಮಾತ್ರ ಪಾಂಡಿತ್ಯ ಸಿದ್ಧಿಸುತ್ತದೆ. ನಾವು ಆ ರೀತಿಯಾಗಿಯೇ ಬೆಳೆದಿದ್ದೇವೆ. ಊಟ ಹೊತ್ತು ಮೀರಿದರೆ ನಮಗೆ ಸರಿ ಹೋಗುವುದಿಲ್ಲ" ನುಡಿದ ಆಚಾರ್ಯರ ಧ್ವನಿಯಲ್ಲಿ ಗಡುಸು ತುಂಬಿತ್ತು.

"ಹಾಗೇನೂ ಆಗುವುದಿಲ್ಲ. ನೀವು ಯಾವ ಹೊತ್ತಿಗೆ ಊಟ ಮಾಡುವ ಅಭ್ಯಾಸವಿದೆಯೋ ತಿಳಿಸಿದಲ್ಲಿ ಅಷ್ಟರಲ್ಲಿಯೇ ನಾವೆಲ್ಲಾ ಸಿದ್ಧರಾಗುತ್ತೇವೆ. ಅದೇ ವೇಳೆಗೆ ವ್ಯವಸ್ಥೆ ಮಾಡುತ್ತೇವೆ" ವಿಜಯದಾಸರ ಉತ್ತರದಲ್ಲಿ ವಿನೀತತೆ ತುಂಬಿತ್ತು.

"ಆಗಲಿ, ನೋಡೋಣ" ಆಚಾರ್ಯರು ಹೇಳಿದರು.

"ನೋಡೋಣ"ಎನ್ನಬೇಡಿ 'ಆಗಲಿ ಬರುತ್ತೇವೆ' ಎಂದು ನಮ್ಮನ್ನು ಸಂತೋಷ ಪಡಿಸಿ" ವಿಜಯದಾಸರು ಮತ್ತೊಮ್ಮೆ ವಿನಯದಿಂದ ನುಡಿದರು.

"ಆಗಲಿ, ನೋಡೋಣ ಎಂದು ಹೇಳಿದೆನಲ್ಲಾ, ಮತ್ತೆ ಮತ್ತೆ ಅದೇ ಮಾತು ಬೇಡ" ಆಚಾರ್ಯರ ಧ್ವನಿ ತುಂಬಾ ಒರಟಾಗಿತ್ತು.

ಗುರುಗಳ ಬಗ್ಗೆ ಇಲ್ಲಿ ಕಾಣುತ್ತಿರುವ ಅನಾದರ ಕಂಡು ಗೋಪಾಲದಾಸರಿಗೆ ಸಹನೆಯಾಗಲಿಲ್ಲ. ತಮ್ಮ ಗುರುಗಳೇನಾದರೂ ಅಲ್ಲಿಲ್ಲದಿದ್ದರೆ ಆಗಲೇ ಅಲ್ಲಿ ಏನೆಂದು ಶಪಿಸಿಬಿಡುತ್ತಿದ್ದರೊ!

ಸರ್ರೆಂದು ಗೋಪಾಲದಾಸರು ಓಂದಿರುಗಿ ಬಿಟ್ಟರು. ಶಿಷ್ಯನಲ್ಲಿ ಉಂಟಾಗಿರುವ ಉದ್ವಿಗ್ನತೆಯನ್ನು ಅರಿತ ವಿಜಯದಾಸರು ಅಲ್ಲಿ ಹೆಚ್ಚು ಹೊತ್ತು ಇರಲು ಅಪೇಕ್ಷಿಸದೆ "ದಯವಿಟ್ಟು ಬನ್ನಿ" ಎಂದು ಮತ್ತೊಮ್ಮೆ ಹೇಳಿ ಶಿಷ್ಯನ ಓಂದೆ ಬಂದರು.

ಗೋಪಾಲದಾಸರ ಕಣ್ಣಿನಲ್ಲಿ ನೀರು ಬರುತ್ತಿದ್ದುದನ್ನು ಕಂಡು ವಿಜಯದಾಸರಿಗೆ ಆಶ್ಚರ್ಯವಾಯಿತು.

ಗೋಪಾಲದಾಸರು ನುಡಿದರು.

"ನಾನೆಂಥ ಪಾಪಿ ಗುರುಗಳೇ, ನಿಮ್ಮ ಬಗ್ಗೆ ಹಗುರ ಭಾವನೆ ಇರುವ ಮನೆಯಲ್ಲಿ ನಾನಿದ್ದಾಗಲೂ ನನ್ನ ತಲೆ ಒಡೆಯಲಿಲ್ಲ. ನಿಮ್ಮ ಬಗ್ಗೆ ಅಲಕ್ಷ್ಯ ತೋರಿದವರನ್ನು ಕಂಡಾಗಲೂ ನನ್ನ ಎದೆ ಬಿರಿಯಲಿಲ್ಲ. ಇಂಥ ಘಟನೆಯನ್ನು ನೋಡುವುದಕ್ಕಾಗಿ, ಗುರುನಿಂದೆಯ ಸನ್ನಿವೇಶವನ್ನು ಕಾಣುವುದಕ್ಕಾಗಿ ನಾನು ಬದುಕಿರುವೆನೆ?" ಅಳುತ್ತಾ ಗೋಪಾಲದಾಸರು ನುಡಿದಾಗ ವಿಜಯದಾಸರು ಶಿಷ್ಯನ ಗುರುಭಕ್ತಿಯ ಆಳ ಗ್ರಹಿಸಿ ಆತನ ಬೆನ್ನ ಮೇಲೆ ಕೈಯಾಡಿಸುತ್ತಾ ನುಡಿದರು.

"ನೀನು ಏಕೆ ಬದುಕಿದ್ದಿ ಎನ್ನುವುದು ಪ್ರಶ್ನೆಯಲ್ಲ. ಈ ಬದುಕು ಯಾರಿಗೆ ಹೋಗಲಿದೆ ಎನ್ನುವುದೇ ನನ್ನ ಮುಂದಿರುವ ಪ್ರಶ್ನೆ."

ವಿಜಯದಾಸರ ಮಾತು ಕೇಳಿ ಸೀನಣ್ಣ ದಾಸಣ್ಣರು ಆಶ್ಚರ್ಯದಿಂದ ನೋಡತೊಡಗಿದರು.

ಅವರಿಗೆ ಈ ಮಾತಿನ ಅರ್ಥ ಸ್ವಲ್ಪವೂ ಹೊಳೆಯಲಿಲ್ಲ. ಬದುಕು ಯಾರಿಗೆ ಹೋಗುವುದೇನು ಬಂದಿತು?

ವಿಜಯದಾಸರು ಹೀಗೇಕೆ ಸುತ್ತು ಮಾತು ಬಳಸುತ್ತಿದ್ದಾರೆ?

ಸೀನಣ್ಣ ದಾಸಣ್ಣರು ಯೋಚಿಸಿದರಾದರೂ ಅವರಿಗೆ ಅದರ ಅಂತರಾರ್ಥ ಹೊಳೆಯಲಿಲ್ಲ.

ಅಂತರಾರ್ಥ ಅರಿಯುವ ಹಂತದಲ್ಲಿರಲಿಲ್ಲ ಗೋಪಾಲದಾಸರು.

***

ಮರುದಿನ ಭೋಜನದ ವೇಳೆಯಲ್ಲಿ ಎಲ್ಲಾ ಬ್ರಾಹ್ಮಣ ಸುಹಾಸಿನಿಯರು ಬಂದಿದ್ದರೂ ಗೋಪಾಲದಾಸರ ದೃಷ್ಟಿಯೆಲ್ಲಾ ಮಹಾದ್ವಾರದೆಡೆಗೇ ನಿಂತಿತ್ತು. ಆಚಾರ್ಯರು ಬರುವರೋ ಇಲ್ಲವೋ ಎಂಬ ಕಾತುರ ಅವರಿಗೆ.

ಆಚಾರ್ಯರ ಸುಳಿವೇ ಇಲ್ಲ.

ವಿಜಯದಾಸರ ಸೂಚನೆಯ ಮೇರೆಗೆ ಅವರನ್ನು ಮತ್ತೊಮ್ಮೆ ಕರೆಯ ಹೋದವರು ಬಂದು ತಿಳಿಸಿದರು,

"ನಿಮ್ಮ ಊಟ ಹೊತ್ತಾಗುತ್ತದೆಂದು ಭಾವಿಸಿ ಅವರು ಭೋಜನ ತೀರಿಸಿ ಬಿಟ್ಟರಂತೆ. ಊಟ ಹೊತ್ತಾದರೆ ಅವರಿಗೆ ಹೊಟ್ಟೆನೋವು ಬರುತ್ತದಂತೆ."

ವಿಷಯ ಕೇಳಿದೊಡನೆಯೇ ಗೋಪಾಲ ದಾಸರ ಸಹನೆಯ ಕಟ್ಟು ಬಿಚ್ಚಿ ಬಿಟ್ಟಿತು. ಸಂಯಮದ ಕಟ್ಟೆ ಒಡೆದು ಹೋಯಿತು. ತಡೆ ಹಿಡಿದಿದ್ದ ಆವೇಶ ಸ್ಫೋಟಿಸಿಬಿಟ್ಟಿತು.

ಅವರೇ ಸೂಚಿಸಿದ ವೇಳೆಗೆ ತಾವೆಲ್ಲಾ ಸಿದ್ಧರಾದರೂ ಅವರು ಬರಲಿಲ್ಲ

"ಊಟ ಹೊತ್ತಾದರೆ ಹೊಟ್ಟೆನೋವು ಬರುತ್ತದೆಯೆ? ಊಟ ಹೊತ್ತಾಗಿಲ್ಲವಲ್ಲಾ-ಎಲ್ಲಿ ಬರುತ್ತಿತ್ತು ಹೊಟ್ಟೇನೋವು? ಹೊಟ್ಟೆ ನೋವೆ? ಆಗಲಿ- ಆಗಲಿ" ಗೋಪಾಲದಾಸರು ನುಡಿದಾಗ ವಿಜಯದಾಸರು ನಾಲಿಗೆ ಕಚ್ಚಿಕೊಂಡು ಬಿಟ್ಟರು.

"ಎಂಥ ಕೆಲಸ ಮಾಡಿಬಿಟ್ಟೆ ಭಾಗಣ್ಣಾ" ಉದ್ಗರಿಸಿದರು ವಿಜಯದಾಸರು.

ಅಂಥ ಕೆಲಸ ಮಾಡಿದವರು ಆಚಾರ್ಯರು.

ಈಗ ವಿಜಯದಾಸರು ಗೋಪಾಲದಾಸರ ಬಗ್ಗೆ ಈ ರೀತಿ ನುಡಿಯುತ್ತಿದ್ದಾರೆ!

ಗೋಪಾಲದಾಸರು ಮಾಡಿದ ಕೆಲಸವಾದರೂ ಏನು? ತಮ್ಮಂದಿರಿಗೆ ಈ ವಿಷಯ ಹೊಳೆಯಲಿಲ್ಲ

ವಿಜಯದಾಸರೇ ಅವರಿಗೆ ಬಿಡಿಸಿ ಹೇಳಿದರು. "ನಿಮ್ಮಣ್ಣ ಸಾಮಾನ್ಯ ಮನುಷ್ಯ ನಲ್ಲಪ್ಪಾ. ಇವನು ನುಡಿಯುವ ಪ್ರತಿ ಶಬ್ದದಲ್ಲಿಯೂ ದೇವಾನುದೇವತೆಗಳು ವಿಶೇಷ ಸನ್ನಿಹಿತರಾಗಿರುತ್ತಾರೆ. "ಹೊಟ್ಟೆನೋವೇ ಆಗಲಿ- ಆಗಲಿ" ಎಂಬ ನಿಮ್ಮಣ್ಣನ ಸಾಮಾನ್ಯ ಮಾತೇ ಮಹತ್ತರ ಕೆಲಸ ಮಾಡತೊಡಗಿದೆ. ಈಗಾಗಲೇ ಅಲ್ಲಿರುವ ಆಚಾರ್ಯರಿಗೆ ಹೊಟ್ಟೆ ನೋವು ಪ್ರಾರಂಭವಾಗಿ ಬಿಟ್ಟಿದೆ. ಗಾಯತ್ರಿ ಮಂತ್ರ ಸಿದ್ಧನು ನೊಂದು ನುಡಿದ ಮಾತು ವ್ಯರ್ಥವಾಗುವುದುಂಟೆ? ಗಾಯತ್ರಿ

ಮಂತ್ರ ಪ್ರತಿಪಾದ್ಯನ ಇಚ್ಛೆ ಏನಿದೆಯೋ? ಆತ ಭಾಗಣ್ಣನಿಂದ ಈ ಮಾತು ಹೊರಡಿಸಿ ಬಿಟ್ಟ. ದೊಡ್ಡವರ ಸಿಟ್ಟು, ಸಾತ್ವಿಕರ ಶಾಪ ದೊಡ್ಡ ಶುಭ ಘಟನೆಗೇ ನಾಂದಿಯಾಗುತ್ತದೆ. ಪ್ರಾರಬ್ಧ ಕರ್ಮಗಳ ಮಹತ್ವನ್ನು ಕಿಂಚಿತ್‌ಗೊಳಿಸಿ ಉದ್ಧರಿಸುವ ಕರುಣಾಮಯ ನಮ್ಮ ವಿಜಯ ವಿಠಲ" ಎಂದು ವಿಜಯದಾಸರು ಹೇಳಿ ಎಲ್ಲರನ್ನೂ ಊಟಕ್ಕೆ ಕೂಡಿಸಿದರು.

***

ಶ್ರೀನಿವಾಸಚಾರ್ಯರಿಗೆ ಹೊಟ್ಟೆನೋವಾದ ಸಂಗತಿ ತಿಳಿದ ಗೋಪಾಲ ದಾಸರ ಪರಿತಾಪ ಹೇಳಲಸದಳ. ಗುರುಗಳಾದ ವಿಜಯದಾಸರಿಗೆ ಅವಮಾನ ವಾದರೆ ಅದನ್ನು ನೋಡಿದ ಅಪರಾಧಕ್ಕೆ ತಾವು ಶಿಕ್ಷೆ ಅನುಭವಿಸಬೇಕಿತ್ತೇ ವಿನಹ ಆಚಾರ್ಯರನ್ನು ಶಪಿಸುವಂಥ ಮಾತುಗಳು ತಮ್ಮಿಂದ ಬಂದವೇಕೇ? ತಮ್ಮಿಂದ ಎಂಥ ಕೃತ್ಯ ನಡೆದು ಹೋಯಿತು!

ಗೋಪಾಲದಾಸರಿಗೆ ಇದೇ ಯೋಚನೆ. ಆಚಾರ್ಯರ ಭವಿಷ್ಯದ ಬಗ್ಗೆ ಯೋಚಿಸಬಾರದೆಂದು ಗುರುಗಳು ಕಟ್ಟಪ್ಪಣೆ ಮಾಡಿದ್ದಾರೆ.

ಯಾವುದೋ ಮುಖ್ಯಕಾರಣಕ್ಕಲ್ಲದಿದ್ದರೆ ಗುರುಗಳು ಈ ರೀತಿಯ ಕಟ್ಟಪ್ಪಣೆ ಮಾಡುತ್ತಿರಲಿಲ್ಲ ಪಾಪ: ಆಚಾರ್ಯರಿಗೆ ಯಾವ ಜನ್ಮದ ಪಾಪ ಕಾದಿತ್ತೊ?

ಆ ಪಾಪ ಪರಿಹಾರಕ್ಕಾಗಿ ಅನುಭವಿಸುವ ಶಿಕ್ಷೆಗೆ ತಾವು ಕಾರಣವಾಗ ಬೇಕಾಯಿತಲ್ಲಾ ಎಂದು ಹಗಲಿರಳೂ ಯೋಚನೆ.

ಯಾವ ಸಂಗತಿಗೂ ವಿಚಲಿತನಾಗದ ತಮ್ಮ ಅಣ್ಣ ಈಗ ಸಾಮಾನ್ಯ ಜನರಂತೆ ಸದಾ ಚಿಂತಿಸುತ್ತಿರುವುದನ್ನು ಕಂಡು ಸೀನಣ್ಣ ದಾಸಣ್ಣರಿಗೆ ಯೋಚನೆ. ಮಾನವಿ ಯಲ್ಲಿ ನಡೆದ ಘಟನೆಗಳ ಸ್ಮರಣೆಯಲ್ಲಿ ಉತ್ತನೂರಿನ ಜೀವನ ದುಃಖಮಯ ವಾಗುತ್ತಿರುವುದನ್ನು ಕಂಡು ಸಂಗತಿಗಳನ್ನು ಮರೆಯಲು ಯಾವುದಾದರೂ ಯಾತ್ರೆಗೆ ಹೋಗೋಣ ಎಂದು ಸೀನಣ್ಣ ಒತ್ತಾಯಿಸಿದ. ಗುರುಗಳಾದ ವಿಜಯದಾಸರು ಇರುವ ಚೀಕಲಪರ್ವಿಯೇ ನನಗೆ ದೊಡ್ಡ ಕ್ಷೇತ್ರ. ಅವರ ಸನ್ನಿಧಿಗೆ ಹೋಗಿ ಅವರಲ್ಲಿಯೇ ಮೊರೆ ಹೋಗೋಣ ಎಂದು ಗೋಪಾಲದಾಸರು ತಮ್ಮಂದಿರನ್ನು ಪುನಃ ಚೀಕಲಪರ್ವಿಗೆ ಕರೆದೊಯ್ದರು.

"ಹುಚ್ಚಾ, ಚಿಂತಿಸಬೇಡ. ನಿನ್ನ ನುಡಿಯಿಂದ ಆಚಾರ್ಯರಿಗೆ ಹೊಟ್ಟೆನೋವು ಉಂಟಾದರೆ ಏನಾಯಿತು? ಅದರಿಂದ ಸ್ವಲ್ಪ ಕಾಲ ಅವರಿಗೆ ವೇದನೆಯಾಗಬಹುದು.

ಅಷ್ಟೆ ! ಆದರೆ ಅವರ ಚಿತ್ತ ಇದರಿಂದ ಪವಿತ್ರವಾಗುತ್ತದೆ. ಪಾಂಡಿತ್ಯದಿಂದ ಭಕ್ತಿಯೆಡೆಗೆ ಅವರು ಸಾಗುತ್ತಿದ್ದಾರೆ. ಈಗ ನೋಡು; ಆ ದಿನದಿಂದ ಆಚಾರ್ಯರಿಗೆ ಊಟವೇ ಸೇರುತ್ತಿಲ್ಲ. ಊಟ ಮಾಡಿದೊಡನೆಯೇ ಹೊಟ್ಟೆನೋವು ಪ್ರಾರಂಭವಾಗಿ ಉಂಡಿದ್ದೆಲ್ಲಾ ವಾಂತಿಯಾಗಿ ಬಿಡುತ್ತಿದೆ. ಲೌಕಿಕವಾಗಿ ಎಲ್ಲಾ ವೈದ್ಯ ಚಿಕಿತ್ಸೆಗಳೂ ಮುಗಿದವು.

ಉಂಡ ಆಹಾರದಲ್ಲಿ ಸ್ವಲ್ಪ ಭಾಗವೂ ಹೊಟ್ಟೆಯಲ್ಲಿ ಉಳಿಯುತ್ತಿಲ್ಲ ಎಂಬ ವಿಷಯವನ್ನೇನೋ ವೈದ್ಯ ವಿಜ್ಞಾನ ಕಂಡು ಹಿಡಿಯುತ್ತಿದೆ. ಹೊಟ್ಟೆನೋವು ಪರಿಹರಿಸುವ ಮಾತು ಒಂದೆಡೆಗಿರಲಿ; ಹೊಟ್ಟೆಗೆ ಏನೂ ದಕ್ಕದಿದ್ದರೂ ಆಚಾರ್ಯರು ಉಳಿದಿರುವುದು ಹೇಗೆ ಎಂದು ತಿಳಿಯಲು ಅದಕ್ಕೆ ಸಾಧ್ಯವಾಗಿಲ್ಲ.

ವೈದ್ಯಶಾಸ್ತ್ರದ ಪರಿಮಿತತ್ವವನ್ನು ಗ್ರಹಿಸಿದ ಆಚಾರ್ಯರು ಮೆಲ್ಲಗೆ ಭಕ್ತಿಯೆಡೆಗೆ ತಿರುಗುತ್ತಿದ್ದಾರೆ. ತಿರುಪತಿಗೆ ಹೋಗಿ ಶ್ರೀನಿವಾಸನ ಸೇವೆ ಮಾಡಿದರು. ಅಲ್ಲಿ ಪರಮಾತ್ಮನ ತೀರ್ಥಪ್ರಭಾವದಿಂದ ಅವರು ಉಳಿದರು. ತೀರ್ಥವೊಂದೇ ಅವರಿಗೆ ಬಲ, ಅಲ್ಲಿ ಶ್ರೀ ಪ್ರಾಣದೇವರ ಸೇವೆ ಮಾಡುವಂತೆ ಸ್ವಾಮಿ ನಿರ್ದೇಶಿಸಿದ. ಶ್ರೀ ಪ್ರಾಣದೇವರ ಸೇವೆ ಮಾಡುತ್ತಿರುವಾಗ ಮಂತ್ರಾಲಯಕ್ಕೆ ಹೋಗಿ ಶ್ರೀರಾಯರ ಸೇವೆ ಮಾಡುವಂತೆ ಪ್ರೇರಣೆಯಾಯಿತು. ಈಗ ಮಂತ್ರಾಲಯ ಕ್ಷೇತ್ರಕ್ಕೆ ಹೋಗಿದ್ದಾರೆ. ಶ್ರೀರಾಯರಿಗೂ ಆಚಾರ್ಯರಿಗೂ ಇರುವ ಸಂಬಂಧವನ್ನು ನೀನೇ ಜ್ಞಾನದೃಷ್ಟಿಯಿಂದ ನೋಡು" ವಿಜಯದಾಸರು ಶಿಷ್ಯನಿಗೆ ಅಪ್ಪಣೆ ಕೊಟ್ಟರು.

ತಮಗೆ ಎಷ್ಟೇ ವ್ಯಥೆಯಾಗಿದ್ದರೂ ಗುರುಗಳ ಆಜ್ಞೆಯಿದ್ದ ಕಾರಣ ಆಚಾರ್ಯರ ಬಗ್ಗೆ ಕಣ್ಣ ನೋಡುವ ಕೆಲಸವಾಗಲೀ, ಜ್ಞಾನದೃಷ್ಟಿಯಿಂದ ಈಕ್ಷಿಸುವುದಾಗಲಿ ಮಾಡಿರಲಿಲ್ಲ.

ಶಿಷ್ಯನ ಗುರು ಭಕ್ತಿಗೆ ವಿಜಯದಾಸರು ತಲೆದೂಗಿಬಿಟ್ಟರು.

"ನಿನ್ನ ಗುರುಭಕ್ತಿ ಲೋಕಕ್ಕೆ ಮಹಾ ಆದರ್ಶ. ಭಕ್ತಿಯೆಂದರೆ ಭಾಗಣ್ಣ ಎಂದು ಮುಂದಿನ ಲೋಕ ನಿನ್ನನ್ನು ಗುರ್ತಿಸುತ್ತದೆ" ಎಂದು ವಿಜಯದಾಸರು ಆಶೀರ್ವದಿಸುತ್ತಾ, ಆಚಾರ್ಯರ ಸದ್ಯದ ಸ್ಥಿತಿಯನ್ನು ಮಾತ್ರ ನೋಡುವಂತೆ ಶಿಷ್ಯನಿಗೆ ಅಪ್ಪಣೆ ಕೊಟ್ಟರು.

ಗೋಪಾಲದಾಸರು ಆಚಾರ್ಯರ ಸ್ಥಿತಿಯನ್ನು ಜ್ಞಾನದೃಷ್ಟಿಯಿಂದ ನೋಡತೊಡಗಿದರು.

ಆಚಾರ್ಯರು ಸಂಪೂರ್ಣ ಕೃಶರಾಗಿ ಹೋಗಿದ್ದಾರೆ. ಆದರೂ ಅವರು ದೊಡ್ಡ ಕ್ಷೇತ್ರದಲ್ಲಿ ಸೇವೆ ಮಾಡುತ್ತಿರುವುದರಿಂದ ತೆಗೆದುಕೊಂಡ ಪಾದೋದಕ ಹಾಗೂ ತೀರ್ಥಗಳಿಂದ ಮಾತ್ರ ಜೀವ ಉಳಿದಂತಿದೆ. ನದಿಗೆ. ಹೋಗಿ ಸ್ನಾನ ಮುಗಿಸಿಕೊಂಡು ಶ್ರೀಮಠದಲ್ಲಿ ಒಂದು ಪ್ರದಕ್ಷಿಣೆ ಮುಗಿಸುತ್ತಿರುವಂತೆಯೇ ತಲೆಸುತ್ತಿ ಬಿದ್ದು ಬಿಟ್ಟಿದ್ದಾರೆ. ಅವರ ಅನುಯಾಯಿಗಳು ಅವರನ್ನು ಶ್ರೀಮಠದಿಂದ ಅವರು ಇಳಿದುಕೊಂಡ ಜಾಗಕ್ಕೆ ಹೊತ್ತುಕೊಂಡು ಹೋಗುತ್ತಿದ್ದಾರೆ.

ಎಂಥ ಅವಸ್ಥೆ ಆಚಾರ್ಯರಿಗೆ!

ಎಲ್ಲವನ್ನೂ ಕರುಣಿಸುವ ಹಾಗೂ ಎಲ್ಲರಿಗೂ ಅವರವರ ಯೋಗ್ಯತೆ ಸಾಧನೆಗಳನ್ನು ಅರಿತು ಕೃಪೆಯಿಂದ ಅನುಗ್ರಹಿಸುವ ರಾಯರು ಇಂಥ ಆರ್ಚಾಯ ರನ್ನೇಕೆ ಕರುಣಿಸುತ್ತಿಲ್ಲ?

"ರಾಯರೇ ಇವರಿನ್ನೂ ಹುಡುಗರು. ಗೊತ್ತಿಲ್ಲದೆ ನಮ್ಮ ಗುರುಗಳು ನೀಡಿದ ಆಹ್ವಾನ ನಿರಾಕರಿಸಿ ಸೋತ್ತಮ ದ್ರೋಹ ಮಾಡಿದರು. ಕ್ಷಣಿಕ ಆವೇಶದಲ್ಲಿ ನಾನೂ ಏನೋ ನುಡಿದು ಬಿಟ್ಟೆ. ಅದಕ್ಕಾಗಿ ಈ ಜೀವಿಗೆ ಇಷ್ಟೊಂದು ಹಿಂಸೆ ಸಲ್ಲದು. ಆ ನೋವು ಏನಿದ್ದರೂ ನನಗೆ ಕೊಡಿ" ಗೋಪಾಲದಾಸರು ಮನಸ್ಸಿನಲ್ಲಿಯೇ ನುಡಿಯುತ್ತಿದ್ದರು. ರಾಯರು ಅವರ ಅಂತರ್ಯಾಮಿಯಾಗಿ ಗೋಪಾಲದಾಸರ ಪ್ರಾರ್ಥನೆಯನ್ನು ಆಲಿಸುತ್ತಾ ಮುಗುಳ್ನಕ್ಕರು.

ಅಷ್ಟರಲ್ಲಿಯೇ ವಿಜಯದಾಸರು ಗೋಪಾಲದಾಸರ ಬೆನ್ನು ತಟ್ಟಿ

"ಸಾಕು ಭಾಗಣ್ಣಾ, ಅವರಿಗೆ ಉಂಟಾದ ಹೊಟ್ಟೆ ನೋವನ್ನು ನೀನು ಕೇಳಿಕೊಳ್ಳುತಿದ್ದೀಯಲ್ಲಾ" ಎಂದು ಎಚ್ಚರಿಸಿದರು.

ತಾವಿರುವುದು ಚೀಕಲಪರವಿ. ತಮ್ಮ ಅಣ್ಣ ಅಂತರಮುಖಿಯಾಗಿ ಮಂತ್ರಾಲಯ ದಲ್ಲಿರುವ ಆಚಾರ್ಯರ ಸ್ಥಿತಿಯನ್ನು ನೋಡಿ ಬೃಂದಾವನದಲ್ಲಿರುವ ರಾಯರಲ್ಲಿ ಪ್ರಾರ್ಥಿಸುತ್ತಿದ್ದಾರೆ.

ಅದನ್ನು ನಿಂತಲ್ಲಿಯೇ ಎಲ್ಲವನ್ನೂ ನೋಡುತ್ತಿರುವ ವಿಜಯದಾಸರ ಮಹಾನ್ ಶಕ್ತಿಯ ಕಂಡು ಸೀನಣ್ಣ ದಾಸಣ್ಣರು ಬೆರಗಾಗಿ ಹೋದರು.

ವಿಜಯದಾಸರು ನುಡಿದರು,

"ನೀವೆಲ್ಲರೂ ಉತ್ತನೂರಿಗೆ ಹೋಗಿರಿ. ಅಲ್ಲಿಗೆ ಆಚಾರ್ಯರೇ ಬರುತ್ತಾರೆ. ನಿಮ್ಮಣ್ಣನಿಂದಲೇ ಅವರ ಹೊಟ್ಟೆನೋವು ಪರಿಹಾರವಾಗಬೇಕು.

ಪಾಪ ಆಚಾರ್ಯರು ಈಗಾಗಲೇ ಬಹಳ ಬಳಲಿ ಬಿಟ್ಟಿದ್ದಾರೆ. ಇನ್ನು ಮೂರು ದಿನಗಳಲ್ಲಿ ಶ್ರೀ ಮಠಕ್ಕೆ ಬಂದು ರಾಯರ ದರ್ಶನ ಪಡೆಯುವ ಶಕ್ತಿಯೂ ಅವರಿಗೆ ಇಲ್ಲವಾಗುತ್ತದೆ. ಆಮೇಲೆ ಶ್ರೀ ಗುರುಸಾರ್ವಭೌಮರು ಅವರಿಗೆ ಸೂಕ್ತ ದರ್ಶನ ನೀಡುತ್ತಾರೆ." ಎಂದು ಸೀನಣ್ಣ ದಾಸಣ್ಣರಿಗೆ ವಿಷಯ ವಿವರಿಸಿ ಅವರನ್ನು ಉತ್ತನೂರಿಗೆ ಕಳಿಸಿಕೊಟ್ಟರು.

ಶೀಘ್ರದಲ್ಲಿಯೇ ಆಚಾರ್ಯರು ಉತ್ತನೂರಿಗೆ ಬರುವ ವಿಷಯ ತಿಳಿದ ಗೋಪಾಲದಾಸರು ಪರಮಾತ್ಮನ ಲೀಲೆಗಳನ್ನು ಸ್ಮರಿಸುತ್ತ ಗುರುಗಳನ್ನು ಕೊಂಡಾಡುತ್ತಾ ಆ ಶುಭಘಳಿಗೆ ಬೇಗನೆ ಬರಲೆಂದು ಪ್ರಾರ್ಥಿಸುತ್ತಾ ಊರು ಸೇರಿದರು.

ಗೋಪಾಲದಾಸರಿಗೆ ಒಂದೇ ಯೋಚನೆ. ಬಸವಳಿದು ಬರುವ ಆಚಾರ್ಯರಿಗೆ ಶ್ರೀವೆಂಕಟೇಶನ ದರ್ಶನಕ್ಕೆ ಬಂದಾಗ ಕಲ್ಲುಗಳು ಒತ್ತಿ ಕಾಲು ನೋಯಬಾರದೆಂದು ಗುಡಿಯ ಸುತ್ತು ಮುತ್ತಲಿದ್ದ ಕಲ್ಲು ಹರಳುಗಳನ್ನು ಆರಿಸಿ ಮೆದು ನೆಲವಾಗಿ ಮಾಡಿದರು.

ನಿರೀಕ್ಷೆಯಂತೆಯೇ ಒಂದು ದಿನ ಮಧ್ಯಾಹ್ನ ಆಚಾರ್ಯರು ಶ್ರೀ ವೆಂಕಟರಮಣನ ಗುಡಿಯ ಬಳಿ ಬಂದಾಗ ಗೋಪಾಲದಾಸರು ಗುಡಿಯ ಮುಂಭಾಗದಲ್ಲಿ ಕಸ ಗುಡಿಸುತ್ತಿದ್ದರು.

ಆಚಾರ್ಯರು ಗೋಪಾಲದಾಸರನ್ನೇ ಕೇಳಿದರು.

"ಗೋಪಾಲದಾಸರ ಮನೆ ಎಲ್ಲಿದೆಯಪ್ಪಾ" "ಊರಲ್ಲಿ ಹೋಗಿ ಸ್ವಾಮಿ ಕೋಟೆಯ ಹತ್ತಿರವೇ ಇದೆ. ಊರಲ್ಲಿ ಯಾರನ್ನು ಕೇಳಿದರೂ ತೋರಿಸುತ್ತಾರೆ" ಗೋಪಾಲದಾಸರು ನುಡಿದರು.

ಶ್ರೀನಿವಾಸಾಚಾರ್ಯರು ಮುಂದೆ ಸಾಗಿದ ಮೇಲೆ ಪಕ್ಕದಲ್ಲಿದ್ದ ಸೀನಣ್ಣ ತನ್ನಣ್ಣನನ್ನು ಕೇಳಿದ.

"ಅಲ್ಲಣ್ಣಾ ಆಚಾರ್ಯರ ಬರುವಿಕೆಗಾಗಿ ಅಷ್ಟೊಂದು ಕಾತುರದಿಂದ ಕಾದಿದ್ದವರು ಈಗ ಅವರು ಬಂದಾಗಲೂ ನಿಮ್ಮ ಪರಿಚಯ ಹೇಳಿಕೊಳ್ಳಲಿಲ್ಲವಲ್ಲಾ?"

ಆಚಾರ್ಯರನ್ನು ನೋಡಿದ ಮೇಲೆ ಗೋಪಾಲದಾಸರಿಗೆ ಸಮಾಧಾನವಾಗಿತ್ತು. ಮಂತ್ರಾಲಯದಲ್ಲಿ ಆಚಾರ್ಯರು ಸೇವೆ ಮಾಡುತ್ತಿದ್ದಾಗ ಇದ್ದ ಸ್ಥಿತಿಯನ್ನು ಜ್ಞಾನದೃಷ್ಟಿಯಿಂದ ಕಂಡಿದ್ದರು.

ಈಗ ಅವರ ಸ್ಥಿತಿ ಸುಧಾರಿಸಿದೆ. ಇನ್ನು ಅವರಿಗೆ ಜೀವ ಭಯವಿಲ್ಲ. ಆದ್ದರಿಂದಲೇ ಗೋಪಾಲದಾಸರು ತಮ್ಮ ಪರಿಚಯವನ್ನು ಹೇಳಿಕೊಳ್ಳಲಿಲ್ಲ.

ತಮ್ಮನಿಗೆ ಹೇಳಿದರು.

"ಸೀನಣ್ಣಾ, ಆ ದಿನ ನಾವು ಇವರನ್ನು ಕರೆಯಲು ಮನೆಗೆ ಹೋಗಿದ್ದು ಅವರ ನೆನಪಿನಲ್ಲಿಯೇ ಇಲ್ಲ. ಬಂದ ನಮ್ಮಗಳ ಹೆಸರನ್ನು ತಿಳಿಯಲು ಅವರು ಆ ದಿನ ಪ್ರಯತ್ನಿಸಿರಲಿಲ್ಲ. ಅದರ ದುಷ್ಫಲ ಪೂರ್ತಿ ಪರಿಹಾರವಾಗಲೆಂದೇ ಈ ರೀತಿ ವಿನೋದವಾಡಿದೆ. ಅಷ್ಟಕ್ಕೂ ಅವರು ನನ್ನ ಹೆಸರಿನ ವ್ಯಕ್ತಿ ಯಾರೆಂದು ಕೇಳಲಿಲ್ಲ. ನನ್ನ ಮನೆ ಕೇಳಿದರು. ದಾರಿ ತೋರಿಸಿದೆ" ಎಂದು ನಗುತ್ತಾ ನುಡಿದು ಪಂಡಿತರಿಗೆ ಈ ಕಸಗುಡಿಸುವ ಕೆಲಸ ಬಹಳ ಸಣ್ಣವರು ಮಾಡುವ ಕೆಲಸ ಎಂಬ ಭಾವನೆ. ಆದ್ದರಿಂದಲೇ ತಾವು ಹುಡುಕಿಕೊಂಡು ಬಂದ ವ್ಯಕ್ತಿ ಇಂಥ ಕೆಲಸ ಮಾಡುತ್ತಿರಲಾರರು ಎಂಬ ಭ್ರಮೆ. ಪಾಪ; ಪಾಂಡಿತ್ಯದ ಪ್ರಭಾವ" ಗೋಪಾಲದಾಸರು ನುಡಿಯುತ್ತಿದ್ದಂತೆ ಆಚಾರ್ಯರು ಊರಲ್ಲಿ ಹೋಗಿ ಪುನಃ ಗುಡಿಯೆಡೆಗೆ ಧಾವಿಸಿ ಓಡೋಡಿ ಬರುತ್ತಿರುವುದನ್ನು ನೋಡಿದರು.

ಗೋಪಾಲದಾಸರು ಅವರನ್ನು ಎದುರುಗೊಳ್ಳಲು ತಾವೇ ಧಾವಿಸಿ ಹೋದರು.

ದಾಸರನ್ನು ಗುರುತು ಹಿಡಿದ ಆಚಾರ್ಯರು ಅವರು ಹತ್ತಿರ ಬರುತ್ತಿದ್ದಂತೆಯೇ ಆನಂದೋದ್ರೇಕಗಳಿಂದ "ನಮೋ ಗೋಪಾಲದಾಸರಾಯಾ" ಎಂದು ಉದ್ಗರಿಸುತ್ತಾ ಅವರ ಕಾಲು ಹಿಡಿಯಲು ಧಾವಿಸುತ್ತಿದ್ದಂತೆಯೇ ತಮ್ಮ ಕಾಲು ತೊಡರಿ ಧೊಪ್ಪೆಂದು ಬೀಳುವುದರಲ್ಲಿದ್ದರು.

ಅಷ್ಟರಲ್ಲಿಯೇ ಗೋಪಾಲದಾಸರು ಅವರ ಕೈ ಹಿಡಿದು ಬೀಳುವುದನ್ನು ತಡೆದರು. "ನಾನು ಬಿದ್ದು ಬಿಟ್ಟಿದ್ದೆ ದಾಸರಾಯರೇ, ನಿಮ್ಮ ಕರುಣೆಯಿಂದ ಎದ್ದು ಉದ್ಧಾರವಾಗ ಬೇಕಾಗಿದೆ" ಎಂದು ಆಚಾರ್ಯರು ಗದ್ಗದಿತ ಕಂಠದಿಂದ ನುಡಿಯುತ್ತಾ ದಾಸರ ಕಾಲುಗಳನ್ನು ಗಟ್ಟಿಯಾಗಿ ಹಿಡಿದರು.

"ಗಟ್ಟಿಗರು ಆಚಾರ್ಯರೇ ನೀವು. ಶ್ರೀ ಮಂತ್ರಾಲಯ ಪ್ರಭುಗಳು ಸ್ವಪ್ನದಲ್ಲಿ ನಿಮಗೆ ಸಂಪೂರ್ಣದರ್ಶನ ನೀಡಿ ನಿಮ್ಮ ಮೂಲ ರೂಪವನ್ನು ಅವರೇ ತಿಳಿಸಿದ್ದಾರೆ. ಅವರೇ ನಮ್ಮ ಗುರುಗಳಾದ ವಿಜಯರಾಯರ ಬಳಿಗೆ ಕಳಿಸಿಕೊಟ್ಟರು. ಅವರ ಸೂಚನೆಯಂತೆ ಈಗ ನನ್ನ ಬಳಿ ಬಂದಿದ್ದೀರಿ. ರಾಯರು ಸ್ವಪ್ನದಲ್ಲಿ ನೀಡಿದ ಉತ್ಪತ್ತಿ ಎಚ್ಚರವಾದ ಮೇಲೂ ನಿಮ್ಮ ಉಡಿಯಲ್ಲಿ ಉಳಿದಿದ್ದವಲ್ಲವೆ? ಗುರುಗಳಾದ

ವಿಜಯದಾಸರು ಅವುಗಳಲ್ಲಿ ತಾವೆರಡು ಸ್ವೀಕರಿಸಿ ಮಿಕ್ಕವುಗಳನ್ನು ಇಲ್ಲಿಗೆ ಕಳಿಸಿದ್ದಾರಲ್ಲಾ, ಅವನ್ನು ಇಲ್ಲಿ ಕೊಡಿ. ಹಾಗೆಯೇ ವಿಜಯ ವಿಠಲನಿಗೆ ಸಮರ್ಪಿಸಿ ಕಳಿಸಿದ ಗಂಧವನ್ನೂ ನೀಡಿ. ನಾವು ಸೋದರರು ಅವನ್ನು ಸ್ವೀಕರಿಸಿ ಕೃತಾರ್ಥ ರಾಗುತ್ತೇವೆ" ಎಂದು ಗೋಪಾಲದಾಸರು ನುಡಿದಾಗ ಆಚಾರ್ಯರಿಗೆ ಆಶ್ಚರ್ಯವಾಗಿ ಹೋಯಿತು.

ಮಂತ್ರಾಲಯದಲ್ಲಿ ತಮಗಾದ ಸ್ವಪ್ನ, ನೀಡಿದ ಉತ್ತತ್ತಿ, ಚೀಕಲ ಪರವಿಯಲ್ಲಿ ವಿಜಯರಾಯರು ಕರುಣಿಸಿರುವ ಗಂಧ ಇವೆಲ್ಲವನ್ನೂ ಕಣ್ಣಾರೆ ನೋಡಿದಂತೆ ನುಡಿಯುತ್ತಿರುವ ಗೋಪಾಲದಾಸರ ಮಹತ್ ಶಕ್ತಿಯನ್ನು ಅನುಭವದಿಂದಲೇ ಅರಿತ ಆಚಾರ್ಯರು ಮತ್ತೊಮ್ಮೆ ದಾಸರ ಕಾಲುಗಳಿಗೆ ನಮಸ್ಕರಿಸಿದರು.

ಶ್ರೀ ವೆಂಕಟೇಶನಗುಡಿಯಲ್ಲಿ ಆಚಾರ್ಯರಿಂದ ಮಂಗಳಾರಾತಿ ಮಾಡಿಸಿ ಮನೆಗೆ ಕರೆದೊಯ್ದರು.

ಆಚಾರ್ಯರಿಗೆ ತುಂಬಾ ಹಸಿವಾಗಿಬಿಟ್ಟಿತ್ತು. ವಿಜಯದಾಸರ ಸನ್ನಿಧಿಯಲ್ಲಿ ಉಂಡ ಊಟದ ಹೊರತು ಮತ್ತೆ ಉಂಡಿರಲಿಲ್ಲ. ಬೇರೆ ಕಡೆ ಊಟ ಮಾಡಲು ಹೊಟ್ಟೆನೋವಿನ ಅಂಜಿಕೆ.

ದಾಸರು ನೀಡಿದ ನಾಲ್ಕು ಜೋಳದ ರೊಟ್ಟಿಯನ್ನು ನಮಸ್ಕರಿಸಿ ಸಂತೋಷ ದಿಂದ ತಿನ್ನುತ್ತಿರುವಂತೆಯೇ ಸೀನಣ್ಣ ಅವರನ್ನು ಪ್ರಶ್ನಿಸಿದ.

"ಮೊದಲೇ ನಿಮಗೆ ಜೀರ್ಣಶಕ್ತಿಯಿಲ್ಲ. ಹೊಟ್ಟೆ ನೋವಿನಿಂದ ಬಳಲುತ್ತಿದ್ದೀರಿ. ಹೀಗಿದ್ದರೂ ಜೋಳದ ರೊಟ್ಟಿಯನ್ನು ನಿರ್ಭಯವಾಗಿ ಉಣ್ಣುತ್ತಿರುವಿರಲ್ಲಾ, ನಿಮಗೆ ಹೆದರಿಕೆಯಾಗುವುದಿಲ್ಲವೆ?"

ಈ ಪ್ರಶ್ನೆಯಿಂದ ಆಚಾರ್ಯರ ಕಣ್ಣಿನಲ್ಲಿ ನೀರು ಉಕ್ಕಿಬಿಟ್ಟಿತು.

"ಸಾಕು ಇನ್ನು ಪರೀಕ್ಷೆ. ಇನ್ನೂ ನನ್ನಲ್ಲಿ ಅಹಂಕಾರವಿದೆಯೆಂದು ಭಾವಿಸಿದ್ದೀರಾ? ನಿಮ್ಮಣ್ಣನವರು ನೀಡಿದ ನೈವೇದ್ಯಕ್ಕೆ ಸಮನಾಗಿ ಮತ್ತೊಂದು ಆಹಾರವುಂಟೆ? ಇದಕ್ಕಿಂತ ಮಿಗಿಲಾದ ಔಷಧಿ ಬೇರೆಯಿದೆಯೆ? ಜನ್ಮಜನ್ಮಗಳ ಪುಣ್ಯ. ನಿಮ್ಮಣ್ಣನವರು ತಮ್ಮ ಕೈಯಾರೆ ನನಗೆ ನೀಡಿದ್ದಾರೆ. ಅವರಿಂದ ಬಂದ ಆಹಾರ, ಅವರಿಂದ ಬಂದ ಸಾಹಿತ್ಯ, ಅವರಿಂದ ದೊರೆವ ಮಾರ್ಗದರ್ಶನಕ್ಕಿಂತ ಮಿಗಿಲಾದದ್ದು ನನಗೆ ಪ್ರಪಂಚದಲ್ಲಿ ಮತ್ತಾವುದೂ ಇಲ್ಲ. ಅವರು ರೊಟ್ಟಿ

ನೀಡಲಿ, ಗಟ್ಟಿ ಕಲ್ಲನ್ನೇ ನೀಡಲಿ ಅದನ್ನು ಹೊಟ್ಟೆಗಿಡುವುದೆ ನನಗೆ ಅಮೃತ'' ಎಂದು ಆಚಾರ್ಯರು ಹೇಳುತ್ತಿದ್ದಂತೆ ಗೋಪಾಲದಾಸರು ಅವರ ಬೆನ್ನು ತಟ್ಟಿ ನಿಧಾನವಾಗಿ ಊಟ ಮಾಡಿ ಆಚಾರ್ಯರೆ ಎಂದು ಉಪಚರಿಸಿ ಒಳಗೆ ಹೋಗಿ ಪಾಯಸದ ಬಟ್ಟಲನ್ನು ತಂದು ಧನ್ವಂತರಿಯನ್ನು ಸ್ಮರಿಸುತ್ತಾ ಆಚಾರ್ಯರಿಗೆ ಬಡಿಸಿದರು.

ಹೊಟ್ಟೆ ತುಂಬಾ ಊಟ ಮಾಡಿದರು ಆಚಾರ್ಯರು. ಅಮೃತ ಕುಡಿದ ಅನುಭವ.

ಆದಿನ ಸ್ವಲ್ಪವೂ ಹೊಟ್ಟೆನೋವು ಇಲ್ಲ! ಆ ದಿನ ಶ್ರೀ ವೆಂಕಟರಮಣನ ಗುಡಿಯಲ್ಲಿ ಆಚಾರ್ಯರು ದಾಸರೊಂದಿಗೆ ಕುಣಿಯುತ್ತಾ ಭಜನೆ ಮಾಡಿದರು.

ಜನರೆಲ್ಲಾ ಹೋದ ಮೇಲೆ ಆಚಾರ್ಯರು ದಾಸರ ಕಾಲುಗಳನ್ನು ಗಟ್ಟಿಯಾಗಿ ಹಿಡಿದು, "ದಾಸಶ್ರೇಷ್ಠರೆ, ಹೊಟ್ಟೆನೋವು ಒಂದು ನಿಮಿತ್ತ ಮಾತ್ರ. ಪ್ರಾರಬ್ಧ ಕರ್ಮ ಕಳೆಯುವುದಕ್ಕೆ ಅದೊಂದು ಮಾರ್ಗವೂ ಹೌದು. ಬೇಕಾದರೆ ನನಗೆ ಹೊಟ್ಟೆನೋವು ಶಾಶ್ವತವಾಗಿರಲಿ, ನಿಮ್ಮಂಥವರ ದರ್ಶನ ಎಷ್ಟೋ ಜನ್ಮಗಳ ಪುಣ್ಯಸಾಧನೆಯ ನಂತರ ದೊರೆಯುತ್ತದೆ. ಇಂಥ ಸಮಯದಲ್ಲಿ ಕೇವಲ ಒಂದು ಜನ್ಮಕ್ಕೆ ಸಂಬಂಧ ಪಟ್ಟ ದೈಹಿಕ ಬಾಧೆಯ ಬಗ್ಗೆ ನಿಮ್ಮಲ್ಲಿ ನಾನು ಕೇಳಿಕೊಳ್ಳು ವುದಿಲ್ಲ. ನನಗೆ ಭಕ್ತಿಮಾರ್ಗ, ದೇವರ ಚಿಂತನಾ ವಿಧಾನ, ಪೂಜಾರೀತಿಗಳನ್ನು ಕಲಿಸಿ ಕೊಡಿ; ಹೃದಯ ಕಮಲದಲ್ಲಿ ವಿರಾಜಮಾನನಾಗಿರುವ ಪರಮಾತ್ಮನ ದರ್ಶನ ಮಾಡಿಸಿ ನನ್ನನ್ನು ಉದ್ಧರಿಸಿ'' ಎಂದು ಪ್ರಾರ್ಥಿಸಿದರು.

ತಮ್ಮ ಕಾಲುಗಳನ್ನು ಗಟ್ಟಿಯಾಗಿ ಹಿಡಿದಿದ್ದ ಆಚಾರ್ಯರ ಎರಡೂ ರಟ್ಟೆಗಳನ್ನು ಹಿಡಿದು ಮೇಲಕ್ಕೆತ್ತುತ್ತಾ ಗೋಪಾಲದಾಸರು ನುಡಿದರು.

"ಪುಣ್ಯ ಜೀವಿಯಪ್ಪಾ ನೀನು. ರಾಯರು ಪ್ರಹ್ಲಾದ ರಾಜರಾಗಿ ಅವತರಿಸಿದ್ದಾಗ ನೀನು ಅವರ ತಮ್ಮನಾಗಿ ಸಾಧನೆ ಮಾಡಿದ ಪುಣ್ಯಶೀಲ. ಸ್ವತಃ ಶ್ರೀರಾಯರಿಂದ ಜ್ಞಾನಬೋಧೆ ಪಡೆದ ಧನ್ಯ ಜೀವಿ. ನಿನ್ನ ಆ ಸಾಧನೆಯನ್ನು ಗಮನಿಸಿಯೇ ನನ್ನ ಗುರುಗಳಾದ ವಿಜಯದಾಸರು ನಿನ್ನ ಮೇಲೆ ಪರಮಾನುಗ್ರಹ ಮಾಡಿದ್ದಾರೆ. ಆ ದಿನ ನಿಮ್ಮ ಅಹಂಕಾರದ ಬಗ್ಗೆ ಗೊತ್ತಿದ್ದರೂ, ತಮಗಾಗುವ ಅವಮಾನವನ್ನು ಲೆಕ್ಕಿಸದೆ ನಿಮ್ಮ ಮನೆಗೆ ಆಗಮಿಸಿದ್ದರು. ಆ ದಿನದಿಂದ ಪ್ರತಿ ದಿನವೂ ನಿಮ್ಮಲ್ಲಾಗು ತ್ತಿರುವ ಬದಲಾವಣೆಯನ್ನು ಗಮನಿಸುತ್ತಿದ್ದಾರೆ. ಈಗ ಅವರ ಬಳಿಗೇ ಹೋಗೋಣ. ನಾನು ಪರಮಾತ್ಮನಿಗೆ ಸಮರ್ಪಿಸಿ ನೀಡಿದ ರೊಟ್ಟಿಯನ್ನು ಸೇವಿಸಿದ್ದರಿಂದ ನಿಮ್ಮ

ಆರೋಗ್ಯ ಈಗ ವರ್ಧಿಸುತ್ತಿದೆ. ಮುಂದೆ ಅವರ ಅಪ್ಪಣೆಯಂತೆ ನಡೆಯೋಣ" ಎಂದು ವಿವರಿಸಿದರು.

ಮರುದಿನವೇ ಅವರೆಲ್ಲಾ ಚೀಕಲಪರವಿಗೆ ಪ್ರಯಾಣಿಸಿದರು.

***

ಗೋಪಾಲದಾಸರು ತಮ್ಮಂದಿರೊಂದಿಗೆ ಆಚಾರ್ಯರನ್ನೂ ಕರೆದುಕೊಂಡು ಚೀಕಲಪರವಿಗೆ ಬಂದಾಗ ಶ್ರೀವಿಜಯದಾಸರು ಅಶ್ವಥ ಕಟ್ಟೆಯ ಮುಂದೆ ಅವರಿಗಾಗಿಯೇ ಕಾದು ಕುಳಿತಿದ್ದರು.

ಬಂದವರನ್ನು ಆತ್ಮೀಯವಾಗಿ ಸ್ವಾಗತಿಸಿ ಶ್ರೀನರಸಿಂಹ ಸ್ವಾಮಿಗೆ ಮಂಗಳಾರತಿ ಮಾಡಿ ಎಲ್ಲರಿಗೂ ಪ್ರಸಾದ ವಿನಿಯೋಗಿಸಿ ಮನೆಗೆ ಹೋಗಿ ವಿಶ್ರಮಿಸುವಂತೆ ತಿಳಿಸಿದ ವಿಜಯದಾಸರು- ಗೋಪಾಲದಾಸರೊಬ್ಬರನ್ನು ಮಾತ್ರ ಕರೆದುಕೊಂಡು ತುಂಗಭದ್ರಾ ನದಿಯ ಕಡೆ ಹೊರಟರು.

ಅವರ ಮುಖದಲ್ಲಿ ಎಂದಿನಂತೆ ಗೆಲವು ಕಳೆ ಇರಲಿಲ್ಲ. ಮ್ಲಾನವದನರಾಗಿ ಮುಂದೆ ಮುಂದೆ ಸಾಗುತ್ತಿದ್ದ ಗುರುಗಳನ್ನು ನೋಡಿ ಗೋಪಾಲದಾಸರಿಗೆ ಎಲ್ಲಿಲ್ಲದ ಕಸಿವಿಸಿ. ತಿಳಿಯುವ ತವಕವಿತ್ತಾಗಲೀ ಕೇಳುವ ಧೈರ್ಯ ಸಾಲದೆ ಸುಮ್ಮನೆ ಅವರನ್ನು ಅನುಸರಿಸುತ್ತಿದ್ದರು.

"ಭಾಗಣ್ಣಾ" ಸ್ವಲ್ಪ ದೂರ ಸಾಗಿದ ಮೇಲೆ ವಿಜಯದಾಸರು ಮಾತಿಗೆ ಪ್ರಾರಂಭಿಸಿದರು.

"ಗುರುಗಳೇ" ಶಿಷ್ಯ ಪ್ರತಿಕ್ರಿಯಿಸಿದ.

"ಆಚಾರ್ಯರನ್ನೇನೋ ಕರೆದುಕೊಂಡು ಬಂದೆ. ನೀನು ನೀಡಿದ ರೊಟ್ಟಿ ಹಾಗೂ ಪಾಯಸದಿಂದ ಅವರ ಆರೋಗ್ಯ ಸುಧಾರಣೆಗೇನೋ ಪ್ರಾರಂಭವಾಯಿತು. ಬಿಂಬದರ್ಶನ ಮಾಡಿಸಿ ಅಂಕಿತ ನೀಡುವಂತೆ ಅವರು ಪ್ರಾರ್ಥಿಸಿದಾಗ ಅವರ ಭವಿಷ್ಯದಲ್ಲಿ ಏನೋ ಅಡ್ಡತರೆಯೊಂದು ನಿನಗೆ ಕಾಣಿಸಿತಲ್ಲವೆ? ಅದೇನೆಂದು ತಿಳಿಯುವ ಪ್ರಯತ್ನವನ್ನು ನೀನೇಕೆ ಮಾಡಲಿಲ್ಲ?"

"ಏತಕ್ಕೆ ಮಾಡಬೇಕು? ಶ್ರೀ ನರಸಿಂಹನ ಅಪೇಕ್ಷೆಯನ್ನು ಅರಿತು ಕಾಲ ಕಾಲಕ್ಕೆ ಸೂಕ್ತ ನಿರ್ದೇಶನ ನೀಡುತ್ತಿರುವ ತಮ್ಮಂಥ ಗುರುಗಳನ್ನು ಪಡೆದ ಭಾಗ್ಯಶಾಲಿಯಾದ ನಾವು ಆ ಶ್ರಮವನ್ನೇಕೆ ತೆಗೆದುಕೊಳ್ಳಲಿ?"

ಶಿಷ್ಯನ ಮಾತು ಕೇಳಿ ಆತನ ಗುರುಭಕ್ತಿಯ ಬಗ್ಗೆ ಮೆಚ್ಚುಗೆಯಾದರೂ ಅದನ್ನು ತೋರ್ಪಡಿಸದೆ ಪುನಃ ಗಂಭೀರವಾಗಿ ಮುಂದೆ ಸಾಗತೊಡಗಿದರು. ಗುರುಗಳು ಏತಕ್ಕೆ ಚಿಂತಿಸುತ್ತಿರಬಹುದು? ಏನು ಮಾಡಿದರೆ ಗುರುಗಳ ಮುಖದಲ್ಲಿ ಎಂದಿನ ಹರ್ಷ ಲಾಸ್ಯವಾಡೀತು?

ಗೋಪಾಲದಾಸರು ಯೋಚಿಸುತ್ತಲೇ ಅವರ ಹಿಂದೆ ಹಿಂದೆ ನಡೆಯುತ್ತಿದ್ದರು.

"ಆ ಶ್ರೀನಿವಾಸಾಚಾರ್ಯರ ಬಗ್ಗೆ ನಿನಗೆ ಏನನ್ನಿಸಿತು?" ವಿಜಯದಾಸರೇ ಪುನಃ ಮಾತಿಗೆ ಶುರು ಮಾಡಿದರು.

"ಮಹಾಚೇತನವದು ! ಸಾವಿರಾರು ಪ್ರದೇಶಕ್ಕೆ ನೀರುಣಿಸುತ್ತಾ ಲಕ್ಷಾಂತರ ಜನಕ್ಕೆ ಅನ್ನಪೂರ್ಣೇಶ್ವರಿಯಂತೆ ಅನುಗ್ರಹಿಸುವ ಜೀವನದಿಯಂತೆ ಆತ ಕಾಣಿಸುತ್ತಿದ್ದಾನೆ. ಗಂಗಾನದಿಗೆ ಆರಂಭದಲ್ಲಿ ಅದೆಷ್ಟೋ ಅಡಚಣೆಗಳು. ತಾಯಿ ಗಂಗಾಮಾತೆಗೆ ಮಹಾರುದ್ರ ದೇವರು ಶಿರವೊಡ್ಡಿ ಮುಂದೆ ಕಳಿಸಿದ. ಅದನ್ನು ಆಪೋಶನ ಮಾಡಿಬಿಟ್ಟ ಜಹ್ನು ಮುನಿ. ಅವನ್ನೆಲ್ಲಾ ಪರಿಹರಿಸಿ ಲೋಕಕಲ್ಯಾಣಕ್ಕೆ ಗಂಗೆಯನ್ನು ಹರಿಬಿಟ್ಟ ಭಗೀರಥ. ಹಾಗೆಯೇ ಈ ತತ್ವಸಾಹಿತ್ಯ ಜೀವನದಿಗೆ ಏನೇನೋ ಅಡ್ಡಿಗಳು ಕಾಣಿಸುತ್ತಿವೆಯಾದರೂ ಪರಿಹರಿಸುವ ಭಗೀರಥನಾರು ಎಂದು ಯೋಚಿಸುತ್ತಿದ್ದೇನೆ.

"ನಾನೂ ಅದೇ ಯೋಚಿಸುತ್ತಿದ್ದೇನೆ ಭಾಗಣ್ಣಾ. ಶ್ರೀನಿವಾಸಾಚಾರ್ಯ ಮಹಾಪಂಡಿತ. ಪ್ರತಿಭಾ ಶಾಲಿ. ತತ್ವನಿಷ್ಠ. ಆತನಿಂದ ಕನ್ನಡ ಹರಿದಾಸ ಸಾಹಿತ್ಯ ವರ್ಧಿಸಬೇಕಾಗಿದೆ. ಆದರೆ ನಿನ್ನ ಅಂತರದೃಷ್ಟಿಯಲ್ಲಿ ಕಂಡಂತೆ ಆತನಿಗೆ ಮಧ್ಯ ದಲ್ಲಿ ತೊಂದರೆಗಳಿರುವುದು ನಿಜ. ಅದನ್ನು ಪರಿಹರಿಸದಿದ್ದರೆ ಆ ಮಹಾ ಪ್ರತಿಭೆ ಕಮರಿಹೋದೀತು. ಅದನ್ನು ಪರಿಹರಿಸಲಿಕ್ಕಾಗಿ ನೀನೀಗ ದೊಡ್ಡ ತ್ಯಾಗ ಮಾಡ ಬೇಕಾಗಿದೆ ಭಾಗಣ್ಣಾ, ಅದಕ್ಕಾಗಿ ಯೋಚಿಸುತ್ತಿದ್ದೇನೆ"

ವಿಜಯದಾಸರ ಮಾತು ಕೇಳಿ ಭಾಗಣ್ಣ ನುಡಿದ, "ಏನು? ನನ್ನಿಂದಾಗ ಬಹುದಾದ ಕೆಲಸವೇ? ಅದು ನನ್ನಿಂದ ಪರಿಹಾರವಾಗಬಹುದಾದರೆ ಅದಕ್ಕೆ ನನ್ನ ಗುರುಗಳು ಇಷ್ಟು ಯೋಚಿಸಬೇಕೆ? ಆಚಾರ್ಯರ ವಿಷಯವಷ್ಟೇ ಅಲ್ಲ; ಯಾವ ವಿಷಯವಾದರೂ ಸರಿಯೇ, ನನ್ನ ಗುರುಗಳು ಹರ್ಷಿಸುವುದಾದರೆ ನಾನು ಯಾವ ತ್ಯಾಗಕ್ಕೂ ಸಿದ್ಧ. ನೀವು ಯಾವಾಗ ಏನು ಹೇಳಿದರೂ ಅದನ್ನು ಶಿರಸಾವಹಿಸಿ ಪಾಲಿಸುತ್ತೇನೆ. ನನ್ನಿಂದ ಆಗಬಹುದಾದ ಕೆಲಸಕ್ಕೆ ಗುರುಗಳು ಇಷ್ಟು ಯೋಚಿಸ ಬೇಕಾದರೆ ಗುರು ವಿಶ್ವಾಸ ಗಳಿಸುವುದರಲ್ಲಿ ನಾನು ವಿಫಲನಾಗಿದ್ದೇನೆಂದೇ ಅರ್ಥ. ಇದಕ್ಕಿಂತ ಮರಣದಂಡನೆಯೇ ಹೆಚ್ಚು ಸಹ್ಯವಾದೀತು" ಭಾಗಣ್ಣ ಇನ್ನೂ ನುಡಿಯುತ್ತಿದ್ದಂತೆಯೇ ವಿಜಯದಾಸರು ಆತನ ಮಾತನ್ನು ತಡೆದು ನುಡಿದರು.

"ನಿನ್ನ ಗುರುಭಕ್ತಿ ನನಗೆ ಗೊತ್ತಿಲ್ಲದೆ ಇಲ್ಲ ಭಾಗಣ್ಣಾ. ಆದರೆ ಇದುವರೆಗೂ ಯಾವ ಗುರುವು ಯಾವ ಶಿಷ್ಯನನ್ನೂ ಕೇಳಿರದ ಕಾಣಿಕೆಯನ್ನು ನಿನ್ನಲ್ಲೀಗ ಕೇಳಬೇಕಾಗಿದೆ. ಶ್ರೀ ವಿಜಯ ವಿಠಲ ನನ್ನನ್ನು ಎಂಥ ಸಂಧಿಗ್ಧತೆಯಲ್ಲಿ ಸಿಲುಕಿಸಿದ್ದಾನೆ ಎಂದಷ್ಟೇ ಯೋಚಿಸುತ್ತಿದ್ದೇನೆ"

"ಅದಕ್ಕಾಗಿ ತಾವು ಇಷ್ಟು ಯೋಚಿಸಬೇಕಾಗಿಲ್ಲ ಗುರುಗಳೇ, ಇನ್ನೂ ಈ ಶಿಷ್ಯನ ಬಗ್ಗೆ ಪೂರ್ತಿ ನಂಬಿಕೆ ಬಂದಿಲ್ಲವೆ?" ಪ್ರಶ್ನಿಸಿದಾಗ ಗೋಪಾಲದಾಸರ ಕಣ್ಣುಗಳಲ್ಲಿ ನೀರು ತುಂಬಿತ್ತು.

"ಮಹಾಭಾರತದಲ್ಲಿ ಏಕಲವ್ಯನ ಪ್ರಸ್ತಾಪ ಬರುತ್ತದಷ್ಟೆ? ಗುರುಗಳಿಗಾಗಿ ತನ್ನ ಕೈ ಬೆರಳನ್ನೇ ಕತ್ತರಿಸಿಕೊಟ್ಟ ಆ ಗುರು ಭಕ್ತ! ಅದನ್ನೂ ಮೀರಿದ ಘಟನೆ ಯೊಂದಕ್ಕೆ ನಾನು ಕಾರಣವಾಗಬೇಕಿದೆ ಭಾಗಣ್ಣಾ, ಅದಕ್ಕಾಗಿ ಯೋಚಿಸುತ್ತಿದ್ದೇನೆ"

ವಿಜಯದಾಸರು ನುಡಿಯುತ್ತಿದ್ದರು.

"ಎಂಥ ಘಟನೆಯೇ ಆಗಲಿ; ಅದಕ್ಕೆ ನನ್ನನ್ನು ನಿಮಿತ್ತ ಮಾಡುವುದಾದರೆ ಲೋಕಕಲ್ಯಾಣಕ್ಕಾಗಿಯೇ ಅದು ನಡೆಯುತ್ತದೆನ್ನುವುದನ್ನು ನಾನು ಬಲ್ಲೆ ಗುರುವರ್ಯಾ. ಶಿಷ್ಯನಿಂದ ಆಗಬಹುದಾದ ಕೆಲಸಕ್ಕೆ ಇಷ್ಟೊಂದು ಯೋಚಿಸಬೇಕೆ? ಕೈಯಲ್ಲಿರುವ ತುಪ್ಪವನ್ನು ಬಾಯಿಗೆ ಹಾಕುವುದರಲ್ಲಿ ಹಿಂದು ಮುಂದಾಲೋಚನೆಯೆ? ಗುರುಗಳು ನನ್ನಬಗ್ಗೆ ಇಷ್ಟು ಸಂಶಯಿಸುವಂತೆ ಮಾಡಿದ ನನ್ನ ವರ್ತನೆಯ ಬಗ್ಗೆ ನನಗೆ ನಾಚಿಕೆಯಾಗುತ್ತಿದೆ." ಗೋಪಾಲದಾಸರ ಧ್ವನಿಯಲ್ಲಿ ಕಂಪನವಿತ್ತು.

ವಿಜಯದಾಸರು ಗಟ್ಟಿಮನದಿಂದ ನುಡಿದರು.

"ಶ್ರೀನಿವಾಸಾಚಾರ್ಯ ಎಂಥ ದೊಡ್ಡ ಪಂಡಿತನೇ ಆಗಿರಲಿ, ಎಂಥ ದೊಡ್ಡ ಚೇತನವೇ ಆಗಿರಲಿ, ಆತನ ಆಯುಷ್ಯ ಬಹಳ ಸ್ವಲ್ಪ ಇರುವುದೇ ನನ್ನ ಯೋಚನೆಗೆ ಕಾರಣವಾಗಿದೆ ಭಾಗಣ್ಣಾ. ಅವನಿಂದ ತತ್ವ ಪ್ರಪಂಚಕ್ಕೆ ದೊಡ್ಡ ಕಾರ್ಯವಾಗ ಬೇಕಾಗಿದೆ. ಕನ್ನಡ ಹರಿದಾಸ ಸಾಹಿತ್ಯ ವರ್ಧಿಸಬೇಕಾಗಿದೆ. ಈ ಶತಮಾನದಲ್ಲಿ ನಾನು ನೀನು ಮತ್ತು ನಮ್ಮ ಶಿಷ್ಯರು ಮಾಡಿದ ಪದ ಪದ್ಯ ಸುಳಾದಿಗಳ ಸಾರವನ್ನೆಲ್ಲಾ ಕ್ರೋಢೀಕರಿಸಿ ಹೇಳುವ ಪ್ರತಿಭಾವಂತನಾದ ಆತನಿಗಾಗಿ ನೀನು ದೊಡ್ಡ ತ್ಯಾಗ ಮಾಡಬೇಕಾಗಿದೆ."

"ಆಜ್ಞಾಪಿಸಿ ಗುರುವರ್ಯಾ, ನನ್ನ ಶಿಷ್ಯನಿಗಾಗಿ ನನ್ನ ಗುರುಗಳು ಕೇಳುವ ಈ ವಿಚಿತ್ರ ಮಹಾದ್ಭಾಗ್ಯ ಎಷ್ಟು ಜನರಿಗೆ ಸಿಕ್ಕೀತು.? ನನ್ನ ಪುಣ್ಯವೇ ಪುಣ್ಯ, ಎಂದೂ

ಯಾವುದನ್ನೂ ಕೇಳದ ನನ್ನ ಗುರುಗಳು ಇಂದು ಕೇಳುವಂತೆ ಮಾಡಿದ ನನ್ನ ಶಿಷ್ಯ ಗುರು ಹೊರೆಯನ್ನು ಇಳಿಸಿ ಧನ್ಯನಾಗಿ ಬಿಟ್ಟ. ಈ ಮೂಲಕ ಶ್ರೇಷ್ಠ ಗುರುದಕ್ಷಿಣೆ ಯನ್ನೇ ಕೊಟ್ಟು ಬಿಟ್ಟ. ಹೇಳಿ ಗುರುವರ್ಯಾ ನನ್ನಿಂದೇನಾಗಬಹುದು?"

ವಿಜಯದಾಸರು ಬಿಡಿಸಿ ಹೇಳಿದರು.

"ನನ್ನ ವಯಸ್ಸು ಮುಗಿಯುತ್ತಾ ಬಂದಿದೆ. ನೀನಿನ್ನೂ ಹುಡುಗ. ನಿನ್ನ ಆಯುಷ್ಯದಲ್ಲಿ ನಲವತ್ತು ವರ್ಷಗಳನ್ನು ಇವನಿಗೆ ಧಾರೆಯೆರೆದರೆ ನೀನು ನಲವತ್ತು ವರ್ಷ ಮಾತ್ರ ಬದುಕಿರುತ್ತಿ. ಹೇಳು. ಆಯುಷ್ಯದಾನಕ್ಕೆ ಸಿದ್ಧನಿದ್ದೀಯಾ?"

ವಿಜಯದಾಸರು ಕೇಳಿದರು. ಇದು ಕಠೋರ ಕೇಳಿಕೆ ಎಂಬ ವಿಷಣ್ಣತೆ ಅವರಿಗೆ. ತಲೆ ತಗ್ಗಿಸಿ ಮುಂದೆ ಮುಂದೆ ನಡೆಯುತ್ತಿದ್ದರು.

ಗೋಪಾಲದಾಸರು ಅವರನ್ನು ಹಿಂದೆ ಹಿಂದೆ ಅನುಸರಿಸುತ್ತಿದ್ದರು.

ಶಿಷ್ಯನಿಂದ ಯಾವ ಧ್ವನಿಯೂ ಕೇಳಿಸಲಿಲ್ಲ. ವಿಜಯದಾಸರು ಆಶ್ಚರ್ಯದಿಂದ ತಿರುಗಿ ನೋಡಿದರು.

ಗೋಪಾಲದಾಸರ ಕಣ್ಣಿನಲ್ಲಿ ಆನಂದದಿಂದ ನೀರು ಉಕ್ಕಿ ಉಕ್ಕಿ ಹರಿಯುತ್ತಿದೆ. ಮುಖದಲ್ಲಿ ಸಂತೋಷಭಾವ ಎದ್ದು ಎದ್ದು ಕಾಣುತ್ತಿದೆ.

ಗೋಪಾಲದಾಸರು ನುಡಿದರು.

"ಗೆದ್ದೆ ಗುರುವರ್ಯಾ, ನೀವು ಯೋಚಿಸುತ್ತಿರುವುದನ್ನು ಕಂಡು ನಿಮ್ಮ ಅಪೇಕ್ಷೆಯನ್ನು ಹೊರಗೆಡವಲಾರಿರೇನೋ ಎಂದು ಹೆದರಿಬಿಟ್ಟಿದ್ದೆ. ಮುಂದಿನ ಹತ್ತು ಹತ್ತು ಜನ್ಮಗಳ ಕಾಲ ನನಗಾಗಿ ನರಕ ಶಿಕ್ಷೆಯನ್ನು ಅನುಭವಿಸು ಎಂದರೂ ಸಂತೋಷದಿಂದ ಸ್ವೀಕರಿಸುತ್ತಿದ್ದೆ. ಹೀಗಿರುವಾಗ ಕೇವಲ ಒಂದು ಜನ್ಮದ ನಲವತ್ತು ವರ್ಷ ಮಾತ್ರ ನೀವು ಕೇಳಿದ್ದೀರಿ. ಅದೂ ನನ್ನ ಶಿಷ್ಯನ ಉದ್ಧಾರಕ್ಕೆ! ಆತನಿಂದ ಆಗಬೇಕಾದ ಲೋಕ ಕಲ್ಯಾಣಕ್ಕೆ. ತಾವು ಕೇಳಿದ ಈ ದಕ್ಷಿಣೆಯಿಂದ ನಾನು ಉದ್ಧಾರನಾದೆ. ಈ ಶಿಷ್ಯನನ್ನು ಉದ್ಧರಿಸಿಬಿಟ್ಟಿರಿ" ಗೋಪಾಲದಾಸರು ಗುರುಗಳ ಕಾಲುಗಳಲ್ಲಿ ಶಿರಸಾಷ್ಟಾಂಗ ಹಾಕಿ ಬಿಟ್ಟರು.

ಶಿಷ್ಯನನ್ನು ಆತ್ಮೀಯತೆಯಿಂದ ಮೇಲಕ್ಕೆತ್ತಿ ಗುರುಗಳು ನುಡಿದರು.

"ಗುರುಗಳಿಗೆ ತಮ್ಮಲ್ಲಿರುವ ಸಂಪತ್ತು ಕೊಟ್ಟವರಿದ್ದಾರೆ. ತಮ್ಮ ಜೀವನದ ಹೆಚ್ಚು ಭಾಗವನ್ನು ಸೇವೆಯಲ್ಲಿ ಸಮರ್ಪಿಸಿದವರಿದ್ದಾರೆ. ಆದರೆ ಆಯುಷ್ಯವನ್ನೇ ತೆಗೆದು ಕೊಟ್ಟವರು. ಇತಿಹಾಸದಲ್ಲಿಯೇ ಇಲ್ಲ. ನಿನ್ನ ಹೆಸರು ತತ್ವಜಗತ್ತಿನಲ್ಲಿ

ಆಚಂದ್ರಾರ್ಕವಾಗಿ ಇರುತ್ತದೆ. ಗುರುಭಕ್ತಿ ಎನ್ನುವುದಕ್ಕೆ ಪರ್ಯಾಯ ಪದವಾಗಿ ನಿನ್ನ ಹೆಸರು ಹೇಳಬೇಕಾಗುತ್ತದೆ . 'ಭಕ್ತಿಯಲಿ ಭಾಗಣ್ಣ' ಎಂದು ಲೋಕ ಯಾವಾಗಲೂ ಸ್ಮರಿಸುತ್ತದೆ. ಗದ್ದೆ ಭಾಗಣ್ಣಾ, ಹರಿದಾಸರ ಇತಿಹಾಸದಲ್ಲಿ ನಿನ್ನ ಹೆಸರು ಶಾಶ್ವತವಾಗಿ ಉಳಿದುಬಿಡುತ್ತದೆ."

ವಿಜಯದಾಸರು ಆಶೀರ್ವದಿಸಿ ಹಿಂದಕ್ಕೆ ಮನೆಗೆ ಕರೆದುಕೊಂಡು ಬರುತ್ತಾ ವಿವರಿಸಿದರು.

"ಇಷ್ಟು ದಿವಸ ಆಹಾರ ದಕ್ಕದಿದ್ದ ಫಲವಾಗಿ ಹೊಟ್ಟೆಯ. ಕರುಳುಗಳು ನಿತ್ರಾಣವಾಗಿ ಹೋಗಿವೆ. ಆಯುಷ್ಯ ಮುಗಿಯುತ್ತಾ ಬಂದಿರುವುದರಿಂದ ಅವು ಚೇತರಿಸಿಕೊಳ್ಳುತ್ತಿಲ್ಲ. ಕೂಡಲೇ ಅವರನ್ನು ಕರೆದುಕೊಂಡು ತಿರುಪತಿಗೆ ಪ್ರಯಾಣಿಸು. ತಿರುಮಲೆ ಬೆಟ್ಟದ ಮೇಲೆ ಆಚಾರ್ಯರಿಗೆ ನಿನ್ನ ಆಯುಷ್ಯವನ್ನು ಧಾರೆಯೆರೆ. ಆಗ ಸ್ಮರಿಸಬೇಕಾದ ಮಂತ್ರವನ್ನು ನಿನ್ನ ಕಿವಿಯಲ್ಲಿ ಆಗ ನಾನು ಹೇಳುತ್ತೇನೆ. ನನ್ನನ್ನು ಸ್ಮರಿಸುತ್ತಾ ಆ ಮಂತ್ರವನ್ನು ಉಚ್ಚರಿಸಿ ನಿನ್ನ ಆಯುಷ್ಯದ ನಲವತ್ತು ವರ್ಷಗಳನ್ನು ಅವನಿಗೆ ನೀಡು. ಅನಂತರ ಬಿಂಬದರ್ಶನ ಮಾಡಿಸು. ಜೀವಿ ಉದ್ಧಾರವಾಗುತ್ತದೆ."

ಗುರುಗಳ ಮಾತುಗಳನ್ನೆಲ್ಲಾ ಕೇಳಿ ಗೋಪಾಲದಾಸರು ನುಡಿದರು. "ನಲವತ್ತು ವರ್ಷವೇಕೆ, ಇಡೀ ಆಯುಷ್ಯವನ್ನೇ ಧಾರೆ ಎರೆದುಕೊಡುವ ಶಿಷ್ಯ ಜನ ಬೇಕಾದಷ್ಟು ಸಿಕ್ಕಾರು. ಆದರೆ ಅದನ್ನು ಕೊಡಿಸಬಲ್ಲ, ವಿನಿಮಯಿಸಬಲ್ಲ ಮಹಾಜ್ಞಾನಿ ಗುರುವರ್ಯರು ನನಗಲ್ಲದೆ ಬೇರೆ ಯಾರಿಗೆ ಸಿಕ್ಕೀತು? ಅಂಥವರನ್ನು ಪಡೆದ ನನ್ನ ಜನ್ಮ ಸಾರ್ಥಕವಾಯಿತು." ಗೋಪಾಲದಾಸರು ಕೃತಜ್ಞತೆಯ ಭಾರದಿಂದ ನುಡಿದರು.

ಧನ್ಯತೆಯ ಭಾವ ಅವರ ಮುಖದಲ್ಲಿ ರಾರಾಜಿಸುತ್ತಿತ್ತು.

***

ಗುರುಗಳ ಆಜ್ಞೆಯಂತೆ ಗೋಪಾಲದಾಸರು ಶ್ರೀನಿವಾಸಾಚಾರ್ಯರೊಂದಿಗೆ ತಿರುಪತಿಗೆ ಹೋದರು. ಸೀನಣ್ಣ, ದಾಸಣ್ಣರು ಅವರನ್ನು ಅನುಸರಿಸಿದರು. ದೇವದೇವೋತ್ತಮನ ಸನ್ನಿಧಿಯಲ್ಲಿ ಗೋಪಾಲದಾಸರು ಗುರುಗಳ ಆಜ್ಞೆಯಂತೆ ಆಚಾರ್ಯರಿಗೆ ನವಲತ್ತು ವರ್ಷ ಆಯುಷ್ಯ ದಾನ ಮಾಡಿದರು.

ಭಗವತ್‌ಚಿಂತನಾ ವಿಧಾನಗಳನ್ನು ಹೇಳಿಕೊಟ್ಟು ಹೃದಯ ಕಮಲದಲ್ಲಿರುವ ಬಿಂಬಮೂರ್ತಿಯ ದರ್ಶನ ಮಾಡಿಸಿದರು.

"ಬಿಂಬ ಮೂರುತಿ ಎಲ್ಲಿ ಹೇಗೆ ಇರುತ್ತಾನೆಂದು ಶಾಸ್ತ್ರಗ್ರಂಥಗಳು ಹೇಳಿವೆ ಯಾದರೂ ಕೇವಲ ಅಧ್ಯಯನದಿಂದ ಎಷ್ಟು ನೂರು ಜನ್ಮವೆತ್ತಿದರೂ ಆತನನ್ನು ಕಾಣಲು ಸಾಧ್ಯವಿಲ್ಲ. ಅದನ್ನು ಸಾಧ್ಯಮಾಡಿಸಿ ನನ್ನನ್ನು ಉದ್ಧರಿಸಿಬಿಟ್ಟಿರಿ. ನಾನು ಕಂಡ ಬಿಂಬಮೂರುತಿಗೆ ಒಂದು ಹೆಸರು ನೀಡುವುದರ ಮೂಲಕ ನನಗೆ ಅಂಕಿತ ನೀಡಿ ಗುರುವರ್ಯಾ. ಆ ಅಂಕಿತದಿಂದ ಇಂದಿನಿಂದಲೇ ಕನ್ನಡ ಹರಿದಾಸ ನಿರ್ಮಾಣದಲ್ಲಿ ನಿರತನಾಗುತ್ತೇನೆ. ಇದರಲ್ಲಿ ನನ್ನ ಸಾಧನೆಗಿಂತಲೂ ನಿಮ್ಮ ಆಯುಷ್ಯದ ಶ್ರೇಷ್ಠ ಭಾಗ, ಪರಮ ಗುರುಗಳಾದ ವಿಜಯರಾಯರ ಆಶಿಸ್ಸಿನ ಭಾಗವೇ ಹೆಚ್ಚು ಸೇರಿರುತ್ತದೆ. ನಿಮ್ಮ ಘನತೆಗನುಗುಣವಾಗಿ ಇನ್ನು ಮುಂದೆ ಜೀವಿಸುತ್ತೇನೆ. ನಿಮ್ಮ ಜೀವನದ ಧ್ಯೇಯವನ್ನು ಮುಂದುವರಿಸಿಕೊಂಡು ಹೋಗುತ್ತೇನೆ".

ಆಗ ಗೋಪಾಲದಾಸರು ನುಡಿದರು

"ಪರಮಾತ್ಮನ ಪರಮ ಕರುಣೆ ಪಡೆದ ಪುಣ್ಯಶಾಲಿಯಪ್ಪಾ ನೀನು. ನಿನಗೆ ಅಂಕಿತ ನೀಡುವ ಕಾರ್ಯವನ್ನು ತಾನೇ ಇಟ್ಟುಕೊಂಡಿದ್ದಾನೆ ಆ ಜಗನ್ನಾಥ. ಇಲ್ಲಿಂದ ನೇರವಾಗಿ ಪಂಡರಾಪುರಕ್ಕೆ ಪ್ರಯಾಣಿಸು. ಅಲ್ಲಿ ಚಂದ್ರಭಾಗಾ ನದಿಯಲ್ಲಿ ನಿನಗೆ ಆ ವಿಠಲನೇ ಅಂಕಿತ ನೀಡುತ್ತಾನೆ." ಎಂದು ಆಶೀರ್ವದಿಸಿ ಇನ್ನೂ ಹೇಳಿದರು.

"ಗುರುಗಳಾದ ವಿಜಯರಾಯರನ್ನು ಹಗುರವಾಗಿ ಕಂಡ ಪಾಪದ ಫಲ ಸಾಧಾರಣವಲ್ಲವಪ್ಪಾ. ಸೋತ್ತಮನಿಂದೆ ಮಹಾಪಾಪ. ನಿನ್ನ ಪುಣ್ಯರಾಶಿ ಹೇರಳವಾಗಿದ್ದರಿಂದಲೇ ನಾನು ಆಯುಷ್ಯ ನೀಡುವವರೆಗೂ ನೀನು ಬದುಕುಳಿದೆ. ಇಷ್ಟೆಲ್ಲಾ ಆದರೂ ಅದು ಕಿಂಚಿತ್ ಉಳಿದುಕೊಂಡಿತ್ತು. ಪಂಡರಾಪುರದ ನಿನ್ನ ಪ್ರಯಾಣ ದೀರ್ಘವಾಗಿದ್ದರಿಂದ ಅದನ್ನು ಭರಿಸಲು ಸಾಧ್ಯವಿಲ್ಲವೆಂದು ಈ ದಿನದಿಂದ ನಾನು ಪಡೆದಿದ್ದೇನೆ. ಆದರೆ ಹೆದರಬೇಡ ಶ್ರೀನಿವಾಸಾ. ನನ್ನ ಗುರುಗಳ ಕೃಪೆಯಿಂದ ಅದು ತನ್ನ ಪ್ರಖರತೆಯನ್ನೆಲ್ಲಾ ಕಳೆದುಕೊಂಡು ಸ್ವಲ್ಪ ಮಾತ್ರ ಉಳಿದಿದೆ. ಕಾಲ ಬಂದಾಗ ಅದೂ ಹೋಗುತ್ತದೆ" ಎಂದು ಹೇಳುತ್ತಿದ್ದಂತೆಯೇ ಶ್ರೀನಿವಾಸಾಚಾರ್ಯರ ಕಣ್ಣಿನಲ್ಲಿ ನೀರು ಒತ್ತರಿಸಿಬಂದಿತ್ತು.

ಗೋಪಾಲದಾಸರು ಅವರ ತಲೆಯ ಮೇಲೆ ಕೈಯಿಟ್ಟು "ಯೋಚಿಸಬೇಡ ಎಲ್ಲವೂ ಶ್ರೀ ಹರಿಯ ಇಚ್ಛೆ. ಶುಭವಾಗಲಿ ನಿನಗೆ. ಈಗಲೇ ಪ್ರಯಾಣಿಸು" ಎಂದು ಹರಸಿ ಕಳುಹಿಸಿಕೊಟ್ಟರು.

ಶಿಷ್ಯನು ಹೋದಮೇಲೆ ಗೋಪಾಲದಾಸರು ತಮ್ಮಂದಿರಿಗೆ ಹೇಳಿದರು.

"ಈ ಆಚಾರ್ಯ ಪಂಡರಾಪುರಕ್ಕೆ ಹೋದ ಮೇಲೆ ಅಲ್ಲಿ ನದಿಯಲ್ಲಿ ಸ್ನಾನ ಮಾಡುವಾಗ ನೀರಿನಲ್ಲಿ ಮುಳುಗಿದ್ದ ಶಿಲೆ ತೇಲಿ ಬಂದು ಇವರ ತಲೆಗೆ ಅಟಿಯುತ್ತದೆ. ಅದರಲ್ಲಿ 'ಜಗನ್ನಾಥ' ಎಂದು ಲಿಖಿಸಲ್ಪಟ್ಟಿರುತ್ತದೆ. ಜಗನ್ನಾಥ ವಿಠಲ ಎಂಬ ಅಂಕಿತದಿಂದ ಇವರು ಲೋಕವಿಖ್ಯಾತರಾಗುತ್ತಾರೆ. ಭಕ್ತಿಯಿಂದ ನೆನಸಿದವರನ್ನು ಉದ್ಧರಿಸುವ ಪಾವನ ಮೂರ್ತಿಯಾಗಿ ಇವರು ವಿರಾಜಿಸುತ್ತಾರೆ" ಎಂದು ವಿವರಿಸಿದರು.

ಒಂದೆರಡು ದಿನ ತಿರುಪತಿಯಲ್ಲಿಯೇ ವಾಸಿಸಿದರು ಗೋಪಾಲದಾಸರು.

ಒಂದು ದಿನ ರಾತ್ರಿ ಮಲಗಿದ್ದ ದಾಸರು ಇದ್ದಕ್ಕಿದ್ದಂತೆ ಎದ್ದು ತಮ್ಮಂದಿರನ್ನು ಎಚ್ಚರಿಸುತ್ತಾ ಹೇಳಿದರು.

"ಸೀನಣ್ಣಾ, ನಮ್ಮ ಗುರುಗಳು ಚೀಕಲಪರ್ವಿಯನ್ನು ಶಾಶ್ವತವಾಗಿ ಬಿಟ್ಟು ಚಿಪ್ಪಗಿರಿಗೆ ಹೋಗಲು ನಿರ್ಧರಿಸಿದ್ದಾರೆ. ದಾರಿಯ ಮಧ್ಯ ಆದವಾನಿಗೆ ಅವರು ಬಂದೇ ಬರುತ್ತಾರಾದರೂ ನಮ್ಮೆಲ್ಲರ ಮೆಚ್ಚಿನವರಾದ ದಿವಾನ್ ತಿಮ್ಮಣ್ಣಯ್ಯನವರಿಗೆ ಅಪಮೃತ್ಯುಯೋಗ ಘಟಿಸಿದೆ. ಅವರ ಆರೋಗ್ಯ ಈಗಾಗಲೇ ಹದಗೆಟ್ಟಿದೆ. ಅವರನ್ನು ಕಾಪಾಡಲು ನಮ್ಮ ಗುರುಗಳಿಗೆ ಮಾತ್ರ ಸಾಧ್ಯ. ಆದರೆ ಅವರು ಅಲ್ಲಿಗೆ ಬರುವುದು ಸ್ವಲ್ಪ ತಡವಾಗುವ ಸಂಭವವಿದೆ. ಅದಕ್ಕಾಗಿ ನಾವೆಲ್ಲರೂ ಈ ದಿನವೇ ಆದವಾನಿಗೆ ಪ್ರಯಾಣಿಸೋಣ. ಅಲ್ಲಿ ಗುರುಗಳು ಬರುವವರೆಗೂ ತಿಮ್ಮಣ್ಣಯ್ಯನವರ ಮನೆಯಲ್ಲಿ ಹರಿಭಜನೆ ಮಾಡಬೇಕು. ಭಜನೆಯಿಂದ ಅವರು ಸ್ವಲ್ಪ ಚೇತರಿಸಿಕೊಳ್ಳುತ್ತಾರೆ. ಅಷ್ಟರಲ್ಲಿ ಗುರುಗಳ ಆಗಮನವಾಗಿ ತಿಮ್ಮಣ್ಣಯ್ಯನವರನ್ನು ಉಳಿಸುತ್ತಾರೆ. ಆಯುಷ್ಯ ಮುಗಿದಿದ್ದ ನನ್ನ ಶಿಷ್ಯನನ್ನೇ ಉಳಿಸಿದ ಅವರಿಗೆ ಅವರ ಶಿಷ್ಯನಿಗೆ ಬಂದಿರುವ ಅಪಮೃತ್ಯು ಯೋಗ ತಿಳಿಯದೆ ಹೋಗಿಲ್ಲ. ಆದರೆ ತಿಮ್ಮಣ್ಣಯ್ಯನವರನ್ನು ಉಳಿಸಿದ ಕೀರ್ತಿ ನನಗೂ ಸ್ವಲ್ಪ ಸಲ್ಲಲಿ ಎಂಬುದೇ ಗುರುಗಳ ಉದ್ದೇಶ. ಅವರ ಉದ್ದೇಶವೇನೇ ಇರಲಿ; ಅದನ್ನು ಪಾಲಿಸಿಕೊಂಡು ಹೋಗುವುದಷ್ಟೇ ನಮ್ಮ ಕರ್ತವ್ಯ. ನಡೆಯಿರಿ ಈ ದಿನವೇ ಆದವಾನಿಗೆ ಪ್ರಯಾಣಿಸೋಣ" ಎಂದು ಹೇಳಿ ಅವಸರವಸರವಾಗಿ ಎದ್ದರು.

ಅಣ್ಣನ ಮಾತು ಕೇಳಿ ದಾಸಣ್ಣ ನುಡಿದ. "ನಿಮ್ಮ ಬೆನ್ನ ಹಿಂದೆಯೇ ಹುಟ್ಟಿದ್ದೇವೆ. ನಿಮ್ಮನ್ನು ಅನುಸರಿಸಿಕೊಂಡು ಬಾಳಿದ್ದೇವೆ. ಹಾಗಿದ್ದರೂ ನಿಮ್ಮ

ಶಕ್ತಿವ್ಯಾಪ್ತಿಯನ್ನು ಗ್ರಹಿಸಲು ನಮಗೆ ಸಾಧ್ಯವಾಗಿಲ್ಲ. ತಿರುಪತಿಯಲ್ಲಿದ್ದೆ. ಗುರುಗಳೊಂದಿಗೆ ಮಾತನಾಡಿ ಅವರ ಇನ್ನೊಬ್ಬ ಶಿಷ್ಯನ ಜೀವನ ಕಾಪಾಡಲು ಹೊರಟಿರುವ ಈ ಘಟನೆಗಳನ್ನು ಮುಂದಿನ ಜನಾಂಗ ಹೇಗೆ ಸ್ವೀಕರಿಸುತ್ತಾರೋ ಗೊತ್ತಿಲ್ಲ. ಆದರೆ ಇದರಲ್ಲಿ ಭಾಗಿಗಳಾಗಿ ನಾವು ಉದ್ಧಾರವಾದೆವು. ನಿಮ್ಮನ್ನು ಪ್ರತಿನಿತ್ಯ ಕಾಣುವ ಭಾಗ್ಯ ಪಡೆದ ನಾವೇ ಪುಣ್ಯ ಶಾಲಿಗಳು."

ಎಲ್ಲರೂ ಎದ್ದು ಸ್ವಾಮಿ ಪುಷ್ಕರಣಿಯಲ್ಲಿ ಸ್ನಾನ ಮಾಡಿ ಶ್ರೀ ವರಹಾಸ್ವಾಮಿಯ ದರ್ಶನದ ನಂತರ ಶ್ರೀ ಶ್ರೀನಿವಾಸನ ದರ್ಶನ ಪಡೆದು ಆದವಾನಿಗೆ ಪ್ರಯಾಣಿಸಿದರು.

***

ಇಡೀ ಆದವಾನಿ ನಗರವೇ ಆ ದಿನ ದುಃಖದಲ್ಲಿ ಮುಳುಗಿದೆ. ದಿವಾನ್ ತಿಮ್ಮಣ್ಣಯ್ಯನವರ ಮನೆಯಲ್ಲಿ ಇಡೀ ಸಂಸ್ಥಾನದ ಉನ್ನತ ಅಧಿಕಾರಿಗಳು ಗಣ್ಯವರ್ತಕರು, ಭಾರೀ ಶ್ರೀಮಂತರುಗಳೆಲ್ಲಾ ತುಂಬಿಬಿಟ್ಟಿದ್ದಾರೆ.

ಸ್ವತಃ ನವಾಬರೇ ತಿಮ್ಮಣ್ಣಯ್ಯನವರ ಮಂಚದ ಬಳಿ ನಿಂತಿದ್ದಾರೆ.

ರಾಜವೈದ್ಯರುಗಳ ತಂಡ ನಾನಾ ರೀತಿಯ ಶುಶ್ರೂಷೆ ನಡೆಸುತ್ತಿದೆ.

ಚಿಕಿತ್ಸೆ ನಡೆಸುತ್ತಿರುವ ತಂಡಕ್ಕೆ ತಮ್ಮ ಕಾರ್ಯದಲ್ಲಿ ಜಯ ಗಳಿಸುತ್ತೇವೆಂಬ ನಂಬಿಕೆಯಿಲ್ಲ. ಹಾಗೆಂದು ನವಾಬರ ಮುಂದೆ ಹೇಳುವುದಕ್ಕೆ ಧೈರ್ಯವಿಲ್ಲ.

ಮನೆಯ ಹೊರಗಡೆ ನೂರಾರು ಜನರು ನೆರೆದು ತಿಮ್ಮಣ್ಣಯ್ಯನವರ ಆರೋಗ್ಯದ ಬಗ್ಗೆ ತಿಳಿಯಲು ಕಾತುರದಿಂದ ಕಾದಿದ್ದಾರೆ.

ಸುಮಾರು ಅರವತ್ತು ವರ್ಷಗಳಿಂದ ಅರಮನೆಯ ವೈದ್ಯರಾಗಿಯೇ ಇರುವ ವಯೋವೃದ್ಧ ಹಕೀಂ ಸಾಹೇಬರು ತಿಮ್ಮಣ್ಣಯ್ಯನವರ ನಾಡಿಮಿಡಿತ ನೋಡಿ ಕಡೆಗೆ ಹೇಳಿಬಿಟ್ಟರು.

"ಇನ್ನು ಈ ದಿವಾನರು ನಮಗೆ ಇಲ್ಲ. ಐದಾರು ಘಳಿಗೆಗಳಲ್ಲಿ ಇವರು ಪ್ರಾಣ ಬಿಡುತ್ತಾರೆ. ದಿವಾನರ ಘನತೆಗನುಗುಣವಾಗಿ ಅಂತ್ಯಯಾತ್ರೆಯು ವೈಭವದಿಂದ ನಡೆಯಬೇಕು. ಅದಕ್ಕಾಗಿ ಖಾವಂದರು ವ್ಯವಸ್ಥೆಗೆ ಆಜ್ಞೆ ಮಾಡಬೇಕು". ಹಿರಿ ರಾಜವೈದ್ಯರ ಮಾತು ನವಾಬರಿಗೆ ಹಿಡಿಸಲಿಲ್ಲ.

ಬೇಡವೆನಿಸುವ ಮಾತು ಎಂಥ ಬೇಕಾದವರು ಹೇಳಿದರೂ ಮನಸ್ಸು ಬೇಗ ಅದನ್ನು ಒಪ್ಪುವುದಿಲ್ಲ.

ನವಾಬರ ಆಜ್ಞೆಯ ಮೇರೆಗೆ ಸಂಸ್ಥಾನದ ಜ್ಯೋತಿಷಿಗಳು ಅಲ್ಲಿಗೆ ಬಂದು ತಿಮ್ಮಣ್ಣಯ್ಯನವರ ಆಯುಷ್ಯವನ್ನು ಲೆಕ್ಕಾಚಾರ ಹಾಕಿ ಹೇಳಿದರು.

"ಇನ್ನು ಎರಡು ಘಳಿಗೆ ಮಾತ್ರ ಇವರ ಆಯುಷ್ಯ."

ಗಂಭೀರತೆಯ ಪ್ರತಿರೂಪವೆನ್ನುವಂತಿದ್ದ ನವಾಬರು "ಹೋ" ಎಂದು ಗಟ್ಟಿಯಾಗಿ ಅಳತೊಡಗಿದರು. ಸಣ್ಣ ಮಗುವಿಗಿಂತಲೂ ಮಗುವಾಗಿ ಅವರು ರೋದಿಸುತ್ತಿರುವುದನ್ನು ನೋಡಿದ ಜನಗಳ ಕಣ್ಣಲ್ಲಿ ನೀರು ಬೇಡಬೇಡವೆಂದರೂ ಧಾರೆಧಾರೆಯಾಗಿ ಬರತೊಡಗಿದೆ.

ವಿಷಯ ತಿಳಿದ ಪರಿಚಾರಕರು ಅಂತ್ಯ ಸಂಸ್ಕಾರದ ವ್ಯವಸ್ಥೆಯಲ್ಲಿ ನಿರತರಾದರು. ಕುಲಬಾಂಧವರು ಚಟ್ಟಕಟ್ಟುವ ಕಾರ್ಯದಲ್ಲಿ ಮಗ್ನರಾದರು.

ಹೊರಗೆ ನೆರೆದಿದ್ದ ಜನರಿಗೆ ಈ ವಿಷಯವೆಲ್ಲಾ ತಿಳಿದು ಅವರೂ ಹೋ ಎಂದು ಅಳತೊಡಗಿದರು.

ಮನೆಯಲ್ಲಿದ್ದ ಬಂಧುಗಳು ಎದೆ ಎದೆ ಬಡಿದುಕೊಂಡು ಗಟ್ಟಿಗಟ್ಟಿಯಾಗಿ ರೋದಿಸುತ್ತಿದ್ದರು. ಎಲ್ಲಾ ರೋದನಗಳ ಅಬ್ಬರದ ಮಧ್ಯೆಯೂ ಎಲ್ಲವನ್ನು ಭೇದಿಸಿಕೊಂಡು ಬರುತ್ತಿದೆಯೋ ಎನ್ನುವಂತೆ ತಂಬೂರಿಯ ನಿನಾದವೊಂದು ಅಲೆಅಲೆಯಾಗಿ ಕೇಳಿಬರತೊಡಗಿತು.

ಚಿಟಿಕೆಗಳ ತಾಳ ಅದಕ್ಕೆ ಜೊತೆಗೂಡಿತ್ತು. ಕೇಳಿಬಂದ ಕಾಲುಗೆಜ್ಜೆಗಳ ನಿನಾದದಿಂದ ಜನರು ಸ್ತಂಭೀಭೂತರಾದರು.

ಜನಗಳ ಮಧ್ಯ ತೂರಿಕೊಂಡು ಬಂದ ಮೂರು ಜನ ದಾಸರನ್ನು ನೋಡಿ ಗುರುತು ಹಿಡಿದ ಆದವಾನಿಯ ಜನರು ಜಯಘೋಷ ಮಾಡಿದರು.

"ಗೋಪಾಲದಾಸ ಗುರುವರ್ಯಾ ಜಯಾಜಯ, ಶ್ರೀ ಗೋಪಾಲ ವಿಠಲ ನಮೋ ನಮೋ"

ದಿವಾನರ ಮನೆಯನ್ನು ಪ್ರವೇಶಿಸಿದ ಗೋಪಾಲದಾಸರು ಎಲ್ಲರನ್ನೂ ಬದಿಗೆ ಸರಿಸಿ ಒಂದು ಮೂಲೆಯಲ್ಲಿ ಹಾಡುತ್ತಾ ಕುಣಿಯತೊಡಗಿದರು. ಅವರು ಪ್ರಾರಂಭಿಸಿದ ಹರಿಭಜನೆಗೆ ಅವರ ತಮ್ಮಂದಿರು ಜೊತೆಗೂಡಿದರು.

"ಏನು ಆ ಮೋಹಕರಾಗ! ಎಂಥ ಅಮೃತವಿದೆ ಆ ಕಂಠದಲ್ಲಿ!"

ಅಂಥ ದುಃಖದ ಸಮಯದಲ್ಲಿಯೂ ನವಾಬರು ಬೆರಗಾಗಿ ಹಾಡು ಕೇಳುತ್ತಾ ಕೈಯಲ್ಲಿ ತಾಳ ಹಾಕತೊಡಗಿದರು.

ನವಾಬರು ತಾಳಹಾಕುವುದನ್ನು ಆಶ್ಚರ್ಯದಿಂದ ನೋಡುತ್ತಿದ್ದ ಜನರಿಗೆ ಅದಕ್ಕಿಂತ ಆಶ್ಚರ್ಯಕರವಾಗ ಮತ್ತೊಂದು ದೃಶ್ಯ ಅವರಿಗೆ ಕಾಣಿಸಿತು.

ಮರಣೋನ್ಮುಖರಾಗಿ ಪಲ್ಲಂಗದ ಮೇಲೆ ಮಲಗಿದ್ದ ತಿಮ್ಮಣ್ಣಯ್ಯನವರ ಕಾಲುಗಳು ತಾಳಕ್ಕೆ ತಕ್ಕಂತೆ ಆಡತೊಡಗಿದವು.

ವೈದ್ಯರು ಬೆರಗಾಗಿ ಹೋದರು.

ಹಕೀಂ ಸಾಹೇಬರು ನಾಡಿ ಹಿಡಿದು ನೋಡಿ ಆಶ್ಚರ್ಯದಿಂದ "ಯ್ಹಾ ಅಲ್ಲಾ" ಎಂದೆನ್ನುತ್ತಾ ಪರಮಾತ್ಮನಿಗೆ ನಮಸ್ಕರಿಸಿ ಅಲ್ಲಿದ್ದವರಿಗೆ ಹೇಳಿದರು.

"ಅಲ್ಲಾ ಕರುಣಿಸಿಬಿಟ್ಟ. ನಾಡಿಮಿಡಿತ ಮಾಮೂಲು ಸ್ಥಿತಿಗೆ ಮರಳುತ್ತಿದೆ. ನಮ್ಮ ದಿವಾನರು ಬದುಕಿಬಿಟ್ಟರು"

ಕೇಳಿದ ಜನ ಜಯಘೋಷ ಮಾಡಿದರು. ಗೋವಿಂದ ನಾಮ ದಿವಾನರ ಮನೆಯಿಂದ ಹರ್ಷೋದ್ಗಾರದೊಂದಿಗೆ ಹೊರಟಿತು.

ಗೋಪಾಲದಾಸರು ಭಾವತನ್ಮಯದಿಂದ ಹಾಡುತ್ತಿದ್ದರು. ಅವರು ತಮ್ಮ ನೃತ್ಯದಲ್ಲಿತಾವು ಮೈಮರೆತ್ತಿದ್ದರೆ ಜನ ಅವರನ್ನು ನೋಡಿ ಮೈಮರೆತು ನಿಂತಿದ್ದಿತು.

ಜನರು ನೋಡುನೋಡುತ್ತಿದ್ದಂತೆಯೇ ಮಲಗಿದ್ದ ತಿಮ್ಮಣ್ಣಯ್ಯನವರು ಮೆಲ್ಲಗೆ ಎದ್ದು ಕುಣಿಯಲು ಪ್ರಯತ್ನಿಸುತ್ತಾ ಗೋಪಾಲದಾಸರ ಹತ್ತಿರ ಬರತೊಡಗಿದರು. ಇದನ್ನು ನೋಡಿದ ಜನ ಅವಕ್ಕಾಗಿ ಹೋದರು. ಪರಿವಾರದವರು ದಿವಾನರ ಎರಡು ರೆಟ್ಟೆಗಳನ್ನು ಹಿಡಿದು ಅವರು ಕುಸಿಯದಂತೆ ನೋಡಿಕೊಳ್ಳುತ್ತಿದ್ದರೆ ತಿಮ್ಮಣ್ಣಯ್ಯನವರಿಗೆ ಮಾತ್ರ ಕುಣಿಯುವ ತವಕ.

ತಮ್ಮ ನೃತ್ಯನಿಲ್ಲಿಸಿ 'ಗೋಪಾಲ ವಿಠಲ' ಎಂದೆನ್ನುತ್ತಾ ಗೋಪಾಲದಾಸರು ಮೆಲ್ಲಗೆ ಕಣ್ಣು ತೆರೆದಾಗ ಸುತ್ತಲಿದ್ದ ಜನ ಸ್ಥಂಭೀಭೂತರಾಗಿ ನಿಂತಿರುವುದನ್ನು ನೋಡಿದರು. ಆದರೆ ದಿವಾನರು ಕುಣಿಯಲು ಪ್ರಯತ್ನಿಸುತ್ತಿರುವುದನ್ನು ನೋಡಿ ಅವರ ಬಳಿಗೆ ಹೋಗಿ ಕೈಗಳನ್ನು ಹಿಡಿದು "ನಿಮಗಿನ್ನು ಭಯವಿಲ್ಲ ದಿವಾನರೆ, ಅಂತಕನ ಕಿಂಕರರು ಬರಲಂಜಿದರು, ವಿಷ್ಣುದೂತರು ಸದ್ಯಕ್ಕೆ ಮರೆಯಾಗಿದ್ದಾರೆ. ವಿಷ್ಣು ಭಕ್ತಾಗ್ರಣಿ, ನನ್ನ ಮತ್ತು ನಿಮ್ಮ ಗುರುಗಳಾದ ವಿಜಯದಾಸರು ಬರುತ್ತಿರು

ವುದರಿಂದ ವಿಷ್ಣುದೂತರಿಗೆ ಸಂಧಿಗ್ಧಾವಸ್ಥೆ ಉಂಟಾಗಿದೆ. ನಿಮಗೊದಗಿರುವ ಅಪಮೃತ್ಯು ಯೋಗವನ್ನು ಉಪಯೋಗಿಸಿಕೊಳ್ಳಬೇಕೋ ಬೇಡವೊ ಎಂದು ಯೋಚಿಸ ತೊಡಗಿದ್ದಾರೆ. ನಾಳೆ ಇಲ್ಲಿಗೆ ದಯಮಾಡಿಸಲಿರುವ ವಿಜಯದಾಸರ ಅಪ್ಪಣೆ ಯನ್ನು ಪಡೆದು ಅವರು ಹಿಂದಕ್ಕೆ ಮರಳುತ್ತಾರೆ. ನೀವಿನ್ನು ಯೋಚಿಸಬೇಕಿಲ್ಲ. ಮುಂದೆ ಬೇಕಾದಷ್ಟು ಭಜನೆ ಮಾಡಬಹುದು. ಈಗ ಸದ್ಯಕ್ಕೆ ನೀವು ವಿಶ್ರಾಂತಿ ತೆಗೆದುಕೊಳ್ಳಿ. ಗುರುಗಳ ದರ್ಶನ ಪಡೆದ ನಂತರ ನೀವು ಎಂದಿನಂತೆ ಕಾರ್ಯ ನಿರ್ವಹಿಸಬಹುದು.

ಗೋಪಾಲದಾಸರ ಸೂಚನೆಯಂತೆ ತಿಮ್ಮಣ್ಣಯ್ಯನವರು 'ನಮೋ ವೇಣು ಗೋಪಾಲ ವಿಠಲಾ' ಎಂದೆನ್ನುತ್ತಾ ತಮ್ಮ ಬಿಂಬಮೂರ್ತಿಗೆ ನಮಸ್ಕರಿಸಿ ಮಲಗಿದರು.

ಸಾಮಾನ್ಯವಾಗಿ ನೋಡುವವರ ದೃಷ್ಟಿಯಲ್ಲಿ ಅವರು ಮಲಗಿದರು.

ಗೋಪಾಲದಾಸರು ಮಾತ್ರ ತಮ್ಮ ತಮ್ಮಂದಿರೊಂದಿಗೆ ತಿಮ್ಮಣ್ಣಯ್ಯನವರು ವೇಣುಗೋಪಾಲ ವಿಠಲನಿಗೆ ನಮಸ್ಕರಿಸುತ್ತಿರುವುದನ್ನು ಕಂಡರು.

ನೆರೆದಿದ್ದ ಜನ ಗೋಪಾಲದಾಸರ ಮಹಿಮೆಯನ್ನು ಕೊಂಡಾಡುತ್ತಾ ಮನೆಗೆ ಮರಳಿದರೆ- ಗೋಪಾಲದಾಸರು ತಮ್ಮ ಗುರುಗಳಾದ ವಿಜಯದಾಸರನ್ನು ಸ್ಮರಿಸುತ್ತಾ ದೇವರ ಮನೆ ಕಡೆ ನಡೆದರು.

***

"ಭಾಗಣ್ಣಾ, ನಿನ್ನ ಭಕ್ತಿ ಭರಿತ ನೃತ್ಯಕ್ಕೆ ವಿಷ್ಣುದೂತರೇ ಬೆಪ್ಪಾಗಿ ನಿಂತು ಬಿಟ್ಟರಯ್ಯಾ! ದೇವಾನುದೇವತೆಗಳೇ ನಿನ್ನ ಭಜನೆಗೆ ಮೈಮರೆತು ನಿಂತಿರುವಾಗ ಅವರು ಮಾತ್ರ ಏನು ಮಾಡಲು ಸಾಧ್ಯ?" ವಿಜಯದಾಸರು ನಗುತ್ತಾ ನುಡಿದಾಗ ಗೋಪಾಲದಾಸರು ವಿನೀತರಾಗಿ ನುಡಿದರು.

"ಕರೆದೊಯ್ಯಲು ಬಂದಿದ್ದ ದೂತರನ್ನು ನಾನು ನಿಲ್ಲಿಸಿದ್ದೇನೋ ಸತ್ಯ. ಆದರೆ ನಿಮ್ಮ ದರ್ಶನ ಮಾತ್ರದಿಂದ ಅಭಿಪ್ರಾಯ ಗ್ರಹಿಸಿ ಇಲ್ಲಿಂದವರು ಹೊರಟೇ ಹೋದರು. ನಮ್ಮ ತಿಮ್ಮಣ್ಣಯ್ಯನವರನ್ನು ನಮಗೆ ಉಳಿಸಿಕೊಟ್ಟಿರಿ" ಗೋಪಾಲ ದಾಸರು ಹೇಳುತ್ತಾ ನಮಸ್ಕರಿಸಿ ಸ್ವಲ್ಪ ಹೊತ್ತಿನ ನಂತರ ಗಟ್ಟಿಯಾಗಿ ರೋದಿಸ ತೊಡಗಿದರು.

ದಿವಾನರ ಪರಿವಾರದವರು ಬೆಪ್ಪಾಗಿ ನೋಡತೊಡಗಿದರು.

ತಿಮ್ಮಣ್ಣಯ್ಯನವರ ಮರಣ ಖಾತ್ರಿಯಾಗಿ ಇಡೀ ನಗರವೇ ರೋದಿಸುತ್ತಿದ್ದಾಗ ಗೋಪಾಲದಾಸರು ಕುಣಿಯುತ್ತಾ ಬಂದರು. ಅವರು ಬದುಕುಳಿದರು ಎಂದು ಎಲ್ಲರಿಗೂ ಗೊತ್ತಾಗಿರುವಾಗ ಗೋಪಾಲದಾಸರು ಈಗ ರೋದಿಸುತ್ತಿದ್ದಾರೆ.

ಏನು ಈ ವಿಪರ್ಯಾಸ?

ಪರಿವಾರದವರು ಆಶ್ಚರ್ಯದಿಂದ ನೋಡುತ್ತಿರುವಂತೆಯೇ ತಿಮ್ಮಣ್ಣಯ್ಯನವರು ಅಲ್ಲಿದ್ದ ಎಲ್ಲಾ ಜನರಿಗೆ ಹೊರಗೆ ಹೋಗುವಂತೆ ಆಜ್ಞಾಪಿಸಿದರು. ಗೋಪಾಲದಾಸರು ವಿಜಯದಾಸರು ಹಾಗೂ ತಾವು ಮಾತ್ರ ಅಲ್ಲಿ ಉಳಿದಾಗ, ಗೋಪಾಲದಾಸರು ಗುರುಗಳೆಡೆಗೆ ದೈನ್ಯದಿಂದ ನೋಡುತ್ತಾ "ಚೀಕಲಪರ್ವಿಯನ್ನು ಶಾಶ್ವತವಾಗಿ ಬಿಟ್ಟು ಬಂದು ಬಿಟ್ಟಿರಿ. ಇನ್ನು ಮೂರು ನಾಲ್ಕು ವರ್ಷಗಳಲ್ಲಿ ನಿಮ್ಮ ಶರೀರಯಾತ್ರೆಯನ್ನು ಮುಗಿಸಲು ನಿರ್ಧರಿಸಿದ್ದೀರಿ. ಮುಂದೆ ನಮಗೇನು ಗತಿ? ನನ್ನ ಶಿಷ್ಯ ಜಗನ್ನಾಥನಿಗೆ ನೀವು ಆಯುಷ್ಯ ಕೊಡಿಸುವಾಗ ಈ ವಿಷಯ ನನಗೇಕೆ ತಿಳಿಸಲಿಲ್ಲ? ಆಗಲೇ ಲೆಕ್ಕ ಹಾಕಿ ನಿಮಗಿಂತ ಮೊದಲೇ ನನಗೆ ಮರಣ ಬರುವಂತೆ ಮಾಡಿಕೊಳ್ಳುತ್ತಿದ್ದೆ. ನಿಮ್ಮ ವಿರಹವನ್ನು ನಾನು ಹೇಗೆ ತಡೆದುಕೊಳ್ಳಲಿ ಗುರುವರ್ಯಾ? ನೀವಿಲ್ಲದ ಜಗತ್ತಿನಲ್ಲಿ ನಾನು ಇರಬಲ್ಲೆನೆ? ಒಂದು ವೇಳೆ ಇದ್ದರೂ ಉಪಯೋಗವೇನು? ನೀವು ಇಲ್ಲಿಯೇ ಹತ್ತಿರದಲ್ಲಿರುವ ಚಿಪ್ಪಗಿರಿ ಗ್ರಾಮ ಸೇರುತ್ತೀರಿ. ನೀವು ಎಲ್ಲಿಯೇ ಇದ್ದರೂ ನೆನೆದಾಗ ಮನದಲ್ಲಿ ಕಾಣಿಸಿಕೊಂಡು ಸೂಕ್ತದರ್ಶನ ನೀಡುತ್ತಿದ್ದಿರಿ. ನಿಮ್ಮ ಇಹಲೋಕ ಯಾತ್ರಾ ಮುಕ್ತಾಯ ನಂತರ ನಮ್ಮ ಗತಿಯೇನು ಗುರುವರ್ಯಾ" ಬಿಕ್ಕಿ ಬಿಕ್ಕಿ ಅಳುತ್ತಾ ಗೋಪಾಲದಾಸರು ಪ್ರಶ್ನಿಸಿದರು.

ಶಿಷ್ಯನನ್ನು ಸಮಾಧಾನಪಡಿಸುತ್ತಾ ವಿಜಯದಾಸರು ಹೇಳಿದರು.

"ಜಗತ್ತಿನಲ್ಲಿ ಯಾರೂ ಶಾಶ್ವತವಲ್ಲ ಭಾಗಣ್ಣಾ. ನಾನು ಹೋದ ಐದಾರು ವರ್ಷಗಳಲ್ಲಿಯೇ ನೀನು ನನ್ನೊಂದಿಗೆ ಬರುತ್ತಿ. ಅಲ್ಲಿಯವರೆಗೂ ಸಾಧನೆಯನ್ನು ಮುಂದುವರಿಸು. ನನ್ನ ಸಾಧನೆಗೆ ಕಾರಣನಾದ ಶ್ರೀ ವಿಜಯವಿಠಲನ ಮೂರ್ತಿಯನ್ನೇ ನಿನಗೆ ನೀಡುತ್ತಿದ್ದೇನೆ. ಮಾಳಿಗೆ ಶ್ರೀನಿವಾಸಾಚಾರ್ಯ ಎನ್ನುವ ಗುಪ್ತೋಪಾಸಕರ ಮನೆಯಲ್ಲಿ ಈತ ಪೂಜೆ ಸ್ವೀಕರಿಸುತ್ತಿದ್ದ. ಸ್ವಪ್ನ ಸೂಚನೆಯಂತೆ ಅವರು ಈ ಮೂರ್ತಿಯನ್ನು ನನಗೆ ಒಪ್ಪಿಸಿದರು. ನಾನು ನಿತ್ಯ ಪೂಜಿಸುತ್ತಿದ್ದ ಈ ಮಂಗಳಮಯನನ್ನು ನಿನಗೆ ನೀಡುತ್ತಿದ್ದೇನೆ. ನನ್ನ ಸಮಸ್ತ ತಪಸ್ಸನ್ನು ಈತನಿಗೆ ಅರ್ಪಿಸಿದ್ದೆನಷ್ಟೇ? ಈತನನ್ನೇ ನಿನಗೆ ಈಗ ನೀಡುತ್ತಿದ್ದೇನೆ. ನನ್ನ ಜೀವ ಈ

ಮೂರುತಿ. ನನ್ನ ಆಸ್ತಿ ಈತ. ನನ್ನ ಸಮಸ್ತ ಸಂಪತ್ತು ಈ ಮೂರುತಿಯೆ. ಇದನ್ನೇ ನಿನಗೆ ಈಗ ನೀಡುತ್ತಿದ್ದೇನೆ. ಪೂಜಿಸಿ ಉದ್ಧಾರವಾಗು" ಎಂದು ಹೇಳುತ್ತಾ ವಿಜಯದಾಸರು ಆ ಮೂರ್ತಿಯನ್ನು ಗೋಪಾಲದಾಸರಿಗೆ ನೀಡಿದರು.

ಆದವಾನಿಯಲ್ಲಿ ವಿಜಯದಾಸರೇ ಪ್ರತಿಷ್ಠಾಪಿಸಿದ ಶ್ರೀಪ್ರಾಣದೇವರ ವಿಗ್ರಹದ ಮೇಲೆ ಶ್ರೀ ವಿಜಯವಿಠಲನನ್ನು ಕೂಡಿಸಿದ ಗೋಪಾಲದಾಸರು ಆ ದಿನ ಭವ್ಯವಾಗಿ ಪೂಜೆ ಮಾಡಿದರು.

ಮೂರು ದಿನಗಳ ಕಾಲ ಅಲ್ಲಿ ಅಖಂಡ ಭಜನೆ ನಡೆಯಿತು.

ಪಂಡರಾಪುರದಿಂದ ಶ್ರೀನಿವಾಸಾಚಾರ್ಯ - ಅಲ್ಲಲ್ಲ -ಈಗ - ಜಗನ್ನಾಥದಾಸರು ಬಂದರು.

ಅವರೆಲ್ಲಾ ಕೆಲವು ದಿನ ಒಟ್ಟಾಗಿ ಆದವಾನಿಯಲ್ಲಿದ್ದರು.

ಇನ್ನು ವಿಜಯದಾಸರು ಆದವಾನಿಗೆ ಬರುವುದಿಲ್ಲ ಎನ್ನುವ ಸುದ್ದಿ ಹೇಗೋ ಕರ್ಣಾಕರ್ಣಿಯಾಗಿ ಜನರಲ್ಲಿ ಹರಡಿ ತಂಡತಂಡವಾಗಿ ಭಕ್ತಸಮೂಹ ಬರತೊಡಗಿತು.

ಅವರಿಗೆಲ್ಲಾ ಸೂಕ್ತರೀತಿಯ ಹಿತವಚನಗಳನ್ನು ಗೋಪಾಲದಾಸರಿಂದಲೇ ವಿಜಯದಾಸರು ನೀಡಿಸುತ್ತಿದ್ದರು.

ಒಂದು ದಿನ ಒಬ್ಬ ಭಕ್ತ ಅವರಿದ್ದಲ್ಲಿ ಬಂದು ಶಿರಸಾಷ್ಟಾಂಗ ಹಾಕಿ ಮಲಗಿಬಿಟ್ಟ.

ಆತನ ಕೋರಿಕೆಯೂ ಅತಿ ವಿಚಿತ್ರ.

ಪ್ರತಿ ಜೀವಿಗೂ ಮೂಲದಲ್ಲಿ ಒಂದು ಸ್ವರೂಪವಿರುತ್ತದೆ. ಒಂದು ಬೀಜ ರೂಪದಲ್ಲಿರುವ ಅದನ್ನು ಸಾಧನೆ ಮಾಡಿಸಿ ಅದರನುಗುಣವಾಗಿ ಪೂರ್ಣತೆ ಯನ್ನು ಕೊಡುತ್ತಾನೆ ಪರಮಾತ್ಮ. ಮೂಲರೂಪಕ್ಕೆ ಸ್ವರೂಪ ಎನ್ನುತ್ತಾರೆ.

ತನ್ನ ಮೂಲ ಸ್ವರೂಪ ಯಾವುದು? ತಿಳಿಯುವ ತವಕ ಆ ಭಕ್ತನಿಗೆ. ಅದನ್ನು ತಿಳಿಸಲು ಪ್ರಾರ್ಥಿಸಿದ.

ಬಂದ ಭಕ್ತನ ಕೋರಿಕೆ ಕೇಳಿ ವಿಜಯದಾಸರು ಮುಗುಳ್ನಕ್ಕರು. ಒಂದು ಜನ್ಮವಲ್ಲ ಹತ್ತು ಜನ್ಮವಲ್ಲ, ಸಾವಿರ ಸಾವಿರ ಜನ್ಮಗಳ ಹಿಂದಿನ ಸಂಗತಿಯದು. ಮುಂದೆ ಲಕ್ಷಲಕ್ಷ ಜನ್ಮಗಳ ಸಾಧನೆಯ ನಂತರ ದೊರೆಯುವ ಹಂತವದು. ಅದನ್ನು ತಿಳಿಯುವುದಕ್ಕೆ ಮಹಾಅಪರೋಕ್ಷ ಜ್ಞಾನಿಗಳಿಗೆ ಮಾತ್ರ ಸಾಧ್ಯ.

ಇಂಥ ಪ್ರಶ್ನೆ ಈ ಭಕ್ತನಿಗೆ ಏಕೆ ಉದಯಿಸಿತು? ಸಾಧನೆ ಮಾಡಿಸು ಪರಮಾತ್ಮ ಎಂದು ಪ್ರತಿ ಜೀವಿ ಪ್ರಾರ್ಥಿಸಬೇಕೇ ವಿನಹ ಮೂಲಸ್ವರೂಪ ತಿಳಿಯುವುದಕ್ಕೆ ಏಕೆ ಹಂಬಲಿಸಬೇಕು?

ಆದರೂ ವಿಜಯದಾಸರು ಗೋಪಾಲದಾಸರಿಗೆ ಹೇಳಿದರು.

"ಭಾಗಣ್ಣಾ ಕಣಿ ಹೇಳುತ್ತಿದ್ದ ನಿನ್ನ ವೃತ್ತಿಗೆ ಇದು ಕಡೆಯ ಸವಾಲು. ಜೀವನದ ಹಿಂದಿನ ಕೆಲವು ಘಟನೆಗಳು ಅಥವಾ ಮುಂದಿನ ಕೆಲವು ಘಟನೆಗಳನ್ನು ನೀನು ವಿವರಿಸುತ್ತಿದ್ದೆ. ಸೂಕ್ತ ಕಾಲದಲ್ಲಿ ನಿನ್ನ ಬಳಿ ಬಂದು ನಿನ್ನ ಪಥವನ್ನು ಬದಲಿಸಿದೆ. ಆಗಿನ ನಿನ್ನ ಜ್ಞಾನ ಪಾಂಡಿತ್ಯದಿಂದ ದೊರೆತದ್ದು. ಈಗಿನ ಜ್ಞಾನ ಆಧ್ಯಾತ್ಮ ಸಾಧನೆಯಿಂದ ಸಿದ್ಧಿಸಿದ್ದು. ಇವೆರಡರ ಅಂತರವನ್ನು ಜಗತ್ತಿಗೆ ತಿಳಿಸುವುದಕ್ಕಾಗಿಯೇ ಭಗವಂತ ಈ ಭಕ್ತನ ಮೂಲಕ ಈ ಪ್ರಶ್ನೆ ಕೇಳಿಸಿದ್ದಾನೆ. ಬೇರೆಯವರ ಜೀವನದ ಬಗ್ಗೆ ಆಗಿಂದಾಗ್ಗೆ ಅಂತರ್‌ದೃಷ್ಟಿಯಿಂದ ನೋಡುತ್ತಿದ್ದ ನಿನ್ನ ಸಿದ್ಧಿ ಈಗ ಪೂರ್ಣತೆಯನ್ನು ಪಡೆದಿದೆ. ಈಗ ನಾನೇ ಅಪ್ಪಣೆ ಕೊಡುತ್ತಿದ್ದೇನೆ. ನಿನ್ನ ಜ್ಞಾನದೃಷ್ಟಿಯಿಂದ ಈತನ ಸ್ವರೂಪ ದೇಹವನ್ನು ನೋಡು."

ಗುರುಗಳ ಅಪ್ಪಣೆಯಂತೆ ಗೋಪಾಲದಾಸರು ಆ ಭಕ್ತನ ಕೈಯನ್ನು ಹಿಡಿದು ಕಣ್ಣು ಮುಚ್ಚಿದರು.

ಅವರಿಗೆ ಆ ಜೀವಿಯ ಮೂಲಸ್ವರೂಪ ಸ್ಪಷ್ಟವಾಗಿ ಕಂಡಿತು.

ಅವರು ಹೇಳಿದರು "ಅಯ್ಯಾ ನಿನ್ನ ಮೂಲಸ್ವರೂಪ ಕಾಗೆ"

ಕೇಳಿದ ವಿಜಯದಾಸರು ಆನಂದ ತಡೆಯಲಾರದೆ 'ಶಹಬ್ಬಾಷ್' ಎಂದು ಉದ್ಗರಿಸಿಬಿಟ್ಟರು.

"ಯಾವುದೇ ಜೀವಿಯ ಸ್ವರೂಪವನ್ನು ನೋಡಿ ಬಿಡುವಷ್ಟು ಮೇಲ್ಮಟ್ಟಕ್ಕೆ ನೀನು ಹೋಗಿಬಿಟ್ಟಿದ್ದೀ ಭಾಗಣ್ಣಾ. ನಾನೂ ಭಕ್ತನ ಬಗ್ಗೆ ಯೋಚಿಸುತ್ತಿದ್ದೆ. ಈತನ ಮೂಲ ಸ್ವರೂಪ ಕಾಗೆ ಎನ್ನುವುದು ನಿನ್ನ ದೃಷ್ಟಿ ಸಂಪೂರ್ಣ ಸ್ಪಷ್ಟ. ಮೂವತ್ತು ನಾಲ್ಕು ವರ್ಷಗಳನ್ನು ಸರಿಯಾಗಿ ಕಂಡಿಲ್ಲದ ನಿನ್ನ ಈ ಪುಟ್ಟ ವಯಸ್ಸಿನಲ್ಲಿಯೇ ಎಂಥ ಮೇಲ್ಮಟ್ಟದ ಸಾಧನೆ ಸಿದ್ಧಿಸಿಕೊಂಡಿದ್ದೀಯಪ್ಪಾ! ಮಹಾಜ್ಞಾನಿ ನೀನು. ದೊಡ್ಡ ಚೇತನ ನೀನು. ನಿನ್ನನ್ನು ಪಡೆದ ನಾಡು ಪುನೀತವಾಯಿತು. ನಿನ್ನಿಂದ ತನ್ನ ಸ್ವಷ್ಟರೂಪ ತಿಳಿದ ಈ ಭಕ್ತ ಉದ್ಧಾರನಾದ. ನಿನ್ನನ್ನು ಸ್ಮರಿಸಿದವರು ಉದ್ಧಾರವಾಗುತ್ತಾರೆ. ನಿನ್ನನ್ನು ಯಾರು ಸ್ಮರಿಸುತ್ತಾರೆಯೋ ಅವರನ್ನು ನಾನು ಅನುಗ್ರಹಿಸು

ತ್ತೇನೆ. ನಿನ್ನ ಆಶೀರ್ವಾದ ಪಡೆದವರಿಗೆ ವಿಜಯವಿಠಲ ಅಥವಾ ಶ್ರೀ ಗೋಪಾಲವಿಠಲ ರಕ್ಷೆಗೆ ನಿಲ್ಲುತ್ತಾನೆ. ಹೃದಯಾಕಾಶದಲ್ಲಿ ವಿಶ್ವಂಬರನನ್ನು ಕಂಡು ಎಲ್ಲವನ್ನೂ ಆತನಿಗೆ ಸಮರ್ಪಿಸುವ ಗಣೇಶಾಂಶನಾದ ನಿನ್ನ ಕೃಪೆ ಗಳಿಸಿದವರಿಗೆ ಸಕಲ ಹರಿದಾಸರ ಆಶೀರ್ವಾದ ಸಿಕ್ಕುತ್ತದೆ" ವಿಜಯದಾಸರು ಗೋಪಾಲದಾಸರನ್ನು ಗಟ್ಟಿಯಾಗಿ ಹಿಡಿದುಕೊಂಡು ತಲೆಬೆನ್ನುಗಳನ್ನು ನೇವರಿಸುತ್ತಾ ಆಶೀರ್ವದಿಸುತ್ತಲೇ ಇದ್ದರು.

ಗೋಪಾಲದಾಸರು ಗುರುಗಳಿಗೆ ನಮಸ್ಕರಿಸಿ "ನನ್ನ ಮೇಲೆ ಪರಮಾನುಗ್ರಹ ಮಾಡಿಬಿಟ್ಟಿರಿ. ಭಕ್ತಿಯ ಮಹಿಮೆ ಗೊತ್ತಿದ್ದರೂ ಲೌಕೀಕ ಆಕರ್ಷಣೆಗೆ ಒಳಗಾಗಿ ಹಣ ಸಂಪಾದನೆಯಲ್ಲಿ ನಿರತನಾಗಿ ಬಿಟ್ಟಿದ್ದೆ. ಆಗ ಬಂದು ನನ್ನನ್ನು ಎಚ್ಚರಿಸಿ ಸರಿದಾರಿ ತೋರಿಕೊಟ್ಟಿರಿ. ಬಿಂಬದರ್ಶನ ಮಾಡಿಸಿ ಗೋಪಾಲವಿಠಲ ಅಂಕಿತ ನೀಡುವುದರ ಮೂಲಕ ತತ್ವಸಾಹಿತ್ಯ ಕ್ಷೇತ್ರಕ್ಕೆ ನನ್ನನ್ನು ಕರೆತಂದಿರಿ. ಕಾಲಕಾಲಕ್ಕೆ ಸೂಕ್ತಮಾರ್ಗವನ್ನು ಸೂಚಿಸುತ್ತಾ ನನ್ನ ಸಕಲ ಸಾಧನೆಗೆ ಕಾರಣರಾದಿರಿ. ತತ್ವಸಾಹಿತ್ಯದ ಧೀಮಂತರಾಗಿ ರಾರಾಜಿಸಲಿರುವ ಜಗನ್ನಾಥ ದಾಸರಂಥ ಶಿಷ್ಯನನ್ನು ದೊರಕಿಸಿಕೊಟ್ಟು ನನ್ನ ಒಂದು ಭವ್ಯ ಪರಂಪರೆಯೇ ಮುಂದುವರೆಯುವಂತೆ ಮಾಡಿಬಿಟ್ಟಿರಿ. ನಾನು ಮದುವೆಯಾಗಲಿಲ್ಲ. ನನಗೆ ಮಕ್ಕಳಾಗಲಿಲ್ಲ. ಹುಟ್ಟಿದ ಪ್ರತಿವ್ಯಕ್ತಿ ತನ್ನ ಸಂತತಿ ಮುಂದುವರಿಸಿ ಪಿತೃಋಣವನ್ನು ತೀರಿಸುವ ಮಾರ್ಗದಲ್ಲಿ ನಾನು ನಡೆಯಲಿಲ್ಲ ಎನ್ನುವ ಚಿಂತೆ ಇಲ್ಲವಾಗಿಸಿಬಿಟ್ಟಿರಿ. ನನ್ನಿಂದ ಐದಾರು ಜನರಿಗೆ ಶಿಷ್ಯತ್ವ ಸಿಕ್ಕಿತು. ಹಲವಾರು ಜನರಿಗೆ ಮಾರ್ಗದರ್ಶನ ದೊರೆಯಿತು ನಿಜ; ಆದರೆ ಮುಂದೆ ಲಕ್ಷಲಕ್ಷ ಸುಜೀವಿಗಳ ಸಾಧನೆಗೆ ದಾರಿ ದೀಪವಾಗುವ ಸಾಹಿತ್ಯ ರಚನೆಯನ್ನು ನನ್ನಿಂದ ಮಾಡಿಸಿ ಹರಿವಾಯುಗುರುಗಳ ಆಶೀರ್ವಾದ ದೊರಕಿಸಿ ಕೊಟ್ಟಿರಿ. ನಿಮ್ಮಿಂದ ನಾನು ಉದ್ಧಾರನಾದೆ. ಏನು ನಿಮ್ಮ ಶಿಷ್ಯವಾತ್ಸಲ್ಯ! ನೀವು ನಿತ್ಯ ಪೂಜಿಸುತ್ತಿದ್ದ ಶ್ರೀ ವಿಜಯವಿಠಲ ಮೂರ್ತಿಯನ್ನೇ ನನಗೆ ನೀಡಿ. ನನ್ನ ಮೇಲೆ ನಿಮ್ಮ ಅನುಗ್ರಹವೆಷ್ಟು ಎನ್ನುವುದನ್ನು ತೋರಿಸಿಕೊಟ್ಟಿರಿ. ಪಾಹಿಮಾಂ ಶ್ರೀ ವಿಜಯದಾಸ ಗುರುವರ್ಯಾ" ಎಂದು ಗೋಪಾಲದಾಸರು ಉದ್ಗರಿಸುತ್ತಾ ಶಿರಸಾಷ್ಟಾಂಗ ನಮಸ್ಕಾರ ಹಾಕಿಬಿಟ್ಟರು.

ಅಲ್ಲಿಯೇ ಇದ್ದ ಶ್ರೀ ಪ್ರಾಣದೇವರ ಅಂತರ್ಯಾಮಿ ಶ್ರೀ ವಿಜಯವಿಠಲಾಭಿನ್ನ ಶ್ರೀ ಗೋಪಾಲವಿಠಲ ಸ್ವಾಮಿ ಗುರುಶಿಷ್ಯರ ಶ್ರೇಷ್ಠ ಭಾವನೆಗಳಿಗೆ ತನ್ನ ಕೃಪಾಹಸ್ತವನ್ನೆತ್ತಿ ಆಶೀರ್ವದಿಸಿರಬೇಕು. ಆಂಜನೇಯ ಸ್ವಾಮಿ ಜಯವಾಗಲಿ ಎಂದು ತುಂಬು ಹರ್ಷದಿಂದ ಹರಿಸಿರಬೇಕು.

***

ವಿಜಯದಾಸರು ಚಿಪ್ಪಗಿರಿಗೆ ಪ್ರಯಾಣಿಸಿದರು. ಗುರುಗಳ ಸೂಚನೆಯಂತೆ ಗೋಪಾಲದಾಸರು ಉತ್ತನೂರಿಗೆ ಮರಳಿದರು.

ಗೋಪಾಲದಾಸರು ಹಿಂದೆ ಕಣಿ ಹೇಳುವಾಗ ಸಂಪಾದಿಸಿದ್ದ ಹಣ ಹೇರಳವಾಗಿತ್ತು.

ಗದ್ವಾಲ ಮಹಾರಾಜರು ನೀಡಿದ್ದ ಭೂಮಿ ಸಂಕಾಪುರ ಉತ್ತನೂರುಗಳಲ್ಲಿದ್ದು ಗೋಪಾಲದಾಸರ ಪುಣ್ಯ ಪ್ರಭಾವದಿಂದ ಅಲ್ಲಿ ಉತ್ತಮ ಬೆಳೆ ಬರುತ್ತಿದೆ. ಕಣಜದ ತುಂಬಾ ಧಾನ್ಯ. ಮನೆಯ ತುಂಬಾ ಅತಿಥಿ ಅಭ್ಯಾಗತರು.

ಕಡೆ ತಮ್ಮ ರಂಗಣ್ಣನಿಗೆ ಮಾತ್ರ ಇವು ಯಾವುಗಳಿಂದಲೂ ತೃಪ್ತಿಯಿಲ್ಲ.

ತನ್ನ ಮೂರು ಜನ ಅಣ್ಣಂದಿರೂ ಮದುವೆಯಾಗಿಲ್ಲ. ಹಿರಿಯಣ್ಣನಿಂದ ಅಂಕಿತ ಪಡೆದು ಹರಿದಾಸರಾಗಿ ಪರಮಾತ್ಮನ ವಿಶೇಷ ಕೃಪೆಗಳಿಸುತ್ತಿದ್ದಾರೆ.

ತನಗೂ ಮದುವೆ ಬೇಡವೆಂದಾಗ ಹಿರಿಯಣ್ಣ ಒಪ್ಪಲಿಲ್ಲ. ವಂಶ ಮುಂದುವರಿಸುವ ಜವಾಬ್ದಾರಿಯನ್ನು ನನಗೆ ಒಪ್ಪಿಸಿಬಿಟ್ಟರು.

ಮದುವೆ ಬೇಡವೇ ಬೇಡ ಎಂದು ಹಠ ಹಿಡಿದಿದ್ದರೆ ಅಣ್ಣನವರು ಸುಮ್ಮನಾಗುತ್ತಿದ್ದರೇನೋ?

ಆದರೆ ಸಣ್ಣ ವಯಸ್ಸು, ಸಂಸಾರದ ಹಂಬಲ. ಸುಖೀ ಬದುಕಿನ ಅಪೇಕ್ಷೆ ಹೆಚ್ಚು ಹಠ ಹಿಡಿಯಲಿಲ್ಲ. ಮದುವೆ ಆಯಿತು. ಮಕ್ಕಳಾದರು, ಸಂಸಾರದಲ್ಲಿ ಯಾವುದಕ್ಕೂ ಕೊರತೆಯಿಲ್ಲ.

ಶ್ರೀ ವೆಂಕಟೇಶನ ಗುಡಿಯಲ್ಲಿ ನಿತ್ಯಪೂಜೆ ಮಾಡಿಕೊಂಡಿರುವುದೇ ಕರ್ತವ್ಯವಾಗಿ ಅಣ್ಣನವರು ನಿರ್ದೇಶಿಸಿದ್ದಾರೆ.

ಭಕ್ತಿ ಪೂಜೆ ಇತ್ಯಾದಿಗಳಿಂದ ವ್ಯಕ್ತಿಯ ಉದ್ಧಾರ. ಆದರೆ ತಾವೂ ಉದ್ಧಾರವಾಗಿ ಸುತ್ತಲಿನ ಜನತೆಯನ್ನೂ ಮೇಲೆತ್ತುವ ಕಾರ್ಯ ದೀಕ್ಷಾದಕ್ಷರಾದ ಹರಿದಾಸರಿಂದಾಗುತ್ತದೆ. ಸಂಸಾರದಲ್ಲಿದ್ದು ಹರಿದಾಸರಾಗಿ ಬದುಕಬಹುದೆಂದು ಅಣ್ಣನವರು ಹಿಂದೆ ಹೇಳಿದ್ದೇನೋ ಉಂಟು. ಅವರ ಗುರುಗಳಾದ ವಿಜಯದಾಸರು ಸಂಸಾರದಲ್ಲಿದ್ದೇ ಶ್ರೇಷ್ಠ ಹರಿದಾಸರಾಗಿ ವಿರಾಜಿಸುತ್ತಿದ್ದಾರೆ.

ತನಗೇಕೆ ಆ ಭಾಗ್ಯವಿಲ್ಲ?

ಅನೇಕರಿಗೆ ಹರಿದಾಸ ದೀಕ್ಷೆ ನೀಡಿದ ತಮ್ಮಣ್ಣ ತನ್ನನ್ನೇಕೆ ಅನುಗ್ರಹಿಸಿಲ್ಲ?

- ರಂಗಣ್ಣನಿಗೆ ಈ ಬಗ್ಗೆ ಬಹಳ ಕಳವಳ ಉಂಟಾಗಿತ್ತು.

ಸಮಯ ನೋಡಿ ಅಣ್ಣನಲ್ಲಿ ವಿನಂತಿಸಿಯೇ ಬಿಟ್ಟ ರಂಗಣ್ಣ.

"ಅಣ್ಣಾ, ಪರುಷದ ಶಿಲೆ ತಾನು ಮುಟ್ಟಿದ್ದನ್ನೆಲ್ಲಾ ಚಿನ್ನ ಮಾಡುತ್ತದೆಂದು ಹೇಳುತ್ತಾರೆ. ಅದರ ಸ್ಪರ್ಶದಿಂದ ಮಾತ್ರ ಆ ಭಾಗ್ಯ ಬಂದೀತು. ಆದರೆ ನಿಮ್ಮ ಪಾದ ಸ್ಪರ್ಶವೇಕೆ; ಅವನ್ನು ಸ್ಮರಿಸಿದವರೂ ಉದ್ಧಾರವಾಗುತ್ತಾರೆ. ಅಂಥ ಶ್ರೇಷ್ಠ ಹಂತವನ್ನು ನೀವು ತಲುಪಿದ್ದೀರಿ. ನಿಮ್ಮ ಕರುಣೆಯ ಎಲ್ಲೆ ಸೀಮಾತೀತವಾದದ್ದು. ನಿಮ್ಮ ಗುರುಗಳ ಬಗ್ಗೆ ನಿರಾದರ ತೋರುತ್ತಿದ್ದ ಮಾನವಿಯ ಶ್ರೀನಿವಾಸಾಚಾರ್ಯರ ಬಳಿ ನೀವೇ ಹೋಗಿ ಅವರನ್ನು ಉದ್ಧರಿಸಿದಿರಿ. ಆದರೆ ನನ್ನ ಮೇಲೆ ಮಾತ್ರ ಇನ್ನೂ ನಿಮ್ಮ ಕರುಣೆಯಾಗಿಲ್ಲ. ನಿಮ್ಮ ಸೂಚನೆಯಂತೆ ವೇಣಿಸೋಮಪುರದಲ್ಲಿ ಗುರು ವೆಂಕಟರಾಮಾರ್ಯರ ಬಳಿ ಶಿಕ್ಷಣ ಪಡೆದೆ. ನಿಮ್ಮ ನಿರ್ದೇಶನದಂತೆ ಇಲ್ಲಿ ಶ್ರೀ ವೆಂಕಟೇಶನ ಪೂಜೆ ಮಾಡುತ್ತಾ ವ್ಯವಸಾಯ ಕಾರ್ಯದಲ್ಲಿ ನಿರತನಾಗಿದ್ದೇನೆ. ಇಷ್ಟಕ್ಕೆ ನನ್ನನ್ನು ಬಿಟ್ಟು ಬಿಡುವಿರಾ? ಕನ್ನಡ ಹರಿದಾಸ ಸಾಹಿತ್ಯ ಸೇವೆ ಮಾಡುವ ಭಾಗ್ಯ ನನಗೆ ನೀಡಬಾರದೆ? ಬಿಂಬದರ್ಶನ ಮಾಡಿಸಿ ಅಂಕಿತ ನೀಡುವುದರ ಮೂಲಕ ನನ್ನನ್ನು ಮೇಲಕ್ಕೆತ್ತಬಾರದೆ? ಅದು ಈ ಜನ್ಮದಲ್ಲಿ ಸಾಧ್ಯವಿಲ್ಲವೆನ್ನುವುದಾದರೆ ಇನ್ನು ಮೇಲೆ ಬದುಕಿದ್ದೆ ಸಾರ್ಥಕವೇನು? ನಿಮ್ಮ ಬೆನ್ನಿನಲ್ಲಿ ಬಿದ್ದ ತಮ್ಮನಾಗಿ ಹುಟ್ಟಿದಾಗಲೂ ನನಗೆ ಆ ಭಾಗ್ಯ ಸಿಕ್ಕುವುದಿಲ್ಲವಾದರೆ ಮುಂದೆ ಎಷ್ಟೋ ಜನ್ಮಗಳನ್ನು ಹೀಗೆಯೇ ಕಳೆಯಬೇಕಾಗುತ್ತದೆ. ನನ್ನ ಮೇಲೆ ಅಷ್ಟು ನಿಷ್ಕರುಣೆಯಾಗಬಹುದೇ ಅಣ್ಣಯ್ಯ".

ಹೇಳುತ್ತಾ ಹೇಳುತ್ತಾ ರಂಗಣ್ಣನ ಕಣ್ಣಿನಲ್ಲಿ ನೀರು ಉಕ್ಕಿಬಿಟ್ಟಿತು. ತಮ್ಮನಲ್ಲಿ ಉಂಟಾಗಿರುವ ಮಾನಸಿಕ ತಹತಹತೆಯನ್ನು ಗೋಪಾಲದಾಸರು ಗ್ರಹಿಸದೆ ಹೋಗಲಿಲ್ಲ.

ತಮ್ಮನ ತಲೆಯನ್ನು ನೇವರಿಸುತ್ತಾ ಗೋಪಾಲದಾಸರು ನುಡಿದರು.

"ಪುಣ್ಯ ಜೀವಿಯಪ್ಪಾ ನೀನು. ಬಿಡುವಿಲ್ಲದಂಥ ಲೌಕಿಕ ಕಾರ್ಯಭಾರ ನಿನ್ನ ಮೇಲೆ ಬಿದ್ದಿದ್ದರೂ ಆಧ್ಯಾತ್ಮಿಕ ಕಳಕಳಿಯನ್ನು ಕಳೆದುಕೊಂಡಿಲ್ಲ. ನಿನ್ನಲ್ಲಿರುವ ದಿವ್ಯ ಚೈತನ್ಯವನ್ನು ಗುರುಗಳಾದ ವಿಜಯದಾಸರು ಅರಿತಿದ್ದಾರೆ. ಈ ಬಗ್ಗೆ ನನಗೆ ಹಲವು ಸಲ ಸೂಕ್ಷ್ಮವಾಗಿ ತಿಳಿಸಿದ್ದಾರೆ. ಆಗಲಿ ಇನ್ನು ಕೆಲವು ದಿನಗಳಲ್ಲಿ

ನಾವೆಲ್ಲರೂ ಚಿಪ್ಪಗಿರಿಗೆ ಹೋಗೋಣ. ಅಲ್ಲಿಂದ ಅವರೊಂದಿಗೆ ತಿರುಪತಿ ಯಾತ್ರೆ ಮಾಡೋಣ. ದೊಡ್ಡವರೊಂದಿಗೆ ಮಾಡುವ ಯಾತ್ರೆ ಅಧಿಕ ಫಲವನ್ನು ನೀಡುತ್ತದೆ. ಯಾತ್ರೆಯ ಕಾಲದಲ್ಲಿ ಹಿರಿಯರ ಸೇವೆಯನ್ನು ಶ್ರದ್ಧೆಯಿಂದ ಮಾಡು. ಅಲ್ಲಿಂದ ಮರಳಿದ ಮೇಲೆ ನಿನಗೂ ಬಿಂಬದರ್ಶನ ಮಾಡಿಸೋಣ."

ಅಣ್ಣನ ವಾಗ್ದಾನ ಕೇಳಿ ರಂಗಣ್ಣ ಕುಣಿದಾಡಿಬಿಟ್ಟ.

ಬಿಂಬದರ್ಶನ ಎನ್ನುವ ಆಧ್ಯಾತ್ಮಿಕ ಔನ್ನತ್ಯದ ಮಹಿಮೆಯನ್ನು ವಿದ್ಯಾಗುರುಗಳಾದ ವೆಂಕಟರಾಮಾಚಾರ್ಯರು ಸಾಕಷ್ಟು ತಿಳಿಸಿದ್ದಾರೆ. ಅದಕ್ಕಾಗಿ ಅವರು ಪರಿತಪಿಸುತ್ತಲೂ ಇದ್ದಾರೆ. ಅವರಿಗಿನ್ನೂ ಸಿಕ್ಕಿರದ ಮಹದ್‌ಭಾಗ್ಯವನ್ನು ತನ್ನಣ್ಣ ತನಗೆ ನೀಡುವುದಾಗಿ ಕೊಟ್ಟ ಭರವಸೆಯಿಂದ ರಂಗಣ್ಣನ ಜೀವನದಲ್ಲಿ ಪುನಃ ಉಲ್ಲಾಸ ಮೂಡಿತು.

ತಿರುಪತಿಯಲ್ಲಿದ್ದು, ಉತ್ತನೂರಿನಲ್ಲಿ ನೆಲಿಸಿ ಎಲ್ಲೆಲ್ಲಿಯೂ ವ್ಯಾಪಿಸಿರುವ ಶ್ರೀ ವೆಂಕಟೇಶ ಅಲ್ಲೆಲ್ಲಾ ದರ್ಶನ ಕೊಡಬಹುದು. ಆದರೆ ಹೃದಯ ಪದ್ಮದಲ್ಲಿ ನೆಲೆಸಿರುವ ಆತನನ್ನು ಕಾಣಬೇಕಾದರೆ ಅದು ಅಷ್ಟು ಸುಲಭವಾದ ಕಾರ್ಯವೇನೂ ಅಲ್ಲ. 'ಅಲ್ಲೆಲ್ಲಾ ಇರುವ ನೀನು ಇಲ್ಲಿ ದರ್ಶನ ಕೊಡು ಮಹಾರಾಯಾ' ಎಂದು ಪ್ರಾರ್ಥಿಸುತ್ತಾ ಕೆಲವು ದಿನಗಳ ಕಾಲ ತಪಸ್ಸಿನಂತೆ ಆಧ್ಯಾತ್ಮ ಸಾಧನೆಯಲ್ಲಿ ರಂಗಣ್ಣ ನಿರತನಾಗಿ ಬಿಟ್ಟ.

ಶ್ರೀ ವೇಣುಗೋಪಾಲ ಸ್ವಾಮಿಯನ್ನು ಪ್ರತಿಷ್ಠಾಪಿಸಿ ಚಿಪ್ಪಗಿರಿಯಲ್ಲಿ ವಾಸಿಸುತ್ತಿದ್ದ ವಿಜಯದಾಸರು 'ಈ ಸಲದ ಯಾತ್ರೆ ತಮ್ಮ ಕಡೆಯ ತಿರುಪತಿ ಯಾತ್ರೆ' ಎಂದು ತೀರಾ ಹತ್ತಿರದ ಶಿಷ್ಯರಿಗೆ ಹೇಳಿಬಿಟ್ಟಿದ್ದರು.

ವಿಷಯ ಗೊತ್ತಿದ್ದ ಗೋಪಾಲದಾಸರು ತಮ್ಮ ಮೂರು ಜನ ತಮ್ಮಂದಿರನ್ನು ಕರೆದುಕೊಂಡು ಗುರುಗಳೊಂದಿಗೆ ತಿರುಪತಿ ಯಾತ್ರೆಯನ್ನು ಮಾಡಿ ಬಂದರು. ಯಾತ್ರೆಯ ಮಾರ್ಗ ಮಧ್ಯದಲ್ಲಿ ವಿಜಯದಾಸರು ಗೋಪಾಲದಾಸರಿಗೆ ಹೇಳಿದರು.

"ನಿನ್ನ ತಮ್ಮ ರಂಗಣ್ಣನೂ ಹರಿದಾಸ ದೀಕ್ಷಾ ಸ್ಥಾನಕ್ಕೆ ಅರ್ಹನಾಗಿದ್ದಾನೆ ಭಾಗಣ್ಣಾ, ಉತ್ತನೂರಿಗೆ ಮರಳಿದ ಮೇಲೆ ಭಗವಂತನ ವ್ಯಾಪ್ತ್ಯುಪಾಸನೆ ಅನುಷ್ಠಾನಯುಕ್ತ ಪೂಜಾ ವಿಧಾನ ಮೊದಲಾದವುಗಳನ್ನು ನೀನೇ ಹೇಳಿಕೊಟ್ಟು ಶೀಘ್ರವೇ ಬಿಂಬದರ್ಶನ ಮಾಡಿಸಿ ಅವನಿಗೂ ಅಂಕಿತ ನೀಡು. ನೀವು ನಾಲ್ಕೂ

ಜನ ಸೋಟಿರರು ಕನ್ನಡ ಹರಿದಾಸ ಸಾಹಿತ್ಯ ಕ್ಷೇತ್ರದಲ್ಲಿ ಜಾಜ್ವಲವಾಗಿ ಪ್ರಕಾಶಿಸುತ್ತೀರಿ".

ಗುರುಗಳ ಆಶೀರ್ವಾದಯುಕ್ತ ಸೂಚನೆಯನ್ನು ಗ್ರಹಿಸಿದ ಗೋಪಾಲದಾಸರು ಉತ್ತನೂರಿಗೆ ಮರಳಿದ ಮೇಲೆ ತಮ್ಮ ರಂಗಣ್ಣನೊಂದಿಗೆ ಹೆಚ್ಚು ಕಾಲ ಕಳೆಯ ತೊಡಗಿದರು.

ನಿನಗೆ ಏನು ಸಂಶಯ ಬಂದರೂ ಕೇಳು ರಂಗಣ್ಣಾ, ಹರಿದಾಸರು ಎಂದರೆ ಅಂಧಾನುಯಾಯಿಗಳಲ್ಲ. ತತ್ವಗಳನ್ನು ಒರೆಹಚ್ಚಿ ನೋಡಿ ಅದರ ಶ್ರೇಷ್ಠತೆಯನ್ನು ಅರಿತು ಶರಣಾದ ಅನುಭಾವಿಗಳು. ತಮ್ಮ ಅನುಭವವನ್ನು ಜಗತ್ತಿಗೆ ವಿವರಿಸುವ ಪುಣ್ಯಕಾರ್ಯದ ದೀಕ್ಷಾದಕ್ಷರು. ಭಕ್ತಿ ವೈರಾಗ್ಯಗಳೊಂದಿಗೆ ಜ್ಞಾನವನ್ನೂ ಸಮನ್ವಯಿಸಿಕೊಂಡ ತಪೋನಿರತರು. ಅಂಥ ಶ್ರೇಷ್ಠ ಸ್ಥಾನವನ್ನು ಬಯಸಿರುವ ನೀನು ಈಗ ಅಥವಾ ಈ ಮೊದಲು ಎಂದಾದರೂ ನಿನಗೆ ಉದಯಿಸಿದ್ದ ತತ್ವ ಸಿದ್ಧಾಂತ ಪ್ರಮೇಯಗಳ ಬಗೆಗಿನ ಸಂಶಯಗಳು ಏನಿದ್ದರೂ ಕೇಳು. ಅಂಕಿತ ಪಡೆಯುವ ಪೂರ್ವಭಾವಿಯಾಗಿ ಸಂಶಯಗಳೆಲ್ಲಾ ನಿವಾರಣೆಯಾಗಿರಬೇಕು".

ಅಣ್ಣನ ಆಣತಿಗೆ ತಮ್ಮ ವಿನಂತಿಸಿದ. "ಬಿಂಬದರ್ಶನವಾದ ಮೇಲೆ ಅಪರೋಕ್ಷ ಜ್ಞಾನ ತಾನೇ ತಾನಾಗಿ ಸಿದ್ಧಿಸುತ್ತದೆ. ಅದು ಸಿದ್ಧಿಸಿದ ಮೇಲೆ ಸಂಶಯಗಳೇ ಉಳಿಯುವುದಿಲ್ಲ. ಆದರೂ ಲೋಕದೃಷ್ಟಿಯಿಂದ ಈಗಲೇ ಕೆಲವು ಪ್ರಶ್ನೆಗಳನ್ನು ಕೇಳಬೇಕೆನಿಸುತ್ತಿದೆ. ಹಾಗೆಯೇ ಕೇಳಲೇಬೇಕೆಂದು ನೀವೂ ಒತ್ತಾಯಿಸುತ್ತಿದ್ದೀರಿ. ನಿಮ್ಮ ಜೀವನ ರೀತಿಯ ಬಗ್ಗೆಯೇ ಒಂದು ಪ್ರಶ್ನೆ...

ರಂಗಣ್ಣನು ಪ್ರಶ್ನಿಸಲು ಪ್ರಾರಂಭಿಸಿದೊಡನೆಯೇ ಗೋಪಾಲದಾಸರಿಗೆ ಆನಂದವಾಗಿ ಹೋಯಿತು.

ತಿಳಿಯಬೇಕೆಂಬ ತವಕವೇ ಅಭಿವೃದ್ಧಿಯ ದ್ಯೋತಕ. ತಿಳಿವೇ ಬೆಳಕು, ಬೆಳಕು ಪಡೆಯ ಬಯಸುವ ಜೀವಿಗಳಿಗೆ ಮಾತ್ರ ನಾನಾ ಪ್ರಶ್ನೆಗಳು ಉದ್ಭವವಾಗುತ್ತವೆ. ಅಂಥವರ ಪ್ರಶ್ನೆಗಳಲ್ಲಿ ತಿಳಿಯುವ ತವಕವಿರುತ್ತದಾಗಲೀ ತಲೆಹರಟೆಯ ಪ್ರತಿಷ್ಠೆ ಇರುವುದಿಲ್ಲ. ತಿಳಿಯುವ ತವಕ, ತಲೆ ಪ್ರತಿಷ್ಠೆಗಳು ಸಂಪೂರ್ಣ ಭಿನ್ನಭಿನ್ನ ಕೋನಗಳು.

ರಂಗಣ್ಣನ ಪ್ರಶ್ನೆಗಳಲ್ಲಿ ತಿಳಿಯುವ ತವಕವಿರುತ್ತದಾಗಲಿ, ಅರ್ಥ ಬೇಕಿಲ್ಲದಿದ್ದರೂ ಬುದ್ಧಿವಂತಿಕೆ ಪ್ರದರ್ಶಿಸುವ ಒಣ ಪ್ರತಿಷ್ಠೆ ಇರುವುದಿಲ್ಲವೆಂದು ಗೋಪಾಲದಾಸರಿಗೆ ಸಂಪೂರ್ಣ ಗೊತ್ತಿತ್ತು.

ರಂಗಣ್ಣ ಪ್ರಶ್ನಿಸಿದ.

"ಜಗತ್ತಿನ ಜೀವಿಗಳೆಲ್ಲಾ ಒಂದು. ಅವರಲ್ಲಿ ಪರಸ್ಪರ ಭೇದ ಮಾಡಬಾರದು ಎಂಬ ಸಿದ್ಧಾಂತ ಹೆಚ್ಚುತ್ತಿರುವ ಈ ಕಾಲದಲ್ಲಿ ಎಲ್ಲರೂ ಬೇರೆ ಬೇರೆ ಎಂದು ಹೇಳುವ ತತ್ವ ಲೋಕ ವಿರೋಧಿಯಲ್ಲವೆ?"

ಮೆಚ್ಚಿದರು ಗೋಪಾಲದಾಸರು. ರಂಗಣ್ಣನ ಬೆನ್ನು ತಟ್ಟಿ ಹೇಳಿದರು

"ಇದು ನಿನ್ನ ಪ್ರಶ್ನೆಯಲ್ಲ. ಆದರೂ ಈ ಪ್ರಶ್ನೆಗೆ ಹೇಗೆ ಉತ್ತರಿಸಬೇಕು ಎಂದು ತಿಳಿಯುವ ಆಪೇಕ್ಷೆ ನಿನ್ನದು. ಮೆಚ್ಚಿಕೊಂಡೆ ನಿನ್ನ ಪ್ರಶ್ನೆಯ ಧಾಟಿಗೆ. ನಿನ್ನಂಥವರೆ ಜಗತ್ತಿಗೆ ಸರಿಯಾದ ತತ್ವದರ್ಶನ ಮಾಡಿಸುತ್ತಾರೆ" ಎಂದು ಪ್ರಶಂಸಿಸಿದ ಗೋಪಾಲದಾಸರು ಬಿಡಿಸಿಬಿಡಿಸಿ ಅದಕ್ಕೆ ಉತ್ತರಿಸಿದರು.

"ಭೇದ ಅಥವಾ ತಾರತಮ್ಯ ಎನ್ನುವ ಪ್ರಮೇಯ ಬಹುಜನರ ತಪ್ಪು ಕಲ್ಪನೆಗೆ ಕಾರಣವಾಗಿದೆ ರಂಗಣ್ಣಾ. ಜೀವಜೀವಕ್ಕೂ ಭೇದ ಎಂದು ಹೇಳಲಾಗಿದೆಯೇ ವಿನಹ ಜಾತಿ ಜಾತಿಗೂ ಭೇದ ಎಂದು ಕಚ್ಚಾಟಕ್ಕೆ ಎತ್ತಿ ಕಟ್ಟಿಲ್ಲ. ಇಂದು ಜಾತಿ ಜಾತಿಗಳು ಕಚ್ಚಾಡುತ್ತಿವೆ. ಗುಂಪುಗುಂಪುಗಳು ಸೆಣೆಸಾಡುತ್ತಿವೆ. ಆದರೆ ಅವರು ಹೇಳುತ್ತಾರೆ. ಎಲ್ಲರೂ ಒಂದು ಎಂದು. ಗುಂಪು ಕಟ್ಟುವ ಕ್ಷುದ್ರ, ಉದ್ದೇಶಕ್ಕೆ ನಿರ್ಮಾಣವಾದುದಲ್ಲ ಈ ತತ್ವವಾದ. ಎಲ್ಲರೂ ಬೇರೆಬೇರೆ ಎಂಬ ಜಗತ್ತಿನ ಸತ್ಯವನ್ನು ಹೊರಗೆಡವಿದ ಶ್ರೀಮದಾಚಾರ್ಯರು ವ್ಯಕ್ತಿಯ ಮೂಲಕ್ಕೆ ಹೋದರು. ನಿನ್ನ ಶಕ್ತಿ ಬೇರೆ. ಅವನ ಶಕ್ತಿ ಬೇರೆ. ಪ್ರತಿಯೊಬ್ಬರಿಗೂ ಪ್ರತ್ಯೇಕ ಅಸ್ತಿತ್ವವಿದೆ ಎನ್ನುವ ತತ್ವದಲ್ಲಿ ವ್ಯಕ್ತಿಯ ಆತ್ಮವಿಶ್ವಾಸ ಅರಳುತ್ತದೆ. ಬೇರಬೇರೆ ಎಂದು ಹೇಳಿದ ಮಾತ್ರಕ್ಕೆ ಅದು ಒಡಕು ಎಂದೇಕೆ ಭಾವಿಸಬೇಕು? ನೀನು ಬೇರೆ, ನಿನ್ನ ಹೆಂಡತಿ ಬೇರೆ ಎಂದು ಹೇಳಿದರೆ ಅದು ಭೇದವನ್ನು ಹೇಳಿದಂತಾಗುವುದಿಲ್ಲ. ತಾಯಿ ಬೇರೆ ಹೆಂಡತಿ ಬೇರೆ ಎಂದು ತಿಳಿಸಿದರೆ ಅವರಲ್ಲಿ ವೈಮನಸ್ಯ ಬೆಳೆಸಿದಂತಾಗುತ್ತದೆಯೇ? ನಿಷ್ಕರ್ಷೆಯಾಗಿ ತಿಳಿಸಿದಂತೆಂದು ಏಕೆ ಭಾವಿಸಬಾರದು? ಪ್ರತಿ ವ್ಯಕ್ತಿಯೂ ಬೇರೆಬೇರೆ ಎನ್ನುವ ನಿತ್ಯ ಕಾಣುವ ಸತ್ಯದ ಬಗ್ಗೆ ಏಕೆ ಜಿಜ್ಞಾಸೆ ಹುಟ್ಟುತ್ತದೆಯೋ ನನಗೆ ಅರ್ಥವಾಗುತ್ತಿಲ್ಲ. ವ್ಯಕ್ತಿಗಳು ಬೇರೆ ಬೇರೆಯೆಂದ ಮಾತ್ರಕ್ಕೆ ಸಮಷ್ಟಿ ಜೀವನಕ್ಕೆ ಎಲ್ಲಿದೆ ಬಾಧಕ? ಎಲ್ಲರೂ ಒಂದು ಎಂದು ಹೇಳುವ ಜನಗಳ ಜೀವನ ಒಳಹೊಕ್ಕು ನೋಡು. ಹೇಳುವುದೇ ಬೇರೆ. ಮಾಡುವುದೇ ಬೇರೆ. ಗುಂಪು ಕಟ್ಟಲು ಎಲ್ಲರೂ ಒಂದು ಎಂದು ಹೇಳಬಹುದೇ ಆಗಲೀ ಅವರೆಲ್ಲರೂ ಒಂದೇ ಆಗಲು ಸಾಧ್ಯವಿಲ್ಲ. ವ್ಯಕ್ತಿಗಳು ಬೇರೆ ಬೇರೆ. ಜೀವಿಗಳು ಬೇರೆ ಬೇರೆ. ಅವರ ಶಕ್ತಿಯ ಮಟ್ಟವೂ ಬೇರೆ

ಬೇರೆ. ಭಾಗಶಃ ಉದಾಹರಣೆಗೆ ಹೇಳುವುದಾದರೆ ಉಪ್ಪಿನ ಸ್ವಭಾವವೇ ಬೇರೆ. ಖಾರದ ಗುಣವೇ ಬೇರೆ ಹಾಗೆಯೇ ಹುಳಿ, ಸಿಹಿ ಪ್ರತಿಯೊಂದಕ್ಕೂ ಪ್ರತ್ಯೇಕ ಸ್ವಭಾವ. ಅವೆಲ್ಲವನ್ನೂ ಸೂಕ್ತವಾಗಿ ಕಲಿಸಿದಾಗಲೇ ರುಚಿಯಾದ ಪಾಕ". ಗೋಪಾಲದಾಸರು ಇನ್ನೂ ಹೇಳುತ್ತಿದ್ದರು. ಅಷ್ಟರಲ್ಲಿಯೇ ರಂಗಣ್ಣ ಅದರ ಆಳಕ್ಕೆ ಇಳಿದುಬಿಟ್ಟಿದ್ದ.

"ವ್ಯಕ್ತಿಗಳನ್ನು ಸಣ್ಣವರಂತೆ ಕಾಣುವ ಪ್ರವೃತ್ತಿ ಅಥವಾ ಬೇರೆಯವರನ್ನು ಹಗುರವಾಗಿ ಕಾಣುವ ಸ್ವಭಾವ ಇದರಿಂದ ಬೆಳೆಯುವುದಿಲ್ಲವೆ?"

"ಹಾಗೆ ಬೆಳಸಿಕೊಂಡರೆ ಅದು ಅವರ ಅಜ್ಞಾನ. ಎಲ್ಲರೂ ಬೇರೆಬೇರೆ ಎಂದು ಹೇಳುವ ತತ್ವದರ್ಶನದಲ್ಲಿಯೇ ಎಲ್ಲರಲ್ಲಿಯೂ ಪರಮಾತ್ಮ ಬಿಂಬರೂಪಿ ಯಾಗಿದ್ದಾನೆ ಎಂಬ ಸತ್ಯ ಸಾರುತ್ತಿದೆ. ಪರಮಾತ್ಮನ ಅವತಾರ ರೂಪಗಳಲ್ಲಿ ಭೇದವೆಣಿಸಿದರೆ ಮಹಾಪಾಪ ಎಂಬ ಎಚ್ಚರಿಕೆ ನೀಡಿದೆ. ಕೇವಲ ಮಾನವ ಸಮೂಹದಲ್ಲಲ್ಲ. ಇಡೀ ಪ್ರಾಣಿಕೋಟಿಯಲ್ಲಿಯೇ ಪರಮಾತ್ಮನನ್ನು ಕಂಡು ಗೌರವಿಸು ಎಂದು ಇದರಿಂದ ಹೇಳಿದಂತಾಗುವುದಿಲ್ಲವೆ?"

ಗೋಪಾಲದಾಸರು ವಿವರಿಸುತ್ತಿದ್ದಂತೆ ಅಲ್ಲಿಗೆ ಸೀನಣ್ಣ ದಾಸಣ್ಣರೂ ಬಂದು ಸೇರಿದರು. ರಂಗಣ್ಣ ತನ್ನ ಪ್ರಶ್ನೆಯ ಧಾಟಿಯನ್ನು ಬದಲಾಯಿಸಿ ಸಾಹಿತ್ಯದೆಡೆಗೆ ತಿರುಗಿದ.

"ಪರಮತ ಖಂಡನೆ ನಿಮ್ಮ ಹಾಗೂ ನಿಮ್ಮ ಗುರುಗಳಾದ ವಿಜಯದಾಸರ ಸಾಹಿತ್ಯದಲ್ಲಿ ಬಹಳ ಬಿರುಸಿನಿಂದ ಬಂದಿದೆ. ಇದು ಬೇರೆಯವರ ಭಾವನೆಗಳಿಗೆ ಏಟು ಕೊಟ್ಟಂತಲ್ಲವೆ? ನಿಮ್ಮ ದೃಷ್ಟಿ ಸಂಕುಚಿತ ಎನಿಸುವುದಿಲ್ಲವೆ?"

"ಅನಿಸಬಾರದು. ನಾವು ಖಂಡಿಸುವುದು ಇನ್ನೊಂದು ತತ್ವವನ್ನೇ ಆಗಲೀ ವ್ಯಕ್ತಿಗಳನ್ನಲ್ಲ ನಾವು ಸಂಪೂರ್ಣ ನಂಬಿದ ಒಂದು ವಿಷಯವನ್ನು ಹೇಳುವಾಗ ಹೊಮ್ಮುವ ಆತ್ಮವಿಶ್ವಾಸವಷ್ಟೇ ಆ ಧೋರಣೆ. ಇಷ್ಟ ದೈವದ ಸ್ತುತಿ, ಇಷ್ಟತತ್ವದ ನಿಷ್ಠೆ ತೋರದ ಆಧ್ಯಾತ್ಮಿಕ ಸಾಹಿತ್ಯ ಎಲ್ಲಿದೆ ತೋರಿಸಬಲ್ಲೆಯಾ? ಮುಂದೆ ಮುಂದೆ ಈ ಛಲ ಅಷ್ಟು ಅವಶ್ಯ ಎನಿಸಲಿಕ್ಕಿಲ್ಲ. ಏಕೆಂದರೆ ಆಧ್ಯಾತ್ಮದ ನಿಷ್ಠೆಯೇ ಇಲ್ಲದ ಜನಗಳು ಹೆಚ್ಚಿಬಿಡುತ್ತಾರೆ. ನಡೆಯಲು ಬಾರದವನಿಗೆ ದಾರಿ ತೋರುವ ಕೆಲಸವಾದರೂ ಏಕೆ? ಗಮ್ಯವಿಟ್ಟುಕೊಂಡು ನಡೆಯುತ್ತಿರುವವರಿಗೆ ಇದು ಸರಿದಾರಿ ಎಂದು ತೋರುವುದಕ್ಕಾಗಿ ಕೈ ಎತ್ತಿ ಹೇಳಬೇಕಾಗುತ್ತದೆ. ಬೇರೆ ದಾರಿ ನಡೆದು ಬಳಲ ಬೇಡಿ ಎಂದು ಎಚ್ಚರಿಸಬೇಕಾಗುತ್ತದೆ. ಆದರೆ ನಡಿಗೆಯನ್ನು ಕಲಿಯುತ್ತಿರುವ ಮಗುವಿಗೆ ಮಾರ್ಗದ ಬಗ್ಗೆ ಉಪದೇಶ ಅವಶ್ಯವಿಲ್ಲ. ಧರ್ಮದ ಬಗ್ಗೆ ಶ್ರದ್ಧೆ ಇಲ್ಲದ

ಜನಗಳು ಹೆಚ್ಚಾದಾಗ - ಆಗ - ಸ್ವತತ್ವ ನಿಷ್ಠಾಭಿವ್ಯಕ್ತಿ ಸ್ವಲ್ಪ ಸಡಿಲಗೊಂಡರೆ ಅದರಿಂದೇನೂ ಬಾಧಕವಿಲ್ಲ. ಮುಂದೆ ಕಾಲ ಹೇಗೆ ಬರುತ್ತದೆ ಎನ್ನುವ ಚರ್ಚೆ ಈಗ ಬೇಡ. ಈ ಕಾಲದಲ್ಲಿ ಜನರಿಗೆ ಧರ್ಮದ ಬಗ್ಗೆ ಶ್ರದ್ಧೆಯಿದೆ. ಸನ್ಮಾರ್ಗದಲ್ಲಿ ನಡೆಯುವ ಕಳಕಳಿಯಿದೆ. ಅಂಥವರಿಗಾಗಿ ನಾವು ಕಂಡ ಸತ್ಯವನ್ನು ನಿರ್ಭಿಡೆಯಾಗಿ ಹೇಳುತ್ತಿದ್ದೇವೆ. ಇವರಿಂದ ಸಂಕುಚಿತ ಎನ್ನುವ ಶಬ್ದಕ್ಕೆ ಅರ್ಥವೇ ಇಲ್ಲ. ಹೆಂಡತಿಯನ್ನು ತೋರಿಸಿ ಇವಳು ನನ್ನ ಹೆಂಡತಿ, ತಾಯಿಯನ್ನು ತೋರಿಸಿ ಇವಳು ನನ್ನ ತಾಯಿ ಎಂದು ಸ್ಪಷ್ಟವಾಗಿ ಹೇಳಿದರೆ ಅದು ಮತಛಲವೆನಿಸುವುದಿಲ್ಲ. ಹೇಳುವುದರಲ್ಲಿ ನಿರ್ದಿಷ್ಟತೆ ಅಥವಾ ಸ್ಪಷ್ಟತೆ ಎಂದಷ್ಟೇ ತಿಳಿದುಕೊಂಡರೆ ಸಾಕು. ಈ ಕಾಲಕ್ಕೆ ಬೇಕಾದ ರೀತಿಯಲ್ಲಿ ಈ ಕಾಲದ ಶೈಲಿಯಲ್ಲಿ ನಾವು ಹೇಳಿದ್ದೇವೆ. ಮುಂದೆ ಮುಂದೆ ನೀವು ಶೈಲಿ ಬದಲಾಯಿಸಿಕೊಳ್ಳಬಹುದು."

"ಹಾಗಾದರೆ ಮುಂದೆ ತತ್ವಛಲ ಕಡಿಮೆಯಾಗುತ್ತದೆಯೆ?"

"ಛಲ ಎನ್ನುವ ಪದವೇ ಸಲ್ಲದು ರಂಗಣ್ಣಾ. ಮುಂದೆ ಏನಾಗುತ್ತದೆ ಎನ್ನುವ ವಿಷಯಕ್ಕೆ ಈಗಲೇ ತಲೆ ಕೆಡಿಸಿಕೊಳ್ಳಬೇಡ. ತತ್ವವಾದ ಎನ್ನುವುದು ಎಂದೂ ಬದಲಾಗುವುದಿಲ್ಲ ಬದಲಾಗುವಂಥ ವಿಷಯಗಳನ್ನು ಹೇಳಿದವರಲ್ಲ ನಮ್ಮ ಶ್ರೀಮದಾಚಾರ್ಯರು. ಕಾಲ ಬದಲಾಯಿತು ಎನ್ನುತ್ತೇವೆ. ಅಂದರೆ ಸೂರ್ಯ ಬದಲಾಗಿದ್ದಾನೆಯೇ? ಚಂದ್ರ ಬೇರೆಯಾಗಿದ್ದಾನೆಯೇ? ಆಕಾಶ ಬದಲಾಗಿದೆಯೇ? ಕಾಲ ಗತಿಸಿತು. ಹೊಸಕಾಲ ಬಂದಿತು. ಆದರೆ ಸೂರ್ಯಚಂದ್ರ ನಕ್ಷತ್ರ ಭೂಮಿ ಎಲ್ಲಾ ಅವೆ. ಹಾಗೆಯೇ ತತ್ವ ಬದಲಾಗುವುದಿಲ್ಲ. ಕೆಲವು ಆಚಾರಗಳು ಬದಲಾಗಬಹುದು. ಹೇಳುವ ಧಾಟಿ ಬದಲಾಗಬಹುದು. ಪ್ರತಿಪಾದಿಸುವ ರೀತಿ ಭಿನ್ನವಾಗಬಹುದು. ಬಹುದು ಏನು? ಬದಲಾಗಲೇಬೇಕು" ಗೋಪಾಲದಾಸರು ಹೇಳಿದರು.

ಹೀಗೆ ಪ್ರತಿನಿತ್ಯ ಒಂದೊಂದು ರೀತಿಯ ಪ್ರಶ್ನೆ. ಎಲ್ಲಕ್ಕೂ ಗೋಪಾಲದಾಸರು ವಿವರಿಸುತ್ತಿದ್ದರು. ತಮ್ಮನ ಜ್ಞಾನದಾಹ ಕಂಡು ಅಣ್ಣನಿಗೆ ಆನಂದ. ಉದಾಹರಣೆಗಳೊಂದಿಗೆ ಮನದಟ್ಟಾಗಿಸುವ ಅಣ್ಣನ ಜ್ಞಾನ ಮಟ್ಟ ಕಂಡು ತಮ್ಮನಿಗೆ ಬೆಳಕು ಪಡೆದ ತೃಪ್ತಿ.

ಸಿದ್ಧಾಂತ ಪ್ರಮೇಯಗಳ ಬಗ್ಗೆ ತಮ್ಮನಿಗೆ ಸಾಕಷ್ಟು ತಿಳಿ ಹೇಳಿದ ಗೋಪಾಲದಾಸರು ಮಾನಸಿಕ ಪೂಜಾವಿಧಾನ, ವ್ಯಾಪ್ತ್ಯೋಪಾಸನೆ ಸರ್ವತ್ರ ವ್ಯಾಪ್ತನಾದ ನಿತ್ಯತೃಪ್ತನನ್ನು ಹೃದಯಾಂತರ್ಗತ ರೂಪದೊಂದಿಗೆ ಮಾಡಬೇಕಾದ

ಐಕ್ಯ ಚಿಂತನೆ ಮೊದಲಾದವುಗಳ ಬಗ್ಗೆ ಹೇಳಿಕೊಟ್ಟು ಈ ಹಂತಗಳನ್ನು ನೀನು ಸಾಧಿಸು. ಶೀಘ್ರದಲ್ಲಿಯೇ ನಿನಗೂ ಬಿಂಬದರ್ಶನ ಮಾಡಿಸಿ ಅಂಕಿತ ನೀಡುತ್ತೇನೆ" ಎಂದು ಆಶೀರ್ವದಿಸಿದರು.

ಒಂದು ದಿನ ಇದ್ದಕ್ಕಿದ್ದಂತೆ ಗೋಪಾಲದಾಸರು ಚಿಪ್ಪಗಿರಿಗೆ ಕೂಡಲೇ ಪ್ರಯಾಣಿಸಲು ಎಲ್ಲಾ ತಮ್ಮಂದಿರಿಗೆ ಅವಸರಿಸಿದಾಗ ರಂಗಣ್ಣ ಕಾರಣವನ್ನು ವಿಚಾರಿಸಿದ.

ಹತ್ತಿಪ್ಪತ್ತು ಜನರಿಗೆ ಬಿಂಬದರ್ಶನ ಮಾಡಿಸಿ ಅಂಕಿತ ನೀಡುವುದರ ಮೂಲಕ ಹರಿದಾಸ ಸಾಹಿತ್ಯ ಸತತವಾಗಿ ವರ್ಧಿಸಲು ಕಾರಣರಾದವರೇ, ನಮ್ಮ ಗುರುಗಳಾದ ವಿಜಯದಾಸರು. ಈ ಶತಮಾನದಲ್ಲಿಯೇ ಇಂಥವರು ಇನ್ನೊಬ್ಬರು ಉದಯಿಸಿಲ್ಲ. ಈ ಶ್ರೇಷ್ಠ ಚೇತನ ತನ್ನ ಅವತಾರ ಕಾರ್ಯ ನಿರ್ವಹಿಸಿ ಈಗ ಪುನಃ ಪರಮಾತ್ಮನ ಬಳಿ ಧಾವಿಸಲು ನಿರ್ಧರಿಸಿದೆ. ಅವರ ಅಂತಿಮಕಾಲದಲ್ಲಿ ನಾವೆಲ್ಲಾ ಅವರ ಬಳಿಯೇ ಇರೋಣ" ಎಂದು ಗೋಪಾಲದಾಸರು ನುಡಿದರು.

ಎಲ್ಲರೂ ಚಿಪ್ಪಗಿರಿಗೆ ಅವಸರವಸರವಾಗಿ ಪ್ರಯಾಣಿಸಿದರು.

ನವಮಿಯ ದಿನ ಚಿಪ್ಪಗಿರಿ ಸೇರಿ ಶ್ರೀ ವೇಣುಗೋಪಾಲನ ಸನ್ನಿಧಿಯಲ್ಲಿ ಕುಣಿಯುತ್ತಾ ಭಜನೆಯಲ್ಲಿ ನಿರತರಾಗಿದ್ದ ಗುರುಗಳ ದರ್ಶನ ಪಡೆದರು.

ಎಲ್ಲರನ್ನೂ ನಗುಮುಖದಿಂದ ಸ್ವಾಗತಿಸಿದ ವಿಜಯದಾಸರು ಗೋಪಾಲ ದಾಸರನ್ನು ಮಾತ್ರ ಪ್ರತ್ಯೇಕವಾಗಿ ದೂರ ಕರೆದುಕೊಂಡು ಹೋಗಿ ಶಿಷ್ಯನೊಂದಿಗೆ ಆತ್ಮೀಯವಾಗಿ ಮಾತನಾಡತೊಡಗಿದರು.

"ನಾಳೆಯೇ ಈ ಅಧಿಷ್ಠಾನದ ಕೊನೆಯ ದಿನ. ಎಪ್ಪತ್ತು ಮೂರು ವರ್ಷಗಳಾಗಿರುವ ಈ ಶರೀರಕ್ಕೆ ಇನ್ನು ಹೆಚ್ಚು ಹೊರೆ ಹಾಕುವುದು ಬೇಡ. ವೃದ್ಧನಾಗಿರುವ ನನ್ನ ಬಗ್ಗೆ ಅಷ್ಟು ಯೋಚಿಸುವ ಅಗತ್ಯವಿಲ್ಲ. ಗುರುಗಳಾದ ಪುರಂದರದಾಸರು ನನಗೆ ಒಪ್ಪಿಸಿದ ಕಾರ್ಯವನ್ನು ಸಂಪೂರ್ಣವಾಗಿ ನಿರ್ವಹಿಸಿದ್ದೇನೆ. ಉಳಿದ ಕಾರ್ಯವನ್ನು ಮುಂದುವರಿಸಿಕೊಂಡು ಹೋಗಲು ನೀವೆಲ್ಲಾ ಶಿಷ್ಯರಿದ್ದೀರಿ. ಆದರೆ ಭಾಗಣ್ಣಾ ಶಿಷ್ಯರಲ್ಲಿ ಶ್ರೇಷ್ಠ ಶಿಷ್ಯ ನೀನು. ಚಿಕ್ಕವಯಸ್ಸಿನಲ್ಲಿಯೇ ಗಾಯತ್ರಿ ಮಂತ್ರ ಸಿದ್ಧಿಗಳಿಸಿದ ಭಕ್ತ ಶ್ರೇಷ್ಠ ನೀನು. ಸುಜೀವಿಗಳಿಗೆ ಮಾರ್ಗ ತೋರುವ ಸಾಹಿತ್ಯರಾಶಿ ನಿನ್ನಿಂದ ನಿರ್ಮಾಣವಾಗಿದೆ. ನಿನ್ನಿಂದ ಇನ್ನೂ ಹೆಚ್ಚು ಹರಿದಾಸ ಸಾಹಿತ್ಯ ನಿರ್ಮಾಣವಾಗಬೇಕಿತ್ತು. ಆದರೆ ನಿನಗೆ ಹೆಚ್ಚು

ಆಯುಷ್ಯ ಉಳಿದಿಲ್ಲ. ಅದಕ್ಕಾಗಿ ನೀನು ವ್ಯಥೆ ಪಡಬೇಕಾದ ಕಾರಣವೂ ಇಲ್ಲ. ನಿನ್ನೆಲ್ಲಾ ಶಕ್ತಿಯನ್ನು ನಿನ್ನ ಶಿಷ್ಯನಾದ ಜಗನ್ನಾಥದಾಸರಲ್ಲಿ ತುಂಬಿರುವೆ. ಆತನಿಂದ ಶ್ರೇಷ್ಠ ಕಾರ್ಯಗಳಾಗುತ್ತವೆ. ನಿನಗಿನ್ನು ಐದಾರು ವರ್ಷಗಳ ಕಾಲ ಮಾತ್ರ ಆಯುಷ್ಯ. ಈ ಅಲ್ಪಾವಧಿಯಲ್ಲಿಯೇ ನಿನ್ನಿಂದ ಶ್ರೇಷ್ಠ ಕಾರ್ಯವಾಗಬೇಕು. ನಾನು ಶಬ್ದಗಳಲ್ಲಿ ಬಿಚ್ಚಿಟ್ಟಿರುವ ಶರೀರದ ಅಂತರ್‌ದರ್ಶನ ಅದರಲ್ಲಿ ವಿವಿಧ ದೇವತೆಗಳ ಸ್ಥಾನ, ತದ್ಗತವಾದ ಪರಮಾತ್ಮನ ರೂಪಗಳು ಇವೆಲ್ಲವನ್ನೂ ನೀನು ಚಿತ್ರಗಳಲ್ಲಿ ಬಿಡಿಸಿಡುವ ಕಾರ್ಯ ಪ್ರಾರಂಭಿಸು. ಧ್ಯಾನೋಪಾಸನೆಗೆ ಅವಶ್ಯವೆಂದು ಕಂಕಣಾಕಾರ ಸುಳಾದಿ ಮೊದಲಾದವುಗಳನ್ನು ನಾನು ರಚಿಸಿದ್ದೇನಷ್ಟೇ? ಶಬ್ದಗಳಲ್ಲಿ ಸಂಕ್ಷಿಪ್ತ ವಾಗಿ ಅದಕ್ಕಿಂತ ಬಿಡಿಸಿ ಹೇಳುವುದು ಸಾಧ್ಯವಿಲ್ಲ. ಬಹಳ ಜನರಿಗೆ ಅವು ಅರ್ಥ ವಾಗಲಿಕ್ಕಿಲ್ಲ. ಸಾಧಿಸುತ್ತಾ ಹೋದವರಿಗೆ ಮಾತ್ರ ಅವು ಒಂದೊಂದಾಗಿ ಅರ್ಥ ವಾಗುತ್ತಾ ಹೋಗುತ್ತವೆ. ನೀನು ನನಗಿಂತ ಸ್ವಲ್ಪ ಮುಂದುವರಿಯಬೇಕು. ನಾನು ಶಬ್ದಗಳಲ್ಲಿ ಹೇಳಿದ್ದನ್ನು ನೀನು ಚಿತ್ರಗಳ ಮೂಲಕ ಬರೆದು ಸಾಧನಾ ಸುಜೀವಿಗಳಿಗೆ ದಾರಿದೀಪ ಹಚ್ಚಿಡು. ಸಾಧಕರಿಗೆ ನಿನ್ನ ಚಿತ್ರಗಳು ಮಾರ್ಗದರ್ಶಿಯಾಗಿರುತ್ತವೆ. ಹಾಗೆಂದು ನೀನು ಬರೆದಿಡುವ ಚಿತ್ರಗಳೆಲ್ಲಾ ಶಾಶ್ವತವಾಗಿರುತ್ತವೆಂದು ನಾನು ಹೇಳುತ್ತಿಲ್ಲ. ಅವೂ ಕಾಲರಾಯನ ಗರ್ಭದಲ್ಲಿ ಮರೆಯಾಗುತ್ತವೆ. ಅಷ್ಟರಲ್ಲಿ ಕೆಲವು ಸುಜೀವಿಗಳು ಅವನ್ನು ಗ್ರಹಿಸಿ ಮುಂದಿನ ಜನಾಂಗಕ್ಕೆ ತಮ್ಮ ರೀತಿಯಲ್ಲಿ ಅದನ್ನೇ ಹೇಳುತ್ತಾರೆ. ಚಿತ್ರರಚನೆ ಕ್ಲಿಷ್ಟ ಸಂಗತಿಯೇ ಹೌದು. ಆದರೆ ಮನಕ್ಕೆ ಸುಲಭವಾಗಿ ನಾಟಲು ಅದು ಶ್ರೇಷ್ಠ ಮಾಧ್ಯಮವೂ ನಿಜ. ಸಾಧನೆ ಮಾಡಬೇಕಾದ ರೀತಿಗಳು, ಆಗ ಸಿಕ್ಕುವ ವಿವಿಧ ಮಜಲುಗಳನ್ನು ನಾನು ನೀನು ಹಾಗೂ ಇತರರು ಹೇಳಿರುವ ಪದ ಪದ್ಯ ಉಗಾಭೋಗ ಸುಳಾದಿಗಳಲ್ಲಿ ವಿವರಿಸಿದ್ದೇವೆ. ಅವುಗಳು ಸಂಪೂರ್ಣ ಅರ್ಥವಾಗಬೇಕಾದರೆ ನಿನ್ನ ಚಿತ್ರಗಳನ್ನು ಮೊರೆ ಹೋಗಬೇಕು. ನಿನ್ನ ಚಿತ್ರಗಳು ಅರ್ಥವಾಗಬೇಕಾದರೆ ದಾಸ ಸಾಹಿತ್ಯವನ್ನೇ ಅವಲಂಬಿಸಬೇಕು. ಒಂದನ್ನು ಬಿಟ್ಟು ಒಂದಿಲ್ಲ ಒಂದಕ್ಕೊಂದು ಪೂರಕ. ಒಂದಕ್ಕೆ ಮತ್ತೊಂದು ದರ್ಶನ. ಹಾಗೆಯೇ ನೀನಿಲ್ಲದಲ್ಲಿ ನಾನಿಲ್ಲ. ನನ್ನನ್ನು ಬಿಟ್ಟು ನೀನಿಲ್ಲ. ನಿನ್ನ ಸ್ಮರಣೆ ಮಾಡಿದಲ್ಲಿ ನಾನಿರುತ್ತೇನೆ. ನೀನು ಕರುಣಿಸಿದವರನ್ನು ನಾನು ಅನುಗ್ರಹಿಸುತ್ತೇನೆ" ಎಂದು ಹೇಳಿ ಶಿಷ್ಯನನ್ನು ಆತ್ಮೀಯತೆಯಿಂದ ಅಪ್ಪಿಕೊಂಡು ಬಿಟ್ಟರು

ಮರುದಿನ ಮೊದಲೇ ಹೇಳಿದ ಘಳಿಗೆಯಲ್ಲಿ ವಿಜಯದಾಸರ ಚೇತನ ಶರೀರವನ್ನು ಬಿಟ್ಟಿತು.

***

ಗೋಪಾಲದಾಸರಿಗೆ ಎಲ್ಲವೂ ಗೊತ್ತಿತ್ತು. ಆದರೂ ಗುರುವಿನ ಅಗಲಿಕೆಯಿಂದ ಅವರಿಗಾದ ಪರಿಣಾಮ ವಿವರಿಸಲು ಅಸದಳ.

ಅವರೆಲ್ಲರೂ ಕೆಲವು ದಿನ ಚಿಪ್ಪಗಿರಿಯಲ್ಲಿದ್ದು ಉತ್ತನೂರಿಗೆ ಮರಳಿದರಾದರೂ ಅನಂತರ ಗೋಪಾಲದಾಸರು ಅತಿ ಹೆಚ್ಚು ಅಂತರ್‌ಮುಖಿಯಾಗಿ ಹೋದರು. ಮಾತು ಪೂರ್ತಿ ಕಡಿಮೆಯಾಗಿ ಹೋಯಿತು. ಯಾವಾಗಲೂ ಭಗವದ್ ಚಿಂತನೆ. ಎಲ್ಲೆಲ್ಲಿಯೂ ಆತನ ರೂಪದರ್ಶನವೆ.

ಒಮ್ಮೆ ಗೋಪಾಲದಾಸರು ಹಳ್ಳದ ಬಳಿ ಸ್ನಾನ ಮಾಡಿ ಕುಳಿತಿದ್ದರು. ಪಕ್ಕದ ಹಳ್ಳಿಯ ಒಬ್ಬ ಮಹಿಳೆ ತಂಬಿಗೆ ತುಂಬಾ ಹಾಲು ತಂದು ಕೊಟ್ಟು ಈ ದಿನ ಶ್ರೀ ವೆಂಕಟೇಶನಿಗೆ ಈ ಹಾಲಿನಿಂದ ಅಭಿಷೇಕ ಮಾಡಿ ಎಂದು ಪ್ರಾರ್ಥಿಸಿದಳು.

ಗೋಪಾಲದಾಸರು ಆಕೆಯನ್ನು ನೋಡಿದರು.

ಕುಳಿತ ಸ್ಥಳದಲ್ಲಿಯೇ ಆ ಹಾಲನ್ನು ಎತ್ತಿ ನಿಧಾನವಾಗಿ ಭೂಮಿಗೆ ಚೆಲ್ಲಿಬಿಟ್ಟರು.

ಹಾಲು ನೀಡಿದ ಮಹಿಳೆಗೆ ಇದು ಅಮಂಗಳ ಎಂದು ಭಾಸವಾಯಿತು. ತಾನು ನೀಡಿದ ಕ್ಷೀರ ಸಿರಿವಲ್ಲಭನ ಸ್ವೀಕಾರಕ್ಕೆ ಅರ್ಹವಾಗಿಲ್ಲವೇನೋ ಎಂದು ಹೌಹಾರಿದಳು.

ಆಕೆಯ ಕಣ್ಣಲ್ಲಿ ನೀರು ತುಂಬಿರುವುದನ್ನು ನೋಡಿ ಗೋಪಾಲದಾಸರು ಮೆಲ್ಲಗೆ ಎದ್ದು ಶ್ರೀ ವೆಂಕಟೇಶನ ಗುಡಿಗೆ ಬಂದರು. ಆಕೆ ಅವರನ್ನು ಅನುಸರಿಸಿ ಬಂದು ಶ್ರೀ ಸ್ವಾಮಿಯೆಡೆಗೆ ನೋಡಿದಳು.

ಏನಾಶ್ಚರ್ಯ!

ಸ್ವಾಮಿಗೆ ಕ್ಷೀರಾಭಿಷೇಕವಾಗಿತ್ತು.

ಬೇರೆ ಅಭಿಷೇಕಗಳಾವುವೂ ಆಗಿರಲಿಲ್ಲ. ಗುಡಿಯಲ್ಲಿ ಯಾರೂ ಇಲ್ಲ. ಪೂಜೆಯನ್ನು ಅರ್ಧಕ್ಕೆ ನಿಲ್ಲಿಸಿ ಹೋಗುವ ಹೀನಪದ್ಧತಿ ಎಂದೂ ಇಲ್ಲ. ಹಾಗಾದರೆ ಕ್ಷೀರಾಭಿಷೇಕ ಮಾಡಿದವರು ಯಾರು?

ಗೋಪಾಲದಾಸರು ಮರಳಲ್ಲಿ ಚೆಲ್ಲಿದ ಹಾಲು ಇಲ್ಲಿಯ ಮೂರ್ತಿಗೆ ಸಂದಾಯವಾಗಿತ್ತು. ಅವರ ಚಿಂತನೆಯಲ್ಲಿ ಮೂಡಿದ್ದ ಮೂರ್ತಿಗೆ ಅಭಿಷೇಕ ಮಾಡಿದ್ದರೆ ಇಲ್ಲಿ ಪ್ರತ್ಯಕ್ಷ ಮೂರ್ತಿಗೆ ಅಭಿಷೇಕವಾಗಿತ್ತು.

***

ಅಣ್ಣನಲ್ಲಿ ಇತ್ತೀಚಿಗಾದ ಅನೇಕ ಬದಲಾವಣೆಗಳನ್ನು ಸೀನಣ್ಣ ದಾಸಣ್ಣರು ಗಮನಿಸಿದರು. ಅವರು ಹೀಗೇಕೆ ಮಾಡುತ್ತಿದ್ದಾರೆ? ಮುಂದಿನ ಅವರ ನಿಲುವುಗಳೇನು? ತಮ್ಮಂದಿರಿಬ್ಬರು ಯೋಚಿಸಿದರು. ತಮಗಿಂತ ದೊಡ್ಡವರ ಭವಿಷ್ಯದ ಬಗ್ಗೆ ಅಂತರ್ ಚಕ್ಷುಗಳಿಂದ ನೋಡಬಾರದೆಂದು ಅಣ್ಣನವರು ಮೊದಲೇ ನಿರ್ದೇಶಿಸಿದ್ದರಿಂದ ಅವರು ನೋಡುವ ಹಾಗಿರಲಿಲ್ಲ.

ಒಮ್ಮೆ ಗೋಪಾಲದಾಸರು ಸುಮ್ಮನೆ ಕಣ್ಣು ಮುಚ್ಚಿ ಕುಳಿತಿದ್ದವರು ಇದ್ದಕ್ಕಿದ್ದಂತೆ ಎದ್ದು ಎರಡು ಕೈಗಳನ್ನು ಹೊಸಕಿ ಹೊಸಕಿ ಹಾಕಿದರು.

ಹಾಗೇತಕ್ಕೆ ಮಾಡಿದರು ತಮ್ಮ ಅಣ್ಣ? ಅಲ್ಲಿಯೇ ಕುಳಿತು ನೋಡುತ್ತಿದ್ದ ರಂಗಣ್ಣನಿಗೆ ಕುತೂಹಲ.

ದೂರದಿಂದಲೇ ಅಣ್ಣನ ಕೈಗಳನ್ನು ಪರೀಕ್ಷಿಸಿ ನೋಡಿದಾಗ ಅವುಗಳಲ್ಲಿ ಬೊಬ್ಬೆಗಳು ಎದ್ದಿರುವುದನ್ನು ಕಂಡಾಗಲಂತೂ ಆಶ್ಚರ್ಯವಾಗಿ ಹೋಯಿತು.

ತಮ್ಮನಲ್ಲಿ ಹುಟ್ಟಿದ ಸಂಶಯ ಗ್ರಹಿಸಿದ ಗೋಪಾಲದಾಸರು ಆತನನ್ನು ಕರೆದು ತಾವು ಹೊದ್ದಿದ್ದ ಶಾಲನ್ನು ಹೊದಿಸಿದರು.

ಆಗ ರಂಗಣ್ಣನಿಗೆ ಕಾರಣ ತಿಳಿಯಿತು. ಕಂಚಿಯಲ್ಲಿದ್ದ ಶ್ರೀ ವರದರಾಜ ಸ್ವಾಮಿ ಬಟ್ಟೆಗೆ ಪಕ್ಕದಲ್ಲಿದ್ದ ದೀಪದಿಂದ ಬೆಂಕಿ ಸೋಂಕಿತ್ತು. ಅದನ್ನು ಜ್ಞಾನದೃಷ್ಟಿಯಿಂದ ಕಂಡ ಗೋಪಾಲದಾಸರು ಇಲ್ಲಿ ಕುಳಿತೇ ಬೆಂಕಿ ಆರಿಸಿದ್ದರು. ಆಗ ಕೈಗಳನ್ನು ಹೊಸಕಿದ್ದರಿಂದ ಅಲ್ಲಿಯ ಬೆಂಕಿ ಇಲ್ಲಿಯ ಕೈಗಳಲ್ಲಿ ಬೊಬ್ಬೆ ಬರಿಸಿತ್ತು! ಇದನ್ನು ನೋಡಿದ ರಂಗಣ್ಣ ಅವಕ್ಕಾಗಿ ಹೋದ.

ತನ್ನಣ್ಣನವರು ದಿನದಿನಕ್ಕೂ ಗಾಢವಾದ ಚಿಂತನೆಯಲ್ಲಿ ಮುಳುಗಿ, ಆಧ್ಯಾತ್ಮ ಸಾಧನೆಯಲ್ಲಿ ಪೂರ್ತಿ ತನ್ಮಯಗೊಳ್ಳುತ್ತಿರುವುದನ್ನು ಕಂಡು ರಂಗಣ್ಣನಿಗೆ ಆನಂದದ ಜೊತೆಗೆ ಭೀತಿಯೂ ಉಂಟಾಯಿತು.

ಉದ್ಧಾರಕ್ಕಾಗಿ ತಾನು ಯಾಚಿಸಿದ್ದ ಬಿಂಬದರ್ಶನವಿನ್ನೂ ಆಗಿಲ್ಲ. ಮುಂದೆ ಮುಂದೆ ಅಣ್ಣನವರು ಮಾತನ್ನೇ ಬಿಟ್ಟು ಬಿಟ್ಟರೆ ತನಗೆ ದರ್ಶನ ನೀಡುವವರು ಯಾರು? ತಮ್ಮನಲ್ಲಿ ಅಂಕುರಿಸಿರುವ ಈ ಭೀತಿಯನ್ನು ಗಮನಿಸದೆ ಹೋಗಲಿಲ್ಲ ಗೋಪಾಲದಾಸರು.

ತಮ್ಮನ ತಲೆಯನ್ನು ಒಮ್ಮೆ ಪ್ರೀತಿಯಿಂದ ನೇವರಿಸಿ ಗೋಪಾಲದಾಸರು ಮಾತಿಗೆ ಪ್ರಾರಂಭಿಸಿದರು. "ರಂಗಣ್ಣಾ ಮಾತು ಆಡಲೇ ಬಾರದೆಂದೇನೂ ನಾನು ನಿರ್ಧರಿಸಿಲ್ಲ. ಆದರೆ ಮಾತು ಕಡಿಮೆ ಮಾಡಬೇಕು. ಜೀವನದ ಪ್ರಾರಂಭದೆಸೆಯಲ್ಲಿ ಬಿಟ್ಟರೆ ನನ್ನ ಜೀವನವೆಲ್ಲಾ ಸಮೂಹದಲ್ಲಿಯೇ ಸಾಗಿಬಿಟ್ಟಿದೆ. ಅದಕ್ಕಾಗಿ ಈಗ ಏಕಾಂತವಾಗಿ ಇರಲು ಬಯಸುತ್ತಿದ್ದೇನೆ. ಬಿಂಬದರ್ಶನಕ್ಕಾಗಿ ನೀನು ಪಡುತ್ತಿರುವ ಪರಿತಾಪ ನನಗೆ ಗೊತ್ತಿಲ್ಲದೆ ಇಲ್ಲ. ಶೀಘ್ರದಲ್ಲಿಯೇ ನಾನು ತಿರುಪತಿಗೆ ಹೋಗುತ್ತಿದ್ದೇನೆ. ಅಲ್ಲಿ ಸ್ವಾಮಿಗೆ ನಿವೇದಿಸಿ ಅನಂತರ ನಿನಗೆ ಬಿಂಬದರ್ಶನ ಮಾಡಿಸುವಂತೆ ಪ್ರೇರಣೆಯಾಗಿದೆ. ಅಲ್ಲಿಯವರೆಗೂ ನಾನು ಚಿತ್ರಿಸುತ್ತಿರುವ ಬ್ರಹ್ಮಾಂಡ ಪಿಂಡಾಂಡಗಳ ಚಿತ್ರವನ್ನು ಈಕ್ಷಿಸುತ್ತಿರು" ಎಂದು ಗೋಪಾಲದಾಸರು ಹೇಳಿದಾಗ ತಮ್ಮನಿಗೆ ಆನಂದವಾಗಿ ಹೋಯಿತು.

ಮಾತನಾಡುತ್ತಿರುವಾಗಲೇ ಅಣ್ಣನಲ್ಲಿ ತನ್ನ ಸಂಶಯಗಳ ಬಗ್ಗೆ ತಿಳಿಯಬೇಕೆಂಬ ತವಕ ರಂಗಣ್ಣನಿಗೆ

"ಅಣ್ಣಾ ಇತ್ತೀಚೆಗೆ ಹೊಟ್ಟೆ ಹಿಡಿದುಕೊಂಡು ನೀವು ತುಂಬಾ ಬಳಲುತ್ತಿರುವಂತೆ ಕಾಣುತ್ತಿದ್ದೀರಿ. ಏನು ನಿಮ್ಮ ಶರೀರ ಬೇನೆ? ಏತಕ್ಕಾಗಿ ಈ ಬಳಲಿಕೆ?"

"ಹರಿದಾಸರನ್ನು ಹಗುರವಾಗಿ ಕಂಡ ಫಲವಪ್ಪಾ ಇದು"

ಅಣ್ಣನ ಈ ಮಾತು ಅರ್ಥವಾಗಲಿಲ್ಲ ರಂಗಣ್ಣನಿಗೆ.

ಗೋಪಾಲದಾಸರೇ ಬಿಡಿಸಿ ಹೇಳಿದರು.

"ಗುರುಗಳಾದ ವಿಜಯದಾಸರನ್ನು ಹಗುರವಾಗಿ ಕಂಡ ಮಾನವಿಯಲ್ಲಿದ್ದ ಬ್ಯಾಗವಟ್ಟಿ ಶ್ರೀನಿವಾಸಾಚಾರ್ಯರಿಗೆ ಹತ್ತಿದ್ದಪ್ಪಾ ಈ ಬೇನೆ. ಅದನ್ನು ಸೌಮ್ಯಗೊಳಿಸಿ ನಾನು ಸ್ವೀಕರಿಸಿದ್ದೇನೆ. ಇದನ್ನು ತಿರುಪತಿ ಶ್ರೀನಿವಾಸನೇ ಪರಿಹರಿಸುತ್ತಾನೆ" ಎಂದು ಹೇಳಿದಾಗ ರಂಗಣ್ಣ ಸಮಾಧಾನದ ಉಸಿರು ಬಿಟ್ಟ.

ಬ್ರಹ್ಮೋತ್ಸವಕ್ಕೆಂದು ತನ್ನ ಮೂರು ಜನ ಅಣ್ಣಂದಿರು ತಿರುಪತಿಗೆ ಯಾತ್ರೆ ಪ್ರಾರಂಭಿಸುವರೆಂದು ತಿಳಿದಾಗ ರಂಗಣ್ಣ ಹರ್ಷದಿಂದ ನಲಿದಾಡಿಬಿಟ್ಟ. ತನ್ನಣ್ಣನ ಹೊಟ್ಟೆನೋವು ಪರಿಹಾರವಾಗುವ ಕಾಲ ಬಂದಿತೆಂದು ಅವನಿಗೆ ಎಲ್ಲಿಲ್ಲದ ಹರ್ಷ.

ನಿಯೋಜಿತ ದಿನದಂದು ಮೂರು ಜನ ಸಹೋದರರು ತಿರುಪತಿ ಯಾತ್ರೆ ಪ್ರಾರಂಭಿಸಿದರು.

ಯಾತ್ರೆಯ ಉದ್ದಕ್ಕೂ ಭಜನೆ, ದೇವರಕೀರ್ತನೆ, ಆತನ ಚಿಂತನೆ.

ಕಣ್ಣು ತೆಗೆದಿದ್ದರೂ ಮುಚ್ಚಿದ್ದರೂ ಸದಾ ಭಗವತ್ ಚಿಂತನೆಯೆ. ತಿರುಮಲೆ ಬೆಟ್ಟವನ್ನು ಏರುವಾಗಲಂತೂ ಮೂರೂ ಜನ ಮೈಮರೆತು ಬಿಟ್ಟಿದ್ದರು.

ತಿರುಮಲೆಯ ಒಡೆಯ, ತ್ರೈಲೋಕ್ಯಾಧಿಪತಿ ಶ್ರೀ ಶ್ರೀನಿವಾಸ-ಶ್ರೀರಾಮನಾಗಿ, ಶ್ರೀಕೃಷ್ಣನಾಗಿ ನಾನಾ ರೂಪಗಳಿಂದ ಇವರಿಗೆ ದರ್ಶನ ಕೊಡುತ್ತಿದ್ದ.

ಬಾಲಗೋಪಾಲನಾಗಿ ಮುರುಳಿಯನ್ನು ನುಡಿಸುತ್ತಾ ಸೀನಣ್ಣ ದಾಸಣ್ಣರಿಗೆ ಕಾಣಿಸಿಕೊಂಡ ಪರಮಾತ್ಮ. ಮುರುಳಿಯ ನಾದ ದೂರದೂರವಾದಂತೆ ಭಾಸವಾಗಿ ಅದರ ಹತ್ತಿರ ಹತ್ತಿರ ಸಾಗಲು ಅವರು ವೇಗವೇಗವಾಗಿ ಹೆಜ್ಜೆ ಹಾಕತೊಡಗಿದರು.

ಗೋಪಾಲದಾಸರಿಗೋ, ಪ್ರಭು ಶ್ರೀನಿವಾಸ ಕೈರಟ್ಟೆಗಳಲ್ಲಿ ಕೇಯೂರಗಳನ್ನು, ಕಿವಿಗಳಲ್ಲಿ ಮಕರ ಕುಂಡಲಗಳನ್ನು ಧರಿಸಿ, ಶಿರದಲ್ಲಿ ಕಿರೀಟ ಕೊರಳಲ್ಲಿ ಹಾರ ಕೈಗಳಲ್ಲಿ ಶಂಖ ಚಕ್ರಗಳಿಂದ ಸುಶೋಭಿತನಾಗಿ ಮಂದಸ್ಮಿತದಿಂದ ನಿಂತಿದ್ದಂತೆ ಕಾಣಿಸತೊಡಗಿದ.

ಶ್ರೀನಿವಾಸನ ದಿವ್ಯಮಂಗಳರೂಪ ಕಣ್ಣ ಮುಂದೆ ಇರುವಾಗ ಮುಂದೆ ಮುಂದೆ ಹೋಗುವುದು ಹೇಗೆ?

ಗೋಪಾಲದಾಸರು ನಿಂತೇಕುಣಿಯುತ್ತಿದ್ದರು. ಸೀನಣ್ಣ ದಾಸಣ್ಣರು ಮುಂದೆ ಮುಂದೆ ಸಾಗಿ ಬಿಟ್ಟಿದ್ದರು.

ಅವರು ಕಣ್ಣು ತೆರೆದಾಗ ಸೂರ್ಯ ನಡುನೆತ್ತಿಗೇರಿಬಿಟ್ಟಿದ್ದ. ಹಿಂದಿರುಗಿ ನೋಡಿ ತಮ್ಮ ಅಣ್ಣ ಹತ್ತಿರ ಇಲ್ಲದ್ದನ್ನು ಗ್ರಹಿಸಿದರು.

"ಏಕೆ ತಮ್ಮ ಅಣ್ಣ ಅಷ್ಟು ಹಿಂದೆ ಉಳಿದರು?" ಯೋಚಿಸಿದರು ತಮ್ಮಂದಿರು.

ಹಿಂದಕ್ಕೆ ಉಳಿದ ಕಾರಣ ಅವರಿಗೆ ತಿಳಿಯದಿದ್ದರೂ ಪ್ರಸ್ತುತ ಅವರಿರುವ ಸ್ಥಿತಿ ಕಣ್ಣಮುಂದೆ ನಿಂತಿತು.

ಜಗನ್ನಾಥ ದಾಸರಿಂದ ತಾವೇ ತೆಗೆದುಕೊಂಡಿದ್ದ ಹೊಟ್ಟೆನೋವನ್ನು ದೇವರಪೂಜೆ ನಿತ್ಯಕರ್ಮಾನುಷ್ಠಾನಗಳ ಸಮಯದಲಲ್ಲದೆ ಉಳಿದ ವೇಳೆಗಳಲ್ಲಿ ತಾವೇ ಹೊಟ್ಟೆನೋವನ್ನು ಪುನಃ ಕರೆಯುತ್ತಿದ್ದ ವಿಷಯ ತಮ್ಮಂದಿರಿಬ್ಬರಿಗೆ ಗೊತ್ತಿತ್ತು. ದಿನದ ಸ್ವಲ್ಪ ಕಾಲವನ್ನಾದರೂ ಅವರು ಹೊಟ್ಟೆನೋವಿಗೆ ಅವಕಾಶ ಕೊಡುತ್ತಿದ್ದಾರೆಂಬ ವಿಷಯ ಅವರಿಗೆ ಮನದಟ್ಟಾಗಿತ್ತು. ಈ ಬಗ್ಗೆ ಅಣ್ಣನಲ್ಲಿ

ಒಮ್ಮೆ ಪ್ರಶ್ನಿಸಿದಾಗ "ಅನುಭವಿಸಿ ತೀರಿಸಿಕೊಳ್ಳಬೇಕಪ್ಪಾ ಪ್ರಾರಬ್ಧ ಕರ್ಮವನ್ನು. ಶಿಲ್ಕು ಉಳಿಸಿಕೊಂಡರೆ ಬಡ್ಡಿಯಂತೆ ಬೆಳೆಯುತ್ತಾ ಹೋಗುತ್ತದೆ" ಎಂದು ಗೋಪಾಲದಾಸರು ನಗುತ್ತಾ ಹೇಳಿದ್ದರು.

ಬೇಡವೆನಿಸಿದಾಗ ಅದನ್ನು ಕಳಿಸಿ, ಬಿಡುವು ಸಿಕ್ಕೊಡನೆ ರೋಗವನ್ನು ಆಹ್ವಾನಿಸಿ, ಅದನ್ನು ಅನುಭವಿಸಿ ತೀರಿಸಿಕೊಳ್ಳುವಂಥ ಸಿದ್ಧಿ ಎಷ್ಟು ಜನರಿಗೆ ಸಿಕ್ಕುತ್ತದೆ? ತಮ್ಮ ಅಣ್ಣನಲ್ಲಿ ಉಳಿದಿರುವ ರೋಗದ ಪ್ರಖರತೆಯನ್ನು ಕಂಡು ತಮ್ಮಂದಿರಿಗೆ ಕಸಿವಿಸಿಯಾಯಿತು.

ಎಲ್ಲಾ ಪಾಪಗಳನ್ನು ಪರಿಹರಿಸುವ ಶ್ರೀ ವೆಂಕಟನಾಥನ ಸನ್ನಿಧಾನದಲ್ಲಲ್ಲದೆ ಮತ್ತೆಲ್ಲಿ ಇದು ಪರಿಹಾರವಾಗಲು ಸಾಧ್ಯ?

ತಮ್ಮಂದಿರಿಬ್ಬರು ಪ್ರಾರ್ಥಿಸಿದರು.

"ಪರಮಾತ್ಮ, ನಮ್ಮಣ್ಣನ ವೇದನೆಯನ್ನು ನಾವು ನೋಡಲಾರೆವು. ಬೇರೊಬ್ಬರಿಗಾಗಿ ಈ ರೋಗವನ್ನು ಸ್ವೀಕರಿಸಿ ನಿತ್ಯ ಅನುಭವಿಸುವ ಈ ಪರೋಪಕಾರಿ ಜೀವಿಗೂ ಇಷ್ಟೊಂದು ಯಾತನೆಯೇ? ಅವರೇನೋ ಮಹಾಸಿದ್ಧರು. ಬೇರೊಬ್ಬರ ಪಾಪದ ಫಲವನ್ನು ತಾವು ತೆಗೆದುಕೊಂಡರು. ಆ ಹಂತ ನಮಗಿನ್ನೂ ಸಿಕ್ಕಿಲ್ಲ. ಅವರ ರೋಗವನ್ನು ನಾವು ತೆಗೆದುಕೊಳ್ಳುವ ಮನಸಿದ್ದರೂ ಆ ಯೋಗ್ಯತೆಯಿಲ್ಲ. ನಿನ್ನನ್ನು ಪ್ರಾರ್ಥಿಸುವುದರ ಹೊರತು ಬೇರೇನೂ ನಮಗೆ ಗೊತ್ತಿಲ್ಲ. ನೀನೇ ಕಾಯಬೇಕು ಕರುಣಾಸಿಂಧು. ನಮ್ಮಣ್ಣನಿಗೆ ಆ ರೋಗದಿಂದ ವಿಮುಕ್ತಿಗೊಳಿಸು. ನಿನ್ನಲ್ಲಲ್ಲದೆ ಮತ್ತೆಲ್ಲಿಯೋ ಪಾಪ ವಿಮೋಚನೆ? ಅನುಗ್ರಹಿಸು ಜಗದೊಡೆಯ".

ತಮ್ಮಂದಿರಿಬ್ಬರೂ ಗಟ್ಟಿಯಾಗಿ ಕುಳಿತು ಹೃದಯಾಂತರ್ಗತ ಪರಮಾತ್ಮನಲ್ಲಿ ಪ್ರಾರ್ಥಿಸತೊಡಗಿದರು.

ಶ್ರೀ ಶ್ರೀನಿವಾಸನಲ್ಲಿ ಮೊರೆಹೊಕ್ಕು ಸರಿ ಕೋರಿಕೆಯನ್ನು ಮಂಡಿಸಿದವರಿಗೆ ಇಲ್ಲವೆಂದು ಹೇಳಿದ್ದಾನೆಯೇ ಆ ಪರಮಾತ್ಮ?

ಇಲ್ಲಿ ತಮ್ಮಂದಿರು ಪ್ರಾರ್ಥಿಸುತ್ತಿದ್ದಂತೆಯೇ - ಬೆಟ್ಟದ ಬಹಳ ಕೆಳಭಾಗದಲ್ಲಿದ್ದ ಗೋಪಾಲದಾಸರಿಗೆ ಹೊಟ್ಟೆ ನೋವು ಕಡಿಮೆಯಾಗುತ್ತಾ ಹೋಯಿತು.

ಗೋಪಾಲದಾಸರೇ ಆಶ್ಚರ್ಯಗೊಂಡುಬಿಟ್ಟರು. ಹೋಗು ಎಂದು ತಾವಿನ್ನೂ ಆ ರೋಗಕ್ಕೆ ಹೇಳಿಲ್ಲ. ಆದರೆ ತಾನೇ ತಾನಾಗಿ ಹೋಗುತ್ತಿರುವ ರೋಗದ ಪರಿಕಂಡು ಅವರು ಒಂದೆರಡು ಕ್ಷಣ ಯೋಚಿಸಿದರು.

ತಮ್ಮಂದಿರ ಪ್ರಾರ್ಥನೆಯಿಂದ ಹೊಟ್ಟೆನೋವು ನಿಶ್ಶೇಷವಾಗಿ ಹೋಯಿತೆಂದು ಅವರಿಗೆ ತಿಳಿದುಹೋಯಿತು.

ಪರಮಾತ್ಮನಲ್ಲಿ ಪ್ರಾರ್ಥಿಸಿ ಬೇರೆಯವರ ಸಂಕಷ್ಟಗಳನ್ನು ಆ ಕ್ಷಣ ಪರಿಹರಿಸಬಲ್ಲ ಶ್ರೇಷ್ಠ ಹಂತಕ್ಕೆ ತನ್ನ ತಮ್ಮಂದಿರು ಬಂದಿರುವುದನ್ನು ಗ್ರಹಿಸಿದ ಗೋಪಾಲದಾಸರಿಗೆ ಬಹಳ ಆನಂದವಾಗಿ ಹೋಯಿತು.

ಅವರು ಕೂಡಲೆ, ಬೇಗ ಬೇಗ ಹೆಜ್ಜೆಗಳನ್ನು ಹಾಕಿ ಸೀನಣ್ಣ ದಾಸಣ್ಣರಿರುವ ಜಾಗಕ್ಕೆ ಬಂದರು.

"ಏನಪ್ಪಾ, ಎಷ್ಟೊಂದು ಪರಮಾತ್ಮನನ್ನು ನೀವು ಗೋಳಾಡಿಸುತ್ತೀರಿ? ನಿಮ್ಮ ಕಾಟ ತಡೆಯಲಾರದ ಶ್ರೀನಿವಾಸ ಎಲ್ಲಾ ಹೊಟ್ಟೆನೋವನ್ನು ಕಳೆದುಬಿಟ್ಟ" ಎಂದು ನಗುತ್ತಾ ನುಡಿದು ಅವರನ್ನು ಕರೆದುಕೊಂಡು ಬೇಗ ಬೇಗನೆ ಬೆಟ್ಟವನ್ನು ಏರಿದರು.

ಒಂದೆರಡು ದಿನ ಅಲಮೇಲು ಮಂಗಾಪುರದಲ್ಲಿ ಉಳಿದು ಅವರು ಕೂಡಲೇ ಉತ್ತನೂರಿಗೆ ಮರಳಿಬಿಟ್ಟರು.

'ತಮ್ಮಣ್ಣ ಏತಕ್ಕೆ ಊರಿಗೆ ಮರಳಲು ಇಷ್ಟು ಆತುರ ಪಡುತ್ತಿದ್ದಾರೆ?' ಈ ಬಗ್ಗೆ ಸೀನಣ್ಣ ದಾಸಣ್ಣರಿಗೆ ಒಮ್ಮೆ ಆಶ್ಚರ್ಯವಾಯಿತಾದರೂ ಆ ಬಗ್ಗೆ ಜ್ಞಾನದೃಷ್ಟಿಯಿಂದ ಯೋಚಿಸಲು ಪ್ರಯತ್ನಿಸಲಿಲ್ಲ.

ಹಾಗೆ ಅಣ್ಣನ ಆಜ್ಞೆಯೇ ಆಗಿತ್ತು ಅವರಿಬ್ಬರಿಗೆ.

***

ತಿರುಪತಿಯಿಂದ ಬಂದ ಮೇಲೆ ಅಂಕಿತ ನೀಡಬಹುದೆಂದು ನಿರೀಕ್ಷಿಸಿದ್ದ ರಂಗಣ್ಣನಿಗೆ ಅಣ್ಣನ ದೀರ್ಘಮೌನ ಆಶ್ಚರ್ಯಕ್ಕೀಡು ಮಾಡಿತು.

ಗೋಪಾಲದಾಸರು ಈಗ ಹೆಚ್ಚು ಹೊತ್ತು ಭಜನೆ ಮಾಡುತ್ತಿರಲಿಲ್ಲ. ದೇವರ ಮುಂದೆ ಕುಣಿಯುತ್ತಿರಲಿಲ್ಲ ಆದರೆ ಅವರು ಯಾವಾಗಲೂ ಕಣ್ಣುಮುಚ್ಚಿ ಕುಳಿತಿರಲು ಬಯಸುತ್ತಿದ್ದರು.

"ಅಣ್ಣಾ, ದೇವರನ್ನು ಒಳಗೂ ಹೊರಗೂ ಕಾಣಬಲ್ಲ ಶ್ರೇಷ್ಠರಾದ ನೀವೇ ಹೀಗೆ ಕಣ್ಣುಮುಚ್ಚಿ ಕುಳಿತುಕೊಳ್ಳುವುದೆ? ಹಾಗಾದರೆ ಮಾತ್ರ ಪುಣ್ಯಪ್ರಾಪ್ತಿ,

ಅದೇ ಮೋಕ್ಷಕ್ಕೆ ಸಾಧನೆ ಎಂದು ಜನರು ಭಾವಿಸುವುದಿಲ್ಲವೆ? ಮಧ್ವಸಿದ್ಧಾಂತ ಕಣ್ಣುಮುಚ್ಚಿ ಕುಳಿತುಕೊಳ್ಳಿ ಎಂದು ಹೇಳಿದೆಯೆ?"

ತಮ್ಮನ ಪ್ರಶ್ನೆಗೆ ಮುಗುಳ್ನಕ್ಕು ಉತ್ತರಿಸಿದರು ಗೋಪಾಲದಾಸರು.

"ಕಾಯಕವೇ ಕೈಲಾಸ ಎಂದು ಶಿವಶರಣರು ಹೇಳಿದ್ದಾರಲ್ಲವೆ? ಅದನ್ನೇ ಜಗತ್‌ಸತ್ಯ ಎನ್ನುವುದರ ಮೂಲಕ ನಮ್ಮ ಹಿರಿಯರೂ ಒಪ್ಪಿಕೊಂಡಿದ್ದಾರೆ. ಸತ್ಯವಾದ ಜಗತ್ತಿನಲ್ಲಿ ಬದುಕಿರಬೇಕಾದರೆ ಸತತವಾಗಿ ಕಾರ್ಯಪ್ರವೃತ್ತನಾಗಿರಬೇಕು ಎಂಬ ಸಂದೇಶವೂ ಸಿದ್ಧಾಂತದಲ್ಲಿ ಅಡಕವಾಗಿದೆ".

"ಹಾಗಾದರೆ ನೀವು ಕಣ್ಣು ಮುಚ್ಚಿ ಕುಳಿತುಕೊಳ್ಳುತ್ತೀರೇಕೆ?"

"ಕಾರ್ಯಶೀಲತೆ ಎಂದರೇನು? ಲೋಕಕಲ್ಯಾಣಕ್ಕಾಗಿ ಚಿಂತನೆ ಮಾಡುವುದು ಕಾರ್ಯಶೀಲತೆಯಲ್ಲವೆ? ಇಡೀ ಬ್ರಹ್ಮಾಂಡವೇ ಈ ಪಿಂಡಾಂಡದಲ್ಲಿದೆ. ನಮ್ಮ ಗುರುಗಳು ಹಾಕಿಕೊಟ್ಟ ಹಾದಿಯಲ್ಲಿ ಸಾಗಿ ಈ ಪಿಂಡಾಂಡವನ್ನು ನೋಡುತ್ತಿದ್ದೇನೆ. ನೋಡಿ, ಅನುಭವಿಸಿ, ಆನಂದಿಸಿ ಚಿತ್ರ ಬರೆಯುವ ಕಾರ್ಯದಲ್ಲಿ ನಿರತನಾಗಿದ್ದೇನೆ. ರಂಗಣ್ಣಾ, ಮುಂದೆ ಮುಂದೆ ಜಗತ್ತು ವೈಜ್ಞಾನಿಕವಾಗಿ ಬಹಳ ವೇಗದಲ್ಲಿ ಸಾಗುತ್ತದೆ. ಭೌತಿಕ ವಿಜ್ಞಾನ ಬ್ರಹ್ಮಾಂಡದ ಅಪಾರಶಕ್ತಿಯನ್ನು ಸ್ವಲ್ಪಸ್ವಲ್ಪವಾಗಿ ಕಂಡು ಅದರ ಲಾಭವನ್ನು ಲೋಕಕ್ಕೆ ವಿನಿಮಯಿಸುವ ಕಾರ್ಯ ನಡೆಯುತ್ತದೆ. ಅದರಿಂದ ಲೌಕೀಕ ಅನುಕೂಲಗಳೂ ಹೆಚ್ಚಿ ಬಿಡುತ್ತವೆ. ಆ ಬ್ರಹ್ಮಾಂಡದ ಶಕ್ತಿಯನ್ನು ಹೊತ್ತಿರುವ ಪರಮಾತ್ಮ ನಮ್ಮ ಪಿಂಡಾಂಡದಲ್ಲಿಯೂ ಇದ್ದು ಪ್ರತಿಯೊಬ್ಬರಲ್ಲಿಯೂ ಆ ಶಕ್ತಿಗಳನ್ನೆಲ್ಲಾ ಇಟ್ಟಿದ್ದಾನೆ ಎಂದು ನಂಬುವುದೇ ಕಷ್ಟವಾಗುತ್ತದೆ. ಹೊರದೃಷ್ಟಿ ಹೆಚ್ಚುತ್ತಾ ಹೋಗುತ್ತದೆ. ಅಂತರ್‌ದೃಷ್ಟಿಯ ಮಹತ್ವ ಬಹು ಜನ ಮರೆತು ಬಿಡುತ್ತಾರೆ. ಒಳಗಿರುವ ಶಕ್ತಿಯ ಬಗ್ಗೆ ಹೇಳಿದಾಗ ನಂಬುವುದೇ ಕಷ್ಟವಾಗುತ್ತದೆ. ನಂಬದಿರುವವರು ಯಾವಾಗಲೂ ಇರುತ್ತಾರೆ. ನಂಬುವವರಿಗಾದರೂ ದಾರಿ ಇರಬೇಡವೆ? ಅಂಥ ಸುಜೀವಿಗಳಿಗಾಗಿ ಚಿತ್ರರಚನೆ ಮಾಡುತ್ತಿದ್ದೇನೆ. ಈ ಪಿಂಡಾಂಡದ ಅಣು ಅಣುವಿನ ಭಾಗಕ್ಕೂ ಹೋಗಿ ಪರಿಶೀಲಿಸುತ್ತಿದ್ದೇನೆ. ಈ ಕಾರ್ಯವನ್ನು ಕಣ್ಣು ಮುಚ್ಚಿಯೇ ಮಾಡಬೇಕಾಗುತ್ತದೆ. ಬಹಿರ್‌ಚಕ್ಷು ಮುಚ್ಚಿದ್ದರೂ ಅಂತರ್‌ಚಕ್ಷು ಹೆಚ್ಚು ಶಕ್ತಿಯನ್ನು ಪಡೆದು ತನ್ನ ಕಾರ್ಯದಲ್ಲಿ ನಿರುತವಾಗಿವೆ".

ಅಣ್ಣನ ವಿವರಣೆ ಕೇಳಿ ರಂಗಣ್ಣನಿಗೆ ಆನಂದವಾಗಿ ಹೋಯಿತು.

"ಅಲ್ಲಣ್ಣಾ, ನಿಮ್ಮ ಈ ಚಿಂತನೆ, ಪ್ರತಿಪಾದನೆ, ಜೀವನ ನಿರ್ವಹಣೆ ಮುಂದಿನ ಜನಾಂಗಕ್ಕೆ ಅರ್ಥವಾಗದೆ ಹೋದೀತು. ಅದಕ್ಕೆ ಏನು ಮಾಡಬೇಕು?

"ಏಕೆ ಅರ್ಥವಾಗುವುದಿಲ್ಲ?" ಗೋಪಾಲದಾಸರು ತಮ್ಮನನ್ನು ಪ್ರಶ್ನಿಸಿದರು.

"ನೀವು ಜಗನ್ನಾಥದಾಸರಿಗೆ ಆಯುಷ್ಯ ದಾನ ಮಾಡಿದ್ದು ವಿಧವಾ ಮಹಿಳೆಯ ರೋದನಕ್ಕೆ ಕನಿಕರಿಸಿ ಹೆಣವನ್ನು ಪುನಃ ಬದುಕಿಸಿದ್ದು ಇವೆಲ್ಲಾ ತರ್ಕಕ್ಕೆ ಸಿಕ್ಕದ ಘಟನೆಗಳಾಗಿ - ಇವನ್ನು ಹೇಳಿದವರು ಮೂಢನಂಬಿಕೆಯವರು ಎಂಬ ಆಪಾದನೆಗೆ ಒಳಗಾಗ ಬೇಕಾಗುತ್ತದೇನೊ? ನಿಮ್ಮ ಜೀವನದಲ್ಲಿ ನಡೆದ ಈ ಸತ್ಯ ಘಟನೆಗಳನ್ನು ವಿವರಿಸಿದಾಗ ಅವನ್ನು ನಂಬದ ಜನ ನಿಮ್ಮ ವ್ಯಕ್ತಿತ್ವದ ಬಗ್ಗೆಯೇ ತಪ್ಪಾಗಿ ಭಾವಿಸುತ್ತಾರೇನೊ? ಅದರಿಂದಾಗಿ ನಿಮ್ಮ ಸಾಹಿತ್ಯ ನಿಮ್ಮ ಚಿತ್ರರಚನೆಗಳ ಬಗ್ಗೆಯೂ ಹಗುರ ಭಾವನೆ ಉಂಟಾದೀತೇನೋ? ನಿಮ್ಮ ಬಗ್ಗೆ ಸ್ಮರಿಸುವವರಿಗೆ ಈ ಘಟನೆಗಳೆಲ್ಲಾ ಸ್ಮರಣೆಗೆ ಬಂದೀತು. ಆಗ ಅವರ ತರ್ಕಕ್ಕೆ ಅವು ಹೊಳೆಯದೆ ನೀವು ನಿರ್ಮಿಸಿದ ಸಾಹಿತ್ಯದ ಬಗ್ಗೆಯೂ ಸಂಶಯ ಉಂಟಾದೀತಲ್ಲವೆ?"

ತಮ್ಮನ ಪ್ರಶ್ನೆಗೆ ಗೋಪಾಲದಾಸರು ಬಿಡಿಸಿ ಬಿಡಿಸಿ ಹೇಳಿದರು.

"ಅಂಟುರೋಗ ಒಬ್ಬನಿಗೆ ಬರುತ್ತದೆ. ಅವನ ಸೇವೆಯನ್ನು ಒಬ್ಬರು ನಿಷ್ಠೆಯಿಂದ ಮಾಡಿದಾಗ ಅವನು ಗುಣವಾಗುತ್ತಾನೆ. ಆದರೆ ಆ ಕ್ರಿಮಿಗಳು ಅಥವಾ ಅಣು ಜೀವಿಗಳು ಇವನಲ್ಲಿ ವ್ಯಾಪಿಸಿ ಇವನಿಗೆ ರೋಗ ಪ್ರಾರಂಭವಾಗುತ್ತದೆ. ಎಲ್ಲರೂ ರೋಗಿಯ ಹತ್ತಿರ ಹೋಗಲು ಹಿಂದೇಟು ಹಾಕುತ್ತಿದ್ದಾಗ ಇವನು ಹೋಗಿ ರೋಗ ತಂದುಕೊಂಡ ಎಂದಾಗ ವೈದ್ಯ ವಿಜ್ಞಾನದಲ್ಲಿ ನಂಬಿಕೆ ಇರುವವರು ಒಪ್ಪಿ ಕೊಳ್ಳುತ್ತಾರೆಯೋ ಇಲ್ಲವೋ?"

"ಒಪ್ಪಿಕೊಳ್ಳುತ್ತಾರೆ"

ನನ್ನ ಶಿಷ್ಯನಾದ ಜಗನ್ನಾಥದಾಸರಿಗೂ ನನಗೂ ನಡೆದ ಈ ಆಯುಷ್ಯ ದಾನ ವಿಭಾಗವನ್ನು ಅಷ್ಟಕ್ಕೆ ಗ್ರಹಿಸಿದರೂ ಸರಿಯೆ. ಇನ್ನು ಸತ್ತವರನ್ನು ಬದುಕಿಸುವ ಸಂಗತಿಯ ಬಗ್ಗೆ ನಿನ್ನ ಪ್ರಶ್ನೆಯಲ್ಲವೆ?"

"ಹೌದು"

"ಒಬ್ಬನ ಹೃದಯಕ್ರಿಯೆ ಅಕಸ್ಮಾತ್ ನಿಂತುಬಿಡುತ್ತದೆ. ಅಲ್ಲಿಗೆ ಬಂದ ತಜ್ಞ ವೈದ್ಯನೊಬ್ಬ ಬಾಯಿಯಿಂದ ಊದಿಯೋ ಎದೆಯನ್ನು ನೀವಿಯೋ ಹೃದಯಕ್ಕೆ ಪುನಃ ಚಾಲನೆ ಕೊಟ್ಟ ಎಂದರೆ ಜನ ನಂಬುತ್ತಾರೆಯೋ ಇಲ್ಲವೋ"

"ನಂಬುತ್ತಾರೆ"

"ಕೇವಲ ಎಂಟು ಹತ್ತು ವರ್ಷ ಒಂದು ವಿದ್ಯೆಯನ್ನು ಅಭ್ಯಾಸ ಮಾಡಿದವರು ಅದನ್ನು ಮಾಡಿದನು ಎಂದಾಗ ನಂಬುವ ಜನ - ಹಿಂದಿನ ಜನ್ಮಜನ್ಮಗಳ ಸ್ಮರಣೆ ಪಡೆದು, ಇನ್ನೂ ಆಳಕ್ಕೆ ಹೋಗಿ ಚಿಕಿತ್ಸೆ ಮಾಡುವ ಯೋಗ್ಯತೆ ಸಂಪಾದಿಸಿದ್ದರು ಎಂದು ಏಕೆ ತಿಳಿಯಬಾರದು? ಅಷ್ಟೂ ತಿಳಿಯದಿದ್ದವರಿಗೆ ಏನು ಹೇಳಿದರೂ ತಿಳಿಯುವುದಿಲ್ಲ. ಅಂತಹವರಿಗೆ ತಿಳಿಸಲೇ ಬೇಕೆಂಬ ಛಲವೂ ಸಲ್ಲ. ತಿಳಿಯದಿದ್ದವರು ತಮಗೆ ತಿಳಿದಷ್ಟನ್ನೇ ಗ್ರಹಿಸಲಿ. ಘಟನೆಗಳನ್ನು ಸೂಚ್ಯವಾಗಿಯಷ್ಟೇ ಪರಿಗಣಿಸಿದರೂ ಸಾಕು. ಘಟನೆ ಮುಖ್ಯವಲ್ಲ. ಘಟನೆಯ ಭಾವ ಮುಖ್ಯ. ಇವೆಲ್ಲವೂ ನನ್ನ ಗುರುಗಳಾದ ವಿಜಯರಾಯರ ಪ್ರಭಾವ. ಆದ್ದರಿಂದ ನಿನಗೆ ಇಷ್ಟು ಸ್ಪಷ್ಟೀಕರಣ ನೀಡಬೇಕಾಯಿತು. ಅಘಟಿತ ಘಟನಾ ಸಮರ್ಥನಾದ ಪರಮಾತ್ಮನ ಬಗ್ಗೆ ಅವರ ದೃಷ್ಟಿ ಸೆಳೆಯಲು ಇಂಥ ಕೆಲವು ಸಂಗತಿಗಳು ನಡೆಯುತ್ತವೆ. ಇವನ್ನು ಗ್ರಹಿಸುವ ಶಕ್ತಿ ಅವರವರ ಯೋಗ್ಯತೆ, ಚಿಂತನೆ, ಸಂಸ್ಕಾರ, ಅವರ ಬದುಕಿನಲ್ಲಿ ಬಂದ ನಾನಾ ಘಟನೆಗಳ ಅನುಭವದ ಮೇಲೆ ಆಧಾರಿತವಾಗಿರುತ್ತವೆ." ಬಿಡಿಸಿ ಬಿಡಿಸಿ ಹೇಳಿದರು ಗೋಪಾಲದಾಸರು.

ತಮ್ಮನಿಗೆ ಪೂರ್ತಿ ಅರ್ಥವಾಗುವವರೆಗೂ ಅವರು ಬಿಡುತ್ತಿರಲಿಲ್ಲ.

ಪ್ರತಿವಿಷಯ ಮನದಟ್ಟಾಗುವವರೆಗೂ ರಂಗಣ್ಣ ಸುಮ್ಮನಿರುತ್ತಿರಲಿಲ್ಲ.

ಅಣ್ಣನ ಬೃಹತ್ ವ್ಯಕ್ತಿತ್ವದ ಚಿತ್ರ ತಮ್ಮನಿಗೆ ಹೊಳೆದಾಗಲೆಲ್ಲಾ ಕಾಯಾ ವಾಚಾ ಮನಸಾ ನಮಸ್ಕರಿಸತೊಡಗಿದ ರಂಗಣ್ಣ.

ಅಣ್ಣನು ಹೇಳದಿದ್ದುದು, ತಮ್ಮನಿಗೆ ತಿಳಿಯದಿದ್ದುದು ಒಂದೇ ವಿಷಯ.

ಅಣ್ಣನ ಮೂಲ ಅವತಾರ ಯಾವುದು? ಯಾವ ಅಂಶದಿಂದ ತನ್ನಣ್ಣ ಅವತರಿಸಿದ್ದಾನೆ?

ಆ ಒಂದು ಪ್ರಶ್ನೆಗೆ ಮಾತ್ರ ಗೋಪಾಲದಾಸರು ಉತ್ತರಿಸುತ್ತಿರಲಿಲ್ಲ. ಅಣ್ಣನ ಚಲನವಲನ, ಚಿಂತನಾರೀತಿ, ಉಪಾಸನಾಮಟ್ಟ ಮೊದಲಾದವುಗಳನ್ನು ಪೂರ್ಣವಾಗಿ ತಿಳಿದುಕೊಂಡ ಮೇಲೆ ಅದಕ್ಕೆ ಉತ್ತರ ಸಿಕ್ಕುತ್ತದೆ ಎಂದು ಸೀನಣ್ಣ ದಾಸಣ್ಣರು ತಮ್ಮನಿಗೆ ಹೇಳಿದರು.

ಮನೆಯಲ್ಲಿರುವ ಅಪಾರ ಧನರಾಶಿ ತನಗೆ ಬೇಡವೆಂದು ಅದನ್ನು ಏನು ಮಾಡಬೇಕೆಂದು ರಂಗಣ್ಣ ಒಮ್ಮೆ ಅಣ್ಣನನ್ನು ಪ್ರಶ್ನಿಸಿದ. "ನನಗೇ ಕೊಟ್ಟು ಬಿಡು" ಗೋಪಾಲದಾಸರು ನಗುತ್ತಾ ನುಡಿದರು.

"ನಿಮ್ಮದೇ ಅದು. ನೀವು ನನಗೆ ನೀಡಿ ಪುನಃ ಸ್ವೀಕರಿಸದೆ ಬಿಟ್ಟಿದ್ದರಿಂದ ಆ ಬಗ್ಗೆ ಕೇಳಬೇಕಾಯಿತು. ನಾನಾದರೂ ಈ ಧನದರಾಶಿಯನ್ನು ಏನು ಮಾಡಲಿ?" ರಂಗಣ್ಣ ಮತ್ತೆ ಮತ್ತೆ ಪ್ರಶ್ನಿಸಿದ.

ಭವಿಷ್ಯ ನುಡಿಯುವ ಹಿಂದಿನ ವೃತ್ತಿಯಿಂದ ಬಂದ ಹಣವನ್ನೆಲ್ಲಾ ಲೋಕಕ್ಕೆ ವಿನಿಮಯಿಸುತ್ತಿದ್ದೇನೆ. ಈಗ ನಿನ್ನಲ್ಲಿರುವ ಹಣವೇ ಬೇರೆ. ಗದ್ವಾಲದ ದೊರೆಗಳು ನನಗೆ ನೀಡಿದ ಹಣ, ಅವರು ಬಿಟ್ಟುಕೊಟ್ಟ ಭೂಮಿಯಲ್ಲಿ ಬೆಳೆದ ಫಲದ ಧನ. ಇವುಗಳನ್ನು ನಾನು ಬೇರೆಯವರಿಗೆ ವಿನಿಯೋಗಿಸುವಂತಿಲ್ಲ. ಹಾಗೆಂದು ಅವರಿಗೆ ವರ ಕೊಟ್ಟಾಗಿದೆ. ಅವರು ನನ್ನಿಂದ ಮಾತು ಪಡೆದಿದ್ದಾರೆ. ಆದರೆ ಈ ಹಣ ನೀನು ಪಡೆಯುವ ಅಧಿಕಾರಿಯಾದರೂ ಬೇಡವೆಂದು ಹೇಳುತ್ತಿದ್ದಿ. ಆದ್ದರಿಂದ ಅದನ್ನು ಭೂತಾಯಿಗೆ ಒಪ್ಪಿಸಿಬಿಡು. ಮನೆ ಹತ್ತಿರವಿರುವ ಭಾವಿಯಲ್ಲಿ ಅದನ್ನು ಎಸೆದುಬಿಡು. ಅಂದರೆ ಆ ಹಣ ನನ್ನ ಬಳಿಯೇ ಇದ್ದಂತಾಯಿತು. ಮುಂದೆ ಇದೇ ವಂಶದಲ್ಲಿ ನಾನು ಹುಟ್ಟಿ ಅದನ್ನು ವಿನಿಯೋಗಿಸುತ್ತೇನೆ. ಆಗ ಕಾಲ ಬಹಳ ಬದಲಾಗಿರುತ್ತದೆ. ಧರ್ಮ ಹಾಗೂ ತತ್ವ ಪ್ರಚಾರಗಳಿಗೆ ಹಣದ ಅವಶ್ಯಕತೆ ಹೆಚ್ಚಿ ಬಿಟ್ಟಿರುತ್ತದೆ. ಹಾಗೆಯೇ ಇಂಥ ಕಾರ್ಯಗಳಿಗೆ ಹಣ ದೊರೆಯುವುದೂ ಕಷ್ಟವಾಗುತ್ತದೆ. ನಿನ್ನಿಂದ ಮುಂದುವರಿದ ನಮ್ಮ ವಂಶದಲ್ಲಿಯೇ ನಾನು ಮತ್ತೊಮ್ಮೆ ಹುಟ್ಟಿ ಅದನ್ನು ಧರ್ಮಕಾರ್ಯಕ್ಕೆ ವಿನಿಯೋಗಿಸುತ್ತೇನೆ".

ಅಣ್ಣನ ನಿರ್ದೇಶನದಂತೆ ರಂಗಣ್ಣ ನಾಲ್ಕು ಹಂಡೆಗಳಲ್ಲಿ ಆ ಹಣವನ್ನೆಲ್ಲಾ ಪೇರಿಸಿ ಬಾವಿ ಒಣಗಿದ್ದರಿಂದ ಇನ್ನೂ ಆಳವಾಗಿ ಅದನ್ನು ತೋಡಿ ಅದರಲ್ಲಿಟ್ಟುಬಿಟ್ಟ.

"ನೀವು ಪುನಃ ಯಾವಾಗ ಅವತರಿಸುತ್ತೀರಿ?" ರಂಗಣ್ಣ ವಿನಮ್ರನಾಗಿ ಕೇಳಿದ.

"ಭವಿಷ್ಯ ನುಡಿಯುವ ವೃತ್ತಿ ಸಾಮಾನ್ಯ ವೃತ್ತಿಯಲ್ಲ. ಅದನ್ನು ಮಾಡುವವರು ತಪೋಸಂಪನ್ನರಾಗಿರಬೇಕು. ನಿತ್ಯ ಗಾಯತ್ರಿ ಜಪವನ್ನು ಸಾವಿರ ಸಲವಾದರೂ ಮಾಡಬೇಕು. ಅಂಥವರು ನುಡಿದದ್ದು ಸತ್ಯವಾಗುತ್ತದೆ. ಆದರೆ ಮುಂದೆ ಮುಂದೆ ನಮ್ಮ ವಂಶದಲ್ಲಿ ಭವಿಷ್ಯ ಹೇಳುವ ವೃತ್ತಿ ಸ್ವೀಕರಿಸುವವರು ಹುಟ್ಟುತ್ತಾರೆ. ಆದರೆ ಅದಕ್ಕಾಗಿ ಮಾಡಬೇಕಾದ ಜಪತಪಗಳನ್ನು ಅವರು ಮಾಡುವುದಿಲ್ಲ. ಆದ್ದರಿಂದ

ತೀವ್ರ ಬಡತನ ಅವರನ್ನು ಪೀಡಿಸುತ್ತದೆ. ನೀರು ಕುಡಿಯಲು ಮಣ್ಣಿನ ಪಾತ್ರೆಯೂ ಗತಿ ಇಲ್ಲದಂತಾಗಿ ನಮ್ಮ ವಂಶದವರು ಪರಿತಪಿಸುತ್ತಾರೆ. ಆಗ ನಾನು ಈ ವಂಶದಲ್ಲಿ ಹುಟ್ಟುತ್ತೇನೆ" ಎಂದು ಗೋಪಾಲದಾಸರು ನುಡಿದರು.

"ನಮ್ಮ ವಂಶದವರಿಗೆ ಈ ಬಡತನದಿಂದ ಪರಿಹಾರವೇ ಇಲ್ಲವೆ?" ರಂಗಣ್ಣ ಪ್ರಶ್ನಿಸಿದ.

"ಏಕಿಲ್ಲ? ಹಿರಿಯರಿಂದ ಅಂಕಿತ ಪಡೆದು ಹರಿದಾಸ ಸಾಹಿತ್ಯ ಸೇವೆಗೆ ನಮ್ಮ ವಂಶಜರು ಶ್ರಮಿಸಬೇಕು. ಆದರೆ ಅನೇಕರು ಹಾಗೆ ಮಾಡುವುದಿಲ್ಲ. ಆ ಕಾರ್ಯ ಬಿಟ್ಟು ವೈದ್ಯ ವೃತ್ತಿ ಕಣಿ ಹೇಳುವ ವೃತ್ತಿ ಅಡುಗೆ ಮಾಡುವ ವೃತ್ತಿ ಹೀಗೆ ವಿವಿಧ ಕೆಲಸಗಳನ್ನು ಮಾಡುತ್ತಾ ಹರಿದಾಸ ದೀಕ್ಷೆಯನ್ನು ಕಡೆಗಣಿಸುತ್ತಾರೆ. ಅದರಿಂದ ತೀವ್ರ ಬಡತನ ಅವರನ್ನು ಪೀಡಿಸುತ್ತದೆ. ಅಂಥ ಸಮಯದಲ್ಲಿ ನಾನು ಹುಟ್ಟಿ ಸರಿಪಡಿಸುತ್ತೇನೆ" ಎಂದು ವಿವರವಾಗಿ ಹೇಳಿದರು.

"ಅಂದರೆ ನೀವು ಹೇಳುವ ಮಾತು ಬಹಳ ದೂರಕ್ಕೆ ಹೋದಂತಾಯಿತು. ಅಲ್ಲಿಯವರೆಗೂ ನೀವು ಅವತರಿಸುವುದಿಲ್ಲವೆ?" ರಂಗಣ್ಣ ಪ್ರಶ್ನಿಸಿದ.

"ಏಕಿಲ್ಲ? ಈಗ ನಿತ್ಯ ನೂರಾರು ವಿದ್ಯಾರ್ಥಿಗಳಿಗೆ ಅನ್ನದಾನದೊಂದಿಗೆ ವಿದ್ಯಾದಾನ ಮಾಡುತ್ತಿರುವ ವೇಣಿಸೋಮಪುರದ ಶ್ರೀ ವೆಂಕಟರಾಮಾಚಾರ್ಯರ ಮಗನಾಗಿ ನಾನು ಅವರ ಸೇವೆ ಮಾಡಬೇಕಾಗಿದೆ. ಈ ಜನ್ಮದಲ್ಲಿ ನನ್ನ ಮತ್ತು ಅವರ ಸಂಬಂಧ ಬಹು ಗೂಢವಾಗಿದೆ. ಸ್ವರೂಪದಲ್ಲಿ ಹಾಗೂ ವಯಸ್ಸಿನಲ್ಲಿ ಅವರು ನನಗಿಂತ ಹಿರಿಯರು. ಆದರೆ ನನ್ನಿಂದ ಅವರು ಸತ್‌ಪಥದಲ್ಲಿ ಸಾಗುವುದಕ್ಕೆ ಸ್ಫೂರ್ತಿ ಪಡೆದರು. ಹೀಗಾಗಿ ಅವರ ಸೇವೆ ಮಾಡಬೇಕೆಂಬ ನನ್ನ ಅಪೇಕ್ಷೆ ಸಂಪೂರ್ಣ ನೆರವೇರಿಲ್ಲ. ಈ ಶರೀರ ಬಿಟ್ಟ ಮೇಲೆ ಅವರ ಮಗಳಿಗೆ ಮಗನಾಗಿ ಹುಟ್ಟುತ್ತೇನೆ. ನನ್ನನ್ನೇ ಅವರು ದತ್ತು ತೆಗೆದುಕೊಳ್ಳುತ್ತಾರೆ. ಅವರ ಮಗನಾಗಿ ಅವರ ಸೇವೆಯನ್ನು ಮನಸಾರೆ ಮಾಡುತ್ತೇನೆ" ಎಂದು ಗೋಪಾಲದಾಸರು ತಮ್ಮ ಮುಂದಿನ ಎರಡು ಜನ್ಮಗಳ ಬಗ್ಗೆ ವಿವರಿಸಿದರು.

ರಂಗಣ್ಣನಿಗೆ ಈಗ ಮತ್ತೊಂದು ಸಂಶಯ ತೀವ್ರವಾಗಿ ಪೀಡಿಸತೊಡಗಿತು.

"ತಾವು ವೆಂಕಟ ರಾಮಾಚಾರ್ಯರಿಗಿಂತ ವಯಸ್ಸಿನಲ್ಲಿ ಚಿಕ್ಕವರು. ಅವರಿಗೆ ಈಗಾಗಲೇ ಐವತ್ತೆಂಟು ಅರವತ್ತು ವರ್ಷಗಳಾಗಿರಬಹುದು. ಅವರ ಮಗನಾಗಿ ತಾವು ಸೇವೆ ಸಲ್ಲಿಸುವುದು ಹೇಗೆ ಸಾಧ್ಯ? ಅಂ.........ದ.......ರೆ ಅವರು

ಇರುವಾಗಲೇ ತಾವು ಈ ದೇಹ-ಯಾತ್ರೆಯನ್ನು.....?'' ಭೀತನಾಗಿ ರಂಗಣ್ಣ ಪ್ರಶ್ನಿಸಿದ.

"ಶ್ರೀ ಹರಿ ಇಚ್ಛೆ ಏನಿದೆಯೋ ಯಾರು ಬಲ್ಲರು" ಎಂದು ಗೋಪಾಲದಾಸರು ನುಡಿದಾಗ ರಂಗಣ್ಣ ತಬ್ಬಿಬ್ಬುಗೊಂಡು ಬಿಟ್ಟ.

ಗೋಪಾಲದಾಸರು ಮಾತು ಮುಂದವರಿಸಿದರು.

"ಒಂದು ವೇಳೆ ನಾನು ಬೇಗನೆ ತೀರಿಕೊಂಡರೆ ನನ್ನ ಅಸ್ಥಿಗಳನ್ನು ಮನೆಯ ಹತ್ತಿರವಿರುವ ಭಾವಿಯಲ್ಲಿಯೇ ಹಾಕಿಡಿರಿ. ಮತ್ತೊಮ್ಮೆ ನಾನು ಈ ವಂಶದಲ್ಲಿ ಹುಟ್ಟಿದಾಗ ಅವನ್ನು ವಿಸರ್ಜಿಸುತ್ತೇನೆ"

ಅಂತ್ಯಕಾಲದಲ್ಲಿಯ ಮಾತುಗಳಂತೆ ಅಣ್ಣನಾಡುತ್ತಿರುವ ನುಡಿಗಳಿಂದ ರಂಗಣ್ಣ ಕಳವಳಗೊಂಡು ಬಿಟ್ಟ.

ದಾಸಣ್ಣ ಸೀನಣ್ಣರ ಬಳಿ ಈ ಬಗ್ಗೆ ಅವನು ಪ್ರಸ್ತಾಪಿಸಿದಾಗ ಅವರು ಆಕಾಶದೆಡೆಗೆ ನೋಡುತ್ತಾ ಕೈಮುಗಿದರು.

ವರ್ಷವರ್ಷವೂ ಮೂರುದಿನ ಪೂಜಿಸಿ ಆನಂತರ ನೀರಿನಲ್ಲಿ ವಿಸರ್ಜನೆ ಮಾಡುವ ದೇವತೆ ಯಾರು? ಪುನಃ ನೀರಿನಲ್ಲಿ ಚೆನ್ನಾಗಿ ನೆಂದ ಮೃತ್ತಿಕೆಯಿಂದಲೇ ವಿಗ್ರಹವನ್ನು ತಯಾರಿಸಿ ಪೂಜೆ ಮಾಡುವ ಲೋಕದ ರೂಢಿ ಯಾವ ದೇವತೆಯ ವಿಷಯದಲ್ಲಿ ಜಾರಿಯಲ್ಲಿದೆ?" ದಾಸಣ್ಣ ಬೇಕಂತಲೇ ರಂಗಣ್ಣನನ್ನು ಪ್ರಶ್ನಿಸಿದ.

ರಂಗಣ್ಣನಿಗೆ ಹೊಳೆಯಲಿಲ್ಲ.

"ಯಾವ ದೇವತೆಯನ್ನು ಮಾತ್ರ ಜನರು ನೀರಿನಲ್ಲಿ ಇಳಿಸುತ್ತಾರೆಯೋ ಆ ದೇವತೆಯ ಅವತಾರದಲ್ಲಿ ಹಾಗೆ ಮಾಡದಿದ್ದರೂ ಅದರ ಸಂಕೇತವಾಗಿ ಅಸ್ಥಿಗಳನ್ನು ಭಾವಿಯಲ್ಲಿಟ್ಟಿರುವಂತೆ ಅವರು ಹೇಳಿದ್ದಾರೆ. ಅವರ ಮೂಲ ಅವತಾರ ಇದರಿಂದ ಗೊತ್ತಾಗುತ್ತದೆ" ದಾಸಣ್ಣ ಸೂಚ್ಯವಾಗಿ ಹೇಳಿದ.

ಗೋಪಾಲದಾಸರು ಅಂತ್ಯಕಾಲದಲ್ಲಿ ಹೇಳುವ ಮಾತುಗಳನ್ನು ಇನ್ನೂ ನಲವತ್ತರ ಹರೆಯದಲ್ಲಿಯೇ ಹೇಳುತ್ತಿರುವುದನ್ನು ನೋಡಿ ರಂಗಣ್ಣ ಕಸಿವಿಸಿಗೊಂಡ. ದಾಸಣ್ಣನ ಮಾತು ಅರ್ಥವೇ ಆಗಲಿಲ್ಲ ಅವನಿಗೆ.

ತಮ್ಮನ ಬೇಗುದಿಯನ್ನು ಅರಿತ ಗೋಪಾಲದಾಸರು,

"ಯಾವುದಕ್ಕೂ ಯೋಚಿಸಬೇಡ ರಂಗಣ್ಣಾ, ಒಂದು ವೇಳೆ ನಾನಿಲ್ಲದಿದ್ದರೂ ನಿಮಗೆಲ್ಲಾ ಶಾಸ್ತ್ರದರ್ಶನಕ್ಕೆ ಅಣ್ಣನಾಗಿ ವೆಂಕಟರಾಮಾಚಾರ್ಯರು ಇದ್ದೇ ಇರುತ್ತಾರೆ. ನೀವೆಲ್ಲಾ ಅವರಲ್ಲಿ ಇರಬೇಕೆಂದು ನನ್ನ ಅಪೇಕ್ಷೆ." ಎಂದು ನುಡಿದರು.

ತಮ್ಮ ಭೀತಗೊಂಡುಬಿಟ್ಟ. ಸಂತಪ್ತಗೊಂಡ ಮನಸು ಪಾರಮಾರ್ಥಿಕ ದೆಡೆಗೆ ಸಾಗುವುದಕ್ಕೆ ಹೆಚ್ಚು ಹದಗೊಂಡಿರುತ್ತದೆ.

"ಪಾಂಡಿತ್ಯವಿದೆ. ಹಣವನ್ನು ತೃಣವಾಗಿ ಕಾಣುವ ವೈರಾಗ್ಯವಿದೆ. ಭಕ್ತಿ ಜೊತೆಗೂಡಿದೆ. ಜ್ಞಾನ ಭಕ್ತಿ ವೈರಾಗ್ಯಗಳನ್ನು ಸಮನ್ವಯಿಸಿಕೊಂಡಿರುವ ನೀನು ಹರಿದಾಸ ದೀಕ್ಷೆ ಪಡೆಯಲು ಅರ್ಹನಾಗಿದ್ದಿ. ನಿನ್ನಿಂದ ನಮ್ಮ ವಂಶವಷ್ಟೇ ಅಲ್ಲ, ಹರಿದಾಸ ಪೀಳಿಗೆಯೂ ಸ್ಪೂರ್ತಿ ಹೊಂದಲಿ' ಎಂದು ಆಶೀರ್ವದಿಸಿದ ಗೋಪಾಲದಾಸರು ಒಂದು ಶುಭ ದಿನದಲ್ಲಿ ಬಿಂಬದರ್ಶನ ಮಾಡಿಸಿ ತಮ್ಮನಿಗೆ ಅಂಕಿತ ನೀಡಿದರು.

ರಂಗಣ್ಣ ಅಣ್ಣನಿಂದ ಪಡೆದ ಅಂಕಿತ----

"ತಂದೆ ಗೋಪಾಲವಿಠಲ"

***

ಚಿತ್ರಭಾನು ಸಂವತ್ಸರದ ಪುಷ್ಯ ಮಾಸ. ಕೃಷ್ಣ ಪಕ್ಷದ ಸಪ್ತಮೀ ದಿನ ಗೋಪಾಲ ದಾಸರು ತಮ್ಮಂದಿರೊಂದಿಗೆ ಭಜನೆ ಮಾಡುತ್ತಾ ಕುಣಿಯುತ್ತಿದ್ದಾರೆ.

ಮೂರೂ ಜನ ತಮ್ಮಂದಿರು ಅಣ್ಣನೊಂದಿಗೆ ಕುಣಿಯುತ್ತಾ ಮೈಮರೆತು ನರ್ತಿಸುತ್ತಿದ್ದಾರೆ.

ಅದೇಕೋ ಗೋಪಾಲದಾಸರು ಇದ್ದಕ್ಕಿದ್ದಂತೆ ಕುಳಿತು ಕೊಂಡು ಹಾಡ ತೊಡಗಿದರು. ತಂಬೂರಿಯನ್ನು ರಾಗಕ್ಕೆ ತಕ್ಕಂತೆ ವೇಗವಾಗಿ ಮೀಂಟತೊಡಗಿದರು.

ತಂಬೂರಿಯ ವೇಗಕ್ಕನುಗುಣವಾಗಿ ಕುಣಿಯಲಾಗಲಿಲ್ಲ ತಮ್ಮಂದಿರಿಗೆ. ಅವರೂ ಕುಳಿತು ಕೊಂಡು ತಾಳ ಹಾಕತೊಡಗಿದರು.

ಗೋಪಾಲದಾಸರ ಕಂಠ ಅಂದು ಉಚ್ಚಾಯ ಸ್ಥಿತಿಗೇರಿತ್ತು. ಆನಂದದಿಂದ ಕಣ್ಣಿನಲ್ಲಿ ನೀರು ಧಾರೆ ಧಾರೆಯಾಗಿ ಇಳಿಯುತ್ತಿತ್ತು.

ಭಾವತನ್ಮಯಗೊಂಡು ಅವರು ಹಾಗೆ ಹಾಡುತ್ತಿದ್ದಾಗ ಕೈಯಲ್ಲಿಯ ಚಿಟಿಕೆ ಅದೇಕೋ ಜಾರಿ ಕೆಳಗೆ ಬಿತ್ತು.

ಕೆಳಗೆ ಬಿದ್ದ ಚಿಟಿಕೆಯನ್ನು ಕೂಡಲೇ ಕೈಗೆ ತೆಗೆದುಕೊಂಡವರು -ಆಗ ತಾನೇ ಅಲ್ಲಿಗೆ ಬಂದ ಜಗನ್ನಾಥದಾಸರು.

ಜಗನ್ನಾಥದಾಸರ ಅನಿರೀಕ್ಷಿತ ಆಗಮನ ತಂದೆ ಗೋಪಾಲ ವಿಠಲಾಂಕಿತ ರಂಗಣ್ಣನಿಗೆ ಆಶ್ಚರ್ಯವಾಯಿತು.

ಸೀನಣ್ಣ ದಾಸಣ್ಣರು. ಜಗನ್ನಾಥದಾಸರನ್ನು ನೋಡಿದರಾಗಲೀ. ಪರಸ್ಪರ ಮಾತನಾಡಲಿಲ್ಲ. ಕಣ್ಣುಗಳಿಂದಲೇ ಅವರ ಸಂಭಾಷಣೆ ನಡೆದಿರಬೇಕು. ಸಂಭಾಷಣೆಯ ಭಾಷೆಯೂ ಕಣ್ಣೀರೆ!

ಎಲ್ಲರ ಕಣ್ಣಲ್ಲಿಯೂ ನೀರು.

ಗೋಪಾಲದಾಸರು ದೇವರ ಲೀಲಾವಿನೋದಗಳ ಸ್ಮರಣೆಯಲ್ಲಿ ಆನಂದೋದ್ರೇಕದಿಂದ ಹರ್ಷಾಶ್ರು ಸುರಿಸುತ್ತಿದ್ದರೆ ಮೂರು ಜನರ ಮುಖದಲ್ಲಿ ಅದೇಕೋ ವಿಷಾದದ ಛಾಯೆ ಮೂಡಿತ್ತು.

ಈ ನಾಲ್ಕು ಜನರ ವಿಚಿತ್ರ ರೀತಿಯನ್ನು ನೋಡಿ ರಂಗಣ್ಣನಿಗೆ ಆಶ್ಚರ್ಯವಾದರೂ ಯಾವುದೋ ಲೋಕ ವಿಚಿತ್ರ ಘಟನೆಗೆ ಇದು ನಾಂದಿಯಾದೀತೆಂದು ಅದೇಕೋ ಆಗ ಹೊಳೆಯಲಿಲ್ಲ.

ಗೋಪಾಲದಾಸರು ಇತ್ತೀಚೆಗೆ ತಾನೇ ನೀಡಿದ್ದ ಅಂಕಿತ ಮೂರ್ತಿಗೆ ನಮನಗಳನ್ನರ್ಪಿಸಿದ ರಂಗಣ್ಣ ಈ ನಾಲ್ಕೂ ಜನರ ದರ್ಶನವನ್ನು ಏಕಕಾಲಕ್ಕೆ ನೀಡುತ್ತಿರುವ ಪರಮಾತ್ಮನ ಕರುಣೆ ಸ್ಮರಣೆಗೆ ಬಂದು ಅವರ ಕಣ್ಣಲ್ಲಿಯೂ ನೀರು ಚಿಮ್ಮಿತು.

ಗೋಪಾದಾಸರು ಹಾಡುತ್ತಿದ್ದರು. ಅವರ ಕೈಯಲ್ಲಿಯ ವೀಣೆ ವೇಗವಾಗಿ ನಾದ ಹೊರಡಿಸುತ್ತಿತ್ತು.

ಆ ನಾದಕ್ಕನುಗುಣವಾಗಿ ತಾಳ ಹಾಕಲಾರದೆ ಸೀನಣ್ಣ ದಾಸಣ್ಣರು ಸ್ಥಂಭೀಭೂತರಾಗಿ ಕುಳಿತುಬಿಟ್ಟರು.

ಆ ವೇಗಕ್ಕನುಗುಣವಾಗಿ ಚಿಟಿಕೆಯಲ್ಲಿ ತಾಳ ನುಡಿಸಿದವರು ಜಗನ್ನಾಥ ದಾಸರೊಬ್ಬರೆ.

ಗೋಪಾಲದಾಸರ ಹಾಡು ಸಾಗಿತ್ತು.

ಜಗನ್ನಾಥದಾಸರ ತಾಳ ಜೊತೆಗೂಡಿತ್ತು.

ತಮ್ಮಂದಿರು ಕಣ್ಣು ಮುಚ್ಚಿ ಕುಳಿತಿದ್ದರು.

ಇದ್ದಕ್ಕಿದ್ದಂತೆ 'ಛಟ್' ಎಂಬ ಶಬ್ದ ಕೇಳಿದಾಗ ಭೀತಿಯಿಂದ ಕಣ್ಣು ತೆರೆದರು ರಂಗಣ್ಣ.

ಗೋಪಾಲದಾಸರ ತಂಬೂರಿಯ ತಂತಿಗಳು ಕಿತ್ತಿ ಹೋಗಿದ್ದವು.

ನಿಧಾನವಾಗಿ ಕಣ್ಣು ತೆರೆದರು ಗೋಪಾಲದಾಸರು. ತಂತಿಗಳು ಕಿತ್ತಿ ಹೋಗಿದ್ದ ತಂಬೂರಿಯನ್ನು ಇಸಿದು ಕೊಂಡ ರಂಗಣ್ಣ ಅವನ್ನು ಪುನಃ ಜೋಡಿಸಲು ಪ್ರಯತ್ನಿಸುತ್ತಿದ್ದಾಗ ಗೋಪಾಲದಾಸರು ಹೇಳಿದರು, "ಬೇಡ ರಂಗಣ್ಣಾ, ಈ ಜಡ ತಂತಿಯ ನಿನಾದ ಸಾಕು. ಹೃದಯ ತಂತಿಯನ್ನು ಮೀಂಟಲು ಅಪ್ಪಣೆಯಾಗಿದೆ. ಆ ಪರಮಾತ್ಮನ ಸ್ಮರಣೆಗೆ ಇನ್ನು ಈ ಜಡತಂತಿಗಳು ಬಾರವಪ್ಪಾ"

ಗೋಪಾಲದಾಸರ ಈ ನುಡಿ ಕೇಳಿದೊಡನೆಯೇ ಜಗನ್ನಾಥದಾಸರು 'ಗುರುಗಳೇ' ಎಂದು ಗಟ್ಟಿಯಾಗಿ ಉದ್ಗರಿಸುತ್ತಾ ಅವರ ಕಾಲುಗಳ ಬಳಿ ಉರುಳಿ ಬಿಟ್ಟರು.

ಗೋಪಾಲದಾಸರು ಅವರ ಎರಡೂ ಭುಜಗಳನ್ನು ಹಿಡಿದೆತ್ತಿ ಶ್ರೀ ವೆಂಕಟೇಶನ ಎಡೆಗೆ ಕೈತೋರುತ್ತಾ "ಆತನ ಇಚ್ಛೆ, ಅರಿತವರು ಅನಾವಶ್ಯಕವಾಗಿ ಅದನ್ನು ಹೊರಗೆಡವಬಾರದು. ಯಾವ ಯಾವ ಕಾಲಕ್ಕೆ ಏನೇನು ಆಗಬೇಕೋ ಅವೆಲ್ಲವೂ ಆಗಲೇ ಬೇಕು. ಆಗುವ ಘಟನೆಗಳಲ್ಲಿ ಆತನ ಲೀಲೆಯನ್ನು ಕಂಡು ಆನಂದಿಸುವುದೇ ಯೋಗ್ಯ ಚೇತನರ ಲಕ್ಷಣ. ಅಂಥ ಶಕ್ತಿಯನ್ನು ನೀಡು ಎಂದು ಪ್ರಾರ್ಥಿಸುವುದೇ ಸುಜೀವಿಗಳ ಕರ್ತವ್ಯ" ಎಂದು ನುಡಿದಾಗ ಉಕ್ಕಿಬರುತ್ತಿದ್ದ ದುಃಖೋದ್ವೇಗವನ್ನು ತಡೆಯಲು ಪ್ರಯತ್ನಿಸುತ್ತಿರುವುದನ್ನು ಗೋಪಾಲದಾಸರು ಗಮನಿಸಿದರು.

ಕೂಡಲೇ ಅವರ ತಲೆ ನೇವರಿಸಿ ಶ್ರೀ ವೆಂಕಟೇಶನ ಕಡೆ ನೋಡುತ್ತಾ ಕೈಮುಗಿದರು.

ರಂಗಣ್ಣನನ್ನು ಹತ್ತಿರ ಕರೆದು, "ನಾಳೆ ಅಷ್ಟಮಿ ಸರ್ವಶ್ರೇಷ್ಠನಾದ ಶ್ರೀನಿವಾಸನಿಗೆ ಅದೇಕೋ ವಿಶೇಷ ಪೂಜೆ ಬೇಕೆಂದೆನಿಸಿದೆ. ಈ ದಿನವೇ ಸುತ್ತ ಮುತ್ತಲ ಗ್ರಾಮಗಳಿಗೆ ಹೋಗಿ ಎಲ್ಲಾ ಬ್ರಾಹ್ಮಣ ಮುತ್ತೈದೆಯರಿಗೆ ನಾಳೆಗೆ ತೀರ್ಥಪ್ರಸಾದಕ್ಕೆ ಆಹ್ವಾನಿಸಿ ಬಾ" ಎಂದು ಗೋಪಾಲದಾಸರು ನುಡಿದರು. "ಏಕೆ,

ನಾಳೆ ಏನು ವಿಶೇಷ?" ಎಂದು ಕೇಳುವ ಮನಸ್ಸು ರಂಗಣ್ಣನಲ್ಲಿ ಉಂಟಾಯಿತಾದರೂ ಅಣ್ಣನ ಮುಖ ನೋಡಿದಾಗ ಅವರ ಮುಖದಲ್ಲಿ ಮೂಡಿದ್ದ ಗಂಭೀರತೆಯನ್ನು ಕಂಡು ಕೇಳುವ ಧೈರ್ಯವಾಗಲ್ಲಿಲ್ಲ.

ಗುಡಿಯಿಂದ ಕೂಡಲೇ ಮನೆಗೆ ಹೋಗಿ ಅಲ್ಲಿದ್ದ ಜನಗಳನ್ನು ಕರೆದು ಯಾರು ಯಾರು ಯಾವ ಯಾವ ಗ್ರಾಮಗಳಿಗೆ ಹೋಗಿ ಜನರನ್ನು ಆಹ್ವಾನಿಸಬೇಕೆಂದು ನಿರ್ದೇಶಿದರು ರಂಗಣ್ಣ

ತಾವೂ ಕೆಲವು ಹಳ್ಳಿಗಳಿಗೆ ಸಮಾರಾಧನೆಗೆ ಆಹ್ವಾನಿಸಲೆಂದು ಕೂಡಲೇ ಪ್ರಯಾಣಿಸಿದರು.

***

ಏನು ಆ ದಿನ ಉತ್ತನೂರಿನಲ್ಲಿ ವಿಶೇಷ ?

ಶ್ರೀ ವೆಂಕಟೇಶನ ವಿಶೇಷ ಪೂಜೆಯೆಂದೇನೋ ಅವರೆಲ್ಲಾ ಕೇಳಿ ಬಂದಿದ್ದರು.

ನಿತ್ಯಕಲ್ಯಾಣ ಪಚ್ಚತೋರಣ ಕೀರ್ತಿಯ ಶ್ರೀ ಶ್ರೀನಿವಾಸನಿಗೆ ಯಾವಾಗಲೂ ವಿಶೇಷವೆ! ಮತ್ತೂ ವಿಶೇಷವೇನೋ ಇರಬೇಕು.

ಏನು ಆ ಮತ್ತೂ ವಿಶೇಷ?

ಪೂಜಾ ನೈವೇದ್ಯಗಳೆಲ್ಲಾ ಮುಗಿದ ಮೇಲೆ ಗೋಪಾಲದಾಸರು ಮಂಗಳಾರತಿ ಮಾಡಲು ಎದ್ದು ನಿಂತರು.

ಜಗನ್ನಾಥದಾಸರು ಮತ್ತು ಮೂವರು ತಮ್ಮಂದಿರು ಒಂದೊಂದಾಗಿ ಮಂಗಳಾರತಿ ಹಚ್ಚಿ ಕೊಡುತ್ತಿದ್ದಂತೆ ಮಂಗಳಾರಾತಿ ಬೆಳಗಿದ್ದೇ ಬೆಳಗಿದ್ದು.

ಗೋಪಾಲದಾಸರ ಮುಖದಲ್ಲಿ ವಿಲಕ್ಷಣ ಕಾಂತಿ ಚಿಮ್ಮುತ್ತಿರುವುದನ್ನು ಜನರು ಕಂಡರು.

ನೆರೆದಿದ್ದ ಜನರಿಗೆಲ್ಲಾ ದಕ್ಷಿಣೆಯಾಗಿ ಹಿಡಿ ಹಿಡಿ ಹೊನ್ನು ನೀಡಿದರು ಗೋಪಾಲದಾಸರು. ಎಲ್ಲರ ಉಡಿಯಲ್ಲಿಯೂ ಹಣ್ಣುಗಳು ತುಂಬಿದವು. ಮುತ್ತೈದೆಯರಿಗೆಲ್ಲಾ ಹೂ ಹಣ್ಣುಗಳೊಂದಿಗೆ ದಕ್ಷಿಣೆ ವಿನಿಮಯವಾಯಿತು.

ಜನಗಳಿಗೆ ಸಾಲಾಗಿ ಎಲೆ ಹಾಕುತ್ತಿದ್ದಂತೆ ಗೋಪಾಲದಾಸರೇ ಪ್ರತಿ ಎಲೆಯ ಮುಂದೆ ರಂಗೋಲಿ ಹಾಕುತ್ತಾ ಸಾಗಿದರು.

ರಂಗೋಲಿ ಹಾಕುವಾಗ ಎಷ್ಟೊಂದು ವೇಗ? ಆ ವೇಗದಲ್ಲಿಯೂ ಎಂಥ ಅಮೋಘ ನೈಪುಣ್ಯ? ಆ ಬೆರಳುಗಳ ಚಾಕಚಕ್ಯತೆಯಾದರೂ ಎಷ್ಟು?

ರಂಗೋಲಿ ನೋಡಿದವರಿಗೆ ಅದರಲ್ಲಿ ಸಾಮಾನ್ಯ ಗೆರೆಗಳಷ್ಟೇ ಕಾಣಲಿಲ್ಲ. ಸಾಕ್ಷಾತ್ ಲಕ್ಷ್ಮಿ ನಾರಾಯಣನೇ ಮುಂದೆ ಕುಳಿತು ಆ ಭೋಜನ ಸ್ವೀಕರಿಸುತ್ತಿರುವನೋ ಎಂಬ ಕಲ್ಪನೆ.

ಭೋಜನದ ಆನಂದ ಅಧಿಕಗೊಂಡಿತು. ಊಟ ಮಾಡುತ್ತಿದ್ದವರಿಗೆ ವಿಲಕ್ಷಣ ವಾದ ತೃಪ್ತಿ, ಅವರ್ಣನೀಯ ಆನಂದ.

ಊಟಕ್ಕೆ ಕುಳಿತಿದ್ದ ಸಮೂಹಕ್ಕೆ ಕೈ ಮುಗಿದರು ಗೋಪಾಲದಾಸರು.

ದಾಸಣ್ಣ ಸೀನಣ್ಣ ಜಗನ್ನಾಥದಾಸರು ಅವರ ಪಕ್ಕದಲ್ಲಿ ಕೈ ಮುಗಿಯುತ್ತಾ ನಿಂತಿದ್ದಾಗ ರಂಗಣ್ಣನವರೂ ಬಂದು ಜೊತೆಗೆ ನಿಂತು ನೋಡಿ ಅವಕ್ಕಾಗಿ ಹೋದರು.

ಅಲ್ಲಿ ಕುಳಿತಿದ್ದವರು ನೂರು ನೂರು ಜನ. ರಂಗಣ್ಣನಿಗೆ ಕಂಡದ್ದು ಕೋಟಿ ಕೋಟಿ ದೇವತೆಗಳು.

ಊಟಕ್ಕೆ ಕುಳಿತಿದ್ದ ಪ್ರತಿಯೊಬ್ಬರ ಶರೀರದಲ್ಲಿ ಅಂತರ್ಗತರಾಗಿರುವ ದೇವಾನುದೇವತೆಗಳು ಆ ಭೋಜನ ಸ್ವೀಕರಿಸುತ್ತಿದ್ದಾರೆ. ಅವರೆಲ್ಲರ ಅಂತರ್ಯಾಮಿ ಯಾದ ಪರಮಾತ್ಮನಿಗೆ, ಭೋಜ್ಯ ಪದಾರ್ಥಗಳು ಸೇರುತ್ತಿವೆ.

ಊಟಕ್ಕೆ ಕುಳಿತಿದ್ದವರು ಆನಂದದಿಂದ ಭೋಜನ ಸ್ವೀಕರಿಸುತ್ತಿದ್ದರೆ. ದೇವಾನು ದೇವತೆಗಳು ಆನಂದದಿಂದ ಆಶೀರ್ವದಿಸುತ್ತಿರುವಂತೆ ರಂಗಣ್ಣನಿಗೆ ಕಂಡಿತು.

ಕೈ ಮುಗಿದ ರಂಗಣ್ಣ.

ಭಕ್ಷ್ಯಗಳನ್ನು ಬಡಿಸುವಾಗ ಪ್ರತಿ ಎಲೆಯ ಮುಂದೆ ಹೋಗಿ ಗೋಪಾಲದಾಸರು ಕೈ ಮುಗಿಯುತ್ತಾ ಎಲ್ಲರನ್ನೂ ಉಪಚರಿಸಿದರು.

ಸಮಾರಾಧನೆಯ ನಂತರ ಎಲ್ಲರೂ ತಾಂಬೂಲ ಮೆಲ್ಲುತ್ತಾ ಅಲ್ಲಲ್ಲಿ ಕುಳಿತಿದ್ದರು.

ಸೀನಣ್ಣ ದಾಸಣ್ಣರು ದರ್ಭೆಯನ್ನು ತಂದು ಒಂದೆಡೆಗೆ ಹಾಸಿದರು.

ದರ್ಭೆ ಹರಡಿದ ಜಾಗದಲ್ಲಿ ಹೋಗಿ ಗೋಪಾಲದಾಸರು ಕುಳಿತರು.

ಗುರುಗಳ ಸೂಚನೆಯಂತೆ ಜಗನ್ನಾಥ ದಾಸರು ಹಾಡತೊಡಗಿದರು.

ರಂಗಣ್ಣ ಪಕ್ಕದಲ್ಲಿ ಕುಳಿತಿದ್ದರು.

ಇದ್ದಕ್ಕಿದ್ದಂತೆ ಜಗನ್ನಾಥ ದಾಸರ ಸೂಚನೆಯಾಗಿ ಎಲ್ಲರೂ ಎದ್ದು ನಿಂತರು.

ಗೋಪಾಲದಾಸರು ಮಾತ್ರ ಏಳಲಿಲ್ಲ.

ನೆರೆದಿದ್ದ ಜನರಿಗೆ ಇದೇನೋ ಹೊಸ ಕೌತುಕವಾಗಿ ಕಂಡು ಅವರೆಲ್ಲಾ ಆಶ್ಚರ್ಯದಿಂದ ನೋಡುತ್ತಿದ್ದರು.

ಎಲ್ಲೆಲ್ಲಿಯೂ ನಿಶ್ಶಬ್ದ ಎಲ್ಲರಲ್ಲಿಯೂ ಕೌತುಕ. ತಿಳಿದಿದ್ದ ಜ್ಞಾನಿಗಳಿಗೆ ಮಾತ್ರ ಗೊತ್ತು ಮುಂದೇನಾಗುತ್ತದೆಂದು.

ಆದ್ದರಿಂದ ಅವರು ಭಕ್ತಿಯಿಂದ ಕೈಮುಗಿದು ನಿಂತಿದ್ದರು.

ಇದ್ದಕ್ಕಿದ್ದಂತೆ 'ಢಬ್' ಎಂಬ ಶಬ್ದ ಕೇಳಿ ಬಂದಿತು.

ಗೋಪಾಲದಾಸರು ಲಯ ಚಿಂತನೆ ನಡೆಸಿದ್ದರು.

ಅವರ ಬ್ರಹ್ಮರಂಧ್ರ ಬಾಯಿ ಬಿಟ್ಟಿತ್ತು.

ದೇವಾನುದೇವತೆಗಳು ಅವರಿಂದ ಹೊರಬರುತ್ತಿದ್ದಂತೆ ಸ್ವರೂಪಸ್ವಾಮಿಯಾದ ಪರಮಾತ್ಮನನ್ನು ಕೂಡಿಸಿಕೊಂಡು ಶ್ರೀಪ್ರಾಣದೇವರು ಆ ಬ್ರಹ್ಮ ರಂಧ್ರದಿಂದ ಹೊರಬಂದಿದ್ದನ್ನು ಮಹಾಜ್ಞಾನಿಗಳು ಮಾತ್ರ ಕಂಡರು.

ಅವರು ನೋಡುತ್ತಿದ್ದರು.

ಗೋಪಾಲದಾಸರ ದಿವ್ಯ ಚೈತನ್ಯ ಹೊರಗೆ ಬಂದು ಅದು ಅಗಲ ಅಗಲವಾಗಿ ಹರಡುತ್ತಿರುವುದನ್ನು ಅವರು ನೋಡಿದರು. ಆಕಾಶಾಭಿಮಾನಿಯಾದ ವಿನಾಯಕನು ತನ್ನ ಅಂತರ್ಗತನಾದ ವಿಶ್ವಂಭರ ಮೂರ್ತಿಯನ್ನು ಪೂಜಿಸಲು ತನ್ನ ಸ್ವಸ್ಥಳ ಸೇರುತ್ತಿರುವುದನ್ನು ನೋಡಿದ ಜ್ಞಾನಿಗಳು ಭಕ್ತಿಯಿಂದ 'ನಮೋ ಶ್ರೀ ಗೋಪಾಲದಾಸ ಗುರುವರ್ಯಾ' ಎಂದು ಘೋಷಿಸಿದರು. ನೆರೆದಿದ್ದ ಬಹಳ ಜನರಿಗೆ ಅಷ್ಟೆಲ್ಲಾ ಕಾಣಿಸಿರಲಿಕ್ಕಿಲ್ಲ. ಆದರೆ ಅವರಿಗೆಲ್ಲಾ ಗೊತ್ತಾಯಿತು 'ಭಾಗಣ್ಣ ಭೌತಿಕವಾಗಿ ಇನ್ನಿಲ್ಲ' ಎಂದು.

ಎಲ್ಲರಿಗೂ ಆಶ್ಚರ್ಯ ಎಲ್ಲೆಲ್ಲಿಯೂ ಅದೇ ಮಾತು, ಸುತ್ತಮುತ್ತಲ ಪ್ರದೇಶಗಳಲ್ಲೆಲ್ಲಾ ಯಾರೊಬ್ಬರ ಬಾಯಿಯಲ್ಲಿಯೂ ಇದೇ ಸಂಗತಿಯೆ.

ಅವರೆಲ್ಲಾ ಸ್ಮರಿಸಿಕೊಂಡರು.

ಮರಣವನ್ನು ಮಹದಾನಂದದಿಂದ ಸ್ವೀಕರಿಸಿದ ಶ್ರೀ ಗೋಪಾಲದಾಸರ ದಿವ್ಯ ಚೇತನಕ್ಕೆ ಮಣಿಯಿತು ಅವರ ಮನಸ್ಸು.

ಭಕ್ತಿಯಿಂದ ಘೋಷಿಸಿದರು.

'ನಮೋ ಶ್ರೀ ಗೋಪಾಲದಾಸ ಗುರುವರ್ಯಾ
ನಮೋ ನಮೋ ಭಾಗಣ್ಣಾರ್ಯಾ'
ಅಪರೋಕ್ಷ ಜ್ಞಾನಿ ಶಿಷ್ಯರು ಹಾಡಿದರು
ಅಗತಾದಿ ತ್ರಿಕಾಲಜ್ಞಂ॥ ಆಗಮಾರ್ಥ ವಿಶಾರದಂ,
ತ್ಯಾಗಭೋಗ ಸಮಾಯುಕ್ತಂ! ಭಾಗಣ್ಣಾರ್ಯಗುರುಂ ಭಜೆ॥
ಶ್ರೀ ಮದ್ವೇಶಾರ್ಪಣಮಸ್ತು

SRI VENKATESWARA CENTRAL LIBRARY & RESEARCH CENTRE TIRUPATI 54695

***



ಶ್ರೀ ಶ್ರೀನಿವಾಸರಾಯರು ರಚಿಸಿರುವ ಶ್ರೀ ಉತ್ತನೂರಿನ ಋಷಿಕುಲೋತ್ತಮ ಕೃತಿ, ಗೋಪಾಲದಾಸರ ಬಗ್ಗೆ ಪ್ರಕಟವಾಗಿರುವ ಕನ್ನಡದ ಕೃತಿಗಳಲ್ಲಿ ಅಪೂರ್ವವೆನಿಸುವ ರೀತಿಯಲ್ಲಿದೆ....ಪ್ರಾಯೋಗಿಕ,ಸಾಹಿತ್ಯಕ, ತಾತ್ವಿಕ–ಈ ಮೂರು ನಿಟ್ಟುಗಳಿಂದ ಈ ಕೃತಿ ಅನನ್ಯವಾಗಿದೆ.

ಶ್ರೀ ಶ್ರೀ ವಿಜ್ಞಾನ ನಿಧಿ ತೀರ್ಥ ಶ್ರೀಪಾದಂಗಳು, ಶ್ರೀ ಪಾದರಾಜರ ಮಠ

ಕಾದಂಬರಿ ಶೈಲಿಯಲ್ಲಿ ರಸವತ್ತಾಗಿ ಶ್ರೀ ಗೋಪಾಲದಾಸರ ಚರಿತ್ರೆಯನ್ನು ಕೃತಿ ರೂಪದಲ್ಲಿ ಇಳಿಸಿದ್ದಾರೆ. ಶ್ರೀ ಗೋಪಾಲದಾಸರ ಧೀಮಂತ, ಸತ್ವಪೂರ್ಣಜೀವನವನ್ನು ವಿಶಿಷ್ಟರೀತಿಯಿಂದ ನಿರೂಪಿಸುವ ಈ ಕೃತಿಯನ್ನು ನಾವು ಸಂತೋಷದಿಂದ ಸ್ವಾಗತಿಸುತ್ತೇವೆ.

ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳು, ಶ್ರೀ ಪೇಜಾವರಮಠ

ಶ್ರೀ ರಾಘವೇಂದ್ರ ಗುರು ಸಾರ್ವಭೌಮರ ವಿಶೇಷ ಅನುಗ್ರಹಕ್ಕೆ ಪಾತ್ರರಾದ ಶ್ರೀ ಗೋಪಾಲದಾಸರ ದಿವ್ಯ ವ್ಯಕ್ತಿತ್ವವನ್ನು ಈ ಕೃತಿಯಲ್ಲಿ ಬಿಂಬಿಸಿರುವುದು ನಮಗೆ ತುಂಬಾ ಆನಂದವಾಗಿದೆ.

ಶ್ರೀ ಶ್ರೀ ಸುಶಮೀಂದ್ರ ತೀರ್ಥ ಶ್ರೀಪಾದಂಗಳು, ಶ್ರೀ ರಾಯರಮಠ, ಮಂತ್ರಾಲಯ

ಶ್ರೀ ಶ್ರೀನಿವಾಸರಾಯರು ಚಿತ್ರದುರ್ಗಜಿಲ್ಲೆಯ ಹಿರಿಯ ಪತ್ರಿಕೋದ್ಯಮಿ. ಅವರ ನಿರ್ವಹಣೆಯ 'ಸತ್ಯಜ್ಯೋತಿ' ಪತ್ರಿಕೆ ಜಿಲ್ಲೆಯ ಜನಮನದ ಮೊಗ. ಶೋಷಿತವರ್ಗದ ಮುಖವಾಣಿ. ನಟರಾಗಿ, ನಾಟಕಕಾರರಾಗಿ ಕಾಲಕ್ಕೆ ತಕ್ಕಂತೆ ಸ್ಪಂದಿಸಿದವರು; ಜನಜಾಗೃತಿಗೆ ಶ್ರಮಿಸಿದವರು. ಷೇಕ್ಸ್‌ಪಿಯರನ ನಾಟಕಗಳಲ್ಲಿ ಪಾತ್ರಗಳನ್ನು ಅದ್ಭುತವಾಗಿ ಅಭಿನಯಿಸಿ ಜನಮೆಚ್ಚುಗೆ ಗಳಿಸಿದವರು.

ಡಿ. ಮಂಜುನಾಥ್, ಉನ್ನತ ಶಿಕ್ಷಣ ಸಚಿವರು